# ಅಧ್ಯಾಯ ೧

ಯಜಮಾನರು ಬತ್ತಲೆಯಾಗಿ, ಕಣ್ಣುಗಳನ್ನು ಬಿಟ್ಟುಕೊಂಡು ಸ್ನಾನದ ತೊಟ್ಟಿಯ ಶುಭ್ರವಾದ ನೀರಲ್ಲಿ ತೇಲುತ್ತಿದ್ದುದನ್ನು ನೋಡಿದ ಅವರ ಅತ್ಯಂತ ಹಳಬ ಸೇವಕ ಜೋಸೆ ಪೆಲಾಸಿಯೋಸ್ ಅವರು ಮುಳುಗಿ ಹೋದರೆಂದೇ ಭಾವಿಸಿದ. ಇದು ಜನರಲ್ ಸಿಮೋನ್ ಬೊಲಿವರ್ ಧ್ಯಾನಮಗ್ನರಾಗುತ್ತಿದ್ದ ಒಂದು ಪರಿ ಎಂಬುದು ಅವನಿಗೆ ಗೊತ್ತು, ಆದರೆ ಆನಂದತುಂದಿಲರಾಗಿ ನೀರಲ್ಲಿ ಇಳಿಯುತ್ತಿದ್ದ ರೀತಿ ಅವರು ಈ ಜಗತ್ತಿನವರೇ ಅಲ್ಲವೇನೋ ಎನ್ನಿಸುವಂತೆ ತೋರಿತು. ಸೂರ್ಯ ಮೂಡುವ ಹೊತ್ತಿಗೇ ಹೊರಡಲು ಅನುವಾಗುವಂತೆ ಐದು ಗಂಟೆಗೇ ಎಬ್ಬಿಸಬೇಕೆಂಬ ಯಜಮಾನರ ಆಜ್ಞೆಯನ್ನು ನೆನೆದ; ಆದರೆ ಬಳಿ ಹೋಗಲು ಧೈರ್ಯವಾಗದೆ ಮೆಲುದನಿಯಲ್ಲಿ ಕೂಗಿದ. ಈಗ ಜನರಲ್ ತಮ್ಮ ಆನಂದಸ್ಥಿತಿಯಿಂದ ಹೊರಬಂದು ನೀಲಾಕಾಶದಲ್ಲಿ ತೆಳು ಬೆಳಕು ಹರಡಿರುವುದನ್ನು ನೋಡಿದರು, ಜೊತೆಗೇ ಅಳಿಲಿನ ಬಣ್ಣದ ಕೂದಲಿನ ಪಾರುಪತ್ತೇದಾರನು ಕೈಲಿ ಆರೋಗ್ಯದಾಯಕ ಗಸಗಸೆ ಕಷಾಯದ ಕಪ್ ಹಿಡಿದು ನಿಂತಿರುವುದೂ ಕಾಣಿಸಿತು. ತೊಟ್ಟಿಯ ಹಿಡಿಕೆಗಳನ್ನು ಹಿಡಿದಾಗ ಜನರಲ್‌ರಿಗೆ ತಮ್ಮ ಕೈಲಿ ಶಕ್ತಿಯಿಲ್ಲದ್ದು ಅರಿವಿಗೆ ಬಂತು; ಆದರೆ ಔಷಧಯುಕ್ತ ನೀರಿನಿಂದ ಡಾಲ್ಫಿನ್‌ನಂತೆ ರಭಸದಿಂದ ಮೇಲೆದ್ದ ರೀತಿ ಅವರ ಕೃಶವಾದ ದೇಹವನ್ನು ನೋಡಿದದವರಿಗೆ ಅಚ್ಚರಿಯುಂಟುಮಾಡುವಂತಿತ್ತು.

"ಹೊರಡೋಣ, ಆದಷ್ಟೂ ಬೇಗ. ನಮ್ಮನ್ನು ಇಷ್ಟಪಡೋರು ಇಲ್ಲಿ ಯಾರೂ ಇಲ್ಲ" ಎಂದರು.

ಹಿಂದೆಯೂ ಬೇರೆ ಬೇರೆ ಸನ್ನಿವೇಶಗಳಲ್ಲಿ ಎಷ್ಟೋ ಸಲ ಹೀಗೆ ಅವರೆಂದುದನ್ನು ಜೋಸೆ ಪೆಲಾಸಿಯೋಸ್ ಕೇಳಿದ್ದ; ಹೀಗಾಗಿ ಅವನಿಗೆ ಈ ಮಾತು ನಿಜವೆಂಬ ನಂಬಿಕೆ ಬರಲಿಲ್ಲ. ಆದರೆ ಪ್ರಾಣಿಗಳ ಮಂದೆ ಮತ್ತು ಅಧಿಕೃತ ನಿಯೋಗದ ಸದಸ್ಯರು ಹೊರಡಲು ಜಮಾಯಿಸುತ್ತಿದ್ದುದು ನಿಜವೇ. ಯಜಮಾನರ ಕೈಲಿದ್ದ ಕಪ್ ಥರಥರ ನಡುಗುತ್ತಿತ್ತು; ಹೀಗಾಗಿ, ಮೈ ಒರಸಿಕೊಂಡ ಬಳಿಕ ಬರಿ ಮೈಗೆ ಚೌಕಳಿ ಪಾಂಛೋ ಅಂಗಿ ಧರಿಸಲು ಅವರಿಗೆ ನೆರವಿತ್ತ. ಇದನ್ನು ಚಾಮಿಯೋಸ್ ಚಲ್ಲಣದೊಡನೆ ಕಳೆದ ಕೆಲವು ತಿಂಗಳಿನಿಂದಲೂ ಧರಿಸಿರಲಿಲ್ಲ; ಈಗ ಹಾಗೆ ಮಾಡುವಾಗ ತಮ್ಮ ಎತ್ತರ ತೂಕಗಳೆರಡೂ ಕಡಿಮೆಯಾಗಿರುವುದು ಅವರ ಅರಿವಿಗೆ ಬಂತು. ಅವರ ಬತ್ತಲೆ ಮೈ ವಿಭಿನ್ನವಾಗಿತ್ತು, ಮೈಯೆಲ್ಲ ಬಿಳಿಚಿಕೊಂಡು, ಮುಖ ಮತ್ತು ಕೈಗಳು ಗಾಳಿಬಿಸಿಲುಗಳಿಗೆ ತೆರೆದುಕೊಂಡು ಬಣ್ಣಗೆಟ್ಟಿದ್ದವು. ಕಳೆದ ಜುಲೈಗೆ

ಅವರಿಗೆ ನಲವತ್ತಾರು ವರ್ಷಗಳು ತುಂಬಿತ್ತು ಅಷ್ಟೆ, ಆದರೆ ಅವರ ಒರಟು ಕ್ಯಾರಿಬಿಯನ್ ಗುಂಗುರು ಕೂದಲು ಆಗಲೇ ಬೂದುಬಣ್ಣಕ್ಕೆ ತಿರುಗಿತ್ತು, ಅಕಾಲ ಮುಪ್ಪಿನಿಂದಾಗಿ ಮೂಳೆಗಳೆಲ್ಲ ಮುರುಟಿಕೊಂಡಿದ್ದವು, ಇದರಿಂದ ತಾವು ಮುಂದಿನ ಜುಲೈವರೆಗೆ ಬದುಕುಳಿಯುವುದೇ ಅಸಾಧ್ಯವೇನೋ ಎಂದು ಅವರಿಗನ್ನಿಸಿತು. ಆದರೆ ದೃಢ ನಿಲವು ಮಾತ್ರ ಬದುಕಿನ ಕಷ್ಟಗಳಿಂದ ಅಷ್ಟೇನೂ ಜರ್ಜರಿತವಾಗದವರ ರೀತಿಯಲ್ಲಿತ್ತು; ಎಲ್ಲಿಯೂ ನಿಲ್ಲದೆ ದಾಪುಗಾಲು ಹಾಕಿ ನಡೆದು ಬಿಸಿ ಬಿಸಿ ಕಷಾಯಯನ್ನು ಐದು ಗುಟುಕುಗಳಲ್ಲಿ ಹೀರಿದಾಗ ನಾಲಗೆ ಸುಟ್ಟಂತಾಯಿತು. ತಮ್ಮ ಮೈಯಿಂದ ನೀರು ತೊಟ್ಟಿಕ್ಕಿದ್ದ ದಾರಿಯನ್ನು ಬಿಟ್ಟು ನೆಲದ ಮೇಲೆ ಹಾಸಿದ್ದ ಜೂಲು ನಡೆಹಾಸಿನ ಮೇಲೆ ಸಾಗಿದರು. ನೋಡಿದರೆ, ತಾವೀಗ ಕುಡಿದುದು ಸಂಜೀವಿನಿಯ ಕಷಾಯವೇನೋ ಅನ್ನಿಸುವಂತಿತ್ತು. ಆದರೆ ಅನತಿ ದೂರದ ಕೆಥೆಡ್ರಲ್‌ನ ಗೋಪುರದ ಗಂಟೆ ಐದು ಬಾರಿಸುವವರೆಗೂ ತುಟಿಪಿಟಕ್ಕೆನ್ನಲಿಲ್ಲ.

"ಇವತ್ತು ಶನಿವಾರ, ೧೮೩೦ ನೇ ಮೇ ೮, ಪ್ರಸನ್ನತೆಯ ಸಾಕಾರರೂಪಿ ಪವಿತ್ರ ವರ್ಜಿನ್‌ಳ ದಿನ. ಬೆಳಗಿನ ಜಾವ ಮೂರು ಗಂಟೆಯಿಂದಲೇ ಮಳೆ ಸುರೀತಿದೆ" ಎಂದ ಪಾರುಪತ್ತೇದಾರ.

"ಹದಿನೇಳನೇ ಶತಮಾನದ ಬೆಳಗಿನ ಜಾವ ಮೂರು ಗಂಟೆಯಿಂದ'. ನ'ನಗೆ ಬೆಳಗಿನ ಕೋಳಿ ಕೂಗಿದ್ದು ಕೇಳಿಸಲೇ ಇಲ್ಲ" ಎಂದೂ ನಿದ್ರಾಭಾವದಿಂದ ನಡುಗುವ ದನಿಯಲ್ಲಿ ಜನರಲ್ 'ಜನರಲ್ ಗಂಭಿರವಾಗಿ ನುಡಿದರು.

"ಇಲ್ಲಿ ಕೋಳಿಗಳೇ ಇಲ್ಲ" ಹೀಗೆಂದವನು ಜೋಸೆ ಪೆಲಾಸಿಯೋಸ್.

"ಇಲ್ಲಿ ಏನು ತಾನೇ ಇದೆ? ಇದು ನಾಸ್ತಿಕರ ನಾಡಲ್ಲವೇ?" ಜನರಲ್ ಅವರ ಉತ್ತರ.

ಅವರಿದ್ದುದು, ಸಮುದ್ರ ಮಟ್ಟಕ್ಕಿಂತ ಎರಡು ಸಾವಿರ ಮೀಟರ್ ಎತ್ತರದಲ್ಲಿದ್ದ, ಪವಿತ್ರ ಧಾರ್ಮಿಕ ನಗರವಾದ ಸಂತ ಫ಼ ದ ಬೊಗೊಟದಲ್ಲಿ, ಬೋಳು ಗೋಡೆಗಳಿಂದ ಕೂಡಿ, ಸರಿಯಾಗಿ ಜೋಡಿಸದಿದ್ದ ಕಿಟಕಿಗಳ ಮೂಲಕ ಹಿಮಗಾಳಿ ತೂರಿಕೊಂಡು ಬಂದು ಯಾರದೇ ಆರೋಗ್ಯವನ್ನೂ ಹಾಳುಮಾಡಬಹುದಾಗಿತ್ತು ಆ ಮಲಗುವ ಕೋಣೆ. ನೊರೆ ತುಂಬಿದ ಬೋಗುಣಿ ಹಾಗೂ ಚಿನ್ನದಿಂದ ಮಾಡಿದ ಮುಖಕ್ಷೌರದ ಸಲಕರಣೆಗಳಿಂದ ಕೂಡಿದ ಕೆಂಪು ಸಂಚಿಯನ್ನು ಜೋಸೆ ಪೆಲಾಸಿಯೋಸ್ ಡ್ರೆಸಿಂಗ್ ಟೇಬಲ್‌ನ ಅಮೃತಶಿಲೆಯ ಹಲಗೆಯ ಮೇಲೆ ತಂದಿಟ್ಟ. ಹಾಗೆಯೇ ಜನರಲ್ ಅವರಿಗೆ ಬೇಕಾಗುವಷ್ಟು ಮಾತ್ರ ಬೆಳಕು ಸೂಸುತ್ತಿದ್ದ ಉರಿಯುವ ಮೇಣದ ಬತ್ತಿಯಿದ್ದ ಸೊಡಲನ್ನು ತಂದು ಕನ್ನಡಿಯ ಹತ್ತಿರವಿದ್ದ

ಮುಂಚಾಚಿನ ಮೇಲಿರಿಸಿದ; ಕಾಲುಗಳನ್ನು ಬೆಚ್ಚಗಿರಿಸಲು ಹತ್ತಿರದಲ್ಲಿಯೇ ಒಂದು ಅಗ್ಗಿಷ್ಟಿಕೆಯನ್ನೂ ತಂದಿಟ್ಟ. ತನ್ನ ಜಾಕೆಟ್‌ನ ಜೇಬಿನಲ್ಲಿ ಸದಾ ಹೊತ್ತೊಯ್ಯುವ ತೆಳು ಬೆಳ್ಳಿ ಚೌಕಟ್ಟಿನ ಅವರ ಕನ್ನಡಕವನ್ನು ಯಜಮಾನರ ಕೈಗಿತ್ತ. ಜನರಲ್ ಕನ್ನಡಕ ಧರಿಸಿ ಕ್ಷೌರ ಮಾಡಿಕೊಳ್ಳಲು ತೊಡಗಿದರು, ರೇಜರ್ ಹಿಡಿದ ಅವರ ಎಡಗೈ ಬಲಗೈನಂತೆಯೇ ಕೌಶಲದಿಂದ ಗಡ್ಡದ ಮೇಲೆ ಹರಿದಾಡುತ್ತಿತ್ತು; ಅವರು ಸಹಜ ಸವ್ಯಸಾಚಿ, ಹಾಗಾಗಿ ಕೆಲವೇ ಕ್ಷಣಗಳ ಹಿಂದೆ ಕಪ್ ಹಿಡಿಯಲು ತತ್ತರಿಸಿದ್ದ ಅವರ ಮಣಿಕಟ್ಟು ಈಗ ಅಸಾಧಾರಣ ಹಿಡಿತವನ್ನು ಸಾಧಿಸಿತ್ತು. ತಮ್ಮ ಕಣ್ಣುಗಳನ್ನು ತಾವೇ ನೋಡಲಾರದವರಂತೆ ಕನ್ನಡಿಯ ಎದುರು ಆದಷ್ಟೂ ಕಡಿಮೆ ನಿಂತುಕೊಂಡು ಕೋಣೆಯಲ್ಲೆಲ್ಲ ಓಡಾಡುತ್ತಲೇ ಕ್ಷಣಾರ್ಧದಲ್ಲಿ ಕ್ಷೌರವನ್ನು ಮುಗಿಸಿ, ಆನಂತರ ಮೂಗು ಕಿವಿಗಳ ಕೂದಲನ್ನು ಕಿತ್ತುಕೊಂಡರು. ಇದ್ದಿಲ ಪುಡಿಯನ್ನು ಹಾಕಿಕೊಂಡು ಬೆಳ್ಳಿಹಿಡಿಕೆಯ ಬ್ರಷ್ಷಿನಿಂದ ದಾಳಿಂಬೆಯಂತಿದ್ದ ಹಲ್ಲುಗಳನ್ನು ಶುಭ್ರವಾಗಿ ಉಜ್ಜಿಕೊಂಡು, ಕೈಕಾಲು ಬೆರಳುಗಳ ಉಗುರುಗಳನ್ನು ಕತ್ತರಿಸಿಕೊಂಡು ನಯಗೊಳಿಸಿದರು. ಕೊನೆಯದಾಗಿ, ಹಾಕಿಕೊಂಡಿದ್ದ ಪಾಂಥೋ ಅಂಗಿಯನ್ನು ತೆಗೆದು, ಒಂದು ದೊಡ್ಡ ಬುಡ್ಡಿಯಲ್ಲಿದ್ದ ಕೊಲೋನ್ ಅನ್ನು ಮೈಮೇಲೆಲ್ಲ ಸುರುವಿಕೊಳ್ಳುತ್ತ ಎರಡೂ ಕೈಗಳಲ್ಲಿ ತೀಡಿಕೊಂಡು ಅದನ್ನು ಬರಿದುಗೊಳಿಸಿದರು. ಇಪ್ಪತ್ತು ವರ್ಷಗಳ ನಿಷ್ಫಲವಾದ ಯುದ್ಧ ಮತ್ತು ಅಧಿಕಾರದ ಭ್ರಮನಿರಸನಗಳಿಂದ ಮಲಿನವಾಗಿದ್ದ ತಮ್ಮ ದೇಹ–ಆತ್ಮಗಳನ್ನು ಶುದ್ಧಿಗೊಳಿಸಿಕೊಳ್ಳುವವರಂತೆ, ಎಂದಿಗಿಂತಲೂ ಹೆಚ್ಚು ಉತ್ಸುಕತೆಯಿಂದ ಅಂದು ಬೆಳಗಿನ ಜಾವ ಮಾರ್ಜನೆಯ ವಿಧಿಯನ್ನು ಪೂರೈಸಿದರು.

ಹಿಂದಿನ ರಾತ್ರಿ ಅವರು ಬರಮಾಡಿಕೊಂಡಿದ್ದ ಕೊನೆಯ ಸಂದರ್ಶಕಳೆಂದರೆ ಕ್ವಿಟೆನದ ಎದೆಗಾರ್ತಿ ಮಾನ್ಯುಯೆಲ ಸಿಯೆಂಜ಼್, ತಮ್ಮನ್ನು ಪ್ರೀತಿಸಿದರೂ ಸಾಯುವವರೆಗೂ ಜೊತೆ ಇರದವಳು. ಎಂದಿನಂತೆ ಅವಳು ಹಿಂದೆಯೇ ಇರುವವಳು; ತಾವಿಲ್ಲದಾಗ ಏನೇನು ನಡೆಯಿತೆಂದು ಜನರಲ್‌ರಿಗೆ ಹೇಳುವವಳೆಂಬ ಅಪಖ್ಯಾತಿ ಹೊತ್ತವಳು. ಜನರಲ್ ಅವರಂತೂ ಈಚೆಗೆ ಅವಳನ್ನು ಹೊರತು ಬೇರೆಯವರನ್ನು ನಂಬುತ್ತಿರಲಿಲ್ಲ. ಕೆಲವು ವಸ್ತುಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಅವರು ಅವರಿಗೇ ವಹಿಸಿದ್ದರು; ಆದರೆ ಅವರಿಗೆ ಸಂಬಂಧಿಸಿದ್ದು ಎಂಬುದಷ್ಟೇ ಅವಕ್ಕಿದ್ದ ಮಹತ್ವ. ಜೊತೆಗೆ ಅವಳು ನಿಗಾ ವಹಿಸಬೇಕಾಗಿದ್ದುದು ಅವರ ಬೆಲೆಬಾಳುವ ಕೆಲವು ಪುಸ್ತಕಗಳು ಹಾಗೂ ಖಾಸಗಿ ವಸ್ತುಗಳಿದ್ದ ಎರಡು ಪೆಟಾರಿಗಳ ಬಗ್ಗೆ. ಕಳೆದ ದಿನ ಅವರಿಗೆ ವಿದಾಯ ಹೇಳಲು ಬಂದು ತುಸುವೇ ಹೊತ್ತು ಕಳೆದಿದ್ದ ಅವಳಿಗೆ ಅವರು ಹೇಳಿದ್ದು ಇದು: “ನಿನ್ನ ಬಗ್ಗೆ ನನಗೆ ತುಂಬ

ಪ್ರೀತಿಯಿದೆ, ಆದರೆ ಹೆಚ್ಚು ವಿವೇಕ ತೋರಿಸಿದರೆ ನಿನ್ನ ಮೇಲಿನ ನನ್ನ ಪ್ರೀತಿ ಮತ್ತಷ್ಟು ಹೆಚ್ಚುತ್ತೆ." ಕಳೆದ ಎಂಟು ವರ್ಷಗಳ ಅವರ ಗಾಢ ಪ್ರೀತಿಯ ಅವಧಿಯಲ್ಲಿ ಜನರಲ್ ಅವಳ ಬಗ್ಗೆ ತೋರಿದ್ದ ಗೌರವದ ಮತ್ತೊಂದು ಮಾತು ಇದು ಎಂದು ಅವಳು ಅರ್ಥಮಾಡಿಕೊಂಡಳು. ಜನರಲ್‌ರಿಗೆ ಗೊತ್ತಿರುವ ವ್ಯಕ್ತಿಗಳಲ್ಲೆಲ್ಲ ಅವಳೊಬ್ಬಳೇ ಅವರನ್ನು ನಂಬುತ್ತಿದ್ದುದು. ಈಗ ತನ್ನನ್ನವರು ಬಿಟ್ಟು ಹೋಗುತ್ತಿದ್ದುದು ನಿಶ್ಚಿತವಾಗಿತ್ತು. ಆದರೆ ಅವರು ಮತ್ತೆ ಬರುವುದಕ್ಕೆ ಖಚಿತ ಕಾರಣವಿದೆ ಎಂಬುದನ್ನು ತಿಳಿದವಳೂ ಆಗಿದ್ದಳು.

ಪ್ರಯಾಣಕ್ಕೆ ಮುಂಚೆ ಮತ್ತೆ ಭೇಟಿಯಾಗಲು ಜನರಲ್ ಇಷ್ಟಪಟ್ಟಿರಲಿಲ್ಲ. ಆದರೆ ಅವರಿಗೆ ಕೊನೆಯ, ಗುಟ್ಟಾದ ಒಂದು ಕಾಣಿಕೆಯನ್ನು ನೀಡಲು ಮನೆಯೊಡತಿ ಇಚ್ಛೆಪಟ್ಟಳು: ಹೀಗಾಗಿ ಮಾನ್ಯುಯೆಲ ರಾವುತಳ ಸಮವಸ್ತ್ರ ಧರಿಸಿ, ಸುತ್ತಮುತ್ತಲಿನ ಅತಿಶ್ರದ್ಧಾವಂತರ ಪೂರ್ವಾಗ್ರಹಗಳಿಂದ ಪಾರಾಗಲು ಲಾಯದ ಮುಖ್ಯದ್ವಾರದ ಮೂಲಕ ಬರುವಂತೆ ಏರ್ಪಾಟು ಮಾಡಿದ್ದಳು. ಅವರೇನೂ ಗುಪ್ತಪ್ರೇಮಿಗಳಲ್ಲ; ಜನರು ಗುಸಗುಸ ಮಾತನ್ನು ಲೆಕ್ಕಿಸದೆ ಹಗಲಿನ ಹೊತ್ತೂ ರಾಜಾರೋಷವಾಗಿಯೇ ಸೇರುತ್ತಿದ್ದರು. ಆದರೆ ಮನೆಯೊಡತಿ ಹೀಗೆ ಮಾಡಿದ್ದರ ಉದ್ದೇಶ ಮನೆಯ ಒಳ್ಳೆಯ ಹೆಸರನ್ನು ಕಾಪಾಡುವುದು. ಅವರಂತೂ ಮತ್ತಷ್ಟು ಎಚ್ಚರದಿಂದಿದ್ದರು; ಅವಳು ಬಂದು ಹೋಗುವವರೆಗೂ ಪಕ್ಕದ ಕೋಣೆಯ ಬಾಗಿಲನ್ನು ಮುಚ್ಚದಿರುವಂತೆ ಜೋಸೆ ಪೆಲಾಸಿಯೋಸ್‌ಗೆ ಹೇಳಿದ್ದರು; ಅದರ ಮೂಲಕವೇ ಮನೆಯ ಆಳುಕಾಳುಗಳು ಓಡಿಯಾಡುತ್ತಿದ್ದುದು, ಅಲ್ಲೇ ಅವರ ಆಪ್ತ ಸಹಾಯಕರು ಇಸ್ಪೀಟು ಆಡುತ್ತ ಕೂರುತ್ತಿದ್ದುದು.

ಮ್ಯಾನ್ಯುಯೆಲ ಅವನಿಗಾಗಿ ಎರಡು ಗಂಟೆಯ ಕಾಲ ಓದುತ್ತ ಕೂತಿದ್ದಳು. ಇತ್ತೀಚಿನವರೆಗೆ ಅವಳು ಚಿಕ್ಕವಳಾಗಿ ಕಾಣುತ್ತಿದ್ದಳು, ಆದರೆ ವಯಸ್ಸಿಗೆ ಮೀರಿದಂತೆ ಈಗ ಅವಳ ದೇಹದ ತೂಕ ಹೆಚ್ಚಾಗಿದೆ. ಅವಳು ನಾವಿಕರ ಪೈಪ್ ಸೇದುತ್ತಿದ್ದಳು, ಸೈನಿಕರು ಇಷ್ಟಪಡುತ್ತಿದ್ದ ವರ್ಬೆನ ನೀರನ್ನು ಸುಗಂಧದಂತೆ ಬಳಸುತ್ತಿದ್ದಳು, ಗಂಡಸರಂತೆ ಉಡುಪು ಧರಿಸುತ್ತಿದ್ದಳು ಹಾಗೂ ಸೈನಿಕರ ಜೊತೆ ಕಾಲ ಕಳೆಯುತ್ತಿದ್ದಳು. ಆದರೆ ಅವಳ ಗೊಗ್ಗರು ಧ್ವನಿ ಮಾತ್ರ ಪ್ರೇಮದ ಗುಂಗಿಗೆ ಅನುಗುಣವಾಗಿತ್ತು. ಹಿಂದಿನ ವೈಸ್‌ರಾಯ್‌ರದರಂತಹ ತೋಳುಗಳಿದ್ದ ಆರಾಮ ಕುರ್ಚಿಯಲ್ಲಿ ಕೂತು, ಮಸುಕಾದ ಮೋಂಬತ್ತಿಯ ಬೆಳಕಿನಲ್ಲಿಯೇ ಓದುತ್ತಿದ್ದಳು; ಓದುತ್ತಿದ್ದುದನ್ನು ಜನರಲ್ ಹಾಸಿಗೆಯ ಮೇಲೆ ಅಂಗಾತ ಮಲಗಿಕೊಂಡೇ ಕೇಳಿಸಿಕೊಳ್ಳುತ್ತಿದ್ದರು. ಅವರು ಧರಿಸಿದ್ದುದು ನಾಗರಿಕ ಉಡುಪು, ಮೇಲೊಂದು ವಿಕ್ಯುನ ಪಾಂಛೋ ಹಾಕಿಕೊಂಡಿದ್ದರು. ಉಸಿರಾಟದ ಲಯಬದ್ಧ ಏರಿಳಿತ ಮಾತ್ರ ಅವರು ನಿದ್ದೆ ಹೋಗಿಲ್ಲವೆಂಬುದನ್ನು

ಸೂಚಿಸುತ್ತಿತ್ತು. ಅವಳು ಓದುತ್ತಿದ್ದುದು ಪೆರುವಿಯದ ನೋೞ ಕಾಲ್ವಡಿಲಾಸ್ ಬರೆದ '*ದೇವನ ೧೮೨೬ ನೇ ವರ್ಷದಲ್ಲಿ ಲಿಮದಲ್ಲಿ ಹರಡಿದ್ದ ಸುದ್ದಿ ಮತ್ತು ಗಾಳಿಮಾತುಗಳು*' ಎಂಬ ಪುಸ್ತಕ. ಅವಳ ಓದುವಿಕೆಯ ನಾಟಕೀಯ ಧಾಟಿ ಲೇಖಕನ ಶೈಲಿಗೆ ತುಂಬ ಹೊಂದಿಕೆಯಾಗುವಂತಿತ್ತು.

ಒಂದು ಗಂಟೆಯ ಬಳಿಕ ಎಲ್ಲ ನಿದ್ದೆ ಹೋಗಿದ್ದ ಮನೆಯಲ್ಲಿ ಅವಳ ಧ್ವನಿ ಮಾತ್ರವೇ ಕೇಳಿಸುತ್ತಿದ್ದುದು. ಆದರೆ ಸ್ವಲ್ಪ ಹೊತ್ತಿನ ಬಳಿಕ ಇದ್ದಕ್ಕಿದ್ದಂತೆ ಗಂಡಸರ ಮೇಳನಗುವಿನ ಧ್ವನಿ ಜೋರಾಗಿ ಕೇಳಿಸಿತು, ಅದರಿಂದ ಅಂಗಳದಲ್ಲಿದ್ದ ನಾಯಿಗಳು ಬಗಳತೊಡಗಿದವು. ಆಗ ಜನರಲ್ ಕಣ್ಣು ತೆರೆದರು, ಕಿರಿಕಿರಿಯ ಬದಲು ಕುತೂಹಲ ಎನ್ನಿಸಿತು. ಅವಳೋ ಓದುತ್ತಿದ್ದ ಪುಟದಲ್ಲಿ ಗುರುತಿಗಾಗಿ ಬೆರಳಿಟ್ಟುಕೊಂಡು ಪುಸ್ತಕವನ್ನು ಮುಚ್ಚಿ ತೊಡೆಯ ಮೇಲಿರಿಸಿಕೊಂಡಳು.

"ಅವರೆಲ್ಲ ನಿಮ್ಮ ಸ್ನೇಹಿತರು" ಎಂದಳವಳು.

"ನನಗೆ ಯಾರೂ ಸ್ನೇಹಿತರೇ ಇಲ್ಲ, ಇದ್ದರೂ ಬಹಳ ಕಾಲ ಗೆಳೆಯರಾಗಿ ಉಳಿಯೋದಿಲ್ಲ" ಎಂಬುದು ಅವರ ಉತ್ತರ.

"ಅದಕ್ಕೇ ಅವರೆಲ್ಲ ಹೊರಗಿದಾರೆ, ನಿಮ್ಮನ್ನ ಯಾರಾದರೂ ಬಂದು ಕೊಲೆ ಮಾಡುವುದನ್ನು ತಪ್ಪಿಸೋದಕ್ಕೆ" ಎಂದು ಹೇಳಿ ಮಾತು ಮುಗಿಸಿದಳು.

ಈಗಾಗಲೇ ಇಡೀ ನಗರಕ್ಕೇ ತಿಳಿದಿದ್ದ ವಿಷಯ ಅವರಿಗೆ ತಿಳಿದುದು ಈ ರೀತಿಯಲ್ಲಿ. ಅವರ ವಿರುದ್ಧ ಕೊಲೆಯ ಪಿತೂರಿ ನಡೆಯುತ್ತಿದ್ದುದು ಒಂದಲ್ಲ, ಹಲವಾರು; ಉಳಿದಿದ್ದ ಬೆಂಬಲಿಗರು ಅವರನ್ನು ಸಂಚಿನಿಂದ ಪಾರು ಮಾಡಲು ಈ ಮನೆಯಲ್ಲಿದ್ದರು. ಮನೆಯ ಹೊರ ಬಾಗಿಲು ಮತ್ತು ಕೈತೋಟದ ಸುತ್ತಮುತ್ತ – ರಾವುತದಳದವರು, ಗ್ರೆನೇಡಿಯರ್‌ಗಳು ಮತ್ತು ಯೂರೋಪ್‌ಗೆ ಹೋಗಲು ಹಿಡಿಯಬೇಕಾದ ಹಡಗು ಹತ್ತಲು ಕಾರ್ಟಜೀನದ ಇಂಡಿಯ ಬಂದರಿಗೆ ಜೊತೆಗೆ ಬರಲು ಸಿದ್ಧರಾಗಿದ್ದ ವೆನಿಜ಼ೂಲದ ಕೆಲವರು – ಕಾವಲು ಕಾಯುತ್ತಿದ್ದರು. ಅವರಲ್ಲಿ ಇಬ್ಬರಾಗಲೇ ಮಲಗುವ ಮನೆಗೆ ಹೋಗುವ ದಾರಿಯಲ್ಲಿ ಚಾಪೆಗಳನ್ನು ಹಾಸಿಕೊಂಡಿದ್ದರು, ಮ್ಯಾನ್ಯುಯೆಲ ಓದಿದ್ದು ಮುಗಿದ ಬಳಿಕವೂ ಆಪ್ತ ಸಹಾಯಕರು ಪಕ್ಕದ ಕೋಣೆಯಲ್ಲಿ ಇನ್ನೂ ಇಸ್ಪೀಟು ಆಡುತ್ತಿದ್ದರು. ಆದರೆ ಎಲ್ಲಿಂದ ಬಂದವರೋ ತಿಳಿಯದ ಮತ್ತು ವಿಭಿನ್ನ ವ್ಯಕ್ತಿತ್ವಗಳ ಇಷ್ಟೊಂದು ಮಂದಿ ಸೈನಿಕರು ಸುತ್ತುವರಿದ ಈ ಹೊತ್ತಿನಲ್ಲಿ ಯಾವುದನ್ನೂ ಸುರಕ್ಷಿತವೆಂದು ಭಾವಿಸುವಂತಿರಲಿಲ್ಲ. ಕೆಟ್ಟ ಸುದ್ದಿಗೆ ಜನರಲ್ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ, ಓದನ್ನು ಮುಂದುವರಿಸುವಂತೆ ಕೈಯಾಡಿಸಿ ಸೂಚಿಸಿದರು.

ವೃತ್ತಿಯಲ್ಲಿನ ಅನಿವಾರ್ಯ ಅಪಾಯವೆಂಬಂತೆ ಸಾವನ್ನವರು ಪರಿಗಣಿಸಿದ್ದರು. ಇದುವರೆಗೆ ಮಾಡಿದ ಯುದ್ಧಗಳಲ್ಲೆಲ್ಲ ಅವರು

ಮುಂಚೂಣಿಯಲ್ಲಿ ನಿಂತೇ ಹೋರಾಡಿದ್ದರು; ಆದರೆ ಇದುವರೆಗೆ ಒಂದು ತರಚುಗಾಯವೂ ಆಗಿರಲಿಲ್ಲ. ಎದುರಾಳಿಗಳ ಗುಂಡಿನ ಸುರಿಮಳೆಯ ನಡುವೆಯೂ ಎಷ್ಟು ನಿರುಮ್ಮಳವಾಗಿ ಓಡಾಡುತ್ತಿದ್ದನೆಂದರೆ, ತಮಗೆ ಯಾವ ತೊಂದರೆಯೂ ಇಲ್ಲವೆಂಬ ಅವರ ವಿವರಣೆಯನ್ನು ಮೇಲಧಿಕಾರಿಗಳೂ ಒಪ್ಪಿಕೊಂಡಿದ್ದರು. ಎಲ್ಲ ಕೊಲೆ ಸಂಚುಗಳಿಂದ ಕೂದಲೂ ಕೊಂಕದಂತೆ ಅವರು ಇದುವರೆಗೆ ಪಾರಾಗಿದ್ದರು; ಎಷ್ಟೋ ವೇಳೆ ಅವರು ಸಾವಿನ ದವಡೆಯಿಂದ ತಪ್ಪಿಸಿಕೊಂಡಿದ್ದುದು ತಮ್ಮ ಹಾಸಿಗೆಯಲ್ಲಿ ಮಲಗದೇ ಇದ್ದುದರಿಂದ. ಬೆಂಗಾವಲಿಗೆ ಅವರು ಯಾರನ್ನೂ ಕರೆದೊಯ್ಯುತ್ತಿರಲಿಲ್ಲ, ಎಲ್ಲಿ ಯಾರು ಏನು ಕೊಟ್ಟರೂ ಅದನ್ನು ಯಾವ ಚಿಂತೆಯೂ ಇಲ್ಲದೆ ತಿನ್ನುತ್ತಿದ್ದರು. ಈ ನಿರಾಸಕ್ತಿ ಅಜಾಗರೂಕತೆಯಲ್ಲ ಎಂಬುದಾಗಲೀ, ಅವರು ಅಪಾಯದ ಸೂಚನೆ ಅರಿಯದವರಲ್ಲ ಎಂಬುದಾಗಲೀ ಮ್ಯಾನ್ಯುಯೆಲಳಿಗೆ ಮಾತ್ರ ತಿಳಿದಿತ್ತು. ಬಡಕಲಾಗಿ, ಬರಿಮೈಯಲ್ಲಿ, ಜನರ ಕೃತಜ್ಞತೆಯ ಸಾಂತ್ವನವಿಲ್ಲದೆ ಮಲಗಿದಲ್ಲಿಯೇ ಸಾಯುತ್ತೇನೆ ಎಂಬ ವಿಷಾದಪೂರ್ಣ ಅರಿವು ಅವರಲ್ಲಿ ತುಂಬಿಕೊಂಡಿತ್ತು.

ನಿದ್ರಾಹೀನತೆಯ ಕಾರಣ ನಡೆಸುವ ವಿಧಿಯಲ್ಲಿ ಅಂದು ರಾತ್ರಿ ಅವರು ಮಾಡಿದ ಗಣನೀಯ ಬದಲಾವಣೆಯೆಂದರೆ, ಮಲಗುವ ಮುಂಚೆ ಬಿಸಿನೀರ ಸ್ನಾನ ಮಾಡದಿದ್ದುದು. ಜೋಸೆ ಪೆಲಾಸಿಯೋಸ್ ಮೊದಲೇ ಸ್ನಾನಕ್ಕಾಗಿ ಸಿದ್ಧಪಡಿಸಿದ್ದ. ಜನರಲ್‌ರ ದೇಹಾಲಸ್ಯವನ್ನು ಹೋಗಲಾಡಿಸಲು ಮತ್ತು ಕಫ ನಿವಾರಣೆಗೆಂದು ನೀರಿಗೆ ಮೂಲಿಕೆಗಳನ್ನು ಸೇರಿಸಿ ಯಜಮಾನರು ಇಷ್ಟಪಡುವಷ್ಟು ಬಿಸಿಯಾಗಿರಿಸಿದ್ದ. ಆದರೆ ಯಜಮಾನರು ಅದನ್ನೇಕೋ ಬಯಸಲಿಲ್ಲ. ಬಹುಕಾಲದ ಮಲಬದ್ಧತೆಗೆ ಎರಡು ಭೇದಿ ಮಾತ್ರೆಗಳನ್ನು ಸೇವಿಸಿ, ಉತ್ಸಾಹಪೂರ್ಣ ಹರಟೆಯ ಹಾಯಾದ ಮೊರೆತಕ್ಕೆ ಕಿವಿಗೊಟ್ಟು ತೂಕಡಿಸತೊಡಗಿದರು. ಆನಂತರ ಮುನ್ಸೂಚನೆ ಅಥವಾ ಗಣನೀಯವೆನಿಸುವ ಕಾರಣವಿಲ್ಲದೆ ಇಡೀ ಮನೆಯ ಅಡಿಪಾಯವನ್ನೇ ಅಲುಗಾಡಿಸುವಷ್ಟು ಭಯಂಕರವಾಗಿ ಕೆಮ್ಮತೊಡಗಿದರು. ಪಕ್ಕದ ಕೋಣೆಯಲ್ಲಿ ಜೂಜಾಡುತ್ತಿದ್ದ ಅಧಿಕಾರಿಗಳು ಇದನ್ನು ಕೇಳಿ ಗಾಬರಿಗೊಂಡರು. ಅವರಲ್ಲಿ ಬೆಲ್‌ಫೋರ್ಡ್ ಹಿಂಟನ್ ವಿಲ್ಸನ್ ಎಂಬ ಒಬ್ಬ ಐರಿಷ್ ವ್ಯಕ್ತಿ, ತನ್ನ ನೆರವೇನಾದರೂ ಬೇಕಾದೀತೇನೋ ಎನ್ನಿಸಿ ಬಾಗಿಲ ಬಳಿಯೇ ಬಂದು ನಿಂತ. ನೋಡಿದರೆ, ಜನರಲ್ ಅವರು ಹಾಸಿಗೆಯ ಮೇಲೆ ಬೋರಲಾಗಿ ಬಿದ್ದುಕೊಂಡು ಹೊಟ್ಟೆಯಲ್ಲಿದ್ದುದನ್ನೆಲ್ಲ ವಾಂತಿಮಾಡಲು ಹವಣಿಸುತ್ತಿದ್ದುದು ಕಾಣಿಸಿತು. ಮ್ಯಾನ್ಯುಯೆಲ ಅವರ ತಲೆಯನ್ನು ಬೇಸಿನ್ ಮೇಲೆ ಎತ್ತಿ ಹಿಡಿದಿದ್ದಳು. ಕದ ತಟ್ಟದೆಯೇ ಮಲಗುವ ಕೋಣೆಗೆ ಬರಲು ಅನುಮತಿಯಿದ್ದ ಏಕೈಕ ವ್ಯಕ್ತಿ ಜೋಸೆ ಪೆಲಾಸಿಯೋಸ್ ಇದೆಲ್ಲ

ಮುಗಿಯುವವರೆಗೂ ಹಾಸಿಗೆಯ ಪಕ್ಕದಲ್ಲಿಯೇ ಸಿದ್ಧನಾಗಿ ನಿಂತಿದ್ದ. ಆಮೇಲೆ, ಕಣ್ಣ ತುಂಬ ನೀರು ತುಂಬಿದ್ದ ಜನರಲ್ ನೀಳವಾದ ಉಸಿರನ್ನೆಳೆದುಕೊಂಡು ಅಲಂಕರಣ ಮೇಜಿನ ಕಡೆ ಕೈ ಮಾಡಿ ತೋರಿಸಿದರು.

"ಇದಕ್ಕೆಲ್ಲ ಕಾರಣ ಆ ದರಿದ್ರ ಹೂಗಳೇ" ಎಂದರು ಎಂದಿನಂತೆ.

ತಮ್ಮ ದುರದೃಷ್ಟಕ್ಕೆ ಯಾವುದೋ ಸಂಬಂಧವಿರದುದನ್ನು ಸದಾ ಹೊಣೆಯಾಗಿಸುತ್ತಿದ್ದರು. ಬೇರೆಲ್ಲರಿಗಿಂತ ಅವರ ಸ್ವಭಾವವನ್ನು ಚೆನ್ನಾಗಿ ಅರಿತಿದ್ದ ಮ್ಯಾನ್ಯುಯೆಲ, ಬೆಳಿಗ್ಗೆ ಇಟ್ಟು ಈಗ ಬಾಡಿಹೋಗಿದ್ದ ತಪಸ್ವಿನಿ ಹೂಗಳಿದ್ದ ಹೂದಾನಿಯನ್ನು ತೆಗೆದುಕೊಂಡು ಹೋಗಲು ಜೋಸೆ ಪೆಲಾಸಿಯೋಸ್‌ಗೆ ಸನ್ನೆ ಮಾಡಿದಳು. ಹಾಸಿಗೆಯ ಮೇಲೆ ಮತ್ತೆ ಅಡ್ಡವಾಗಿ ಜನರಲ್ ಕಣ್ಣುಗಳನ್ನು ಮುಚ್ಚಿಕೊಂಡರು; ಅವಳು ಹಿಂದಿನ ಧಾಟಿಯಲ್ಲಿಯೇ ಓದಲು ಮತ್ತೆ ಶುರುಮಾಡಿದಳು. ಅವರು ನಿದ್ದೆ ಹೋಗಿದಾರೆಂದು ಅನ್ನಿಸಿದಾಗ ಮಾತ್ರವೇ ಪುಸ್ತಕವನ್ನು ಪಕ್ಕದ ಮೇಜಿನ ಮೇಲಿರಿಸಿ, ಜ್ವರದ ತಾಪದಿಂದ ಬಣ್ಣಗೆಟ್ಟಿದ್ದ ಅವರ ಹಣೆಗೆ ಮುತ್ತಿಟ್ಟಳು. ಆಮೇಲೆ, ಬೆಳಿಗ್ಗೆ ಆರು ಗಂಟೆಯ ನಂತರ ಕೊನೆಯ ವಿದಾಯ ಹೇಳಲು ಹೊಂಡಕ್ಕೆ ಹೋಗುವ ರಾಜಮಾರ್ಗ ಆರಂಭಗೊಳ್ಳುವ ಕುಆರ್ಟೋ ಎಸ್ಕ್ವಿನಾಸ್‌ನಲ್ಲಿ ತಾನು ಕಾಯುತ್ತಿರುವುದಾಗಿ ಜೋಸೆ ಪೆಲಾಸಿಯೋಸ್‌ಗೆ ಪಿಸುಮಾತಿನಲ್ಲಿ ತಿಳಿಸಿ ಯುದ್ಧವಸ್ತ್ರವೊಂದನ್ನು ಮೈಮೇಲೆ ಹೊದ್ದುಕೊಂಡು ಕೋಣೆಯಿಂದ ಗಂಭೀರವಾಗಿ ಹೊರನಡೆದಳು. ಆನಂತರ ಜನರಲ್ ತನ್ನ ಕಣ್ಣುಗಳನ್ನು ತೆರೆದು ಕ್ಷೀಣ ದನಿಯಲ್ಲಿ ಹೀಗೆಂದರು:

"ಅವಳನ್ನು ಮನೆಗೆ ಬಿಟ್ಟು ಬರಲು ವಿಲ್ಸನ್‌ಗೆ ಹೇಳು."

ರಾವುತದಳದ ಒಂದು ತುಕಡಿಗಿಂತಲೂ ತನ್ನನ್ನು ತಾನು ಚೆನ್ನಾಗಿ ರಕ್ಷಿಸಿಕೊಳ್ಳಬಲ್ಲೆನೆಂದು ಭಾವಿಸಿದ್ದ ಮ್ಯಾನ್ಯುಯೆಲಳಿಗೆ ಇಷ್ಟವಿಲ್ಲದಿದ್ದರೂ ಜನರಲ್ ಅವರ ಆಜ್ಞೆಯನ್ನು ಪಾಲಿಸಲಾಯಿತು. ಲಾಯಕ್ಕೆ ಹೋಗುವ ದಾರಿಯಲ್ಲಿ ಜೋಸೆ ಪೆಲಾಸಿಯೋಸ್ ದೊಂದಿ ಹಿಡಿದು ನಡೆದ; ಒಳಾಂಗಣದ ಕೈತೋಟದಲ್ಲಿನ ಕಲ್ಲಿನ ಕಾರಂಜಿಯ ಬದಿ ನಡೆಯುವಾಗ ತಪಸ್ವಿನಿ ಹೂಗಳು ಬೆಳಗಿನ ಜಾವ ಆಗ ತಾನೇ ಅರಳ ತೊಡಗಿದ್ದವು. ಮಳೆ ಬಂದು ನಿಂತಿತ್ತು, ಮರಗಳಲ್ಲಿ ತೂರಿ ಬೀಸುವ ಗಾಳಿ ಶಿಳ್ಳೆ ಹಾಕುತ್ತಿರಲಿಲ್ಲ, ಆದರೆ ಆಗಸದಲ್ಲಿ ಒಂದಾದರೂ ನಕ್ಷತ್ರ ಕಣ್ಣಿಗೆ ಬೀಳಲಿಲ್ಲ. ಕೈಸಾಲೆಯಲ್ಲಿ ಹುಲ್ಲು ಚಾಪೆಗಳ ಮೇಲೆ ಮಲಗಿದ್ದ ಕಾವಲುಗಾರರನ್ನು ಸುಮ್ಮನಾಗಿಸಲು ಕರ್ನಲ್ ಬೆಲ್‌ಫೋರ್ಡ್ ವಿಲ್ಸನ್ ಪದೇ ಪದೇ ಸಂಕೇತಪದವನ್ನು ಉಚ್ಚರಿಸುತ್ತಿದ್ದ. ಮುಖ್ಯ ಸ್ವಾಗತಕೋಣೆಯನ್ನು ದಾಟಿದಾಗ ನಾಗರಿಕ ಹಾಗೂ ಸೈನಿಕ ಸ್ನೇಹಿತರ ಗುಂಪಿಗೆ ಮನೆಯೊಡೆಯ ಕಾಫಿ ನೀಡುತ್ತಿರುವುದನ್ನು

ಜೋಸೆ ಪೆಲಾಸಿಯೋಸ್ ಕಂಡ; ಅವರು ಮುಂದೆ ಸಾಗುವವರೆಗೂ ಎಲ್ಲರೂ ತಾವಾಗಿ ಸುಮ್ಮನೆ ನಿಂತರು.

ಅವನು ಮತ್ತೆ ಮಲಗುವ ಕೋಣೆಗೆ ಬಂದಾಗ, ಜನರಲ್ ಸನ್ನಿಯಿಂದ ಬಡಬಡಿಸುತ್ತಿರುವುದು ಕಾಣಿಸಿತು. ಸಂಬಂಧವಿಲ್ಲದ ಪದಗುಚ್ಛಗಳನ್ನವರು ಸೇರಿಸಿ ಹೇಳುತ್ತಿದ್ದರು; ಆದರೆ ಯಾವುದೂ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಅವರ ದೇಹದಲ್ಲಿ ಜ್ವರದ ಜ್ವಾಲೆ ಧಗಧಗಿಸುತ್ತಿತ್ತು, ಗಬ್ಬು ವಾಸನೆಯ ಅಪಾನವಾಯು ಹೊಮ್ಮುತ್ತಿತ್ತು. ತಾವು ನಿದ್ದೆಯಲ್ಲಿ ಬಡಬಡಿಸುತ್ತಿದ್ದೆನೋ ಅಥವಾ ಎಚ್ಚರದಲ್ಲಿಯೇ ಕೂಗಾಡುತ್ತಿದ್ದೆನೋ ಎಂಬುದನ್ನು ಸ್ವತಃ ಜನರಲ್ ಅವರೇ ಮಾರನೆಯ ಬೆಳಿಗ್ಗೆಯೂ ಹೇಳುವ ಸ್ಥಿತಿಯಲ್ಲಿರಲಿಲ್ಲ; ತಾವಾಡಿದ ಯಾವ ಮಾತೂ ಅವರ ನೆನಪಿನಲ್ಲಿರಲಿಲ್ಲ. ಅವೆಲ್ಲ ತಮ್ಮ 'ಬುದ್ಧಿಮಾಂದ್ಯದ ಸಂದಿಗ್ಧ'ಗಳೆಂದು ಜನರಲ್ ಕರೆದುಕೊಂಡರು. ಅವುಗಳಿಂದ ಯಾರೂ ಗಾಬರಿಗೊಳ್ಳಲಿಲ್ಲ, ಯಾಕೆಂದರೆ ಯಾವ ವೈದ್ಯರಿಗೂ ತೋರಿಸದೆ ಕಳೆದ ನಾಲ್ಕು ವರ್ಷಗಳಿಂದ ಅದನ್ನವರು ಅನುಭವಿಸುತ್ತಿದ್ದರು, ಮಾರನೆಯ ಬೆಳಿಗ್ಗೆಯ ಹೊತ್ತಿಗೆ ಅವುಗಳ ಬೂದಿಯಿಂದ ಮೇಲೆದ್ದು ಮತ್ತೆ ಪ್ರಜ್ಞಾವಂತನಾಗುತ್ತಿದ್ದರು. ಜೋಸೆ ಪೆಲಾಸಿಯೋಸ್ ಅವರ ಮೈಗೆ ಒಂದು ದುಪ್ಪಟಿಯನ್ನು ಹೊದಿಸಿದ, ಅಮೃತಶಿಲೆಯ ಮೇಲುಫಲಕದ ಮೇಜಿನ ಮೇಲೆ ಉರಿಯುತ್ತಿದ್ದ ಮೋಂಬತ್ತಿಯನ್ನು ಆರಿಸದೆ ಬಿಟ್ಟ, ಪಕ್ಕದ ಕೋಣೆಯಿಂದಲೇ ಇಲ್ಲಿನದನ್ನೆಲ್ಲ ನೋಡಲು ಅನುಕೂಲವಾಗುವಂತೆ ಬಾಗಿಲನ್ನು ಮುಂದುಮಾಡದೆ ಹಾಗೆಯೇ ಹೊರನಡೆದ. ಪೂರ್ತಿ ಬೆಳಕು ಹರಿಯುವ ಹೊತ್ತಿಗೆ ಯಜಮಾನರು ಉತ್ತಮಗೊಂಡು, ದುಃಸ್ವಪ್ನದಿಂದ ಛಿದ್ರಗೊಂಡ ದೇಹದಲ್ಲಿ ಮತ್ತೆ ಶಕ್ತಿಸಂಚಯನ ಮಾಡಿಕೊಳ್ಳಲು ತಣ್ಣೀರಿನ ಸ್ನಾನದ ತೊಟ್ಟಿಯಲ್ಲಿ ಕುಳಿತಿರುವರೆಂಬ ಖಾತ್ರಿ ಅವನಿಗಿತ್ತು.

ಗಲಿಬಿಲಿಯ ದಿನ ಕೊನೆಗೊಂಡಿತ್ತು. ಏಳುನೂರ ಎಂಬತ್ತೊಂಬತ್ತು ಮಂದಿ ರಾವುತದಳ ಮತ್ತು ಶಸ್ತ್ರದಳದಿಂದ ಕೂಡಿದ ಕಾವಲುಪಡೆಯೊಂದು ಕಳೆದ ಮೂರು ತಿಂಗಳುಗಳಿಂದ ಬಾಕಿಯಿದ್ದ ತಮ್ಮ ಸಂಬಳವನ್ನು ಚುಕ್ತಾ ಮಾಡಬೇಕೆಂಬ ನೆವದಿಂದ ಬಂಡಾಯವೆದ್ದಿತ್ತು. ಆದರೆ ನಿಜವಾದ ಕಾರಣ ಇದು: ಅವರಲ್ಲಿ ಬಹುಮಂದಿ ವೆನಿಝೂಲದವರು, ಅನೇಕರು ನಾಲ್ಕು ಬೇರೆ ಬೇರೆ ದೇಶಗಳ ವಿಮೋಚನೆಯ ಯುದ್ಧಗಳಲ್ಲಿ ಪಾಲ್ಗೊಂಡಿದ್ದವರು, ಕಳೆದ ಕೆಲವು ವಾರಗಳಿಂದ ಬೀದಿಗಳಲ್ಲಿ ಅವರನ್ನು ಜನ ಬೈದಾಡಿ ಉದ್ರೇಕಕಾರಿ ಮಾತುಗಳನ್ನಾಡುತ್ತಿದ್ದುದರಿಂದ, ಜನರಲ್ ್ಜನರಲ್ ದೇಶವನ್ನು ಬಿಟ್ಟು ಹೋದರೆ ತಮಗೆ ರಕ್ಷಣೆ ಸಿಕ್ಕಲಾರದು ಎಂದು ಭಯಪಡಲು ಕಾರಣವಿತ್ತು. ಅವರ ಪ್ರಯಾಣ ವೆಚ್ಚವನ್ನೂ, ಬಂಡಾಯಗಾರರು ಒತ್ತಾಯಿಸುತ್ತಿದ್ದ ಎಪ್ಪತ್ತು

ಸಾವಿರದ ಬದಲು ಒಂದು ಸಾವಿರ ಚಿನ್ನದ ಪೆಸೋಗಳನ್ನು ನೀಡುವುದರ ಮೂಲಕ ಈ ಬಿಕ್ಕಟ್ಟನ್ನು ಪರಿಹರಿಸಲಾಯಿತು; ಅವರೆಲ್ಲ ಗಂಟುಮೂಟೆ ಕಟ್ಟಿಕೊಂಡು ತಮ್ಮ ಹೆಂಡಿರು–ಮಕ್ಕಳು ಮತ್ತು ಸಾಕುಪ್ರಾಣಿಗಳ ಸಹಿತ ಹುಟ್ಟೂರಿಗೆ ವಾಪಸಾದರು. ಹಾಗೆ ಸಾಗುವಾಗ ಜನರು ಅವರ ಮೇಲೆ ಕಿರುಚಾಡಿದರು, ನಾಯಿಗಳನ್ನು ಛೂಬಿಟ್ಟರು, ನಡಿಗೆಯನ್ನು ತಪ್ಪಿಸಲು ಅವರ ಕಾಲುಗಳ ಬಳಿ ಪಟಾಕಿಯ ಸರಗಳನ್ನೆಸೆದರು; ಶತ್ರು ಸೈನಿಕರ ಬಗ್ಗೆಯೂ ಜನ ಹೀಗೆ ನಡೆದುಕೊಂಡಿರಲಿಲ್ಲ. ಇವೆಲ್ಲದರ ಶಬ್ದವು ಸೈನ್ಯದ ಹಿತ್ತಾಳೆಯ ಡ್ರಂ ಮತ್ತು ಕೈತಾಳಗಳ ಕಿವಿಗಡಚಿಕ್ಕುವ ಗದ್ದಲವನ್ನೂ ಮೀರಿತ್ತು. ಮೂರು ಶತಮಾನಗಳ ದೀರ್ಘ ಸ್ಪಾನಿಶ್ ಅಧೀನತೆಯ ನಂತರ, ಹನ್ನೊಂದು ವರ್ಷಗಳ ಹಿಂದೆ, ಕ್ರೂರಿ ವೈಸ್‌ರಾಯ್ ಡಾನ್ ಜುವಾನ್ ಸಮಾನೋ ಇದೇ ಬೀದಿಗಳ ಮೂಲಕ ಯಾತ್ರಿಕನ ಮಾರುವೇಷದಲ್ಲಿ ತಪ್ಪಿಸಿಕೊಂಡು ಓಡಿಹೋಗಿದ್ದ; ಅವನೊಡನಿದ್ದ ಪೆಟಾರಿಗಳಲ್ಲಿ ಮಾತ್ರ ಚಿನ್ನದ ವಿಗ್ರಹಗಳು ಮತ್ತು ಕತ್ತರಿಸದ ವಜ್ರಗಳು ತುಂಬಿದ್ದವು, ಅಲ್ಲದೆ ಪವಿತ್ರ ಟೂಕನ್ ಪಕ್ಷಿಗಳೂ ಮತ್ತು ಮೂಝೋದ ಉಜ್ವಲವರ್ಣದ ಗಾಜಿನ ಚಿಟ್ಟೆಗಳೂ ಜೊತೆಗಿದ್ದವು. ಬಾಲ್ಕನಿಗಳಲ್ಲಿ ನಿಂತು ಅವನ ದಾರಿಯಲ್ಲಿ ಹೂ ಎರಚಿ, ಸಲೀಸಾದ ಸಮುದ್ರಪ್ರಯಾಣವಾಗಲೆಂದು ಶುಭ ಹಾರೈಸುತ್ತ ಅವನಿಗಾಗಿ ಕಣ್ಣೀರಿಟ್ಟ ಜನಗಳಿಗೂ ಕೊರತೆಯಿರಲಿಲ್ಲ!

ಸೇನೆ ಮತ್ತು ನೌಕಾದಳಗಳ ಮಂತ್ರಿಯು ತನಗೆ ನೀಡಿದ್ದ ಮನೆಯಿಂದ ಹೊರಬರದ ಜನರಲ್ ್ಜನರಲ್ ಸಂಘರ್ಷದ ಬಗೆಗಿನ ಸಂಧಾನಕ್ಕೆ ರಹಸ್ಯವಾಗಿ ನೆರವಾಗಿದ್ದ, ಕೊನೆಯಲ್ಲಿ ಹೆಂಡತಿಯ ಬಂಧು ಮತ್ತು ತನ್ನ ನಚ್ಚಿನ ಆಪ್ತನಾಗಿದ್ದ ಜನರಲ್ ಜೊಸ್ ಲಾರೆನ್ಸಿಯೋ ಸಿಲ್ವನಿಗೆ ಬಂಡಾಯಗಾರ ಗುಂಪಿನೊಂದಿಗೆ ಹೊರಡಲು ಆಜ್ಞೆ ಮಾಡಿದ್ದ. ಹಾಗೆ ಕಳಿಸಿದ್ದುದು ಬಂಡಾಯಗಾರರು ವೆನಿಝೂಲ ಗಡಿಗಳನ್ನು ಸೇರುವ ಮುನ್ನ ಯಾವುದೇ ಹೊಸ ಗಲಭೆಗಳುಂಟಾಗದಂತೆ ನೋಡಿಕೊಳ್ಳಲು. ತಮ್ಮ ಮನೆಯ ಬಾಲ್ಕನಿಯ ಕೆಳಗೇ ನಡೆದ ಕವಾಯತನ್ನು ಅವರು ನೋಡಲಿಲ್ಲ, ಆದರೆ ತುತ್ತೂರಿ ಮತ್ತು ಡ್ರಂಗಳ ಶಬ್ದ ಕೇಳಿಸಿತ್ತು, ಹಾಗೆಯೇ ಬೀದಿಯಲ್ಲಿನ ಜನಗಳ ಅಬ್ಬರದ ಗದ್ದಲ, ಆದರೆ ಅದೇಕೆ ಎಂದು ಅರ್ಥವಾಗಲಿಲ್ಲ. ಅದಕ್ಕೆ ಅವರು ಮಹತ್ವ ನೀಡದೆ, ತನ್ನ ಕಾರ್ಯದರ್ಶಿಗಳ ಜೊತೆಗೆ ಪತ್ರವ್ಯವಹಾರಗಳನ್ನು ಪರಿಶೀಲಿಸಿ, ಬೊಲಿವಿಯದ ಅಧ್ಯಕ್ಷ ಗ್ರಾಂಡ್ ಮಾರ್ಷಲ್ ಡಾನ್ ಆಂಡ್ರೇ ದ ಸಾಂತನಿಗೆ ಪತ್ರವೊಂದನ್ನು ಹೇಳಿ ಬರೆಸಿದ್ದರು. ಅದರಲ್ಲಿ ತಾವು ಅಧಿಕಾರದಿಂದ ಹಿಂದೆ ಸರಿಯುವ ವಿಷಯವನ್ನು ತಿಳಿಸಿದ್ದರೂ, ವಿದೇಶಕ್ಕೆ ಪ್ರಯಾಣ ಬೆಳೆಸುವ ಬಗ್ಗೆ ಯಾವುದೇ ಖಚಿತ ನಿಲವನ್ನು ಪ್ರಸ್ತಾಪಿಸಿರಲಿಲ್ಲ. ಪತ್ರ ಮುಗಿದಾಗ, "ನನ್ನ

ಜೀವಮಾನದಲ್ಲಿ ಇನ್ನೆಂದೂ ಪತ್ರವನ್ನು ಬರೆಯುವುದಿಲ್ಲ" ಎಂದು ಅಂದುಕೊಂಡಿದ್ದರು. ಆನಂತರ, ಮಧ್ಯಾಹ್ನ, ನಿದ್ರೆಯ ಜ್ವರದ ಬೆವರಿನಲ್ಲಿ ತೊಯ್ದಿರುವಾಗ, ದೂರದಲ್ಲಿ ನಡೆಯುತ್ತಿದ್ದ ಗಲಭೆಗಳ ಸದ್ದು ನಿದ್ರೆಯಾಳಕ್ಕೆ ಚುಚ್ಚಿತು, ಗುಂಡಿನ ಕಾಳಗವಾಗಿರಬಹುದಾಗಿದ್ದ ರೀತಿಯ ಸ್ಫೋಟ ಪರಂಪರೆಯ ಸದ್ದಿನಿಂದ ಗಲಿಬಿಲಿಗೊಂಡು ಹಟಾತ್ತಾಗಿ ಎದ್ದು ಕೂತರು, ಅಷ್ಟೇ. "ಅದು ಹಬ್ಬದಾಚರಣೆ, ಜನರಲ್". ಆದರೆ ಯಾರೂ, ಜೋಸೆ ಪೆಲಾಸಿಯೋಸ್ ಕೂಡ, ಅದು ಎಂತಹ ಹಬ್ಬದಾಚರಣೆ ಎಂಬುದನ್ನು ವರ್ಣಿಸುವ ಧೈರ್ಯ ಮಾಡಿರಲಿಲ್ಲ.

ರಾತ್ರಿ ತಮ್ಮನ್ನು ಕಾಣಲು ಬಂದಿದ್ದಾಗ ಮ್ಯಾನ್ಯುಯೆಲ ಹೇಳಿದಾಗಲೇ ತಿಳಿದಿದ್ದು ಅದು ತಮ್ಮ ರಾಜಕೀಯ ವಿರೋಧಿಗಳ ಅನುಯಾಯಿಗಳದ್ದು ಎಂಬ ವಿಚಾರ. ತಮ್ಮ ರಾಜಕೀಯ ವಿರೋಧಿಗಳನ್ನವರು ಪುಡಾರಿಗಳ ಗುಂಪು ಎಂದು ಕರೆಯುತ್ತಿದ್ದರು; ಪೋಲೀಸ್‌ರ ನೆರವಿನಿಂದ ಬೀದಿಗಳಲ್ಲಿ ಓಡಾಡುತ್ತ ಕುಶಲಕರ್ಮಿಗಳ ಕೂಟಗಳನ್ನು ಅವರ ವಿರುದ್ಧ ಎತ್ತಿ ಕಟ್ಟಲು ಚಿತಾವಣೆ ಮಾಡುತ್ತಿದ್ದರು. ಅವತ್ತು ಶುಕ್ರವಾರ, ಸಂತೆ; ಹೀಗಾಗಿ ಮುಖ್ಯ ಚೌಕದಲ್ಲಿ ಗೊಂದಲ ಉಂಟುಮಾಡುವುದು ಸುಲಭವಾಗಿತ್ತು. ಸಾಮಾನ್ಯಕ್ಕಿಂತ ಹೆಚ್ಚು ಮಳೆ ಮಿಂಚು ಗುಡುಗುಗಳು ಜೊತೆ ಸೇರಿ ರಾತ್ರಿಯ ಹೊತ್ತಿಗೆ ಗಲಭೆಕೋರರನ್ನು ಚದುರಿಸಿತು. ಆದರೆ ಅಷ್ಟು ಹೊತ್ತಿಗಾಗಲೇ ಅನಾಹುತ ಆಗಿಹೋಗಿತ್ತು. ಸ್ಯಾನ್ ಬಾರ್ಟೋಲೋಮಿ ಅಕಾಡೆಮಿಯ ವಿದ್ಯಾರ್ಥಿಗಳು ಸುಪ್ರೀಂ ಕೋರ್ಟ್‌ನ ಕಚೇರಿಗಳನ್ನು ಮುತ್ತಿ ಧ್ವಂಸಮಾಡಿ ಜ್ಞನರಲ್‌ರನ್ನು ಸಾರ್ವಜನಿಕ ವಿಚಾರಣೆಗೆ ಒಳಪಡಿಸುವಂತೆ ಒತ್ತಾಯಿಸಿದ್ದರು; ವಿಮೋಚನಾ ಪಡೆಯ ಒಬ್ಬ ಪ್ರಮುಖನಿಂದ ರಚಿತವಾಗಿದ್ದ ಆಳೆತ್ತರದ ಅವನ ವರ್ಣಚಿತ್ರವನ್ನು ಬಂದೂಕುಗಳ ತುದಿಯಿಂದ ಚುಚ್ಚಿ ತಿವಿದು ಕಿತ್ತು ಕೆಳಕ್ಕೆ ಬಿಸಾಡಿದ್ದರು. ಮೆಕ್ಕೆಜೋಳದ ಮದ್ಯವನ್ನು ಕುಡಿದಿದ್ದ ಜನರ ಗುಂಪು ಕಾಲ್ ರಿಯಲ್ ಉದ್ದಕ್ಕೂ ಇದ್ದ ಅಂಗಡಿಗಳನ್ನೂ, ಬಡಜನರು ವಾಸಿಸುವ ಪ್ರದೇಶಗಳಲ್ಲಿನ ಸಕಾಲಕ್ಕೆ ಮುಚ್ಚದಿದ್ದ ಬಾರ್‌ಗಳನ್ನೂ ಲೂಟಿಮಾಡಿದ್ದರು. ಮುಖ್ಯ ಚೌಕದಲ್ಲಿ ಜ್ಞನರಲ್‌ನ ಮರದ ಹೊಟ್ಟು ತುಂಬಿದ ಪ್ರತಿಕೃತಿಯನ್ನು – ನೀಳವಾದ ನೀಲಿ ನಿಲುವಂಗಿ ಹಾಗೂ ಚಿನ್ನದ ಬಣ್ಣದ ಗುಂಡಿಗಳಿದ್ದ ಅದನ್ನು ಯಾರೂ ಜನರಲ್ ಜ್ಞನರಲ್‌ಎಂದು ಪರಿಚಯಿಸಬೇಕಾಗಿರಲಿಲ್ಲ – ಗುಂಡಿಟ್ಟು ಹೊಡೆದು ಉರುಳಿಸಿದ್ದರು. ನಿರಂತರವಾಗಿ ಹನ್ನೆರಡು ವರ್ಷಗಳ ಕಾಲ ಚಲಾಯಿಸಿ ಕಾಂಗ್ರೆಸ್ ಒಮ್ಮತದ ನಿರ್ಣಯಮಾಡಿ ಕಸಿದುಕೊಂಡಿದ್ದ ಅಧಿಕಾರವನ್ನು ಮತ್ತೆ ಪಡೆಯಲು ಸೈನಿಕರನ್ನು ದಂಗೆಯೇಳಲು ಗುಟ್ಟಾಗಿ ಪ್ರಚೋದಿಸಿದರೆಂದು ಅವರ ಮೇಲೆ ಆರೋಪ ಹೊರಿಸಲಾಯಿತು. ತಮ್ಮ

ಉತ್ತರಾಧಿಕಾರಿಯಾಗಿ ಜೀವಮಾನವಿಡೀ ಅಧ್ಯಕ್ಷನಾಗಿ ಒಬ್ಬ ಯೂರೋಪಿಯನ್ ರಾಜಕುಮಾರನನ್ನು ನೇಮಿಸುವ ಇರಾದೆ ಅವರದೆಂದು ಆರೋಪಿಸಲಾಯಿತು. ವಿದೇಶಕ್ಕೆ ಹೋಗುವ ನೆಪದಲ್ಲಿ ಅವರು ವೆನಿಝೂಲದ ಗಡಿಭಾಗದವರೆಗೆ ಹೋಗಿ ದಂಗೆಕೋರ ಸೈನ್ಯದ ನಾಯಕರಾಗಿ ಮತ್ತೆ ಬಂದು ಅಧಿಕಾರ ಹಿಡಿಯುವ ಪ್ರಯತ್ನ ಅವರದು ಎಂಬ ಆರೋಪ ಬೇರೆ. ಸಾರ್ವಜನಿಕ ಸ್ಥಳಗಳಲ್ಲೆಲ್ಲ ಭಿತ್ತಿಚಿತ್ರಗಳನ್ನು ಅಂಟಿಸಲಾಗಿತ್ತು, ಅವುಗಳಲ್ಲಿ ಅವರ ಬಗ್ಗೆ ಹೀನಾಮಾನ ಬೈಗುಳಗಳನ್ನು ಬರೆಯಲಾಗಿತ್ತು. ಅವರ ಆಪ್ತ ಹಿಂಬಾಲಕರೆಲ್ಲ ಜನರ ಆಕ್ರೋಶ ಇಳಿಯುವವರೆಗೂ ಬೇರೆ ಬೇರೆಯವರ ಮನೆಗಳಲ್ಲಿ ಅಡಗಿಕೊಂಡಿದ್ದರು. ಪತ್ರಿಕೆಗಳು ಅವರ ಮುಖ್ಯ ವಿರೋಧಿಯಾದ ಜನರಲ್ ಫ್ರಾನ್ಸಿಸ್‌ಕೊ ದ ಪೌಲ ಸಟಾಂಡರ್‌ನ ಪರವಾಗಿದ್ದವು; ಜನರಲ್ ್ಜನರಲ್ ಏನೆಂದು ಹೇಳದ ತಮ್ಮ ಕಾಯಿಲೆಯ ಬಗ್ಗೆ ಹೆಚ್ಚು ಪ್ರಚಾರಮಾಡುತ್ತಿದಾರೆ ಹಾಗೂ ತಮ್ಮ ಆಯಾಸ ಮತ್ತು ಪ್ರಯಾಣದ ಬಗ್ಗೆಯೂ ವರ್ಣರಂಜಿತ ರೀತಿಯಲ್ಲಿ ಸುದ್ದಿ ಹಬ್ಬಿಸುತ್ತಿದ್ದಾರೆ, ಇದರಿಂದ ಜನರು ತಮ್ಮನ್ನು ಹೋಗದಿರುವಂತೆ ಬೇಡಿಕೊಳ್ಳುತ್ತಾರೆಂಬ ನಿರೀಕ್ಷೆ ಅವರದು ಎಂಬ ಗುಲ್ಲನ್ನು ಅವು ಪ್ರಕಟಿಸುತ್ತಿದ್ದವು. ಅಂದು ರಾತ್ರಿ ಮ್ಯಾನ್ಯುಯೆಲ ಸಾಯೆಂಝ್ ಆ ಆಪತ್ತಿನ ದಿನದ ವಿವರಗಳನ್ನು ನೆನಪಿಸಿಕೊಳ್ಳುತ್ತಿರುವ ಸಮಯದಲ್ಲಿ ಹಂಗಾಮಿ ಅಧ್ಯಕ್ಷರ ಸೈನಿಕರು ಬಿಷಪ್ಪರ ಅರಮನೆಯ ಗೋಡೆಯ ಮೇಲೆ ಇದ್ದಿಲಿನಿಂದ ಬರೆದಿದ್ದ ‘ಅವನು ಎಲ್ಲಿಗೂ ಹೋಗುವುದಿಲ್ಲ, ಸಾಯುವುದೂ ಇಲ್ಲ’ ಎಂಬ ವಾಕ್ಯವನ್ನು ಅಳಿಸಿ ಹಾಕಲು ಪ್ರಯತ್ನಿಸುತ್ತಿದ್ದರು.

“ಹಾಗಾದರೆ ಪರಿಸ್ಥಿತಿ ಹದಗೆಟ್ಟಿರಬೇಕು” ಎಂದುಕೊಂಡು ಹೀಗೆಂದ: “ಒಂದು ಬ್ಲಾಕ್ ದೂರವಷ್ಟೇ ಇದೆಲ್ಲ ನಡೆಯುತ್ತಿದ್ದು ಅದು ಉತ್ಸವ ಎಂದು ನಾನು ಭಾವಿಸುವಂತೆ ಮಾಡಿರಬೇಕಾದರೆ ಅದರಿಂದ ನನಗೆ ಕೆಟ್ಟದೇ ಆಗಿರಬೇಕು.”

ಸತ್ಯದ ಮಾತೆಂದರೆ, ಜನರಲ್ ಅಧಿಕಾರವನ್ನಾಗಲೀ ದೇಶವನ್ನಾಗಲೀ ತೊರೆಯುತ್ತಿರುವರೆಂದು ಅವರ ಅತ್ಯಂತ ಆಪ್ತರೂ ನಂಬಿರಲಿಲ್ಲ. ನಗರ ತುಂಬ ಪುಟ್ಟದು, ಜನರು ತೀರ ಸಂಪ್ರದಾಯಸ್ಥರಾದವರು, ಅವರಿಗೆ ತಾವು ಹೋಗುತ್ತಿರುವುದರ ಬಗೆಗಿನ ಎರಡು ಕೊರತೆಗಳು ಅರಿವಿಗೆ ಬಂದಿರಲಿಲ್ಲ: ಅಷ್ಟು ದೊಡ್ಡ ಪರಿವಾರವನ್ನು ಕಟ್ಟಿಕೊಂಡು ಹೋಗುವುದಕ್ಕೆ ಬೇಕಾದ ಹಣ ತಮ್ಮಲ್ಲಿರಲಿಲ್ಲ, ಮತ್ತು ಗಣರಾಜ್ಯದ ಅಧ್ಯಕ್ಷರಾಗಿ ಒಂದು ವರ್ಷ ತುಂಬುವ ಮೊದಲು ಸರ್ಕಾರದ ಅನುಮತಿಯಿಲ್ಲದೇ ದೇಶ ಬಿಟ್ಟು ಹೋಗುವಂತಿಲ್ಲ, ಅಲ್ಲದೆ ತಾವು ಆ ಬಗ್ಗೆ ಅನುಮತಿ ಪಡೆಯುವ ನಾಟಕವನ್ನೂ ಮಾಡಿರಲಿಲ್ಲ. ಹತ್ತಿರವಿದ್ದವರು

ಕೇಳಿಸಿಕೊಳ್ಳಲಿ ಎಂದು ಜೋರಾಗಿ ಗಂಟುಮೂಟೆಗಳನ್ನು ಕಟ್ಟಲು ತಾವು ನೀಡಿದ ಆಜ್ಞೆಯನ್ನು ಜೋಸೆ ಪೆಲಾಸಿಯೋಸ್ ಕೂಡ ನಿರ್ಣಾಯಕವೆಂದು ಭಾವಿಸಿರಲಿಲ್ಲ. ಯಾಕೆಂದರೆ ಈ ಹಿಂದೆಯೂ ತಾವು ಹೋಗುತ್ತಿರುವುದು ಸತ್ಯವೆಂದು ತೋರಿಸಲು ಜಾಣ ರಾಜಕೀಯ ತಂತ್ರವಾಗಿ ಮನೆಯನ್ನು ಖಾಲಿ ಮಾಡಿದುದು ಅನೇಕ ಬಾರಿ ನಡೆದಿತ್ತು. ಭ್ರಮನಿರಸನದ ಕುರುಹುಗಳು ಕಳೆದೊಂದು ವರ್ಷದಲ್ಲಿ ತೀರ ಸ್ಪಷ್ಟಗೊಂಡಿರುವುದನ್ನು ಅವರ ಆಪ್ತ ಸೈನಿಕ ಸಹಾಯಕರು ಗಮನಿಸಿದ್ದರು. ಹಿಂದೆಯೂ ಹೀಗೇ ಆದ ಸಂದರ್ಭಗಳಿದ್ದವು, ತಮ್ಮ ನಿರೀಕ್ಷೆಗೆ ಮೀರಿದಂತೆ ಅವರಲ್ಲಿ ಹೊಸ ಹುರುಪು ಹುಟ್ಟಿ ಚೇತರಿಸಿಕೊಂಡು ತಮ್ಮ ಬದುಕಿನ ಸೂತ್ರಗಳನ್ನು ಎಂದಿಗಿಂತಲೂ ಹೆಚ್ಚು ಉತ್ಸಾಹದಿಂದ ಕೈಲಿ ಹಿಡಿದಿದ್ದನ್ನೂ ಅವರು ಕಂಡಿದ್ದರು. ಇಂತಹ ಅನಿರೀಕ್ಷಿತ ಬದಲಾವಣೆಗಳನ್ನು ತುಂಬ ಸನಿಹದಿಂದಲೇ ಗಮನಿಸಿದ್ದ ಜೋಸೆ ಪೆಲಾಸಿಯೋಸ್ ತನ್ನದೇ ರೀತಿಯಲ್ಲಿ ಹೀಗೆಂದ: "ಯಜಮಾನರ ಮನಸ್ಸಿನಲ್ಲಿ ಏನಿದೆ ಎಂಬುದು ಅವರಿಗೆ ಮಾತ್ರವೇ ಗೊತ್ತು."

ಅಧಿಕಾರ ತ್ಯಾಗದ ಬಗ್ಗೆ ಜನರಲ್ ್ಜನರಲ್ ಆಡಿದ್ದ ಮಾತುಗಳನ್ನು ಒಂದು ಜನಪ್ರಿಯ ಹಾಡಿನಲ್ಲಿ ಸೇರಿಸಲಾಗಿತ್ತು; ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರದ ದಿನ ಮಾಡಿದ ಭಾಷಣದ "ನನ್ನ ಮನಃಶಾಂತಿಯ ಆರಂಭ ಎಂದರೆ ಅಧಿಕಾರದ ಕೊನೆ" ಎಂಬ ಅಸ್ಪಷ್ಟವಾದ ಮೊದಲ ವಾಕ್ಯವೇ ಹಾಡಿನ ಪಲ್ಲವಿ. ಆನಂತರದ ವರ್ಷಗಳಲ್ಲಿ ಅಧಿಕಾರತ್ಯಾಗದ ಮಾತನ್ನು ವಿವಿಧ ಜನರಲ್ ಸನ್ನಿವೇಶಗಳಲ್ಲಿ ಅನೇಕ ಬಾರಿ ಪುನರಾವರ್ತನೆ ಮಾಡಿದ್ದರು, ಆಗೆಲ್ಲ ಯಾವುದನ್ನು ನಂಬಬೇಕು ಎಂಬ ಗೊಂದಲವೇ ಜನರಲ್ಲಿ ಉಂಟಾಗಿದ್ದುದು. ಇಂಥ ಸನ್ನಿವೇಶಗಳಲ್ಲಿ ಅತ್ಯಂತ ರೋಚಕವಾದುದು ಎರಡು ವರ್ಷಗಳ ಹಿಂದೆ ನಡೆದಿತ್ತು: ಸೆಪ್ಟೆಂಬರ್ ೨೫, ಸರ್ಕಾರಿ ಬಂಗಲೆಯ ಮಲಗುವ ಕೋಣೆಯಲ್ಲಿ ತಮ್ಮ ಮೇಲೆ ನಡೆದ ಕೊಲೆಯ ಯತ್ನದಿಂದ ಅಂದು ಅವರು ಪಾರಾಗಿದ್ದರು. ಆರು ಗಂಟೆಗಳ ಕಾಲ ಚಳಿಗಾಳಿಗಳಿಗೆ ಸಿಕ್ಕಿ ಒಂದು ಸೇತುವೆಯ ಕೆಳಗೆ ಅಡಗಿಕೊಂಡಿದ್ದು ಆನಂತರ ವಾಪಸಾಗಿ, ಉಣ್ಣೆಯ ಕಂಬಳಿ ಹೊದ್ದು ತಮ್ಮ ಪಾದಗಳನ್ನು ಬಿಸಿನೀರಿನ ಬೋಗುಣಿಯಲ್ಲಿ ಮುಳುಗಿಸಿಕೊಂಡು, ಭ್ರಮನಿರಸನಕ್ಕಿಂತಲೂ ಹೆಚ್ಚಾಗಿ ಜ್ವರದ ತಾಪದಿಂದ ಕಂಗಾಲಾಗಿ ಕೂತಿದ್ದ ಅವರನ್ನು ಬೆಳಿಗ್ಗೆ ಸಂದರ್ಶಿಸಿದ ಕಾಂಗ್ರೆಸ್ ಸದಸ್ಯರ ನಿಯೋಗ ಕಂಡಿತ್ತು. ಕೊಲೆ ಸಂಚಿನ ಬಗ್ಗೆ ಯಾವುದೇ ತನಿಖೆ ಮಾಡುವುದಿಲ್ಲವೆಂದೂ, ಯಾರನ್ನೂ ಶಿಕ್ಷಿಸುವುದಿಲ್ಲವೆಂದೂ ಹೇಳಿ, ಗಣರಾಜ್ಯದ ಮುಂದಿನ ಅಧ್ಯಕ್ಷರನ್ನು ಚುನಾಯಿಸಲು ಕಾಂಗ್ರೆಸ್ ಅಧಿವೇಶನವು ತಕ್ಷಣವೇ ಸೇರಬೇಕೆಂದೂ

ಘೋಷಿಸಿದ್ದರು. "ಇದಾದ ಮೇಲೆ ನಾನು ಕೊಲಂಬಿಯವನ್ನು ಎಂದೆಂದಿಗೂ ಬಿಟ್ಟು ಹೋಗುತ್ತೇನೆ" ಎಂದು ತಮ್ಮ ಮಾತನ್ನು ಮುಗಿಸಿದ್ದರು.

ಆದರೆ ತನಿಖೆ ನಡೆದೇ ನಡೆಯಿತು, ಅಪರಾಧಿಗಳನ್ನು ಪತ್ತೆ ಹಚ್ಚಿ ಬಿಗಿಮುಷ್ಟಿಯಿಂದ ಅವರ ವಿಚಾರಣೆ ನಡೆಸಿ ಕಠಿಣ ಶಿಕ್ಷೆಯನ್ನೂ ನೀಡಲಾಯಿತು, ಅದರಂತೆ ಹದಿನಾಲ್ಕು ಮಂದಿಯನ್ನು ಮುಖ್ಯ ಚೌಕದಲ್ಲಿ ಗುಂಡಿಟ್ಟು ಕೊಲ್ಲಲಾಯಿತು. ಜನವರಿ ೨ ರಂದು ಸೇರಬೇಕಾಗಿದ್ದ ಕಾಂಗ್ರೆಸ್ ಅಧಿವೇಶನವು ಮುಂದೆ ಹದಿನಾರು ತಿಂಗಳ ಕಾಲ ಸೇರಲೇ ಇಲ್ಲ, ಆ ಮುಂದೆ ಯಾರೂ ಅವರ ರಾಜೀನಾಮೆಯ ಬಗ್ಗೆ ಚಕಾರವೆತ್ತಲಿಲ್ಲ. ಆದರೆ ಆ ಅವಧಿಯಲ್ಲಿ ವಿದೇಶಿ ಗಣ್ಯರಾಗಲೀ ಗೆಳೆಯರಾಗಲೀ ದೂರದ ಪರಿಚಿತರಾಗಲೀ ದೇಶಕ್ಕೆ ಭೇಟಿ ನೀಡಲಿಲ್ಲ; ಹೀಗಾಗಿ ಅವರಾರಿಗೂ "ನಾನು ಬೇಕಾಗಿರುವ ಕಡೆ ಹೋಗುತ್ತೇನೆ" ಎಂದು ಹೇಳುವ ಅವಕಾಶ ಒದಗಲಿಲ್ಲ.

ಅವರಿಗೆ ಮಾರಣಾಂತಿಕ ರೋಗವಿದೆ ಎಂಬ ಸಾರ್ವಜನಿಕ ಹೇಳಿಕೆಗಳೂ ಅವರು ಹೋಗಲು ಸಮಂಜಸ ಕಾರಣ ಎಂದು ಪರಿಗಣಿತವಾಗಲಿಲ್ಲ. ಅವರು ಕಾಯಿಲೆ ಬಿದ್ದಿರುವುದನ್ನು ಯಾರೂ ಶಂಕಿಸಲಿಲ್ಲ; ಬದಲಾಗಿ, ದಕ್ಷಿಣದ ಯುದ್ಧಗಳಿಂದ ಕಳೆದ ಬಾರಿ ಹಿಂದಿರುಗಿದಂದಿನಿಂದ ಹೂಗಳ ಕಮಾನುಗಳಡಿ ಅವರು ಹಾದು ಹೋಗುವುದನ್ನು ಕಂಡ ಎಲ್ಲರೂ ಈ ಬಾರಿ ವಾಪಸಾಗಿರುವುದು ಸಾಯುವುದಕ್ಕೇ ಎಂಬ ಅದ್ಭುತ ಭಾವನೆಗೊಳಗಾಗಿದ್ದರು. ತಮ್ಮ ಐತಿಹಾಸಿಕ ಕುದುರೆ ಪಲಾಮೋಬ್ಲಾಂಕೋ ಬದಲು ಅವನು ಹುಲ್ಲಿನಿಂದ ಸಜ್ಜುಗೊಂಡ ಒಂದು ಬಡಪಾಯಿ ಬೋಳು ಹೇಸರಗತ್ತೆಯೇರಿ ವಾಪಸು ಬಂದಿದ್ದರು. ಅವರ ಕೂದಲು ನರೆತಿತ್ತು, ಹಣೆಯ ಮೇಲೆ ಬಿರುಮಳೆಯ ಮೋಡದಂತಹ ಗೆರೆಗಳು ಮೂಡಿದ್ದವು, ಧರಿಸಿದ್ದುದು ಕೊಳಕಾದ ತೋಳು ಹರಿದ ಒಂದು ನಿಲುವಂಗಿ. ಅವರ ದೇಹಕಾಂತಿ ಕಣ್ಮರೆಯಾಗಿತ್ತು. ಆ ರಾತ್ರಿ ಅವರನ್ನು ಸ್ವಾಗತಿಸಲು ಸರ್ಕಾರಿ ಭವನದಲ್ಲಿ ಏರ್ಪಡಿಸಿದ್ದ ಮಂಕು ಸಮಾರಂಭದಲ್ಲಿಯೂ ಅವರ ಮುಖದಲ್ಲಿ ಕಳೆಯಿರಲಿಲ್ಲ, ಬದಲು ಖಿನ್ನತೆ ಆವರಿಸಿತ್ತು, ಮಾತು ಕಡಿಮೆಯಾಗಿತ್ತು; ಮಂತ್ರಿಗಳ ಹೆಸರುಗಳನ್ನು ಅದಲುಬದಲು ಮಾಡಿ ಕರೆಯುತ್ತಿದ್ದರು. ಇದಕ್ಕೆಲ್ಲ ಕಾರಣ ಅವರ ರಾಜಕೀಯ ವಿಕೃತಿಯೋ ಅಥವಾ ಸರಳವಾದ ಅನ್ಯಗಮನವೋ ಎಂಬುದು ನೋಡಿದವರಿಗೆ ತಿಳಿಯಲಿಲ್ಲ.

ಜೀವಕಳೆಯಿಲ್ಲದ ಆಕೃತಿಯನ್ನು ನೋಡಿದವರಿಗೆ ಅವರು ಹೊರಟು ಹೋಗುವರೆಂದು ನಂಬಲು ಆಗುತ್ತಿರಲಿಲ್ಲ, ಏಕೆಂದರೆ ಕಳೆದ ಆರು ವರ್ಷಗಳಿಂದಲೂ ಅವರು ಸಾವಿನ ದವಡೆಯಲ್ಲಿರುವರೆಂದೇ ಹೇಳಲಾಗುತ್ತಿತ್ತು, ಅಲ್ಲದೆ ಅವರ ಆಳುವ ಆಸೆಯು ಮಾತ್ರ ಮುಕ್ಕಾಗಿರಲಿಲ್ಲ.

ದಕ್ಷಿಣದ ಬಿಡುಗಡೆಗಾಗಿ ಲಿಮದ ಉತ್ತರಕ್ಕಿದ್ದ ಪ್ಯಾಟಿವಿಲ್ಕ ಮರುಭೂಮಿಯಲ್ಲಿ ನಡೆಯುತ್ತಿದ್ದ ತೀವ್ರ ಯುದ್ಧದಲ್ಲಿ ಜನರಲ್ ಪಾಲ್ಗೊಂಡಿದ್ದುದನ್ನು ಕಂಡ ಬ್ರಿಟಿಷ್ ನೌಕಾದಳದ ಒಬ್ಬ ಅಧಿಕಾರಿಯಿಂದ ಅಷು' ವಿಷಯ ಮೊದಲ ಬಾರಿಗೆ ತಿಳಿದಿತ್ತು. ಆಗ ಅವರ ವಾಸಕ್ಷೇತ್ರವೆಂದರೆ ಒಂದು ಮುರುಕಲು ಗುಡಿಸಲು, ಅದರಲ್ಲಿ ನೆಲದ ಮೇಲೆ ಅವರು ಮಲಗಿಕೊಂಡಿದ್ದುದನ್ನು ಆ ಅಧಿಕಾರಿ ನೋಡಿದ್ದ; ಅವರ ಮೈಮೇಲಿದ್ದುದು ಬ್ಯಾರಕ್‌ನ ಉಡುಪಂತೆ, ಮಧ್ಯಾಹ್ನದ ಬಿರುಸೆಕೆಯನ್ನು ತಡೆದುಕೊಳ್ಳಲಾರದೆ ತಲೆಗೆ ಒಂದು ಹರುಕು ಬಟ್ಟೆಯನ್ನು ಬಿಗಿದುಕೊಂಡಿದ್ದರ'ಂತೆ, ತಮ್ಮ ಸುತ್ತಲೂ ಕಿಚಗುಡುತ್ತ ಹುಳು ಹಿಡಿಯುತ್ತ ಓಡಾಡುತ್ತಿದ್ದ ಕೋಳಿಗಳನ್ನು ಓಡಿಸಲೂ ಆಗದಂತಹ ನಿಶ್ಶಕ್ತಿ ಅಷು'ನ್ನಾವರಿಸಿತ್ತಂತೆ. ಮಾತನಾಡುವಾಗ ಮಧ್ಯೆ ಮಧ್ಯೆ ಬುದ್ಧಿಗೆ ಮಂಕು ಕವಿಯುತ್ತಿತ್ತಂತೆ; ಸಂದರ್ಶಕನನ್ನು ನಾಟಕೀಯವೆನ್ನಿಸುವ ವಿಷಾದದಿಂದ, "ಮೈಮೇಲೆಲ್ಲ ಕೋಳಿ ಪಿಕ್ಕೆಗಳು ಬಿದ್ದು, ಒರಟು ಮರಳಿನ ಮೇಲೆ ನಾನು ಸಾಯುತ್ತ ಬಿದ್ದುಕೊಂಡಿರುವುದನ್ನು ಹೋಗಿ ಜಗತ್ತಿಗೆ ಹೇಳು" ಎಂದು ಹೇಳಿ ಬೀಳ್ಕೊಟ್ಟರಂತೆ.

ಅವರಿಗೆ ಬಡಿದಿರುವ ಕಾಯಿಲೆಯೆಂದರೆ ಮರುಭೂಮಿಯ ಪಾದರಸದ ಬಿಸಿಲಿನಿಂದಾದ ಒಂದು ಬಗೆಯ ಚಿತ್ತವಿಕಲ್ಪ ಎಂದು ಜನರು ಹೇಳುತ್ತಿದ್ದರು. ಮೊದಲು ಗಯಾಕ್ವಿಲ್‌ನಲ್ಲಿ, ಆಮೇಲೆ ಕ್ವಿಟೊದಲ್ಲಿ ಜನರಲ್ ಗ್ಯಾಸ್ಟ್ರಿಕ್ ಜ್ವರದಿಂದ ಬಳಲಿದರು, ಆ ರೋಗದ ಮುಖ್ಯ ಲಕ್ಷಣವೆಂದರೆ ಪ್ರಾಪಂಚಿಕ ವಿಷಯಗಳಲ್ಲಿ ಅತೀವ ನಿರಾಸಕ್ತಿ ಮತ್ತು ಲವಲವಿಕೆಯಿಲ್ಲದ ಮನಸ್ಸು ಎಂದೂ ಕೆಲವರು ಆ ಕಾಯಿಲೆಯನ್ನು ಬಣ್ಣಿಸುತ್ತಿದ್ದರು. ಆದರೆ ಜನರಾರೂ ತಾವು ಕೇಳಿದುದಕ್ಕೆ ವೈಜ್ಞಾನಿಕ ಆಧಾರವಿತ್ತೇ ಎಂದು ತಿಳಿಯುವ ಗೋಜಿಗೆ ಹೋಗಲಿಲ್ಲ. ಏಕೆಂದರೆ ಜನರಲ್ ಸ್ವತಃ ವೈದ್ಯ ವಿಜ್ಞಾನದ ವಿರೋಧಿಯಾಗಿದ್ದರು, ಡಾನಿಸ್ಟಿಯರ್‌ನ 'ಮನೆವೈದ್ಯ' ಗ್ರಂಥವನ್ನು ಓದಿ ತಮ್ಮ ರೋಗಗಳಿಗೆ ಕಾರಣ ಹುಡುಕಿ ತಾವೇ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದರು. ಮನೆಯಲ್ಲಿಯೇ ಚಿಕಿತ್ಸೆ ಮಾಡಿಕೊಳ್ಳುವ ಬಗ್ಗೆ ಇದ್ದ ಆ ಫ್ರೆಂಚ್ ಪುಸ್ತಕವನ್ನು ಜೋಸೆ ಪೆಲಾಸಿಯೋಸ್ ಯಜಮಾನರ ಉಪಯೋಗಕ್ಕಾಗಿ ತನ್ನ ಜೊತೆಗೆ ಸದಾ ಒಯ್ಯುತ್ತಿದ್ದ; ರೋಗದ ಕಾರಣ ಮತ್ತು ಚಿಕಿತ್ಸೆಗಳಿಗೆ ಅದು ದೇವವಾಕ್ಕಿನಂತೆ ಎಂದು ಅವನು ಭಾವಿಸಿದ್ದ.

ಏನಾದರಾಗಲೀ, ಅವರದಕ್ಕಿಂತ ಹೆಚ್ಚು ಪ್ರಶಸ್ತವಾದ ಮರಣಶಯ್ಯೆ ಇರಲು ಸಾಧ್ಯವಿಲ್ಲ. ಅವರು ಪ್ಯಾಟಿವಿಲ್ಕದಲ್ಲಿಯೇ ಸಾಯುವರೆಂದು ಜನ ಸ್ವಲ್ಪಕಾಲ ಭಾವಿಸಿದ್ದರು, ಆದರೆ ಜನರಲ್ ಮತ್ತೆ ಆಂಡೀಸ್ ಶಿಖರಗಳನ್ನು ದಾಟಿ ಹೋಗಿದ್ದರು, ಜುನೀನ್ ಅನ್ನು ವಶಪಡಿಸಿಕೊಂಡಿದ್ದರು, ಅಯಾಚುಚೋದಲ್ಲಿ ಕೊನೆಯ ಗೆಲವನ್ನು ಸಾಧಿಸುವುದರ ಮೂಲಕ ಇಡೀ

ಸ್ಪಾನಿಶ್ ಅಮೆರಿಕದ ಬಿಡುಗಡೆಯನ್ನು ಪೂರ್ಣಗೊಳಿಸಿದ್ದರು, ಬೊಲಿವಿಯ ಗಣರಾಜ್ಯವನ್ನು ಸ್ಥಾಪಿಸಿದ್ದರು, ಮತ್ತೆಂದೂ ಇರಲಾರದಷ್ಟು ಸುಖವಾದ ಮತ್ತು ಮತ್ತೇರಿದ ಸ್ಥಿತಿಯಲ್ಲಿ ಲಿಮದಲ್ಲಿದ್ದರು. ಇದರ ಪರಿಣಾಮವಾಗಿ, ಅವರು ಅಧಿಕಾರತ್ಯಾಗ ಮಾಡಿ ಕೊನೆಗೂ ದೇಶವನ್ನು ಬಿಟ್ಟು ಹೋಗುತ್ತಾರೆ ಎಂಬ ಹೇಳಿಕೆಗಳು ಮತ್ತೆ ಮತ್ತೆ ಕೇಳಿಬಂದವು; ಅಧಿಕೃತ ಸಾರ್ವಜನಿಕ ಸಮಾರಂಭಗಳು ಆ ಮಾತನ್ನು ಪುಷ್ಟೀಕರಿಸುವಂತಿದ್ದವು. ಆದರೆ ಇವೆಲ್ಲ ಪುನರಾವರ್ತನೆಗೊಂಡ ನಾಟಕದ ದೃಶ್ಯಗಳೆನಿಸಿ ಜನರು ಅವನ್ನೆಲ್ಲ ನಂಬಲಿಲ್ಲ.

ಅವರು ವಾಪಸಾದ ಕೆಲವು ದಿನಗಳ ಬಳಿಕ, ಬಿರುಸಾಗಿ ಸಾಗಿದ ಮಂತ್ರಿಮಂಡಲದ ಸಭೆಯ ಕೊನೆಯಲ್ಲಿ, ಅವರು ಫೀಲ್ಡ್ ಮಾರ್ಷಲ್ ಆಂಟೋನಿಯೋ ಜೋಸೆ ದ ಸ್ಯೂಕ್ರ್ ಅವರ ತೋಳು ಹಿಡಿದುಕೊಂಡು, "ನನ್ನ ಜೊತೆ ಇರಿ" ಎನ್ನುತ್ತ ತಮ್ಮ ಖಾಸಗಿ ಕಚೇರಿಗೆ ಕರೆದೊಯ್ದರು. ಆಯ್ದು ಕರೆಸಿಕೊಂಡ ಕೆಲವರು ಮಾತ್ರ ಅಲ್ಲಿದ್ದರು. ಅವರೆಲ್ಲರ ಮುಂದೆ ಸ್ಯೂಕ್ರ್ ಅವರನ್ನು ತಮ್ಮ ಸ್ವಂತ ಆರಾಮಕುರ್ಚಿಯಲ್ಲಿ ಬಲವಂತವಾಗಿ ಕೂರಿಸಿ, "ಈ ಕುರ್ಚಿ ಈಗ ನನಗಿಂತ ಹೆಚ್ಚಾಗಿ ನಿಮ್ಮದು" ಎಂದರು.

ಅವರ ಆಪ್ತ ಗೆಳೆಯರಾದ ಅಯಾಚುಚೋದ ಫೀಲ್ಡ್ ಮಾರ್ಷಲ್ ಅವರಿಗೆ ದೇಶದ ಪರಿಸ್ಥಿತಿಯ ಬಗ್ಗೆ ಸೂಕ್ಷ್ಮವಾದ ಅರಿವಿತ್ತು. ಆದರೂ ತಮ್ಮ ಮನಸ್ಸಿಲ್ಲಿದ್ದುದನ್ನು ಹೇಳುವ ಮೊದಲು ವಿಶದವಾಗಿ ಎಲ್ಲವನ್ನೂ ವಿವರಿಸಿದರು. ತಡವಾಗಿಯಾದರೂ ಖಂಡಾಂತರ ಐಕ್ಯವನ್ನು ಸಾಧಿಸುವ ಸಲುವಾಗಿ, ಗಣರಾಜ್ಯದ ಅಧ್ಯಕ್ಷರನ್ನು ಚುನಾಯಿಸಲು ಮತ್ತು ಹೊಸ ಸಂವಿಧಾನವನ್ನು ಅಂಗೀಕರಿಸಲು ಇನ್ನು ಕೆಲವೇ ದಿನಗಳಲ್ಲಿ ಕಾಂಗ್ರೆಸ್‌ನ ಅಧಿವೇಶನ ಸೇರುತ್ತದೆ; ಪ್ರತಿಗಾಮಿ ಶ್ರೀಮಂತಪ್ರಭುತ್ವದ ಅಡಿಯಲ್ಲಿದ್ದ ಪೆರುವನ್ನು ಉದ್ಧರಿಸಲು ಸಾಧ್ಯವಿಲ್ಲ; ಜನರಲ್ ಆಂಡ್ರೇ ದ ಸಂಟಾ ಕ್ರುಜ಼್ ಬೊಲಿವಿಯವನ್ನು ತನ್ನದೇ ಮೂಗಿನ ನೇರಕ್ಕೆ ಒಯ್ಯುತ್ತಿದ್ದಾನೆ; ಜನರಲ್ ಜೋಸೆ ಆಂಟೋನಿಯೋ ಪೇಜ಼್‌ನ ಚಕ್ರವರ್ತಿಯ ಆಡಳಿತದಲ್ಲಿ ವೆನಿಝೂಲ ಈಗ ತಾನೇ ಸ್ವಾಯತ್ತೆಯನ್ನು ಘೋಷಿಸಿಕೊಂಡಿದೆ; ದಕ್ಷಿಣದ ಪರಿಪೂರ್ಣ ಜನರಲ್ ಜುವಾನ್ ಜೋಸೆ ಸ್ವತಂತ್ರ ಈಕ್ವೆಡಾರ್ ಗಣರಾಜ್ಯ ಸ್ಥಾಪನೆಗಾಗಿ ಗಯಾಕ್ವಿಲ್ ಮತ್ತು ಕ್ವಿಟೋಗಳನ್ನು ಒಗ್ಗೂಡಿಸಿದ್ದಾರೆ; ಒಕ್ಕೂಟದ ಕೇಂದ್ರವಾದ ಕೊಲಂಬಿಯ ಗಣರಾಜ್ಯವು ಈಗ ಹಿಂದಿನ ನ್ಯೂ ಗ್ರೆನೆಡ ಸಾಮಂತಪ್ರಭುತ್ವದಷ್ಟು ಗಾತ್ರಕ್ಕೆ ಇಳಿದುಹೋಗಿದೆ; ಈಗ ತಾನೇ ತಮ್ಮ ಸ್ವತಂತ್ರ ಬದುಕನ್ನು ಆರಂಭಿಸಿರುವ ಒಂದು ಕೋಟಿ ಅರವತ್ತು ಲಕ್ಷ ಮಂದಿ ಅಮೆರಿಕನ್ನರು ಸ್ಥಳೀಯ ಪೀಡಕರ ಕೈಲಿ ಸಿಕ್ಕಿ ನರಳುವಂತಾಗಿದೆ. "ಒಂದೇ

ಮಾತಲ್ಲಿ ಹೇಳಬೇಕೆಂದರೆ, ನಮ್ಮ ಕೈಯಾರೆ ಸೃಷ್ಟಿ ಮಾಡಿದ್ದನ್ನು ಇತರರು ತುಳಿದುಹಾಕುತ್ತಿದ್ದಾರೆ."

"ಇದೇ ವಿಧಿಯ ವ್ಯಂಗ್ಯ. ನಾವು ಸ್ವಾತಂತ್ರ್ಯದ ಆದರ್ಶ ಬೀಜವನ್ನು ಎಷ್ಟು ಆಳಕ್ಕೆ ಬಿತ್ತಿದೆವೆಂದರೆ, ಈಗ ಈ ದೇಶಗಳು ಪರಸ್ಪರರಿಂದ ತಮ್ಮ ಸ್ವಾತಂತ್ರ್ಯವನ್ನು ಪಡೆಯಲು ಹವಣಿಸುತ್ತಿವೆ" ಎಂದು ಉದ್ಗರಿಸಿದ್ದರು ಫೀಲ್ಡ್ ಮಾರ್ಷಲ್ ಸ್ಯೂಕ್ರ್.

ಜನರಲ್ ೕನರಲ್ ಈಗ ಉದ್ವೇಗದಿಂದ ಮಾತನಾಡಿದರು: "ಶತ್ರುಗಳು ಮಾಡಿದ ಕ್ಷುದ್ರ ಕಾರ್ಯದ ಬಗ್ಗೆ ಮತ್ತೆ ಹೇಳಬೇಡಿ, ಅದು ಸಮಂಜಸವಾಗಿರಬಹುದಾದರೂ."

ಫೀಲ್ಡ್ ಮಾರ್ಷಲ್ ಸ್ಯೂಕ್ರ್ ಕ್ಷಮಾಪಣೆ ಕೇಳಿದರು. ಅವರು ಬುದ್ಧಿವಂತರು, ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವವರು, ಸಂಕೋಚ ಸ್ವಭಾವದವರು, ಅಲ್ಲದೆ ಸ್ವಲ್ಪ ಕಂದಾಚಾರ ಪ್ರವೃತ್ತಿಯವರು. ಅವರ ಮುಖದಲ್ಲಿನ ಪ್ರಸನ್ನತೆಯನ್ನು ಹಳೆಯ ಸಿಡುಬಿನ ಕಲೆಗಳು ಕೂಡ ಮಸುಕುಗೊಳಿಸಿರಲಿಲ್ಲ. ಅವರ ಬಗ್ಗೆ ಅಭಿಮಾನವಿರಿಸಿಕೊಂಡಿದ್ದ ಜನರಲ್ ೕನರಲ್ ಅವರಲ್ಲಿಲ್ಲದಿದ್ದ ಸೌಜನ್ಯವನ್ನು ಇದೆ ಎಂದು ಕಲ್ಪಿಸಿಕೊಂಡಿದ್ದರು. ಪಿಛಿಂಛ, ಟ್ಯುಮುಲ್ಸ ಮತ್ತು ಟಾರ್ಕಿಗಳಲ್ಲಿ ಜನರಲ್ ಸ್ಯೂಕ್ರ್ ಜನರ ಕಣ್ಮಣಿಯಾಗಿದ್ದರು; ತಮ್ಮ ಇಪ್ಪತ್ತೊಂಬತ್ತನೆಯ ಹುಟ್ಟು ಹಬ್ಬವಾದ ಅನತಿ ಕಾಲದಲ್ಲಿಯೇ ಅವರು ಅಯಾಚುಚೋನ ಮಹಾಯುದ್ಧದ ಸಾರಥ್ಯ ವಹಿಸಿದ್ದರು, ಅದರಲ್ಲಿ ದಕ್ಷಿಣ ಅಮೆರಿಕದಲ್ಲಿನ ಕೊಟ್ಟ ಕೊನೆಯ ಸ್ಪಾನಿಶ್ ಹಿಡಿತ ನಾಶವಾಗಿತ್ತು. ಆದರೆ ಈ ಸಾಧನೆಗಳಿಗಿಂತಲೂ ಹೆಚ್ಚಿನ ಮಹತ್ವವಿದ್ದುದು ಗೆಲುವಿನ ಸಂದರ್ಭಗಳಲ್ಲಿ ಅವರು ತೋರಿದ ಉದಾತ್ತತೆ ಮತ್ತು ಕೌಶಲಪೂರ್ಣ ಮತ್ಸದ್ದಿತನಗಳಲ್ಲಿ. ಆ ಹೊತ್ತಿಗೆ ತನ್ನ ಅಧಿಕಾರವನ್ನವರು ತ್ಯಜಿಸಿದ್ದರು, ಯಾವುದೇ ಬಗೆಯ ಸೈನಿಕ ಕುರುಹುಗಳನ್ನೂ ಉಳಿಸಿಕೊಂಡಿರಲಿಲ್ಲ. ಧರಿಸಿದ್ದುದು ಮೊಣಕಾಲನ್ನು ತಾಕುತ್ತಿದ್ದ ಕಡುಗಪ್ಪು ಬಣ್ಣದ ನೀಳವಾದ ಒಂದು ಕೋಟ್ ಅನ್ನು, ಸನಿಹದ ಗುಡ್ಡಗಳಿಂದ ಬೀಸಿ ಬರುವ ಕೊರೆಯುವ ಚಳಿಗಾಳಿಯಿಂದ ರಕ್ಷಣೆ ಪಡೆಯಲು ಕೋಟ್‌ನ ಕಾಲರ್‌ಗಳನ್ನು ಮೇಲಕ್ಕೆ ಹರಡಿಕೊಂಡಿದ್ದರು. ದೇಶದೊಡನೆ ಅವರಿಗಿದ್ದ ಏಕೈಕ ಸಂಬಂಧವೆಂದರೆ – ಅದು ಅವರ ಕೊನೆಯ ಇಚ್ಛೆ ಕೂಡ ಆಗಿತ್ತು – ಕ್ವಿಟೋದ ಪ್ರತಿನಿಧಿಯಾಗಿ ತಾವು ಕಾನ್ಸ್‌ಟಿಟ್ಯೂಯೆಂಟ್ ಕಾಂಗ್ರೆಸ್‌ನ ಅಧಿವೇಶನದಲ್ಲಿ ಭಾಗಿಯಾಗುವುದು. ಅವರಿಗೀಗ ಮೂವತ್ತೈದು ನಡೆಯುತ್ತಿತ್ತು, ಕಲ್ಲುಬಂಡೆಯ ಹಾಗೆ ಆರೋಗ್ಯಕಾಯರಾಗಿದ್ದರು, ಸೊಲಾಂಡದ ಮಾರ್ಕ್ವಿಸ್ ಆಗಿದ್ದ ಡೋನ ಮರಿಯಾನ ಕಾರ್ಸಿಲೆನ್ ಬಗ್ಗೆ ಹುಚ್ಚು ಎಂಬಷ್ಟು ಪ್ರೇಮವನ್ನು

ಹೊಂದಿದ್ದರು. ಅವಳಾದರೋ ಬಳುಕುವ ಬಳ್ಳಿಯಂತಹ ದೇಹದ ಚೆಲುವೆ, ಕ್ಷಿಟೆನದವಳು, ಈಗ ತಾನೇ ಕೌಮಾರ್ಯವನ್ನು ದಾಟಿದ್ದವಳು. ಎರಡು ವರ್ಷಗಳ ಹಿಂದೆಯಷ್ಟೇ ಅವಳನ್ನವರು ಗೈರುಹಾಜರಿಯಲ್ಲೇ ಮದುವೆಯಾಗಿದ್ದರು, ಅವರಿಗೆ ಈಗ ಆರು ವರ್ಷದ ಹೆಣ್ಣುಮಗುವೊಂದಿತ್ತು.

ತಮ್ಮ ಸ್ಥಾನದಲ್ಲಿ ಗಣರಾಜ್ಯದ ಅಧ್ಯಕ್ಷ ಪದವಿಯನ್ನು ಅಲಂಕರಿಸಲು ಅವರಿಗಿಂತ ಉತ್ತಮರಾದವನನ್ನು ಜನರಲ್ ೨ನರಲ್ ಕಲ್ಪಿಸಿಕೊಳ್ಳಲಾಗಿರಲಿಲ್ಲ. ಈ ಹುದ್ದೆಯಿಂದ ಸ್ಕ್ಯೂಕ್ರ್ ಅನ್ನು ದೂರವಿರಿಸಲೆಂದೇ ಜನರಲ್ ರಫೇಲ್ ಊರ್ಡಾನೆಟ ನಿಗದಿಪಡಿಸಿದ ಸಂವಿಧಾನಾತ್ಮಕ ವಯೋಮಿತಿಗಿಂತ ಐದು ವರ್ಷಗಳಷ್ಟು ಅವರು ಚಿಕ್ಕವರು ಎಂಬುದು ಜನರಲ್ ೨ನರಲ್ ಅವರಿಗೆ ತಿಳಿದಿತ್ತು. ಇದನ್ನು ತಿದ್ದುಪಡಿಮಾಡಲು ಜನರಲ್ ಅವರು ಒಳಗೊಳಗೇ ಕ್ರಮಗಳನ್ನು ಕೈಗೊಳ್ಳುತ್ತಿದ್ದರು.

"ಒಪ್ಪಿಕೊಳ್ಳಿ, ದನದ ಮಂದೆಯ ರಕ್ಷಣೆಗಿರುವ ಗೂಳಿಯಂತೆ ನಾನು ಸರ್ಕಾರವನ್ನು ಕಾಪಾಡಲು ಸರ್ವಸೇನಾನಿಯಾಗಿರುತ್ತೇನೆ" ಎಂದು ಸಲಹೆ ಮಾಡಿದರು.

ನೋಡಲು ನಿಶ್ಶಕ್ತರಂತೆ ಕಂಡರೂ ಅವರ ಇಚ್ಛಾಶಕ್ತಿ ಅದ್ಭುತವಾಗಿತ್ತು. ಆದರೆ ೨ನರಲ್ ಅವರ ಸ್ಥಾನ ತಮಗೆ ಎಂದೆಂದೂ ಲಭಿಸಲು ಸಾಧ್ಯವಿಲ್ಲ ಎಂಬುದು ಫೀಲ್ಡ್ ಮಾರ್ಷಲ್‌ಗೆ ಕೆಲವು ದಿನಗಳಿಂದ ತಿಳಿದಿತ್ತು. ಸ್ವಲ್ಪವೇ ಹೊತ್ತಿನ ಹಿಂದೆ, ತಾವು ಅಧ್ಯಕ್ಷರಾಗುವ ಸಾಧ್ಯತೆಯ ಬಗ್ಗೆ ಮೊದಲ ಬಾರಿಗೆ ಪ್ರಸ್ತಾಪಿತವಾದಾಗ, ದಿನೇ ದಿನೇ ಯಾವುದರ ಭವಿಷ್ಯ ಮತ್ತು ದಿಕ್ಕುಗಳು ಹೆಚ್ಚು ಅಪಾಯಕಾರಿಯಾಗುತ್ತಿವೆಯೋ ಅಂತಹ ದೇಶವೊಂದರ ಆಡಳಿತ ಚುಕ್ಕಾಣಿಯನ್ನು ಹಿಡಿಯಲು ತಾವು ಎಂದಿಗೂ ತಯಾರಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದರು. ಅವರ ಪ್ರಕಾರ, ಇದನ್ನು ಸರಿಪಡಿಸುವ ಮೊದಲ ಹೆಜ್ಜೆಯೆಂದರೆ, ಸೈನ್ಯವನ್ನು ಅಧಿಕಾರದಿಂದ ದೂರವಿರಿಸುವುದು. ಅದಕ್ಕನುಗುಣವಾಗಿ ಮುಂದಿನ ನಾಲ್ಕು ವರ್ಷಗಳ ಕಾಲ ಯಾವುದೇ ಸೇನಾ ಜನರಲ್ ಅಧ್ಯಕ್ಷನಾಗಲು ಅವಕಾಶವಿರಬಾರದೆಂಬ ಸಲಹೆಯನ್ನು ಕಾಂಗ್ರೆಸ್ ಮುಂದೆ ಮಂಡಿಸಲು ಅವರು ಬಯಸಿದ್ದರು; ಪ್ರಾಯಶಃ ಅದರ ಹಿಂದಿದ್ದುದು ಊರ್ಡಾನೆಟನ ದಾರಿಯನ್ನು ಮುಚ್ಚುವ ಉದ್ದೇಶ. ಆದರೆ ಈ ತಿದ್ದುಪಡಿಗೆ ಪ್ರಬಲ ಪ್ರತಿರೋಧ ಒಡ್ಡುವವರು ಅತ್ಯಂತ ಪ್ರಬಲರಾಗಿರುತ್ತಾರೆ, ಅಂದರೆ ಸೇನಾ ಜನರಲ್‌ಗಳೇ.

"ನಾನು ತೀರ ದಣಿದಿದ್ದೇನೆ, ಹೀಗಾಗಿ ಒಂದು ಮಿತಿಯನ್ನು ಮೀರಿ ಕೆಲಸಮಾಡಲಾರೆ. ಅಲ್ಲದೆ, ಇಲ್ಲಿ ಬೇಕಾಗಿರುವುದು ಒಬ್ಬ ಅಧ್ಯಕ್ಷರಲ್ಲ ದಂಗೆಗಳನ್ನು ಅಡಗಿಸಬಲ್ಲ ವ್ಯಕ್ತಿ ಎಂಬುದು ನನ್ನಷ್ಟೇ ಚೆನ್ನಾಗಿ ತಮಗೂ ತಿಳಿದಿದೆ" ಎಂದರು ಸ್ಕ್ಯೂಕ್ರ್.

ಕಾನ್ಸ್‌ಟಿಟ್ಯೂಯೆಂಟ್ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಭಾಗಿಯಾಗಲು ಹಾಗೂ, ಸಲಹೆ ಬಂದರೆ, ಅದರ ಅಧ್ಯಕ್ಷತೆಯನ್ನು ವಹಿಸಲೂ ಅವರು ಸಿದ್ಧನಿದ್ದರು, ಆದರೆ ಅದಕ್ಕಿಂತ ಹೆಚ್ಚಿನದಲ್ಲ. ಹದಿನಾಲ್ಕು ವರ್ಷಗಳ ದೀರ್ಘ ಕದನದಿಂದ ಅವರಿಗೆ ಅರಿವಾಗಿದ್ದುದು ಬದುಕುಳಿಯುವುದಕ್ಕಿಂತ ಹೆಚ್ಚಿನ ಗೆಲವಿಲ್ಲ ಎಂಬ ಸತ್ಯ. ತಾವು ಸಂಸ್ಥಾಪಿಸಿ ವಿವೇಚನೆಯಿಂದ ಆಳ್ವಿಕೆ ನಡೆಸಿದ್ದ ವಿಶಾಲವೂ ಸಂಪದ್ಭರಿತವೂ ಆದ ಬೊಲಿವಿಯದ ಅಧ್ಯಕ್ಷಗಿರಿಯ ಅಧಿಕಾರ ಎಷ್ಟು ಚಂಚಲ ಸ್ವಭಾವದ್ದು ಎಂಬ ತಿಳಿವಳಿಕೆ ಅವರಿಗಿತ್ತು. ಅವರ ಹೃದಯದಲ್ಲಿನ ವಿವೇಕವು ವೈಭವದ ಪೊಳ್ಳುತನವನ್ನು ಎತ್ತಿ ತೋರಿಸಿತ್ತು. "ಹೀಗಾಗಿ, ದಯವಿಟ್ಟು ಕ್ಷಮಿಸಿ ಮಹಾಸ್ವಾಮಿ" ಎಂದು ತನ್ನ ಮಾತನ್ನು ಮುಗಿಸಿದ್ದರು. ಸಂತ ಆಂತೋಣಿಯ ಹಬ್ಬವಾದ ಜೂನ್ ೧೩ ರಂದು ಅವರು ತಮ್ಮ ಹೆಂಡತಿ ಮಗಳ ಜೊತೆ ಕ್ವಿಟೋದಲ್ಲಿರಬೇಕು, ಈ ಸಂತನ ಹಬ್ಬವನ್ನು ಮಾತ್ರವಲ್ಲ, ಮುಂದೆ ತಮ್ಮ ಪಾಲಿಗೆ ಬರುವುದೆಲ್ಲವನ್ನೂ ಆಚರಿಸಲು. ತಮ್ಮ ಮನೆಯವರಿಗಾಗಿ, ಅವರಿಗಾಗಿ ಮಾತ್ರವೇ, ಅವರೊಡನೆ ಪ್ರೀತಿಯನ್ನು ಹಂಚಿಕೊಂಡು ಬದುಕಬೇಕೆಂಬುದನ್ನು ಕಳೆದ ಕ್ರಿಸ್‌ಮಸ್ ದಿನವೇ ಅವರು ನಿಶ್ಚಯಿಸಿದ್ದರು. "ನನ್ನ ಜೀವನಲ್ಲಿ ಬಯಸುವುದು ಇದೊಂದನ್ನೇ."

ಆನರಲ್ ಜನರಲ್ ಅವರಿಗೆ ಕೆಂಡದಂಥ ಕೋಪ ಬಂತು. "ನನಗೆ ಯಾವುದೂ ಅಚ್ಚರಿಯುಂಟುಮಾಡಲು ಸಾಧ್ಯವಿಲ್ಲ ಎಂದುಕೊಂಡಿದ್ದೆ" ಎಂದರು. ಅವರ ಕಣ್ಣುಗಳಲ್ಲೇ ದೃಷ್ಟಿಯನ್ನು ನೆಟ್ಟು, "ಇದೇ ನಿಮ್ಮ ಕೊನೆಯ ಮಾತೇ?" ಎಂದ ಕೇಳಿದರು.

"ಇಲ್ಲ, ಮುಂದಿನದು. ನನ್ನ ಕೊನೆಯ ಮಾತೆಂದರೆ ತಮ್ಮ ವಿಶ್ವಾಸಕ್ಕೆ ನಾನು ಚಿರಋಣಿ ಎಂದು ಹೇಳುವುದು" ಎಂದರು ಸ್ಯೂಕ್ರ್.

ಈ ಮಾತನ್ನು ಕೇಳೀ ಜನರಲ್ ಅವರು ತಮ್ಮ ನನಸಾಗದ ಕನಸಿನಿಂದ ಎಚ್ಚೆತ್ತುಕೊಳ್ಳಲು ಎಂಬಂತೆ ತೊಡೆಯ ಮೇಲೆ ಮೃದುವಾಗಿ ತಟ್ಟಿಕೊಂಡರು. "ಸರಿ, ನನ್ನ ಬದುಕಿನ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ನಿಮ್ಮ ಕೊನೆಯ ತೀರ್ಮಾನವನ್ನು ಹೇಳಿದ್ದೀರಿ" ಎಂದು ಮಾತು ಮುಗಿಸಿದ್ದರು.

ಏರಿದ ಪಿತ್ತವನ್ನು ಉಪಶಮನಗೊಳಿಸಲು ಯಾವನೋ ವೈದ್ಯ ಕೊಟ್ಟ ವಮನಕಾರಕ ಔಷಧವನ್ನು ತೆಗೆದುಕೊಂಡಾಗಿನ ರೀತಿಯಲ್ಲಿ ಆ ರಾತ್ರಿ ತಮ್ಮ ರಾಜೀನಾಮೆಯ ಒಕ್ಕಣೆಯನ್ನವರು ಸಿದ್ಧಪಡಿಸಿದರು. ಜನವರಿ ೨೦ ರಂದು ಕಾನ್‌ಸ್ಟಿಟ್ಯೂಯೆಂಟ್ ಕಾಂಗ್ರೆಸ್‌ನ ಅಧಿವೇಶವನ್ನು ಉದ್ಘಾಟಿಸಿ ಮಾತನಾಡುವಾಗ ವಿದಾಯದ ಮಾತುಗಳನ್ನಾಡುತ್ತ ಫೀಲ್ಡ್ ಮಾರ್ಷಲ್ ಸ್ಯೂಕ್ರ್ ಅನ್ನು ಅತ್ಯಂತ ಅಮೂಲ್ಯ ಸೇನಾಪತಿಯೆಂದು ಹೊಗಳಿದರು.

ಸದಸ್ಯರೆಲ್ಲ ಆ ಹೊಗಳಿಕೆಯ ಮಾತನ್ನು ಹರ್ಷದಿಂದ ಅನುಮೋದಿಸಿದರು; ಆದರೆ ಊರ್ಡಾನೆಟ ಬಳಿ ಕುಳಿತಿದ್ದ ಪ್ರತಿನಿಧಿಯೊಬ್ಬ ಅವನ ಕಿವಿಯಲ್ಲಿ, "ಅಂದರೆ ನಿನಗಿಂತ ಉತ್ತಮ ಜನರಲ್‌ಗಳಿದ್ದಾರೆ ಎಂದಂತಾಯಿತು" ಎಂದು ಪಿಸುಗುಟ್ಟಿದ. ೨ನರಲ್ ಅವರ ಹೊಗಳಿಕೆ ಮತ್ತು ಈ ಪ್ರತಿನಿಧಿಯ ವ್ಯಂಗ್ಯಗಳು ಜನರಲ್ ರಫೇಲ್ ಊರ್ಡಾನೆಟನ ಎದೆಯಲ್ಲಿ ನಾಟಿದ ಎರಡು ಉರಿಯುವ ಮೊಳೆಗಳಂತೆ ನೋಯಿಸಿತು.

ಇದಕ್ಕೆ ಕಾರಣವೂ ಇತ್ತು. ಊರ್ಡಾನೆಟನಿಗೆ ಸ್ಯೂಕ್ರ್ ಸಂಪಾದಿಸಿದ್ದ ಸೈನಿಕ ಸಾಧನೆಗಳಾಗಲೀ ಅವರ ಆಕರ್ಷಣಶಕ್ತಿಯಾಗಲೀ ಬೆನ್ನಿಗಿಲ್ಲದಿದ್ದರೂ, ತಾನು ಯಾವ ರೀತಿಯಲ್ಲಿಯೂ ಕಡಿಮೆ ಎಂದು ಭಾವಿಸಲು ಕಾರಣವಿರಲಿಲ್ಲ. ತನ್ನ ಮಾನಸಿಕ ಎಚ್ಚರ ಮತ್ತು ನಿಶ್ಚಲತೆಗಳನ್ನು ಈ ೨ನರಲ್ ಮೆಚ್ಚಿಕೊಂಡಿದ್ದರು, ಅವರ ಬಗೆಗಿನ ನಿಷ್ಠೆ ಮತ್ತು ಪ್ರೀತಿಗಳನ್ನು ತಾನು ಅನೇಕ ಬಾರಿ ರುಜುವಾತುಪಡಿಸಿದ್ದ, ಅವರು ಕೇಳಲು ಹಿಂದೆಗೆಯುತ್ತಿದ್ದ ಸತ್ಯವನ್ನು ಮುಚ್ಚುಮರೆಯಿಲ್ಲದೆ ಎದುರಿಗೇ ಹೇಳುವ ಎದೆಗಾರಿಕೆಯುಳ್ಳ ಜಗತ್ತಿನ ಕೆಲವೇ ಮಂದಿಯಲ್ಲಿ ತಾನೂ ಒಬ್ಬನಾಗಿದ್ದ. ತನ್ನ ತಪ್ಪಿನ ಅರಿವಾಗಿ ಜನರಲ್ ೨ನರಲ್ ಅದನ್ನು ಹಸಿಯಲ್ಲೇ ಕೈಯಾರೆ ತಿದ್ದಿಕೊಳ್ಳುವ ಪ್ರಯತ್ನದಿಂದ "ಅತ್ಯಂತ ಅಮೂಲ್ಯ ಸೇನಾಪತಿ" ಎಂಬುದನ್ನು "ಅತ್ಯಂತ ಅಮೂಲ್ಯ ಸೇನಾಪತಿಗಳಲ್ಲಿ ಒಬ್ಬರು" ಎಂದು ಪುನರುಚ್ಚರಿಸಿದ. ಆದರೆ ಈ ತಿದ್ದುಪಡಿಯು ಊರ್ಡಾನೆಟನ ಎದೆಯುರಿಯನ್ನು ಕಡಿಮೆ ಮಾಡಲಿಲ್ಲ.

ಕೆಲವು ದಿನಗಳು ಕಳೆದವು. ಅಂದು ನಡೆದ ಜನರಲ್ ೨ನರಲ್ ಮತ್ತವರ ಆಪ್ತ ಅಧಿಕಾರಿಗಳ ಒಂದು ಸಭೆಯಲ್ಲಿ, ದೇಶವನ್ನು ತೊರೆಯುವ ನೆವದಲ್ಲಿ ಅವರು ಪುನರಾಯ್ಕೆಗೊಳ್ಳಲು ಒಳಗೊಳಗೇ ಸಂಚುಮಾಡುತ್ತಿರುವರೆಂದು ಜನರಲ್ ೨ನರಲ್ ಮೇಲೆ ಊರ್ಡಾನೆಟ ಆರೋಪ ಮಾಡಿದ. ಮೂರು ವರ್ಷಗಳ ಹಿಂದೆ, ಕೊಲಂಬಿಯದಿಂದ ಬೇರ್ಪಡೆಗೊಳ್ಳುವ ಮೊದಲ ಹಂತವಾಗಿ ವೆನಿಝೂಲ ಪ್ರಾಂತದ ಅಧಿಕಾರವನ್ನು ಜನರಲ್ ಜೋಸೆ ಆಂಟೋನಿಯೊ ಪೇಝ್ ವಶಪಡಿಸಿಕೊಂಡಿದ್ದ. ಜನರಲ್ ೨ನರಲ್ ಕಾರಕಾಸ್‌ಗೆ ಹೋಗಿ ಪೇಝ್ ಅನ್ನು ಸಾರ್ವಜನಿಕರ ಮುಂದೆ ಅಪ್ಪಿಕೊಂಡು ಅವನೊಡನೆ ಸಂಧಾನವ'ನ್ನು ಮಾಡಿಕೊಂಡಿದ್ದರು, ಆಗ ಹರ್ಷೋದ್ಗಾರಗಳಾಗಿದ್ದವು, ಗಂಟೆಗಳು ಮೊಳಗಿದ್ದವು. ಪೇಝ್‌ಗಾಗಿಯೇ ಅಳವಡುವ ಒಂದು ಸರ್ಕಾರವನ್ನು ರಚಿಸಿ ೨ನರಲ್ ತಮಗೆ ಬೇಕಾದಂತೆ ಆಳ್ವಿಕೆಯನ್ನು ಮುಂದುವರೆಸಿದ್ದರು. "ಅನರ್ಥ ಆರಂಭವಾದ್ದೇ ಅಲ್ಲಿಂದ" ಎಂದ ಊರ್ಡಾನೆಟ. ಪೇಝ್‌ಗೆ ಅವಕಾಶವಿತ್ತುದರಿಂದ ನ್ಯೂ ಗ್ರನೆಡದ ಜೊತೆಗಿನ ಸಂಬಂಧಗಳು ಹದಗೆಟ್ಟುವಲ್ಲದೆ, ಅಲ್ಲಿನ ಜನರ ಮನಸ್ಸಿನಲ್ಲಿ ಪ್ರತ್ಯೇಕತೆಯ ರೋಗಾಣುಗಳನ್ನು

ಬಿತ್ತಿತು. ಈಗಲಾದರೋ, ಜನರಲ್ ಜ್ಹನರಲ್ ದೇಶಕ್ಕೆ ಸಲ್ಲಿಸಬಹುದಾದ ಅತ್ಯಂತ ದೊಡ್ಡ ಉಪಕಾರವೆಂದರೆ ಆಳುವ ಚಪಲವನ್ನು ಬದಿಗಿಟ್ಟು ತಕ್ಷಣವೇ ದೇಶ ಬಿಟ್ಟು ಹೋಗುವುದು ಮಾತ್ರ ಎಂದು ಊರ್ಡಾನೆಟ ತನ್ನ ಮಾತನ್ನು ಮುಗಿಸಿದ. ಜನರಲ್ ಜ್ಹನರಲ್ ಅಷ್ಟೇ ಉದ್ವೇಗದಿಂದ ಅದಕ್ಕೆ ಉತ್ತರವಿತ್ತರು. ಊರ್ಡಾನೆಟ ಒಬ್ಬ ಸಾದಾಸೀದಾ ಮನುಷ್ಯ, ಕೌಶಲ ಮತ್ತು ತೀವ್ರತೆಗಳಿಂದ ಮಾತಾಡಬಲ್ಲವನು; ಹೀಗಾಗಿ ಅವನ ಮಾತುಗಳಿಂದಾಗಿ ತಮ್ಮಿಬ್ಬರ ನಡುವಣ ಆಳವೂ ದೀರ್ಘಕಾಲಿಕವೂ ಆದ ಸ್ನೇಹ ಇಂದು ಮುರಿದು ಬಿತ್ತು ಎಂಬ ಭಾವನೆಯನ್ನು ಕೇಳಿದವರ ಮನಸ್ಸಿನಲ್ಲಿ ಬೇರೂರಿಸಿದ್ದವು.

ಜನರಲ್ ಜ್ಹನರಲ್ ತಮ್ಮ ರಾಜೀನಾಮೆಯ ಬಗ್ಗೆ ಪುನರುಚ್ಚರಿಸಿ, ಕಾಂಗ್ರೆಸ್ ಒಬ್ಬ ಶಾಶ್ವತ ನಾಯಕನನ್ನು ಚುನಾಯಿಸುವವರೆಗೂ ಡಾನ್ ಡೊಮೊಂಗೋ ಕೇಸೆಡೋ ಅನ್ನು ತಾತ್ಕಾಲಿಕ ಆಧ್ಯಕ್ಷನೆಂದು ಘೋಷಿಸಿದರು. ಮಾರ್ಚ್ ಒಂದನೇ ತಾರೀಕಿನಂದು ತಮ್ಮ ಉತ್ತರಾಧಿಕಾರಿಯನ್ನು ಅಭಿನಂದಿಸಲು ಬಂದು ಶಾಂಪೇನ್ ಹೀರುತ್ತಿದ್ದ ಸಂದರ್ಶಕರಿಂದ ತಪ್ಪಿಸಿಕೊಳ್ಳಲು, ಹಿಂಬಾಗಿಲಿನಿಂದ ಸರ್ಕಾರಿ ಭವನವನ್ನು ಬಿಟ್ಟು, ಪ್ರಾಂತೀಯ ಅಧ್ಯಕ್ಷನು ತನಗೆ ನೀಡಿದ್ದ ಊರ ಹೊರವಲಯದ ಪ್ರಶಾಂತ ತಾಣದಲ್ಲಿದ್ದ ಮನೆ 'ಫ್ಲ್ಯುಕ ಮೇನರ್'ಗೆ ಖಾಸಗೀ ಗಾಡಿಯೊಂದರಲ್ಲಿ ಬಂದು ಸೇರಿಕೊಂಡರು. ತಾವೀಗ ಸಾಧಾರಣ ನಾಗರಿಕನಿಗಿಂತ ಮಿಗಿಲಲ್ಲವೆಂಬ ಸರಳ ಸತ್ಯವು ವಮನಕಾರಕ ಔಷಧ ಅವರ ಮೇಲೆ ಮಾಡಿದ್ದ ವಿನಾಶಕಾರಕ ಪರಿಣಾಮವನ್ನು ತೀವ್ರಗೊಳಿಸಿತು. ತಮ್ಮ ನೆನಪುಗಳನ್ನು ಬರೆದಿಡಲು ಬೇಕಾದ ಸಾಮಗ್ರಿಗಳನ್ನು ಸಿದ್ಧಗೊಳಿಸುವಂತೆ ಜೋಸೆ ಪೆಲಾಸಿಯೋಸ್‌ಗೆ ಅರೆ ಎಚ್ಚರದ ಸ್ಥಿತಿಯಲ್ಲಿ ಸೂಚಿಸಿದರು. ನಲವತ್ತು ವರ್ಷಗಳ ನೆನಪು ಬರೆಯಲು ಬೇಕಾದ ಕಾಗದ ಮತ್ತು ಮಸಿಗಳನ್ನು ಅವರ ಬಳಿ ಜೋಸೆ ಪೆಲಾಸಿಯೋಸ್ ತಂದಿಟ್ಟ. ಮಾರನೆಯ ಸೋಮವಾರ, ರೊಚ್ಚು ಇನ್ನೂ ಹಸಿಯಾಗಿಯೂ ಕಟುವಾಗಿಯೂ ಇದ್ದು ಜನರಲ್‌ರ ಆಲೋಚನೆಗಳು ಹದಗೊಳ್ಳುವ ಕಾಲವಾದ ಬೆಳಗಿನ ಜಾವ ನಾಲ್ಕು ಗಂಟೆಗೇ ನೆರವು ನೀಡಲು ಬರುವಂತೆ ಅವರ ಸೋದರಳಿಯ ಹಾಗೂ ಕಾರ್ಯದರ್ಶಿಯಾದ ಫರ್ನಾಂಡೋಗೆ ತಿಳಿಸಿದ. ಆಗಾಗ ತಮ್ಮ ಸೋದರಳಿಯನಿಗೆ ಹೇಳಿದ್ದಂತೆ, ತಮ್ಮ ಬರವಣಿಗೆಯನ್ನು ಅತ್ಯಂತ ಹಳೆಯ ನೆನಪಿನಿಂದ ಆರಂಭಿಸಬೇಕೆಂಬುದು ಜನರಲ್ ಅವರ ಇಚ್ಛೆಯಾಗಿತ್ತು. ಆ ನೆನಪೆಂದರೆ, ವೆನಿಝೂಲದ ಹ್ಯಾಸಿಯೆಂಡ ಸ್ಯಾನ್ ಮೆಟ್ಯೊದಲ್ಲಿ ತಮ್ಮ ಮೂರನೆಯ ಹುಟ್ಟುಹಬ್ಬದ ದಿನದಂದು ಕಂಡಿದ್ದ ಕನಸಿನದು. ಅವರ ಕನಸಿನಲ್ಲಿ ಹೊಂಬಣ್ಣದ ಹಲ್ಲುಗಳಿದ್ದ ಒಂದು ಕಪ್ಪು ಹೇಸರಗತ್ತೆಯು ಮನೆಯೊಳಗೆ

ಬಂದು ಮುಖ್ಯ ಸ್ವಾಗತ ಮೊಗಸಾಲೆಯ ಮೂಲಕ ಅಡುಗೆ ಶಾಲೆಯ ಕಡೆ ಹೋಗಿತ್ತು; ಹಾಗೆ ಮಾಡುವಾಗ ತನ್ನ ದಾರಿಯಲ್ಲಿ ಸಿಕ್ಕ ಎಲ್ಲವನ್ನೂ ಸಾವಧಾನವಾಗಿ ತಿನ್ನುತ್ತ ಸಾಗಿತ್ತು; ಆಗ ಮನೆಯವರೆಲ್ಲ ವಾಮಕುಕ್ಷಿಗಳಾಗಿದ್ದರು. ಕೊನೆಗೆ ಪರದೆಗಳು, ಕಂಬಳಿಗಳು, ದೀಪಗಳು, ಹೂದಾನಿಗಳು, ಮೇಜಿನ ಮೇಲಿದ್ದ ಸಾಮಗ್ರಿಗಳು ಹಾಗೂ ಊಟದ ಮನೆಯಲ್ಲಿದ್ದ ಬಟ್ಟೆಗಳು, ಬಲಿಗಂಬಗಳ ಮೇಲಿನ ಸಂತರು, ಕಪಾಟುಗಳಲ್ಲಿದ್ದ ಉಡುಪುಗಳು, ಸಂದೂಕಗಳಲ್ಲಿದ್ದ ವಸ್ತುಗಳು, ಅಡುಗೆ ಮನೆಯಲ್ಲಿದ್ದ ಪಾತ್ರೆಗಳು, ಚಿಲಕ–ತಿರುಗಣೆಗಳ ಸಮೇತವಾಗಿ ಬಾಗಿಲು–ಕಿಟಕಿಗಳು, ಪಡಸಾಲೆಯಿಂದ ಮಲಗುವ ಮನೆಯವರೆಗೆ ಇದ್ದ ಎಲ್ಲ ಪೀಠೋಪಕರಣಗಳು ಎಲ್ಲವನ್ನೂ ಅದು ತಿಂದು ಹಾಕಿತ್ತು; ಅದು ತಿನ್ನದೆ ಉಳಿಸಿದ್ದುದು ತಮ್ಮ ತಾಯಿಯ ಅಲಂಕರಣ ಮೇಜಿನ ಗುಂಡಗಿನ ಕನ್ನಡಿಯನ್ನು ಮಾತ್ರ, ಅದು ತನ್ನ ಜಾಗದಲ್ಲಿಯೇ ತೇಲಾಡುತ್ತಿತ್ತು.

ಘ್ಯುಕದಲ್ಲಿ ತೇಲುವ ಮೋಡಗಳ ಅಡಿಯಲ್ಲಿ ಗಾಳಿ ನವಿರಾಗಿ ಬೀಸುತ್ತಿದ್ದು ಎಂಥ ತೃಪ್ತಿಯುಂಟಾಯಿತೆಂದರೆ, ಅವರು ಮತ್ತೊಮ್ಮೆ ನೆನಪುಗಳ ವಿಷಯ ಪ್ರಸ್ತಾಪಿಸಲೇ ಇಲ್ಲ, ಅದರ ಬದಲು ಬೆಳಗಿನ ಜಾವಗಳನ್ನು ಸುಗಂಧಭರಿತ ಸವನ್ನ ಹುಲ್ಲುಹಾಸಿನ ಮೇಲೆ ನಡೆಯುವುದಕ್ಕೆ ಮೀಸಲಿಟ್ಟರು. ಆ ಮುಂದಿನ ದಿನಗಳಲ್ಲಿ ಹಗಲಿನ ಹೊತ್ತು ಅವರನ್ನು ಕಾಣಲು ಬಂದ ಸಂದರ್ಶಕರಿಗೆ ಜನರಲ್ ಸಾಕಷ್ಟು ಚೇತರಿಸಿಕೊಂಡಿದ್ದಾರೆಂಬ ಭಾವನೆಯುಂಟಾಯಿತು; ಮೇಲಾಗಿ, ಅವರ ನಿಷ್ಠಾವಂತ ಗೆಳೆಯರಾಗಿದ್ದ ಅಧಿಕಾರಿಗಳು, ಸೈನಿಕ ದಂಗೆಯ ಮೂಲಕವಾದರೂ ಸರಿಯೇ, ಅಧ್ಯಕ್ಷ ಹುದ್ದೆಯಲ್ಲಿ ಮುಂದುವರಿಯುವಂತೆ ಅವರಿಗೆ ಸಲಹೆಯಿತ್ತರು. ಬಲವಂತವಾಗಿ ಅಧಿಕಾರಕ್ಕೆ ಬರುವುದು ತಮ್ಮ ಹಿರಿಮೆಗೆ ಕುಂದು ಎಂದು ವಾದಿಸಿ ಅವರನ್ನು ಸುಮ್ಮನಾಗಿಸಿದರು, ಆದರೆ ಮತ್ತೆ ಮುಂದುವರಿಯಲು ಕಾಂಗ್ರೆಸ್ ಕಾನೂನುಬದ್ಧವಾದ ತೀರ್ಮಾನವನ್ನು ಕೈಗೊಳ್ಳುವುದೆಂಬ ತಮ್ಮ ನಿರೀಕ್ಷೆಯನ್ನು ಮಾತ್ರ ಸಂಪೂರ್ಣವಾಗಿ ಬಿಟ್ಟುಕೊಡುವಂತೆ ಕಾಣಲಿಲ್ಲ. ಜೋಸೆ ಪೆಲಾಸಿಯೋಸ್, “ಯಜಮಾನರ ಮನಸ್ಸಿನಲ್ಲಿ ಏನಿದೆ ಎಂಬುದು ಅವರಿಗೆ ಮಾತ್ರವೇ ಗೊತ್ತು.” ಎಂಬ ಮಾತನ್ನು ಆಗಲೂ ಪುನರುಚ್ಚರಿಸಿದ.

ಅಧ್ಯಕ್ಷರ ನಿವಾಸವಾದ ಸ್ಯಾನ್ ಕಾರ್ಲೋಸ್‌ಗೆ ಕೆಲವೇ ಹೆಜ್ಜೆಗಳಷ್ಟು ಸನಿಹದಲ್ಲಿಯೇ ಮ್ಯಾನ್ಯುಯೆಲ ವಾಸಿಸುತ್ತಿದ್ದಳು; ಬೀದಿಯ ಮಾತುಗಳನ್ನೆಲ್ಲ ಕಿವಿಗೊಟ್ಟು ಕೇಳಿಸಿಕೊಳ್ಳುತ್ತಿದ್ದಳು. ಅವಳು ವಾರದಲ್ಲಿ ಎರಡು ಮೂರು ಬಾರಿ ಘ್ಯುಕಕ್ಕೆ ಬರುತ್ತಿದ್ದಳು, ಏನಾದರೂ ತುರ್ತು ವಿಷಯವಿದ್ದರೆ ಇನ್ನೂ ಬೇಗ. ಬರುವಾಗ ಕಾನ್ವೆಂಟುಗಳಿಂದ ಮಾರ್ಜಿಪಾನ್ ಮತ್ತು ಸಿಹಿತಿಂಡಿಗಳನ್ನೂ,

ತಮ್ಮ ನಾಲ್ಕು ಗಂಟೆಯ ಚಹಾದ ಜೊತೆಗೆಂದು ಏಲಕ್ಕಿ ಬೆರೆತ ಚಾಕೋಲೇಟ್‌ಗಳನ್ನೂ ತರುತ್ತಿದ್ದಳು. ಜನರಲ್ ಕಷಾಯಕೆಗಳ ವಿಷಯದಲ್ಲಿ ಎಷ್ಟು ಸೂಕ್ಷ್ಮವಾಗಿದರೆಂದರೆ, ತೀರ ಸಣ್ಣ ಸಂಗತಿಯೂ ಅವರನ್ನು ಅಸ್ವಸ್ಥಗೊಳಿಸುತ್ತಿತ್ತು. ಮತ್ತೊಂದೆಡೆ, ಅವಳು ದಿವಾನಖಾನೆಗಳಲ್ಲಿ ಕೇಳಿಸಿಕೊಂಡವುಗಳು, ವದಂತಿ ಕಾರ್ಖಾನೆಗಳಲ್ಲಿನ ಪಿಸುಮಾತುಗಳು, ಇವುಗಳ ಮೂಲಕ ತಿಳಿದು ಬಂದ ಒಳಸಂಚುಗಳನ್ನೆಲ್ಲ ತುಂಬ ವಿವರವಾಗಿ ಬಿಡಿಸಿಡುತ್ತಿದ್ದಳು; ಅವುಗಳನ್ನೆಲ್ಲ, ಕಷಾಯಕೆಗಳನ್ನೂ, ಅವನು ಮನಸ್ಸು ಗಟ್ಟಿಮಾಡಿಕೊಂಡು ಕೇಳಿಸಿಕೊಳ್ಳಬೇಕಾಗಿತ್ತು; ಯಾಕೆಂದರೆ ಅವಳೊಬ್ಬಳಿಗೆ ಮಾತ್ರವೇ ಸತ್ಯವನ್ನು ನುಡಿಯುವ ಸ್ವಾತಂತ್ರ್ಯ ಇದ್ದುದು. ಒಬ್ಬರಿಗೊಬ್ಬರು ಹೇಳಿಕೊಳ್ಳುವ ವಿಷಯಗಳು ಹೆಚ್ಚಾಗಿಲ್ಲದಿದ್ದಾಗ ಇಬ್ಬರೂ ಸೇರಿ ಪತ್ರವ್ಯವಹಾರದ ಕಡೆ ಗಮನವೀಯುತ್ತಿದ್ದರು. ಅಥವಾ, ಅವಳು ಏನನ್ನಾದರೂ ಓದುವುದು, ತಾವು ಕೇಳುವುದು ನಡೆಯುತ್ತಿತ್ತು; ಇಲ್ಲವೇ, ಆಪ್ತ ಸಹಾಯಕರ ಜೊತೆಯಲ್ಲಿ ಅವರು ಇಸ್ಪೀಟು ಆಡುತ್ತಿದ್ದರು. ಊಟಮಾಡುತ್ತಿದ್ದುದು ಇಬ್ಬರೂ ಒಂಟೊಂಟಿಯಾಗಿಯೇ.

ಅವರು ಮೊದಲ ಬಾರಿ ಭೇಟಿಯಾಗಿದ್ದುದು ಎಂಟು ವರ್ಷಗಳ ಹಿಂದೆ, ಬಿಡುಗಡೆಯನ್ನು ಆಚರಿಸಲು ಸೇರಿದ್ದ ಒಂದು ಭರ್ಜರಿ ನರ್ತನ ಕೂಟದಲ್ಲಿ: ಆಗ ಅವಳಿನ್ನೂ ವೈಸ್‌ರಾಯ್ ಆಡಳಿತದ ಕೊನೆಕೊನೆಯ ವರ್ಷಗಳಲ್ಲಿ ಅಲ್ಲಿಗೆ ಬಂದು ಲಿಮದ ಶ್ರೀಮಂತರ ಜೊತೆ ನೆಲೆಸಿದ್ದ ಡಾ. ಜೋನ್ಸ್ ಥಾರ್ನ್ ಅವರ ಹೆಂಡತಿಯಾಗಿದ್ದಳು. ಇಪ್ಪತ್ತೇಳು ವರ್ಷಗಳ ಹಿಂದೆ ತಮ್ಮ ಹೆಂಡತಿ ಸತ್ತ ನಂತರ ಜನರಲ್ ಅವರು ದೀರ್ಘಕಾಲದ ಸಂಬಂಧ ಹೊಂದಿದ್ದ ಹೆಂಗಸರಲ್ಲಿ ಅವಳು ಕೊನೆಯವಳು; ಅದರ ಜೊತೆಗೆ, ಅವಳು ಅವನ ಆಪ್ತ ಸಹಚರಳೂ, ಕಾಗದಪತ್ರಗಳ ಉಸ್ತುವಾರಿ ಹೊತ್ತವಳೂ, ತಮಗಾಗಿ ಭಾವಪೂರ್ಣವಾಗಿ ಓದುವವಳೂ, ಕರ್ನಲ್ ಹಂತದಲ್ಲಿದ್ದ ತನ್ನ ಒಬ್ಬ ನೌಕರಳೂ ಆಗಿದ್ದಳು. ಅವಳು ಅವರ ಕಿವಿಯನ್ನು ಕಚ್ಚಿಬಿಡುವ ಹಂತ ತಲುಪಿದ್ದ ಮಾತ್ಸರ್ಯಪೂರ್ಣವಾದ ಒಂದು ಭಾರಿ ಜಗಳ ಅವರ ನಡುವೆ ನಡೆದು ಈಗಾಗಲೇ ಬಹಳ ದಿನಗಳಾಗಿವೆ; ಕ್ಷುಲ್ಲಕ ಮಾತಿನಿಂದ ಆರಂಭಗೊಂಡು ಒಳಗಿನ ದ್ವೇಷವನ್ನೆಲ್ಲ ಕಾರುವ ಮತ್ತು ಆನಂತರ ರಾಜಿಯಾಗಿ ಮಿದುತನವನ್ನು ಪ್ರದರ್ಶಿಸುವ ಕ್ಷಣಗಳು ಮಾತ್ರ ಈಗಲೂ ಆಗಾಗ ಸಂಭವಿಸುತ್ತವೆ. ಹೀಗೆ ವರ್ಣಮಯವಾದ ಪ್ರೇಮಪ್ರಕರಣ ಅವರದು. ಮೇನರ್ ಭವನದಲ್ಲಿ ಮ್ಯಾನ್ಯುಯೆಲ ಮಲಗುತ್ತಿರಲಿಲ್ಲ. ಹೋಗುವಾಗಲೇ ಕತ್ತಲಾಗುವ ಪ್ರಮೇಯವನ್ನು ತಂದುಕೊಳ್ಳದ ಹಾಗೆ ಬೇಗಲೇ ಹೊರಟುಬಿಡುತ್ತಿದ್ದಳು, ಕಡಿಮೆ ಅವಧಿಯ ಹಗಲಿನ ದಿನಗಳಲ್ಲಂತೂ ವಿಶೇಷ ಎಚ್ಚರ ವಹಿಸುತ್ತಿದ್ದಳು.

ಹಿಂದೆ ಲಿಮದ ಲ ಮ್ಯಾಗ್ಡಲೀನ ಮೇನರ್‌ನಲ್ಲಿ ಜನರಲ್ ಅವಳನ್ನು ಒಂದು ಮಟ್ಟದಲ್ಲಿ ದೂರವೇ ಇರಿಸಿ, ಮೇಲುವರ್ಗದ ಮತ್ತು ಹಾಗಿಲ್ಲದ ಸ್ತ್ರೀಯರ ಜೊತೆ ಸುಖ ಪಡೆಯುತ್ತಿದ್ದರು, ಆದರೆ ಅದಕ್ಕೆ ವ್ಯತಿರಿಕ್ತವಾಗಿ ಅವಳಿಲ್ಲದೆ ಇರಲಾರೆ ಎಂಬಂತಹ ಭಾವನೆಯನ್ನು ಫ್ಲ್ಯುಕ ಮೇನರ್‌ನಲ್ಲಿ ತೋರ್ಪಡಿಸಿದ್ದರು. ಅವಳು ಬರುವ ದಾರಿಯನ್ನೇ ನೋಡುತ್ತ ನಿಲ್ಲುತ್ತಿದ್ದರು, ವೇಳೆ ಎಷ್ಟಾಯಿತೆಂದು ಮತ್ತೆ ಮತ್ತೆ ಕೇಳುತ್ತ, ತಮ್ಮ ಆರಾಮಕುರ್ಚಿಯನ್ನು ಬೇರೆಡೆ ಹಾಕಲು ಪದೇ ಪದೇ ಹೇಳುತ್ತ, ಬೆಂಕಿಯನ್ನು ಪುಟ ಮಾಡುವಂತೆ ಸುಮ್ಮಸುಮ್ಮನೆ ಸೂಚಿಸುತ್ತ, ಕೆಲವೊಮ್ಮೆ ಅದನ್ನು ಆರಿಸಲು, ಆರಿಸಿದರೆ ಮರುಕ್ಷಣವೇ ಹೊತ್ತಿಸಲು ಹೇಳುತ್ತ ಜೋಸೆ ಪೆಲಾಸಿಯೋಸ್‌ಗೆ ಕಿರುಕುಳ ಕೊಡುತ್ತಿದ್ದರು, ಅಸಹನೆಯಿಂದ ಕುದಿಯುತ್ತ ಬಿಗಿದ ಹುಬ್ಬಿನಿಂದಿರುತ್ತಿದ್ದರು, ಅವಳ ಗಾಡಿಯು ಗುಡ್ಡದ ಹಿಂಬದಿಯಿಂದ ಬರುತ್ತಿರುವುದನ್ನು ಕಂಡ ಕ್ಷಣವೇ ಅವರ ಮುಖ ಬೆಳಗುತ್ತಿತ್ತು. ನಿರೀಕ್ಷೆಗಿಂತ ಹೆಚ್ಚು ಹೊತ್ತು ಅವಳು ಮನೆಯಲ್ಲಿದ್ದರೂ ಇವೇ ಕರುಹುಗಳು ಕಾಣಿಸಿಕೊಳ್ಳುತ್ತಿದ್ದವು. ಮಧ್ಯಾಹ್ನದ ಮಲಗುವ ಹೊತ್ತಿನಲ್ಲಿ ಅವರಿಬ್ಬರೂ ಮಲಗುವ ಕೋಣೆಯನ್ನು ಸೇರಿಕೊಳ್ಳುತ್ತಿದ್ದರು, ಆದರೆ ಅದರ ಬಾಗಿಲನ್ನು ಮುಂದುಮಾಡುತ್ತಿರಲಿಲ್ಲ, ಬಟ್ಟೆ ತೆಗೆಯುತ್ತಿರಲಿಲ್ಲ, ಮಲಗುತ್ತಿರಲಿಲ್ಲ. ಪ್ರಣಯದಾಟದಲ್ಲಿ ತೊಡಗುವ ತಪ್ಪನ್ನು ಮಾಡಲು ಅನೇಕಬಾರಿ ಪ್ರಯತ್ನಿಸಿದ್ದರು, ಅವಳ ಹಸಿವನ್ನು ತಣಿಸುವ ದೇಹಶಕ್ತಿ ತಮ್ಮಲ್ಲಿ ಉಳಿದಿಲ್ಲವೆಂಬುದನ್ನು ಮಾತ್ರ ಅವರು ಒಪ್ಪಿಕೊಳ್ಳುತ್ತಿರಲಿಲ್ಲ.

ಈ ಸಂದರ್ಭದಲ್ಲಿ ಜೀವಹಿಂಡುವ ಅವರ ನಿದ್ರಾಹೀನತೆಯು ಸ್ಫೋಟಗೊಳ್ಳುವ ಕುರುಹುಗಳು ಕಾಣಿಸಿಕೊಂಡವು. ಯಾವುದೇ ಕಾಲದಲ್ಲೂ ಅವರು ನಿದ್ದೆ ಹೋಗುತ್ತಿದ್ದರು, ಪತ್ರವನ್ನು ಬರೆಸುತ್ತಿರುವಾಗ ಒಂದು ವಾಕ್ಯವನ್ನು ಮುಗಿಸುವ ಮೊದಲು, ಇಸ್ಪೀಟು ಆಟದ ನಡುವೆ, ಅನಿರೀಕ್ಷಿತ ನಿದ್ದೆಯೋ ಪ್ರಜ್ಞಾಹೀನತೆಯೋ ಎಂಬುದು ತಮಗೇ ಖಚಿತವಾಗಿ ಗೊತ್ತಿಲ್ಲದಂತೆ. ಆದರೆ ಜೊತೆಯಲ್ಲಿ ಉರುಳಿಕೊಂಡ ತಕ್ಷಣ ಒಂದು ಬಗೆಯ ಮರಣಪೂರ್ವ ಪ್ರಶಾಂತತೆಯು ಅವರನ್ನು ಆವರಿಸಿಬಿಡುತ್ತಿತ್ತು. ಬೆಳಗಿನ ಜಾವದ ಹೊತ್ತು ಅವರಿಗೆ ಮಂಪರು ಕವಿಯುತ್ತಿತ್ತು, ಮರಗಳ ಮೂಲಕ ಬೀಸುವ ಸುಯ್ ಗಾಳಿ ಅವರನ್ನು ಮತ್ತೆ ಎಚ್ಚರಗೊಳಿಸುತ್ತಿತ್ತು. ತಮ್ಮ ನೆನಪುಗಳನ್ನು ಹೇಳಿ ಬರೆಸುವುದನ್ನು ಮಾರನೆಯ ಬೆಳಿಗ್ಗೆಗೆ ಮುಂದೂಡಬೇಕೆಂಬ ಒತ್ತಡವನ್ನು ಅವರಿಂದ ಆಗ ತಡೆದುಕೊಳ್ಳಲಾಗುತ್ತಿರಲಿಲ್ಲ. ಆಗೆಲ್ಲ ಏಕಾಂಗಿಯಾಗಿ ನಡೆದುಕೊಂಡು ಹೋಗುತ್ತಿದ್ದರು, ಇದು ಕೆಲವೊಮ್ಮೆ ಊಟದವರೆಗೂ ಸಾಗುತ್ತಿತ್ತು.

ಅವರೊಬರೇ ಹೋಗುತ್ತಿದ್ದರು, ರಣರಂಗದಲ್ಲಿಯೂ ಅವರನ್ನು ಹಿಂಬಾಲಿಸಿದ್ದ ಎರಡು ನಿಷ್ಠಾವಂತ ನಾಯಿಗಳೂ ಇಲ್ಲದೆ, ತಮ್ಮ ಭವ್ಯ ಕುದುರೆಗಳಿಲ್ಲದೆ – ಪ್ರಯಾಣವೆಚ್ಚಕ್ಕೆ ಹಣ ಕೂಡಿಸಲು ಅವುಗಳನ್ನಾಗಲೇ ರಾವುತದಳಕ್ಕೆ ಮಾರಿಬಿಟ್ಟಿದ್ದರು – ಹೊರಟಿದ್ದರು. ನದಿಯ ದಂಡೆಯ ಗುಂಟ ಮರಗಳ ಸಾಲಿನ ನಡುವಣ ಉದುರಿದ ಎಲೆಗಳು ತುಂಬಿರುತ್ತಿದ್ದ ಕೊನೆಯಿಲ್ಲದ ಕಾಲುದಾರಿಯಲ್ಲಿ ಅವರು ನಡೆದುಕೊಂಡು ಹೋಗುತ್ತಿದ್ದುದು ರೂಢಿ; ಕೊರೆಯುವ ಸವನ್ನ ಚಳಿಗಾಳಿಯಿಂದ ರಕ್ಷಣೆ ಪಡೆಯಲು ಅವರು ವಿಕ್ಯುನ ತುಪ್ಪಟದಿಂದ ಮಾಡಿದ ಪಾಂಛೋ ಧರಿಸಿರುತ್ತಿದ್ದರು, ಬೂಟುಗಳಿಗೆ ಕಚ್ಚಾ ಉಣ್ಣೆಯ ಲೈನಿಂಗ್ ಇರುತ್ತಿತ್ತು, ತಲೆಯ ಮೇಲಿರುತ್ತಿದ್ದ ಹಸಿರು ರೇಷ್ಮೆಯ ಟೋಪಿಯನ್ನು ಸಾಮಾನ್ಯವಾಗಿ ಮಲಗುವಾಗ ಮಾತ್ರವೇ ಹಾಕಿಕೊಳ್ಳುತ್ತಿದ್ದುದು. ಸಡಿಲವಾಗಿ ಹೆಣೆದು ಮಾಡಿದ ಹಲಗೆಗಳ ಕಿರಿದಾದ ಸೇತುವೆಯ ಎದುರಿಗೆ, ರೋದಿಸುವ ವಿಲೋ ಮರಗಳ ನೆರಳಿನಲ್ಲಿ, ನಿಡುಗಾಲ ಯೋಚಿಸುತ್ತ ಕೂತಿರುತ್ತಿದ್ದರು. ನದಿಯ ಸುಳಿಗಳ ಬಗ್ಗೆ ಆಲೋಚಿಸುತ್ತಿದ್ದ ಅವರಿಗೆ ಒಮ್ಮೆ ಅದು ಮನುಷ್ಯನ ವಿಧಿಯ ಹಾಗೆ ಅನ್ನಿಸಿತ್ತು, ಈ ಬಗೆಯ ಆಲಂಕಾರಿಕತೆ ಅವರಿಗೆ ದಕ್ಕಿದ್ದು ಬಾಲ್ಯಕಾಲದ ಗುರುಗಳಾಗಿದ್ದ ಡಾನ್ ಸಿಮೋನ್ ರೋಡ್ರಿಗೆಜ಼್ ಅವರಿಂದ. ಇಬ್ಬನಿಯಿಂದ ತೊಯ್ದು, ಸೊರಗಿ ಬಸವಳಿದು, ಆದರೆ ಕಣ್ಣುಗಳಲ್ಲಿ ಮಾತ್ರ ಆನಂದತುಂದಿಲನಾದ ಹುಚ್ಚನಂತೆ ಕಾಂತಿಯನ್ನು ತುಂಬಿಕೊಂಡು, ಪೋರ್ಟಿಕೋದ ಮೆಟ್ಟಿಗಳನ್ನೇರಲೂ ಕಷ್ಟವೆನ್ನಿಸುವಷ್ಟು ತೆಳ್ಳಗಿನ ದಾರದ ಎಳೆಯನ್ನು ಉಸಿರಾಡುತ್ತ ವಾಪಸಾಗುವವರೆಗೂ, ಕಾಣದಂತೆ ಒಬ್ಬ ಮೈಗಾವಲಿನವನು ಅವರನ್ನು ಹಿಂಬಾಲಿಸಿರುತ್ತಿದ್ದ. ಈ ಏಕಾಂತದ ವಿಹಾರದಿಂದ ಅವರಿಗೆ ಎಂತಹ ಆನಂದ ಸಿಕ್ಕುತ್ತಿದ್ದಿತೆಂದರೆ, ತಮ್ಮ ಭವ್ಯ ಗೆಲವಿನ ಹಾಗೂ ಧೀರ ಸೋಲುಗಳ ಕಾಲದಲ್ಲಿ ಹಾಡಿಕೊಳ್ಳುತ್ತಿದ್ದ ರಣಗೀತೆಗಳನ್ನು ಅವರು ನಡೆಯುತ್ತ ಮೆಲುವಾಗಿ ಗುಣುಗುಣಿಸಿಕೊಳ್ಳುತ್ತಿದ್ದುದು ಹಿಂಬಾಲಿಸಿ ಬರುತ್ತಿದ್ದ ಕಾವಲುಗಾರನಿಗೂ ಕೇಳಿಸುತ್ತಿತ್ತು. ಅವರೇ ಉತ್ತಮವೆಂದು ಬಣ್ಣಿಸಿದ್ದ ಕಾನ್‌ಸ್ಟಿಟ್ಯೂಯೆಂಟ್ ಕಾಂಗ್ರೆಸ್‌ನಿಂದ ಮತ್ತೊಂದು ಅವಧಿಗೆ ತಾವು ಅಧ್ಯಕ್ಷಗಿರಿಗೆ ಆಯ್ಕೆಯಾಗುವುದರ ಬಗ್ಗೆ ಮ್ಯಾನ್ಯುಯೆಲಾ ಅನುಮಾನವಿದ್ದಾಗ, ಅವರ ಉತ್ಸಾಹಕ್ಕೆ ಕಾರಣವೇನಿರಬಹುದು ಎಂದು ಅವರನ್ನು ಚೆನ್ನಾಗಿ ಬಲ್ಲ ಅನೇಕರು ಕೇಳಿಕೊಳ್ಳುವಂತಾಗುತ್ತಿತ್ತು.

ಚುನಾವಣೆಯ ದಿನ, ಬೆಳಗಿನ ವಾಯುವಿಹಾರದ ಸಮಯದಲ್ಲಿ, ಪೊದೆಗಳ ನಡುವೆ ಒಂದು ಬೇಟೆನಾಯಿಯು ಯಜಮಾನನಿಲ್ಲದೆ ಬರುತ್ತಿದ್ದುದು ಕಾಣಿಸಿತು. ಬೀದಿಹೋಕರಂತೆ ಶಿಳ್ಳೆ ಹಾಕಿ ಅದನ್ನವರು ಬಳಿಗೆ

ಕರೆದರು, ಧ್ವನಿ ಕೇಳಿದ ನಾಯಿ ತಕ್ಷಣ ನಿಂತಿತು, ವೇಗವಾಗಿ ಚಲಿಸುವ ಮೋಡಗಳು ಮತ್ತು ವಿಶಾಲ ಬಯಲಿನ ನಡುವೆ ದೇವರಿಂದ ಪರಿತ್ಯಕ್ತನಾಗಿ ನೆಲವನ್ನು ಮುಟ್ಟುವ ಪಾಂಛೋ ಮತ್ತು ಟೋಪಿ ಧರಿಸಿದ ಫ್ಲಾರೆಂಟೈನ್ ಧರ್ಮಗುರುವಿನಂತಿದ್ದ ಅವರತ್ತ ಕಿವಿಗಳನ್ನು ನಿಮಿರಿಸಿಕೊಂಡು ನೋಡಿತು. ತನ್ನನ್ನು ಬೆರಳುಗಳಿಂದ ನೇವರಿಸುವಾಗ ಅದು ಬಹು ಜಾಗರೂಕತೆಯಿಂದ ಅವರ ವಾಸನೆ ನೋಡಿ, ಇದ್ದಕ್ಕಿದ್ದಂತೆ ದೂರಕ್ಕೆ ನೆಗೆದು ತನ್ನ ಹೊಂಬಣ್ಣದ ಕಣ್ಣುಗಳಿಂದ ಅವರತ್ತಲೇ ದೃಷ್ಟಿಯನ್ನು ನಾಟಿ, ಶಂಕೆಯಿಂದ ಗುರ್ ಎಂದು ಶಬ್ದ ಮಾಡುತ್ತ ಭಯದಿಂದ ಓಡಿಹೋಯಿತು. ಹಿಂದೆಂದೂ ಹೋಗದಿದ್ದ ಆ ಹಾದಿಯಲ್ಲಿ ಅದನ್ನು ಹಿಂಬಾಲಿಸಿದಾಗ ಕೊನೆಯಲ್ಲಿ ಕೆಸರುಮಯವಾದ ಮತ್ತು ಕೆಂಪು ಛಾವಣಿಗಳಿಂದ ಕೂಡಿ ಅಂಗಳದಿಂದ ನೊರೆಹಾಲಿನ ವಾಸನೆ ಹೊಮ್ಮುತ್ತಿದ್ದ ಮನೆಗಳಿದ್ದ ಇಕ್ಕಟ್ಟಾದ ಬೀದಿಗಳು ಅವರಿಗೆ ಕಾಣಿಸಿದವು. ಇದ್ದಕ್ಕಿದ್ದಂತೆ ಯಾರೋ ಕೂಗಿದರು: "ಬಡಕಲು ಶಂಕ."

ಲಾಯದಿಂದ ತಮ್ಮ ಮೇಲೆ ಎಸೆದ ಸೆಗಣಿಯಿಂದ ತಪ್ಪಿಸಿಕೊಳ್ಳಲು ಅವರಿಗೆ ವ್ಯವಧಾನವೇ ಸಿಕ್ಕಲಿಲ್ಲ; ಹೀಗಾಗಿ ಅದು ಅವರ ಎದೆಯ ಮಧ್ಯಕ್ಕೆ ನೇರವಾಗಿ ಬಡಿದು ಮುಖಕ್ಕೆಲ್ಲ ಸಿಡಿಯಿತು. ಬಿದ್ದ ಸಗಣಿಗಿಂತ ಹೆಚ್ಚಾಗಿ ಆಡಿದ ಮಾತುಗಳೇ ಅಧ್ಯಕ್ಷ ಪದವಿಯನ್ನು ಬಿಟ್ಟಾಗಿನಿಂದ ಅವರನ್ನಾವರಿಸಿದ್ದ ಮಂಪರನ್ನು ಹೊಡೆದೋಡಿಸಲು ಸಹಾಯಕವಾಯಿತು. ನ್ಯೂ ಗ್ರೆನಡನ್ನರು ತನಗೆ ಕೊಟ್ಟಿದ್ದ ಅಡ್ಡಹೆ'ಸರು ಅವನಿಗೆ ತಿಳಿದಿತ್ತು; ನಾಟಕದ ಸಮವಸ್ತ್ರ ಧರಿಸಲು ಹೆಸರುವಾಸಿಯಾಗಿದ್ದ ಒಬ್ಬ ಹುಚ್ಚನ ಹೆಸರು ಅದು. ಉದಾರವಾದಿಯೆಂದು ಕರೆದುಕೊಳ್ಳುತ್ತಿದ್ದ ಸೆನೇಟರ್ ಒಬ್ಬ ಅವನಿಲ್ಲದಾಗ ತಮ್ಮ ಬಗ್ಗೆ ಆ ಹೆಸರನ್ನು ಬಳಸಿದ್ದನಂತೆ, ಅದಕ್ಕೆ ಪ್ರತಿಭಟನೆ ಸೂಚಿಸಿದ್ದು ಇಬ್ಬರೇ ಅಂತೆ. ಆದರೆ ಯಾರೂ ಎದುರಿಗೆ ಅವರನ್ನು ಹೀಗೆ ಕರೆದುದಿಲ್ಲ. ಪಾಂಛೋ ತುದಿಯಿಂದ ಮುಖವನ್ನವರು ಒರೆಸಿಕೊಳ್ಳತೊಡಗಿದರು, ಅದು ಮುಗಿಯುವ ಮುನ್ನವೇ ತಮ್ಮನ್ನು ಕಾಣಿಸದಂತೆ ಹಿಂಬಾಲಿಸುತ್ತಿದ್ದ ಕಾವಲ ಭಟ ಕತ್ತಿ ಹಿರಿದುಕೊಂಡು ಅಪಮಾನ ಮಾಡಿದವನನ್ನು ಶಿಕ್ಷಿಸಲು ಮರಗಳ ನಡುವಣಿಂದ ತೂರಿ ಬಂದ. ಅವನನ್ನು ನೋಡಿ ಜನರಲ್ ಅವರ ಕಣ್ಣುಗಳು ಕೋಪದಿಂದ ಉರಿಯಲಾರಂಭಿಸಿದವು.

"ಇಲ್ಲೇನು ಮಾಡ್ತಿದ್ದೀಯ ನೀನು?"

ಈ ಮಾತು ಕೇಳಿ ಭಟ ಸೆಟೆದು ನಿಂತು, "ನಾನು ಆಜ್ಞೆಯನ್ನು ಪಾಲಿಸುತ್ತಿದ್ದೇನೆ, ಸರ್" ಎಂದ.

"ನಾನು ನಿನ್ನ ಯಜಮಾನನಲ್ಲ."

ಭಟನು ಧರಿಸಿದ್ದ ದರ್ಜೆ ಬಿರುದುಬಾವಲಿಗಳ ಕುರುಹುಗಳನ್ನು ಕೋಪದಿಂದ ಕಿತ್ತೆಸೆದ; ಕಾವಲು ಭಟನ' ಅದೃಷ್ಟಕ್ಕೆ ಅದಕ್ಕಿಂತಲೂ ಹೆಚ್ಚಿನ

ಒರಟು ಕೆಲಸಕ್ಕೆ ಕೈಹಾಕಲು ಬೇಕಾದ ಶಕ್ತಿ ಜನರಲ್ ಅವರಲ್ಲಿ ಉಳಿದಿರಲಿಲ್ಲ. ಅವರನ್ನು ತೀರ ಹತ್ತಿರದಿಂದ ಬಲ್ಲ ಜೋಸೆ ಪೆಲಾಸಿಯೋಸ್‌ಗೆ ಕೂಡ ಯಜಮಾನರ ಉಗ್ರತೆಯನ್ನು ಊಹಿಸಲು ಸಾಧ್ಯವಾಗುತ್ತಿರಲಿಲ್ಲ.

ಅದೊಂದು ವಿಪತ್ಕಾರಿ ದಿನ. ಮ್ಯಾನ್ಯುಯೆಲಗೆ ಕಾಯುವಾಗ ಅನುಭವಿಸುತ್ತಿದ್ದ ರೀತಿಯ ತಳಮಳದಿಂದ ಅವರು ಅಂದು ಬೆಳಿಗ್ಗೆಯನ್ನು ಮನೆಯ ಸುತ್ತ ಓಡಾಡುತ್ತ ಕಳೆದರು; ಆದರೆ ಇಂದು ತಾವು ಚಡಪಡಿಸುತ್ತಿರುವುದು ಅವಳಿಗಾಗಿ ಅಲ್ಲ, ಕಾಂಗ್ರೆಸ್‌ನಿಂದ ಬರುವ ಸುದ್ದಿಗಾಗಿ ಎಂಬುದನ್ನು ಯಾರಿಂದಲೂ ಮುಚ್ಚಿಡಲಿಲ್ಲ. ಕಾಂಗ್ರೆಸ್ ಅಧಿವೇಶನದ ವಿವರವಾದ ಪ್ರಗತಿಯನ್ನು ಕುರಿತು ನಿಮಿಷ ನಿಮಿಷವೂ ಲೆಕ್ಕಾಚಾರ ಹಾಕಲು ಪ್ರಯತ್ನಿಸುತ್ತಿದ್ದರು. ಹತ್ತು ಗಂಟೆಯಾಯಿತೆಂದು ಜೋಸೆ ಪೆಲಾಸಿಯೋಸ್ ಹೇಳದಾಗ, “ಪುಡಾರಿಗಳು ನನಗೆ ಕೈಕೊಡಲು ಏನೇ ಪ್ರಯತ್ನ ಮಾಡಲಿ, ಇಷ್ಟು ಹೊತ್ತಿಗೆ ಚುನಾವಣೆ ಆರಂಭಗೊಂಡಿರಬೇಕು” ಎಂದರು. ಆಮೇಲೆ ನಿಡು ಹೊತ್ತು ಯೋಚಿಸುತ್ತಿದ್ದು, ಜೋರಾಗಿಯೇ ಹೀಗೆ ಉದ್ಗರಿಸಿದರು: “ಊರ್ಡಾನೆಟ ಅಂಥವರು ಹೇಗೆ ಯೋಚಿಸುತ್ತಾರೆ ಅನ್ನೋದನ್ನು ಯಾರು ತಾನೇ ಊಹಿಸೋಕೆ ಸಾಧ್ಯ?” ಜನರಲ್ ಅವರು ಏನು ಹೇಳುತ್ತಿದ್ದಾರೆಂಬುದು ಜೋಸೆ ಪೆಲಾಸಿಯೋಸ್‌ಗೆ ಅರ್ಥವಾಗಿತ್ತು, ಏಕೆಂದರೆ ಊರ್ಡಾನೆಟ ತನ್ನ ವಿರೋಧದ ಕಾರಣ ಮತ್ತು ಆಳದ ಬಗ್ಗೆ ಇನ್ನೂ ಹೇಳಿಕೊಂಡೇ ಬರುತ್ತಿದ್ದ. ಒಮ್ಮೆ, ಜೋಸೆ ಪೆಲಾಸಿಯೋಸ್ ತಮಗಿಂತ ಮುಂದೆ ನಡೆದು ಹೋದಾಗ ಜನರಲ್ ಸಹಜವಾಗಿಯೇ ಕೇಳಿದ್ದರು: “ಸ್ಯೂಕ್ರ್ ಯಾರ ಪರವಾಗಿ ಓಟು ಮಾಡ್ತಾನೆ ಅಂತ ನಿನ್ನ ಅಭಿಪ್ರಾಯ?” ಫೀಲ್ಡ್ ಮಾರ್ಷಲ್ ಸ್ಯೂಕ್ರ್ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಸಾಂಟ ಮಾರ್ತಾದ ಬಿಷಪ್ ಅವರು ಮಾನ್ಸಿಯರ್ ಜೋಸೆ ಮರಿಯ ಎಸ್ಟೆವೆಝ್ ಅವರ ಜೊತೆ ಆ ದೇಶ ಪ್ರತ್ಯೇಕಗೊಳ್ಳುವ ವಿಧಿವಿಧಾನಗಳ ಬಗ್ಗೆ ಚರ್ಚಿಸಲು ವೆನಿಝೂಲಗೆ ಹೋಗಿರುವುದರಿಂದ ಅವರು ಓಟು ಮಾಡಲು ಸಾಧ್ಯವಿಲ್ಲ ಎಂಬ ವಿಷಯ ಜನರಲ್ ಅವರಿಗೆ ಹೇಗೋ ಹಾಗೆಯೇ ಜೋಸೆ ಪೆಲಾಸಿಯೋಸ್‌ಗೂ ತಿಳಿದಿತ್ತು. ಹೀಗಾಗಿ, ಮುಂದೆ ಸಾಗುತ್ತಲೇ ಅವನು ಉತ್ತರಿಸಿದ್ದ: “ಬೇರೆಯವರಿಗಿಂತ ಆ ವಿಷಯ ನಿಮಗೇ ಚೆನ್ನಾಗಿ ತಿಳಿದಿದೆಯಲ್ಲ, ಯಜಮಾನರೇ.” ಈ ಮಾತು ಕೇಳಿ ಜನರಲ್ ಅವತ್ತಿನ ದರಿದ್ರ ವಾಯುವಿಹಾರ ಪ್ರಸಂಗ ನಡೆದ ನಂತರ ಮೊದಲ ಬಾರಿಗೆ ಮುಗುಳ್ನಕ್ಕಿದ್ದರು.

ಹೊಟ್ಟೆ ಸರಿಯಾಗಿರದಿದ್ದರೂ ಹನ್ನೊಂದು ಗಂಟೆಗೆ ಮುಂಚೆಯೇ ಊಟದ ಮೇಜಿನ ಮುಂದೆ ಕುಳಿತುಕೊಳ್ಳುವುದು, ಒಂದು ಬೇಯಿಸಿದ ಮೊಟ್ಟೆ, ಒಂದು ಲೋಟ ಪೋರ್ಟ್ ಅಥವಾ ಒಂದು ತುಣುಕು ಚೀಸ್

ಸೇವಿಸುವುದು ಅವನ ವಾಡಿಕೆ. ಆದರೆ ಅಂದು ಮಾತ್ರ, ಇತರರು ಊಟ ಮಾಡುತ್ತಿದ್ದಾಗ ಅವರು ಮಾತ್ರ ತಾರಸಿಯ ಮೇಲೆ ನಿಂತು ಬೀದಿಯ ಕಡೆ ನೋಡುತ್ತಿದ್ದರು; ಆಲೋಚನೆಯಲ್ಲಿ ಮುಳುಗಿದ ಅವರನ್ನು ಮಾತನಾಡಿಸಲು ಜೋಸೆ ಪೆಲಾಸಿಯೋಸ್‌ಗೆ ಕೂಡ ಧೈರ್ಯ ಬರಲಿಲ್ಲ. ಮಧ್ಯಾಹ್ನ ಮೂರು ಗಂಟೆ ಹೊಡೆದ ಮೇಲೆ ಹೇಸರಗತ್ತೆಗಳ ಗೊರಸಿನ ಸದ್ದು ಮೊದಲು ಕೇಳಿಸಿತು, ಆನಂತರ ಗುಡ್ಡಗಳ ಮೇಲಿಂದ ಇಳಿದು ಬರುತ್ತಿದ್ದ ಮ್ಯಾನ್ಯುಯೆಲಳ ಗಾಡಿ ಕಾಣಿಸಿತು, ಕುರ್ಚಿಯಿಂದ ತಟಕ್ಕನೆ ಮೇಲೆದ್ದರು. ಅವಳನ್ನು ಕರೆತರಲು ಧಾವಿಸಿ, ಕೆಳಗಿಳಿಸಿಕೊಳ್ಳಲು ಗಾಡಿಯ ಬಾಗಿಲು ತೆರೆದರು. ಅವಳ ಮುಖ ಕಂಡ ಕ್ಷಣವೇ ಎಲ್ಲ ಅರ್ಥವಾಗಿತ್ತು. ಪೊಪಾಯನ್‌ನ ಒಂದು ಗೌರವಾನ್ವಿತ ಕುಟುಂಬದ ಹಿರಿಯ ಮಗ ಡಾನ್ ಜೋಕಿನ್ ಮಾಸ್‌ಕ್ವೇರನನ್ನು ಗಣರಾಜ್ಯದ ಅಧ್ಯಕ್ಷನನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು.

ಅವರ ಪ್ರತಿಕ್ರಿಯೆ ಕೋಪ ಅಥವಾ ನಿರಾಸೆಗಿಂತ ಹೆಚ್ಚಾಗಿ ಅಚ್ಚರಿಯಿಂದ ಕೂಡಿತ್ತು. ಯಾಕೆಂದರೆ, ಹಾಗೆ ಮಾಡುವುದಿಲ್ಲವೆಂಬ ಭರವಸೆಯಿಂದ ಡಾನ್ ಜೋಕಿನ್ ಮಾಸ್‌ಕ್ವೇರನ ಹೆಸರನ್ನು ಅಧ್ಯಕ್ಷನಾಗಿ ಚುನಾಯಿಸಲು ಕಾಂಗ್ರೆಸ್‌ಗೆ ಸೂಚಿಸಿದ್ದವರು ತಾವೇ. ಆಳವಾದ ಯೋಚನೆಯಲ್ಲಿ ಮುಳುಗಿದ ಅವರು ಕಷಾಯ ಬರುವವರೆಗೂ ಯಾವ ಮಾತನ್ನೂ ಆಡಲಿಲ್ಲ. "ನನಗೆ ಒಂದು ಓಟೂ ಬರಲಿಲ್ಲವೇ?" ಎಂದು ವಿಚಾರಿಸಿದರು. ಊಹ್ಞೂ, ಒಂದೂ ಬಂದಿರಲಿಲ್ಲ. ಅವರು ತೀವ್ರ ಪೈಪೋಟಿಯಲ್ಲಿ ಸೋತಂತೆ ಆಗಬಾರದೆಂದು ಅವಿರೋಧ ಆಯ್ಕೆಗೆ ಅನುವು ಮಾಡಿದ್ದುದನ್ನು ಆಮೇಲೆ ಅವರನ್ನು ಭೇಟಿಮಾಡಲು ಬಂದಿದ್ದ ಅಧಿಕೃತ ನಿಯೋಗದ ಸದಸ್ಯರೇ ತಿಳಿಸಿದ್ದರು. ಸಿಡಿಮಿಡಿಗೊಂಡರು, ಆ ಸೂಕ್ಷ್ಮ ನಿರ್ಧಾರದ ಹಿಂದಿದ್ದ ವಿವೇಕವನ್ನವರು ಒಪ್ಪಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಅದರ ಬದಲು, ಮೊದಲ ಬಾರಿ ರಾಜೀನಾಮೆ ಸಲ್ಲಿಸಿದಾಗ ಅದನ್ನು ಒಪ್ಪಿಕೊಂಡಿದ್ದರೇ ತಮಗೆ ಹೆಚ್ಚು ಮರ್ಯಾದೆಯಿರುತ್ತಿತ್ತೆಂದು ಭಾವಿಸಿದರು.

"ಒಟ್ಟಿನಲ್ಲಿ, ಪುಡಾರಿಗಳು ಮತ್ತೆ, ಎರಡನೇ ಬಾರಿಯೂ ಗೆದ್ದರು ಅಂತ ಆಯಿತು" ಎಂದರು ನೀಳವಾದ ಉಸಿರನ್ನು ಬಿಟ್ಟು.

ಮೊಗಸಾಲೆಯಲ್ಲಿ ನಿಂತು ಅವರಿಗೆ ವಿದಾಯ ಹೇಳುವವರೆಗೂ ತಮಗಾದ ಆಘಾತವನ್ನು ಎಚ್ಚರದಿಂದ ಮರೆಮಾಚಿಕೊಂಡಿದ್ದರು. ಆದರೆ ಅವರಿದ್ದ ಗಾಡಿಗಳಿನ್ನೂ ಕಣ್ಣಳತೆಯಿಂದ ದೂರವಾಗುವ ಮುನ್ನವೇ ಅವರು ಕೆಮ್ಮಿನ ಸುಳಿಯಲ್ಲಿ ಸಿಕ್ಕಿಕೊಂಡದ್ದರಿಂದ ಇಡೀ ಮೇನರ್ ಭವನ ರಾತ್ರಿಯವರೆಗೂ ಗಾಬರಿಯಲ್ಲಿರಬೇಕಾಯಿತು. ಕಾಂಗ್ರೆಸ್‌ನ ನಿರ್ಧಾರವು ಗಣರಾಜ್ಯವನ್ನು ಉಳಿಸುವ ವಿವೇಕದ ಕಾರ್ಯ ಎಂದು ಅಧಿಕೃತ

ನಿಯೋಗದ ಒಬ್ಬ ಸದಸ್ಯ ಹೊಗಳಿದ್ದ. ಆ ಮಾತನ್ನವರು ಕಡೆಗಣಿಸಿದರು, ಆದರೆ ಆ ರಾತ್ರಿ ಅವರ ಕೋರಿಕೆಯಂತೆ ಮ್ಯಾನ್ಯುಯೆಲ ಮಾಂಸದ ಸಾರನ್ನು ಹೀರುವಾಗ ಅವಳಿಗೆ ಹೀಗೆಂದಿದ್ದರು: “ಯಾವ ಕಾಂಗ್ರೆಸ್ ಕೂಡ ಎಂದೂ ಯಾವುದೇ ಗಣರಾಜ್ಯವನ್ನೂ ಉಳಿಸಿಲ್ಲ.” ಮಲಗುವ ಮುನ್ನ ತಮ್ಮ ಆಪ್ತ ಸಹಾಯಕರನ್ನೂ ಸೇವಕರನ್ನೂ ಒಟ್ಟಾಗಿ ಕರೆಸಿ ತಮಗೆ ರೂಢಿಯಾಗಿದ್ದ ಅನಾಸಕ್ತಿಯಂತಹ ನಿರುದ್ವಿಗ್ನ ಧ್ವನಿಯಲ್ಲಿ ಹೀಗೆಂದರು: “ನಾಳೆ ನಾನು ದೇಶ ಬಿಟ್ಟು ಹೋಗುತ್ತೇನೆ,”

ಆದರೆ ಹಾಗೆ ಆದದ್ದು ನಾಳೆಯಲ್ಲ, ನಾಲ್ಕು ದಿನಗಳ ನಂತರ. ಈ ಮಧ್ಯೆ ಕಳೆದುಕೊಂಡಿದ್ದ ಸಮಚಿತ್ತತೆಯನ್ನು ಜನರಲ್ ಮತ್ತೆ ಪಡೆದರು, ತಮ್ಮ ನೋವನ್ನು ತೋರಿಸಿಕೊಳ್ಳದ ರೀತಿಯಲ್ಲಿ ಒಂದು ವಿದಾಯಪತ್ರವನ್ನು ಹೇಳಿ ಬರೆಸಿದರು, ಪ್ರಯಾಣಸಿದ್ಧತೆಗಾಗಿ ಊರಿಗೆ ಮರಳಿದರು. ಹೊಸ ಸರ್ಕಾರದ ಸೇನೆ ಮತ್ತು ನೌಕಾಪಡೆಗಳ ಸಚಿವ ಜನರಲ್ ಪೆಡ್ರೋ ಅಲ್ಕಾಂಟರ ಹೆರಾನ್ ಅವರನ್ನು ‘ಕಾಲ್ ಲ ಎನ್‌ಸೆನಾಂಜ಼’ (ಅಧಿಕೃತ ಮೈಗಾವಲು) ದಲ್ಲಿ ಮನೆ ತಲುಪಿಸಿದ, ಸೌಜನ್ಯದ ಕಾರಣದಿಂದಲ್ಲ, ದಿನೇ ದಿನೇ ಹೆಚ್ಚಾಗುತ್ತಿದ್ದ ಕೊಲೆ ಪ್ರಯತ್ನಗಳಿಂದ ಅವರನ್ನು ಪಾರುಮಾಡಲು.

ಸಂಟಾ ದ ಬೊಗೋಟವನ್ನು ಬಿಡುವ ಮುಂಚೆಯೇ ತಮ್ಮ ವಶದಲ್ಲಿದ್ದ ಅಲ್ಪಸ್ವಲ್ಪ ಬೆಲೆಬಾಳುವ ವಸ್ತುಗಳನ್ನೂ ಮಾರಾಟಮಾಡಿ ಥೈಲಿಯನ್ನು ಭಾರವಾಗಿಸಿಕೊಂಡರು. ಕುದುರೆಯಲ್ಲದೆ, ಪೊಟೋಸಿಯ ವೈಭವದ ದಿನಗಳಿಗೆ ಸೇರಿದ ಬೆಳ್ಳಿಯ ಊಟದ ತಳಿಗೆಯನ್ನು ಮಾರಿದರು; ಐತಿಹಾಸಿಕ ಮೌಲ್ಯವನ್ನಾಗಲೀ ಕುಸುರಿಕೆಲಸದ ಮಜೂರಿಯನ್ನಾಗಲೀ ಗಣನೆಗೆ ತೆಗೆದುಕೊಳ್ಳದೆ ಟಂಕಸಾಲೆಯು ಬರಿ ಲೋಹಕ್ಕೆ ನಿಗದಿಪಡಿಸಿದ್ದ ದರದ ಪ್ರಕಾರವೇ ಅದು ಎರಡೂವರೆ ಸಾವಿರ ಪೆಸೋಗಳಷ್ಟು ಬೆಲೆಬಾಳುವಂಥದು. ಹೊರಡುವಾಗ ಹದಿನೇಳು ಸಾವಿರದ ಆರು ನೂರು ಪೆಸೋ ಮತ್ತು ಅರುವತ್ತು ಸೆಂಟೋವೋಗಳಷ್ಟು ನಗದು ಅವರ ಬಳಿಯಿತ್ತು; ಜೊತೆಗೆ ಕಾಂಗ್ರೆಸ್ ಅವರಿಗೆ ಜೀವಮಾನವಿಡೀ ನಿಗದಿಪಡಿಸಿದ್ದ ನಿವೃತ್ತಿವೇತನದ ಬಾಬ್ತು ಎಂಟು ಸಾವಿರ ಪೆಸೋ ಮೌಲ್ಯದ ಕಾರ್ಟಜೆನ ಟ್ರೆಷರಿಯ ಹೆಸರಿನ ಡ್ರಾಫ್ಟ್ ಬಳಿಯಲ್ಲಿತ್ತು, ಅಲ್ಲದೆ ಬೇರೆ ಬೇರೆ ಪೆಟ್ಟಿಗೆಗಳಲ್ಲಿ ಸ್ವಲ್ಪ ಸ್ವಲ್ಪ ಇರಿಸಿದ್ದ ಒಟ್ಟಾರೆ ಆರು ನೂರು ಔನ್ಸ್‌ಗಳಷ್ಟು ತೂಕದ ಚಿನ್ನವಿತ್ತು. ಇದು, ಆ ಕಾಲದಲ್ಲಿ ಅಮೆರಿಕಗಳಲ್ಲಿ ಅತ್ಯಧಿಕವೆಂದು ಪರಿಗಣಿತವಾದ, ಅವರು ವೈಯಕ್ತಿಕವಾಗಿ ಗಳಿಸಿದ್ದ ಆಸ್ತಿಯ ಶೇಷಭಾಗ.

ಹೊರಡುವ ಬೆಳಿಗ್ಗೆ, ಜನರಲ್ ಬಟ್ಟೆಬರೆ ಹಾಕಿಕೊಳ್ಳುವ ಕಾಲದಲ್ಲಿ, ಜೋಸೆ ಪೆಲಾಸಿಯೋಸ್ ಸಾವಧಾನವಾಗಿ ಗಂಟುಮೂಟೆಗಳನ್ನು ಕಟ್ಟಿ ಸಿದ್ಧಪಡಿಸಿದ್ದ. ಅವುಗಳಲ್ಲಿ ಎರಡು ಜೊತೆ ಚೆನ್ನಾಗಿರುವ ಒಳುಡುಪುಗಳು,

ಎರಡು ಬಾರಿ ಬದಲಾಯಿಸಲು ಸಾಕಾಗುವಷ್ಟು ಅಂಗಿಗಳು, ಅಟಾಹುಲ್ಪದ ಚಿನ್ನದಿಂದ ಮಾಡಿರುವುದೆನ್ನಲಾದ ಎರಡು ಸಾಲು ಗುಂಡಿಗಳಿದ್ದ ಒಂದು ಯುದ್ಧಕವಚ, ಮಲಗುವಾಗ ಹಾಕಿಕೊಳ್ಳುತ್ತಿದ್ದ ರೇಷ್ಮೆಯ ಟೋಪಿ, ಅವರಿಗಾಗಿ ಫೀಲ್ಡ್ ಮಾರ್ಷಲ್ ಸ್ಯೂಕ್ರ್ ಬೊಲಿವಿಯದಿಂದ ತಂದಿದ್ದ ಒಂದು ಕೆಂಪು ಹೆಡೆಯುಡುಗೆಗಳಿದ್ದವು. ಪಾದರಕ್ಷೆಗಳಲ್ಲಿ ಮನೆಯಲ್ಲಿ ಬಳಸುವ ಚಪ್ಪಲಿಗಳು ಹಾಗೂ ಹೊರಗೆ ಹೋಗುವಾಗ ಧರಿಸುತ್ತಿದ್ದ ನಯವಾದ ಚರ್ಮದ ಬೂಟುಗಳು ಸೇರಿದ್ದವು. ಜೋಸೆ ಪಲಾಸಿಯೋಸ್ ಒಯ್ಯುತ್ತಿದ್ದ ಸ್ವಂತ ಪೆಟ್ಟಿಗೆಗಳಲ್ಲಿ ಔಷಧಿಗಳು ಹಾಗೂ ಕೆಲವು ಬೆಲೆಬಾಳುವ ವಸ್ತುಗಳಿದ್ದ ಸಂದೂಕವಲ್ಲದೆ, ರೂಸೋನ *'ಸೋಷಿಯಲ್ ಕಾಂಟ್ರಾಕ್ಟ್'* ಮತ್ತು ಇಟಾಲಿಯನ್ ಜನರಲ್ ರಾಯ್‌ಮುಂಡೋ ಮಾಟೆಕ್ಯೂಕೋಲಿಯ *'ದ ಆರ್ಟ್ ಆಫ್ ವಾರ್',* ಹಾಗೂ ನೆಪೋಲಿಯನ್ ಬೋನಾಪಾರ್ಟೆಗೆ ಸೇರಿದ್ದ ಮತ್ತು ತನ್ನ ಆಪ್ತ ಸಹಾಯಕನ ತಂದೆ ಸರ್ ರಾಬರ್ಟ್ ವಿಲ್ಸನ್ ತಮಗೆ ನೀಡಿದ್ದ ಎರಡು ಅಮೂಲ್ಯ ಗ್ರಂಥಸೂಚಿಗಳಿದ್ದವು. ಎಲ್ಲ ಸೇರಿ ಎಷ್ಟು ಕಡಿಮೆಯಿದ್ದವು ಎಂದರೆ ಅವನ್ನೆಲ್ಲ ಸೈನಿಕನ ಹಸಿಬೆಯಲ್ಲಿ ತುಂಬಬಹುದಾಗಿತ್ತು. ಅಧಿಕೃತ ನಿಯೋಗವನ್ನು ಭೇಟಿಮಾಡಲು ಕೋಣೆಗೆ ಹೋಗುವಾಗ ಇದನ್ನು ನೋಡಿ, "ಇಷ್ಟೆಲ್ಲ ವೈಭವ ಒಂದು ಕೈಚೀಲದಲ್ಲಿ ಅಡಕಗೊಳ್ಳಬಹುದೆಂದು ಹಿಂದೆ ನಾವು ನಂಬುತ್ತಿರಲಿಲ್ಲ, ಅಲ್ಲವೇ ಜೋಸೆ?" ಎಂದರು.

ಅವನ ಪದಕಗಳು, ಚಿನ್ನದ ಆಭರಣಗಳು ಹಾಗೂ ಬೆಲೆಬಾಳುವ ಅನೇಕ ವಸ್ತುಗಳು ತುಂಬಿದ ಅನೇಕ ಸಂದೂಕಗಳು, ಖಾಸಗಿ ವ್ಯವಹಾರದ ಪತ್ರಗಳಿದ್ದ ಹತ್ತು ಪೆಟ್ಟಿಗೆಗಳು, ಅವರು ಓದಿಯಾಗಿದ್ದ ಎರಡು ಪುಸ್ತಕಗಳು, ಐದು ಸೆಟ್ ಬಟ್ಟೆಗಳು ಹಾಗೂ ಕೆಲಸಕ್ಕೆ ಬರುವ ಹಾಗೂ ಬಾರದ ಅನೇಕ ವಸ್ತುಗಳು ತುಂಬಿದ ಕೆಲವು ಪೆಟಾರಿಗಳಿದ್ದು, ಎಲ್ಲ ಸೇರಿ ಒಟ್ಟು ಏಳು ಹೇಸರಗತ್ತೆಗಳ ಹೊರೆಯಷ್ಟಾಗಿತ್ತು. ಅವುಗಳನ್ನೆಲ್ಲ ಲೆಕ್ಕ ಹಾಕುವ ವ್ಯವಧಾನ ಯಾರಿಗೂ ಇರಲಿಲ್ಲ. ಆದರೆ ಮೂರು ವರ್ಷಗಳ ಹಿಂದೆ ಲಿಮದಿಂದ ವಾಪಸಾಗುವಾಗ ಅವರು ಹೊತ್ತು ತಂದಿದ್ದ ಹೊರೆಗೆ ಹೋಲಿಸಿದರೆ ಇವೆಲ್ಲ ಏನೂ ಅಲ್ಲ ಅನ್ನಿಸುವಂತಿತ್ತು; ಆಗ ಅವರಿಗೆ ಮೂರು ಅಧಿಕಾರಗಳು: ಬೊಲಿವಿಯ ಹಾಗೂ ಕೊಲಂಬಿಯಗಳ ಅಧ್ಯಕ್ಷಗಿರಿ ಮತ್ತು ಪೆರುವಿನ ಸರ್ವಾಧಿಕಾರ ಪಟ್ಟ. ಆಗ ಅವರನ್ನು ಹಿಂಬಾಲಿಸಿದ್ದು ಎಪ್ಪತ್ತೇಳು ಪೆಟ್ಟಿಗೆಗಳು ಹಾಗೂ ಅಸಂಖ್ಯ ಬೆಲೆಬಾಳುವ ವಸ್ತುಗಳು ತುಂಬಿದ್ದ ನಾಲ್ಕು ನೂರಕ್ಕಿಂತ ಹೆಚ್ಚು ಪೆಟಾರಿಗಳು; ಅವುಗಳ ಒಟ್ಟು ಬೆಲೆ ಯಾರಿಗೂ ತಿಳಿಯದು. ಆಗ ಆರು ನೂರಕ್ಕಿಂತ ಹೆಚ್ಚು ಸಂಖ್ಯೆಯ ಪುಸ್ತಕಗಳನ್ನು ಕ್ವಿಟೋದಲ್ಲಿಯೇ ಬಿಟ್ಟು ಬಂದಿದ್ದರು, ಆಮೇಲೆ ಎಂದೂ ಅವುಗಳನ್ನು ಪಡೆಯಲು ಪ್ರಯತ್ನಿಸಿರಲಿಲ್ಲ.

ಆಗಲೇ ಆರು ಗಂಟೆಯಾಗಿತ್ತು. ಸುವರ್ಣಯುಗದ ಸೋನೆ ಕ್ಷಣಕಾಲ ನಿಂತಿತ್ತು, ಆದರೆ ಮೋಡಗಳಿನ್ನೂ ಜಗತ್ತನ್ನಾವರಿಸಿದ್ದವು, ಚಳಿ ಬೇರೆ; ಸೈನಿಕಪಡೆಯು ವಶಪಡಿಸಿಕೊಂಡಿದ್ದ ಆ ಮನೆಯಿಂದ ಬ್ಯಾರಕ್‌ಗಳ ವಾಸನೆಯು ಹೊರಹೊಮ್ಮುತ್ತಿತ್ತು. ಆಪ್ತಸಹಾಯಕರಿಂದ ಸುತ್ತುವರಿಯಲ್ಪಟ್ಟು, ಬೆಳಗಿನ ಜಾವದ ಹಸಿರು ಪ್ರಭೆಯಿಂದ ಕೂಡಿ, ಪಾಂಛೋನ ತೋಳುಗಳು ಭುಜವನ್ನಾವರಿಸಿ, ಅಗಲವಾದ ಹ್ಯಾಟಿನಿಂದ ಮುಖದ ನೆರಳು ತೀವ್ರವಾಗಿದ್ದ ಮಿತಭಾಷಿ ಜನರಲ್ ಅವರು ಕಾರಿಡಾರ್‌ನ ಇನ್ನೊಂದು ತುದಿಯಿಂದ ಬರುವುದನ್ನು ಕಂಡು ರಾವುತರು ಹಾಗೂ ಸಶಸ್ತ್ರದಳದವರು ತೆವಳಿಕೊಂಡು ಹೋಗಿದ್ದರು. ಆಂಡೀಸ್ ಶ್ರೇಣಿಯ ಹಳೆಯ ನಂಬಿಕೆಯಂತೆ, ಇದ್ದಕ್ಕಿದ್ದಂತೆ ಹೊರಗೆ ಬಂದರೆ ಮುತ್ತಿಕೊಳ್ಳಬಹುದಾದ ವಾತಾವರಣದಲ್ಲಿನ ಹಾನಿಕಾರಕ ರೋಗಾಣುಗಳಿಂದ ರಕ್ಷಣೆ ಪಡೆಯಲು ಕೊಲೋನ್‌ನಲ್ಲಿ ನೆನಸಿದ ಕರವಸ್ತ್ರದಿಂದ ತಮ್ಮ ಬಾಯನ್ನವರು ಮುಚ್ಚಿಕೊಂಡಿದ್ದರು. ದರ್ಜೆಯ ಯಾವ ಕುರುಹನ್ನೂ ಅವರೀಗ ಧರಿಸಿರಲಿಲ್ಲ, ಒಂದೊಮ್ಮೆ ಪಡೆದಿದ್ದ ಅಪಾರ ಅಧಿಕಾರದ ಗುರುತು ಮುಖದ ಮೇಲೆ ಉಳಿದಿರಲಿಲ್ಲ, ಆದರೆ ಅಧಿಕಾರದ ಪ್ರಭಾವಳಿಯು ಗದ್ದಲಮಾಡುತ್ತ ಬರುತ್ತಿದ್ದ ಪರಿವಾರದವರಿಗಿಂತ ಅವರನ್ನು ಭಿನ್ನವಾಗಿಸಿತ್ತು. ಒಳ ಉದ್ಯಾನದ ಸುತ್ತಲಿನ ಕಾರಿಡಾರ್‌ನುದ್ದಕ್ಕೂ ನಾರಿನ ಚಾಪೆ ಹಾಸಿತ್ತು, ಸಾವಧಾನದ ಹೆಜ್ಜೆಗಳನ್ನಿಡುತ್ತ, ಹತ್ತಿರ ಬಂದಾಗ ಸೆಟೆದು ನಿಲ್ಲುತ್ತಿದ್ದ ಕಾವಲ ಭಟರ ಕಡೆಗೆ ಗಮನ ಹರಿಸದೆ ಅವರು ದಿವಾನಖಾನೆಯ ಕಡೆಗೆ ಬಂದರು. ಅದನ್ನು ಪ್ರವೇಶಿಸುವ ಮೊದಲು ಕೈಲಿದ್ದ ಕರವಸ್ತ್ರವನ್ನು ಮುಷ್ಟಿಯಲ್ಲಿ ಹಿಡಿದುಕೊಂಡು, ತಮ್ಮ ಹ್ಯಾಟನ್ನು ಆಪ್ತ ಸಹಾಯಕನೊಬ್ಬನ ಕೈಗಿತ್ತರು.

ಮನೆಯ ಕಾವಲಿಗೆಂದು ನೇಮಕಗೊಂಡವರಲ್ಲದೆ ಇತರ ನಾಗರಿಕರೂ ಸೈನಿಕರೂ ಬೆಳಗಿನ ಜಾವದಿಂದಲೇ ಬರಲು ತೊಡಗಿದ್ದರು. ಚೆದುರಿದಂತೆ ಗುಂಪುಗಳಲ್ಲಿ ಅವರೆಲ್ಲ ಕಾಫಿ ಹೀರುತ್ತಿದ್ದರು; ಅವರ ಮಂಕಾದ ಉಡುಪು ಮತ್ತು ಪಿಸುಮಾತುಗಳು ಒಂದು ಬಗೆಯ ವಿಷಾದಪೂರ್ಣ ಬಿಗುವಿನಿಂದ ವಾತಾವರಣವನ್ನು ಗಂಭೀರವಾಗಿಸಿತ್ತು. ಪಿಸುಮಾತುಗಳ ನಡುವೆ ಯಾವನೋ ಒಬ್ಬ ರಾಜತಾಂತ್ರಿಕನ ಏರುಧ್ವನಿ ಚಿಮ್ಮಿತು: “ಇದು ಉತ್ತರಕ್ರಿಯೆಯಂತೆ ಕಾಣುತ್ತಿದೆ.”

ಮಾತನ್ನು ಪೂರೈಸುವುದಕ್ಕಿಲ್ಲ, ಹಿಂದಿನ ಕೋಣೆಯಲ್ಲಿನ ಗಾಳಿಯಲ್ಲಿ ಕೊಲೋನ್ ವಾಸನೆ ತುಂಬಿಕೊಂಡಿದ್ದುದು ಅವನ ಗಮನಕ್ಕೆ ಬಂತು. ಆವಿಯು ಹೊಮ್ಮುತ್ತಿದ್ದ ಕಾಫಿ ಬಟ್ಟಲನ್ನು ಹೆಬ್ಬೆರಳು–ತೋರುಬೆರಳುಗಳ ನಡುವೆ ಹಿಡಿದು ಹಿಂದಕ್ಕೆ ನೋಡಿದ, ಆಗ ತಾನೆ ಒಳ ಬಂದಿದ್ದ ವ್ಯಕ್ತಿಯ ಆಕೃತಿ ಕಾಣಿಸಿತು, ತನ್ನ ಅನುಚಿತ ಮಾತನ್ನು ಆತ ಕೇಳಿಸಿಕೊಂಡಿರಬಹುದು

ಎನ್ನಿಸಿತು. ಆದರೆ ಹಾಗಾಗಿರಲಿಲ್ಲ; ಜನರಲ್ ಯೂರೋಪ್‌ಗೆ ನೀಡಿದ ಭೇಟಿ ಇಪ್ಪತ್ತನಾಲ್ಕು ವರ್ಷಗಳ ಹಿಂದೆ ತುಂಬ ಚಿಕ್ಕವನಾಗಿದ್ದಾಗ ಆಗಿದ್ದರೂ, ಅವರ ಮನಸ್ಸಿನಲ್ಲಿನ ಯೂರೋಪ್ ನೆನಪುಗಳು ಅಸಮಾಧಾನವನ್ನು ಮೀರಿ ಮೊನಚಾಗಿದ್ದವು. ಹೀಗಾಗಿ ಅವರು ಮೊದಲು ಬಂದದ್ದೇ ಆ ರಾಜತಾಂತ್ರಿಕನ ಬಳಿ, ಇಂಗ್ಲಿಷ್ ಜನಕ್ಕೆ ತಕ್ಕುದಾದ ರೀತಿಯಲ್ಲಿ ಕುಶಲ ವಿಚಾರಿಸಲು.

"ಹೈಡ್ ಪಾರ್ಕ್‌ನಲ್ಲಿ ಈ ಮಾಗಿಕಾಲದಲ್ಲಿ ಅಷ್ಟೊಂದು ಮಂಜು ತುಂಬಿರಲಿಲ್ಲ ಅಂತ ಕಾಣತ್ತೆ" ಎಂದರು.

ಆ ರಾಜತಾಂತ್ರಿಕ ಒಂದು ಕ್ಷಣ ಅನುಮಾನಿಸಿದ, ಯಾಕೆಂದರೆ ಜನರಲ್ ಈಚೆಗೆ ಮೂರು ಬೇರೆ ಬೇರೆ ಊರುಗಳಿಗೆ ಹೋಗುತ್ತಿದ್ದರೂ, ಅವುಗಳಲ್ಲಿ ಲಂಡನ್ ಸೇರಿರಲಿಲ್ಲ ಎಂಬ ವಿಷಯವನ್ನವನು ಕೇಳಿದ್ದ. ಆದರೆ ಮರುಕ್ಷಣದಲ್ಲಿಯೇ ಸಾವರಿಸಿಕೊಂಡ. "ತಮಗಾಗಿ ಹಗಲೂ ರಾತ್ರಿ ಸೂರ್ಯಪ್ರಕಾಶವಿರುವಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತೇವೆ, ಮಹಾಸ್ವಾಮಿ" ಎಂದು ಉತ್ತರಿಸಿದ.

ಅಲ್ಲಿಗೆ ಹೊಸ ಅಧ್ಯಕ್ಷರು ಬಂದಿರಲಿಲ್ಲ; ಯಾಕೆಂದರೆ ಕಾಂಗ್ರೆಸ್ ಆರಿಸಿದ್ದುದು ಅವರ ಗೈರುಹಾಜರಿಯಲ್ಲಿ, ಪಪಾಯದಿಂದ ಮರಳಲು ಅವನಿಗೆ ಒಂದು ತಿಂಗಳಿಗಿಂತ ಹೆಚ್ಚಿನ ಕಾಲಾವಧಿ ಬೇಕಾಗಿತ್ತು. ಅವರ ಜಾಗದಲ್ಲಿ ಈಗ ಇದ್ದುದು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದ ಜನರಲ್ ಡಾಮಿಂಗೋ ಕ್ಯಾಸೆಡೋ; ಗಣರಾಜ್ಯದ ಯಾವುದೇ ಹುದ್ದೆಯೂ ಅವರಿಗೆ ಕಡಿಮೆಯೇ, ಏಕೆಂದರೆ ಅವರು ರಾಜಕಳೆಯಿಂದ ಕೂಡಿದ್ದವರು ಎಂದು ಜನ ಆಡಿಕೊಳ್ಳುತ್ತಿದ್ದರು. ಜನರಲ್ ಅವರ ಕುಶಲ ವಿಚಾರಿಸುತ್ತ ಲಘುಧಾಟಿಯಲ್ಲಿ ಹೀಗೆಂದರು: "ದೇಶವನ್ನು ಬಿಟ್ಟು ಹೋಗಲು ನನಗೆ ಅನುಮತಿಯಿಲ್ಲ, ಗೊತ್ತಿದೆಯೇ?"

ಇದು ತಮಾಷೆಯೇನಾಗಿರಲಿಲ್ಲ, ಆದರೂ ಈ ಮಾತನ್ನು ಕೇಳಿ ಎಲ್ಲರೂ ನಕ್ಕರು. ತಕ್ಷಣವೇ ಹೊಂಡಗೆ ನ್ಯಾಯೋಕ್ತ ಪಾಸ್‌ಪೋರ್ಟ್ ಅನ್ನು ಕಳಿಸುವುದಾಗಿ ಜನರಲ್ ಕ್ಯಾಸೆಡೋ ಮಾತು ಕೊಟ್ಟರು.

ಅಧಿಕೃತ ನಿಯೋಗದಲ್ಲಿ ನಗರದ ಆರ್ಚ್‌ಬಿಷಪ್ ಮತ್ತಿತರ ಗಣ್ಯರೂ ಉನ್ನತ ಹುದ್ದೆಯ ಅಧಿಕಾರಿಗಳೂ ಅವರ ಹೆಂಡಂದಿರೂ ಸೇರಿದ್ದರು. ನಾಗರಿಕರು ಚೇಪ್‌ಗಳನ್ನು ಧರಿಸಿದ್ದರೆ, ಸೈನಿಕರು ಸವಾರಿ ಬೂಟುಗಳನ್ನು ಹಾಕಿಕೊಂಡಿದ್ದರು; ಈ ವಿಶೇಷ ದೇಶಾಂತರದ ಜೊತೆ ಅನೇಕ ಮೈಲಿಗಳಷ್ಟು ದೂರ ಜೊತೆಯಲ್ಲಿ ಸಾಗುವುದು ಅವರ ಉದ್ದೇಶವಾಗಿತ್ತು. ಜನರಲ್ ಅವರು ಆರ್ಚ್‌ಬಿಷಪ್‌ರ ಉಂಗುರಕ್ಕೂ ಮಹಿಳೆಯರ ಕೈಗಳಿಗೂ ಮುತ್ತಿಟ್ಟರು, ಮಹನೀಯರ ಕೈಗಳನ್ನು ಜೋರಾಗಿ

ಕುಲುಕಿದರು. ಅವರು ಆ ಸುಸಂಘಟಿತ ಸಮಾರಂಭದ ಕೇಂದ್ರ ಬಿಂದು, ಆದರೆ ಆ ಅಸ್ಪಷ್ಟ ನಗರವು ಇಚ್ಛಿಸುವ ರೀತಿಗಿಂತ ಭಿನ್ನವಾಗಿ ಅಪರಿಚಿತರಂತಿದ್ದರು. ಇದನ್ನು ಕುರಿತು ಅವರೇ ಅನೇಕ ಬಾರಿ "ಇದೇನೂ ನಾಟಕಶಾಲೆಯಲ್ಲ" ಎಂದು ಹೇಳಿದ್ದರು. ಜನರಲ್ ಕೋಣೆಯಲ್ಲಿ ಸಾಗುತ್ತ ಕ್ರಮವಾಗಿ ಅವರೆಲ್ಲರನ್ನೂ ಕುಶಲ ಪ್ರಶ್ನೆ ಮಾಡಿದರು. ಪ್ರತಿಯೊಬ್ಬರನ್ನು ಮಾತನಾಡಿಸುವಾಗಲೂ ಪುಸ್ತಕವನ್ನೋದಿ ಶ್ರದ್ಧೆಯಿಂದ ಕಲಿತಿದ್ದ ಉಪಚಾರದ ನುಡಿಗಳನ್ನು ಹೇಳಿದ್ದರು; ಆದರೆ ಯಾರ ಕಣ್ಣಲ್ಲೂ ನೇರವಾಗಿ ದೃಷ್ಟಿ ನಟ್ಟಿರಲಿಲ್ಲ. ಅಷ್ಟು ಕಂಚಿನ ಕಂಠ, ಆದರೆ ಜ್ವರದಿಂದ ನಡುಗುತ್ತಿತ್ತು. ಅವರ ಕೆರಿಬಿಯನ್ ಉಚ್ಚಾರವು ಹಲವಾರು ವರ್ಷಗಳ ಪ್ರವಾಸ ಮತ್ತು ಯುದ್ಧದಿಂದಾಗಿ ಮಿದುವಾಗಿರಲಿಲ್ಲ, ಹೀಗಾಗಿ ಆಂಡಿಯನ್ ಪದಕೋಶದೊಡನೆ ಹೋಲಿಸಿದರೆ ಗಡುಸಾಗಿ ತೋರುತ್ತಿತ್ತು.

ಕುಶಲಪ್ರಶ್ನೆಗಳನ್ನು ಮುಗಿಸಿದ ಮೇಲೆ, ಹಂಗಾಮಿ ಅಧ್ಯಕ್ಷರು ಅವರಿಗೊಂದು ಕಾಗದವನ್ನು ನೀಡಿದರು; ಅವರ ಹಲವಾರು ವರ್ಷಗಳ ಸೇವೆಗಾಗಿ ದೇಶದ ಪರವಾಗಿ ಕೃತಜ್ಞತೆಯನ್ನು ಸೂಚಿಸಿ ಅನೇಕ ಮಂದಿ ಗಣ್ಯ ನ್ಯೂ ಗ್ರೆನೇಡಿಯನ್ನರು ಬರೆದು ಸಹಿಮಾಡಿದ್ದ ಪತ್ರ ಅದು. ಅಲ್ಲಿನ ಔಪಚಾರಿಕತೆಗೆ ಮತ್ತೊಮ್ಮೆ ಗೌರವ ಕೊಡುವವರಂತೆ, ಮೌನದಿಂದಿದ್ದ ಅವರ ಮುಂದೆ, ಅದನ್ನು ಓದಿದಂತೆ ಮಾಡಿದರು. ಏಕೆಂದರೆ ದಪ್ಪ ಅಕ್ಷರಗಳಿಲ್ಲದಿದ್ದರೆ ಕನ್ನಡಕವಿಲ್ಲದೆ ಓದಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಓದಿ ಮುಗಿಸಿದಂತೆ ಮಾಡಿ, ನಿಯೋಗಕ್ಕೆ ಕೆಲವು ಸೌಜನ್ಯದ ನುಡಿಗಳನ್ನಾಡಿದರು. ಅದು ಎಷ್ಟು ಸಮಂಜಸವಾಗಿತ್ತೆಂದರೆ, ಅವರು ಪತ್ರವನ್ನು ಓದಿರಲೇ ಇಲ್ಲ ಎಂದು ಯಾರೂ ಹೇಳುವ ಹಾಗಿರಲಿಲ್ಲ. ಆನಂತರ ಕೋಣೆಯ ಸುತ್ತಲೂ ನೋಡಿ, ತಮ್ಮ ಕಾತರವನ್ನು ಮುಚ್ಚಿಟ್ಟುಕೊಳ್ಳದೆ, "ಊರ್ಡಾನೆಟ ಬಂದಿಲ್ಲವೇನು?" ಎಂದು ಕೇಳಿದರು.

ಜನರಲ್ ಜೋಸೆ ಲಾರೆನ್ಸಿಯೋ ಸಿಲ್ವನ ಮುನ್ನೆಚ್ಚರಿಕೆಯ ನಿಯೋಗದ ಬೆಂಬಲಕ್ಕೆಂದು ಜನರಲ್ ರಫೇಲ್ ಊರ್ಡಾನೆಟ ಬಂಡಾಯ ಪಡೆಯೊಂದಿಗೆ ಹೋಗಿರುವರೆಂದು ಹಂಗಾಮಿ ಅಧ್ಯಕ್ಷರು ಉತ್ತರಿಸಿದರು. ಆಮೇಲೆ ಯಾರೋ ಮಿಕ್ಕವರಿಗಿಂತ ಜೋರಾಗಿ ಹೀಗೆಂದರು: "ಸ್ಯೂಕ್ರೆ ಅವರೂ ಬಂದಿಲ್ಲ."

ಕೇಳದಿದ್ದರೂ ಈ ವಿಷಯ ಹೇಳಿದವರ ಕೇಡಿಗತನದ ಉದ್ದೇಶವನ್ನು ಕಡೆಗಣಿಸಲಾಗಲಿಲ್ಲ. ಈವರೆಗೆ ಮಂಕಾಗಿಯೂ ಅಲಿಪ್ತವಾಗಿಯೂ ಇದ್ದ ಅಷ್ಟು ಕಣ್ಣುಗಳು ಜ್ವರದ ತೀವ್ರತೆಯಿಂದ ಮಿನುಗಿದವು, ಹೇಳಿದವನು ಯಾರು ಎಂದು ತಿಳಿಯದಿದ್ದರೂ, ಉತ್ತರಿಸಿದರು: "ನಾನು ಎಷ್ಟು ಗಂಟೆಗೆ ಹೊರಡುವೆನೆಂಬುದನ್ನು

ಅಯಾಚುಚ್ಯೊದ ಫ಼ೀಲ್ಡ್ ಮಾರ್ಷಲ್ ಅವರಿಗೆ ತಿಳಿಸಿರಲಿಲ್ಲ, ಪಾಪ ಅವರ ಕಾರ್ಯಕ್ಕೆ ಭಂಗವುಂಟುಮಾಡಬಾರದೆಂದು ಸುಮ್ಮನಿದ್ದೆ."

ಆದರೆ ತನ್ನ ಕಾರ್ಯದಲ್ಲಿ ವಿಫಲರಾಗಿ ಫ಼ೀಲ್ಡ್ ಮಾರ್ಷಲ್ ಸ್ಯೂಕ್ರ್ ವೆನಿಝೂಲದಿಂದ ಎರಡು ದಿನಗಳ ಹಿಂದೆಯೇ ವಾಪಸಾಗಿದ್ದರು, ಅವರಿಗೆ ಸ್ವಂತ ದೇಶವನ್ನು ಪ್ರವೇಶಿಸಲು ಅವಕಾಶವಿತ್ತಿರಲಿಲ್ಲ; ಈ ವಿಷಯ ಜನರಲ್ ಅವರಿಗೆ ತಿಳಿದಿರಲಿಲ್ಲ. ಇವರು ದೇಶವನ್ನು ಬಿಟ್ಟು ಹೋಗುವ ವಿಚಾರವನ್ನು ಯಾರೂ ಅವರಿಗೆ ತಿಳಿಸಿರಲಿಲ್ಲ; ಈ ವಿಷಯ ತಿಳಿದವರಲ್ಲಿ ಅವರು ಮೊದಲಿಗನಲ್ಲ ಎಂಬುದು ಪ್ರಾಯಶಃ ಯಾರ ಅರಿವಿಗೂ ಬಂದಿರಲಿಲ್ಲ. ಕಷ್ಟ ಪರಿಸ್ಥಿತಿಯಲ್ಲಿ ಜೋಸೆ ಪೆಲಾಸಿಯೋಸ್‌ಗೆ ಈ ವಿಚಾರ ತಿಳಿದಿತ್ತು, ಆದರೆ ಕೊನೆಯ ದಿನಗಳ ಗೊಂದಲದಲ್ಲಿ ಅವನಿಗದು ಮರೆತುಹೋಗಿತ್ತು. ವಿಷಯ ತಿಳಿಸದಿದ್ದ ಬಗ್ಗೆ ಫ಼ೀಲ್ಡ್ ಮಾರ್ಷಲ್ ಸ್ಯೂಕ್ರ್‌ಗೆ ಅಸಮಾಧಾನವಾಗಿರಬಹುದು ಎಂಬುದನ್ನು ಅವರು ತಳ್ಳಿಹಾಕಲಿಲ್ಲ.

ಕೋಣೆಗೆ ಹೊಂದಿಕೊಂಡಿದ್ದ ಊಟದ ಮನೆಯಲ್ಲಿ ಅತ್ಯುತ್ತಮ ಅಮೆರಿಕನ್ ಶೈಲಿಯ ಬೆಳಗಿನ ಉಪಹಾರಕ್ಕೆ ಸಿದ್ಧಪಡಿಸಲಾಗಿತ್ತು: ಆವಿಯಲ್ಲಿ ಬೇಯಿಸಿ ಮುಸುಕಿನ ಜೋಳದ ಕಣಕದಲ್ಲಿಟ್ಟು ಮಾಡಿದ ಟಮಾಲಿ, ರಕ್ತದ ಸಾಸೇಜು ಹಾಕಿದ ಅನ್ನ, ಕ್ಯಾಸೆರಾಲ್‌ನಲ್ಲಿಟ್ಟ ಬೇಯಿಸಿದ ಮೊಟ್ಟೆಯ ಮಿಶ್ರಣ, ಕಸೂತಿ ಹಾಕಿದ ಬಟ್ಟೆ ಹೊದಿಸಿದ್ದ ನಾನಾ ಬಗೆಯ ಪಿಷ್ಟಭಕ್ಷ್ಯಗಳು, ಹಾಗೂ ಸುಗಂಧಿತ ಕಣಕದಂತಿದ್ದ ಬಿಸಿ ಬಿಸಿ ಚಾಕೋಲೇಟ್ ತುಂಬಿದ್ದ ಕುಂಡಗಳು. ಬೆಳಿಗಿನ ಹೊತ್ತು ಅವರು ಗಸಗಸೆ ಮತ್ತು ಗಮ್ ಅರೇಬಿಕ್ ಬೆರೆತ ಕಷಾಯಯನ್ನು ಮಾತ್ರವೇ ಸೇವಿಸುವರೆಂದು ತಿಳಿದಿದ್ದರೂ, ಅವರೂ ಉಪಾಹಾರಸೇವನೆಗೆ ಸೇರಬಹುದೆಂಬ ನಿರೀಕ್ಷೆಯಲ್ಲಿ ಆತಿಥೇಯರು ತಡಮಾಡಿದ್ದರು. ಆದರೆ, ಮನೆಯ ಯಜಮಾನಿತಿಯು ಮೇಜಿನ ತುದಿಯಲ್ಲಿ ಮೀಸಲಾಗಿದ್ದ ಆರಾಮ ಕುರ್ಚಿಯಲ್ಲಿ ಕುಳಿತುಕೊಳ್ಳಲು ಅವರನ್ನು ಆಹ್ವಾನಿಸಿ ತನ್ನ ಕರ್ತವ್ಯವನ್ನು ಪೂರೈಸಿದ್ದಳು. ಆದರೆ ಅದಕ್ಕೊಪ್ಪದೆ ಎಲ್ಲರನ್ನೂ ಉದ್ದೇಶಿಸಿ ಮುಗುಳ್ನಗೆಯೊಡನೆ ಈ ರೀತಿ ನುಡಿದರು: "ನಾನು ಸವೆಸಬೇಕಾದ ದಾರಿ ದೀರ್ಘವಾದುದು. ನೀವೆಲ್ಲ ಆರಾಮವಾಗಿ ಉಪಾಹಾರ ಸ್ವೀಕರಿಸಿ."

ಹಂಗಾಮಿ ಅಧ್ಯಕ್ಷರಿಂದ ಬೀಳ್ಕೊಳ್ಳಲು ಜನರಲ್ ತುದಿಗಾಲಲ್ಲಿ ನಿಂತಿದ್ದರು, ಗಾಢವಾಗಿ ಆಲಂಗಿಸಿಕೊಂಡು ವಿದಾಯ ಹೇಳಿದರು. ಜನರಲ್ ಅವರ ದೇಹ ಎಷ್ಟು ಸಣ್ಣದು ಎಂಬ ಹಾಗೂ ವಿದಾಯ ಸಮಯದಲ್ಲಿ ಅವರೆಷ್ಟು ಅರಕ್ಷಿತ ಮತ್ತು ಪರಿತ್ಯಕ್ತನಂತೆ ಕಾಣಿಸುವರೆಂಬ ಅಂಶ ಆ ಸಂದರ್ಭದಲ್ಲಿ ಅಲ್ಲಿದ್ದವರ ಅರಿವಿಗೆ ಬಂತು. ಮತ್ತೊಮ್ಮೆ ಮಹನೀಯರೆಲ್ಲರ ಕೈಕುಲುಕಿ, ಮಹಿಳೆಯರ ಕೈಗಳನ್ನು ಚುಂಬಿಸಿದರು. ವಾತಾವರಣ

ತಿಳಿಯಾಗುವವರೆಗೂ ಅವರನ್ನುಳಿಸಿಕೊಳ್ಳಲು ಯಾರೋ ಪ್ರಯತ್ನಿಸಿದರು, ಆದರೆ ಅದು ಇಡೀ ಶತಮಾನ ಪೂರ್ತಿ ತಿಳಿಯಾಗಲಾರದು ಎಂಬ ವಿಷಯ ಇಬ್ಬರಿಗೂ ತಿಳಿದಿತ್ತು. ಅಲ್ಲದೆ, ತಡಮಾಡದೆ ಹೊರಟುಬಿಡುವ ಅವರ ಅಪೇಕ್ಷೆ ಎಷ್ಟು ತೀವ್ರವಾಗಿತ್ತೆಂದರೆ ಅವರನ್ನುಳಿಸಿಕೊಳ್ಳುವ ಪ್ರಯತ್ನ ಅಪ್ರಸ್ತುತವೆನ್ನಿಸುತ್ತಿತ್ತು. ಮನೆಯ ಯಜಮಾನ ಅವರನ್ನು ಕಾಣಿಸದಂತಹ ತುಂತುರಿನಲ್ಲಿ ತೋಟದ ಮೂಲಕ ಲಾಯಗಳಿಗೆ ಕರೆದೊಯ್ದ. ಜನರಲ್ ಅವರ ತೋಳುಗಳನ್ನು, ಅದೇನು ಗಾಜಿನಿಂದಾದುದೋ ಎಂಬಂತೆ, ತನ್ನ ಬೆರಳ ತುದಿಯಿಂದ ಹಿಡಿದುಕೊಂಡು ಸಹಾಯ ನೀಡಲು ಪ್ರಯತ್ನಿಸಿದ್ದ, ಆದರೆ ಜನರಲ್ ಚರ್ಮದ ಅಡಿಯಲ್ಲಿ, ದೇಹದ ಕೃಶತೆಗೆ ಸಂಬಂಧವಿಲ್ಲದಂತೆ, ಅಂತರ್ವಾಹಿನಿಯಾಗಿ ಹುದುಗಿದ್ದ ಕಸುವಿನ ಬಿಗಿಪು ಅವನನ್ನು ಅಚ್ಚರಿಗೊಳಿಸಿತ್ತು. ಸರ್ಕಾರದ ಪ್ರತಿನಿಧಿಗಳು, ರಾಜತಾಂತ್ರಿಕ ಸಿಬ್ಬಂದಿ ಮತ್ತು ಮಳೆಯಲ್ಲಿ ನೆನೆದು ಮೊಳಕೈ ಮತ್ತು ಅಂಗಿಗಳೆಲ್ಲ ಕೆಸರು ಮೆತ್ತಿಕೊಂಡಿದ್ದ ಸೈನಿಕ ದಳಗಳವರು ಜನರಲ್ ಅವರ ಮೊದಲ ಹಂತದ ಪ್ರಯಾಣದಲ್ಲಿ ಭಾಗಿಯಾಗಲು ಸಿದ್ಧರಾಗಿದ್ದರು. ಆದರೆ ಸ್ನೇಹದ ಕಾರಣದಿಂದ ಅಲ್ಲಿಗೆ ಬಂದಿದ್ದವರು, ರಕ್ಷಣೆ ನೀಡಲು ಬಂದವರು, ಅವರು ಹೊರಡುವುದನ್ನು ಖಚಿತಪಡಿಸಿಕೊಳ್ಳಲು ಬಂದವರು ಯಾರು ಯಾರು ಎಂದು ಖಚಿತವಾಗಿ ಹೇಳಲು ಸಾಧ್ಯವಿರಲಿಲ್ಲ.

ಅವರಿಗಾಗಿ ಮೀಸಲಿದ್ದುದು, ಸ್ಪಾನಿಶ್ ವರ್ತಕನೊಬ್ಬ ತನ್ನ ಮೇಲಿನ ಕುದುರೆ ಕಳ್ಳನೆಂಬ ಆರೋಪವನ್ನು ಹೋಗಲಾಡಿಸಿದ್ದಕ್ಕಾಗಿ ಸರ್ಕಾರಕ್ಕೆ ನೀಡಿದ್ದ ನೂರರಲ್ಲಿ ಅತ್ಯುತ್ತಮವಾದ, ಒಂದು ಹೇಸರಗತ್ತೆ. ಸೈನ್ಯ ಮತ್ತು ನೌಕಾದಳದ ಸಚಿವನು ಅವನ ಬಳಿ 'ಮಹಾಸ್ವಾಮಿ' ಎನ್ನುತ್ತ ಬಂದಾಗ ಜನರಲ್ ಅವರು ತಮಗಾಗಿ ಹಿಡಿದುಕೊಂಡು ನಿಂತಿದ್ದ ಹೇಸರಗತ್ತೆಯ ರಿಕಾಪಿನಲ್ಲಾಗಲೇ ತಮ್ಮ ಬೂಟುಗಳನ್ನಿಟ್ಟುಕೊಂಡಿದ್ದರು. ರಿಕಾಪಿನಲ್ಲೇ ಕಾಲನ್ನಿಟ್ಟುಕೊಂಡು, ಎರಡೂ ಕೈಗಳಿಂದ ಹಲ್ಲಣವನ್ನು ಹಿಡಿದಿದ್ದರು. ಅವನು ಸುಮ್ಮನೆ ನಿಂತ.

"ದಯವಿಟ್ಟು ಉಳಿದುಕೊಂಡು, ದೇಶವನ್ನು ಕಾಪಾಡಲು ಕೊನೆಯ ಬಾರಿ ತ್ಯಾಗ ಮಾಡಿ" ಎಂದು ಸಚಿವರು ಕೇಳಿಕೊಂಡರು.

"ಇಲ್ಲ ಹೆರಾನ್, ತ್ಯಾಗ ಮಾಡಲು ನನಗೀಗ ಯಾವ ದೇಶವೂ ಉಳಿದಿಲ್ಲ" ಜನರಲ್ ಉತ್ತರ. ಅದು ಕೊನೆ. ಜನರಲ್ ಸಿಮೋನ್ ಜೋಸೆ ಆಂಟೋನಿಯೋ ದ ಲ ಸಾಂಟಿಸ್ಮ ಟ್ರಿನಿಡಾಡ್ ಬೊಲಿವರ್ ಯ್ ಪೆಲಾಸಿಯೋಸ್ ಎಂದೆಂದಿಗೂ ದೇಶ ಬಿಟ್ಟು ಹೋಗುತ್ತಿದ್ದರು. ಇಡೀ ಯೂರೋಪ್‌ಗಿಂತ ಐದು ಮಡಿ ವಿಶಾಲವಾದ ಸಾಮ್ರಾಜ್ಯವನ್ನು ಅವರು ಸ್ಪಾನಿಶ್ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸಿದ್ದರು, ಅದನ್ನು

ಸ್ವತಂತ್ರವಾಗಿಯೂ ಒಗ್ಗಟ್ಟಿನಿಂದಲೂ ಇರುವಂತೆ ಮಾಡಲು ಇಪ್ಪತ್ತು ವರ್ಷಗಳಕಾಲ ಯುದ್ಧನಿರತನಾಗಿದ್ದರು, ಕಳೆದ ವಾರದವರೆಗೂ ಅದರ ಆಡಳಿತವನ್ನು ಬಿಗಿಯಾಗಿ ನಿರ್ವಹಿಸಿದ್ದರು, ಆದರೆ ದೇಶ ತೊರೆಯುವ ಸಮಯ ಬಂದಾಗ ಅವರು ಹೋಗುತ್ತಿರುವ ಬಗ್ಗೆ ಜನರ ನಂಬಿಕೆಯನ್ನು ಜೊತೆಯಲ್ಲಿ ಒಯ್ಯುತ್ತಿರಲಿಲ್ಲ. ತಾವು ಪ್ರಶಾಂತಚಿತ್ತದಿಂದ ಹೋಗುತ್ತಿರುವುದನ್ನು ತಿಳಿದ ಏಕೈಕ ವ್ಯಕ್ತಿಯೆಂದರೆ ಇಂಗ್ಲಿಷ್ ರಾಜತಾಂತ್ರಿನೊಬ್ಬನೇ; ಅವನು ತನ್ನ ಸರ್ಕಾರಕ್ಕೆ ಬರೆದ ಅಧಿಕೃತ ಪತ್ರದಲ್ಲಿ ಹೀಗೆ ತಿಳಿಸಿದ್ದ: “ಬಿಟ್ಟು ಹೋಗುತ್ತಿರುವ ಈ ಸಮಯದಲ್ಲಿ ಅವರಿಗುಳಿದಿರುವ ಕಾಲವು ಗೋರಿಯನ್ನು ತಲುಪಲೂ ಸಾಕಾಗುವಷ್ಟಿಲ್ಲ.”

ಮೊದಲನೆಯ ದಿನದ ಪ್ರಯಾಣ ತುಂಬ ಪ್ರಯಾಸಕರವಾಗಿತ್ತು; ಅವಡಿಗಿಂತ ಕಡಿಮೆ ಗೋಗಗ್ರಸ್ತರಾದವರು ತಡೆದುಕೊಳ್ಳಬಹುದಾಗಿತ್ತು. ಯಾಕೆಂದರೆ, ಅವಡಿಣ ಪ್ರಯಾಣ ಹೊರಟ ಬೆಳಿಗ್ಗೆ ಸಾಂಟ ಫ಼ ದ ಬೊಗೋಟ ದ ಬೀದಿಗಳಲ್ಲಿ ಜನರು ತೋರಿದ್ದ ಪ್ರತಿರೋಧವು ಅವರ ಮನಃಸ್ಥಿತಿಯನ್ನು ತಿರುಚಿತ್ತು. ಸೋನೆ ಹನಿಗಳ ಮಧ್ಯೆ ಬೆಳಕು ಆಗ ತಾನೇ ತೂರಿ ಬರಲು ತೊಡಗಿತ್ತು, ದಾರಿಯಲ್ಲಿ ಅವರಿಗೆದುರಾಗಿದ್ದುದು ಕೆಲವು ತೊಂಡು ದನಗಳು ಮಾತ್ರ, ಆದರೆ ಶತ್ರುಗಳ ದ್ವೇಷ ವಾತಾವರಣದಲ್ಲೇ ತೂಗಾಡುತ್ತಿತ್ತು. ಇದ್ದುದರಲ್ಲಿ ಪ್ರಶಾಂತವಾದ ಬೀದಿಗಳಲ್ಲಿಯೇ ಅವರನ್ನು ಕರೆದುಕೊಂಡು ಹೋಗಬೇಕೆಂದು ಸರ್ಕಾರವು ಎಚ್ಚರಿಕೆಯ ಸೂಚನೆ ನೀಡಿದ್ದರೂ, ಗೋಡೆಗಳ ಮೇಲೆ ಬರೆದಿದ್ದ ಅವಹೇಳನಕಾರಿ ಮಾತುಗಳು ಜನರಲ್ ಅವರ ಕಣ್ಣಿಗೆ ಬಿದ್ದಿದ್ದವು.

ಅವರ ಪಕ್ಕದಲ್ಲಿಯೇ ಜೋಸೆ ಪೆಲಾಸಿಯೋಸ್ ಸಾಗುತ್ತಿದ್ದ, ಯುದ್ಧದ ಬಿಸಿಯಲ್ಲಿಯೂ ತೊಡುತ್ತಿದ್ದ ಯಥಾಪ್ರಕಾರದ ಉಡುಪು ಧರಿಸಿದ್ದ: ಒಂದು ನಿಲುವಂಗಿ, ರೇಷ್ಮೆ ಟೈನಲ್ಲಿ ಚುಚ್ಚಿದ್ದ ಗೋಮೇಧಿಕದ ಮಣಿ, ಆಡಿನ ಚರ್ಮದ ಕೈಗವಸು, ಮತ್ತು ಒಂದೇ ತರಹದ ತನ್ನೆರಡು ಗಡಿಯಾರಗಳನ್ನು ಸೇರಿಸುವ ಸರಪಳಿಯು ಅಡ್ಡಲಾಗಿ ಹಾದುಹೋಗಿದ್ದ ಒಂದು ಕಿಂಕಾಪಿನ ವ್ಯಾಸಕೋಟು. ಹಲ್ಲಣದ ಅಂಚಿನಲ್ಲಿ ಪೊಟೋಸಿ ಬೆಳ್ಳಿಯ ಕುಸುರಿಗೆಲಸವಿತ್ತು, ಅವನ (ಕುದುರೆಯನ್ನು ಚೋದಿಸುವ) ಚುಚ್ಚುಮುಳ್ಳುಗಳು ಚಿನ್ನದವು; ಇದರಿಂದಾಗಿ ಅನೇಕ ಆಂಡಿಯನ್ ಹಳ್ಳಿಗಳಲ್ಲಿ ಜನರು ಅವನನ್ನೇ ಅಧ್ಯಕ್ಷನೆಂದು ತಪ್ಪು ತಿಳಿಯುತ್ತಿದ್ದರು. ಆದರೆ, ತನ್ನ ಯಜಮಾನರ ಸಣ್ಣ ಪುಟ್ಟ ಬೇಕುಬೇಡಗಳನ್ನೂ ಅವನು ಗಮನಿಸುತ್ತಿದ್ದ ರೀತಿಯು ಅಂತಹ ಗೊಂದಲಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಜೋಸೆ ಪೆಲಾಸಿಯೋಸ್‌ಗೆ ಯಜಮಾನರ ಸ್ವಭಾವ ಎಷ್ಟು ಪರಿಚಿತವೆಂದರೆ ಹಾಗೂ ಅವರ ಬಗ್ಗೆ ಎಷ್ಟು ಪ್ರೀತಿಯೆಂದರೆ, ಒಂದೊಮ್ಮೆ ಅವರ ಆಗಮನದ ವಾರ್ತೆಯನ್ನು ಕೇಳಿಯೇ ಜನರು ಅಭಿಮಾನದಿಂದ ಹಬ್ಬ ಆಚರಿಸಿದ್ದ ನಗರದಿಂದ ಕದ್ದುಮುಚ್ಚಿ ಹೊರಡಬೇಕಾದ ನೋವು ಅವನ ಮನದಾಳದಲ್ಲಿ ಊರಿತ್ತು. ಮೂರು ವರ್ಷಗಳಿಗಿಂತ ಕಡಿಮೆ ಹಿಂದೆ ಜನರಲ್ ದಕ್ಷಿಣದ ಬರಡು ಯುದ್ಧಗಳನಂತರ ಹಿಂದಿರುಗಿದ್ದರು; ಆಗ ಅವರಿಗೆ ಬೇರಾವ ಈಗಿನ ಅಥವಾ ಹಿಂದಿನ ಅಮೆರಿಕನ್‌ಗಿಂತ ಹೆಚ್ಚು ವೈಭವ ಪ್ರಾಪ್ತವಾಗಿತ್ತು, ಅವತ್ತು ಸಿಕ್ಕಿದ ಜನರ ಸ್ವಯಂಪ್ರೇರಿತ ಸ್ವಾಗತವಂತೂ ನ ಭೂತೋ ನ ಭವಿಷ್ಯತಿ

ಎನ್ನುವಂತಹದು. ಆಗಿನ ದಿನಗಳಲ್ಲಿ ಅವರು ಕುದುರೆಯೇರಿ ಹೋಗುತ್ತಿದ್ದರೆ ಜನರು ಕುದುರೆಯ ಕೊರಳುಹಗ್ಗ ಹಿಡಿದು ನಿಲ್ಲಿಸಿ ಸಾರ್ವಜನಿಕ ಸೇವೆ ಅಥವಾ ತೆರಿಗೆಗಳ ಬಗ್ಗೆ ದೂರು ನೀಡುತ್ತಿದ್ದರು, ಅಹವಾಲುಗಳನ್ನು ಸಲ್ಲಿಸುತ್ತಿದ್ದರು, ಕೆಲವರಂತೂ ಬಳಿ ನಿಂತು ಅವರ ಹಿರಿತನದ ಪ್ರಭೆಯಲ್ಲಿ ಬೆಚ್ಚಗಾಗಿ ಪುಳಕಗೊಳ್ಳುತ್ತಿದ್ದರು. ದಾರಿಯಲ್ಲಿ ಮಾಡಿಕೊಂಡ ಮನವಿಗಳ ಬಗ್ಗೆಯೂ ಅವರು ಸರ್ಕಾರದ ಅತ್ಯಂತ ಗಂಭೀರ ವಿಷಯಗಳ ಕಡೆ ಹರಿಸುವಷ್ಟೇ ಗಮನವನ್ನು ನೀಡುತ್ತಿದ್ದರು, ಪ್ರತಿಯೊಬ್ಬನ ಮನೆಯ ಸಮಸ್ಯೆ ಅಥವಾ ವ್ಯವಹಾರಗಳ ಪರಿಸ್ಥಿತಿ, ಆರೋಗ್ಯ ಇವುಗಳ ಬಗ್ಗೆ ತೋರಿಸುತ್ತಿದ್ದ ಪರಿಜ್ಞಾನ ಅಚ್ಚರಿ ಹುಟ್ಟಿಸುವಂಥದು; ಅವರೊಡನೆ ಮಾತನಾಡಿದ ಪ್ರತಿಯೊಬ್ಬನ ಮನಸ್ಸಿನಲ್ಲಿಯೂ ಅಧ್ಯಕರ' ಅಧಿಕಾರವನ್ನು ಹಂಚಿಕೊಂಡ ಭಾವನೆ ಕ್ಷಣಾರ್ಧವಾದರೂ ಮೂಡುತ್ತಿತ್ತು.

ಇವರೇ ಅವರು ಎಂದು ಅಥವಾ ಬಹಿಷ್ಕೃತನಂತೆ ಕಳ್ಳ ಹೆಜ್ಜೆಯಿಡುತ್ತ ಪ್ರಶಾಂತವಾದ ಈ ಸ್ಥಳವನ್ನೂ ಊರನ್ನೂ ಹೆಚ್ಚು ಮಾತಿಲ್ಲದೆ ಮತ್ತೆ ವಾಪಸಾಗದಂತೆ ಬಿಡುತ್ತಿರುವವನೆಂದು ಯಾರೂ ನಂಬುವಂತಿರಲಿಲ್ಲ. ಕಪ್ಪು ಸೂರುಗಳು ಮತ್ತು ಸುಗಂಧ ಸೂಸುವ ಹೂಗಳಿದ್ದ ಕೈತೋಟಗಳಿಂದ ಕೂಡಿದ ಊರಿನ ಬಿಗುವಿನ ಇಕ್ಕಟ್ಟಾದ ಬೀದಿಗಳಲ್ಲಿಯಂತೆ ಬೇರೆಲ್ಲೂ ಅವರು ಅಪರಿಚಿತತನವನ್ನು ಅನುಭವಿಸಿರಲಿಲ್ಲ; ಅಲ್ಪ ಬೆಂಕಿಯಿಂದ ಮೆಲುಗುದಿಯಲ್ಲಿರುವವರಂತೆ ಅಲ್ಲಿನ ಜನ ತಮ್ಮ ಕೃತಕ ನಡವಳಿಕೆ ಮತ್ತು ನಯವಾದ ಮಾತುಗಾರಿಕೆಗಳಿಂದ ತೋರ್ಪಡಿಸುತಿದ್ದುದಕ್ಕಿಂತ ಹೆಚ್ಚಿನದನ್ನು ಮುಚ್ಚಿಟ್ಟುಕೊಳ್ಳುತ್ತಿದ್ದರು. ಅದು ಕಲ್ಪನೆಯ ತಂತ್ರದಂತೆ ಅವರಿಗೆ ಕಂಡಿರಬಹುದಾದರೂ, ಕಣ್ಣಾರೆ ನೋಡುವುದಕ್ಕೆ ಬಹು ಮುಂಚೆಯೇ ತಮ್ಮ ಹಿರಿಮೆಯನ್ನು ಕಟ್ಟಿಕೊಳ್ಳಲು ಸೂಕ್ತ ಸ್ಥಳವೆಂದು ಆರಿಸಿಕೊಂಡಿದ್ದರು. ತಮ್ಮ ಬದುಕಿನ ಕೇಂದ್ರ ಮತ್ತು ತಳಹದಿ ಎಂದು ಕನಸು ಕಂಡಿದ್ದ ಹಾಗೂ ಅರ್ಧ ಜಗತ್ತಿನ ರಾಜಧಾನಿಯಾಗಿದ್ದ ಮತ್ತು ಬೇರೆ ಯಾವುದಕ್ಕಿಂತಲೂ ತಾವು ಹೆಚ್ಚಾಗಿ ಪ್ರೀತಿಸಿದ್ದ, ಮಂಜು ಮತ್ತು ಕುಳಿರ್ಗಾಳಿಗಳಿಂದ ಕೂಡಿದ ಆ ನಗರವೇ ಇದು ಎಂಬುದು ವಾಸ್ತವವಾಗಿತ್ತು.

ಹೊರಡುವ ಕ್ಷಣ ಬಂದಾಗ ತಮ್ಮ ಘನತೆ ಕುಂದಿರುವುದು ಬೇರಾರಿಗಿಂತಲೂ ಅವರಲ್ಲಿಯೇ ಹೆಚ್ಚು ಆಶ್ಚರ್ಯವನ್ನುಂಟುಮಾಡಿತ್ತು. ಕನಿಷ್ಠ ಅಪಾಯಕಾರಿಯೆನಿಸಿದ ಜಾಗಗಳಲ್ಲಿಯೂ ಸರ್ಕಾರ ಮರೆಮಾಚಿಕೊಂಡ ರಕ್ಷಕಪಡೆಯನ್ನು ನೇಮಿಸಿತ್ತು; ಇದರಿಂದಾಗಿ ಹಿಂದಿನ ಮಧ್ಯಾಹ್ನ ಅವರ ಪ್ರತಿಕೃತಿಗೆ ಗುಂಡಿಟ್ಟು ಹೊಡೆದಿದ್ದ ಉದ್ರಿಕ್ತ ಪುಂಡರ ಗುಂಪುಗಳ ಜೊತೆ ಸಂಘರ್ಷಕ್ಕಿಳಿಯುವುದು ತಪ್ಪಿತ್ತು. ಆದರೆ ದೂರದಲ್ಲಿ ಅವರ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದುದು ಮಾರ್ಗದುದ್ದಕ್ಕೂ

ಕೇಳಿಸುತ್ತಲೇ ಇತ್ತು. 'ಬಡಕಲು ಶಂಕ' ಎಂಬ ಕೂಗು. ಅವರ ಬಗ್ಗೆ ಅನುಕಂಪ ವ್ಯಕ್ತಪಡಿಸಿದ ಒಂದೇ ಒಂದು ಜೀವವೆಂದರೆ ಒಬ್ಬ ಭಿಕ್ಷುಕಿ; ಅವರು ಸಾಗುತ್ತಿರುವಾಗ ಅವಳೆಂದಳು: "ದೇವರ ರಕ್ಷೆ ನಿಮಗಿರಲಿ!"

ಆದರೆ ಯಾರಿಗೂ ಅವಳ ಮಾತು ಕೇಳಿಸಿದಂತೆ ಕಾಣಲಿಲ್ಲ. ಜನರಲ್ ಅವರು ವಿಷಾದಪೂರ್ಣ ಆಲೋಚನೆಯಲ್ಲಿ ಮುಳುಗಿ ಮುಂದೆ ಸಾಗುತ್ತಿದ್ದರು, ಜಗತ್ತಿಗೆ ದೂರವಾಗಿ. ಕೊನೆಗೆ ಅವರಿಗೆ ಸವನ್ನದ ದೃಶ್ಯವೈಭವ ತೆರೆದುಕೊಂಡಿತ್ತು, ಕ್ಯುಯಾಟ್ರೋ ಎಸ್ಕ್ವಿನಾಸ್‌ನಲ್ಲಿ. ಅಲ್ಲಿಂದ ಸಮತಟ್ಟಾಗಿ ಮಾಡಿದ ರಸ್ತೆಯಿತ್ತು, ಕುದುರೆಯ ಮೇಲೆ ಒಬ್ಬಳೇ ಕುಳಿತಿದ್ದ ಮ್ಯಾನ್ಯುಯೆಲ ಸಾಯೆಂಜ಼್ ಪರಿವಾರವೆಲ್ಲ ಮುಂದೆ ಸಾಗುವುದನ್ನು ಕಾಯುತ್ತಿದ್ದಳು. ದೂರದಲ್ಲಿ ನಿಂತು ಜನರಲ್ ಅವರಿಗೆ ಕೊನೆಯ ಬಾರಿಗೆ ಕೈಬೀಸಿ ವಿದಾಯ ಹೇಳಿದಳು. ಅವರು ಮತ್ತೆ ಎಂದೆಂದೂ ಒಬ್ಬರನ್ನೊಬ್ಬರು ನೋಡಲೇ ಇಲ್ಲ.

ಕೆಲ ಕಾಲಾನಂತರ ಜಿನುಗು ಮಳೆ ನಿಂತು, ಆಕಾಶ ನೀಲಿಯಾಯಿತು; ದಿಗಂತದಲ್ಲಿ ಇಡೀ ದಿನ ಅವರ ಮುಂದೆ ಎರಡು ಹಿಮಾಚ್ಛಾದಿತ ಜ್ವಾಲಾಮುಖಿಗಳು ಕಣ್ಣೆದುರಿಗಿದ್ದವು. ಈ ಬಾರಿ ಅವರು ಪ್ರಕೃತಿಯ ಬಗ್ಗೆ ತಮ್ಮ ಎಂದಿನ ಭಾವುಕತೆಯನ್ನು ತೋರ್ಪಡಿಸಲಿಲ್ಲ, ಒಂದೇ ವೇಗದಲ್ಲಿ ಸಾಗುತ್ತಿದ್ದಾಗ ದಾರಿಯಲ್ಲಿ ಸಿಕ್ಕಿದ ಹಳ್ಳಿಗಳನ್ನಾಗಲೀ ತಮ್ಮನ್ನು ಗುರುತಿಸದ ಜನ ಕೈಬೀಸಿ ಸ್ವಾಗತಿಸುತ್ತಿದ್ದುದನ್ನಾಗಲೀ ಗಮನಕ್ಕೇ ತಂದುಕೊಳ್ಳುತ್ತಿರಲಿಲ್ಲ. ಆದರೂ ಸಂಗಡಿಗರ ಗಮನಕ್ಕೆ ಬಂದ ಅವರಲ್ಲಿನ ಅಸಾಧಾರಣ ಗುಣವೆಂದರೆ, ಸವನ್ನದುದ್ದಕ್ಕೂ ಇದ್ದ ಸಾಕುವ ಕೇಂದ್ರಗಳಲ್ಲಿನ, ಅವರೇ ಅನೇಕ ಬಾರಿ ಹೇಳಿಕೊಂಡಂತೆ ತಮ್ಮ ಅಚ್ಚುಮೆಚ್ಚಿನ ನೋಟವಾದ ಭವ್ಯ ಕುದುರೆ ಹಿಂಡುಗಳತ್ತ ಅಷ್ಟಾಗಿ ಮೃದು ನೋಟವನ್ನು ಬೀರದೇ ಇದ್ದುದು.

ಫ಼ೆಕಟಾಟಿವ ಅವರು ತಮ್ಮ ಪ್ರಯಾಣದ ಮೊದಲ ರಾತ್ರಿ ಕಳೆದ ಹಳ್ಳಿ; ಅಲ್ಲಿ ಮಲಗಿ ಮಾರನೇ ಬೆಳಿಗ್ಗೆ ಶಾಶ್ವತ ಪರಿವಾರವನ್ನುಳಿದು ತಾವಾಗಿ ಜೊತೆಗೂಡಿದ್ದ ಸಂಗಡಿಗರಿಗೆ ಜನರಲ್ ವಿದಾಯವನ್ನು ಹೇಳಿ ಪ್ರಯಾಣ ಮುಂದುವರಿಸಿದರು. ಪರಿವಾರದಲ್ಲಿ ಜೋಸೆ ಪೆಲಾಸಿಯೋಸ್ ಅಲ್ಲದೆ ಐದು ಮಂದಿಯಿದ್ದರು: ಯುದ್ಧವೊಂದರಲ್ಲಿ ಆಗಿದ್ದ ತೀವ್ರ ಗಾಯದ ಕಾರಣ ಬಲ ತೋಳು ತೆಗೆದು ಹಾಕಬೇಕಾಗಿ ಬಂದಿದ್ದ ಜನರಲ್ ಜೋಸೆ ಮರೀಯ ಕ್ಯಾರೆನೋ; ಯೂರೋಪ್‌ನ ಸುಮಾರು ಎಲ್ಲ ಯುದ್ಧಗಳಲ್ಲೂ ಕಾದಿದ್ದ ಜನರಲ್ ಸರ್ ರಾಬರ್ಟ್ ವಿಲ್ಸನ್ ಅವರ ಮಗ ಮತ್ತು ತಮ್ಮ ಐರಿಶ್ ಆಪ್ತಸಹಾಯಕ ಕರ್ನಲ್ ಬೆಲ್‌ಫ಼ೋರ್ಡ್ ಹಿಂಟನ್ ವಿಲ್ಸನ್; ಮೊದಲ ಗಣರಾಜ್ಯದ ಅವಧಿಯಲ್ಲಿ ಹಡಗು ಅಪಘಾತದ ಕಾರಣದಿಂದ ಸತ್ತಿದ್ದ ಅಣ್ಣನ ಮಗ ಹಾಗೂ ಲೆಫ್ಟಿನೆಂಟ್ ಪದವಿಯಲ್ಲಿದ್ದ ತಮ್ಮ ಮತ್ತೊಬ್ಬ ಆಪ್ತಸಹಾಯಕ

ಮತ್ತು ಗುಮಾಸ್ತ ಫ಼ರ್ನಾಂಡೋ; ಎರಡು ವರ್ಷಗಳ ಹಿಂದೆ ಸೆಪ್ಟೆಂಬರ್ ೨೫ ರಂದು ನಡೆದಿದ್ದ ದಾಳಿಯಲ್ಲಿ ಆದ ಕೊಂಕುಕತ್ತಿಯ ಗಾಯದಿಂದ ಬಲತೋಳು ಊನಗೊಂಡಿದ್ದ ತಮ್ಮ ಬಂಧು ಮತ್ತು ಆಪ್ತಸಹಾಯಕ ಕ್ಯಾಪ್ಟನ್ ಆಂಡ್ರೇ ಇಬಾರಾ; ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಸಂಖ್ಯ ಬಾರಿ ಪಾಲ್ಗೊಂಡಿದ್ದ ಕರ್ನಲ್ ಜೋಸೆ ದ ಲ ಕ್ರೂಜ್ ಪೆರೆಡಿಸ್. ಅವರ ಗೌರವರಕ್ಷಕ ದಳದಲ್ಲಿ ವೆನಿಝೂಲ ತುಕಡಿಯಿಂದ ಆರಿಸಿದ್ದ ನೂರು ಮಂದಿ ಅತ್ಯುತ್ತಮ ರಾವುತರೂ ಸಿಡಿಗುಂಡು ಸೈನಿಕರೂ ಇದ್ದರು.

ಆಲ್ಪೋ ಪೆರುವಿನ ದಾಳಿಯಲ್ಲಿ ವಶಪಡಿಸಿಕೊಂಡಿದ್ದ ಎರಡು ನಾಯಿಗಳ ವಿಶೇಷ ಮೇಲುಸ್ತುವಾರಿ ಜೋಸೆ ಪೆಲಾಸಿಯೋಸ್‌ನದಾಗಿತ್ತು. ಆ ನಾಯಿಗಳು ನೋಡಲು ಸುಂದರವಾಗಿದ್ದುವಲ್ಲದೆ, ಧೈರ್ಯಶಾಲಿಗಳಾಗಿದ್ದವು; ಸಂಟಾ ಫ಼ೆ ದ ಬೊಗೋಟದ ಸರ್ಕಾರಿ ಭವನದಲ್ಲಿ ಕಾವಲುನಾಯಿಗಳಾಗಿದ್ದವು; ಒಂದು ರಾತ್ರಿ ಜನರಲ್ ಅವರ ಮೇಲೆ ನಡೆದ ಕೊಲೆಯ ಯತ್ನದಲ್ಲಿ ಅವುಗಳ ಜೊತೆಗಿನ ಇನ್ನೆರಡನ್ನು ಕೊಚ್ಚಿಹಾಕಲಾಗಿತ್ತು. ಲಿಮದಿಂದ ಕ್ವಿಟೋವರೆಗೆ, ಕ್ವಿಟೋದಿಂದ ಸಂಟಾ ಫ಼ೆ ದ ಬೊಗೋಟವರೆಗೆ, ಮತ್ತು ಸಂಟಾ ಫ಼ೆ ದ ಬೊಗೋಟದಿಂದ ಕ್ಯಾರಕಾಸ್‌ವರೆಗೆ ಹಾಗೂ ವಾಪಸು ಕ್ವಿಟೋದಿಂದ ಗುಯಾಕಿಲ್‌ವರೆಗಿನ ಕೊನೆಯಿರದ ಪಯಣಗಳಲ್ಲಿ ಈ ಎರಡು ನಾಯಿಗಳು ಪ್ರಾಣಿಮಂದೆಗಳ ಜೊತೆಗೆ ಸಾಗುತ್ತ ಸಾಮಾನುಗಳ ಕಾವಲು ಕಾಯುತ್ತಿದ್ದವು. ಸಂಟಾ ಫ಼ೆ ದ ಬೊಗೋಟದಿಂದ ಕಾರ್ಟಾಜೆನದವರೆಗಿನ ಈ ಕೊನೆಯ ಪಯಣದಲ್ಲಿಯೂ ಅದೇ ಕೆಲಸವನ್ನು ನಿರ್ವಹಿಸುತ್ತಿದ್ದವು, ಆದರೆ ಈ ಬಾರಿ ಕಡಿಮೆ ಸಾಮಾನುಗಳಿದ್ದವು, ಅಲ್ಲದೆ ಅವುಗಳನ್ನು ಸೈನಿಕರು ಕಾಯುತ್ತಿದ್ದರು.

ಫ಼ಕಟಾಟಿವದಲ್ಲಿ ಎಚ್ಚರಗೊಂಡಾಗ ಕ್ಷೋಭೆಗೊಂಡಿದ್ದ ಜನರಲ್ ಅವರ ಮನಸ್ಸು, ಬೆಟ್ಟದ ಇಳಿಜಾರಿನಲ್ಲಿ ಕೆಳಕ್ಕೆ ಸಾಗಿದಂತೆ, ವಾತಾವರಣವು ಹೆಚ್ಚು ಆಹ್ಲಾದಕರವಾದಂತೆ ಮತ್ತು ಬೆಳಕಿನ ತೀಕ್ಷ್ಣತೆ ಕಡಿಮೆಯಾದಂತೆ, ತಿಳಿಗೊಂಡಿತು. ದೇಹಸ್ಥಿತಿ ಕಳವಳಪಡುವಂತಿದ್ದ ಕಾರಣ ವಿಶ್ರಾಂತಿ ಪಡೆಯಲು ಅವರನ್ನು ಅನೇಕ ಬಾರಿ ಸಹಚರರು ಕೇಳಿಕೊಂಡಿದ್ದರು, ಆದರೆ ಊಟಕ್ಕೂ ನಿಲ್ಲದೆ ಉಷ್ಣಪ್ರದೇಶ ತಲುಪುವವರೆಗೂ ಮುಂದುವರಿಯಲು ಅವರು ಇಚ್ಛಿಸಿದ್ದರು. ಕುದುರೆಯ ಹೆಜ್ಜೆಯ ಲಯದಿಂದ ತಮ್ಮ ಆಲೋಚನೆಯು ಮೊನಚುಗೊಳ್ಳುತ್ತದೆಂದೂ, ತೀರ ಬಳಲದಂತೆ ಕುದುರೆಗಳನ್ನು ಆಗಾಗ ಬದಲಾಯಿಸುತ್ತ ಅನೇಕ ಹಗಲು ರಾತ್ರಿಗಳ ಕಾಲ ತಾವು ಪ್ರಯಾಣ ಮಾಡಬಲ್ಲರೆಂದೂ ಹೇಳುತ್ತಿದ್ದರು. ಅವರಿಗೆ ಹಳೆಯ ಕಾಲದ ರಾವುತರಿಗಿದ್ದಂತಹ ಬಾಗಿದ ಕಾಲುಗಳು, ಚುಚ್ಚುಮುಳ್ಳುಗಳ ಸಮೇತ ಮಲಗುವವರದರಂತಹ ನಡಿಗೆ, ಪಿರ್ರೆಗಳ ಮೇಲೆ ಕ್ಷೌರಿಕನ

ಮಸೆದೊಗಲಿನಂತೆ ಗಡುಸಾದ ದಡ್ಡುಗಳು; ಇವುಗಳಿಂದಾಗಿ ಅವರಿಗೆ ಕಬ್ಬಿಣದ ಕತ್ತೆ ಎಂಬ ಅಡ್ಡ ಹೆಸರು ದೊರೆತಿತ್ತು. ಸ್ವಾತಂತ್ರ್ಯಸಂಗ್ರಾಮದ ಆರಂಭದಿನಗಳಿಂದಲೂ ಅವರು ಮಾಡಿದ್ದ ಕುದುರೆ ಸವಾರಿ ಹದಿನೆಂಟು ಸಾವಿರ ಲೀಗ್‌ಗಳಷ್ಟು, ಅಂದರೆ ಪ್ರಪಂಚದ ಸುತ್ತಳತೆಯ ಎರಡರಷ್ಟು ದೂರ! ಅವರು ಹಲ್ಲಣದ ಮೇಲೇ ನಿದ್ದೆ ಮಾಡುತ್ತಿದ್ದರೆಂಬ ಕತೆಯನ್ನು ಯಾರೂ ಅಲ್ಲಗಳೆದಿರಲಿಲ್ಲ.

ಮಧ್ಯಾಹ್ನದ ನಂತರ, ಕಮರಿಗಳಿಂದ ಬಿಸಿಯುಸಿರು ಮೇಲೇಳಲು ತೊಡಗಿದಾಗ, ಒಂದು ಮಠದ ಆವರಣದಲ್ಲಿ ವಿಶ್ರಾಂತಿ ಪಡೆಯಲು ಅವರು ಒಪ್ಪಿದರು. ಸ್ವತಃ ಮದರ್ ಸುಪೀರಿಯರ್ ಅವರ ಯೋಗಕ್ಷೇಮ ವಿಚಾರಿಸಿದರು. ಅಲ್ಲಿನ ನಿವಾಸಿಗಳಾಗಿದ್ದ ಹೊಸಬ ಸನ್ಯಾಸಿನಿಯರ ಗುಂಪು ತಿನ್ನಲು ಬಿಸಿ ಬಿಸಿಯಾದ ಮಾರ್ಝಿಪಾನ್‌ಗಳನ್ನೂ, ಕುಡಿಯಲು ನೊರೆಗಟ್ಟುತ್ತಿದ್ದ ಮುಸುಕಿನ ಜೋಳದ ಮಸಾಟೋವನ್ನೂ ನೀಡಿತು. ಅಸ್ತವ್ಯಸ್ತ ಸಮವಸ್ತ್ರ ಧರಿಸಿ, ಮೈಮೇಲೆ ಬೆವರು ಸುರಿಯುತ್ತಿದ್ದ ಸೈನಿಕರ ಸಾಲುಗಳನ್ನು ಕಂಡಾಗ, ಕರ್ನಲ್ ವಿಲ್ಸನ್ ಅತ್ಯಂತ ದೊಡ್ಡ ಪದವಿಯ ಸೇನಾಧಿಕಾರಿಯಿರಬೇಕೆಂದು ಮದರ್ ಸುಪೀರಿಯರ್ ಭಾವಿಸಿರಬೇಕು, ಏಕೆಂದರೆ ಅವನು ನೋಡಲು ಸುಂದರವಾಗಿದ್ದ, ಗೌರಾಂಗದವನಾಗಿದ್ದ, ಚೆನ್ನಾಗಿ ಕಾಣುತ್ತಿದ್ದ ಸಮವಸ್ತ್ರ ಧರಿಸಿದ್ದ. ಹೆಣ್ಣಿಗೆ ತಕ್ಕ ಕಕ್ಕುಲತೆಯಿಂದ ಅವರು ಅವನ ಬಗ್ಗೆ ಮಾತ್ರ ವಿಚಾರಿಸಿಕೊಳ್ಳುತ್ತಿದ್ದರು, ಇದರಿಂದ ಕೆಡುಕುಬುದ್ಧಿಯವರು ಏನೇನೋ ಮಾತಾಡಿಕೊಳ್ಳುವಂತಾಗಿತ್ತು.

ಜೋಸೆ ಪೆಲಾಸಿಯೋಸ್ ಅವಳ ತಪ್ಪಿನ ಬಗ್ಗೆ ಯಜಮಾನನಿಗೆ ಮನವರಿಕೆ ಮಾಡಿಕೊಡಲು ಹೋಗಲಿಲ್ಲ, ಏಕೆಂದರೆ ಅವರು ತಮಗೆ ಬಂದಿದ್ದ ಜ್ವರವನ್ನು ಬೆವರಿ ಹೋಗಲಾಡಿಸಿಕೊಳ್ಳಲು ಮಠದ ಮರದ ನೆರಳಲ್ಲಿ ಉಣ್ಣೆಯ ಕಂಬಳಿ ಹೊದ್ದು ಮಲಗಿದ್ದರು. ಊಟ-ನಿದ್ದೆಗಳಿಲ್ಲದೆ ಅಲ್ಲೇ ಇದ್ದುಕೊಂಡು, ಹಿರಿಯ ಸನ್ಯಾಸಿನಿಯೊಬ್ಬಳು ನುಡಿಸುತ್ತಿದ್ದ ಹಾರ್ಪ್ ವಾದ್ಯದೊಡನೆ ಹೊಸಬರು ಹಾಡುತ್ತಿದ್ದ ಕಾವಳದ ಮೂಲಕ ಕೇಳಿಬರುವ ಹೊಸ ಜಗತ್ತಿನ ಪ್ರೇಮ ಗೀತೆಗಳನ್ನಾಲಿಸುತ್ತಿದ್ದರು. ಅದು ಮುಗಿದಾಗ, ಹ್ಯಾಟ್ ಧರಿಸಿದ ಅವರಲ್ಲೊಬ್ಬಳು ಮಠಕ್ಕೆ ಸಹಾಯ ಬೇಡುತ್ತ ಹಾದು ಹೋದಳು. ಅವಳು ಹೋಗುವಾಗ ಹಾರ್ಪ್ ನುಡಿಸಿದ ಸನ್ಯಾಸಿನಿ ಅವಳಿಗೆ ಹೀಗೆಂದಳು: "ಆ ಕಾಯಿಲೆಯ ಮನುಷ್ಯನನ್ನು ಏನೂ ಕೇಳಬೇಡ." ಆದರೆ ಆ ಹೊಸಬಳು ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಅವಳ ಕಡೆ ಕಣ್ಣೂ ಹಾಯಿಸದೆ ನಂಜಿನ ಮುಗುಳ್ನಗೆಯೊಡನೆ ಜನರಲ್ ಹೀಗೆಂದರು: "ನನಗೇ ದಾನದ ಆವಶ್ಯಕತೆ ಇದೆ, ಹುಡುಗಿ." ವಿಲ್ಸನ್ ತನ್ನ ಪರ್ಸ್ ತೆಗೆದು ಧಾರಾಳವಾಗಿ ವಂತಿಗೆ ಇತ್ತಾಗ ಅವನ ಮೇಲಧಿಕಾರಿ ಹೃತ್ಪೂರ್ವಕವಾಗಿ ತಮಾಷೆ ಮಾಡಿದ:

"ಕರ್ನಲ್, ವೈಭವದ ಬೆಲೆ ಎಷ್ಟೆಂದು ಈಗ ತಿಳಿಯಿತಲ್ಲ." ಹೊಸ ಗಣರಾಜ್ಯಗಳಲ್ಲಿಯೇ ಅತ್ಯಂತ ಜನಪ್ರಿಯನಾಗಿದ್ದ ವ್ಯಕ್ತಿಯನ್ನು ಮಠದಲ್ಲಿ ಮಾತ್ರವಲ್ಲ, ದಾರಿಯುದ್ದಕ್ಕೂ ಬೇರೆಲ್ಲೂ ಯಾರೂ ಗುರುತು ಹಿಡಿಯದಿದ್ದುದರ ಬಗ್ಗೆ ವಿಲ್ಸನ್ ಆನಂತರ ಆಶ್ಚರ್ಯ ವ್ಯಕ್ತಪಡಿಸಿದ್ದ. ಇದು ಜನರಲ್ ಅವರಿಗೆ ಕೂಡ ಒಂದು ಅನಿರೀಕ್ಷಿತ ಪಾಠವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. "ನಾನೀಗ ನಾನಾಗಿ ಉಳಿದಿಲ್ಲ" ಎಂದರು.

ಅವರು ಎರಡನೆಯ ರಾತ್ರಿಯನ್ನು ಕಳೆದದ್ದು ಗುಅಡುಅಸ್ ಎಂಬ ಹಳ್ಳಿಯಲ್ಲಿ, ಪ್ರಯಾಣಿಕರಿಗೆಂದು ವಸತಿಗೃಹವಾಗಿ ಮಾರ್ಪಡಿಸಿದ್ದ ಒಂದು ಹಳೆಯ ತಂಬಾಕು ಕಾರ್ಖಾನೆಯಲ್ಲಿ. ಅಲ್ಲಿ ಜನರಲ್ ಅವರಿಗೆ ವಿಷಾದಪೂರ್ಣ ವಿದಾಯ ಹೇಳಲು ಒಂದು ಔಪಚಾರಿಕ ಸಮಾರಂಭ ಏರ್ಪಾಟಾಗಿತ್ತು, ಆದರೆ ಅವರು ಅದರಲ್ಲಿ ಭಾಗವಹಿಸಲು ನಿರಾಕರಿಸಿದರು. ವಸತಿಗೃಹದ ಕಟ್ಟಡವು ದೊಡ್ಡದು, ಆದರೆ ಒಳಗೆಲ್ಲ ಕತ್ತಲು ಕತ್ತಲಾಗಿತ್ತು. ಕಟ್ಟಡದ ಸುತ್ತ ಹುಚ್ಚಾಪಟ್ಟೆ ಗಿಡಗಳು ಬೆಳೆದಿದ್ದು, ಪಕ್ಕದ ನದಿಯ ಕಪ್ಪಾದ ನೀರು ಬಾಳೆ ತೋಟದ ಕಡೆಗೆ ಮೇಲಿನಿಂದ ಕಿವಿಗಡಚಿಕ್ಕುವಂತೆ ಬೀಳುತ್ತಿತ್ತು, ಹೀಗಾಗಿ ಆ ಜಾಗವೇ ಒಂದು ಬಗೆಯಲ್ಲಿ ಅಸಹ್ಯ ಹುಟ್ಟಿಸುವಂತಿತ್ತು. ಜನರಲ್ ಅವರಿಗೆ ಆ ಜಾಗದ ಪರಿಚಯವಿತ್ತು, ಮೊದಲ ಬಾರಿ ಅಲ್ಲಿಗೆ ಬಂದಿದ್ದಾಗ, "ಯಾರನ್ನಾದರೂ ಕೊಲೆ ಮಾಡಲು ಹೊಂಚು ಹಾಕುತ್ತ ಕೂತುಕೊಳ್ಳಬೇಕಾದ ಸಂದರ್ಭ ಬಂದರೆ ನಾನು ಆಯ್ದುಕೊಳ್ಳುವುದು ಈ ಜಾಗವನ್ನೇ" ಎಂದಿದ್ದರು. ಬೇರೆ ಸಂದರ್ಭಗಳಲ್ಲೂ ಅವರು ಆ ಸ್ಥಳವನ್ನು ದೂರವಿರಿಸಿದ್ದ ಕಾರಣ, ಕ್ವಿಟೋಗೆ ಹೋಗುವ ದಾರಿಯಲ್ಲಿ ಸಿಕ್ಕುತ್ತಿದ್ದ, ಅತ್ಯಂತ ಧೈರ್ಯಸ್ಥ ಜನರೂ ಹೋಗಲು ಇಷ್ಟಪಡದಿದ್ದ, ಬೆರುಕೋಸ್ ಎಂಬ ಅನಿಷ್ಟ ಜಾಗವನ್ನು ಅದು ನೆನಪಿಗೆ ತರುತ್ತಿದ್ದುದು. ಒಮ್ಮೆ, ಆಪ್ತರು ಹೇಳಿದರೂ ಕೇಳದೆ, ಅಷ್ಟೊಂದು ದುಃಖ ತಡೆದುಕೊಳ್ಳಲು ಅಸಾಧ್ಯವೆಂಬ ಭಾವನೆಯಿಂದ ಆ ಜಾಗಕ್ಕೆ ಎರಡು ಲೀಗ್ ದೂರದಲ್ಲಿಯೇ ಬೀಡು ಬಿಟ್ಟಿದ್ದರು. ಆದರೆ ಈಗ, ದಣಿವು–ಜ್ವರಗಳಿಂದ ಉಂಟಾದ ಬಳಲಿಕೆಯೇ, ಗುಅಡುಅಸ್‌ನ ಸಹಾನುಭೂತಿಪರ ಸ್ನೇಹಿತರು ತಮಗಾಗಿ ಪ್ರೀತಿಯಿಂದ ಏರ್ಪಡಿಸಿದ್ದ ಸಂತಾಪ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕಿಂತ ಎಲ್ಲ ದೃಷ್ಟಿಗಳಿಂದಲೂ ಸಹ್ಯವೆಂದು ಅವರಿಗನ್ನಿಸಿತ್ತು. ಅಂತಹ ದುರ್ಭರ ಸ್ಥಿತಿಯಲ್ಲಿ ಆಗಮಿಸಿದ್ದ ಅವರನ್ನು ಕಂಡ ವಸತಿಗೃಹದ ಯಜಮಾನನು, ದೂರದಲ್ಲಿದ್ದುಕೊಂಡೇ ವ್ಯಕ್ತಿಯನ್ನು ನೋಡದೇ ಬೆವರು ಹತ್ತಿದ ಅವನ ಅಂಗಿಯ ವಾಸನೆಯಿಂದಲೇ ರೋಗ ವಾಸಿಮಾಡಬಲ್ಲ ಒಬ್ಬ ಇಂಡಿಯನ್‌ಗೆ ಹೇಳಿಕಳಿಸಲು ಸಿದ್ಧನಾದ. ಅವನ ಮುಗ್ಧತೆಯನ್ನು ಕಂಡು ಜನರಲ್‌ರಿಗೆ ನಗು ಬಂತು, ಅಂತಹ ಪವಾಡಪುರುಷನ ಜೊತೆ ಯಾವುದೇ ಬಗೆಯ

ವ್ಯವಹಾರವಿರಿಸಿಕೊಳ್ಳಕೂಡದೆಂದು ತನ್ನವರಿಗೆ ಆಣತಿಯಿತ್ತರು. ಜನರಲ್‌ರಿಗೆ ವೈದ್ಯರ ಬಗ್ಗೆ ನಂಬಿಕೆಯಿರಲಿಲ್ಲ, ಇತರರ ನೋವನ್ನು ಬಂಡವಾಳವಾಗಿ ಮಾಡಕೊಳ್ಳುವ ವ್ಯಾಪಾರಿಗಳೆಂದು ಅವರನ್ನು ಕರೆಯುತ್ತಿದ್ದರು; ಅಂಥದರಲ್ಲಿ ತಮ್ಮ ಹಣೆಬರಹವನ್ನು ಒಬ್ಬ ವಾಮಾಚಾರಿಗೆ ಒಪ್ಪಿಸುವರೆಂದು ನಿರೀಕ್ಷಿಸಲು ಸಾಧ್ಯವಿರಲಿಲ್ಲ.  ಅಲ್ಲದೆ, ವೈದ್ಯವೃತ್ತಿಯ ಬಗ್ಗೆ ಅವರಿಗಿದ್ದ ತಿರಸ್ಕಾರಕ್ಕೆ ಪೂರಕವೆಂಬಂತೆ, ಅಸ್ವಸ್ಥ ಸ್ಥಿತಿಯಲ್ಲಿ ಅತ್ಯಂತ ಸೂಕ್ತವೆಂದು ತಮಗಾಗಿ ಸಿದ್ಧಪಡಿಸಿದ್ದ ಮಲಗುವ ಕೋಣೆಯನ್ನೂ ಅವರು ತಿರಸ್ಕರಿಸಿದರು, ಅದರ ಬದಲು ರಾತ್ರಿಯ ಗಾಳಿ ಜೋರಾಗಿ ಬೀಸುವ ಅಪಾಯವನ್ನೂ ಲೆಕ್ಕಿಸದೆ ತಮ್ಮ ಜೋಲಿಮಂಚವನ್ನು ಕಮರಿಗೆದುರಾಗಿ ಬಯಲು ಮಂಟಪದಲ್ಲಿ ತೂಗುಹಾಕಲು ಆಜ್ಞಾಪಿಸಿದರು.

ಬೆಳಗಿನ ಜಾವ ಕುಡಿದಿದ್ದ ಕಷಾಯದ ಹೊರತು ಆ ದಿನ ಬೇರೇನೂ ಅವರ' ತುಟಿಗಳಲ್ಲಿಳಿದಿರಲಿಲ್ಲ, ಆದರೆ ಇತರ ಅಧಿಕಾರಿಗಳು ಊಟ ಮಾಡುವಾಗ ಅವರ ಜೊತೆ ಸೌಜನ್ಯಕ್ಕಾಗಿ ಮೇಜಿನ ಬಳಿ ತಾವೂ ಕುಳಿತಿದ್ದರು. ಬಯಲಿನ ಜೀವನದ ಕಷ್ಟನಿಷ್ಠುರಗಳಿಗೆ ಅವರು ಇತರರಿಗಿಂತ ಹೆಚ್ಚು ಹೊಂದಿಕೊಂಡು ಊಟತಿಂಡಿಗಳಲ್ಲಿ ಅನಾಸಕ್ತರಾಗಿದ್ದರೂ, ಸುಸಂಸ್ಕೃತ ಯೂರೋಪಿಯನ್‌ನಂತೆ ವೈನ್ ನೆಲಮಾಳಿಗೆ ಮತ್ತು ಅಡುಗೆ ಮನೆಗಳ ವಿಚಾರವನ್ನು ಚೆನ್ನಾಗಿ ಅರಿತಿದ್ದರು ಮತ್ತು ಅವುಗಳ ಬಗ್ಗೆ ಅವರಿಗೆ ಒಳ್ಳೆಯ ಅಭಿರುಚಿಯಿತ್ತು. ಊಟಕ್ಕೆ ಕುಳಿತಾಗ ತಿನಿಸುಗಳ ಬಗ್ಗೆ ಮಾತಾಡುವ ಪರಿಪಾಟವನ್ನು ಮೊದಲ ಸಲ ವಿದೇಶಕ್ಕೆ ಹೋಗಿದ್ದಾಗ ಫ್ರೆಂಚರಿಂದ ಕಲಿತಿದ್ದರು. ಆ ರಾತ್ರಿ ಅವರು ಕುಡಿದದ್ದು ಅರ್ಧ ಕಪ್ ಕೆಂಪು ವೈನ್ ಮಾತ್ರ, ಹೊಳೆಯುವ ಬೇಯಿಸಿದ ಜಿಂಕೆ ಮಾಂಸಕ್ಕೆ ಮಲ್ಲಿಗೆಯ ಪರಿಮಳವಿರುತ್ತದೆ ಎಂಬ ವಸತಿಗೃಹದ ಯಜಮಾನನ ಹೊಗಳಿಕೆಯ ಮಾತುಗಳು ಮತ್ತು ಅದಕ್ಕೆ ತಲೆಯಾಡಿಸಿದ್ದನ್ನು ದೃಢಪಡಿಸಿಕೊಳ್ಳಲು ಕುತೂಹಲಕ್ಕಾಗಿ ಅದನ್ನು ನೆಕ್ಕಿ ರುಚಿ ನೋಡಿದ್ದರು. ಊಟಕ್ಕೆ ಕುಳಿತಾಗ ಅವರು ಆಡಿದುದು ಎರಡೇ ವಾಕ್ಯಗಳು, ಅಲ್ಲದೆ ಪ್ರಯಾಣ ಕಾಲದಲ್ಲಿ ಆಡಿದ್ದ ಮಾತುಗಳಿಗಿಂತ ಹೆಚ್ಚು ಉತ್ಸಾಹವೇನೂ ಆ ಮಾತಗಳಲ್ಲಿರಲಿಲ್ಲ; ಆದರೆ ತಮ್ಮ ಅನಾರೋಗ್ಯ ಮತ್ತು ಸಾರ್ವಜನಿಕ ಜೀವನದ ದುರದೃಷ್ಟಗಳ ಹುಳಿರಸವನ್ನು ಮಧುರಗೊಳಿಸಲು ಒಂದು ಚಮಚ ಸೌಜನ್ಯಯುತ ನಡವಳಿಕೆಯನ್ನು ಸೇರಿಸಿದ್ದರ ಬಗ್ಗೆ ಎಲ್ಲರಿಗೂ ಅವರ ವಿಷಯದಲ್ಲಿ ಗೌರವ ಹೆಚ್ಚಿತ್ತು. ಅಪರಾಧ ನಡೆದು ವರ್ಷಗಳಾಗಿದ್ದರೂ ತಮ್ಮ ಕಟು ದ್ವೇಷವನ್ನು ಮರೆಯಲಾಗದಿದ್ದರೂ ರಾಜಕೀಯದ ಬಗ್ಗೆಯಾಗಲೀ ಶನಿವಾರದ ಘಟನೆಗಳ ಬಗ್ಗೆಯಾಗಲೀ ಅವರು ಒಂದು ಮಾತನ್ನೂ ಆಡಿರಲಿಲ್ಲ.

ಊಟ ಮುಗಿಯುವ ಮೊದಲೇ ಕ್ಷಮೆ ಕೇಳಿ ಅವರು ಎದ್ದು ಹೋಗಿದ್ದರು; ಜ್ವರದಿಂದ ನಡುಗುತ್ತ ರಾತ್ರಿಯ ಅಂಗಿ ಮತ್ತು ಮಲಗುವ ಟೋಪಿಗಳನ್ನು ಧರಿಸಿ ಜೋಲಿಮಂಚದ ಮೇಲೆ ಉರುಳಿಕೊಂಡಿದ್ದರು. ರಾತ್ರಿ ತಂಪಾಗಿತ್ತು, ಗುಡ್ಡಗಳ ನಡುವೆ ದೊಡ್ಡ ಕಿತ್ತಳೆಯಂತೆ ಚಂದ್ರ ಮೇಲೇಳುತ್ತಿದ್ದ, ಆದರೆ ಅವುಗಳ ಕಡೆ ಗಮನ ಹರಿಸುವ ಮನಸ್ಸು ಅವರಿಗಿರಲಿಲ್ಲ. ಕಾವಲು ಭಟರು ಮಂಟಪಕ್ಕೆ ಹತ್ತಿರದಲ್ಲಿಯೇ ಹಾಡುಗಳನ್ನು ಹೇಳಲು ತೊಡಗಿದರು. ಎಂದಿನ ಆಜ್ಞೆಯಂತೆ ಜೂಲಿಯಸ್ ಸೀಸರ್‌ನ ಸೈನಿಕ ತುಕಡಿಗಳಂತೆ ಅವರು ಜನರಲ್ ಮಲಗುವ ಜಾಗಕ್ಕೆ ಸಮೀಪದಲ್ಲಿಯೇ ಬೀಡುಬಿಟ್ಟಿದ್ದರು; ಮಾತುಕತೆಗಳಿಂದ ಅವರ ಭಾವನೆ–ಅನಿಸಿಕೆಗಳನ್ನು ತಿಳಿಯಲು ಅನುಕೂಲವಾಗುತ್ತಿತ್ತು. ನಿದ್ದೆ ಬಾರದೆ ಅಡ್ಡಾಡಲು ಹೊರಟಾಗ ಕಾಲುಗಳು ಎಷ್ಟೋ ವೇಳೆ ಸೈನಿಕ'ರು ಮಲಗಿದ್ದ ಜಾಗದತ್ತಲೇ ಸುಳಿಯುತ್ತಿದ್ದವು. ಸಂತೋಷದ ದಿನಗಳಲ್ಲಿ ಹಲವು ದಿನ ಬೆಳಗಿನ ಜಾವದವರೆಗೂ ಅವರೊಡನೆ ಅಣಕು ಸೈನಿಕ ಹಾಡುಗಳನ್ನು ಹೇಳುತ್ತ ಕಳೆದಿದ್ದರು. ಆದರೆ ಆ ರಾತ್ರಿ ಮಾತ್ರ ಹಾಡುಗಳು ಅವರಿಗೆ ಕಿರಿಕಿರಿಯುಂಟುಮಾಡತೊಡಗಿತ್ತು; ಹೀಗಾಗಿ ಸುಮ್ಮನಿರುವಂತೆ ಆಜ್ಞಾಪಿಸಿದರು. ಬಂಡೆಗಳ ನಡುವೆ ನದಿಯ ಹರಿವಿನ ನಿರಂತರ' ಭೋರ್ಗರೆತ ಜ್ವರದಿಂದಾಗಿ ಮತ್ತಷ್ಟು ಹೆಚ್ಚಾಯಿತು, ಅವರ ಬಡಬಡಿಕೆಯ ಭಾಗವಾಯಿತು.

“ದರಿದ್ರ ನದಿ, ಒಂದು ಕ್ಷಣವಾದರೂ ಹರಿಯುವುದನ್ನು ನಿಲ್ಲಿಸಿದರೆ” ಎಂದು ಅಸಹನೆಯಿಂದ ಕಿರುಚಿದ್ದರು. ಊಹ್ಞೂ, ನದಿಯ ಹರಿವನ್ನು ನಿಲ್ಲಿಸುವುದು ಅವರ ಕೈಯಲ್ಲಿರಲಿಲ್ಲ. ಜೋಸೆ ಪೆಲಾಸಿಯೋಸ್ ತನ್ನ ಜೊತೆ ಔಷಧದ ಭರಣಿಯಲ್ಲಿ ತಂದಿದ್ದ ಒಂದು ಉಪಶಮನಕಾರಕವನ್ನು ಕೊಟ್ಟು ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸಿದ, ಆದರೆ ಜನರಲ್ ಅದನ್ನು ಬೇಡವೆಂದರು. ಅದೇ ಮೊದಲ ಬಾರಿಗೆ ಅವರು ಹಿಂದೆ ಹೇಳದ್ದನ್ನೇ ಹೇಳಿದರು: “ಈಗ ತಾನೇ ಅಧಿಕಾರತ್ಯಾಗ ಮಾಡಬೇಕಾಗಿ ಬಂದುದಕ್ಕೆ ಕಾರಣ ಕೊಡಬಾರದ ವಾಂತಿ ಔಷಧವನ್ನು ತನಗೆ ಕೊಟ್ಟಿದ್ದು, ಈಗ ನಾನು ಪ್ರಾಣತ್ಯಾಗ ಮಾಡಲು ಸಿದ್ಧನಿಲ್ಲ.” ಅನೇಕ ವರ್ಷಗಳ ಹಿಂದೆಯೂ, ಚಳಿಜ್ವರ ಬಂದ ಸಂದರ್ಭದಲ್ಲಿ ಕೊಟ್ಟಿದ್ದ ವಿಷಪೂರಿತ ಮಿಶ್ರಣವನ್ನು ಕುಡಿದು ತಡೆಯಲಾರದಂತಹ ಆಮಶಂಕೆಯನ್ನು ಅನುಭವಿಸಿದ್ದಾಗಲೂ, ಅವರು ಇದೇ ಮಾತನ್ನಾಡಿದ್ದರು. ಆವತ್ತಿನಿಂದ ಅವರು ತೆಗೆದುಕೊಳ್ಳುತ್ತಿದ್ದುದೆಂದರೆ ಭೇದಿ ಔಷಧವನ್ನು, ತಮ್ಮನ್ನು ಪೀಡಿಸುತ್ತಿದ್ದ ಮಲಬದ್ಧತೆಗಾಗಿ ವಾರದಲ್ಲಿ ಹಲವಾರು ಸಲ ಆ ಗುಳಿಗೆಗಳನ್ನು ಯಾವುದೇ ಸಂಶಯವಿಲ್ಲದೆ ಸೇವಿಸುತ್ತಿದ್ದರು, ಹಾಗೆಯೇ ತೀವ್ರ ಜಡತೆ ಆವರಿಸಿದಾಗ ಸೋನಾಮುಖಿ ವಿರೇಚಕವನ್ನು. ಮಧ್ಯರಾತ್ರಿ ಕಳೆದ ಸ್ವಲ್ಪ ಹೊತ್ತಿನಲ್ಲಿ, ಯಜಮಾನರ

ಬಡಬಡಿಕೆಯನ್ನು ತಡೆಯಲಾರದೆ, ಜೋಸೆ ಪೆಲಾಸಿಯೋಸ್ ದೂರ ಹೋಗಿ ಇಟ್ಟಿಗೆಗಳ ನೆಲದ ಮೇಲೆ ಮಲಗಿ ನಿದ್ದೆ ಹೋದ. ಬೆಳಿಗ್ಗೆ ಅವನೆದ್ದಾಗ ಜನರಲ್ ಜೋಲಿಮಂಚದಲ್ಲಿರಲಿಲ್ಲ, ಬೆವರಿನಿಂದ ತೊಯ್ದುಹೋಗಿದ್ದ ಅವರ ಅಂಗಿ ಮಾತ್ರ ನೆಲದ ಮೇಲೆ ಬಿದ್ದಿತ್ತು. ಇದೇನೂ ಅಪರೂಪವಲ್ಲ. ಬೇರಾರೂ ಮನೆಯಲ್ಲಿಲ್ಲದಾಗ ನಿದ್ದೆ ಬಾರದೆ ಅವರೆಷ್ಟೋ ಬಾರಿ ಬತ್ತಲೆಯಲ್ಲಿಯೇ ಎದ್ದು ಓಡಾಡಿ ಕಾಲ ಕಳೆಯುತ್ತಿದ್ದರು. ಆದರೆ ಅವತ್ತು ರಾತ್ರಿ ಇನ್ನೂ ಅನೇಕ ಕಾರಣಗಳಿದ್ದವು: ದಿನವಿಡೀ ಜ್ವರದಿಂದ ಕುದಿಯುತ್ತಿದ್ದರು, ತಂಡಿ ರಾತ್ರಿಯಲ್ಲಿ ಬಟ್ಟೆ ಹಾಕಿಕೊಳ್ಳದೆ ಓಡಾಡುವುದು ಒಳ್ಳೆಯದಲ್ಲ; ಹೀಗಾಗಿ ಜೋಸೆ ಪೆಲಾಸಿಯೋಸ್‌ಗೆ ಭಯವಾಯಿತು. ಒಂದು ಹೊದಿಕೆಯನ್ನು ತೆಗೆದುಕೊಂಡು ಯಜಮಾನರನ್ನು ಹುಡುಕುತ್ತ ಹಸಿರು ದೀಪ ಉರಿಯುತ್ತಿದ್ದ ಮನೆಗೆ ಹೋದ, ಅಲ್ಲಿನ ಮೊಗಸಾಲೆಯ ಕಲ್ಲು ಬೆಂಚಿನ ಮೇಲೆ ಜನರಲ್ ನಿರ್ಜೀವ ಪ್ರತಿಮೆಯಂತೆ ಬಿದ್ದುಕೊಂಡಿದ್ದರು. ತನ್ನ ಕಡೆ ದೃಷ್ಟಿ ಹರಿಸಿದಾಗ ಅವರ ಕಣ್ಣುಗಳಲ್ಲಿ ಜ್ವರದ ಕುರುಹಾವುದೂ ಉಳಿದಿರಲಿಲ್ಲ.

"ಸ್ಯಾನ್ ಜುವಾನ್ ದ ಪಯಾರಾದಲ್ಲಿನಂತೆಯೇ ಇಲ್ಲಿ ಇನ್ನೊಂದು ರಾತ್ರಿ, ದುಃಖದ ಮಾತೆಂದರೆ ರಾಣಿ ಮರಿಯ ಲೂಯಿಸ ಇಲ್ಲ" ಎಂದರು.

ಆ ಮಾತು ಯಾವುದನ್ನು ಕುರಿತದ್ದು ಎಂಬುದು ಜೋಸೆ ಪೆಲಾಸಿಯೋಸ್‌ಗೆ ಚೆನ್ನಾಗಿ ಗೊತ್ತು. ಅವತ್ತು ೧೮೨೦ ನೇ ಇಸವಿ ಜನವರಿಯ ಒಂದು ರಾತ್ರಿ; ಜನರಲ್ ಅವರ ನೇತೃತ್ವದಲ್ಲಿ ಎರಡು ಸಾವಿರ ಮಂದಿ ಸೈನಿಕರು ವೆನಿಝೂಲದ ಅಪ್ಯೂರ ಪರ್ಯಾಯದ್ವೀಪದ ಮಧ್ಯೆ ಇದ್ದ ದೂರದ ಜಾಗವೊಂದಕ್ಕೆ ಬಂದಿದ್ದರು. ಅಷ್ಟು ಹೊತ್ತಿಗಾಗಲೇ ಅವರು ಹದಿನೆಂಟು ಪ್ರಾಂತಗಳನ್ನು ಸ್ಪಾನಿಶ್ ಮುಷ್ಟಿಯಿಂದ ಬಿಡುಗಡೆಗೊಳಿಸಿದ್ದರು. ನ್ಯೂ ಗ್ರೆನೆಡದ ವೈಸ್‌ರಾಯ್, ವೆನಿಝೂಲದ ಕ್ಯಾಪ್ಟನ್ ಜನರಲ್ ಮತ್ತು ಕ್ವಿಟೋ ಅಧ್ಯಕ್ಷರ ಆಡಳಿತಗಳಿಗೆ ಸೇರಿದ್ದ ಪ್ರದೇಶಗಳನ್ನು ಒಗ್ಗೂಡಿಸಿ ಕೊಲಂಬಿಯ ಗಣರಾಜ್ಯವನ್ನು ಸ್ಥಾಪಿಸಿ, ಜೊತೆಗೇ ಅದರ ಮೊದಲ ಅಧ್ಯಕ್ಷ ಹಾಗೂ ಸೈನ್ಯಗಳ ಕಮಾಂಡರ್ ಇನ್ ಛೀಫ್ ಆಗಿದ್ದರು. ಅವರ ಕೊನೆಯ ಗುರಿ ಎಂದರೆ ಯುದ್ಧವನ್ನು ದಕ್ಷಿಣಕ್ಕೆ ಹರಡಿ ಜಗತ್ತಿನಲ್ಲಿಯೇ ಅತ್ಯಂತ ವಿಶಾಲವಾದ ದೇಶವನ್ನು ಸೃಷ್ಟಿಸುವುದು: ಮೆಕ್ಸಿಕೋದಿಂದ ಹಾರ್ನ್ ಭೂಶಿರದವರೆಗಿನ ಸ್ವತಂತ್ರವೂ ಐಕ್ಯವೂ ಆದ ದೇಶ ಅದು.

ಆದರೆ, ಅಂದಿನ ರಾತ್ರಿಯ ಸೈನಿಕ ಪರಿಸ್ಥಿತಿಯು ಕನಸು ಕಾಣಲು ಅನುಕೂಲಕರವಾದುದಾಗಿರಲಿಲ್ಲ. ಇದ್ದಕ್ಕಿದ್ದಂತೆ ತಲೆದೋರಿದ್ದ ಪ್ಲೇಗ್‌ನಿಂದಾಗಿ ಸತ್ತು ಬಿದ್ದಿದ್ದ ಕುದುರೆಗಳು ಲಾನೋ ಬಯಲು ಸೀಮೆಯಲ್ಲಿ ಹದಿನಾಲ್ಕು ಲೀಗ್ ಉದ್ದಕ್ಕೂ ಅಂಟುರೋಗದ ಭೀತಿಯನ್ನು ಹರಡಿತ್ತು.

ಅನೇಕ ಮಂದಿ ನೀತಿಗೆಟ್ಟ ಸೈನ್ಯಾಧಿಕಾರಿಗಳು ಲೂಟಿಯಲ್ಲಿ ನಿರತರಾಗಿ ಮೋಜುಮಾಡುತ್ತ ಅವಿಧೇಯತೆಯನ್ನು ಪ್ರದರ್ಶಿಸುತ್ತಿದ್ದರು, ತಪ್ಪಿತಸ್ಥರನ್ನು ಗುಂಡಿಟ್ಟು ಕೊಲ್ಲುವುದಾಗಿ ಬೆದರಿಕೆ ಹಾಕಿದಾಗ ಕೆಲವರು ಅವರನ್ನು ನೋಡಿ ನಕ್ಕಿದ್ದರು ಕೂಡ. ಆಯುಧಗಳಿಲ್ಲದೆ ಹರುಕಲು ಬಟ್ಟೆ ಉಟ್ಟು ಬರಿಗಾಲಲ್ಲಿದ್ದ ಎರಡು ಸಾವಿರ ಮಂದಿ ಸೈನಿಕರು ಆಹಾರವಿಲ್ಲದೆ, ಬಯಲಿನ ಕೊರೆಯುವ ಚಳಿಯಲ್ಲಿ ಹೊದೆಯಲು ಹೊದಿಕೆಗಳಿಲ್ಲದೆ, ಯುದ್ಧ ಮತ್ತು ರೋಗಗಳಿಂದ ಸೊರಗಿ ಗುಂಪು ಗುಂಪಾಗಿ ಸೈನ್ಯವನ್ನು ತೊರೆದು ಹೋಗುತ್ತಿದ್ದರು. ಇದಕ್ಕೊಂದು ಸೂಕ್ತ ಪರಿಹಾರ ಹೊಳೆಯದೆ, ಬಿಟ್ಟು ಹೋಗುವ ಸೈನಿಕರನ್ನು ಹಿಡಿದವರಿಗೆ ಹತ್ತು ಪೆಸೋಗಳ ಬಹುಮಾನ ನೀಡುವುದಾಗಿಯೂ ಬಿಟ್ಟು ಹೋದವರಿಗೆ ಯಾವ ಮುಲಾಜೂ ಇಲ್ಲದೆ ಗುಂಡಿಕ್ಕುವುದಾಗಿಯೂ ಘೋಷಿಸಿದರು.

ಯಾವ ಸೋಲೂ ಅಂತಿಮವಲ್ಲ ಎಂಬುದನ್ನವರು ಬದುಕಿನ ಅನುಭವಗಳಿಂದ ಇಷ್ಟು ಹೊತ್ತಿಗಾಗಲೇ ಕಲಿತಿದ್ದರು. ಎರಡು ವರ್ಷಗಳ ಹಿಂದೆ, ಓರಿನೊಕೋ ಅರಣ್ಯಗಳ ಅನತಿ ದೂರದಲ್ಲಿ ತಮ್ಮ ಪಡೆಗಳೊಂದಿಗೆ ಸಿಕ್ಕಿಹಾಕಿಕೊಂಡಿದ್ದಾಗ, ಸೈನಿಕರು ಪರಸ್ಪರರನ್ನು ಕೊಂದು ತಿಂದಾರೆಂದು ಹೆದರಿ ಕುದುರೆಗಳನ್ನು ತಿನ್ನಲು ಅನುಮತಿಯಿತ್ತಿದ್ದರು. ಆಗ ಬ್ರಿಟಿಷ್ ತುಕಡಿಯ ಒಬ್ಬ ಸೇನಾಧಿಕಾರಿಯು ನೀಡಿದ ಹೇಳಿಕೆಯ ಪ್ರಕಾರ, ಅವನೊಬ್ಬ ವಿಲಕ್ಷಣವಾದ ಪರಕೀಯ ಅಲೆಮಾರಿ ಗೊರಿಲ್ಲನಂತೆ ಕಾಣುತ್ತಿದ್ದರು. ಅವರು ಧರಿಸಿದ್ದುದು ರಷ್ಯನ್ ರಾವುತನ ಶಿರಸ್ತ್ರಾಣ, ನಾರಿನಿಂದ ಹೆಣೆದ ಹೇಸರಗತ್ತೆ ಸವಾರಿ ಪಾದರಕ್ಷೆಗಳು, ಕೆಂಪು ಅಂಚಿನ ಮತ್ತು ಚಿನ್ನದ ಗುಂಡಿಗಳಿದ್ದ ನೀಲಿ ನಿಲುವಂಗಿ, ಕೈಲಿ ಹಿಡಿದಿದ್ದುದು ಖಾಸಗಿ ಶಸ್ತ್ರಸಜ್ಜಿತನು ಬಯಲುಸೀಮೆಯವನ ಈಟಿಯಲ್ಲಿ ಹಾರಿಸಿದ್ದ ಒಂದು ಕಪ್ಪು ಬಾವುಟ, ಅದರಲ್ಲಿ ತಲೆಬುರುಡೆಯ ಕೆಳಗೆ ಅಡ್ಡಡ್ಡಲಾಗಿರಿಸಿದ ಮೂಳೆಗಳಡಿ ರಕ್ತದಲ್ಲಿ ಬರೆದಿದ್ದ "ವಿಮೋಚನೆ ಅಥವಾ ಸಾವು" ಎಂಬ ಅಕ್ಷರಗಳಿದ್ದವು.

ಸ್ಯಾನ್ ಜುವಾನ್ ದ ಪಯಾರಾದಲ್ಲಿ ಅಂದು ರಾತ್ರಿ ಅವರ ಉಡುಪು ಅಷ್ಟೇನೂ ಅಸಹ್ಯವಾಗಿರಲಿಲ್ಲ, ಆದರೆ ಪರಿಸ್ಥಿತಿಯು ಮಾತ್ರ ಉತ್ತಮವಾಗಿರಲಿಲ್ಲ. ಅದು ಅವರ ಪಡೆಗಳ ಆಗಿನ ಸ್ಥಿತಿಯನ್ನು ಮಾತ್ರವಲ್ಲ, ಅನೇಕ ಬಾರಿ ಹೀನ ಸೋಲುಗಳಿಂದ ಮೇಲೆದ್ದು ಗೆಲವು ಸಾಧಿಸಿ, ಮತ್ತೆ ಅನೇಕ ವೇಳೆ ತಮ್ಮ ಗೆಲವುಗಳ ಭಾರದಲ್ಲಿಯೇ ಕುಸಿಯುವಂತಿದ್ದ ವಿಮೋಚನಾ ಪಡೆಯ ನಾಟಕವನ್ನೂ ಪ್ರತೀಕಿಸುತ್ತಿತ್ತು. ಮತ್ತೊಂದೆಡೆ, ದೇಶಭಕ್ತರನ್ನೆಲ್ಲ ಒರೆಸಿ ಹಾಕಿ ಮತ್ತೆ ವಸಾಹತು ಆಡಳಿತವನ್ನು ಪುನರುಜ್ಜೀವಿಸಲು ಬೇಕಾದ ಸಂಪನ್ಮೂಲಗಳನ್ನು ಪಡೆದಿದ್ದ ಸ್ಪಾನಿಶ್ ಜನರಲ್ ಡಾನ್ ಪಾಬ್ಲೋ ಮಾರಿಲ್ಲೋ ಪಶ್ಚಿಮ ವೆನಿಝೂಲದ ಬಹುಭಾಗವನ್ನು

ಇನ್ನೂ ತನ್ನ ಹಿಡಿತದಲ್ಲಿಯೇ ಇರಿಸಿಕೊಂಡಿದ್ದು ಪರ್ವತಗಳ ನಡುವೆ ಬೀಡು ಬಿಟ್ಟಿದ್ದ.

ಇಂತಹ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದ ಜನರಲ್ ನಿದ್ರಾಹೀನತೆಯಿಂದಾಗಿ ಕಾರ್ಖಾನೆಯ ಭವನದ ಯಾರೂ ಇಲ್ಲದ ಕೋಣೆಗಳಲ್ಲಿ ಬತ್ತಲೆ ಓಡಾಡುತ್ತಿದ್ದರು, ಹೊಳೆಯುವ ಬೆಳುದಿಂಗಳಿನಲ್ಲಿ ಅವರ ಆಕೃತಿ ದೀಪ್ತವಾಗಿತ್ತು. ಹಿಂದಿನ ದಿನ ಸತ್ತಿದ್ದ ಬಹುತೇಕ ಕುದುರೆಗಳನ್ನು ಮನೆಯಿಂದ ಸಾಕಷ್ಟು ದೂರದಲ್ಲಿ ಸುಡಲಾಗಿತ್ತು, ಆದರೆ ಕೊಳೆತ ದುರ್ನಾತ ಇನ್ನೂ ಸಹಿಸಲಸಾಧ್ಯವಾಗಿತ್ತು. ಕಳೆದ ವಾರದ ಬಳಲಿಕೆಯ ಸಂಚಾರದ ನಂತರ ಪಡೆಗಳು ಹಾಡಿಕೊಂಡಿರಲಿಲ್ಲ, ಅಲ್ಲದೆ ಪಹರೆಯವರು ಹಸಿವಿನಿಂದ ನಿದ್ದೆ ಹೋಗುವುದನ್ನು ನಿಲ್ಲಿಸಲು ತಮಗೂ ಸಾಧ್ಯವಾಗಿರಲಿಲ್ಲ. ಆಮೇಲೆ ಇದ್ದಕ್ಕಿದ್ದಂತೆ, ಮಂಟಪದ ಆಚೆ ಕೊನೆಯ ಎದುರಿನ ಪ್ರಕಾಶಮಾನವಾದ ಬಯಲಿನಲ್ಲಿ ರಾಣಿ ಮರಿಯ ಲೂಯಿಸ ನೆಲದ ಮೇಲೆ ಕೂತಿದ್ದುದು ಕಾಣಿಸಿತು. ಹಳದಿಕಂದು ಏರುಜವ್ವನಪುಷ್ಪದಲ್ಲಿ ಅವಳು ಚಂದನದ ಗೊಂಬೆಯಂತೆ ಹೂಕಸೂತಿ ಮಾಡಿದ ಶಾಲನ್ನು ಕಾಲು ಮುಚ್ಚುವಂತೆ ಹೊದ್ದು ಕುಳಿತು ಒಂದು ನೀಳವಾದ ಸಿಗಾರ್ ಸೇದುತ್ತಿದ್ದಳು. ಅವರನ್ನು ಕಂಡು ಅವಳು ಬೆದರಿದ್ದಳು. ತನ್ನ ತೋರುಬೆರಳು–ಹೆಬ್ಬೆರಳುಗಳಿಂದ ಶಿಲುಬೆ ಆಕಾರ ಮಾಡಿ ಅವನೆಡೆಗೆ ಚಾಚಿದಳು.

"ನಿನ್ನನ್ನು ದೇವರೇ ಕಳಿಸಿದ್ದೋ, ಇಲ್ಲ ದೆವ್ವವೋ? ಏನು ಬೇಕು ನಿನಗೆ?" ಎಂದು ಕೇಳಿದಳು.

"ನೀನು" ಅವರೆಂದರು.

ಅವರು ನಕ್ಕರು, ಬೆಳುದಿಂಗಳಿನಲ್ಲಿ ಅವರ ದಂತಪಂಕ್ತಿ ಹೊಳೆದುದನ್ನವಳು ಕಂಡಳು. ಅವಳನ್ನು ಬಿಗಿದಪ್ಪಿದರು, ಅಲ್ಲಾಡದಂತೆ ಹಿಡಿದುಕೊಂಡು ಹಣೆ, ಕಣ್ಣು, ಗಲ್ಲ, ಕತ್ತುಗಳ ಮೇಲೆ ಹೂಮುತ್ತುಗಳ ಮಳೆಗರೆದು ಅವಳನ್ನು ಸುಮ್ಮನಾಗಿಸಿದ್ದರು. ಆಮೇಲೆ ಅವಳು ಹೊದ್ದಿದ್ದ ಶಾಲನ್ನು ಕಿತ್ತೆಸೆದು ನೋಡಿದಾಗ ಅವರಿಗೆ ಉಸಿರುಕಟ್ಟಿದಂತಾಯಿತು. ಅವಳೂ ಬತ್ತಲೆಯಿದ್ದಳು, ತನ್ನ ಕೋಣೆಯಲ್ಲೇ ಮಲಗುತ್ತಿದ್ದ ಅಜ್ಜಿ ಅವಳು ಸಿಗಾರ್ ಸೇದಲು ಹೊರಗೆ ಹೋಗುವುದನ್ನು ತಡೆಯಲು ಅವಳ ಬಟ್ಟೆಗಳನ್ನು ಕಳಚಿಬಿಟ್ಟಿದ್ದಳು, ಬೆಳಗಿನ ಜಾವ ಅವಳು ಶಾಲು ಹೊದ್ದೇ ಹೊರಗೆ ನುಸುಳಬಹುದೆಂಬುದು ಅವಳಿಗೆ ಹೊಳೆದಿರಲಿಲ್ಲ. ಜನರಲ್ ಅವಳನ್ನು ತಮ್ಮ ಜೋಲಿಮಂಚದೆಡೆಗೆ ಹೊತ್ತೊಯ್ದರು, ಉದ್ದಕ್ಕೂ ಎಡೆಬಿಡದೆ ಮೃದುವಾಗಿ ಮುತ್ತಿಕ್ಕುತ್ತಲೇ ಇದ್ದರು; ಅವಳು ಅದನ್ನೆಲ್ಲ ತಡೆಯಲಿಲ್ಲ, ಅದಕ್ಕೆ ಕಾರಣ ಬಯಕೆ ಅಥವಾ ಪ್ರೇಮವಲ್ಲ, ಭಯ. ಅವಳಿನ್ನೂ ಕನ್ಯೆ. ತನ್ನ ಧೈರ್ಯವನ್ನು ಒಗ್ಗೂಡಿಸಿಕೊಂಡು ಅವಳೆಂದಳು: "ನಾನೊಬ್ಬ ಗುಲಾಮಳು, ಮಹಾಸ್ವಾಮಿ."

"ಇನ್ನು ಮೇಲಲ್ಲ. ಪ್ರೇಮ ನಿನ್ನನ್ನು ಮುಕ್ತಗೊಳಿಸಿದೆ" ಎಂದರವರು.

ಈಗಾಗಲೇ ಸೊರಗಿದ್ದ ತಮ್ಮ ಭಂಡಾರದಿಂದ ಒಂದು ನೂರು ಪೆಸೋಗಳನ್ನು ಬೆಳಿಗ್ಗೆ ತಂದು ಕಾರ್ಖಾನೆ ಕಟ್ಟಡದ ಮಾಲೀಕನಿಗಿತ್ತು ಅವಳನ್ನು ಕೊಂಡುತಂದು ಷರತ್ತಿಲ್ಲದೆ ಬಿಡುಗಡೆಗೊಳಿಸಿದರು. ಅಲ್ಲಿಂದ ಹೊರಡುವ ಮುಂಚೆ ಅವಳಿಗೆ ಸಾರ್ವಜನಿಕವಾಗಿ ಉಡುಗೊರೆಯನ್ನು ನೀಡುವ ಆಸೆಯನ್ನು ತಡೆದುಕೊಳ್ಳದಾದರು. ಮನೆಯ ಹಿಂದಿನ ಅಂಗಳದಲ್ಲಿ ಗುಂಪಾಗಿದ್ದ ಸೇನಾಧಿಕಾರಿಗಳು ಇನ್ನೂ ವಧೆಯಾಗದೆ ಉಳಿದಿದ್ದ ಪ್ರಾಣಿಗಳ ಮೂಟೆಗಳ ಮೇಲೆ ಸಿಕ್ಕಿದ ಕಡೆ ಕುಳಿತಿದ್ದರು; ಅವರೂ ಅವರ ಜೊತೆಯಲ್ಲಿದ್ದರು. ಹಿಂದಿನ ರಾತ್ರಿ ತಾನೇ ಬಂದಿದ್ದ ಬ್ರಿಗೇಡಿಯರ್ ಜೋಸೆ ಆಂಟೋನಿಯೋ ಪೆಯಜ್‌ನ ಅಧೀನದಲ್ಲಿದ್ದ ಮತ್ತೊಂದು ತುಕಡಿಯು ಅವರನ್ನು ಬೀಳ್ಕೊಡಲು ಸೇರಿತ್ತು.

ಜನರಲ್ ಚಿಕ್ಕದಾದ ಒಂದು ಬೀಳ್ಕೊಡುಗೆ ಭಾಷಣ ಮಾಡಿದರು: ಅದರಲ್ಲಿ ಪರಿಸ್ಥಿತಿಯ ಬಗ್ಗೆ ಅಷ್ಟಾಗಿ ಪ್ರಸ್ತಾಪಿಸಲಿಲ್ಲ. ಸ್ವತಂತ್ರಳಾಗಿ ಪ್ರೀತಿಪಾತ್ರ ಹೆಣ್ಣಾಗಿದ್ದ ರಾಣಿ ಮರಿಯ ಲೂಯಿಸಳನ್ನು ನೋಡಿದರು. ಅವಳು ಆಗತಾನೇ ಸ್ನಾನ ಮುಗಿಸಿ, ಗುಲಾಮ ಹೆಣ್ಣು ತೊಡುವ ಅಂಚಿನಲ್ಲಿ ಕಸೂತಿ ಮಾಡಿದ ಗರಿಗರಿ ಬಿಳುಪು ಲಂಗ ಮತ್ತು ತೆಳುವಾದ ರವಿಕೆ ತೊಟ್ಟು ಬಂದಿದ್ದಳು, ಬಯಲ ಆಕಾಶದಡಿ ಚೆಲುವಾಗಿಯೂ ಕಾಂತಿಯುಕ್ತಳಾಗಿಯೂ ಕಾಣಿಸಿದಳು. ಪ್ರಸನ್ನವದನರಾಗಿ ಕೇಳಿದರು: "ಇಲ್ಲೇ ಇರ್ತೀಯೋ, ನಮ್ಮ ಜೊತೆ ಬರ್ತೀಯೋ?"

ಆಹ್ಲಾದಕಾರಿಯಾಗಿ ಮುಗುಳ್ನಗುತ್ತ ಅವಳೆಂದಳು: "ಇಲ್ಲೇ ಇರ್ತೀನಿ, ಮಹಾಸ್ವಾಮಿ."

ಅವಳ ಮಾತು ಕೇಳಿ ಎಲ್ಲರೂ ನಕ್ಕರು, ಮನೆಯ ಯಜಮಾನ, ಸ್ವಾತಂತ್ರ್ಯದ ಕಾರ್ಯಕ್ಕೆ ಮೊದಲಿನಿಂದಲೇ ತೊಡಗಿಸಿಕೊಂಡಿದ್ದ ತನ್ನ ಹಳೆಯ ಪರಿಚಿತನಾಗಿದ್ದ ಸ್ಪಾನಿಶ್ ವ್ಯಕ್ತಿ, ನೂರು ಪೆಸೋಗಳನ್ನಿಟ್ಟಿದ್ದ ಚರ್ಮದ ಪರ್ಸ್ ಒಂದನ್ನು ಅವರ ಕಡೆ ಎಸೆದಾಗ ಅಸಹಾಯಕನಾಗಿ ನಕ್ಕು ಬೀಳುತ್ತಿದ್ದ ಅದನ್ನು ಹಿಡಿದುಕೊಂಡಿದ್ದರು.

"ನಿಮ್ಮ ಉದ್ದೇಶಕ್ಕೇ ಅದನ್ನಿಟ್ಟುಕೊಳ್ಳಿ ಖಾವಂದರೇ, ಹುಡುಗಿ ಹೇಗೂ ಸ್ವತಂತ್ರಳಾದಳಲ್ಲ."

ಅನೇಕ ಬಣ್ಣಗಳ ಅಂಗಿ ತೊಟ್ಟು ಅದಕ್ಕನುಗುಣವಾದ ಸೊಗಸಾದ ಮುಖಭಾವವಿದ್ದ ಜನರಲ್ ಜೋಸೆ ಆಂಟೋನಿಯೋ ಪಯೆಜ್ ಹೃತ್ಪೂರ್ವಕವಾಗಿ ನಕ್ಕ.

"ನೋಡಿದಿರಾ ಜನರಲ್, ನಾವು ವಿಮೋಚನೆ ಮಾಡುವವರೆಂದು ನಟಿಸಿದ್ದಕ್ಕೆ ಎಂಥ ಬಹುಮಾನ ಸಿಗುತ್ತೆ ಅಂತ" ಎಂದ.

ಆ ಮಾತನ್ನು ಅವರು ಒಪ್ಪಿದರು, ಎಲ್ಲರಿಗೂ ತಮ್ಮ ಅಗಲವಾದ ಕೈ ನೀಡಿ ಬೀಳ್ಕೊಂಡರು. ಆನಂತರ ರಾಣಿ ಮರಿಯ ಲೂಯಿಸಗೆ ಕ್ರೀಡಾಪಟುವಿನಂತೆ ವಿದಾಯ ಹೇಳಿದರು; ಅದೇ ಅವಳ ಬಗ್ಗೆ ಅವರು ತಿಳಿದದ್ದು. ಜೋಸೆ ಪೆಲಾಸಿಯೋಸ್ ನೆನಪಿನ ಪ್ರಕಾರ, ಒಂದು ವರ್ಷ ಪೂರ್ತಿ ತುಂಬುವುದಕ್ಕೆ ಮುಂಚೆ ಆ ರಾತ್ರಿ ಮತ್ತೆ ಅನುಭವಕ್ಕೆ ಬರುತ್ತಿದೆ ಎಂದು ಜನರಲ್ ಹೇಳಿದ್ದರು, ಆದರೆ ಈ ಸಲ ರಾಣಿ ಮರಿಯ ಲೂಯಿಸ ಕಾಣಿಸಿಕೊಂಡಿರದಿದ್ದುದು ವಿಷಾದಕರವಾಗಿತ್ತು.

ಐದು ಗಂಟೆಗೆ ಜೋಸೆ ಪೆಲಾಸಿಯೋಸ್ ಜನರಲ್ ಅವರಿಗಾಗಿ ಕಷಾಯ ತಂದಾಗ, ಅವರು ಕಣ್ಣುಗಳನ್ನು ಬಿಟ್ಟುಕೊಂಡು ವಿಶ್ರಾಂತಿ ಪಡೆಯುತ್ತಿದ್ದುದು ಕಾಣಿಸಿತು. ಆದರೆ ಅವರು ಎದ್ದು ನಿಲ್ಲಲು ಎಷ್ಟು ಜೋರಾಗಿ ಪ್ರಯತ್ನಿಸಿದರೆಂದರೆ, ಇನ್ನೇನು ಮುಖ ಅಡಿಯಾಗಿ ಬೀಳುವುದರಲ್ಲಿದ್ದರು, ಜೊತೆಗೆ ಜೋರಾಗಿ ಕೆಮ್ಮು ಶುರುವಾಯಿತು. ತಲೆಯನ್ನು ಕೈಗಳಲ್ಲಿ ಹಿಡಿದುಕೊಂಡು ಕೆಮ್ಮುತ್ತ ಅದು ನಿಲ್ಲುವವರೆಗೂ ಜೋಲಿಮಂಚದ ಮೇಲೆಯೇ ಕುಳಿತರು. ಆಮೇಲೆ ಆವಿ ಹೊಮ್ಮುತ್ತಿದ್ದ ಕಷಾಯವನ್ನು ಕುಡಿಯತೊಡಗಿದರು, ಮೊದಲ ಗುಟುಕು ಕುಡಿಯುತ್ತಿದ್ದಂತೆಯೇ ಅವರ ಮನಃಸ್ಥಿತಿಯೂ ಸುಧಾರಿಸಿತು.

"ನನಗೆ ರಾತ್ರಿಯೆಲ್ಲ ಕ್ಯಾಸ್ಸಾಂಡ್ರೋದೆ ಕನಸು" ಎಂದರು.

ಅದು ನ್ಯೂ ಗ್ರನೆಡದ ಜನರಲ್ ಫ್ರಾನ್ಸಿಸ್ಕೋ ದ ಪೌಲ ಸಟಾಂಡರ್‌ಗೆ ಅವರಿತ್ತಿದ್ದ ಗುಪ್ತನಾಮ. ಅವರು ಹಿಂದೊಮ್ಮೆ ಆಪ್ತ ಗೆಳೆಯ ಹಾಗೂ ಎಲ್ಲ ಕಾಲಕ್ಕೂ ತನ್ನ ಪ್ರತಿರೋಧಿ, ಯುದ್ಧ ಆರಂಭವಾದಂದಿನಿಂದ ಅವರ ಸೇನಾ ಮುಖ್ಯಸ್ಥ ಮತ್ತು ಕ್ವಿಟೋ ಮತ್ತು ಪೆರುಗಳ ವಿಮೋಚನೆಗಾಗಿ ಹಾಗೂ ಬೊಲಿವಿಯದ ಸ್ಥಾಪನೆಗಾಗಿ ನಡೆದ ಹೋರಾಟಕಾಲದಲ್ಲಿ ತಾವು ಕೊಲಂಬಿಯದ ಅಧ್ಯಕ್ಷನಾಗಿ ನೇಮಿಸಿದ್ದವನು. ಕೆಲಸಕ್ಕಿಂತ ಹೆಚ್ಚು ಐತಿಹಾಸಿಕ ಕಾರಣಗಳಿಗಾಗಿ ಸಟಾಂಡರ್ ಒಬ್ಬ ಪ್ರಭಾವಶಾಲಿ ಮತ್ತು ಧೈರ್ಯವಂತ ಸೈನಿಕನೆನಿಸಿದ್ದ; ಕ್ರೌರ್ಯವೆಂದರೆ ಎಲ್ಲಿಲ್ಲದ ಆದರ, ಆದರೆ ನಾಗರಿಕ ಸೌಶೀಲ್ಯ ಮತ್ತು ಅತ್ಯುತ್ತಮ ಶೈಕ್ಷಣಿಕ ತರಬೇತಿಗಳು ಅವನ ಹಿರಿಮೆಗೆ ಕಾರಣಗಳು. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಅವನು ನಿಸ್ಸಂಶಯವಾಗಿ ಎರಡನೆಯ ಪ್ರಮುಖ ವ್ಯಕ್ತಿ, ಹಾಗೂ ಗಣರಾಜ್ಯದ ಕಾನೂನು ಕ್ರೋಡೀಕರಣದ ವಿಷಯದಲ್ಲಿ ಅತ್ಯಂತ ಪ್ರಧಾನ ವ್ಯಕ್ತಿಯಾಗಿದ್ದ. ಗಣರಾಜ್ಯದ ಮೇಲೆ ತನ್ನ ಔಪಚಾರಿಕತೆ ಮತ್ತು ಸಂಪ್ರದಾಯನಿಷ್ಠೆಗಳ ಶಾಶ್ವತ ಪ್ರಭಾವವನ್ನು ಬೀರಿದ್ದ.

ಜನರಲ್ ರಾಜೀನಾಮೆ ನೀಡಲು ಯೋಚಿಸಿದ್ದ ಅನೇಕ ಸಂರ್ಭಗಳಲ್ಲಿ ಒಮ್ಮೆ ಸಟಾಂಡರ್‌ಗೆ ಹೇಳಿದ್ದು, ತಾವು ದೃಢಮನಸ್ಸಿನಿಂದ ಅಧ್ಯಕ್ಷಗಿರಿಯನ್ನು ತೊರೆಯುತ್ತಿರುವುದಕ್ಕೆ ಕಾರಣ "ನನ್ನ ಮತ್ತೊಂದು ಭಾಗ,

ಅದೂ ಉತ್ತಮ ಭಾಗವಾದ ನೀವು ಇಲ್ಲೇ ಇರುತ್ತೀರಿ ಎಂಬುದರಿಂದ" ಎಂದು. ಅವರೆಂದೂ, ಉದ್ದೇಶಪೂರ್ವಕವಾಗಿಯಾಗಲೀ ಪರಿಸ್ಥಿತಿಯ ಒತ್ತಡದಿಂದಾಗಲೀ, ಯಾರ ಮೇಲೂ ಅಷ್ಟೊಂದು ಭರವಸೆಯನ್ನು ಇರಿಸಿದವರಲ್ಲ. ಸಟಾಂಡರ್‌ಗೆ 'ಕಾನೂನು ನಿರ್ಮಾಪಕ' ಎಂಬ ಬಿರುದನ್ನು ನೀಡಿ ಗೌರವಿಸಿದ್ದು ಅವರೇ. ಆದರೆ ಈ ಎಲ್ಲ ಸದ್ಗುಣಗಳಿಂದ ಕೂಡಿದ್ದ ಆ ವ್ಯಕ್ತಿ ಕಳೆದೆರಡು ವರ್ಷಗಳಿಂದ ದೇಶಭ್ರಷ್ಟನಾಗಿ ಪ್ಯಾರಿಸ್‌ನಲ್ಲಿದ್ದ, ಅದಕ್ಕೆ ಕಾರಣ ಜನರಲ್ ಅನ್ನು ಕೊಲೆಗೈಯುವ ಯತ್ನದಲ್ಲಿ ಸಹಾಯಕನಾಗಿದ್ದರೆಂಬ ಸಾಬೀತಾಗದಿದ್ದ ಆರೋಪ.

ನಡೆದಿದ್ದು ಇಷ್ಟು: ೧೮೨೮ ನೇ ಇಸವಿಯ ಸೆಪ್ಟೆಂಬರ್ ೨೫ ರಂದು, ಸರಿಯಾಗಿ ಮಧ್ಯರಾತ್ರಿ, ಹನ್ನೆರಡು ಮಂದಿ ನಾಗರಿಕರು ಮತ್ತು ಇಪ್ಪತ್ತಾರು ಮಂದಿ ಸೈನಿಕರು ಸಂಟಾ ಫ಼ ದ ಬೊಗೋಟದ ಸರ್ಕಾರಿ ಭವನದ ಭಾರಿ ಗೇಟನ್ನು ಕಿತ್ತೊಗೆದು ಅಧ್ಯಕ್ಷರ ಎರಡು ಬೇಟೆ ನಾಯಿಗಳ ಕತ್ತು ಕತ್ತರಿಸಿ, ಅನೇಕ ಮಂದಿ ಪಹರೆಯವರನ್ನು ಗಾಯಗೊಳಿಸಿ, ಕೈಗತ್ತಿಯಿಂದ ಕ್ಯಾಪ್ಟನ್ ಆಂಡ್ರೇ ಇಬಾರಾನ ಕೈ ಕತ್ತರಿಸಿ, ಬ್ರಿಟಿಷ್ ತುಕಡಿಯ ಸದಸ್ಯನಾದ ಸ್ಕಾಟ್ಲೆಂಡ್‌ನ ಕರ್ನಲ್ ವಿಲಿಯಂ ಫ಼ರ್ಗ್ಯುಸನ್ ಹಾಗೂ ಅಧ್ಯಕ್ಷರೇ ಸೀಸರ್‌ನಷ್ಟು ಧೈರ್ಯಶಾಲಿಯೆಂದು ಹೊಗಳಿದ್ದ ಅವರ ಒಬ್ಬ ಆಪ್ತ ಸಹಾಯಕನನ್ನು ಗುಂಡಿಟ್ಟು ಕೊಂದು, "ವಿಮೋಚನೆ ಚಿರಾಯುವಾಗಲಿ" "ದುರ್ಮಾರ್ಗಿ ಸಾಯಲಿ" ಎಂದು ಕೂಗುತ್ತ ಅಧ್ಯಕ್ಷರ ಮಲಗುವ ಕೋಣೆಯನ್ನು ಸೇರಿದ್ದರು.

ಒಚಾನಾ ಸಮಾವೇಶದಲ್ಲಿ ಸಟಾಂಡರ್‌ವಾದಿಗಳು ಗೆಲವು ಪಡೆಯುವುದನ್ನು ನಿರೋಧಿಸಲು ಮೂರು ತಿಂಗಳ ಹಿಂದೆ ಅಧ್ಯಕ್ಷರು ಅಸಾಧಾರಣ ಅಧಿಕಾರಗಳನ್ನು ಪಡೆದು ಸರ್ವಾಧಿಕಾರಿಯಾಗುವ ಬಯಕೆಯ ಬಗ್ಗೆ ಪ್ರಸ್ತಾಪಿಸಿ ಬಂಡಾಯಗಾರರು ತಮ್ಮ ಕೃತಿಗೆ ಸಮರ್ಥನೆ ನೀಡುತ್ತಿದ್ದರು. ಏಳು ವರ್ಷಗಳ ಕಾಲ ಸಟಾಂಡರ್ ಅಲಂಕರಿಸಿದ್ದ ಗಣರಾಜ್ಯ ಉಪಾಧ್ಯಕ್ಷ ಪದವಿಯನ್ನೇ ರದ್ದುಗೊಳಿಸಲಾಗಿತ್ತು. ತನಗೆ ವಿಶಿಷ್ಟವೆನಿಸಿದ ಶೈಲಿಯಲ್ಲಿ ಸಟಾಂಡರ್ ಸ್ವತಃ ಅದನ್ನು ಗೆಳೆಯನೊಬ್ಬನಿಗೆ ಒಂದು ವಾಕ್ಯದಲ್ಲಿ ತಿಳಿಸಿದ್ದ: "೧೮೨೧ ರ ಸಂವಿಧಾನದ ಅವಶೇಷಗಳಡಿಯಲ್ಲಿ ಸಮಾಧಿಗೊಳ್ಳುವ ಸಂತೋಷ ನನ್ನದಾಗಿದೆ." ಅವನನ್ನು ವಾಷಿಂಗ್‌ಟನ್‌ಗೆ ಪೂರ್ಣಾಧಿಕಾರದ ರಾಯಭಾರಿಯಾಗಿ ನೇಮಿಸಲಾಗಿತ್ತು, ಆದರೆ ಅವನು ತಮ್ಮ ಪ್ರಯಾಣವನ್ನು ಅನೇಕ ಸಲ ಮುಂದೂಡಿದ್ದ, ಅದಕ್ಕೆ ಕಾರಣ ಪಿತೂರಿ ಸಫಲವಾಗುವುದೆಂಬ ನಿರೀಕ್ಷೆ.

ಜನರಲ್ ಮತ್ತು ಮ್ಯಾನುಯೆಲ ಸಯೆನ್‌ಜ಼್ ಆಗ ತಾನೇ ರಾಜಿ ಸಂಧಾನವಾದ ರಾತ್ರಿಯನ್ನು ನೆನಪಿಸಿಕೊಳ್ಳಲು ತೊಡಗಿದ್ದರು.

ವಾರಾಂತ್ಯವನ್ನವರು ಎರಡು ಲೀಗ್ ದೂರವಿದ್ದ ಸೊಆಚ ಎಂಬ ಹಳ್ಳಿಯಲ್ಲಿ ಕಳೆದು ಸೋಮವಾರ ಬೇರೆ ಬೇರೆ ಗಾಡಿಗಳಲ್ಲಿ ವಾಪಸಾಗಿದ್ದರು; ಅದಕ್ಕೆ ಕಾರಣ ತಮ್ಮ ಕೊಲೆ ಯತ್ನದ ಬಗ್ಗೆ ಕೊಟ್ಟ ಎಚ್ಚರಿಕೆಯನ್ನವರು ಕಿವಿಗೆ ಹಾಕಿಕೊಳ್ಳದಿದ್ದುದು. ಎಂದಿಗಿಂತ ಬಿರುಸಾದ ಪ್ರಣಯ ಕಲಹ; ಎಲ್ಲರೂ ವದಂತಿಯ ಬಗ್ಗೆ ಮಾತಾಡಿಕೊಳ್ಳುತ್ತಿದ್ದರೂ ಅವರು ಮಾತ್ರ ಅದನ್ನು ನಂಬಿರಲಿಲ್ಲ. ಆ ರಾತ್ರಿ ರಸ್ತೆಯ ಆಚೆ ಬದಿಯ ಮನೆಗೆ ಸ್ಯಾನ್ ಕಾರ್ಲೋಸ್ ಅರಮನೆಯಿಂದ ಅವರು ಒತ್ತಾಯಪೂರ್ವಕವಾಗಿ ಕಳಿಸಿದ್ದ ಸಂದೇಶಗಳನ್ನು ಅವಳು ಸ್ವೀಕರಿಸಿರಲಿಲ್ಲ; ಆದರೆ ಮೂರು ತುರ್ತು ಸಂದೇಶಗಳ ನಂತರ ಒಂಬತ್ತು ಗಂಟೆಗೆ ಷೂಗಳ ಮೇಲೆ ನೀರು ಒಳಸೇರದ ಬೂಟುಗಳನ್ನು ಧರಿಸಿ, ಶಾಲನ್ನು ತಲೆಯ ಮೇಲೆ ಹೊದ್ದು ಮಳೆಯಿಂದ ನೀರು ತುಂಬಿಕೊಂಡಿದ್ದ ರಸ್ತೆಯನ್ನು ದಾಟಿ ಬಂದಳು. ಸ್ನಾನದ ತೊಟ್ಟಿಯ ಸುಗಂಧಭರಿತ ನೀರಲ್ಲಿ ಅವರು ಮುಖ ಮೇಲೆತ್ತಿಕೊಂಡು ತೇಲುತ್ತಿದ್ದುದು ಕಾಣಿಸಿತು. ಸಹಾಯಕ್ಕೆ ಜೋಸೆ ಪೆಲಾಸಿಯೋಸ್ ಇರಲಿಲ್ಲ. ಆ ರೀತಿ ಮಲಗಿ ಪ್ರಸನ್ನತೆಯಿಂದ ಧ್ಯಾನ ಮಾಡುತ್ತಿದ್ದುದನ್ನು ಹಿಂದೆ ಅನೇಕ ಬಾರಿ ಕಂಡಿದ್ದುದರಿಂದ ಅವರು ಸತ್ತಿರುವನೆಂದು ಅವಳು ಭಾವಿಸಲಿಲ್ಲ. ಹೆಜ್ಜೆಯ ಸಪ್ಪುಳದಿಂದಲೇ ಅವಳನ್ನು ಗುರುತಿಸಿ ಕಣ್ಣು ತೆರೆಯದೆಯೇ ಹೇಳಿದ್ದ: “ಬಂಡಾಯ ಸನ್ನಿಹಿತವಾಗಿದೆ.”

ಮಾತಿನ ವ್ಯಂಗ್ಯವೂ ಅವರ ಕೋಪವನ್ನು ಮರೆಮಾಚಿರಲಿಲ್ಲ.

“ಅಭಿನಂದನೆಗಳು. ನೀವು ಎಚ್ಚರಿಕೆಯ ಮಾತುಗಳನ್ನು ಹೀಗೆ ಹೃತ್ಪೂರ್ವಕವಾಗಿ ಸ್ವೀಕರಿಸುವುದರಿಂದ ಹತ್ತು ಬಂಡಾಯಗಳೂ ಆಗಬಹುದು” ಎಂದಳು

“ನಾನು ನಂಬುವುದು ಶಕುನಗಳನ್ನು ಮಾತ್ರ” ಅವರ ಉತ್ತರ.

ಅವರು ಹಾಗೆ ತಮಾಷೆ ಮಾಡಿದ್ದಕ್ಕೆ ಕಾರಣ, ಅರಮನೆಯ ಪಹರೆಯವರನ್ನು ವಂಚಿಸಲು ಪಿತೂರಿಗಾರರಿಗೆ ಆಗಲೇ ರಾತ್ರಿಯ ಹೊತ್ತಿನ ಸಂಕೇತವನ್ನು ಹೇಳಿದ್ದ ಅವರ ಮುಖ್ಯಾಧಿಕಾರಿಯು ಸಂಚು ವಿಫಲವಾದುದನ್ನು ತಿಳಿಸಿದ್ದ. ಹೀಗಾಗಿ ಸ್ನಾನದ ತೊಟ್ಟಿಯಿಂದ ಮೇಲೆದ್ದು ಬರುವಾಗ ಅವರ ಮನಸ್ಸು ಪ್ರಫುಲ್ಲವಾಗಿತ್ತು.

“ಯೋಚನೆ ಮಾಡಬೇಡ, ಆ ಕಿಂಪುರುಷರಿಗೆ ಹೆದರಿಕೆ ಉಂಟಾಗಿರಬೇಕು.”

ಅವರು ಪೂರ್ತಿ ಬತ್ತಲಾಗಿದ್ದರೆ, ಅವಳು ಅರೆಬರೆ ಬಟ್ಟೆಯಲ್ಲಿದ್ದಳು. ಆಗ ತಾನೇ ಹಾಸಿಗೆ ಸೇರಿ ಅವರು ಪ್ರಣಯಕೇಳಿಯಲ್ಲಿ ಮಗ್ನರಾಗಿದ್ದರು; ಅವರ ಕಿವಿಗೆ ಮೊದಲು ಘೋಷಣೆಗಳು ಆನಂತರ ಗುಂಡಿನ ಸದ್ದು, ಕೊನೆಯಲ್ಲಿ ನಿಷ್ಠಾವಂತ ಸಿಪಾಯಿಮನೆಗಳಿಂದ ತೋಪುಗಳ ಅನುರಣನೆಯ

ಶಬ್ದ ಕೇಳಿಸಿತ್ತು. ಆದಷ್ಟೂ ಬೇಗ ಉಡುಪು ಧರಿಲು ಮ್ಯಾನ್ಯುಯೆಲ ಅವರಿಗೆ ನೆರವಾಗಿದ್ದಳು; ಜನರಲ್ ತಮ್ಮ ಬಳಿಯಿದ್ದ ಏಕೈಕ ಷೂಗಳನ್ನು ಪಾಲಿಶ್‌ಗೆಂದು ಕಳಿಸಿದ್ದರಿಂದ ನೀರು ಒಳಸೇರದ ತನ್ನ ಬೂಟುಗಳನ್ನೇ ಅವರಿಗೆ ತೊಡಿಸಿ, ಒಂದು ಕಿರುಗತ್ತಿ ಮತ್ತು ಪಿಸ್ತೂಲುಗಳೊಡನೆ ಬಾಲ್ಕನಿಯ ಮೂಲಕ ಅವರು ತಪ್ಪಿಸಿಕೊಂಡು ಹೋಗಲು ಸಹಾಯಮಾಡಿದಳು, ಆದರೆ ಮಳೆಯಿಂದ ರಕ್ಷಣೆಯಿರಲಿಲ್ಲ. ರಸ್ತೆಯನ್ನು ಸೇರಿದ ತಕ್ಷಣ ಅವರು ಪಿಸ್ತೂಲಿನ ಕುದುರೆಯನ್ನೊತ್ತಿ ತನ್ನಡೆಗೆ ಬರುತ್ತಿದ್ದ ನೆರಳಿನ ಕಡೆ ಗುರಿಯಟ್ಟು ಹಿಡಿದುಕೊಂಡು "ಅಲ್ಲಿ ಹೋಗುತ್ತಿರುವವರು ಯಾರು?" ಎಂದರು. ಅವನು ತಮ್ಮ ಮನೆವಾರ್ತೆಗಾರ, ಮನೆಗೆ ವಾಪಸಾಗುತ್ತಿದ್ದ, ತನ್ನ ಯಜಮಾನರನ್ನು ಕೊಲೆ ಮಾಡಿದ್ದಾರೆ ಎಂಬ ಸುದ್ದಿ ಕೇಳಿ ದುಃಖದಿಂದ ತತ್ತರಿಸಿದ್ದ. ಕೊನೆಯವರೆಗೂ ಅವರ ವಿಧಿಯನ್ನು ಹಂಚಿಕೊಳ್ಳಲು ನಿರ್ಧರಿಸಿದ್ದ ಜೋಸೆ ಪೆಲಾಸಿಯೋಸ್ ಸ್ಯಾನ್ ಆಗಸ್ಟಿನ್ ನದಿಗೆ ಅಡ್ಡಲಾಗಿ ಕಟ್ಟಿದ್ದ ಕಾರ್ಮೆನ್ ಸೇತುವೆಯಡಿ ತೂಗುರೆಂಬೆಗಳ ನಡುವೆ ಅವರೊಡನೆ ಅವಿತುಕೊಂಡ; ಸ್ವಲ್ಪ ಹೊತ್ತಿಗೆ ಅವರ ನಿಷ್ಠಾವಂತ ಪಡೆಗಳು ದಂಗೆಯನ್ನಡಗಿಸಿದ್ದವು.

ಹಿಂದೆಯೂ ಅನೇಕ ಐತಿಹಾಸಿಕ ತುರ್ತು ಸಂದರ್ಭಗಳಲ್ಲಿ ಇದೇ ಬಗೆಯ ವಿವೇಚನೆ ಮತ್ತು ಧೈರ್ಯಗಳನ್ನು ಪ್ರದರ್ಶಿಸಿದ್ದ ಮ್ಯಾನ್ಯುಯೆಲ ಸಯೆನ್‌ಝ್ ಮಲಗುವ ಮನೆಯ ಬಾಗಿಲ್ಲನ್ನೊಡೆದುಕೊಂಡು ಬಂದ ದಾಳಿಕೋರರನ್ನು ಎದುರಿಸಿದ್ದಳು. ಅಧ್ಯಕ್ಷನೆಲ್ಲಿ ಎಂದು ಅವರು ಕೇಳಿದಾಗ, ಸಭಾಭವನದಲ್ಲಿರುವರೆಂದು ಉತ್ತರಿಸಿದ್ದಳು. ಈ ಚಳಿಗಾಲದಲ್ಲಿಯೂ ಬಾಲ್ಕನಿಯ ಬಾಗಿಲೇಕೆ ತೆರೆದಿದೆ ಎಂದು ಪ್ರಶ್ನಿಸಿದಾಗ, ಬೀದಿಯಲ್ಲಿ ಏನೋ ಶಬ್ದವಾಗುತ್ತಿದ್ದುದನ್ನು ಕೇಳಿ ಏನಾಗಿದೆಯೋ ಎಂದು ನೋಡಲು ಹಾಗೆ ಮಾಡಿದ್ದುದಾಗಿ ತಿಳಿಸಿದ್ದಳು. ಹಾಸಿಗೆ ಬೆಚ್ಚಗಿದೆಯಲ್ಲ ಎಂದು ಆಶ್ಚರ್ಯ ವ್ಯಕ್ತಪಡಿಸಿದಾಗ, ಅಧ್ಯಕ್ಷರಿಗಾಗಿ ಕಾಯುತ್ತ ಬಟ್ಟೆ ಬದಲಾಯಿಸದೆ ತಾನು ಉರುಳಿಕೊಂಡಿದ್ದುದಾಗಿ ವಿವರಿಸಿದ್ದಳು. ಹೀಗೆ ತನ್ನ ಉತ್ತರಗಳಿಂದ ಕಾಲಹರಣ ಮಾಡುವಾಗ, ವ್ಯಾಗನ್ ಡ್ರೈವರ್‌ಗಳು ಸೇದುವ ಅಗ್ಗದ ಸಿಗಾರ್ ಅನ್ನು ಸೇದುತ್ತ ದಟ್ಟವಾದ ಹೊಗೆಯನ್ನುಗುಳಿ ಕೋಣೆಯಲ್ಲಿ ಇನ್ನೂ ಹರಡಿಕೊಂಡಿದ್ದ ಕೊಲೋನ್‌ನ ವಾಸನೆಯನ್ನು ಮರೆಮಾಚಿದ್ದಳು.

ಜನರಲ್ ರಫೇಲ್ ಊರ್ಡಾನೆಟನ ಅಧ್ಯಕ್ಷತೆಯಲ್ಲಿ ಆನಂತರ ರಚಿತವಾಗಿದ್ದ ಒಂದು ತನಿಖಾ ಸಮಿತಿಯು ಈ ಪಿತೂರಿಯ ಹಿಂದೆ ಜನರಲ್ ಸಟಾಂಡರ್ ಕೈವಾಡವಿತ್ತೆಂದು ಕಂಡುಹಿಡಿದು ಅವನಿಗೆ ಮರಣದಂಡನೆಯನ್ನು ವಿಧಿಸಿತ್ತು. ಕೊಲೆಯ ಯತ್ನದಲ್ಲಿ ವಹಿಸಿದ ಪಾತ್ರಕ್ಕಿಂತಲೂ ಹೆಚ್ಚಾಗಿ, ಮೈಮೇಲೆ ಅಂಗಿಯಿಲ್ಲದೆ ಹರಿದಿದ್ದ ಹಾಗೂ ಪೂರ್ತಿ ನೆಂದುಹೋಗಿದ್ದ ನಿಲುವಂಗಿಯನ್ನು ತೊಟ್ಟು, ಸೈನಿಕ ಪಡೆಗಳು

ಹಾಗೂ ಸುತ್ತಮುತ್ತಲ ಪ್ರದೇಶಗಳಿಂದ ದಂಡುದಂಡಾಗಿ ಕೊಲೆಯತ್ನ ಮಾಡಿದವರಿಗೆ ಮರಣಶಿಕ್ಷೆ ವಿಧಿಸಬೇಕೆಂದು ಕೂಗುತ್ತ ಬಂದಿದ್ದ ಜನಸಾಮಾನ್ಯರ ಜಯಘೋಷದ ನಡುವೆ ಕುದುರೆಯ ಮೇಲೆ ಸೋನೆ ಮಳೆಯಲ್ಲಿ ತೋಯುತ್ತ ಪ್ರಮುಖ ಚೌಕದಲ್ಲಿ ನಿಂತಿದ್ದ ಅಧ್ಯಕ್ಷರ ಮುಂದೆ ಕಾಣಿಸಿಕೊಂಡು ಅವರನ್ನು ಆಲಂಗಿಸಿಕೊಂಡು ಅಭಿನಂದಿಸಿದವರಲ್ಲಿ ಮೊದಲಿಗನಾಗಿದ್ದ ಸಟಾಂಡರ್‌ನ ನಯವಂಚಕತನಕ್ಕೆ ಆ ದಂಡನೆಯು ಸೂಕ್ತವಾದುದೆಂದು ಅವರ ವಿರೋಧಿಗಳೂ ಹೇಳಿದರು. “ಎಲ್ಲ ಸಂಚುಗಾರರಿಗೂ ತಕ್ಕಮಟ್ಟಿಗಿನ ಶಿಕ್ಷೆ ಆಗುವುದು. ಸಟಾಂಡರ್ ಪ್ರಮುಖ ಅಪರಾಧಿ, ಹಾಗೆಯೇ ತುಂಬ ಅದೃಷ್ಟವಂತ, ಯಾಕೆಂದರೆ ನನ್ನ ಔದಾರ್ಯವೇ ಅವನನ್ನು ಉಳಿಸಿದೆ” ಎಂದು ಫೀಲ್ಡ್ ಮಾರ್ಷಲ್ ಸ್ಯೂಕ್ರ್‌ಗೆ ಬರೆದ ಪತ್ರದಲ್ಲಿ ಜನರಲ್ ತಿಳಿಸಿದ್ದರು. ವಾಸ್ತವವಾಗಿಯೂ, ಅವರು ತನ್ನ ಪರಮಾಧಿಕಾರವನ್ನು ಬಳಸಿಕೊಂಡು ಮರಣದಂಡನೆಯನ್ನು ದೇಶಭ್ರಷ್ಟತೆಯನ್ನಾಗಿಸಿ ಪ್ಯಾರಿಸ್‌ಗೆ ಕಳಿಸುವಂತೆ ಬದಲಾಯಿಸಿದ್ದರು. ಮತ್ತೊಂದೆಡೆ, ಕಾಟ್ರಾಜೆನ ದ ಇಂಡಿಯಾಸ್‌ದಲ್ಲಿ ನಡೆಸಿದ ವಿಫಲ ಬಂಡಾಯಕ್ಕಾಗಿ ಸಾಕ್ಷ್ಯಾಧಾರಗಳು ಸಮರ್ಪಕವಾಗಿಲ್ಲದಿದ್ದರೂ ಬಂಧನದಲ್ಲಿದ್ದ ಅಡ್ಮಿರಲ್ ಜೋಸೆ ಪ್ರುಡೆನ್ಸಿಯೋ ಪ್ಯಾಡಿಲ್ಲಾಗೆ ಗುಂಡಿಕ್ಕಲಾಯಿತು.

ಜನರಲ್ ಸಟಾಂಡರ್ ಬಗ್ಗೆ ತನ್ನ ಯಜಮಾನರ ಕನಸು ಯಾವಾಗ ನಿಜ ಯಾವಾಗ ಅವಾಸ್ತವ ಎಂಬುದು ಜೋಸೆ ಪೆಲಾಸಿಯೋಸ್‌ಗೆ ತಿಳಿಯಲಿಲ್ಲ. ತೆರೆದ ಪುಸ್ತಕವೊಂದನ್ನು ತನ್ನ ಡೊಳ್ಳುಹೊಟ್ಟೆಯ ಮೇಲೆ ಇಟ್ಟುಕೊಂಡು, ಓದುವುದರ ಬದಲು ಅದರ ಹಾಳೆಗಳನ್ನು ಒಂದೊಂದಾಗಿ ಕೀಳುತ್ತ ಬಾಯಗೆ ಹಾಕಿಕೊಂಡು ಮಹಾ ಆನಂದದಿಂದ ಮೇಕೆಯಂತೆ ಜೋರಾಗಿ ಸದ್ದುಮಾಡುತ್ತ ಸಟಾಂಡರ್ ಅಗಿದು ತಿಂದುದನ್ನು ಕನಸಿನಲ್ಲಿ ಕಂಡುದಾಗಿ ಒಮ್ಮೆ ಅವರು ಗುಯಾಕಿಲ್‌ನಲ್ಲಿ ಹೇಳಿದ್ದರು. ಮತ್ತೊಂದು ಸಲ, ಕ್ಯೂಕುರದಲ್ಲಿ, ಅವನ ಸುತ್ತ ಜಿರಲೆಗಳಿದ್ದಂತೆ ಕನಸು ಕಂಡುದಾಗಿ ಹೇಳಿದ್ದರು. ಮತ್ತೂ ಒಂದು ಬಾರಿ, ಸಂಟಾ ಫ಼ ದ ಬೊಗೋಟದ ಬಳಿಯ ತೋಟದಲ್ಲಿ ತಾವಿಬ್ಬರೂ ಒಟ್ಟಿಗೇ ಊಟಮಾಡುತ್ತಿರುವಾಗ, ಜನರಲ್ ಸಟಾಂಡರ್ ಊಟ ಮಾಡಲು ಅಡ್ಡಿ ಮಾಡುತ್ತಿದ್ದ ತನ್ನ ಕಣ್ಣುಗುಡ್ಡೆಗಳನ್ನು ತಾನೇ ಕಿತ್ತುಕೊಂಡು ಮೇಜಿನ ಮೇಲಿಟ್ಟಂತೆ ಕನಸಿನಲ್ಲಿ ಕಂಡು ಕಿಟಾರನೆ ಕಿರಿಚಿಕೊಳ್ಳುತ್ತ ಎಚ್ಚರಗೊಂಡಿದ್ದರು. ಮತ್ತೊಮ್ಮೆ, ಗುಅಡುಅಸ್ ಬಳಿ ಮಲಗಿದ್ದ ಜನರಲ್ ತಾವು ಸಟಾಂಡರ್‌ನನ್ನು ಕನಸಿನಲ್ಲಿ ಕಂಡುದಾಗಿ ಬೆಳಗಿನ ಜಾವ ಎದ್ದು ಕುಳಿತಾಗ,

ಜೋಸೆ ಪೆಲಾಸಿಯೋಸ್ ಆ ಕನಸಿನ ವಿವರಗಳನ್ನು ಕೇಳದೆ, ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸಿದ್ದ.

"ಅವರ ಮತ್ತು ನಮ್ಮ ನಡುವೆ ಸಾಗರದಷ್ಟು ವ್ಯತ್ಯಾಸವಿದೆ" ಎಂದ. ಆದರೆ ಜನರಲ್ ತೀಕ್ಷ್ಣವಾದ ನೋಟ ಬೀರಿ ಅವನನ್ನು ಸುಮ್ಮನಾಗಿಸಿದರು.

"ಈಗಲ್ಲ, ಆ ಮೂರ್ಖ ಸೂಳೆಮಗ ಜೋಕಿಮ್ ಮಾಸ್ಕ್ವೇರ ವಾಪಸು ಬರಲು ಅವಕಾಶ ನೀಡ್ತಾನೆ" ಎಂದು ವಿವರಿಸಿದ.

ಅಧಿಕಾರತ್ಯಾಗವು ಮರ್ಯಾದೆಯ ಪ್ರಶ್ನೆಯಾಗಿ ತೋರಿ ಕಳೆದ ಬಾರಿ ದೇಶಕ್ಕೆ ವಾಪಸ್ಸಾದಂದಿನಿಂದ ಆ ಯೋಚನೆ ಅವರ ಮನಸ್ಸನ್ನು ಗಾಸಿಗೊಳಿಸಿತ್ತು. "ಸ್ಯಾನ್ ಬಾರ್ಟೋಲೋಮಿ ಅಕಾಡೆಮಿಯ ಕೈಲಿ ನನ್ನ ಹಿರಿಮೆಯನ್ನು ಒಪ್ಪಿಸುವ ಅವಮಾನಕ್ಕಿಂತ ನಾನು ದೇಶಭ್ರಷ್ಟತೆಯನ್ನೋ ಸಾವನ್ನೋ ಇಷ್ಟಪಡುತ್ತೇನೆ" ಎಂದು ಆಗ ಜೋಸೆ ಪೆಲಾಸಿಯೋಸ್‌ಗೆ ಹೇಳಿದ್ದರು. ಆದರೆ, ಔಷಧದಲ್ಲಿಯೂ ತನ್ನದೇ ಆದ ವಿಷವಿತ್ತು, ತಮ್ಮ ನಿರ್ಧಾರ ಸನಿಹವಾದಂತೆ, ತಾವು ಹೋದ ತಕ್ಷಣ ಕುತರ್ಕಿ ವಕೀಲರ ಗುಂಪಿನ ಮೇಧಾವಿ ಉತ್ಪನ್ನವಾದ ಜನರಲ್ ಸಟಾಂಡರ್ ಅನ್ನು ದೇಶಭ್ರಷ್ಟತೆಯಿಂದ ಮುಕ್ತಗೊಳಿಸಿ ವಾಪಸು ಕರೆಸುತ್ತಾರೆಂಬುದೂ ಅಷ್ಟೇ ಖಚಿತವಾಗತೊಡಗಿತ್ತು.

"ಅವನೊಬ್ಬ ನಯವಂಚಕ."

ಅವರಲ್ಲೀಗ ಜ್ವರ ಇರಲಿಲ್ಲ. ತಾವು ಬಹಳ ಗಟ್ಟಿಯಾಗಿದ್ದೇನೆಂದು ಅನ್ನಿಸಿ, ಪೆನ್ ಮತ್ತು ಕಾಗದ ಕೊಡುವಂತೆ ಜೋಸೆ ಪೆಲಾಸಿಯೋಸ್‌ಗೆ ಹೇಳಿದರು. ಅವು ಬಂದಾಗ, ಕನ್ನಡಕವನ್ನು ಹಾಕಿಕೊಂಡು ಮ್ಯಾನ್ಯುಯೆಲ ಸಯೆನ್ಝ್‌ಗೆ ಆರು ಸಾಲುಗಳ ಪತ್ರವನ್ನು ತಾವೇ ಬರೆದರು. ಅವರ ಇಂಥ ಲಹರಿಯ ವರ್ತನೆಗಳಿಗೆ ಒಗ್ಗಿಹೋಗಿದ್ದ ಜೋಸೆ ಪೆಲಾಸಿಯೋಸ್ ಅಂಥವರಿಗೂ ಇದು ವಿಚಿತ್ರವಾಗಿ ಕಾಣುವುದು ಖಂಡಿತವಾಗಿತ್ತು, ಇದನ್ನು ಯಾವುದಕ್ಕೋ ಮುನ್ಸೂಚನೆಯಂತೆಯೋ ಅದಮ್ಯವಾದ ಸ್ಫೂರ್ತಿಯ ಆವೇಶವೆಂದೋ ಭಾವಿಸಬೇಕಾಗಿತ್ತು. ಏಕೆಂದರೆ ಅದು ತಮ್ಮ ಜೀವನದಲ್ಲಿ ಇನ್ನೆಂದೂ ಪತ್ರವನ್ನು ಬರೆಯಬಾರದೆಂದು ಅವರು ಹಿಂದಿನ ಶುಕ್ರವಾರ ತಾನೇ ತೆಗೆದುಕೊಂಡಿದ್ದ ನಿರ್ಧಾರಕ್ಕೆ ವಿರುದ್ಧವಾಗಿತ್ತು; ಅಲ್ಲದೆ ಅದು ಯಾವುದೋ ಹೊತ್ತಿನಲ್ಲಿ ತಮ್ಮ ಕಾರ್ಯದರ್ಶಿಗಳನ್ನೆಬ್ಬಿಸಿ ಪತ್ರವ್ಯವಹಾರದಲ್ಲಿ ತೊಡಗಿಸುವ ಅಥವಾ ಘೋಷಣಾಪತ್ರವನ್ನು ಹೇಳಿ ಬರೆಸುವ ಅಥವಾ ತಮ್ಮ ನಿದ್ರಾಹೀನತೆಯ ಕಾಲದಲ್ಲಿ ಅಸ್ತವ್ಯಸ್ತವಾಗಿ ಮೂಡಿ ಬಂದಿದ್ದ ಆಲೋಚನೆಗಳನ್ನು ಕ್ರಮಬದ್ಧವಾಗಿ ಜೋಡಿಸುವ ಅವರ ರೂಢಿಗೂ ವಿರುದ್ಧವಾಗಿತ್ತು. ಮತ್ತಷ್ಟು ವಿಚಿತ್ರವಾಗಿ ಕಾಣಿಸಿದ್ದು ಅದೇನೂ ಅಂತಹ ತುರ್ತು ಕಾಗದವಾಗಿರದಿದ್ದುದು; ತಾವು ಬೀಳ್ಕೊಡುವಾಗ ಹೇಳಿದ್ದ

ಮಾತುಗಳಿಗೆ ಅವರು ಒಂದು ವಾಕ್ಯ ಮಾತ್ರ ಸೇರಿಸಿದ್ದರು: "ನೀನು ಮಾಡುವ ಕೆಲಸದ ವಿಷಯದಲ್ಲಿ ಜಾಗರೂಕಳಾಗಿರು; ಇಲ್ಲಿದ್ದರೆ ನಿನ್ನ ವಿನಾಶ ನಮ್ಮಿಬ್ಬರ ವಿನಾಶವೂ ಆಗುತ್ತದೆ." ಯೋಚಿಸದೆಯೇ ಬರೆದದ್ದೆಂಬಂತೆ ಅದನ್ನು ಅಡ್ಡಾದಿಡ್ಡಿ ಅಕ್ಷರಗಳಲ್ಲಿ ಬರೆದು ಮುಗಿಸಿ, ಪತ್ರವನ್ನು ಕೈಲಿ ಹಿಡಿದು ಯಾವುದೋ ಯೋಚನೆಯಲ್ಲಿ ಮಗ್ನರಾಗಿ ಇನ್ನೂ ಜೋಲಿಮಂಚದಲ್ಲಿ ತೂಗಾಡುತ್ತಿದ್ದರು.

"ಸಮ್ಮೋಹಕ ಪ್ರೇಮತೀವ್ರತೆಗೆ ಅಪಾರ ಶಕ್ತಿ" ಎಂದು ನೀಳವಾಗಿ ಉಸಿರು ಬಿಟ್ಟು, "ಯಾರು ಹೇಳಿದ್ದು ಅದು?" ಎಂದು ಕೇಳಿದರು.

"ಯಾರೂ ಅಲ್ಲ" ಎಂದುತ್ತರಿಸಿದ ಜೋಸೆ ಪೆಲಾಸಿಯೋಸ್.

ಅವನಿಗೆ ಓದುಬರಹ ಬರುತ್ತಿರಲಿಲ್ಲ; ವಿದ್ಯೆ ಕಲಿಯಲು ಅವನು ಇಷ್ಟಪಟ್ಟಿರಲಿಲ್ಲ; ಕತ್ತೆಗಿರುವುದಕ್ಕಿಂತಲೂ ಹೆಚ್ಚಿನ ವಿವೇಕ ಇರಲು ಸಾಧ್ಯವೇ ಇಲ್ಲ ಎಂಬುದು ಅವನ ವಾದ. ಅದಕ್ಕೆ ವ್ಯತಿರಿಕ್ತವಾಗಿ, ತಾನು ಯಾವತ್ತೋ ಕೇಳಿದ್ದ ಮಾತು ಅವನಿಗೆ ಸದಾ ನೆನಪಿನಲ್ಲಿರುತ್ತಿತ್ತು. ಆದರೆ ಯಜಮಾನರು ಹೇಳಿದ್ದ ಈ ಮಾತು ಜ್ಞಾಪಕವಿರಲಿಲ್ಲ.

ಆ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಫರ್ನಾಂಡೋಗಿಂತ ಚೆನ್ನಾಗಿ ಹೊಂದುವ ವ್ಯಕ್ತಿ ಬೇರೆ ಇರಲಿಲ್ಲ. ತುಂಬ ಬುದ್ಧಿವಂತನಲ್ಲದಿದ್ದರೂ ಜನರಲ್ ಅವರ ಗುಮಾಸ್ತರುಗಳಲ್ಲೆಲ್ಲ ಅವನು ಒಪ್ಪಿದವನು ಮತ್ತು ತಾಳ್ಮೆಯಿದ್ದವನು, ಅಲ್ಲದೆ ಜನರಲ್‌ರ ಕಾರ್ಯಕ್ರಮ ವ್ಯತ್ಯಯ ಮತ್ತು ನಿದ್ರಾಹೀನತೆಯ ಕಿರಿಕಿರಿ ಸನ್ನಿವೇಶಗಳನ್ನು ನಿರ್ವಿಕಾರವಾಗಿ ನಿರ್ವಹಿಸುತ್ತಿದ್ದ. ಜನರಲ್ ಯಾವ ಯಾವುದೋ ಹೊತ್ತಿಗೆ ಫರ್ನಾಂಡೋವನ್ನು ಎಬ್ಬಿಸಿ ಆಸಕ್ತಿ ತಾರದ ಪುಸ್ತಕದ ಪಠ್ಯವನ್ನು ಓದಲೆಂದೋ, ಮನಸ್ಸಿಗೆ ಹೊಳೆದ ವಿಷಯಗಳ ಟಿಪ್ಪಣಿ ತೆಗೆದುಕೊಳ್ಳಲೆಂದೋ ಹೇಳುತ್ತಿದ್ದರು, ಆದರೆ ಅವು ಬೆಳಗಿನ ಹೊತ್ತಿಗೆ ಕಸವನ್ನು ಸೇರುತ್ತಿತ್ತು. ಅಸಂಖ್ಯ ರಾತ್ರಿಗಳನ್ನು ಪ್ರಣಯದಾಟದಲ್ಲಿ ಕಳೆದಿದ್ದರೂ (ತಾವು ಸಂತಾನೋತ್ಪತ್ತಿಗೆ ಬೇಕಾದ ಸಾಮರ್ಥ್ಯವನ್ನು ಹೊಂದಿರುವೆನೆಂದು ಹೇಳಿಕೊಂಡರೂ) ಜನರಲ್ ಮಕ್ಕಳನ್ನು ಪಡೆಯಲು ಬಯಸಿರಲಿಲ್ಲ, ತಮ್ಮ ಅಣ್ಣ ಸತ್ತ ಬಳಿಕ ಅವರು ಫರ್ನಾಂಡೋನ ಜವಾಬ್ದಾರಿ ಹೊತ್ತಿದ್ದರು. ಜಾರ್ಜ್‌ಟೌನ್‌ನಲ್ಲಿದ್ದ ಮಿಲಿಟರಿ ಅಕಾಡೆಮಿಗೆ ಅವನನ್ನು ಉನ್ನತ ಪ್ರಶಂಸಾಪತ್ರಗಳನ್ನು ಕೊಟ್ಟು ಕಳಿಸಿದ್ದರು. ಅಲ್ಲಿ ಜನರಲ್ ಲಫಾಯೆಟ್ ಅವನ ಚಿಕ್ಕಪ್ಪನ ಬಗ್ಗೆ ಮೆಚ್ಚಿಕೆಯನ್ನು ವ್ಯಕ್ತಪಡಿಸಿದ್ದುದಲ್ಲದೆ, ತಮಗೆ ಅವರದೇ ಸ್ಫೂರ್ತಿ ಎಂದೂ ತಿಳಿಸಿದ್ದರು. ಆಮೇಲೆ ಅವನು ಚಾರ್ಲಟ್ಸ್‌ವಿಲ್‌ನಲ್ಲಿ ವರ್ಜೀನಿಯ ವಿಶ್ವವಿದ್ಯಾನಿಲಯವನ್ನು ಸೇರಿದ್ದ. ಪ್ರಾಯಶಃ ಅವನು ತಮ್ಮ ಕನಸಿನ ಉತ್ತರಾಧಿಕಾರಿಯೆಂದು ಜನರಲ್ ಆಲೋಚಿಸಿದ್ದಂತೆ ಕಂಡಿರಲಿಲ್ಲ. ಫರ್ನಾಂಡೋಗೆ ಶೈಕ್ಷಣಿಕ ವಿದ್ವತ್ತಿನಲ್ಲಿ

ಆಸಕ್ತಿಯಿರಲಿಲ್ಲ, ಬಯಲು ಮತ್ತು ತೋಟಗಳಲ್ಲಿನ ಜಡವಾದ ಕೆಲಸಕ್ಕೆ ಅದನ್ನು ಜೀವನಪೂರ್ತಿ ಬಿಟ್ಟುಕೊಡಲು ತಯಾರಾಗಿದ್ದ. ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ಜನರಲ್ ಸಂಟಾ ಫ಼ ದ ಬೊಗೋಟಕ್ಕೆ ಅವನನ್ನು ವಾಪಸು ಕರೆಸಿಕೊಂಡರು; ಬಹು ಬೇಗ ಕಾರ್ಯದರ್ಶಿಯಾಗುವವನಿಗೆ ಇರಬೇಕಾದ ಅವನ ಗುಣವಿಶೇಷಗಳನ್ನು ಗುರುತಿಸಿದ್ದರು. ಅವನ ಕೈಬರಹ ದುಂಡಗಿದ್ದುದಲ್ಲದೆ, ಇಂಗ್ಲಿಷ್ ಭಾಷೆಯಲ್ಲಿ ಚೆನ್ನಾಗಿ ಮಾತಾಡುವುದನ್ನೂ ಬರೆಯುವುದನ್ನೂ ಬಲ್ಲವನಾಗಿದ್ದ. ಓದುಗರನ್ನು ಕಾದಂಬರಿಗಳಲ್ಲಿನ ಕುತೂಹಲಕಾರಿ ತಂತ್ರಗಳನ್ನು ತಿಳಿದಿದ್ದುದು ಅವನ ವೈಶಿಷ್ಟ್ಯವಾಗಿತ್ತು; ಅಲ್ಲದೆ ಜೋರಾಗಿ ಓದುವಾಗ ಕಟು ಪ್ರಸಂಗಗಳನ್ನು ಉತ್ತಮಪಡಿಸುತ್ತಿದ್ದ, ತೂಕಡಿಕೆ ತರಿಸುವ ಭಾಗಗಳಿಗೆ ಉಪ್ಪು ಕಾರ ಸೇರಿಸಿ ಸ್ವಾದ್ಯವಾಗಿಸುತ್ತಿದ್ದ. ಜನರಲ್ ಅವರ ಸೇವೆಯಲ್ಲಿದ್ದ ಇತರರಂತೆ ಫ಼ರ್ನಾಂಡೋ ಕೂಡ, ಮುಂದೆ ಅವನ ಚಿಕ್ಕಪ್ಪ ಭಾಷಣವೊಂದರಲ್ಲಿ ಉಲ್ಲೇಖಿಸಿದ್ದರು, ಡೆಮಾಸ್ತನೀಸ್‌ನ ಮಾತೊಂದನ್ನು ಸಿಸೆರೋಗೆ ಅವನು ಆರೋಪಿಸಿದಾಗ, ದುರದೃಷ್ಟಕರ ಸನ್ನಿವೇಶವನ್ನು ಅನುಭವಿಸಿದ್ದರು. ತಮ್ಮ ಅಣ್ಣನ ಮಗನಾದರೂ ಸ್ಥಾನದ ಕಾರಣ ಅವನ ಬಗ್ಗೆ ಜನರಲ್ ಇತರರ ಬಗ್ಗೆ ಇದ್ದುದಕ್ಕಿಂತ ಹೆಚ್ಚು ಗಡುಸಾಗಿ ವರ್ತಿಸಿದ್ದರು; ಆದರೆ ಶಿಕ್ಷೆ ಪೂರ್ಣಗೊಳ್ಳುವ ಮುಂಚೆ ಅವನನ್ನು ಕ್ಷಮಿಸಿದ್ದರು.

ಆ ಪ್ರಾಂತದ ಗವರ್ನರ್ ಕರ್ನಲ್ ಜೋಕಿಮ್ ಪೊಸಾಡ ಗುಟಿಯೆರೆಜ಼್, ಪ್ರಯಾಣಿಸುತ್ತಿದ್ದ ಪರಿವಾರ ಹೋಗುವ ಎರಡು ದಿನಗಳ ಮುಂಚೆಯೇ, ಅದು ರಾತ್ರಿ ಬೀಡುವಿಡುವ ಕಾರ್ಯಕ್ರಮವಿದ್ದ ಬೇರೆ ಬೇರೆ ಊರುಗಳಿಗೆ ಹೋಗಿ ಅದರ ಬರುವಿಕೆಯ ಬಗ್ಗೆ ಮುನ್ಸೂಚನೆ ನೀಡುವುದಲ್ಲದೆ, ಜನರಲ್‌ರ ಆರೋಗ್ಯದ ಗಂಭೀರ ಪರಿಸ್ಥಿತಿಯ ಬಗ್ಗೆ ಎಚ್ಚರಿಕೆ ವಹಿಸುವಂತೆ ತಿಳಿಸುತ್ತಿದ್ದ. ಆದರೆ ಸೋಮವಾರ ಮಧ್ಯಾಹ್ನ ಗುಅಡುಅಸ್‌ಗೆ ಅವನು ಬರುತ್ತಿದ್ದುದನ್ನು ಕಂಡವರು ಗವರ್ನರ್‌ನ ವರದಿಗಳು ಮಾತ್ರವಲ್ಲ ಈ ಪ್ರಯಾಣವೇ ರಾಜಕೀಯ ತಂತ್ರಗಾರಿಕೆ ಎಂಬ ವದಂತಿಯನ್ನು ನಂಬಿದರು.

ಜನರಲ್ ಮತ್ತೊಮ್ಮೆ ಅಜೇಯನೆನಿಸಿದರು. ಊರಿನ ಪ್ರಮುಖ ಬೀದಿಯಲ್ಲಿ ಸವಾರಿ ಹೋದರು, ಅವರ ಅಂಗಿಗೆ ಗುಂಡಿಗಳಿರಲಿಲ್ಲ, ಬೆವರನ್ನು ಹೀರಿಕೊಳ್ಳಲು ತಲೆಯ ಸುತ್ತ ಜಿಪ್ಸಿ ಚೌಕವನ್ನು ಕಟ್ಟಿಕೊಂಡಿದ್ದರು. ಜಯಕಾರ ಹಾಕುತ್ತಿದ್ದ ಜನರು ಮತ್ತು ಸಿಡಿಯುವ ಪಟಾಕಿಗಳು ಹಾಗೂ ಸಂಗೀತದ ಸದ್ದನ್ನು ಮೀರಿಸುವಂತೆ ಶಬ್ದ ಮಾಡುತ್ತಿದ್ದ ಘಂಟಾನಾದದ ನಡುವೆ ತಮ್ಮ ಹ್ಯಾಟನ್ನು ಬೀಸುತ್ತ ಸಾಗುತ್ತಿದ್ದಾಗ ಅವರು ಕುಳಿತಿದ್ದ ಚಟುಲ ಕಾಲುಗಳ ಹೇಸರಗತ್ತೆಯು ಸನ್ನಿವೇಶದ ಗಾಂಭಿರ್ಯವನ್ನೆಲ್ಲ ಗಾಳಿಗೆ ತೂರಿ

ಮುಂದೆ ಓಡಿತು. ಕಿಟಕಿಗಳನ್ನು ಮುಚ್ಚಿದ್ದ ಏಕೈಕ ಕಟ್ಟಡವೆಂದರೆ ಸನ್ಯಾಸಿನಿಯರ ವಿದ್ಯಾಶಾಲೆಯದು. ಜನರಲ್ ಅವರ ಸ್ವಾಗತ ಸಮಾರಂಭದಲ್ಲಿ ಹೆಣ್ಣುಮಕ್ಕಳು ಭಾಗವಹಿಸುವುದನ್ನು ನಿಷೇಧಿಸಲಾಗಿತ್ತೆಂಬ ವದಂತಿ ಮಧ್ಯಾಹ್ನದ ಹೊತ್ತಿಗೆ ಹರಡಿತ್ತು, ಆದರೆ ಅದನ್ನು ತಿಳಿಸಿದವರಿಗೆ ಸನ್ಯಾಸಿನಿಮಠದ ಗಾಳಿ ಮಾತುಗಳನ್ನು ನಂಬದಿರುವಂತೆ ತಿಳಿಯ ಹೇಳಿದರು.

ಹಿಂದಿನ ರಾತ್ರಿ ಜನರಲ್ ಜ್ವರದಿಂದ ಬಳಲಿದಾಗ ವಿಪರೀತ ಬೆವರಿ ಒದ್ದೆಯಾಗಿದ್ದ ಅಂಗಿಯನ್ನು ಜೋಸೆ ಪೆಲಾಸಿಯೋಸ್ ಒಗೆಯಲೆಂದು ಅಗಸನಿಗೆ ಕೊಟ್ಟಿದ್ದ. ಅದನ್ನವನು ಬೆಳಗಿನ ಜಾವ ಬಟ್ಟೆಗಳನ್ನೊಗೆಯಲು ನದಿಗೆ ಹೋಗಿದ್ದ ಸೈನಿಕನೊಬ್ಬನಿಗೆ ಕೊಟ್ಟಿದ್ದ; ಹೊರಡುವ ಹೊತ್ತಾದರೂ ಅದರ ವಿಚಾರ ಯಾರಿಗೂ ತಿಳಿಯಲಿಲ್ಲ. ಗುಅಡುಅಸ್‌ಗೆ ಪ್ರವಾಸ ಹೋಗಿದ್ದಾಗ, ಅದೂ ಸಂಭ್ರಮಾಚರಣೆಗಳು ನಡೆಯುತ್ತಿದ್ದಾಗ, ಇನ್ನೂ ಒಗೆಯದಿದ್ದ ಅಂಗಿಯನ್ನು ವಸತಿಗೃಹದ ಯಜಮಾನನು ತೆಗೆದುಕೊಂಡು ತನ್ನ ಸಾಮರ್ಥ್ಯವನ್ನು ರುಜುವಾತುಪಡಿಸಲು ಪವಾಡಪುರುಷ ಇಂಡಿಯನ್‌ಗೆ ನೀಡಿದ್ದನೆಂಬ ವಿಷಯವನ್ನು ಜೋಸೆ ಪೆಲಾಸಿಯೋಸ್ ದೃಢಪಡಿಸಿಕೊಂಡಿದ್ದ. ಜನರಲ್ ಅವರು ವಾಪಸಾದಾಗ ವಸತಿಗೃಹದ ಯಜಮಾನನ ವಿಶ್ವಾಸದ್ರೋಹದ ಕೆಲಸವನ್ನು ಜೋಸೆ ಪೆಲಾಸಿಯೋಸ್ ಅವರಿಗೆ ಅರುಹಿ, ಅವನು ತೊಟ್ಟಿದ್ದುದು ಬಿಟ್ಟರೆ ಬೇರೆ ಅಂಗಿ ಯಾವುದೂ ಅವರಿಗಿಲ್ಲವೆಂಬುದನ್ನು ನೆನಪಿಸಿದ್ದ. ಜನರಲ್ ಆ ವಿಷಯವನ್ನು ತಾತ್ವಿಕನ ನಿರ್ಭಾವುಕತೆಯಿಂದ ಸ್ವೀಕರಿಸಿದ್ದರು.

"ಪ್ರೇಮಕ್ಕಿಂತಲೂ ಮೂಢನಂಬಿಕೆಯನ್ನು ಕಿತ್ತೊಗೆಯುವುದು ಕಷ್ಟ" ಎಂದಿದ್ದರು.

"ವಿಚಿತ್ರವೆಂದರೆ, ಕಳೆದ ರಾತ್ರಿಯಿಂದ ನಿಮಗೆ ಜ್ವರ ಬಂದಿಲ್ಲ; ಆ ವಾಮಾಚಾರಿ ವೈದ್ಯ ನಿಜವಾದ ಮಾಂತ್ರಿಕನಾಗಿರಬಹುದೋ ಏನೋ" ಎಂಬ ಅನುಮಾನವನ್ನು ಜೋಸೆ ಪೆಲಾಸಿಯೋಸ್ ವ್ಯಕ್ತಪಡಿಸಿದ್ದ.

ಏನು ಉತ್ತರ ನೀಡಬೇಕೆಂಬುದು ಜನರಲ್ ಅವರಿಗೆ ತಕ್ಷಣ ಹೊಳೆಯಲಿಲ್ಲ, ವಿಚಾರಗಳ ಲಯಕ್ಕನುಗುಣವಾಗಿ ಜೋಲಿಮಂಚದಲ್ಲಿ ತೂಗುತ್ತ ಆಲೋಚನೆಯಲ್ಲಿ ಮುಳುಗಿಹೋದರು. "ನಿಜ ಹೇಳಬೇಕೆಂದರೆ, ನನಗೆ ಮತ್ತೊಮ್ಮೆ ತಲೆನೋವು ಬಂದಿಲ್ಲ, ಈಗ ನಾಲಗೆ ಕಹಿಯಾಗಿಲ್ಲ, ಗೋಪುರದಿಂದ ಬಿದ್ದುಬಿಡುವೆನೆಂಬ ಭಾವನೆ ನನ್ನಲ್ಲೀಗ ಉಂಟಾಗುತ್ತಿಲ್ಲವಲ್ಲ" ಎಂದುಕೊಂಡರು. ಆದರೆ ಕೊನೆಯಲ್ಲಿ ತಮ್ಮ ಮೊಣಕಾಲಿನ ಮೇಲೆ ಒಮ್ಮೆ ಹೊಡೆದುಕೊಂಡು ಏನನ್ನೋ ನಿರ್ಧರಿಸಿದವರಂತೆ ಥಟ್ಟನೆ ಎದ್ದು ಕುಳಿತರು.

"ಇನ್ನು ಹೆಚ್ಚು ಗೊಂದವನ್ನು ನನ್ನ ತಲೆಯಲ್ಲಿ ತುರುಕಬೇಡ" ಎಂದರು.

ಇಬ್ಬರು ಸೇವಕರು ಒಂದು ದೊಡ್ಡ ಮಡಕೆಯಲ್ಲಿ ಸುಗಂಧಭರಿತ ಎಲೆಗಳನ್ನು ಹಾಕಿದ ಮರಳುವ ನೀರನ್ನು ಹೊತ್ತು ಕೋಣೆಯಲ್ಲಿ ತಂದಿಟ್ಟರು. ದಿನ ಪೂರ್ತಿ ಪ್ರಯಾಣ ಮಾಡಿ ಜನರಲ್ ಬಳಲಿರುವುದರಿಂದ ಬೇಗ ಮಲಗುವರೆಂಬ ವಿಶ್ವಾಸದಿಂದ ಜೋಸೆ ಪೆಲಾಸಿಯೋಸ್ ಸಂಜೆಯ ಸ್ನಾನಕ್ಕೆ ಸಿದ್ಧಪಡಿಸಿದ. ಆದರೆ ಜನರಲ್ ತಮ್ಮ ತಮ್ಮನ ಮಗಳು ಮತ್ತು ವಂಶದ ಆಸ್ತಿಯಾಗಿ ಕ್ಯಾರಕಸ್‌ನಲ್ಲಿದ್ದ ಅರೋವ ತಾಮ್ರದ ಗಣಿಗಳ ಮಾರಾಟದ ವಿಷಯದಲ್ಲಿ ಪ್ರತಿನಿಧಿಯಾಗಿದ್ದ ವ್ಯಾಲೆಂಟಿನ ಪೆಲಾಸಿಯೋಸ್‌ಗೆಂದು ಪತ್ರವೊಂದನ್ನು ಗೇಬ್ರಿಯಲ್ ಕಮಾಚೋಗೆ ಹೇಳಿ ಬರೆಸುತ್ತಿದ್ದುದರಿಂದ ನೀರು ತಣ್ಣಗಾಯಿತು. ಅವರಿಗೂ ತನ್ನ ಮುಂದಿನ ಗುರಿಯ ಬಗ್ಗೆ ಖಚಿತತೆಯಿದ್ದಂತಿರಲಿಲ್ಲ; ಯಾಕೆಂದರೆ ಈ ವ್ಯವಹಾರವನ್ನು ಕಮಾಚೋ ಯಶಸ್ವಿಯಾಗಿ ಅಂತಿಮಗೊಳಿಸಿದ್ದರೂ ತಾವು ಕ್ಯುರಾಕೋಗೆ ಹೋಗುವುದಾಗಿ ಒಂದು ವಾಕ್ಯದಲ್ಲಿ ತಿಳಿಸಿ, ಮತ್ತೊಂದರಲ್ಲಿ ಸರ್ ರಾಬರ್ಟ್ ವಿಲ್ಸನ್ ಅವರ ಆಶ್ರಯದಲ್ಲಿರುವ ತಮಗೆ ಬರೆದು ತಿಳಿಸಲು ಹಾಗೂ ಆ ಕಾಗದದ ಪ್ರತಿಯೊಂದನ್ನು ಜಮೈಕದಲ್ಲಿರುವ ಮಿ. ಮ್ಯಾಕ್ಸ್‌ವೆಲ್ ಹೈಸ್ಲಾಪ್‌ಗೆ ಕಳಿಸಬೇಕೆಂದೂ ಹೇಳಿದ್ದರು; ಒಂದಲ್ಲದಿದ್ದರೆ ಮತ್ತೊಂದಾದರೂ ತಮಗೆ ತಲುಪಲೆಂದು ಈ ಏರ್ಪಾಟು.

ಅನೇಕರಿಗೆ, ಅದರಲ್ಲೂ ಅವರ ಕಾರ್ಯದರ್ಶಿಗಳು ಹಾಗೂ ಪ್ರತಿಕಾರರಿಗೆ ಕೂಡ, ಅರೋವ ಗಣಿಗಳು ಅತೀವ ಉತ್ಸಾಹದ ಮತ್ತೊಂದು ವಿಷಯವೆನಿಸಿತ್ತು. ಕೇವಲ ತಾತ್ಕಾಲಿಕ ಕೆಲಸಗಾರರಿದ್ದರೂ ಅದರ ಬಗ್ಗೆ ಜನರಲ್ ಅವರು ಅನೇಕ ವರ್ಷಗಳ ಕಾಲ ತಲೆ ಕೆಡಿಸಿಕೊಂಡರಲಿಲ್ಲ. ಹಣದ ಕೊರತೆ ಹೆಚ್ಚಾಗುತ್ತಿದ್ದ ತಮ್ಮ ಜೀವಿತದ ಕೊನೆಯ ಭಾಗದಲ್ಲಿ ಅವರಿಗೆ ಅದರ ನೆನಪಾಗಿತ್ತು. ಆದರೆ ಅದನ್ನವರು ಇಂಗ್ಲಿಷ್ ಕಂಪೆನಿಯೊಂದಕ್ಕೆ ಮಾರುವಂತಿರಲಿಲ್ಲ, ಏಕೆಂದರೆ ಅದರ ಒಡೆತನದ ಪತ್ರಗಳು ಸ್ಪಷ್ಟವಾಗಿರಲಿಲ್ಲ. ಅದು ಅವರು ಸತ್ತ ಬಳಿಕವೂ ಎರಡು ವರ್ಷಗಳ ಕಾಲ ಮುಂದುವರಿದ ಐತಿಹಾಸಿಕ ಕಾನೂನು ಸಮರಕ್ಕೆ ಈಗ ನಾಂದಿಯಾಯಿತು. ಯುದ್ಧಗಳು, ರಾಜಕೀಯ ಬಿಕ್ಕಟ್ಟುಗಳು, ವೈಯಕ್ತಿಕ ದ್ವೇಷ ಇವುಗಳ ನಡುವೆ "ನನ್ನ ಕೇಸು" ಎಂದು ಜನರಲ್ ಹೇಳಿದಾಗ ಅವರ ಮನಸ್ಸಿನಲ್ಲಿದುದು ಏನು ಎಂಬುದು ಎಲ್ಲರಿಗೂ ಗೊತ್ತಾಗಿತ್ತು. ಅವರ ಅಭಿಪ್ರಾಯದಲ್ಲಿ ಅದು ಅರೋವ ಗಣಿಗಳು ಮಾತ್ರ. ಗುಅಗುಡಸ್‌ನಲ್ಲಿ ಅವರು ಡಾನ್ ಗೇಬ್ರಿಯಲ್ ಕಮಾಚೋಗೆ ಹೇಳಿ ಬರೆಸಿದ್ದ ಪತ್ರವು, ಈ ಕೇಸು ತೀರ್ಮಾನವಾಗುವವರೆಗೂ ತಾವು ಯೂರೋಪ್‌ಗೆ

ಹೊರಡುವುದಿಲ್ಲವೆಂಬ ತಪ್ಪು ಭಾವನೆಯನ್ನು ಅವರ ತಮ್ಮನ ಮಗಳಲ್ಲಿ ಮೂಡಿಸಿತ್ತು; ಫರ್ನಾಂಡೋ ಇತರ ಸೇನಾಧಿಕಾರಿಗಳ ಜೊತೆ ಇಸ್ಪೀಟು ಆಡುತ್ತಿದ್ದಾಗ ಮುಂದೊಮ್ಮೆ ಈ ವಿಚಾರವನ್ನು ತಿಳಿಸಿದ್ದ.

"ಹಾಗಾದರೆ ಅವರು ಹೋಗುವುದೇ ಇಲ್ಲ, ನಮ್ಮ ತಂದೆ ಎಂಥ ಹಂತ ತಲುಪಿದ್ದಾರೆ ಎಂದರೆ ಪ್ರಪಂಚದಲ್ಲಿ ವಾಸ್ತವವಾಗಿ ತಾಮ್ರ ಸಿಕ್ಕುವುದೇ ಎಂದು ಅನುಮಾನಪಡುತ್ತಾರೆ" ಎಂದಿದ್ದ ಕರ್ನಲ್ ವಿಲ್ಸನ್.

"ಯಾರೂ ನೋಡಿಲ್ಲ ಎಂದ ಮಾತ್ರಕ್ಕೆ ಗಣಿಗಳೇ ಇಲ್ಲ ಎಂದರ್ಥವಲ್ಲ" ಎಂಬುದು ಕ್ಯಾಪ್ಟನ್ ಆಂಡ್ರೇ ಲಿಬಾರಾನ ಉತ್ತರ.

"ಖಂಡಿತ ಇವೆ, ವೆನಿಝೂಲ ಇಲಾಖೆಯಲ್ಲಿ" ಎಂದು ಜನರಲ್ ಕ್ಯಾರೆನೋ ವ್ಯಂಗ್ಯವಾಡಿದ.

ಈ ಹಂತದಲ್ಲಿ ವಿಲ್ಸನ್, "ಈ ಹಂತದಲ್ಲಿ ನನಗೆ ವೆನಿಝೂಲ ಇದೆಯಾ ಎಂಬುದೇ ಅನುಮಾನ" ಎಂದು ಹತಾಶನಾಗಿ ನುಡಿದ.

ಅವನು ತನ್ನ ವಿಷಾದವನ್ನು ಮುಚ್ಚಿಟ್ಟುಕೊಳ್ಳಲಾಗಲಿಲ್ಲ. ಜನರಲ್ ಅವರಿಗೆ ತನ್ನ ಬಗ್ಗೆ ಅಕ್ಕರೆಯಿಲ್ಲವೆಂದೂ, ತನ್ನನ್ನು ಅವರ ಪರಿವಾರದಲ್ಲಿ ಸೇರಿಸಿಕೊಂಡಿರುವುದು ಇಂಗ್ಲಿಷ್ ಪಾರ್ಲಿಮೆಂಟ್‌ನಲ್ಲಿ ಅಮೆರಿಕದ ವಿಮೋಚನೆಯನ್ನು ಸಮರ್ಥಿಸಿ ಮಾತನಾಡಿದ ಕಾರಣದಿಂದ ತನ್ನ ತಂದೆಯ ಬಗ್ಗೆ ಇರುವ ಕೃತಜ್ಞತೆಯನ್ನು ತೋರಿಸಲು ಎಂದೂ ಅವನು ನಂಬತೊಡಗಿದ್ದ. ಹಿಂದೆ ನಿಷ್ಠಾರಹಿತನಾಗಿದ್ದ ಒಬ್ಬ ಫ್ರೆಂಚ್ ಆಪ್ತಸಹಾಯಕನನ್ನು ಕುರಿತು ಜನರಲ್ ಹೇಳಿದ್ದ ಮಾತೊಂದನ್ನು ಅವನು ನೆನಪಿಟ್ಟುಕೊಂಡಿದ್ದ: "ವಿಲ್ಸನ್ ಕೆಲಕಾಲ ಕಷ್ಟಗಳನ್ನನುಭವಿಸಬೇಕು, ಬರೀ ವಿರುದ್ಧ ಸನ್ನಿವೇಶ ಮತ್ತು ತೊಂದರೆಗಳನ್ನಲ್ಲ." ಜನರಲ್ ಹೇಳಿದ್ದುದು ಅದೇ ಮಾತನ್ನು ಎಂಬ ಬಗ್ಗೆ ವಿಲ್ಸನ್‌ಗೆ ಖಚಿತವಾಗಿರಲಿಲ್ಲ. ಆದರೂ, ಒಂದು ಯುದ್ಧವು ಈ ಮೂರನ್ನೂ ತಾನು ಎದುರಿಸುವೆನೆಂಬುದನ್ನು ತೋರಿಸಬಲ್ಲುದೆಂಬ ನಂಬಿಕೆ ಅವನಿಗಿತ್ತು. ಅವನಿಗೆ ಇಪ್ಪತ್ತಾರರ ಹರಯ, ಎಂಟು ವರ್ಷಗಳ ಹಿಂದೆ ವೆಸ್ಟ್‌ಮಿನ್ಸ್ಟರ್ ಮತ್ತು ಸ್ಯಾಂಡ್‌ಹರ್ಸ್ಟ್‌ಗಳಲ್ಲಿ ಓದು ಮುಗಿಸಿದನಂತರ ತನ್ನ ತಂದೆ ತನ್ನನ್ನು ಜನರಲ್ ಅವರ ಸಹಾಯಕ್ಕೆಂದು ಕಳಿಸಿದ್ದರು. ಜುನಿನ್ ಕದನದಲ್ಲಿ ತಾನು ಅವರ ಆಪ್ತಸಹಾಯಕನಾಗಿದ್ದ, ಬೊಲಿವಿಯ ಸಂವಿಧಾನದ ಮೊದಲ ಕರಡನ್ನು ಚುಕಿಸಾಕದಿಂದ ಲಾ ಪಾಝ್‌ಗೆ ಮುನ್ನೂರರುವತ್ತು ಲೀಗ್ ಇಕ್ಕಟ್ಟಿನ ಕಂದರಗಳ ಮಾರ್ಗದುದ್ದಕ್ಕೂ ಹೇಸರಗತ್ತೆಯ ಮೇಲೆ ಹೊತ್ತು ತಂದಿದ್ದವನು ತಾನೇ. ಜನರಲ್ ಅವರಿಗೆ ವಿದಾಯ ಹೇಳಿದಾಗ ಹೆಚ್ಚೆಂದರೆ ಇಪ್ಪತ್ತೊಂದು ದಿನಗಳಲ್ಲಿ ಲಾ ಪಾಝ್ ತಲುಪಬೇಕೆಂದು ಅವರು ಹೇಳಿದ್ದರು. ಸೆಟೆದು

ನಿಂತು ವಿಲ್ಸನ್ ಆಗ, "ಇಪ್ಪತ್ತೇ ದಿನದಲ್ಲಿ ಅಲ್ಲಿರುತ್ತೇನೆ, ಸರ್" ಎಂದು ಉತ್ತರಿಸಿದ್ದ. ತಲುಪಿದ್ದು ಹತ್ತೊಂಬತ್ತು ದಿನಗಳಲ್ಲಿಯೇ.

ತಾನೂ ಜನರಲ್ ಜೊತೆ ಯೂರೋಪ್‌ಗೆ ಮರಳಲು ನಿರ್ಧರಿಸಿದ್ದ, ಆದರೆ ತನ್ನ ಪ್ರಯಾಣವನ್ನು ಮುಂದೂಡುತ್ತಿರಲು ಅವರಿಗೆ ಏನಾದರೊಂದು ನೆವ ಸಿಕ್ಕುತ್ತದೆ ಎಂಬುದು ಪ್ರತಿ ದಿನವೂ ಹೆಚ್ಚು ಹೆಚ್ಚು ಖಚಿತವಾಗುತ್ತಿತ್ತು. ಹಿಂದೆಂದೂ ಬೇರಾವುದಕ್ಕೂ ನೆವವಾಗಿ ಒಡ್ಡದೆ ಈಗ ಎರಡು ವರ್ಷಗಳಿಗೂ ಹೆಚ್ಚು ಕಾಲದ ನಂತರ ಅರೋವ ಗಣಿಗಳ ಬಗ್ಗೆ ಅವರು ಪ್ರಸ್ತಾಪಿಸಿದ್ದು ವಿಲ್ಸನ್‌ನ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಿತ್ತು.

ಪತ್ರವನ್ನು ಹೇಳಿ ಬರೆಸಿಯಾದ ಮೇಲೆ ಜೋಸೆ ಪೆಲಾಸಿಯೋಸ್ ನೀರನ್ನು ಮತ್ತೆ ಬಿಸಿಮಾಡಿದ, ಆದರೆ ಜನರಲ್ ಮಾತ್ರ ಸ್ನಾನ ಮಾಡದೆ, ಮನೆಯಲ್ಲೆಲ್ಲ ಮೊಳಗುವಂತಹ ಧ್ವನಿಯಿಂದ ಕವನವನ್ನು ಗುನುಗುತ್ತ ತಮ್ಮ ಶತಪಥವನ್ನು ಮುಂದುವರಿಸಿದ್ದರು. ಜೋಸೆ ಪೆಲೋಸಿಯೋಗಲ್ಲದ ಬೇರಾರಿಗೂ ತಾವು ರಚಿಸಿದ್ದೆಂದು ತಿಳಿಯದ ಕವನಗಳನ್ನು ಒಂದಾದ ಮೇಲೊಂದರಂತೆ ಹೇಳಿಕೊಳ್ಳುತ್ತಿದ್ದರು. ಅವರು ಅನೇಕ ಬಾರಿ ಮಂಟಪವನ್ನು ಹಾದು ಹೋದಾಗ ಸೇನಾಧಿಕಾರಿಗಳು ರೊಪಿಲ್ಲ ಆಡುತ್ತಿದ್ದರು, ಅದು ಗಾಲಿಸಿಯನ್ ಲಾನ್ಸ್‌ಕ್ವೆನೆಟ್‌ನ ಅಮೆರಿಕನ್ ಹೆಸರು, ಅದನ್ನು ತಾವೂ ಹಿಂದೆ ಆಡುತ್ತಿದ್ದರು. ಪ್ರತಿಯೊಬ್ಬ ಅಧಿಕಾರಿಯ ಬೆನ್ನ ಹಿಂದೆ ನಿಂತು ಅವನ ಭುಜದಾಚೆ ಕಣ್ಣು ಹಾಯಿಸುತ್ತಿದ್ದರು, ಅವನ ಆಟದ ರಿತಿ ಹೇಗಿದೆ ಎಂದು ನಿರ್ಧರಿಸುತ್ತಿದ್ದರು, ಆಮೇಲೆ ಮುಂದೆ ಸಾಗುತ್ತಿದ್ದರು.

"ಇಂಥ ಬೋರು ಹೊಡೆಯೋ ಆಟದಲ್ಲಿ ತೊಡಗಿ ನೀವು ಹೇಗೆ ಕಾಲ ವ್ಯರ್ಥ ಮಾಡ್ತೀರೋ ನನಗಂತೂ ಅರ್ಥವಾಗಲ್ಲ" ಎಂದರು.

ಆದರೆ ಮನೆಯ ಸುತ್ತಲೂ ಬಂದ ಹಲವು ಸುತ್ತುಗಳಲ್ಲಿ ಒಮ್ಮೆ ಆಟದಲ್ಲಿ ತಾವೂ ಭಾಗಿಯಾಗಲು ಅವಕಾಶ ಕೊಡುವಂತೆ ಕ್ಯಾಪ್ಟನ್ ಇಬಾರಾನನ್ನು ಕೇಳುವ ಆಸೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಒಳ್ಳೆಯ ಜೂಜುಕೋರರಿಗೆ ಬೇಕಾದ ತಾಳ್ಮೆ ಅವರಿಗಿರಲಿಲ್ಲ, ಅವರಿಗೋ ಆಕ್ರಮಣಕಾರಕ ಮನೋಭಾವ, ಹೀಗಾಗಿ ಬೇಗ ಸೋಲಿಗೊಳಗಾಗುತ್ತಿದ್ದರು. ಆದರೆ ಚುರುಕುತನದಿಂದಾಗಿ ಅವರು ವೇಗದ ಆಟಗಾರನಾಗಿದ್ದರು, ತಮ್ಮ ಕೈಕೆಳಗಿನವರ ಜೊತೆ ಸಮಾನತೆಯನ್ನು ಪಡೆದಿದ್ದರು. ಆಗ ಅವರ ಜೊತೆಗಾರನಾಗಿದ್ದವನು ಜನರಲ್ ಕ್ಯಾರೆನೋ, ಆರು ಆಟಗಳನ್ನಾಡಿ ಎಲ್ಲದರಲ್ಲೂ ಸೋತ. ಎಲೆಗಳನ್ನು ಮೇಜಿನ ಮೇಲೆಸೆದು ಎದ್ದ.

"ಇದೊಂದು ದರಿದ್ರ ಆಟ. ಓಂಬರ್ ಆಡುವುದಕ್ಕೆ ಯಾರಿಗೆ ಧೈರ್ಯವಿದೆ ಹೇಳಿ?" ಎಂದು ಕೇಳಿದರು.

ಅವರೆಲ್ಲರಿಗೂ ಧೈರ್ಯವಿತ್ತು. ಅದರಲ್ಲಿ ಅವರು ಮೂರರಲ್ಲಿ ಗೆದ್ದರು, ಹೀಗಾಗಿ ಅವರ ಉತ್ಸಾಹ ಹೆಚ್ಚಿತು, ಕರ್ನಲ್ ವಿಲ್ಸನ್‌ನ ಆಟವನ್ನು ತಮಾಷೆ ಮಾಡಲು ತೊಡಗಿದರು. ಅದನ್ನು ವಿಲ್ಸನ್ ತಮಾಷೆಯಾಗಿಯೇ ಸ್ವೀಕರಿಸಿದ, ಜೊತೆಗೆ ಜನರಲ್ ಉತ್ಸಾಹವನ್ನೇ ತಮ್ಮ ಬಂಡವಾಳವಾಗಿ ಮಾಡಿಕೊಂಡರು, ಮತ್ತೆ ಅವರು ಸೋಲು ಕಾಣಲಿಲ್ಲ. ಜನರಲ್ ಗಂಭೀರರಾದರು, ಅವರ ತುಟಿಗಳು ಬಿರುಸಾಗಿ ಬಣ್ಣ ಕಳೆದುಕೊಂಡವು, ಪೊದೆಯಂತಹ ಹುಬ್ಬುಗಳ ಕೆಳಗೆ ಕಣ್ಣುಗಳು ಆಳಕ್ಕಿಳಿದವು, ಇತರ ಸಮಯಗಳಲ್ಲಿಯಂತೆ ರೌದ್ರವಾಗಿ ಉರಿಯತೊಡಗಿದವು. ಅವರು ಮತ್ತೆ ಮಾತಾಡಲಿಲ್ಲ, ಭಯಂಕರ ಕೆಮ್ಮು ಏಕಾಗ್ರತೆಯನ್ನು ಹಾಳುಮಾಡಿತು. ಅವರು ಆಟ ಮುಗಿಸಿದಾಗ ಹನ್ನೆರಡು ಗಂಟೆ ಮೀರಿತ್ತು.

"ರಾತ್ರಿಯೆಲ್ಲ ನನ್ನ ಮೇಲೆ ಗಾಳಿ ಬೀಸ್ತಾನೇ ಇತ್ತು" ಎಂದರು.

ಎಲ್ಲರೂ ಸೇರಿ ಮೇಜನ್ನು ಹೆಚ್ಚು ಬಿಸುಪಾದ ಜಾಗಕ್ಕೆ ತೆಗೆದುಕೊಂಡು ಹೋಗಿಟ್ಟರು, ಅಲ್ಲೂ ಅವರ ಸೋಲು ಮುಂದವರೆಯಿತು. ಹತ್ತಿರದಲ್ಲೆಲ್ಲೋ ಹಬ್ಬದಾಚರಣೆಗೆಂದು ಬಾರಿಸುತ್ತಿದ್ದ ಪಿಳ್ಳಂಗೋವಿಗಳ ಸದ್ದನ್ನು ನಿಲ್ಲಿಸುವಂತೆ ಅವರಿಗೆ ಹೇಳಿದರು, ಆದರೆ ಅವುಗಳ ಸದ್ದು ಚಿಮ್ಮಂಡೆಗಳ ಗುಯ್‌ಗುಟ್ಟುವಿಕೆಯನ್ನು ಮೀರಿಸಿ ಮುಂದುವರೆಯಿತು. ಜಾಗ ಬದಲಾಯಿಸಿದರು, ಆರಾಮವಾಗಿ ಹಾಗೂ ಸ್ವಲ್ಪ ಎತ್ತರದಲ್ಲಿ ಕೂರಲು ಅನುಕೂಲವಾಗುವಂತೆ ಕುರ್ಚಿಯ ಮೇಲೆ ಒಂದು ದಿಂಬನ್ನಿಟ್ಟುಕೊಂಡರು, ಕೆಮ್ಮನ್ನು ಉಪಶಮನಗೊಳಿಸಲು ನಿಂಬೆ ಬೆರೆಸಿದ ಕಷಾಯ ಕುಡಿದರು, ಮಂಟಪದಲ್ಲಿ ಒಂದು ಕಡೆಯಿಂದ ಮತ್ತೊಂದೆಡೆಗೆ ನಡೆದಾಡುತ್ತಲೇ ಅನೇಕ ಆಟಗಳನ್ನು ಮುಂದುವರೆಸಿದರು, ಆದರೆ ಸೋಲೂ ಮುಂದುವರೆಯಿತು. ವಿಲ್ಸನ್ ತನ್ನ ಅಸಂತೃಪ್ತಗೊಂಡ ತಿಳಿಯಾದ ನೋಟವನ್ನು ಅವರ ಮೇಲೇ ನಟ್ಟಿದ್ದ, ಆದರೆ ಇವರು ಮಾತ್ರ ಅವನೆಡೆಗೆ ನೋಡಲೇ ಇಲ್ಲ.

"ಈ ಜಾಗದಲ್ಲಿ ಮೇಲೆ ಗುರುತಿದೆ" ಎಂದರು.

"ಅದು ನಿಮ್ಮದೇ ಜಾಗ, ಜನರಲ್" ಎಂದ ವಿಲ್ಸನ್.

ವಾಸ್ತವವಾಗಿಯೂ ಅದು ಅವರ ಜಾಗವೇ, ಆದರೂ ಅಲ್ಲಿನ ಪ್ರತಿಯೊಂದು ಎಲೆಯನ್ನೂ ಪರೀಕ್ಷಿಸಿದರು, ಕೊನೆಗೆ ಅದನ್ನು ಬದಲಾಯಿಸಿದರು. ವಿಲ್ಸನ್‌ನಿಂದಾಗಿ ಅವರಿಗೆ ವಿಶ್ರಾಂತಿಯೇ ದೊರೆಯಲಿಲ್ಲ. ಚಿಮ್ಮಂಡೆಗಳ ಸದ್ದು ನಿಂತಿತ್ತು, ನೀಳವಾದ ಮೌನದಲ್ಲಿ ತೇವಗೊಂಡ ತಂಗಾಳಿ ಬೀಸಿ ಉರಿಯುವ ಕಣಿವೆಗಳಿಂದ ಕಂಪನ್ನು ಮಂಟಪದತ್ತ ಹೊತ್ತು ತಂದಿತು, ಅಷ್ಟು ಹೊತ್ತಿಗಾಗಲೇ ಕೋಳಿ ಮೂರು ಬಾರಿ ಕೂಗಿಯಾಗಿತ್ತು. "ಈ ಕೋಳಿಗೆಲ್ಲೋ ಹುಚ್ಚು. ಇನ್ನೂ ಎರಡು ಗಂಟೆಯೂ ಆಗಿರಲಿಕ್ಕಿಲ್ಲ" ಎಂದ ಇಬಾರಾ. ಎಲೆಗಳ ಮೇಲಿದ್ದ ತಮ್ಮ ದೃಷ್ಟಿಯನ್ನು ಬದಲಾಯಿಸದೆ

ಜನರಲ್ ದೃಢವಾದ ಧ್ವನಿಯಲ್ಲಿ, “ಇಲ್ಲಿಂದ ಯಾರೂ ಹೋಗುವ ಹಾಗಿಲ್ಲ” ಎಂದರು.

ಯಾರೂ ಉಸಿರೆತ್ತಲಿಲ್ಲ. ಆಸಕ್ತಿಗಿಂತ ಹೆಚ್ಚಾಗಿ ಗಾಬರಿಯಿಂದ ಆಟವನ್ನು ಗಮನಿಸುತ್ತಿದ್ದ ಜನರಲ್ ಕ್ಯಾರೆನೋಗೆ ತಮ್ಮ ಜೀವನದ ಅತ್ಯಂತ ದೀರ್ಘ ರಾತ್ರಿಯ ನೆನಪು ಬಂತು, ಎರಡು ವರ್ಷಗಳ ಹಿಂದೆ ಅವರು ಒಚಾನಾ ಸಮಾವೇಶದ ಫಲಿತಾಂಶಕ್ಕಾಗಿ ಬ್ಯೂಕಾರಮಾಂಗದಲ್ಲಿ ಕಾಯುತ್ತಿದ್ದರು. ಅವರು ಆಟ ಶುರು ಮಾಡಿದ್ದುದು ಒಂಬತ್ತು ಗಂಟೆಗೆ, ಅದು ಕೊನೆಗಂಡದ್ದು ಮಾರನೇ ಬೆಳಿಗ್ಗೆ ಹನ್ನೊಂದು ಗಂಟೆಗೆ, ಜನರಲ್ ಒಟ್ಟಿಗೇ ಮೂರು ಆಟಗಳಲ್ಲಿ ಗೆಲ್ಲಲು ಅವರ ಸಹಚರರೆಲ್ಲ ಒಪ್ಪಿಕೊಂಡಿದ್ದರು. ಗುಅಡುಅಸ್‌ನಲ್ಲಿ ಅಂದು ತಾಳ್ಮೆ ಪರೀಕ್ಷಿಸುವ ಮತ್ತೊಂದು ರಾತ್ರಿಯನ್ನು ಕಳೆಯಬೇಕಾಗಬಹುದೆಂದು ಹೆದರಿದ ಜನರಲ್ ಕ್ಯಾರೆನೋ ಸೋಲುವಂತೆ ಕರ್ನಲ್ ವಿಲ್ಸನ್‌ಗೆ ಸನ್ನೆ ಮಾಡಿದ. ಆದರೆ ವಿಲ್ಸನ್ ಅದಕ್ಕೆ ಗಮನ ಕೊಡಲಿಲ್ಲ. ಆನಂತರ ಅವನು ಐದು ನಿಮಿಷ ವಿರಾಮ ಬೇಕೆಂದು ಕೇಳಿ ಹೊರಹೋದಾಗ ಜನರಲ್ ಕ್ಯಾರೆನೋ ಅವನನ್ನು ಹಿಂಬಾಲಿಸಿ ಮಾಳಿಗೆ ಮೇಲೆ ಬಂದ. ಅಲ್ಲಿ ಅವನು ಜರೇನಿಯಮ್ ಇದ್ದ ಹೂಕುಂಡಗಳಲ್ಲಿ ತಮ್ಮ ಕಹಿಯನ್ನು ಅಮೋನಿಯದಂತಹ ನಾತವಿದ್ದ ಉಚ್ಚೆಯ ಮೂಲಕ ಹೊರಹಾಕುತ್ತಿದ್ದ.

“ಕರ್ನಲ್ ವಿಲ್ಸನ್, ಅಟೆನ್ಷನ್!” ಎಂದ.

“ಮುಗಿಸುವವರೆಗೂ ತಾಳಿ”, ತಲೆ ತಿರುಗಿಸದೇ ಅವನು ಉತ್ತರವಿತ್ತ.

ಶಾಂತವಾಗಿ ತನ್ನ ಕೆಲಸವನ್ನು ಪೂರೈಸಿದ ಅವನು ತನ್ನ ಷರಾಯಿಯನ್ನು ಹೊಂದಿಸಿಕೊಳ್ಳುತ್ತ ತಿರುಗಿದ.

“ಸೋಲಕ್ಕೆ ಶುರು ಮಾಡು, ಕಷ್ಟದಲ್ಲಿರೋ ಸ್ನೇಹಿತನಿಗೆ ಉಪಕಾರ ಮಾಡು” ಎಂದು ಜನರಲ್ ಕ್ಯಾರೆನೋ ಕೇಳಿಕೊಂಡ.

“ನಾನು ಯಾರಿಗೂ ಅಂತಹ ಅಪಕಾರವನ್ನು ಮಾಡಲಾರೆ” ಎಂದ ವಿಲ್ಸನ್ ವ್ಯಂಗ್ಯಭರಿತ ಧ್ವನಿಯಲ್ಲಿ.

“ಇದು ಆಜ್ಞೆ” ಎಂದ ಕ್ಯಾರೆನೋ.

ಸೆಟೆದು ನಿಂತಿದ್ದ ಎತ್ತರದ ಆಳು ವಿಲ್ಸನ್ ದೃಷ್ಟಿ ಕೆಳಗಿಳಸಿ ಅವನತ್ತ ನೋಡಿದ, ಅದರಲ್ಲಿ ಒಂದು ಬಗೆಯ ಸಾಮ್ರಾಜ್ಯಶಾಹಿ ತಿರಸ್ಕಾರವಿತ್ತು. ಆಮೇಲೆ ಆಟದ ಮೇಜಿಗೆ ಹಿಂದಿರುಗಿ ಸೋಲತೊಡಗಿದ, ಜನರಲ್‌ರಿಗೆ ಅರ್ಥವಾಯಿತು. “ಇಷ್ಟು ಕೆಟ್ಟ ಆಟ ಆಡುವ ಆವಶ್ಯಕತೆ ನಿನಗೇನಿಲ್ಲ, ಪ್ರಿಯ ವಿಲ್ಸನ್. ಈಗ ನಾವೆಲ್ಲ ಮಲಗುವ ಹೊತ್ತಾಯಿತು” ಎಂದರವರು.

ಜೋರಾಗಿ ಅವರೆಲ್ಲರ ಕೈಕುಲುಕಿ ಜನರಲ್ ಅವರಿಂದ ಬೀಳ್ಕೊಂಡರು, ಆಟವು ತಮ್ಮ ಭಾವನೆಗಳನ್ನು ಬದಲಾಯಿಸಿಲ್ಲ ಎಂದು

ತೋರಿಸಿಕೊಳ್ಳಲು ಮೇಜಿನಿಂದ ಹೊರ ನಡೆಯುವಾಗ ಅವರು ಹೀಗೆ ಮಾಡುತ್ತಿದ್ದುದು ರೂಢಿ. ನೇರವಾಗಿ ಮಲಗುವ ಕೋಣೆಗೆ ಬಂದರು. ಜೋಸೆ ಪೆಲಾಸಿಯೋಸ್ ನೆಲದ ಮೇಲೆ ಮಲಗಿ ನಿದ್ದೆ ಮಾಡುತ್ತಿದ್ದ, ಆದರೆ ಅವರ ಹೆಜ್ಜೆ ಸಪ್ಪುಳದಿಂದ ಎಚ್ಚೆತ್ತು ಎದ್ದು ನಿಂತ. ಆತುರವಾಗಿ ತನ್ನೆಲ್ಲ ಬಟ್ಟೆಗಳನ್ನೂ ಕಳಚಿಹಾಕಿದ ಜನರಲ್ ತಮ್ಮ ಜೋಲಿಮಂಚದಲ್ಲಿ ಮಲಗಿ ತೂಗಾಡತೊಡಗಿದರು. ಅವರ ಆಲೋಚನೆಗಳು ಗಿರಿಗುಟ್ಟುತ್ತಿದ್ದವು, ಉಸಿರಾಟ ಹೆಚ್ಚು ಹೆಚ್ಚು ಸದ್ದುಮಾಡುತ್ತಿತ್ತು, ಆಲೋಚನೆ ಸಾಗಿದಂತೆ ಅದೂ ತೀವ್ರವಾಗುತ್ತಿತ್ತು. ತೂಗಾಡುವಾಗ ಅವರು ಮೂಳೆಯಾಳಕ್ಕೂ ನಡುಗುತ್ತಿದ್ದರು, ಆದರೆ ಈ ಬಾರಿ ಜ್ವರದಿಂದಲೋ ಚಳಿಯಿಂದಲೋ ಅಲ್ಲ, ಕೋಪದಿಂದ.

"ವಿಲ್ಸನ್ ನಯಗಾರ ಸೂಳೆಮಗ" ಅಂದುಕೊಂಡರು.

ಅದು ಅತ್ಯಂತ ಕೆಟ್ಟ ರಾತ್ರಿಗಳಲ್ಲೊಂದಾಯಿತು. ಆಜ್ಞೆಗಳನ್ನುಲ್ಲಂಘಿಸಿ ಜೋಸೆ ಪೆಲಾಸಿಯೋಸ್ ಆವಶ್ಯಕವಾದರೆ ವೈದ್ಯರಿಗೆ ಹೇಳಿಕಳಿಸುವಂತೆ ಸೇನಾಧಿಕಾರಿಗಳಿಗೆ ತಿಳಿಸಿದ, ಬೆವರಿನಿಂದ ಜ್ವರ ಇಳಿಯಲೆಂದು ಜನರಲ್‌ರಿಗೆ ಬಿಗಿಯಾಗಿ ಹೊದಿಕೆಗಳನ್ನು ಹೊದಿಸಿದ. ಅನೇಕ ಹೊದಿಕೆಗಳು ಒದ್ದೆಯಾದವು, ಸ್ವಲ್ಪ ಹೊತ್ತು ಸುಧಾರಣೆ ಕಾಣುತ್ತಿತ್ತು, ಆದರೆ ಮತ್ತೆ ಸನ್ನಿಯ ಸ್ಥಿತಿಗೆ ಮರಳುತ್ತಿದ್ದರು. "ಆ ಅನಿಷ್ಟ ಪಿಳ್ಳಂಗೋವಿಗಳ ಸದ್ದನ್ನು ನಿಲ್ಲಿಸಿ" ಎಂದು ಅನೇಕ ಬಾರಿ ಕಿರುಚಿದ್ದರು. ಆದರೆ ಈಗ ಯಾರೂ ಅವರಿಗೆ ಸಹಾಯ ಮಾಡುವಂತಿರಲಿಲ್ಲ, ಏಕೆಂದರೆ ಪಿಳ್ಳಂಗೋವಿಗಳ ಸದ್ದು ಮಧ್ಯರಾತ್ರಿಯಿಂದಲೇ ನಿಂತಿತ್ತು. ತಮ್ಮ ಖಿನ್ನತೆಗೆ ಯಾರು ಕಾರಣರೆಂಬುದು ಅವರಿಗೆ ಆನಂತರ ಗೊತ್ತಾಯಿತು.

"ಆ ಕೊಳಕು ಇಂಡಿಯನ್‌ಗೆ ನೀವು ನನ್ನ ಅಂಗಿ ಕೊಡುವವರೆಗೆ ನಾನು ಚೆನ್ನಾಗಿಯೇ ಇದ್ದೆ" ಎಂದರು ಜನರಲ್.

ಹೊಂಡಾಗೆ ಹೋಗುವ ಪ್ರಯಾಣದ ಕೊನೆಯ ಘಟ್ಟವು ಕಾದು ದ್ರವವಾದ ಗಾಜಿನಂತಿದ್ದ ಗಾಳಿಯಲ್ಲಿ ಜೀವ ಬಿಗಿ ಹಿಡಿದುಕೊಂಡು ಸಾಗಬೇಕಾದ ಕಂದರದ ಗುಂಟ ಮುಂದುವರಿದಿತ್ತು; ಅವರಂತೆ ದೇಹದಾರ್ಢ್ಯ ಮತ್ತು ಸಂಕಲ್ಪಶಕ್ತಿ ಇರುವವರು ಮಾತ್ರವೇ ಕಳೆದ ರಾತ್ರಿಯ ನರಕಾನುಭವದ ನಂತರವೂ ಅಂತಹ ಪ್ರಯಾಣ ಕೈಗೊಳ್ಳಲು ಸಾಧ್ಯ. ಮೊದಲ ಕೆಲವು ಲೀಗ್‌ಗಳ ತರುವಾಯ ತಮ್ಮ ಎಂದಿನ ಸ್ಥಾನವನ್ನು ಬದಲಾಯಿಸಿ ಕರ್ನಲ್ ವಿಲ್ಸನ್ ಜೊತೆಗೆ ಸವಾರಿಯಲ್ಲಿ ಬಂದರು; ಇದು ಇಸ್ಪೀಟಾಟದ ಕಾಲದಲ್ಲಿ ಕೊಟ್ಟ ತೊಂದರೆಗಳನ್ನು ಮರೆತುಬಿಡುವಂತೆ ಕೇಳಿಕೊಳ್ಳುವುದರ ಸೂಚನೆ ಎಂಬುದನ್ನು ಅರ್ಥಮಾಡಿಕೊಳ್ಳಬಲ್ಲವನಾಗಿದ್ದ ವಿಲ್ಸನ್. ಆನರಲ್ ತಮ್ಮ ಕೈಯನ್ನಿರಿಸಿಕೊಳ್ಳಲು ಅನುವಾಗುವಂತೆ

ಡೇಗೆಯನ್ನು ಸಾಕುವವನ ಹಾಗೆ ತಮ್ಮ ತೋಳನ್ನು ಅವನೆಡೆಗೆ ಚಾಚಿದರು. ಈ ರೀತಿ ಅವರಿಬ್ಬರೂ ಒಂದಾದರು; ಜನರಲ್‌ರ ಸೌಜನ್ಯ ಕರ್ನಲ್ ವಿಲ್ಸನ್‌ನ ಮನಸ್ಸನ್ನು ತಟ್ಟಿತು, ತಮ್ಮ ಶಕ್ತಿಯನ್ನೆಲ್ಲ ಬಿಟ್ಟು ಜನರಲ್ ಉಸಿರು ಬಿಗಿಹಿಡಿದು ಹಲ್ಲಣದಲ್ಲಿ ಬಾಗದೆ ಕುಳಿತರು. ಅತ್ಯಂತ ಕಡಿದಾದ ದಾರಿ ಮುಗಿದಾಗ ಯಾವುದೋ ಕಾಲದ್ದೆಂಬಂತಿದ್ದ ಧ್ವನಿಯಲ್ಲಿ ಅವರು ಕೇಳಿದರು: "ಲಂಡನ್ ಈಗ ಹೇಗಿರಬಹುದು ಎಂದು ನಿಮ್ಮಗನ್ನಿಸುತ್ತೆ?"

ಕರ್ನಲ್ ವಿಲ್ಸನ್ ಆಗಸದ ಮಧ್ಯದಲ್ಲಿದ್ದ ಸೂರ್ಯನತ್ತ ನೋಡಿ, "ತುಂಬ ಕೆಟ್ಟದಾಗಿರತ್ತೆ, ಜನರಲ್" ಎಂದ.

ಆಶ್ಚರ್ಯವನ್ನೇನೂ ವ್ಯಕ್ತಪಡಿಸದೆ ಅದೇ ಧ್ವನಿಯಲ್ಲಿಯೇ ಮತ್ತೊಂದು ಪ್ರಶ್ನೆಯನ್ನು ಮುಂದಿಟರ್ರು: "ಹಾಗ್ಯಾಕೆ?"

"ಯಾಕೆ ಅಂದರೆ, ಈಗ ಅಲ್ಲಿ ಸಾಯಂಕಾಲ ಆರು ಗಂಟೆಯ ಸಮಯ, ಅದು ಲಂಡನ್‌ನಲ್ಲಿ ಅತ್ಯಂತ ಕೆಟ್ಟ ಸಮಯ. ಕೊಚ್ಚೆಯ ಹಾಗಿರೋ ಕೊಳಕು ನೀರಿನ ಮಳೆ ಬೀಳ್ತಿರಬೇಕು ಅಲ್ಲಿ. ಸ್ಪ್ರಿಂಗ್ ಅಂದರೆ ನಮಗೆ ಅಮಂಗಳ ಸಮಯ" ಎಂದ ವಿಲ್ಸನ್.

"ಅಂದರೆ ನೀವಿನ್ನೂ ಊರಿನ ಗೀಳನ್ನು ಗೆದ್ದಿಲ್ಲ ಅನ್ನಿಸತ್ತೆ."

"ಅದಕ್ಕೆ ವ್ಯತಿರಿಕ್ತ, ಊರಿನ ಗೀಳು ನನ್ನನ್ನು ಆವರಿಸಿಬಿಟ್ಟಿದೆ. ಅದನ್ನು ನಾನು ಸ್ವಲ್ಪವೂ ತಡೆಯೊಲ್ಲ" ಎಂದ ವಿಲ್ಸನ್.

"ಹಾಗಾದ್ರೆ ನಿಮಗೆ ವಾಪಸ್ಸು ಹೋಗಕ್ಕೆ ಇಷ್ಟವಿದೆಯೋ ಇಲ್ಲವೋ?"

"ನನಗೇ ಗೊತ್ತಿಲ್ಲ, ಜನರಲ್. ನಿಯಂತ್ರಣದಲ್ಲಿಲ್ಲದಿರೋ ವಿಧಿಯ ಕೈಯಲ್ಲಿ ನಾನು ಸಿಕ್ಕಿಹಾಕಿಕೊಂಡಿದ್ದೀನಿ" ಎಂದುತ್ತರಿಸಿದ ವಿಲ್ಸನ್.

ಅವನ ಕಣ್ಣಲ್ಲಿಯೇ ತನ್ನ ದೃಷ್ಟಿ ನೆಟ್ಟ ಜನರಲ್ ಅಚ್ಚರಿಯಿಂದ ನುಡಿದರು: "ಅದನ್ನು ಹೇಳಬೇಕಾದವನು ನಾನು."

ಮತ್ತೆ ಮಾತಾಡಿದಾಗ ಅವರ ಧ್ವನಿ ಮತ್ತು ಮನಃಸ್ಥಿತಿಗಳೆರಡೂ ಬದಲಾಗಿದ್ದವು. "ಯೋಚನೆ ಮಾಡಬೇಡಿ. ಏನೇ ಬರಲಿ ನಾವು ಯೂರೋಪ್‌ಗೆ ಹೋಗೋಣ, ಬೇರಾವುದೇ ಕಾರಣಕ್ಕಲ್ಲದಿದ್ದರೂ ನಿಮ್ಮ ತಂದೆ ನಿಮ್ಮನ್ನು ನೋಡುವಂತೆ ಮಾಡುವುದಕ್ಕಾಗಿ."

ದೀರ್ಘ ಕಾಲ ಆಲೋಚನೆಯಲ್ಲಿ ಮುಳುಗಿದ್ದ ಜನರಲ್ ಕೊನೆಗೆ ಹೇಳಿದ: "ಒಂದು ಕೊನೆ ಮಾತು ಹೇಳ್ತೀನಿ, ಪ್ರಿಯ ವಿಲ್ಸನ್: ಅವರು ನಿಮ್ಮನ್ನೇನಾದರೂ ಕರೆದುಕೊಳ್ಳಲಿ, ನಯಗಾರ ಸೂಳೆಮಗ ಅಂತ ಮಾತ್ರ ಕರೆಯಬಾರದು."

ಗಂಭೀರ ಪಶ್ಚಾತ್ತಾಪದ ಮಾತುಗಳು ರೂಢಿಯಾಗಿದ್ದ, ಅದೂ ಬಿರುಸಾದ ಇಸ್ಪೀಟಾಟದ ನಂತರವೋ ಅಥವಾ ಯುದ್ಧದಲ್ಲಿ ಗೆಲವು

ಪಡೆದಾಗಲೋ, ಕರ್ನಲ್ ವಿಲ್ಸನ್ ಮತ್ತೊಮ್ಮೆ ಜನರಲ್ ಅವರ ಮಾತುಗಳಿಗೆ ಮರುಳಾದ. ಅವರು ನಿಧಾನಗತಿಯಲ್ಲಿ ಮುಂದುವರಿದಿದ್ದರು; ಅಮೆರಿಕಗಳಲ್ಲಿಯೇ ಅತ್ಯಂತ ಘನವಂತ ಅಸ್ವಸ್ಥನ ಜ್ವರತಪ್ತ ಕೈ ತನ್ನನ್ನು ಬೇಟೆಯಾಡುವ ಫ಼ಾಲ್ಕನ್ ಹಾಗೆ ಹಿಡಿದಿತ್ತು. ಗಾಳಿ ಬಿರುಬಿಸಿಯಾಗುತ್ತಿತ್ತು, ಮೇಲೆ ತಮ್ಮ ತಲೆಯ ಸುತ್ತ ಹಾರಾಡುತ್ತಿದ್ದ ರಣಹದ್ದುಗಳನ್ನು ನೊಣಗಳಂತೆ ಹೊಡೆದೋಡಿಸಬೇಕಾಗಿತ್ತು.

ಅತ್ಯಂತ ಕಠಿಣ ಇಳಿಜಾರಿನ ದಾರಿಯಲ್ಲಿ ಅವರಿಗೆ ಯೂರೋಪಿಯನ್ ಪ್ರಯಾಣಿಕರಿದ್ದ ಪಲ್ಲಕ್ಕಿಗಳನ್ನು ಹೊತ್ತ ಇಂಡಿಯನ್ನರ ದಂಡು ಎದುರಾಯಿತು. ಇನ್ನೇನು ಪೂರ್ತಿ ಇಳಿದಾಯ್ತು ಎನ್ನುವಾಗ, ಅವರು ಸಾಗುತ್ತಿದ್ದ ದಿಕ್ಕಿನಲ್ಲಿಯೇ ಒಬ್ಬ ಹುಚ್ಚು ಕುದುರೆ ಸವಾರ ತಮ್ಮನ್ನು ಮೀರಿ ರಭಸದಿಂದ ದೌಡಾಯಿಸಿದ. ಅವನ ತಲೆಯ ಮೇಲೆ ಮುಖವನ್ನು ಪೂರ್ತಿ ಮುಚ್ಚಿದಂತಿದ್ದ ಒಂದು ಕೆಂಪು ಮುಂಡಾಸಿತ್ತು, ಅವನ ಆತುರ ಎಷ್ಟು ಅಸ್ತವ್ಯಸ್ತವಾಗಿತ್ತೆಂದರೆ, ಕ್ಯಾಪ್ಟನ್ ಇಬಾರಾನ ಹೇಸರಗತ್ತೆಯು ಭಯದಂದ ಕಂದರದ ಅಂಚಿಗೆ ಸರಿದಿತ್ತು. “ಲೋ ಅಯೋಗ್ಯ, ಎಲ್ಲಿ ಹೋಗ್ತಾ ಇದ್ದೀಯ ಅನ್ನೋ ಎಚ್ಚರವಿರಲಿ” ಎಂದು ಜನರಲ್ ಅವರೇ ಕೂಗಬೇಕಾಯಿತು. ಮೊದಲ ತಿರುವಿನಲ್ಲಿ ಕಣ್ಮರೆಯಾಗುವವರೆಗೂ ಅವನತ್ತಲೇ ನೆಟ್ಟನೋಟದಿಂದ ನೋಡುತ್ತಿದ್ದರು ಕಂದರದ ಕೆಳ' ತಿರುವುಗಳಲ್ಲಿ ಕಾಣಿಸಿದಾಗಲೆಲ್ಲ ಅವನತ್ತಲೇ ದೃಷ್ಟಿ ಹಾಯಿಸುತ್ತಿದ್ದರು.

ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಅವರು ಕೊನೆಯ ಗುಡ್ಡದ ಶಿಖರವನ್ನು ದಾಟಿದ್ದರು, ವಿಶಾಲ ಬಯಲಿನ ಆಚೆಗಿನ ದೇದೀಪ್ಯಮಾನವಾದ ದಿಗಂತವು ಅವರ ಮುಂದೆ ತೆರೆದುಕೊಂಡಿತು. ವೈಭವೋಪೇತ ಹೊಂಡಾ ನಗರವು ಅಗಲವಾದ ನದಿಗೆ ಅಡ್ಡಲಾಗಿ ಕ್ಯಾಸ್ಟಿಲ್ ಕಲ್ಲಿನಿಂದ ಕಟ್ಟಿದ್ದ ಸೇತುವೆಯ ಆಚೆಗಿನ ಬದಿಯಲ್ಲಿತ್ತು. ಸೇತುವೆಯ ಗೋಡೆಗಳೂ ನಗರದ ಚರ್ಚ್‌ನ ಗೋಪುರವೂ ಭೂಕಂಪದಿಂದ ನಾಶವಾಗಿದ್ದವು. ಜನರಲ್ ಅವರ ಮನಸ್ಸು ಉರಿಯುವ ಕಣಿವೆಯ ಬಗ್ಗೆಯೇ ಯೋಚಿಸುತ್ತಿತ್ತು, ಅತೀವ ವೇಗದಲ್ಲಿಯೇ ಸಾಗುತ್ತಿದ್ದ ಕೆಂಪು ಮುಂಡಾಸಿನ ಕುದುರೆಸವಾರ ಸೇತುವೆ ದಾಟುವುದನ್ನು ಕಂಡಾಗ ಹೊರತು, ಅವರ ಮುಖಭಾವ ಪ್ರಶಾಂತವಾಗಿತ್ತು. ಆಗ ತಮ್ಮ ಕನಸುಗಳಲ್ಲಿ ಕಂಡಿದ್ದ ಬೆಳಕು ಮತ್ತೆ ದೀಪ್ತಗೊಂಡಿತು.

“ದೇವರು ಕರುಣಾಮಯಿ. ಅವನು ಅಷ್ಟು ವೇಗವಾಗಿ ಸವಾರಿ ಮಾಡಲು ಇರಬಹುದಾದ ಒಂದೇ ಕಾರಣವೆಂದರೆ ನಾವು ಹೊರಟ ವಿಷಯವನ್ನು ತಿಳಿಸುವ ಪತ್ರವನ್ನು ಕಸಾಂಡ್ರೋಗೆ ಹೊತ್ತೊಯ್ಯುತ್ತಿರುವುದು” ಎಂದರು.

## ಅಧ್ಯಾಯ ೩

ತಮ್ಮ ಆಗಮನವನ್ನು ಸಾರಲು ಯಾವುದೇ ಸಾರ್ವಜನಿಕ ಮೆರವಣಿಗೆಯ ಏರ್ಪಾಟು ಇರಕೂಡದೆಂದು ಎಚ್ಚರಿಸಿದ್ದರೂ, ಅವರನ್ನು ಸ್ವಾಗತಿಸಲು ಸದೃಢ ಕುದುರೆ ಸವಾರರ ಒಂದು ದಂಡು ನಗರದ ಮಹಾದ್ವಾರದಲ್ಲಿ ಎದುರಾಯಿತು; ಅಲ್ಲದೆ ಗವರ್ನರ್ ಪೊಸಾಡ ಗುಟಿಯೆರೆಜ್ ಮೂರು ದಿನಗಳ ವಾದ್ಯವೃಂದ ಮತ್ತು ಪಟಾಕಿ ಪ್ರದರ್ಶನದ ಏರ್ಪಾಟು ಮಾಡಿದ್ದರು. ಆದರೆ ಅವರು ವಾಣಿಜ್ಯ ಪ್ರದೇಶದಲ್ಲಿನ ಬೀದಿಗಳಲ್ಲಿ ಸಾಗುವ ಮುಂಚೆಯೇ ಭಾರಿ ಮಳೆ ಬಂದು ಸಡಗರವನ್ನು ಹಾಳುಮಾಡಿತು. ಅದೋ ಅಕಾಲದ ಮಳೆ, ಭಾರಿ ದಾಂಧಲೆಯನ್ನೇ ಮಾಡಿಬಿಟ್ಟಿತು, ನಡೆಯುವ ಹಾದಿಯಲ್ಲಿನ ಹಾಸುಗಲ್ಲುಗಳನ್ನೆಲ್ಲ ಹಾಳುಮಾಡಿ ಅಕ್ಕಪಕ್ಕದ ಪ್ರದೇಶದಲ್ಲೆಲ್ಲ ನೀರು ತುಂಬಿಕೊಂಡಿತು, ಆದರೆ ಶಕೆ ಮಾತ್ರ ಹಾಗೆಯೇ ಇತ್ತು. ಸ್ವಾಗತ ಮಾತುಗಳ ಮಳೆಯ ನಡುವೆ ಯಾರೋ ಕ್ಲೀಷೆಯ ಮಾತನ್ನೇ ಪುನರುಚ್ಚರಿಸಿದರು: “ಇಲ್ಲಿ ಶಕೆ ಎಷ್ಟು ಜಾಸ್ತಿಯೆಂದರೆ ಕೋಳಿಗಳು ಬೇಯಿಸಿದ ಮೊಟ್ಟೆಯನ್ನೇ ಇಡುತ್ತವೆ.” ಮುಂದಿನ ಮೂರು ದಿನಗಳ ಕಾಲವೂ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಇದೇ ವಿನಾಶ ಮುಂದುವರೆಯಿತು. ಮಧ್ಯಾಹ್ನದ ನಿದ್ರೆಯ ಮಂಪರಿನಲ್ಲಿ ಕಪ್ಪು ಮೋಡವೊಂದು ಬೆಟ್ಟದ ತುದಿಯಿಂದ ಇಳಿದು ಬಂದು ನಗರದ ಮೇಲೆ ನಿಂತು ಇದ್ದಕ್ಕಿದ್ದಂತೆ ಪ್ರವಾಹವನ್ನೇ ಉಗುಳಿಬಿಟ್ಟಿತು. ನಿರ್ಮಲವಾದ ಆಗಸದಲ್ಲಿ ಮತ್ತೆ ಹೊಳೆಯುವ ಸೂರ್ಯ ಕಾಣಿಸಿಕೊಂಡ, ಹಿಂದಿನಂತೆಯೇ ಕೆಂಡಗಳನ್ನುಗುಳುತ್ತ. ಪ್ರವಾಹದಿಂದಾಗಿ ಬೀದಿಗಳಲ್ಲಿ ಹರಡಿಕೊಂಡಿದ್ದ ಕಸಕಡ್ಡಿಗಳನ್ನೆಲ್ಲ ಕಸಗುಡಿಸುವವರ ದಂಡು ಬಂದು ತೆಗೆದುಹಾಕಿತು. ಮಾರನೆಯ ದಿನ ಮತ್ತೆ ಕಪ್ಪು ಮೋಡಗಳು ಬೆಟ್ಟದ ತುದಿಯಲ್ಲಿ ಜಮಾಯಿಸಲು ತೊಡಗಿದವು, ದಿನಪೂರ್ತಿ ಹಗಲೂ ಇರುಳು, ಮನೆಯೊಳಗೆ ಹೊರಗೆ, ಶಕೆ ಏದುಸಿರು ಬಿಡುವ ಸದ್ದು ಕೇಳಿಸುತ್ತಿತ್ತು.

ಜ್ವರದಿಂದ ಬಳಲಿ ಹೋಗಿದ್ದ ಜನರಲ್‌ರಿಗೆ ಈ ಅಧಿಕೃತ ಸ್ವಾಗತವನ್ನು ತಡೆದುಕೊಳ್ಳುವ ತ್ರಾಣವಿರಲಿಲ್ಲ. ಪುರಭವನದ ಸಭಾಂಗಣದಲ್ಲಿ ಗಾಳಿಯು ಕುದಿಯುತ್ತ ನುಸುಳಾಡುತ್ತಿತ್ತು. ಅಲ್ಲಿ ಅವರು ತಮ್ಮ ಆರಾಮ ಕುರ್ಚಿಯಿಂದ ಮೇಲೇಳದೆ ಮನಸ್ಸಿಲ್ಲದೆಯೇ ನಿಧಾನವಾಗಿ ಜಾಗರೂಕ ಬಿಷಪ್‌ನ ಉಪದೇಶಭಾಷಣದಂತೆ ಕೆಲವು ಮಾತುಗಳನ್ನಾಡಿದರು. ಯಕ್ಷಿಯಂತೆ ನಿರಿಹಿಡಿದ ನವಿರಾದ ಉಡುಪು ಮತ್ತು ರೆಕ್ಕೆಗಳನ್ನು ತೊಟ್ಟಿದ್ದ ಹತ್ತು ವರ್ಷದ ಹೆಣ್ಣುಮಗುವೊಂದು ಆತುರದಿಂದಾಗಿ ಗಂಟಲು

ಹಿಡಿಯುತ್ತಿದ್ದರೂ ಜನರಲ್ ಅವರ ಹಿರಿಮೆಯನ್ನು ಹೊಗಳುವ ಒಂದು ಸ್ವಾಗತಗೀತೆಯನ್ನು ಹಾಡಿತು. ಆದರೆ ಒಂದು ತಪ್ಪುಮಾಡಿತು, ತಪ್ಪಾದ ಕಡೆಯಿಂದ ಪುನಃ ಆರಂಭಿಸಿ, ಮತ್ತೆ ಸರಿಪಡಿಸಿಕೊಳ್ಳಲಾಗದಂತೆ ಮರೆತುಬಿಟ್ಟಿತು. ಮುಂದೇನು ಮಾಡಬೇಕೆಂಬುದು ತೋಚದೆ ಅವರ ಕಡೆ ಗಾಬರಿಯಿಂದ ನೋಡುತ್ತ ನಿಂತುಬಿಟ್ಟಿತು. ಜನರಲ್ ಸಮಾಧಾನಪಡಿಸುವಂತೆ ಅವಳತ್ತ ನಸುನಗೆ ಬೀರಿ, ಮೆಲುದನಿಯಲ್ಲಿ ಮರೆತ ಸಾಲುಗಳನ್ನು ಜ್ಞಾಪಿಸಿದರು:

*ಅವನ ಕಿರುಗತ್ತಿಯ ಹೊಳಪು*
*ಆತನ ವೈಭವಗಳ ಪ್ರತಿಫಲನ.*

ತಮ್ಮ ಅಧಿಕಾರದ ಮೊದಲ ವರ್ಷಗಳಲ್ಲಿ ಜನರಲ್ ಭರ್ಜರಿ ಔತಣಕೂಟಗಳನ್ನೇರ್ಪಡಿಸಿ ಅನೇಕರನ್ನು ಆಹ್ವಾನಿಸುವ ಯಾವ ಸಂದರ್ಭವನ್ನು ಕಳೆದುಕೊಳ್ಳುತ್ತಿರಲಿಲ್ಲ; ಬಂದವರಿಗೆ ಬಲವಂತ ಮಾಡಿ ಕಂಠಪೂರ್ತಿ ಊಟಮಾಡುವಂತೆ ಉಪಚರಿಸುತ್ತಿದ್ದರು. ಆ ಸಂದರ್ಭಗಳಲ್ಲಿ ಜನರಲ್ ಬಳಸುತ್ತಿದ್ದ ಅವರ ಆದ್ಯಕ್ಷರುಗಳು ಕೆತ್ತಿದ್ದ ಪೀಠವನ್ನು ಜೋಸೆ ಪೆಲಾಸಿಯೋಸ್ ಈಗಲೂ ಔತಣದ ದಿನಗಳಂದು ಜೊತೆಗೆ ಒಯ್ಯುತ್ತಿದ್ದ. ಹೊಂಡ ನಗರದ ಸ್ವಾಗತ ಸಮದರ್ಭದಲ್ಲಿ ತಾವು ಗೌರವ ಅತಿಥಿಯಾಗಿ ಕುಳಿತುಕೊಳ್ಳಲು ಸಮ್ಮತಿಸಿದ್ದರು, ಆದರೆ ಒಂದು ಗ್ಲಾಸು ಪೋರ್ಟ್ ಸೇವಿಸಿ ನದಿ ಏಡಿಯ ಸಾರನ್ನು ರುಚಿ ನೋಡಿದಾಗ, ಅದು ನಾಲಗೆಯ ಮೇಲೆ ಒಂದು ಬಗೆಯ ಕೆಟ್ಟ ರುಚಿಯನ್ನುಳಿಸಿತ್ತು.

ಬಹು ಬೇಗ ಎದ್ದು ತಮಗಾಗಿ ಮನೆಯಲ್ಲಿ ಗವರ್ನರ್ ಪೊಸಾಡ ಸಿದ್ಧಪಡಿಸಿದ್ದ ವಿಶ್ರಾಂತಿ ಕೋಣೆಗೆ ಹೋದರು; ಆದರೆ ಮಾರನೇ ದಿನ ಸಂಟಾ ಫ಼ ದ ಬೊಗೋಟದಿಂದ ಪತ್ರ ಬರಲಿದೆಯೆಂಬ ನಿರೀಕ್ಷಣೆಯ ಸುದ್ದಿ ಅವರ ಅಲ್ಪಸ್ವಲ್ಪ ನಿದ್ದೆಯನ್ನೂ ಹಾಳುಮಾಡಿತ್ತು. ಮೂರು ದಿನಗಳ ಬಿಡುವಿನ ನಂತರ ಭಯಗ್ರಸ್ತರಾಗಿ ತಮ್ಮ ದುರದೃಷ್ಟದ ಬಗ್ಗೆಯೇ ಆಲೋಚಿಸತೊಡ'ಗಿ, ಮತ್ತೆ ಜೋಸೆ ಪೆಪಾಸಿಯೋಸ್‌ಗೆ ಕಿರಕಿರಿ ಪ್ರಶ್ನೆಗಳನ್ನು ಹಾಕತೊಡಗಿದರು. ತಾವು ಹೊರಟ ಮೇಲೆ ಅಲ್ಲಿ ಏನೇನು ನಡೆದಿದೆ, ತಮ್ಮದ'ಕ್ಕೆ ಭಿನ್ನವಾದ ಸರ್ಕಾರ ಹೇಗಿರಬಹುದು, ತಾವಿಲ್ಲದಾಗ ಅಲ್ಲಿನ ಜೀವನ ಹೇಗಿರಬಹುದು ಎಂಬುದನ್ನೆಲ್ಲ ತಿಳಿಯುವ ತವಕ ಅವರಿಗೆ. ಅತ್ಯಂತ ನಿರಾಸೆಯ ಒಂದು ಸಂದರ್ಭದಲ್ಲಿ ಅವರು ಕೇಳಿದ್ದರು: "ಅಮೆರಿಕ ಎಂಬುದು ಹುಚ್ಚಾದ ಅರ್ಧ ಜಗತ್ತು." ಇದು ಮತ್ತಷ್ಟು ನಿಜ ಎಂದು ಅವರಿಗೆ ತೋರಲು ಹೊಂಡ ನಗರದಲ್ಲಿನ ಮೊದಲ ರಾತ್ರಿಯೇ ಕಾರಣವಾಯಿತು.

ಇಡೀ ರಾತ್ರಿಯನ್ನೆಲ್ಲ ಅವರು ಕುತೂಹಲದಿಂದ ಕಳೆದರು, ಜೊತೆಗೆ ಪರದೆಯೊಳಗೆ ಮಲಗಲು ಇಷ್ಟಪಡದಿದ್ದುದರಿಂದ ರಾತ್ರಿಯೆಲ್ಲ ಸೊಳ್ಳೆಯ ಕಾಟ

ಬೇರೆ. ಎಷ್ಟೋ ಬಾರಿ ಮೇಲೆದ್ದು ತಮಗೆ ತಾವೇ ವಟಗುಟ್ಟಿಕೊಳ್ಳುತ್ತ ಕೋಣೆಯಲ್ಲೆಲ್ಲ ಸುತ್ತಾಡುತ್ತಿದ್ದರು, ಕೆಲವು ಬಾರಿ ಜೋಲಿಮಂಚದಲ್ಲಿ ಮಲಗಿ ವಿಪರೀತ ಜೋರಾಗಿ ತೂಗಿಕೊಳ್ಳುತ್ತಿದ್ದರು, ಇನ್ನೂ ಕೆಲವು ಸಮಯ ಜ್ವರದ ತಾಪ ತಡೆಯಲಾರದೆ ಮೈಮೇಲಿನ ಹೊದಿಕೆಯನ್ನು ಬಿಗಿಯಾಗಿ ಸುತ್ತಿಕೊಂಡು ಉರುಳಾಡುತ್ತಿದ್ದರು, ಸನ್ನಿಯಿಂದ ಕಿರಿಚುತ್ತ ಬೆವರಿನ ಪ್ರವಾಹದಲ್ಲಿ ತೊಯ್ದುಹೋಗುತ್ತಿದ್ದರು. ಜೋಸೆ ಪೆಲಾಸಿಯೋಸ್ ಅವರೊಡನೆಯೇ ಇದ್ದ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ, ತಮ್ಮ ನಡುವಂಗಿಯ ಕಾಜಾಗಳಿಗೆ ಎರಡು ಗಡಿಯಾರಗಳನ್ನು ಕಟ್ಟಿಕೊಂಡಿದ್ದರೂ ಅವುಗಳ ಕಡೆಗೆ ನೋಡದೇ ಯಜಮಾನರು ವಿಚಾರಿಸಿದಾಗಲೆಲ್ಲ ಎಷ್ಟು ಗಂಟೆ ಎಷ್ಟು ನಿಮಿಷ ಎಂದು ನಿಖರವಾಗಿ ಸಮಯವನ್ನು ತಿಳಿಸುತ್ತಿದ್ದ. ಜನರಲ್‌ರಿಗೆ ತಾನಾಗಿ ತೂಗಿಕೊಳ್ಳಲು ತ್ರಾಣವಿಲ್ಲದಿದ್ದಾಗ ಅವರ ಜೋಲಿಮಂಚನ್ನು ತೂಗುತ್ತಿದ್ದ. ಅವರು ನಿದ್ದೆ ಹೋಗುವವರೆಗೂ ಮುತ್ತಿಕೊಳ್ಳುತ್ತಿದ್ದ ಸೊಳ್ಳೆಗಳನ್ನು ಒಂದು ಬಟ್ಟೆಯಿಂದ ಹೊಡೆದೋಡಿಸುತ್ತಿದ್ದ. ಆದರೆ ಅವರು ನಿದ್ದೆ ಹೋಗಿ ಒಂದು ಗಂಟೆ ಮಾತ್ರ ಆಗಿತ್ತು, ಒಳಾಂಗಣದಲ್ಲಿ ಮನುಷ್ಯರು ಮತ್ತು ಪ್ರಾಣಿಗಳ ಸದ್ದು ಕೇಳಿ ಬೆಳಗಿನ ಜಾವಕ್ಕೆ ಮುಂಚೆಯೇ ಧಿಗ್ಗನೆದ್ದು ಕುಳಿತರು. ಪತ್ರವನ್ನು ತೆಗೆದುಕೊಳ್ಳಲು ತಮ್ಮ ರಾತ್ರಿ ಉಡುಪಿನಲ್ಲಿಯೇ ಹೊರನಡೆದರು.

ಜನರಲ್ ಅವರ ಕಿರುವರೆಯದ ಮೆಕ್ಸಿಕನ್ ಆಪ್ತಸಹಾಯಕನಾದ ಕ್ಯಾಪ್ಟನ್ ಆಗಸ್ಟೀನ್ ದ ಇಟೂರ್‌ಬೈಡ್ ಪತ್ರಗಳ ಚೀಲದೊಂದಿಗೆ ಬಂದ; ಕೊನೆ ಗಳಿಗೆಯ ತುರ್ತುಪರಿಸ್ಥಿತಿಯಲ್ಲಿ ಅವನನ್ನು ಸಂಟಾ ಫ಼ ದ ಬೊಗೋಟದಲ್ಲಿ ಬಂಧನದಲ್ಲಿಡಲಾಗಿತ್ತು. ಅವನು ತಂದವುಗಳಲ್ಲಿ ಫೀಲ್ಡ್ ಮಾರ್ಷಲ್ ಸ್ಯೂಕ್ರ್ ಬರೆದಿದ್ದ ಒಂದು ಪತ್ರ ಕೂಡ ಇತ್ತು; ವಿದಾಯ ಹೇಳಲು ತಾವು ಸರಿಯಾದ ಸಮಯಕ್ಕೆ ಬರದಿದ್ದುದಕ್ಕಾಗಿ ಅವರು ಅದರಲ್ಲಿ ವಿಷಾದ ವ್ಯಕ್ತಪಡಿಸಿದ್ದರು. ಎರಡು ದಿನಗಳ ಹಿಂದೆ ಅಧ್ಯಕ್ಷ ಕ್ಯಾಸೆಡೋ ಬರೆದಿದ್ದ ಪತ್ರವೂ ಇತ್ತು. ಸ್ವಲ್ಪ ಸಮಯದ ಬಳಿಕ ಗವರ್ನರ್ ಮಲಗುವ ಕೋಣೆಗೆ ಬಂದರು, ಅವರ ಕೈಯಲ್ಲಿ ಭಾನುವಾರದ ಪತ್ರಿಕೆಗಳ ತುಣುಕುಗಳಿದ್ದವು. ಆ ಮಬ್ಬಿನಲ್ಲಿ ಓದಲು ತಮಗೆ ಸಾಧ್ಯವಿಲ್ಲದ್ದರಿಂದ ಅವುಗಳಲ್ಲಿದ್ದ ವಿಷಯವನ್ನು ಗಟ್ಟಿಯಾಗಿ ಓದಿ ಹೇಳಲು ಅವರನ್ನು ಕೇಳಿಕೊಂಡರು.

ಸುದ್ದಿಯ ಪ್ರಕಾರ, ಭಾನುವಾರ ಸಂಟಾ ಫ಼ ದ ಬೊಗೋಟದಲ್ಲಿ ಹವಾಗುಣ ತಿಳಿಯಾಗಿತ್ತು; ಅಂತಹ ಬೆಳಗುವ ಬಿಸಿಲು ಬಹಳ ದಿನಗಳಿಂದ ಕಾಣದಿದ್ದುದರಿಂದ ಸಂಭ್ರಮಗೊಂಡ ಅಸಂಖ್ಯ ಕುಟುಂಬಗಳು ಕುದುರೆ ಲಾಯಗಳ ಬಳಿ ಜಮಾಯಿಸಿ ಹುಲ್ಲು ಹಾಸಿನ ಮೇಲೆ ಕುಳಿತು ಬುಟ್ಟಿಗಳಲ್ಲಿ

ತಂದಿದ್ದ ಹುರಿದ ಹಂದಿ ಮಾಂಸ, ಬೇಯಿಸಿದ ಬಾಡು, ರಕ್ತ ಸಾಸೇಜ್ ಕಲಸಿದ ಅನ್ನ, ಕರಗಿಸಿದ ಗಿಣ್ಣು ಸೇರಿಸಿದ ಆಲೂಗಡ್ಡೆಗಳು ಮುಂತಾದವನ್ನು ತಿಂದು ಸಂತೋಷಪಟ್ಟರಂತೆ. ಈ ಮೇ ತಿಂಗಳ ಪವಾಡ ಶನಿವಾರದ ಬಿಕ್ಕಟ್ಟನ್ನು ತಿಳಿಗೊಳಿಸಿತ್ತು. ಸ್ಯಾನ್ ಬಾರ್ಟೋಲೋಮಿ ಅಕಾಡೆಮಿಯ ವಿದ್ಯಾರ್ಥಿಗಳು ಬೀದಿಗಳಲ್ಲಿ ಸೇರಿ ಮತ್ತೊಮ್ಮೆ ಅಣುಕು ಮರಣದಂಡನೆಯನ್ನು ಪ್ರದರ್ಶಿಸಿದ್ದರು, ಆದರೆ ಅದರ ಪರಿಣಾಮ ಮಾತ್ರ ಸೊನ್ನೆ. ಬೇಸರಗೊಂಡ ಅವರೆಲ್ಲ ಕತ್ತಲಾಗುವ ಮುಂಚೆಯೇ ಮರಳಿದ್ದರು; ಭಾನುವಾರದಂದು ರೈಫ಼ಲ್‌ಗಳನ್ನು ಕೊಟ್ಟು ತಾರಸ್ತರದ ಗಿಟಾರ್‌ಗಳನ್ನು ಕೊಂಡಿದ್ದರಂತೆ, ಆನಂತರ ಕುದುರೆ ಲಾಯಗಳ ಮುಂದೆ ಸೇರಿ ಬಿಸಿಲು ಕಾಸಿಕೊಳ್ಳಲು ಬಂದಿದ್ದ ಜನಸಮುದಾಯದೊಡನೆ ಸೇರಿ ಬ್ಯಾಂಬುಕೋಸ್ ಅನ್ನು ಹಾಡಿದ್ದರಂತೆ. ಆದರೆ ಆಚರಣೆಯೆಲ್ಲ ಮುಗಿದ ಮೇಲೆ ಸುಮಾರು ಐದು ಗಂಟೆಯ ಹೊತ್ತಿಗೆ ಯಾವ ಮುನ್ಸೂಚನೆಯೂ ಇಲ್ಲದಂತೆ ಮೋಡಗಟ್ಟಿ ಮಳೆ ಸುರಿದಿತ್ತಂತೆ.

ಈ ಪತ್ರವನ್ನು ಓದುತ್ತ ಮಧ್ಯದಲ್ಲಿ ನಿಲ್ಲಿಸಿದ ಪೊಸಾಡ ಗುಟಿಯರೆಜ಼್, "ನಿಮ್ಮ ಹಿರಿಮೆಯನ್ನು ಈ ಜಗತ್ತಿನ ಯಾವುದೇ ಶಕ್ತಿ ಮಸುಳಿಸಲು ಸಾಧ್ಯವಿಲ್ಲ. ಯಾರು ಏನೇ ಹೇಳಲಿ, ತಾವು ಇಡೀ ಜಗತ್ತಿನಲ್ಲಿಯೇ ಶ್ರೇಷ್ಠ ಕೊಲಂಬಿಯನ್ ಆಗಿ ಮುಂದುವರಿಯುತ್ತೀರಿ, ಜನರಲ್" ಎಂದ.

"ಮತ್ತೆ ಸೂರ್ಯ ಹೊಳೆಯುವಂತೆ ಮಾಡಲು ನಾನು ಹೊರಡುವುದಷ್ಟೇ ಕಾರಣವಾಗಿದ್ದಿದ್ದರೆ, ನನಗೂ ಆ ಬಗ್ಗೆ ಅನುಮಾನವಿಲ್ಲ" ಎಂದುತ್ತರಿಸಿದ್ದರು ಜನರಲ್.

ಕ್ಯಾಸೆಡೋನ ಪತ್ರದಲ್ಲಿ ಅವರನ್ನು ಪ್ರಚೋದಿಸಿದ ಏಕೈಕ ಅಂಶವೆಂದರೆ, ಗಣರಾಜ್ಯದ ಹಂಗಾಮಿ ಅಧ್ಯಕ್ಷ ಕೂಡ ಸಟಾಂಡರ್‌ನ ಅನುಯಾಯಿಗಳನ್ನು, ಅದೊಂದು ಅಧಿಕೃತ ಶಬ್ದ ಎಂಬಂತೆ, ಉದಾರವಾದಿಗಳೆಂದು ಕರೆದದ್ದು. "ತಮ್ಮನ್ನು ಉದಾರವಾದಿಗಳೆಂದು ಕರೆದುಕೊಳ್ಳಲು ಆ ಪುಡಾರಿಗಳಿಗೆ ಅಧಿಕಾರ ಕೊಟ್ಟೋರು ಯಾರು ಅನ್ನೋದು ಮಾತ್ರ ನನಗೆ ಅರ್ಥವಾಗದು. ಕೈಹಾಕಿದ್ದನ್ನೆಲ್ಲ ಕದಿಯುವ ಹಾಗೆಯೇ ಅವರು ಸರಳವೂ ನಿರ್ಮಲವೂ ಆದ ಈ ಶಬ್ದವನ್ನೂ ಕದ್ದಿದ್ದಾರೆ" ಎಂದು ಜನರಲ್ ಹರಿಹಾಯ್ದರು. ಜೋಲಿಮಂಚದಿಂದ ಮೇಲೆದ್ದು ಸೈನಿಕ ಹೆಜ್ಜೆಗಳನ್ನಿಟ್ಟು ಕೋಣೆಯಲ್ಲೆಲ್ಲ ಶತಪಥ ಹಾಕುತ್ತ ಗವರ್ನರ್ ಮುಂದೆ ತಮ್ಮ ಕೋಪವನ್ನು ತೋರಿಸಿಕೊಂಡರು.

"ಸತ್ಯವೆಂದರೆ, ಇರೋದು ಎರಡೇ ಪಕ್ಷಗಳು: ನನ್ನ ಬೆಂಬಲಿಗರು ಹಾಗೂ ನನ್ನ ವಿರೋಧಿಗಳು. ಆ ವಿಷಯ ಬೇರೆಲ್ಲರಿಗಿಂತ ನಿಮಗೆ

ಚೆನ್ನಾಗಿಯೇ ತಿಳಿದಿದೆ. ನನ್ನ ಮಾತನ್ನು ಅವರಾರೂ ನಂಬದಿದ್ದರೂ, ನನಗಿಂತ ಹೆಚ್ಚು ಉದಾರವಾದಿಗಳಿರಲು ಸಾಧ್ಯವಿಲ್ಲ" ಎಂದು ತಮ್ಮ ಮಾತನ್ನು ಕೊನೆಗೊಳಿಸಿದರು.

ಆನಂತರ ಗವರ್ನರ್‌ನ ಖಾಸಗಿ ಸಂದೇಶವಾಹಕನೊಬ್ಬನು ಬಂದು ಮ್ಯಾನ್ಯುಯೆಲ ಸಯೆನ್‌ಜ಼್ ಜನರಲ್ ಅವರಿಗೆ ಪತ್ರ ಬರೆಯದಿರಲು ಕಾರಣ ಅವಳ ಪತ್ರವನ್ನು ಒಯ್ಯದಿರುವಂತೆ ಪತ್ರವಾಹಕನಿಗೆ ಕಠಿಣ ಆದೇಶವಿತ್ತೆಂಬ ವಿಷಯವನ್ನು ಬಾಯಿಮಾತಿನಿಂದ ಹೇಳಿದ. ಈ ಮಾತನ್ನು ಸಾಕ್ಷಾತ್ ಮ್ಯಾನ್ಯುಯೆಲಳೇ ಹೇಳಿಕಳಿಸಿದ್ದಳು. ಆವತ್ತೇ ಅವಳು ಈ ನಿಷೇಧವನ್ನು ಪ್ರತಿಭಟಿಸಿ ಬರೆದ ಪತ್ರವನ್ನು ಹಂಗಾಮಿ ಅಧ್ಯಕ್ಷರಿಗೆ ಕಳಿಸಿದ್ದಳು. ಇದರಿಂದ ಪರಸ್ಪರ ಆರೋಪಣೆಯ ಸರಮಾಲೆಯೇ ನಡೆದು ಮುಂದೆ ಅವಳನ್ನು ದೇಶಾಂತರ ಮತ್ತು ಉಪೇಕ್ಷೆಗೆ ಈಡುಮಾಡುವುದರಲ್ಲಿ ಪರ್ಯವಸಾನವಾಗಿತ್ತು. ಆದರೆ ಅವರ ಯಾತನಾಮಯ ಪ್ರೇಮವ್ಯವಹಾರದಲ್ಲಿ ನಡೆದಿದ್ದ ಭಯಂಕರ ಜಗಳಗಳ ಬಗ್ಗೆ ಸ್ವತಃ ತಿಳಿವಳಿಕೆಯಿದ್ದ ಪೊಸಾಡ ಗುಟಿಯೆರೆಜ್‌ನ ನಿರೀಕ್ಷೆಗೆ ವಿರುದ್ಧವಾಗಿ ಈ ಕಹಿ ಸುದ್ದಿ ಕೇಳಿಯೂ ಜನರಲ್ ಮುಗುಳ್ನಕ್ಕಿದ್ದರು. "ಈ ನನ್ನ ಪ್ರೀತಿಯ ಹುಚ್ಚು ಹೆಂಗಸಿಗೆ ಈ ವಿವಾದಗಳು ಸಹಜವೇ" ಎಂದ.

ಹೊಂಡದಲ್ಲಿನ ಮೂರುದಿನಗಳ ಕಾರ್ಯಕ್ರಮ ಸಿದ್ಧತೆಯ ವಿಷಯದಲ್ಲಿ ವಿತರಣೆಯಿಲ್ಲದ್ದರ ಬಗ್ಗೆ ತನ್ನ ಖೇದವನ್ನು ಜೋಸೆ ಪೊಲಾಸಿಯೋ ಮುಚ್ಚಿಟ್ಟುಕೊಳ್ಳಲಿಲ್ಲ. ಅತ್ಯಾಶ್ಚರ್ಯಕರ ಆಹ್ವಾನವೆಂದರೆ ಅಲ್ಲಿಂದ ಆರು ಲೀಗ್ ದೂರದಲ್ಲಿದ್ದ ಸಂಟಾ ಆನಾದಲ್ಲಿನ ಬೆಳ್ಳಿಗಣಿಗಳಿಗೆ ಭೇಟಿ ನೀಡಲು; ಅದಕ್ಕಿಂತ ಹೆಚ್ಚಿನ ಆಶ್ಚರ್ಯದ ವಿಷಯವೆಂದರೆ ಅದಕ್ಕೆ ಜನರಲ್ ಒಪ್ಪಿಗೆ ನೀಡಿದ್ದು; ಇನ್ನೂ ಅಚ್ಚರಿಯದೆಂದರೆ ಜನರಲ್ ಅಲ್ಲಿ ಭೂಮಿಯಾಳದ ಸುರಂಗಕ್ಕೆ ಭೇಟಿ ನೀಡಿದ್ದು. ಅದಕ್ಕಿಂತ ಹುಚ್ಚುತನದ್ದೆಂದರೆ, ವಾಪಸಾಗುವಾಗ, ತಮಗೆ ವಿಪರೀತ ಜ್ವರ ಮತ್ತು ತಲೆ ಸಿಡಿಯುವಂತಹ ತಲೆನೋವುಗಳಿದ್ದರೂ, ನದಿಯೊಂದರ ನಿಂತ ನೀರಲ್ಲಿ ಈಜಲು ಹೋದದ್ದು. ಅವರು ಒಂದು ಕೈ ಕಟ್ಟಿಸಿಕೊಂಡು ಪ್ರವಾಹದ ಅಗಲವನ್ನು ಈಜಿ ದಾಟುವ ಪಣ ತೊಡುತ್ತಿದ್ದ ಕಾಲ ಆಗಿಹೋಗಿತ್ತು. ಆದರೆ ಈ ಸಲ ಅವರು ದಣಿವಿಲ್ಲದೆ ಅರ್ಧ ಗಂಟೆ ಈಜಿದರು. ಅವರ ಮೂಳೆಚಕ್ಕಳವಾಗಿದ್ದ ದೇಹ ಮತ್ತು ಸಣಕಲ ಕಾಲುಗಳನ್ನು ನೋಡಿದವರಿಗೆ ಇಷ್ಟು ಕೃಶವಾಗಿದ್ದರೂ ಅವರಿನ್ನೂ ಹೇಗೆ ಬದುಕಿರುವರೆಂಬ ವಿಸ್ಮಯವುಂಟಾಗುತ್ತಿತ್ತು.

ಕಳೆದ ರಾತ್ರಿ ನಗರಸಭೆಯು ಅವರ ಗೌರವಾರ್ಥವಾಗಿ ಒಂದು ವೈಭವೋಪೇತ ಸಮಾರಂಭವನ್ನೇರ್ಪಡಿಸಿತ್ತು; ಆದರೆ ಪ್ರವಾಸ ಹೋಗಿ ಬಂದಿದ್ದ ತಮಗೆ ತೀರ ಸುಸ್ತಾಗಿದೆಯೆಂದು ಹೇಳಿ ಅಲ್ಲಿಗೆ ಹೋಗಲು

ನಿರಾಕರಿಸಿದ್ದರು. ಸಂಜೆ ಐದರಿಂದಲೂ ಫರ್ನಾಂಡೋ ಜೊತೆಯಲ್ಲಿ ಕೋಣೆಯಲ್ಲೇ ಇದ್ದು, ಜನರಲ್ ಡಾಮಿಂಗೋ ಕ್ಯಾಸೆಡೋಗೆ ಉತ್ತರಗಳನ್ನು ಹೇಳಿ ಬರೆಸಿದರು, ಲಿಮದಲ್ಲಿನ ಮತ್ತಷ್ಟು ಸಾಹಸಗಳ ಬಗ್ಗೆ ಮತ್ತಷ್ಟು ಬರಹವನ್ನು ಜೋರಾಗಿ ಓದಿ ಹೇಳಲು ಫರ್ನಾಂಡೋಗೆ ಸೂಚಿಸಿದ್ದರು. ಅವುಗಳಲ್ಲಿ ಕೆಲವದರಲ್ಲಿ ಅವರೂ ಭಾಗಿಯಾಗಿದ್ದರು. ಆನಂತರ ಬೆಚ್ಚಗಿನ ನೀರಲ್ಲಿ ಮಿಂದು ಜೋಲಿಮಂಚದಲ್ಲಿ ನಿಶ್ಚಲರಾಗಿ ಮಲಗಿ, ತಮ್ಮ ಗೌರವಾರ್ಥ ಏರ್ಪಡಿಸಿದ್ದ ಸಮಾರಂಭದ ಸ್ಥಳದಿಂದ ತೇಲಿಬರುತ್ತಿದ್ದ ಸಂಗೀತದ ಲಹರಿಗೆ ಕಿವಿಗೊಟ್ಟಿದ್ದರು. ಅವರು ಮಲಗಿರುವರೆಂದೇ ಜೋಸೆ ಪೆಲಾಸಿಯೋಸ್ ಭಾವಿಸಿದ್ದ. ಆದರೆ ಅವರು ಹೀಗೆ ಕೇಳಿದ್ದರು: “ನಿಂಗೆ ಆ ವಾಲ್ಟ್ಜ಼್ ನೃತ್ಯ ನೆನಪಿದೆಯಾ?”

ನೆನಪಿಸಲು ಅನೇಕ ಸಂಗತಿಗಳನ್ನು ಶಿಳ್ಳೆ ಹಾಕಿ ತೋರಿಸಿದರು, ಆದರೆ ಅವನಿಗೆ ಅವುಗಳನ್ನು ಗುರುತಿಸಲು ಸಾಧ್ಯವಾಗಲಿಲ್ಲ. “ನಾವು ಚುಕಿಸಾಕಾದಿಂದ ಲಿಮಕ್ಕೆ ವಾಪಸಾದಾಗ ಅವತ್ತು ರಾತ್ರಿ ಮಾಡಿದ್ದು ವಾಲ್ಟ್ಜ಼್ ನೃತ್ಯವನ್ನೇ” ಎಂದು ಜನರಲ್ ಮತ್ತಷ್ಟು ವಿವರಣೆ ನೀಡಿದರು. ಆದರೆ ಜೋಸೆ ಪೆಲಾಸಿಯೋಸ್‌ಗೆ ಅದು ಜ್ಞಾಪಕವಿರಲಿಲ್ಲ; ಆದರೆ ೧೮೨೬ ರ ಫೆಬ್ರವರಿ ೮ ನೇ ತಾರೀಕಿನ ಸಂಭ್ರಮದ ರಾತ್ರಿ ಮಾತ್ರ ಅಚ್ಚಳಿಯದೆ ಅವನ ಮನಸ್ಸಿನಲ್ಲುಳಿದಿತ್ತು. ಅಂದು ಬೆಳಿಗ್ಗೆ ಲಿಮದಲ್ಲಿ ಜನರಲ್ ಅವರಿಗೆ ಚಕ್ರವರ್ತಿಗೆ ನೀಡುವ ಸ್ವಾಗತವನ್ನೇರ್ಪಡಿಸಲಾಗಿತ್ತು; ಎಲ್ಲ ಗೌರವಕೂಟಗಳಲ್ಲಿಯೂ ತಪ್ಪದೆ ಪುನರುಚ್ಚರಿಸುತ್ತಿದ್ದ ವಾಕ್ಯವೊಂದನ್ನು ಜನರಲ್ ಆಗಲೂ ಹೇಳಿದ್ದರು: “ವಿಶಾಲ ಪೆರು ಪ್ರದೇಶದಲ್ಲಿ ಒಬ್ಬ ಸ್ಪಾನಿಯಾರ್ಡ್ ಕೂಡ ಉಳಿದಿಲ್ಲ.” ಅಂದು ಮಹಾ ಪ್ರದೇಶದ ಸ್ವಾತಂತ್ರ್ಯವನ್ನು ಸಾರಿದ ದಿನ; ಅವರ ಮಾತಿನಲ್ಲಿಯೇ ಹೇಳುವುದಾದರೆ, ಅದನ್ನು ಜಗತ್ತು ಹಿಂದೆಂದೂ ಕಂಡರಿಯದಂತಹ ಅಸಾಧಾರಣವಾದ ಅಥವಾ ದುರ್ದಮ್ಯವಾದ ರಾಷ್ಟ್ರಗಳ ಒಕ್ಕೂಟವಾಗಿ ಮಾಡಬೇಕೆಂಬುದು ಅವರ ಕನಸು. ಜನರಲ್ ಅವರ ಮನಸ್ಸಿನಲ್ಲಿ ಆ ಹಬ್ಬದ ವಾತಾವರಣದ ಸಂಭ್ರಮದ ಜೊತೆ ವಾಲ್ಟ್ಜ಼್ ನೃತ್ಯ ಅವಿನಾಭಾವದಿಂದ ಬೆರೆತು ಹೋಗಿತ್ತು; ಲಿಮದ ಪ್ರತಿ ಮಹಿಳೆಯೂ ತಮ್ಮೊಡನೆ ನರ್ತಿಸಲು ಅನುವು ಮಾಡಕೊಡಲು ಅದನ್ನು ಎಷ್ಟು ಬಾರಿ ಬೇಕಾದರೂ ಪುನರಾವರ್ತಿಸಲು ತಾವು ಸೂಚಿಸಿದ್ದರು. ನಗರವು ಅರಿಯದಂತಹ ಹೊಳಪಿನ ಸಮವಸ್ತ್ರಗಳನ್ನು ಸೇನಾಧಿಕಾರಿಗಳು ಧರಿಸಿದ್ದರು, ಆದಷ್ಟೂ ಅವರನ್ನು ಅನುಕರಿಸಲು ಪ್ರಯತ್ನಿಸಿದ್ದರು, ಎಲ್ಲ ವಾಲ್ಟ್ಜ಼್‌ನಲ್ಲಿ ಸಮರಸದಿಂದ ನರ್ತಿಸಿದ್ದರು. ಅದರ ನೆನಪು ಅದರಲ್ಲಿ ಪಾಲುಗೊಂಡಿದ್ದವರ ಹೃದಯಗಳಲ್ಲಿ ಬೇರೆ ಯಾವುದೇ ಯುದ್ಧವೈಭವಕ್ಕಿಂತ ಹೆಚ್ಚು ಕಾಲ ನೆಲೆಸಿತ್ತು.

ಕಳೆದ ರಾತ್ರಿ ಹೊಂಡಾದಲ್ಲಿ ವಾಲ್ಟ್‌ಜ್ ನೃತ್ಯದ ಮೂಲಕ ಹಬ್ಬ ಆರಂಭಗೊಂಡಿತ್ತು; ಜನರಲ್ ತಮ್ಮ ಜೋಲಿಮಂಚದಲ್ಲಿ ಮಲಗಿಯೇ ಅದರ ಪುನರಾವರ್ತನೆಗೆ ಕಾಯುತ್ತಿದ್ದರು. ಆದರೆ ಅದು ನಡೆಯುವುದಿಲ್ಲವೆಂಬುದು ಖಚಿತವಾದಾಗ, ಮಧ್ಯಾಹ್ನ ಗಣಿಗೆ ಹೋಗಿದ್ದಾಗ ಧರಿಸಿದ್ದ ಉಡುಪುಗಳನ್ನೇ ಹಾಕಿಕೊಂಡು ಸುಳಿವು ಕೊಡದೆ ನೃತ್ಯಕೂಟದ ಜಾಗದಲ್ಲಿ ಹಾಜರಾದರು. ಆನಂತರ ಮೂರು ಗಂಟೆಗಳ ಕಾಲ ನರ್ತಿಸಿದರು, ಜೊತೆಗಾತಿ ಬೇರೆಯಾದಾಗಲೆಲ್ಲ ಮತ್ತೆ ಅದೇ ರಾಗವನ್ನು ಪುನರಾವರ್ತಿಸಲು ಹೇಳಿದರು. ಪ್ರಾಯಶಃ ಈ ಮೂಲಕ ತಮ್ಮ ನೆನಪುಗಳಲ್ಲಿ ಬೂದಿಯಾಗಿ ಹುದುಗಿದ್ದ ಬಹು ಹಿಂದಿನ ವೈಭವವನ್ನು ಪುನಾರಚಿಸಿಕೊಳ್ಳಲು ಪ್ರಯತ್ನಿಸಿರಬೇಕು. ಜೊತೆಗಾತಿಯರೆಲ್ಲ ಸುಸ್ತಾಗಿ ಬಿದ್ದರೂ ಕೊನೆಯವರೆಗೂ ತಾವು ಮಾತ್ರ ಕೊನೆಯ ಜೊತೆಗಾತಿಯೊಡನೆ ಖಾಲಿಯಾದ ನರ್ತನಶಾಲೆಯಲ್ಲಿ ಬೆಳಗಿನ ಜಾವದವರೆಗೂ ನರ್ತಿಸಿದ್ದ ಭ್ರಮಾತ್ಮಕ ದಿನಗಳು ಈಗ ಮುಗಿದುಹೋಗಿದ್ದವು. ಯಾರೂ ಜೊತೆಗಾತಿ ಸಿಕ್ಕದಿದ್ದಾಗಲೂ ಒಬ್ಬರೇ ನರ್ತಿಸುವಷ್ಟು ಅವರಿಗೆ ನರ್ತನದ ಹುಚ್ಚು, ಎಷ್ಟೋ ಸಲ ಶಿಳ್ಳೆ ಹಾಕಿಕೊಂಡು ಆ ಲಯಕ್ಕನುಗುಣವಾಗಿ ತಾವೊಬ್ಬರೇ ನರ್ತಿಸುತ್ತಿದ್ದರು, ಕೆಲವೊಮ್ಮೆ ಊಟದ ಮನೆಯಲ್ಲಿ ಮೇಜಿನ ಬಳಿಯೇ ನರ್ತಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ಹೊಂಡಾದಲ್ಲಿನ ಕೊನೆಯ ರಾತ್ರಿ ಅವರಿಗೆ ಎಷ್ಟು ಸುಸ್ತಾಗಿತ್ತೆಂದರೆ, ಮಧ್ಯೆ ಮಧ್ಯೆ ಕೊಲೋನ್ ಸಿಂಪಡಿಸಿದ್ದ ಕರವಸ್ತ್ರವನ್ನು ಮೂಸಿನೋಡಿ ಉಸಿರಾಟವನ್ನು ಸರಿಪಡಿಸಿಕೊಳ್ಳುತ್ತಿದ್ದರು. ಆದರೆ ತಮಗರಿಯದೆಯೇ ಎಂತಹ ಉತ್ಸಾಹ ಮತ್ತು ಕೌಶಲದಿಂದ ನರ್ತಿಸಿದರೆಂದರೆ ಅವರು ದೊಡ್ಡ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂಬುದನ್ನು ಯಾರೂ ನಂಬುವಂತಿರಲಿಲ್ಲ.

ಮಧ್ಯರಾತ್ರಿ ಕಳೆದು ಇನ್ನೂ ಬಹು ವೇಳೆಯಾಗಿರಲಿಲ್ಲ, ಮನೆಗೆ ಮರಳಿದಾಗ, ಸ್ವಾಗತಕೋಣೆಯಲ್ಲಿ ಜನರಲ್ ಅವರಿಗಾಗಿ ಯಾರೋ ಹೆಂಗಸು ಕಾಯುತ್ತಿರುವಳೆಂಬ ಸಮಾಚಾರ ತಿಳಿಯಿತು. ಲಾವಣ್ಯವತಿಯಾಗಿದ್ದ ಆಕೆ ಬಿಗುಮಾನದಿಂದ ಕೂಡಿದ್ದಳು, ಅವಳಿಂದ ವಸಂತದ ಕಂಪು ಹೊಮ್ಮುತ್ತಿತ್ತು. ಉದ್ದ ತೋಳಿನ ವೆಲ್ವೆಟ್ ಉಡುಪು, ಶ್ರೇಷ್ಠವಾದ ಕಾರ್ಡೋವನ್ ಚರ್ಮದಿಂದ ತಯಾರಿಸಿದ್ದ ಪಾದರಕ್ಷೆ ಮತ್ತು ಮಧ್ಯಯುಗದ ಮಹಿಳೆಯರ ರೇಷ್ಮೆ ಹೊದಿಕೆಯ ಹ್ಯಾಟ್ ಧರಿಸಿದ್ದಳು. ಜನರಲ್ ಆಕೆಯ ಮುಂದೆ ಔಪಚಾರಿಕವಾಗಿ ಬಾಗಿದ, ಅವಳು ಬಂದ ಹೊತ್ತು ಮತ್ತು ರೀತಿಗಳು ಅವರಿಗೆ ಒಳಗೊಳಗೇ ಕಿರಿಕಿರಿಯುಂಟುಮಾಡಿದ್ದವು. ಯಾವ ಮಾತನ್ನೂ ಆಡದೆ ಆಕೆ ತನ್ನ ಕೊರಳಿನ ಸುತ್ತ ಉದ್ದನೆಯ ಸರದ ಕೊನೆಗೆ ನೇತಾಡುತ್ತಿದ್ದ

ಅವಶೇಷಭರಣಿಯನ್ನು ಅವರೆದುರಿಗೆ ಹಿಡಿದಳು. ಅದನ್ನು ನೋಡಿ ಅವರಿಗೆ ಪರಮಾಶ್ಚರ್ಯವಾಯಿತು.

"ಮಿರಾಂಡ ಲಿಂಡ್ಸೇ!" ಎಂದು ಉದ್ಗಾರ ತೆಗೆದರು.

"ಅವಳೇ ನಾನು. ಆದರೆ ನಾನೀಗ ಅದೇ ಹೆಣ್ಣಲ್ಲ" ಎಂದಳು.

ಆವಳ ಧ್ವನಿ ಗಂಭೀರವೂ, ವೀಣೆಯ ನಾದದಂತೆ ಮಧುರವೂ ಆಗಿತ್ತು; ಉಚ್ಚಾರ ತನ್ನ ಊರಿನ ಇಂಗ್ಲಿಷ್‌ನಿಂದ ತುಸುವೇ ಲೇಪಿತವಾಗಿತ್ತು. ಅದನ್ನು ಕೇಳಿದ ಅವರ ಮನಸ್ಸಿನಲ್ಲಿ ಸುಪ್ತವಾಗಿದ್ದ ನೆನಪುಗಳೆಲ್ಲ ಭುಗ್ಗನೆದ್ದವು. ಕೈಯಾಡಿಸಿ ಬಾಗಿಲ ಬಳಿ ನಿಂತಿದ್ದ ಪಹರೆಯವನನ್ನು ಹೊರಗೆ ಕಳಿಸಿ, ಅವಳಿಗೆ ಮುಖಾಮುಖಿಯಾಗಿ ಕುಳಿತುಕೊಂಡರು. ಎಷ್ಟು ಹತ್ತಿರವೆಂದರೆ ಅವರಿಬ್ಬರ ಮೊಣಕಾಲುಗಳು ತಾಕುವಂತಿದ್ದವು. ಅವಳ ಕೈಗಳೆಡನ್ನೂ ತನ್ನೆರಡರಲ್ಲಿ ಹಿಡಿದುಕೊಂಡರು.

ಅವರಿಬ್ಬರೂ ಕಳೆದ ಬಾರಿ ಭೇಟಿಯಾಗಿದ್ದುದು ಹದಿನೈದು ವರ್ಷಗಳ ಹಿಂದೆ, ಕಿಂಗ್‌ಸ್ಟನ್‌ನಲ್ಲಿ, ಇಂಗ್ಲಿಷ್ ವ್ಯಾಪಾರಿ ಮ್ಯಾಕ್ಸ್‌ವೆಲ್ ಹೈಸ್ಲಾಪ್ ತನ್ನ ಮನೆಯಲ್ಲಿ ಏರ್ಪಡಿಸಿದ್ದ ಅನೌಪಚಾರಿಕ ಭೋಜನಕೂಟದಲ್ಲಿ. ಆಗ ಅವರು ಎರಡನೆಯ ಬಾರಿ ದೇಶಭ್ರಷ್ಟರಾಗಿದ್ದರು. ಅವಳು ಸರ್ ಲಂಡನ್ ಲಿಂಡ್ಸೇಯ ಒಬ್ಬಳೇ ಮಗಳು, ಆತ ನಿವೃತ್ತನಾದ ಒಬ್ಬ ಇಂಗ್ಲಿಷ್ ರಾಜನೀತಿಜ್ಞ, ಆರು ಸಂಪುಟಗಳಲ್ಲಿ ತನ್ನ ಆತ್ಮಚರಿತ್ರೆಯನ್ನು ಬರೆಯಲೆಂದು ಜಮೈಕದ ಒಂದು ಕಬ್ಬಿನ ತೋಟದಲ್ಲಿ ವಾಸಿಸುತ್ತಿದ್ದ. ಆ ಸಂಪುಟಗಳನ್ನು ಮಾತ್ರ ಯಾರೂ ಓದಿರಲಿಲ್ಲ. ಮಿರಾಂಡಳದು ಕುಂದಿಲ್ಲದ ಚೆಲುವು, ಅವರದ್ದು ದೇಶಭ್ರಷ್ಟನಾಗಿದ್ದ ಯುವಕನ ಬೆಂಕಿಯ ಮುಂದಿನ ಬೆಣ್ಣೆಯಂತಹ ಹೃದಯ. ಆದರೆ ಆಗ ಅವರ ಮನಸ್ಸು ಮತ್ತೊಬ್ಬ ಹೆಣ್ಣಿನ ಬಗ್ಗೆ ಕಟ್ಟಿಕೊಂಡಿದ್ದ ಕನಸುಗಳಲ್ಲಿ ಇವಳ ಕಡೆ ಗಮನ ಹರಿಸಲಾಗದಂತೆ ಮುಳುಗಿಹೋಗಿತ್ತು.

ಮೂವತ್ತೆರಡರ ಪ್ರಾಯದ ತನಗಿಂತ ತುಂಬ ದೊಡ್ಡವರಾದ ಅವರು ಸದಾ ಅವಳ ನೆನಪಿಗೆ ಬರುತ್ತಿದ್ದುದು, ಕೃಶನಾದ ಹಾಗೂ ಬಿಳಿಚಿಕೊಂಡ ಮುಖದ, ಕೆನ್ನೆ ತುಂಬ ಒರಟು ಗಡ್ಡ ಮತ್ತು ಮೀಸೆಯಿದ್ದ, ಭುಜದವರೆಗೆ ತಲೆಗೂದಲು ಇಳಿಬಿದ್ದ ಒಬ್ಬ ಮ್ಯುಲಾಟೋ ಗಂಡಸಾಗಿ. ಅಲ್ಲಿನ ಶ್ರೀಮಂತವರ್ಗದ ಯುವಕರಂತೆ ಅವರೂ ಇಂಗ್ಲಿಷ್ ಶೈಲಿಯಲ್ಲಿ ಉಡುಪು ಧರಿಸುತ್ತಿದ್ದರು: ಬಿಳಿಯ ಕ್ರಾವಟ್, ಹವಾಮಾನಕ್ಕೆ ಹೆಚ್ಚಿನದು ಎನಿಸುವ ಜಾಕೆಟ್, ಕೋಟಿನ ಲೇಪಲ್‌ನಲ್ಲಿ ಧರಿಸಿದ ರೊಮಾಂಟಿಕ್‌ರ ಗಾರ್ಡೀನಿಯ ಹೂ. ೧೮೧೦ ರ ಒಂದು ರಾತ್ರಿ ಈ ರೀತಿ ಉಡುಪು ಧರಿಸಿದ್ದ ಅವರನ್ನು ಲಂಡನ್‌ನ ವೇಶ್ಯಾವಾಟಿಕೆಯಲ್ಲಿ ನೋಡಿದ ಎದೆಗಾರ್ತಿ ಸೂಳೆಯೊಬ್ಬಳು ಅವರೊಬ್ಬ ಗ್ರೀಕ್ ಗುದಮೈಥುನಿ ಎಂದು ಭಾವಿಸಿದ್ದಳು.

ಒಳ್ಳೆಯದಕ್ಕೋ ಕೆಟ್ಟುದಕ್ಕೋ, ಅವರ ಬಗ್ಗೆ ಮೆಚ್ಚಿಕೆಯಾಗಿದ್ದ ಅಂಶವೆಂದರೆ, ಅವರ ಹೊಳೆಯುವ ಕಣ್ಣುಗಳು ಹಾಗೂ ಬಾಯಲ್ಲಿ ಸಿಕ್ಕಿಕೊಂಡ ಹಕ್ಕಿಯದರಂತೆ ಕೀಚು ದನಿಯ ನಿರಂತರ ಮಾತುಗಾರಿಕೆ. ಎಲ್ಲಕ್ಕಿಂತ ವಿಚಿತ್ರವೆಂದರೆ, ಅವರು ಕಣ್ಣುಗಳನ್ನು ಸದಾ ಕೆಳಗೆ ನೆಟ್ಟು ನೇರವಾಗಿ ನೋಡದೆಯೇ ಜೊತೆಗಾರರ ಗಮನ ಸೆಳೆಯುತ್ತಿದ್ದ ರೀತಿ. ಅವರು ಮಾತಾಡುತ್ತಿದ್ದುದು ಕ್ಯಾನರಿ ದ್ವೀಪಗಳ ಮಾತಿನ ಪದಗಳು ಮತ್ತು ಧಾಟಿಯಲ್ಲಿ, ಮಡ್ರಿಡ್‌ನ ವಿದ್ಯಾವಂತರ ಶೈಲಿಯಲ್ಲಿ. ಆದರೆ ಆವತ್ತು ಅವರು ಮಾತಾಡಿದ್ದು ಸ್ಪಾನಿಶ್ ಅರ್ಥವಾಗದಿದ್ದ ಇಬ್ಬರು ಅತಿಥಿಗಳಿಗೆ ಗೌರವ ಸೂಚಿಸಲು ಸರಳವಾದ ಆದರೆ ಅರ್ಥವಾಗುವ ಇಂಗ್ಲಿಷ್‌ನಲ್ಲಿ.

ಊಟದ ಉದ್ದಕ್ಕೂ ಅವರು ಯಾರ ಕಡೆಗೂ ಗಮನಕೊಡದೆ ತಮ್ಮದೇ ಕಲ್ಪನೆಯ ಲೋಕದಲ್ಲಿ ಮುಳುಗಿದ್ದರು. ಆಡಂಬರವೂ ಆಲಂಕಾರಿಕವೂ ಆದ ಶೈಲಿಯಲ್ಲಿ ತಡೆಯಿಲ್ಲದೆ, ಪ್ರವಾದಿಯದರಂತಿದ್ದ ವಾಕ್ಯಗಳಲ್ಲಿ ಮಾತಾಡುತ್ತಿದ್ದರು; ಅವುಗಳಲ್ಲಿ ಕೆಲವನ್ನು ಮುಂದೆ ಕಿಂಗ್‌ಸ್ಟನ್‌ನ ಪತ್ರಿಕೆ ಮಹಾಕಾವ್ಯದಿಂದ ಹೆಕ್ಕಿ ತೆಗೆದಂತೆ ಪ್ರಕಟಿಸುತ್ತಿತ್ತು. ಇತಿಹಾಸವು ಅದನ್ನು 'ದ ಜಮೈಕ ಲೆಟರ್' ಎಂಬ ಅಭಿಧಾನದಲ್ಲಿ ಮುಂದೆ ಕಾಪಾಡಿತು. "ನಮ್ಮನ್ನು ಮತ್ತೆ ಗುಲಾಮತನಕ್ಕೆ ದೂಡಿರುವುದು ಸ್ಪಾನಿಯಾರ್ಡ್‌ಗಳಲ್ಲ, ನಮ್ಮದೇ ಅನೈಕಮತ್ಯ" ಎಂಬುದು ಅವರ ಒಂದು ಮಾತು. ಅಮೆರಿಕದ ಹಿರಿಮೆ, ಸಂಪನ್ಮೂಲಗಳು ಹಾಗೂ ಪ್ರತಿಭೆಯನ್ನು ಕುರಿತು ಅವರು ಅನೇಕ ಬಾರಿ "ನಾವು ಮಾನವಜನಾಂಗದ ಸಂಕ್ಷಿಪ್ತರೂಪ" ಎಂದಿದ್ದರು. ಮಿರಾಂಡ ಮನೆಗೆ ವಾಪಸ್ಸಾದಾಗ ದ್ವೀಪಗಳಲ್ಲಿದ್ದ ಸ್ಪಾನಿಶ್ ಪ್ರತಿನಿಧಿಗಳಲ್ಲಿ ತಳಮಳವುಂಟುಮಾಡುವ ಆ ಸಂಚುಗಾರನ ಬಗ್ಗೆ ತಂದೆಯು ವಿಚಾರಿಸಿದಾಗ ಅವಳು ಅವರ ಬಗ್ಗೆ ಒಂದೇ ವಾಕ್ಯವನ್ನು ಹೇಳಿದ್ದಳು: "ತಾನೇ ಬೋನಾಪಾರ್ಟೆ ಅಂದುಕೊಂಡಿದ್ದಾನೆ ಅವನು."

ಆ ಮುಂದಿನ ಶನಿವಾರ ರಾತ್ರಿ ಒಂಬತ್ತು ಗಂಟೆಗೆ ನಿರ್ಜನ ಪ್ರದೇಶದಲ್ಲಿ ಒಬರೇ ಕಾಲುನಡಿಗೆಯಿಂದ ಬಂದು ಅವಳನ್ನು ಭೇಟಿ ಮಾಡಿದ ಬಗ್ಗೆ ವಿವರವಾದ ಪತ್ರವೊಂದು ಕೆಲವು ದಿನಗಳ ಬಳಿಕ ಅವರಿಗೆ ಅನಿರೀಕ್ಷಿತವಾಗಿ ಬಂತು. ಅದು ಅವರ ಜೀವಕ್ಕೆ ಮಾತ್ರವಲ್ಲ ಅಮೆರಿಕನ್ನರ ಭವಿಷ್ಯಕ್ಕೂ ಆಪತ್ತು ತಂದಿತು; ಏಕೆಂದರೆ ಆ ಸಲ ಅವರು ಭಗ್ನಗೊಂಡ ಬಂಡಾಯದ ಕೊನೆಯ ಗುರಿಯಾಗಿದ್ದರು. ಪ್ರಕ್ಷುಬ್ಧ ಸ್ವಾತಂತ್ರ್ಯದ ಐದು ವರ್ಷಗಳ ನಂತರ, ಶಾಂತಿದೂತನೆನ್ನಿಸಿಕೊಂಡ ಜನರಲ್ ಪಾಬ್ಲೋ ಮೊರಿಲ್ಲೋನ ಪ್ರಬಲ ದಾಳಿಯನ್ನೆದುರಿಸಲಾರದೆ ನ್ಯೂ ಗ್ರೆನೆಡ ಮತ್ತು ವೆನಿಝೂಲದ ಆಡಳಿತಗಳು ಆಗ ತಾನೇ ಮತ್ತೆ ಸ್ಪೈನ್‌ನ ವಶಕ್ಕೆ ಬಂದಿದ್ದವು.

ಓದು ಬರಹ ಬಲ್ಲ ಪ್ರತಿಯೊಬ್ಬನನ್ನೂ ಗಲ್ಲಿಗೇರಿಸುವ ಸರಳ ವಿಧಾನದ ಮೂಲಕ ದೇಶಾಭಿಮಾನಿಗಳ ಮುಂದಾಳುತ್ವವನ್ನು ನಾಶಗೊಳಿಸಲಾಗಿತ್ತು.

ಮೆಕ್ಸಿಕೋದಿಂದ ರಿಯೋ ದ ಲ ಪ್ಲಾಟಾದವರೆಗೆ ಸ್ವಾತಂತ್ರ್ಯ ಬೀಜಗಳನ್ನು ಬಿತ್ತಿದ್ದ ಎಲ್ಲ ಪೀಳಿಗೆಗಳ ತಿಳಿವಳಿಕಸ್ಥ ಅಮೆರಿಕನ್ನರಲ್ಲಿಯೂ ಅತ್ಯಂತ ದೃಢನಂಬಿಕೆ ದೃಢಸಂಕಲ್ಪ ಮತ್ತು ದೂರದೃಷ್ಟಿಗಳಿದ್ದ, ರಾಜಕೀಯ ಜಾಣ್ಮೆ ಮತ್ತು ಯುದ್ಧಕೌಶಲಗಳನ್ನು ಮೈಗೂಡಿಸಿಕೊಂಡವರು ಅವರೇ. ಅವರು ವಾಸಿಸುತ್ತಿದ್ದುದು ಎರಡು ಕೋಣೆಗಳ ಬಾಡಿಗೆ ಮನೆಯಲ್ಲಿ; ಜೊತೆಗೆ ಗುಲಾಮರಾಗಿದ್ದು ಬಿಡುಗಡೆಗೊಂಡ ಬಳಿಕ ಅವರ ಸೇವೆಗೆ ಬದ್ಧರಾಗಿದ್ದ ಇಬ್ಬರು ಸೈನಿಕ ಸಹಾಯಕರು, ಅಲ್ಲದೆ ಜೋಸೆ ಪೆಲಾಸಿಯೋಸ್. ನಡೆದುಕೊಂಡು ಜೊತೆಯಿಲ್ಲದೆ ಅವರು ಆ ರಾತ್ರಿ ಅಪರಿಚಿತ ವ್ಯಕ್ತಿಯನ್ನು ಭೇಟಿಮಾಡಲು ಹೋದುದು ಅಪಾಯದ ಅರಿವಿರದ ಅವಿವೇಕವಲ್ಲದೆ ಐತಿಹಾಸಿಕವೆನಿಸುವ ತಪ್ಪೂ ಆಗಿತ್ತು. ತಮ್ಮ ಜನ ಮತ್ತು ಧ್ಯೇಯಗಳ ಬಗ್ಗೆ ಅಪಾರ ಒಲವಿದ್ದೂ ಅವರು ಹೀಗೆ ಮಾಡಲು ಕಾರಣ ಸುಂದರ ಹೆಣ್ಣಿನ ನಿಗೂಢತೆ.

ಮೊದಲೇ ಗೊತ್ತಾಗಿದ್ದ ಜಾಗದಲ್ಲಿ ಮಿರಾಂಡ ಕುದುರೆಯ ಮೇಲೆ ಕುಳಿತು ಅವರಿಗಾಗಿ ಕಾಯುತ್ತಿದ್ದಳು. ಅವಳೂ ಒಂಟಿಯೇ. ಅವರು ಹಿಂದೆ ಕೂತ ಬಳಿಕ ಅವಳು ಅಪರಿಚಿತ ದಾರಿಯಲ್ಲಿ ಕುದುರೆಯನ್ನು ದೌಡಾಯಿಸಿದಳು. ದೂರದ ಸಮುದ್ರದ ಬಳಿಯ ಗುಡುಗುಮಿಂಚುಗಳಿಂದ ಮಳೆ ಬರುವಂತೆ ಕಾಣುತ್ತಿತ್ತು. ಕಪ್ಪು ನಾಯಿಗಳ ದಂಡು ಕತ್ತಲೆಯಲ್ಲಿ ಬೊಗಳುತ್ತ ಕುದುರೆಯ ಕಾಲುಗಳ ನಡುವೆಯೇ ಓಡಿಬರುತ್ತಿದ್ದವು. ಆದರೆ ಕೆಲವು ಇಂಗ್ಲಿಷ್ ಪಿಸುನುಡಿಗಳನ್ನಾಡಿ ಅವಳು ಅವುಗಳನ್ನು ಸುಮ್ಮನಾಗಿಸಿದಳು. ಸರ್ ಲಂಡನ್ ಲಿಂಡ್ಸೇ ತನ್ನ ಹೊರತು ಬೇರಾರೂ ನೆನಪಿಸಿಕೊಳ್ಳದ ನೆನಪುಗಳನ್ನು ಬರೆಯುತ್ತಿದ್ದ ಕಬ್ಬಿನ ತೋಟಗಳ ಬಳಿಯೇ ಅವರು ಹಾದುಹೋದರು. ಕಲ್ಲುಗಳಿಂದ ತುಂಬಿದ ತೊರೆಯನ್ನು ಹಾಯ್ದು ಮತ್ತೊಂದು ದಡಕ್ಕೆ ಬಂದಾಗ ಅಲ್ಲಿ ಪೈನ್ ಕಾಡುಗಳಿದ್ದವು, ಅದರ ತುದಿಯಲ್ಲಿ ಒಂದು ನಿರ್ಜನವಾದ ಆಶ್ರಮವಿತ್ತು. ಅವರು ಕೆಳಗಿಳಿದರು; ಅವಳು ಕೈಹಿಡಿದುಕೊಂಡು ಏಕಾಂತವಾದ ಪೂಜಾಮಂದಿರದ ಮೂಲಕ ಉಗ್ರಾಣಕ್ಕೆ ಅವರನ್ನು ಕರೆತಂದಳು. ಗೋಡೆಗೆ ತಗುಲಿಸಿದ್ದ ಸೊಡಲಿನಿಂದ ಅಲ್ಲಿ ಮಂಕು ಬೆಳಕು ಹರಡಿತ್ತು, ಒರಟಾಗಿ ಕೆತ್ತಿದ್ದ ಎರಡು ದಿಮ್ಮಿಗಳ ಹೊರತು ಬೇರೆ ಪೀಠಗಳು ಅಲ್ಲಿರಲಿಲ್ಲ. ಆಗ ಅವರು ಪರಸ್ಪರರ ಮುಖ ನೋಡಿಕೊಂಡರು. ಅವರು ತೋಳಿನ ಅಂಗಿ ಧರಿಸಿದ್ದರು, ಕತ್ತಿನ ಹಿಂಬದಿಯಲ್ಲಿ ಕೂದಲನ್ನು ಒಟ್ಟುಗೂಡಿಸಿ ಕಟ್ಟಿಕೊಂಡಿದ್ದರು;

ಭೋಜನಕೂಟದಲ್ಲಿ ಕಂಡುದಕ್ಕಿಂತ ಹೆಚ್ಚು ಚಿಕ್ಕವರಾಗಿಯೂ ಆಕರ್ಷಕವಾಗಿಯೂ ಮಿರಾಂಡಳಿಗೆ ಕಂಡಿದ್ದರು.

ಅವರೇ ಮುಂದಾಗಲಿಲ್ಲ, ಪ್ರಣಯದ ಎಲ್ಲ ಸಂದರ್ಭಗಳಲ್ಲಿಯೂ ಅವರು ನಿರ್ದಿಷ್ಟ ವಿಧಾನವನ್ನೇನೂ ಅನುಸರಿಸುತ್ತಿರಲಿಲ್ಲ. ಪ್ರತಿ ಬಾರಿಯೂ, ಅದೂ ಆರಂಭವು, ಭಿನ್ನವಾಗಿರುತ್ತಿತ್ತು. "ಪ್ರಣಯದ ಆರಂಭದಲ್ಲಿ ಆದ ತಪ್ಪನ್ನು ಸರಿಪಡಿಸಲು ಸಾಧ್ಯವಿಲ್ಲ" ಎಂಬುದು ಅವರ ಮಾತು. ಈ ಸಂದರ್ಭದಲ್ಲಿ ಎಲ್ಲ ಅಡ್ಡಿಗಳೂ ಮುಂಚೆಯೇ ನಿವಾರಣೆಗೊಂಡಿದ್ದಂತೆ ಅವರಿಗೆ ಭಾಸವಾಯಿತು; ಏಕೆಂದರೆ ನಿರ್ಧಾರ ತೆಗೆದುಕೊಂಡಿದ್ದವಳು ಅವಳೇ.

ಆದರೆ ಅವರ ಎಣಿಕೆ ತಪ್ಪಾಗಿತ್ತು. ಮಿರಾಂಡಳಲ್ಲಿ ಚೆಲುವಿನ ಜೊತೆಗೆ ಕಡೆಗಣಿಸಲಾಗದ ಘನತೆ ಬೆರೆತಿತ್ತು. ಹೀಗಾಗಿ ಈ ಬಾರಿಯೂ ತಾವೇ ಆರಂಭಿಸಬೇಕೆಂದು ಅವರಿಗೆ ಅರಿವಾಗುವ ವೇಳೆಗೆ ಆಗಲೇ ಸಾಕಷ್ಟು ಸಮಯ ಸರಿದಿತ್ತು. ಕುಳಿತುಕೊಳ್ಳುವಂತೆ ಅವರಿಗೆ ಸೂಚಿಸಿದಳು, ಹದಿನೈದು ವರ್ಷಗಳ ನಂತರ ಹೊಂಡಾದಲ್ಲಿ ಆದ ಹಾಗೆಯೇ. ಒರಟು ದಿಮ್ಮಿಗಳ ಮೇಲೆ ಎದುರುಬದುರಾಗಿ, ಮಂಡಿಗಳು ತಾಕುವಷ್ಟು ಹತ್ತಿರದಲ್ಲಿ ಕೂತರು. ಅವರು ಅವಳ ಕೈಗಳನ್ನು ಹಿಡಿದುಕೊಂಡು ತನ್ನೆಡೆ ಬರಸೆಳೆದುಕೊಂಡರು, ಮುತ್ತಿಡಲು ಪ್ರಯತ್ನಿಸಿದರು. ತಮ್ಮೆಡೆಗೆ ಸೆಳೆದುಕೊಳ್ಳಲು ಅವಕಾಶವಿತ್ತರೂ, ಅವರ ಉಸಿರಿನ ಬಿಸುಪು ತಾಕಿದಾಗ ಮುಖವನ್ನು ಬೇರೆಡೆ ತಿರುಗಿಸಿಕೊಂಡಳು.

"ಎಲ್ಲ, ಸಮಯ ಬಂದಾಗ" ಅವಳೆಂದಳು.

ಮುಂದೆಯೂ ಅನೇಕ ಬಾರಿ ಅದೇ ಮಾತುಗಳಿಂದ ಅವಳು ಅವರ ಪ್ರಯತ್ನವನ್ನು ತಪ್ಪಿಸಿದ್ದಳು. ಮಧ್ಯರಾತ್ರಿಯ ಹೊತ್ತಿಗೆ ಮಳೆ ಸುರಿದು ಛಾವಣಿಯ ಬಿರುಕುಗಳಿಂದ ಸೋರತೊಡಗಿತು. ಅವರಿನ್ನೂ ದಿಮ್ಮಿಗಳ ಮೇಲೆ ಎದುರುಬದುರಾಗಿ ಕೈಕೈ ಹಿಡಿದು ಕುಳಿತಿದ್ದರು; ತಮ್ಮ ಮನಸ್ಸಿನಲ್ಲಿ ಆಕಾರ ತಳೆಯುತ್ತಿದ್ದ ಕವನವೊಂದನ್ನು ಅವರು ಗುನುಗುನಿಸುತ್ತಿದ್ದರು. ಛಂದೋಬದ್ಧ ಸಾಲುಗಳು, ಪ್ರಾಸಸಹಿತವಾದವು, ಪ್ರೇಮದ ಮೆಲುಪು–ಯುದ್ಧದ ಆರ್ಭಟಗಳನ್ನು ಒಗ್ಗೂಡಿಸಿದ್ದ ಅಷ್ಟಪದಿ ಅದು. ಅವಳ ಹೃದಯ ತಟ್ಟಿತು, ಅದರ ಕರ್ತೃ ಯಾರಿರಬಹುದೆಂದು ಮೂರು ಹೆಸರುಗಳನ್ನು ಊಹಿಸಿದಳು.

"ಅವನೊಬ್ಬ ಯೋಧ" ಅವರೆಂದರು.

"ಯುದ್ಧನಿರತನೋ ಅಥವಾ ಬಿಡಾರದಲ್ಲಿರುವವನೋ?" ಅವಳ ಪ್ರಶ್ನೆ.

"ಎರಡೂ. ಎಲ್ಲ ಕಾಲದ ಅತ್ಯಂತ ಶ್ರೇಷ್ಠ ಏಕಾಂಗಿ ಯೋಧ" ಅಷ್ಟೆಂದರು.

ಮಿ. ಹೈಸ್ಲಾಪ್ ಅವರ ಭೋಜನಕೂಟದ ನಂತರ ತನ್ನ ತಂದೆಗೆ ಹೇಳಿದ್ದ ಮಾತನ್ನವಳು ನೆನಪಿಸಿಕೊಂಡಳು.

"ಅದು ಬೋನಾಪಾರ್ಟೆ ಮಾತ್ರ ಆಗಿರಲು ಸಾಧ್ಯ."

"ಉತ್ತರ ಹತ್ತಿರ ಬಂದಿದೆ. ಆದರೆ ಇಬ್ಬರ ನಡುವಣ ನೈತಿಕ ವ್ಯತ್ಯಾಸ ಅಪಾರ. ಏಕೆಂದರೆ ಕವನದ ಕರ್ತೃ ಕಿರೀಟಧಾರಣೆಗೆ ಅವಕಾಶ ಕೊಡಲಿಲ್ಲ."

ವರ್ಷಗಳು ಸಂದು ಅವರ ಬಗ್ಗೆ ಹೆಚ್ಚಿನ ವಿಚಾರಗಳು ಕಿವಿಗೆ ಬಿದ್ದಾಗ, ತಮ್ಮ ಜಾಣ ದೇಶತ್ಯಾಗವು ಜೀವನದ ಪೂರ್ವಚಿತ್ರಣವೆಂಬ ಅರಿವು ಅವರಿಗಿತ್ತೇ ಎಂದು ಅವಳು ವಿಸ್ಮಯಪಟ್ಟಿದ್ದಳು. ಆದರೆ ಆ ರಾತ್ರಿ ಅವಳ ಮನಸ್ಸಿನಲ್ಲಿ ಈ ಅನುಮಾನವು ತಲೆಹಾಕಿರಲಿಲ್ಲ; ಬೆಳಗು ಸಮೀಪಿಸುತ್ತಿದ್ದಂತೆ ಮುಂದುವರಿಯುವ ಒತ್ತಡಕ್ಕೆ ಒಳಗಾಗದಂತೆ ಅವರಿಗೆ ಅಪಚಾರ ಮಾಡದೆ ತಡೆದು ನಿಲ್ಲಿಸುವ ಅಸಾಧ್ಯ ಕಾರ್ಯದಲ್ಲಿ ನಿರತಳಾಗಿದ್ದಳು. ಅವರು ತನಗೆ ಆಗೊಮ್ಮೆ ಈಗೊಮ್ಮೆ ಮುತ್ತುಗಳನ್ನು ನೀಡಲು ಅವಕಾಶವಿತ್ತಿದ್ದಳೇ ಹೊರತು ಹೆಚ್ಚಲ್ಲ.

"ಎಲ್ಲ ಒಳ್ಳೆಯ ಕಾಲ" ಎಂದಳವಳು.

"ಈ ಮಧ್ಯಾಹ್ನ ಮೂರು ಗಂಟೆಗೆ ನಾನು ಟಪಾಲುದೋಣಿಯಲ್ಲಿ ಹೈತಿಗೆ ಶಾಶ್ವತವಾಗಿ ಹೊರಟು ಹೋಗುತ್ತೇನೆ" ಅವರೆಂದಿದ್ದರು.

ಅವರ ವಂಚಕತನವನ್ನು ತನ್ನ ಆಕರ್ಷಕ ನಗುವಿನಿಂದ ಭಗ್ನಗೊಳಿಸಿ ಅವಳೆಂದಳು: "ಮೊದಲನೆಯಾಗಿ, ಟಪಾಲುದೋಣಿ ಶುಕ್ರವಾರದವರೆಗೂ ಹೊರಡುವುದಿಲ್ಲ. ಅಲ್ಲದೆ ಸೆನ್ಯೋರ ಟರ್ನರ್‌ಗೆ ನೀವು ನಿನ್ನೆ ತಂದು ಕೊಡಲು ಹೇಳಿದ್ದ ಕೇಕ್ ಅನ್ನು ಇವತ್ತು ರಾತ್ರಿ ಊಟಕ್ಕೆ ನನ್ನನ್ನು ಅತೀವ ದ್ವೇಷಿಸುವ ಹೆಣ್ಣು ತಂದುಕೊಡಬೇಕಾಗಿದೆ."

ಜಗತ್ತಿನಲ್ಲಿ ಅವಳನ್ನು ಅತೀವವಾಗಿ ದ್ವೇಷಿಸುತ್ತಿದ್ದ ಹೆಣ್ಣು ಅಂದರೆ ಜೂಲಿಯ ಕೋಬಿಯರ್ ಎಂಬುವವಳು, ಸುಂದರಿಯಾದ ಒಬ್ಬ ಶ್ರೀಮಂತ ಹೆಣ್ಣು, ಜಮೈಕದಿಂದ ದೇಶಭ್ರಷ್ಟಗೊಂಡಿದ್ದವಳು, ಅವಳ ಜೊತೆ ಅವನು ಒಂದು ರಾತ್ರಿಗಿಂತ ಹೆಚ್ಚು ಕಾಲ ಕಳೆದಿದ್ದನೆಂದು ಜನ ಮಾತಾಡಿಕೊಳ್ಳುತ್ತಿದ್ದರು.

"ನನ್ನ ಗೂಢಚಾರಿಗಳಿಗಿಂತ ನಿನಗೇ ವಿಷಯ ಚೆನ್ನಾಗಿ ಗೊತ್ತಿರುವಂತಿದೆಯಲ್ಲ" ಎಂದರು ಅಚ್ಚರಿ ವ್ಯಕ್ತಪಡಿಸುವವನಂತೆ.

"ನಾನೂ ನಿಮ್ಮ ಗೂಢಚಾರರಲ್ಲಿ ಒಬ್ಬಳು ಎಂದೇಕೆ ನೀವು ಭಾವಿಸಬಾರದು?"

ಅವಳು ಹಾಗೇಕೆ ಹೇಳಿದ್ದಳೆಂಬುದು ಅವರಿಗೆ ಸಂಜೆ ಆರುಗಂಟೆಯವರೆಗೂ ಅರ್ಥವಾಗಲಿಲ್ಲ. ಅವರು ಮನೆಗೆ ಮರಳಿದಾಗ ಅಲ್ಲಿ ತಮ್ಮ ಗೆಳೆಯ ಫ಼ೆಲಿಕ್ಸ್ ಆಮೆಸ್ಟೋಯ್‌ನ ದೇಹ ಬಿದ್ದಿತ್ತು, ಅದೇನಾದರೂ ಖೋಟ ಕದನವಾಗಿರದಿದ್ದರೆ ತಾವು ಜೋಲಿಮಂಚದಲ್ಲಿ ಮಲಗಿದ್ದಾಗ ಅವನು ಗಾಯಗಳಿಂದ ರಕ್ತ ಸುರಿದು ಸತ್ತಿದ್ದ. ಜನರಲ್ ವಾಪಸಾದಾಗ ಅವರಿಗೆ ತುರ್ತು ಸಂದೇಶವನ್ನು ತಲುಪಿಸಲೆಂದು ಬಂದು ಕಾಯುತ್ತಿದ್ದ ಆಮೆಸ್ಟೋಯ್ ನಿದ್ದೆಗೊಳಗಾಗಿದ್ದ, ಸ್ಪಾನಿಯಾರ್ಡ್‌ಗಳಿಂದ ಹಣ ಪಡೆದಿದ್ದ ಒಬ್ಬ ಮಾಜಿ ಗುಲಾಮ ಅವನನ್ನೇ ಜನರಲ್ ಎಂದು ತಪ್ಪು ತಿಳಿದು ಹನ್ನೊಂದು ಬಾರಿ ತಿವಿದಿದ್ದ. ಮಿರಾಂಡಳಿಗೆ ಆ ಕೊಲೆಯ ಸಂಚು ತಿಳಿದಿತ್ತು, ಅದನ್ನು ತಪ್ಪಿಸಲು ಇದಕ್ಕಿಂತ ಉತ್ತಮ ಉಪಾಯ ಬೇರೆಯಿಲ್ಲವೆಂದು ಭಾವಿಸಿ ಹೀಗೆ ಮಾಡಿದ್ದಳು. ಇದಕ್ಕಾಗಿ ಖುದ್ದು ವಂದನೆ ಹೇಳಲು ಅವರು ಪ್ರಯತ್ನಿಸಿದರು, ಆದರೆ ಅವಳು ಯಾವುದೇ ಸಂದೇಶಕ್ಕೂ ಸ್ಪಂದಿಸಿರಲಿಲ್ಲ. ಪ್ಯೂರ್ಟೋ ಪ್ರಿನ್ಸಿಪಿಗೆ ಹಾಯಿ ಹಡಗಿನಲ್ಲಿ ಹೊರಡುವ ಮುಂಚೆ ಜೋಸೆ ಪೆಲಾಸಿಯೋಸ್ ಮೂಲಕ ಅವಳಿಗೆ ತಮ್ಮ ತಾಯಿಯಿಂದ ಬಂದಿದ್ದ ಚಿನ್ನದ ಭರಣಿಯ ಕಾಣಿಕೆಯ ಜೊತೆ, "ನಾನು ನಾಟಕೀಯ ವಿಧಿಗೆ ಬಲಿಯಾಗುತ್ತಿದ್ದೇನೆ" ಎಂಬ ಒಂದು ಸಾಲಿನ ಸಂದೇಶವನ್ನು ಅವರು ಕಳಿಸಿದ.

ಮುಂದಿನ ವರ್ಷಗಳಲ್ಲಿ ಸ್ವತಂತ್ರ ಹೈತಿ ಗಣರಾಜ್ಯದ ಅಧ್ಯಕ್ಷನಾಗಿದ್ದ ಜನರಲ್ ಅಲೆಕ್ಸಾಂಡ್ರ ಪೇಟಿಯೋನ್‌ನ ಸಹಾಯದಿಂದ ಸಾಧಾರಣ ಉಡುಗೆಯಲ್ಲಿದ್ದ ಸೈನಿಕ ಸಮೂಹದ ನಡುವೆ ಕುದುರೆಯೇರಿ ಆಂಡೀಸ್ ಪರ್ವತಶ್ರೇಣಿಯನ್ನು ದಾಟಿಕೊಂಡು ಸ್ವದೇಶಕ್ಕೆ ಮರಳಿ, ಬೊಯಾಕ ಸೇತುವೆಯ ಬಳಿ ರಾಜನಿಷ್ಠ ಪಡೆಗಳನ್ನು ಸೋಲಿಸಿ, ಎರಡನೆಯ ಹಾಗೂ ಕೊನೆಯ ಬಾರಿಗೆ ನ್ಯೂ ಗ್ರನೆಡವನ್ನು, ಆನಂತರ ತನ್ನ ಸ್ವದೇಶ ವೆನಿಝೂಲವನ್ನು ವಿಮೋಚನೆಗೊಳಿಸಿ, ಕೊನೆಯದಾಗಿ ದಕ್ಷಿಣದ ಭೀಕರ ಭಯೋತ್ಪಾದಕರನ್ನು ಬ್ರೆಝಿಲ್ ಸಾಮ್ರಾಜ್ಯದ ಗಡಿಗಳವರೆಗೂ ಹೊಡೆದಟ್ಟಿದ್ದ ಆ ಯುವ ವೀರ ಬರೆದಿದ್ದ ಆ ವೈರಾಗ್ಯದ ಮಾತನ್ನು ಮಿರಾಂಡಳಿಗೆ ಮರೆತಿರಲಿಲ್ಲ, ಹಾಗೆಯೇ ಅದರ ಅರ್ಥವೂ ಆಗಿರಲಿಲ್ಲ. ಅವರ ವೀರಕೃತ್ಯಗಳ ಬಗ್ಗೆ ದಣಿವೇ ಇಲ್ಲದಂತೆ ವರ್ಣಿಸುತ್ತಿದ್ದ ಪ್ರವಾಸಿಗರಿಂದ ಕೇಳಿ ಕೇಳಿಯೇ ಅವರ ಬಾಳಬಟ್ಟೆಯನ್ನು ಗಮನಿಸಿದ್ದಳು. ಹಿಂದಿನ ಸ್ಪಾನಿಶ್ ವಸಾಹತುಗಳು ಸ್ವಾತಂತ್ರ್ಯವನ್ನು ಪಡೆಯುವ ಹೊತ್ತಿಗೆ, ಮಿರಾಂಡ ಒಬ್ಬ ಇಂಗ್ಲಿಷ್ ಮೋಜಣಿದಾರನನ್ನು ಮದುವೆಯಾಗಿದ್ದಳು; ಅವನು ಆನಂತರ ತನ್ನ ವೃತ್ತಿಯನ್ನು ಅನೇಕ ಬಾರಿ ಬದಲಾಯಿಸಿ ಕೊನೆಗೆ ನ್ಯೂ ಗ್ರನೆಡದಲ್ಲಿ ನೆಲೆಸಿ ಹೊಂಡದಲ್ಲಿ ಜಮೈಕದ ಕಬ್ಬಿನ ತೋಟವನ್ನು ಬೆಳೆಸಿದ್ದ. ಹಿಂದಿನ ದಿನ

ಅಲ್ಲಿಗೆ ಹೋಗಿದ್ದಾಗಷ್ಟೇ ದೇಶಭ್ರಷ್ಟನಾಗಿ ಕಿಂಗ್‌ಸ್ಟನ್‌ನಲ್ಲಿದ್ದ ತನ್ನ ಹಿಂದಿನ ಗೆಳೆಯ ತಮ್ಮ ಮನೆಯಿಂದ ಕೇವಲ ಮೂರು ಲೀಗ್ ದೂರದಲ್ಲಿರುವ ವಿಷಯ ಅವಳಿಗೆ ತಿಳಿದಿತ್ತು. ಆದರೆ ಅವಳು ಗಣಿಗಳ ಬಳ ಬಂದಾಗ ಜನರಲ್ ಆಗಲೇ ಹೊಂಡಾಕ್ಕೆ ವಾಪಸು ಹೊರಟಿದ್ದರು, ಹೀಗಾಗಿ ಅವರನ್ನು ಕಾಣಲು ಅವಳು ಇನ್ನರ್ಧ ದಿನ ಪ್ರಯಾಣ ಮಾಡಿ ಅಲ್ಲಿಗೆ ಬಂದಿದ್ದಳು.

ಬೇರೆಡೆ ಕಂಡಿದ್ದರೆ, ಯುವಕರಾಗಿದ್ದಾಗ ಇದ್ದ ಗಡ್ಡ ಮತ್ತು ಗಿರಿಜಾಮೀಸೆಗಳಿಲ್ಲದೆ ಅವರನ್ನು ಗುರುತಿಸಲು ಅವಳಿಗೆ ಆಗುತ್ತಿರಲಿಲ್ಲ. ಈಗಾದರೋ ಅವರ ತಲೆಗೂದಲು ಬೆಳ್ಳಗೂ ಆಗುತ್ತಿತ್ತು, ತೆಳ್ಳಗೂ ಆಗುತ್ತಿತ್ತು. ಈಚಿನ ಕ್ಷೋಭೆಯಿಂದ ಜರ್ಜರಿತರಾಗಿದ್ದ ಅವರನ್ನು ಕಂಡಾಗ ಅವಳಿಗೆ ತಾನು ಶವದೊಡನೆ ಮಾತಾಡುತ್ತಿರುವೆನೆಂಬ ಭಯಂಕರ ಭಾವನೆ ಬಂದಿತ್ತು. ತನ್ನನ್ನು ಬೇರೆಯವರು ಗುರುತಿಸುವ ಭಯ ನಿವಾರಣೆಯಾದಾಗ ಅವಳು ಪರದೆಯನ್ನು ಸರಿಸಿ ಅವರೊಡನೆ ಮುಕ್ತವಾಗಿ ಮಾತನಾಡಬೇಕೆಂದು ಬಯಸಿದ್ದಳು, ಆದರೆ ತನ್ನ ಕಣ್ಣುಗಳಲ್ಲಿಯೂ ಆಗಿರುವ ಕಾಲದ ದಾಳಿಯನ್ನು ಅವರೂ ಗುರುತಿಸಿರುತ್ತಾರೆಂಬ ಕಾರಣದಿಂದ ಅದನ್ನು ತಡೆದುಕೊಂಡಳು. ಉಭಯ ಕುಶಲೋಪರಿಯಾದನಂತರ, ಅವಳು ವಿಷಯಕ್ಕೆ ಬಂದಳು.

"ನಾನು ನಿಮ್ಮಿಂದ ಒಂದು ಉಪಕಾರಕ್ಕಾಗಿ ಬಂದಿದ್ದೇನೆ."

"ಸಂಕೋಚವಿಲ್ಲದೆ ಕೇಳಿ" ಆಶ್ವಾಸನೆ ಕೊಟ್ಟರು.

"ನನ್ನ ಐದು ಮಕ್ಕಳ ತಂದೆ ಕೊಲೆಯ ಆರೋಪದ ಮೇಲೆ ದೀರ್ಘ ಕಾಲದಿಂದ ಸೆರೆವಾಸ ಅನುಭವಿಸುತ್ತಿದ್ದಾರೆ."

"ಮರ್ಯಾದೆಯಿಂದಲೇ?"

"ಒಂದು ದ್ವಂದ್ವಯುದ್ಧದಲ್ಲಿ" ಎಂದು ಹೇಳಿದ ಅವಳು ತಕ್ಷಣವೇ "ಹೊಟ್ಟೆಕಿಚ್ಚಿನಿಂದ" ಎಂದು ಸೇರಿಸಿದಳು.

"ಹಾಗಾದರೆ ಕಾರಣವಿಲ್ಲ ಎಂದ ಹಾಗಾಯಿತು" ಎಂದು ಗಟ್ಟಿಯಾಗಿ ಯೋಚಿಸಿದರು.

"ಇಲ್ಲ, ಸಕಾರಣವಾಗಿ" ಎಂದು ಅವಳು ವಿವರಣೆ ನೀಡಿದಳು.

ಅದೆಲ್ಲ ಈಗ ಹಿಂದೆ ನಡೆಯಬಹುದಾದ್ದು. ಅವಳು ತನ್ನಿಂದ ಬಯಸಿದ್ದು ದಯಾಭಿಕ್ಷೆಯ ಅಧಿಕಾರ ಬಳಸಿಕೊಂಡು ಗಂಡನನ್ನು ಸೆರೆಯಿಂದ ಬಿಡಿಸಬೇಕೆಂದು. ಆದರೆ ಅವರಿಗೆ ತಕ್ಷಣ ಹೊಳೆದದ್ದು ಸತ್ಯ ನುಡಿಯುವುದು.

"ನಾನೂ ಈಗ ರೋಗಿ, ಪರದೇಸಿ, ನಿಮಗೇ ಕಾಣುತ್ತಿದೆಯಲ್ಲ. ಆದರೆ ನಿಮಗಾಗಿ ನಾನು ಏನು ಬೇಕಾದರೂ ಮಾಡಲು ಸಿದ್ಧ."

ಕೇಸಿನ ಬಗ್ಗೆ ವಿವರಗಳನ್ನು ಗುರುತು ಹಾಕಿಕೊಳ್ಳಲು ಜನರಲ್ ಅವರು ಕ್ಯಾಪ್ಟನ್ ಇಬಾರಾಗೆ ಹೇಳಿಕಳಿಸಿದರು; ಕುಂಠಿತಗೊಂಡ

ಅಧಿಕಾರವಿರುವ ತಾವು ಅವಳ ಗಂಡನ ಬಿಡುಗಡೆಗೆ ಎಲ್ಲ ಪ್ರಯತ್ನವನ್ನೂ ಮಾಡುವುದಾಗಿ ಮಾತು ಕೊಟ್ಟರು. ಅಂದು ರಾತ್ರಿಯೇ ಆ ಬಗ್ಗೆ ಕರ್ನಲ್ ಪೊಸಾಡಾ ಗುಟಿಯರೆಜ್ ಜೊತೆ ಪೂರ್ತಿ ರಹಸ್ಯವಾಗಿ, ಬರವಣಿಗೆಯಲ್ಲಿ ಯಾವುದನ್ನೂ ವ್ಯಕ್ತಪಡಿಸದೆ, ವಿಚಾರ ವಿನಿಮಯ ಮಾಡಿದರು. ಆದರೆ ಹೊಸ ಸರ್ಕಾರ ಹೇಗಿರುತ್ತೆಂಬ ಬಗ್ಗೆ ತಿಳಿಯುವವರೆಗೂ ಅವರು ಈ ವಿಷಯವನ್ನು ತಡೆಹಿಡಿದರು. ಅವರು ಮಿರಾಂಡಳನ್ನು ಮೊಗಸಾಲೆಗೆ ಕರೆದೊಯ್ದರು, ಅಲ್ಲಿ ಅವಳ ಕಾವಲಿಗೆಂದು ಆರು ಮಂದಿ ಬಿಡುಗಡೆಗೊಂಡ ಗುಲಾಮರ ನಿಯುಕ್ತರಾಗಿದ್ದರು. ಕೈಗೆ ಮುತ್ತಿಕ್ಕಿ ಅವಳನ್ನು ಬೀಳ್ಕೊಟ್ಟರು.

"ರಾತ್ರಿ ಮಧುರವಾಗಿತ್ತು" ಎಂದಳು.

ಅವರಿಗೆ ಮೋಹ ತಡೆಯಲಾಗಲಿಲ್ಲ.

"ಇವತ್ತೋ ಆವತ್ತೋ?" ಎಂದ.

"ಎರಡೂ" ಎಂದಳವಳು.

ವೈಸ್‌ರಾಯ್‌ನದರಂತೆ ಭರ್ಜರಿಯಾಗಿದ್ದ ಮತ್ತೊಂದು ಕುದುರೆಯನ್ನೇರಿದ ಅವಳು ಒಮ್ಮೆಯೂ ಹಿಂದಿರುಗಿ ನೋಡದೆ ವೇಗದಿಂದ ದೌಡಾಯಿಸಿದಳು. ಬೀದಿಯ ಕೊನೆಯಲ್ಲಿ ಅವಳು ಕಣ್ಣಿಂದ ಮರೆಯಾಗುವವರೆಗೂ ಬಾಗಿಲುವಾಡಕ್ಕೆ ಒರಗಿ ನಿಂತಿದ್ದ ಜನರಲ್ ಆನಂತರವೂ ಮನಸ್ಸಿನಲ್ಲಿ ಅವಳ ಚಿತ್ರವನ್ನು ಕಲ್ಪಿಸಿಕೊಂಡೇ ಇದ್ದರು. ಜೋಸೆ ಪೆಲಾಸಿಯೋಸ್ ನದಿ ಪಯಣಕ್ಕೆ ಹೊರಡೋಣವೆಂದು ಕರೆದಾಗಲೇ ಅವರಿಗೆ ಎಚ್ಚರವಾದದ್ದು.

ಏಳು ವರ್ಷಗಳ ಹಿಂದೆ ಕಮೋಡರ್ ಜೊಹಾನ್ ಬಿ. ಎಲ್‌ಬರ್ಟ್ ಎಂಬ ಜರ್ಮನನಿಗೆ ಉಗಿ ದೋಣಿಯನ್ನು ಆರಂಭಿಸಲು ಜನರಲ್ ವಿಶೇಷ ಅಧಿಕಾರವನ್ನು ನೀಡಿದ್ದರು. ಬ್ಯಾರಾಂಕ ನುಯೆವದಿಂದ ಪ್ಯೂರ್ಟೊವರೆಗೆ ಒಕಾನಾ ಮೂಲಕ ಅಂಥ ಒಂದು ದೋಣಿಯಲ್ಲಿ ತಾವೇ ಪಯಣಿಸಿ ಅದು ಸೌಕರ್ಯಯುಕ್ತವೂ ಸುರಕ್ಷಿತವೂ ಆದುದೆಂಬುದನ್ನು ದೃಢಪಡಿಸಿಕೊಂಡಿದ್ದರು. ಆದರೆ ಕಮೋಡರ್ ಎಲ್‌ಬರ್ಟ್ ಅದರ ವ್ಯವಹಾರದ ಸಂಪೂರ್ಣ ಹಕ್ಕು ನೀಡದಿದ್ದರೆ ಅದರಿಂದ ಪ್ರಯತ್ನಕ್ಕೆ ತಕ್ಕ ಲಾಭ ಬರುವುದಿಲ್ಲವೆಂದು ತಿಳಿಸಿದ್ದರಿಂದ, ತಾವು ಅಧ್ಯಕ್ಷ ಸ್ಥಾನಕ್ಕೆ ಹೋದಾಗ ಜನರಲ್ ಸಟಾಂಡರ್ ಷರತ್ತುಗಳಿಲ್ಲದೆ ಅಂಥ ಹಕ್ಕನ್ನು ನೀಡಿದ್ದ. ಎರಡು ವರ್ಷಗಳ ಬಳಿಕ, ರಾಷ್ಟ್ರೀಯ ಕಾಂಗ್ರೆಸ್‌ನಿಂದ ಸಂಪೂರ್ಣ ಅಧಿಕಾರಗಳನ್ನು ಪಡೆದಿದ್ದ ಜನರಲ್ ಪ್ರವಾದಿಯ ಉಕ್ತಿಯಂತಹ ಮಾತಿನೊಂದಿಗೆ ಆ ಹಕ್ಕುಗಳನ್ನು ವಾಪಸ್ಸು ಪಡೆದಿದ್ದರು. ಆ ವಾಕ್ಯವೆಂದರೆ "ನಾವು ಜರ್ಮನರ ಕೈಗೆ ಏಕಸ್ವಾಮ್ಯವನ್ನೊಪ್ಪಿಸಿದರೆ ಅವರು ಅದನ್ನು ಸಂಯುಕ್ತ ಸಂಸ್ಥಾನಗಳಿಗೆ ಒಪ್ಪಿಸುತ್ತಾರೆ" ಎಂಬುದು. ಆಮೇಲೆ ಇಡೀ ದೇಶದ ನದಿಗಳಲ್ಲಿನ

ಪ್ರಯಾಣವನ್ನು ಸಂಪೂರ್ಣ ಮುಕ್ತಗೊಳಿಸಿದ್ದರು. ಹೀಗಾಗಿ ಪ್ರಯಾಣ ಮಾಡಲು ತಾವೇ ಉಗಿ ದೋಣಿಯನ್ನು ಪಡೆಯುವ ನಿರ್ಧಾರ ಮಾಡಿದಾಗ ಅವರು ಎದುರಿಸಿದ್ದು ಸೇಡಿನ ರೀತಿಯೋ ಎಂಬಂತಹ ವಿಳಂಬ ಮತ್ತು ಸುತ್ತುಬಳಕೆಯ ಮಾರ್ಗ, ಇದರಿಂದಾಗಿ ಕೊನೆಯಲ್ಲಿ ತಾವು ಹೊರಡುವಾಗ ಸಾಂಪ್ರದಾಯಿಕ ವಾಹನಗಳನ್ನೇ ಬಳಸುವಂತಾಗಿತ್ತು.

ಅಂದು ಬೆಳಗಿನ ಜಾವ ಐದು ಗಂಟೆಯಿಂದಲೂ ರೇವಿನಲ್ಲಿ ಕುದುರೆ ಸವಾರರು ಹಾಗೂ ಕಾಲ್ನಡಿಗೆಯ ಜನ ತುಂಬಿದ್ದರು; ಅವರು ಅಲ್ಲಿದ್ದುದು ಮಿಕ್ಕ ಸಮಯಗಳಲ್ಲಿಯಂತೆಯೇ ಬೀಳ್ಕೊಡಿಗೆಯಂತಹ ಸಮಾರಂಭವನ್ನು ನಡೆಸಲು ಆಜುಬಾಜಿನ ಬೀದಿಗಳ ಜನರನ್ನು ಗವರ್ನರ್ ತರಾತುರಿಯಿಂದ ಕಲೆಹಾಕಿದ್ದರ ಪರಿಣಾಮವಾಗಿ. ಅಲ್ಲಿ ಅಸಂಖ್ಯ ಉಗಿದೋಣಿಗಳು ದಿನಪೂರ್ತಿ ಓಡಾಡುತ್ತಿದ್ದವು, ಅವುಗಳಲ್ಲಿ ಹಗುರ ಮನೋಭಾವದ ಹೆಂಗಸರು ತುಂಬಿರುತ್ತಿದ್ದರು. ಅವರು ಅಲ್ಲಿರುತ್ತಿದ್ದ ರಕ್ಷಣಾಪಡೆಯ ಸೈನಿಕರತ್ತ ಪ್ರಚೋದನಕಾರಿಯಾಗಿ ಕೂಗುತ್ತಿದ್ದರು, ಸೈನಿಕರು ಇಂಥದಕ್ಕೆ ಅಶ್ಲೀಲ ಭಂಗಿಗಳಿಂದ ಪ್ರತಿಕ್ರಿಯಿಸುತ್ತಿದ್ದರು. ಅಧಿಕೃತ ನಿಯೋಗದೊಡನೆ ಜನರಲ್ ಜನರಲ್‌ಅಲ್ಲಿಗೆ ಬಂದಾಗ ಆರು ಗಂಟೆ. ಗವರ್ನರ್ ಭವನವನ್ನು ಕಾಲ್ನಡಿಗೆಯಿಂದಲೇ ಬಿಟ್ಟ ಅವರು ಕೊಲೋನ್ ಹಾಕಿದ್ದ ಕರವಸ್ತ್ರವನ್ನು ಬಾಯಗಡ್ಡಲಾಗಿ ಹಿಡಿದುಕೊಂಡು ನಿಧಾನವಾಗಿ ನಡೆಯುತ್ತ ಬಂದಿದ್ದ.

ದಿನಪೂರ್ತಿ ಮೋಡವಿರುವುದೇನೋ ಎನ್ನಿಸುವಂತಿತ್ತು. ಪೇಟೆ ಬೀದಿಯಲ್ಲಿನ ಅಂಗಡಿಗಳು ನಸುಕಿನಿಂದಲೇ ತೆರೆದಿದ್ದವು, ಕೆಲವರು ಬಯಲಲ್ಲಿಯೇ ಇಪ್ಪತ್ತು ವರ್ಷಗಳ ಹಿಂದೆ ಸಂಭವಿಸಿದ್ದ ಭೂಕಂಪದಿಂದಾಗಿ ಬಿದ್ದಿದ್ದ ಮನೆಗಳ ಅವಶೇಷಗಳ ನಡುವೆಯೇ ವ್ಯಾಪಾರ ನಡೆಸುತ್ತಿದ್ದರು. ಕಿಟಕಿಗಳ ಮೂಲಕ ತಮ್ಮ ಕಡೆ ನೋಡಿ ಸ್ವಾಗತಿಸಿದವರ ಕಡೆ ಜನರಲ್ ಕೈಯಲ್ಲಿನ ಕರವಸ್ತ್ರವನ್ನು ಆಡಿಸುತ್ತಿದ್ದರು, ಆದರೆ ಅಂತಹವರು ಎಲ್ಲೋ ಕೆಲವರು; ಹೆಚ್ಚು ಜನ ಹಾದು ಹೋಗುವಾಗ ಅವರ ಬಡಕಲು ದೇಹವನ್ನು ನೋಡಿ ಅಚ್ಚರಿಯಿಂದ ಮೌನದಿಂದಲೇ ಇದ್ದರು. ಜನರಲ್ ತೋಳುಗಳಿದ್ದ ಅಂಗಿಯನ್ನು ಹಾಕಿಕೊಂಡು ವೆಲ್ಲಿಂಗ್ಟನ್ ಬೂಟುಗಳನ್ನು ಧರಿಸಿ, ತಲೆಯ ಮೇಲೆ ಬಿಳಿಯ ಹ್ಯಾಟ್ ಇಟ್ಟುಕೊಂಡಿದ್ದರು. ಚರ್ಚ್‌ನ ಸಭಾಂಗಣದಲ್ಲಿ ಪುರೋಹಿತನೊಬ್ಬ ಕುರ್ಚಿಯ ಮೇಲೆ ನಿಂತು ಉಪದೇಶಭಾಷಣಕ್ಕೆ ಸಿದ್ಧನಾಗಿದ್ದ, ಆದರೆ ಜನರಲ್ ಕ್ಯಾರೆನೋ ಅದನ್ನು ತಡೆದಿದ್ದ. ಜನರಲ್ ಅವನ ಬಳಿ ಹೋಗಿ ಕೈಕುಲುಕಿದ.

ಮೂಲೆಯಲ್ಲಿ ತಿರುಗಿ ನೋಡಿದ ಕ್ಷಣವೇ ಅಲ್ಲಿನ ಏರಿನಲ್ಲಿ ತಾವು ಏಗಲಾರೆನೆಂಬುದು ಅವರಿಗೆ ಮನದಟ್ಟಾಯಿತು, ಆದರೂ ಜನರಲ್ ಕ್ಯಾರೆನೋನ ತೋಳನ್ನು ಹಿಡಿದುಕೊಂಡು ಹತ್ತತೊಡಗಿದರು, ಆದರೆ ಮುಂದೆ

ಆಗುವುದಿಲ್ಲವೆಂಬುದು ಸ್ವಲ್ಪ ಹೊತ್ತಿನಲ್ಲಿಯೇ ನಿಶ್ಚಿತವಾಯಿತು. ಆಮೇಲೆ ಬೇಕಾದರೆ ಇರಲಿ ಎಂದು ಪೊಸಾಡಾ ಗುಟಿಯೆರೆಜ಼್ ತರಿಸಿದ್ದ ಮೇನೆ ಕುರ್ಚಿಯಲ್ಲಿ ಕುಳಿತು ಮುಂದೆ ಸಾಗುವಂತೆ ಜನರಲ್ ಅವರ ಮನವೊಲಿಸಲು ಪ್ರಯತ್ನಿಸಿದರು.

"ಬೇಡ ಜನರಲ್, ದಯವಿಟ್ಟು, ನನಗೆ ಅವಮಾನ ಮಾಡಬೇಡಿ" ಎಂದರು ಹಟಮಾರಿತನದಿಂದ.

ಅವರು ಆ ಏರುದಾರಿಯ ತುದಿಗೆ ಹೋದದ್ದು ದೇಹದ ಕಸುವಿನಿಂದಲ್ಲ, ಸಂಕಲ್ಪಬಲದಿಂದ; ಅಲ್ಲದೆ ನೆರವಿಲ್ಲದೆ ಹಡಗುಕಟ್ಟೆಯವರೆಗೆ ಇಳಿಯುವುದಕ್ಕೂ ಅವನಲ್ಲಿ ಶಕ್ತಿ ಉಳಿದಿತ್ತು. ಅಲ್ಲಿ ಅಧಿಕೃತ ನಿಯೋಗದ ಪ್ರತಿ ಸದಸ್ಯನ ಜೊತೆಯಲ್ಲೂ ಹಸನ್ಮುಖಿಯಾಗಿ ಕೆಲವು ಮಾತುಗಳನ್ನಾಡಿ ಅವರಿಂದ ಬೀಳ್ಕೊಂಡರು. ತೋರಿಕೆಯ ಮುಗುಳ್ನಗುವಿನಿಂದ ಹಾಗೆ ಮಾಡಿದ್ದರೂ ಮೇ ೧೫ ರಂದು ತಾವು ಅನಿವಾರ್ಯವಾಗಿ ಶೂನ್ಯಕ್ಕೆ ಮರುಳುತ್ತಿರುವ ಸಂಗತಿಯನ್ನವರು ಗಮನಿಸಲಿಲ್ಲ. ತಮ್ಮ ಚಿತ್ರವನ್ನು ಕೊರೆದಿದ್ದ ಚಿನ್ನದ ಪದಕವನ್ನು ಗವರ್ನರ್ ಪೊಸಾಡಾ ಗುಟಿಯೆರೆಜ಼್‌ಗೆ ಉಡುಗೊರೆಯಾಗಿ ಕೊಟ್ಟರು, ಎಲ್ಲರಿಗೂ ಕೇಳಿಸುವಷ್ಟು ಜೋರು ದನಿಯಲ್ಲಿ ತಮ್ಮ ಬಗ್ಗೆ ತೋರಿದ ವಿಶ್ವಾಸಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿದರು, ತುಂಬಿ ಬಂದ ಭಾವುಕತೆಯಿಂದ ಕೂಡಿ ಅವನನ್ನು ಆಲಂಗಿಸಿಕೊಂಡರು. ಆನಂತರ ದೋಣಿಯೊಂದರ ತುದಿಯಲ್ಲಿ ನಿಂತು ಎಲ್ಲರ ಕಡೆ ಹ್ಯಾಟು ಬೀಸಿ ವಿದಾಯ ಹೇಳಿದರು, ಆದರೆ ತೀರದಲ್ಲಿ ಗುಂಪಾಗಿ ನಿಂತು ಬೀಳ್ಕೊಡುಗೆ ಹೇಳುತ್ತಿದ್ದ ಯಾರ ಮುಖವನ್ನೂ ಕಣ್ಣಿಟ್ಟು ನೋಡಲಿಲ್ಲ, ಸುತ್ತಲೂ ನಿಂತಿದ್ದ ಉಗಿದೋಣಿಗಳ ಅಸ್ತವ್ಯಸ್ತತೆಯನ್ನಾಗಲೀ ನೀರಿನಲ್ಲಿ ಮುಳುಗಿ ಮೀನಿನಂತೆ ಈಜುತ್ತಿದ್ದ ಬತ್ತಲೆ ಹುಡುಗರನ್ನಾಗಲೀ ಅವರು ಗಮನಿಸಲಿಲ್ಲ. ಒಂದೇ ತುದಿಯೆಡೆಗೆ ತಮ್ಮ ಹ್ಯಾಟನ್ನು ಬೀಸುತ್ತಿದ್ದರು, ಅವರ ಮುಖದ ಮೇಲೆ ಯಾವುದೋ ಭಾವನೆ ಮಡುಗಟ್ಟಿತ್ತು, ಪಾಳುಬಿದ್ದ ಕಟ್ಟಡಗಳ ನಡುವೆ ಎದ್ದು ಕಾಣುತ್ತಿದ್ದ ಚರ್ಚ್ ಗೋಪುರದ ತುದಿಯಷ್ಟೇ ಕಾಣುವವರೆಗೂ ಹೀಗೆಯೇ ಮಾಡುತ್ತಿದ್ದರು. ಆನಂತರ ದೋಣಿಯಲ್ಲಿನ ನೆರಳಿಗೆ ಹೋಗಿ, ಜೋಲಿಮಂಚದಲ್ಲಿ ಕುಳಿತು, ಜೋಸೆ ಪೆಲಾಸಿಯೋಸ್ ತಮ್ಮ ಬೂಟುಗಳನ್ನು ತೆಗೆಯಲು ಅನುವಾಗುವಂತೆ ಕಾಲುಗಳನ್ನು ಚಾಚಿದರು.

"ನಾವೀಗ ನಿಜವಾಗಿ ಹೊರಟು ಹೋಗಿದ್ದೇವೆಂಬುದನ್ನು ಅವರು ನಂಬುತ್ತಾರೆಂದು ಕಾಣುತ್ತದೆ" ಎಂದರು.

ಗುಂಪಿನಲ್ಲಿ ವಿವಿಧ ಅಳತೆಗಳ ಒಟ್ಟು ಎಂಟು ದೋಣಿಗಳಿದ್ದವು, ಅವುಗಳಲ್ಲಿ ಒಂದು ತಮಗೆ ಮತ್ತು ತಮ್ಮ ಪರಿವಾರಕ್ಕೆ ಮೀಸಲಾದುದು. ಅದರಲ್ಲಿ ಒಬ್ಬ ಚುಕ್ಕಾಣಿ ಹಿಡಿದಿದ್ದರೆ, ಎಂಟು ಮಂದಿ ಗ್ವಯಕಮ್

ಮರದಿಂದ ಮಾಡಿದ್ದ ಹುಟ್ಟುಗಳನ್ನು ಹಿಡಿದ ಅಂಬಿಗರು. ಸಾಧಾರಣ ದೋಣಿಗಳಂತಲ್ಲದೆ, ಇದರ ಮಧ್ಯದಲ್ಲಿ ಒಂದು ಗರಿ ಹೊದಿಸಿದ ಉಗ್ರಾಣವಿತ್ತು. ಅದರ ಮೇಲೆ ಒಂದು ಕ್ಯಾನ್‌ವಾಸ್ ಗುಡಾರವಿತ್ತು, ಅದಕ್ಕೆ ತಮ್ಮ ಜೋಲಿಮಂಚವನ್ನು ತೂಗಿ ಹಾಕಿಕೊಳ್ಳಬಹುದಾಗಿತ್ತು, ಅದರ ಅಂಚಿಗೆ ಚಿತ್ತಾರವಿದ್ದ ಹತ್ತಿ ಬಟ್ಟೆಯನ್ನು ಹೊಲಿಯಲಾಗಿತ್ತು, ಛಾವಣಿಯಾಗಿ ಚಾಪೆಗಳನ್ನು ಹೊದಿಸಲಾಗಿತ್ತು, ನಾಲ್ಕು ಕಡೆಗಳಲ್ಲಿ ಕಿಟಕಿಗಳಂತೆ ಕತ್ತರಿಸಿ ಒಳಕ್ಕೆ ಗಾಳಿಬೆಳಕುಗಳ ಬರಲು ಅವಕಾಶ ಮಾಡಲಾಗಿತ್ತು. ಅದರಲ್ಲಿ ಬರೆಯಲು ಅಥವಾ ಇಸ್ಪೀಟಾಡಲು ಅನುಕೂಲವಾಗುವಂತೆ ಒಂದು ಸಣ್ಣ ಮೇಜು, ಒಂದು ಪುಸ್ತಕದ ಕಪಾಟು ಮತ್ತು ಕಲ್ಲಿನ ಸೋಸು ಇದ್ದ ಒಂದು ಮಣ್ಣಿನ ನೀರಿನ ಹೂಜಿ ಇದ್ದವು. ಆ ದೋಣಿಸಮೂಹದ ಉಸ್ತುವಾರಿ ಹೊತ್ತವನು ಅಂಬಿಗರಲ್ಲಿ ಹುಡುಕಿ ಆರಿಸಿದ ಕ್ಯಾಸಿಲ್ಡೋ ಸ್ಯಾಂಟೋಸ್, ರಕ್ಷಣಾದಳದ ಮಾರ್ಕ್ಸ್‌ಮನ್ ಬೆಟಾಲಿಯನ್‌ನ ಮಾಜಿ ಕ್ಯಾಪ್ಟನ್. ಅವನ ಧ್ವನಿ ಗುಡುಗಿನಂತಹುದು, ಎಡಗಣ್ಣಿನ ಮೇಲ್ಭಾಗದಲ್ಲಿ ಕಡಲ್ಗಳ್ಳರು ಮಾಡಿದ್ದ ಗಾಯದ ಕಲೆಯಿತ್ತು, ನಿಲವಿನಲ್ಲಿ ತನ್ನ ಅಧಿಕಾರದ ಬಗೆಗಿನ ಭಾವನೆಯಿಂದಾದ ಒಂದು ಬಗೆಯ ನಿರ್ಭಯತೆ.

ಕಮೋಡರ್ ಎಲ್ಬರ್‌ನ ಹಡಗುಗಳ ಪಯಣಕ್ಕೆ ಅನುಕೂಲಕರವಾದ ಸಮಯ ಮೇ ತಿಂಗಳಿಂದ ಆರಂಭಗೊಳ್ಳುತ್ತಿದ್ದವು. ಆದರೆ ಇದು ದೋಣಿಗಳಿಗೆ ಪ್ರಶಸ್ತವಾದ ಸಮಯವಲ್ಲ. ಮಹಾ ಶಕೆ, ಪುರಾಣಗಳಲ್ಲಿ ವರ್ಣಿತವಾದಂತಹ ಬಿರುಗಾಳಿಗಳು, ಅಪಾಯಕಾರಿ ತಿರುಗಣಿಗಳು, ರಾತ್ರಿಯ ಹೊತ್ತಿನಲ್ಲಿ ಕಾಡುಪ್ರಾಣಿಗಳು ಹಾಗೂ ಪ್ರಾಣಹಿಂಡುವ ಕೀಟಗಳ ಬಾಧೆ ಇವೆಲ್ಲ ಪಯಣಗರ ಸೌಕರ್ಯವನ್ನು ನಾಶಮಾಡಲು ಸಿದ್ಧವಾಗಿ ನಿಂತಿರುತ್ತಿದ್ದವು. ಅದರಲ್ಲೂ ಕಾಯಿಲೆಕಸಾಲೆಯಿಂದ ಕೂಡಿದ ಸೂಕ್ಷ್ಮಶರೀರಿಗಳಿಗೆ ಗಬ್ಬುವಾಸನೆ ಹೊಡೆಯುವ ಉಪ್ಪು ಹಚ್ಚಿದ ಮಾಂಸದ ತುಣುಕುಗಳು ಹಾಗೂ ಅಧ್ಯಕ್ಷರ ದೋಣಿಯ ಮೇಲುಗಡೆ ಜಂತೆಗಳಿಗೆ ತೂಗು ಹಾಕಿದ ಹೊಗೆ ಹತ್ತಿದ ಮೀನು ಇವುಗಳು ಮತ್ತಷ್ಟು ಪೀಡೆಯನ್ನುಂಟುಮಾಡುತ್ತಿದ್ದವು. ದೋಣಿಯಲ್ಲಿ ಕಾಲಿಟ್ಟ ತಕ್ಷಣವೇ ಆ ಮೀನುಗಳು ಕಣ್ಣಿಗೆ ಬಿದ್ದು ಅದನ್ನು ತೆಗೆಸಿಹಾಕಲು ಜನರಲ್ ಆಜ್ಞಾಪಿಸಿದ್ದರು. ಜನರಲ್‌ರಿಗೆ ಆಹಾರದ ವಾಸನೆಯನ್ನು ಸಹಿಸಿಕೊಳ್ಳುವುದೂ ಕಷ್ಟವೆಂದು ಈ ಮೂಲಕ ಅರಿತ ಕ್ಯಾಪ್ಟನ್ ಸ್ಯಾಂಟೋಸ್, ಜೀವಂತ ಕೋಳಿಗಳು ಮತ್ತು ಹಂದಿಗಳ ದಂಡನ್ನು ಕೊನೆಯ ದೋಣಿಗೆ ವರ್ಗಾಯಿಸಲು ಏರ್ಪಾಟು ಮಾಡಿದ್ದ; ಜೊತೆಗೆ, ಪಯಣದ ಆರಂಭದ ದಿನದಿಂದಲೇ ಜನರಲ್ ಎರಡು ಕೈಬೋಗುಣಿಯ ತುಂಬ ಮುಸುಕಿನ ಜೋಳದ ಅಂಬಲಿಯನ್ನು

ಸಂತಸದಿಂದ ಹೀರುತ್ತಿದ್ದುದನ್ನು ಗಮನಿಸಿ ಪಯಣದುದ್ದಕ್ಕೂ ಅವರು ಬೇರಾವುದನ್ನೂ ತಿನ್ನುವುದಿಲ್ಲವೆಂಬುದನ್ನು ಖಚಿತಪಡಿಸಿಕೊಂಡಿದ್ದ.

"ಇದನ್ನು ಫರ್ನಾಂಡ ದ ಸೆವೆನ್ತ್‌ಳ ಮಾಂತ್ರಿಕ ಕೈಗಳೇ ಮಾಡಿದ ಹಾಗೆ ಕಾಣತ್ತೆ" ಎಂದು ಉದ್ಗರಿಸಿದ್ದರು.

ಸತ್ಯವೂ ಅದೇ. ಕಳೆದ ಕೆಲವು ವರ್ಷಗಳಿಂದ ಅವರ ಆಪ್ತ ಅಡುಗೆಯಾಳಾಗಿದ್ದವಳು ಕ್ವಿಟೆನ ಫರ್ನಾಂಡ ಬ್ಯಾರಿಗ. ಒಮ್ಮೆ ತನಗಿಷ್ಟವಾಗದ ಅಡುಗೆಯನ್ನು ಮಾಡಿ ಅದನ್ನೇ ತಿನ್ನಬೇಕಾಗಿ ಬಂದಾಗಿನಿಂದ ಅವಳನ್ನು ಪ್ರೀತಿಯಿಂದ ಫರ್ನಾಂಡ ದ ಸೆವೆನ್ತ್ ಎಂದು ಕರೆಯುತ್ತಿದ್ದರು; ಅವರಿಗೆ ತಿಳಿಯದಂತೆಯೇ ಅವಳು ದೋಣಿಯಲ್ಲಿ ಸೇರಿಕೊಂಡಿದ್ದಳು. ಎಂದೂ ಗೊಂದಲಗೊಳ್ಳದ, ದಡೂತಿಯಾದ ದೇಹವುಳ್ಳ, ಹರಿತವಾದ ಮಾತಿನ ಇಂಡಿಯನ್ ಹೆಂಗಸು ಅವಳು; ಅಡುಗೆ ಮನೆಯಲ್ಲಿನ ಅನುಭವಕ್ಕಿಂತ ಹೆಚ್ಚಾಗಿ ಜನರಲ್‌ರಿಗೆ ಯಾವುದು ಇಷ್ಟ ಎಂದು ತಿಳಿಯುವ ಕೌಶಲ ಅವಳ ವೈಶಿಷ್ಟ್ಯವಾಗಿತ್ತು.

ಅವಳು ಮ್ಯಾನ್ಯುಯೆಲ ಸಯೆನ್ಜ಼್್ ಮನೆಯ ಸೇವಕಿಯರಲ್ಲಿ ಒಬ್ಬಳಾಗಿದ್ದುದರಿಂದ ಅವಳ ಜೊತೆಯೇ ಸಂಟಾ ಫ ದ ಬೊಗೋಟದಲ್ಲಿಯೇ ಉಳಿಯಬೇಕೆಂದು ಜನರಲ್ ನಿರ್ಧರಿಸಿದ್ದರು, ಆದರೆ ಅವಳನ್ನು ಜನರಲ್ ಕ್ಯಾರೆನೋ ಗುಅಡುಅಸ್‌ಗೆ ಕರೆಸಿಕೊಂಡಿದ್ದ, ಅದಕ್ಕೆ ಕಾರಣ ಹೊರಡುವ ಹಿಂದಿನ ದಿನದಿಂದಲೂ ಜನರಲ್ ಪೂರ್ತಿ ಊಟವನ್ನೇ ಮಾಡಿಲ್ಲ ಎಂದು ಜೋಸೆ ಪೆಲಾಸಿಯೋಸ್ ಗಾಬರಿಯಿಂದ ಹೇಳಿದ್ದು. ಅವಳು ಬೆಳಗ್ಗೆ ಬೇಗಲೇ ಹೊಂಡಾಕ್ಕೆ ಬಂದು ತಲುಪಿದ್ದಳು, ಆದರೆ ಜನರಲ್ ಅವರ ಕಣ್ಣಿಗೆ ಬೀಳುವುದಕ್ಕೆ ಸರಿಯಾದ ಸಮಯಕ್ಕಾಗಿ ದೋಣಿಯ ಉಗ್ರಾಣದಲ್ಲಿ ಅವಳನ್ನು ಹುದುಗಿಸಿದ್ದರು. ಈ ಸಮಯ ಅವರು ಊಹಿಸಿದ್ದುದಕ್ಕಿಂತ ಬೇಗನೇ ಬಂದಿತ್ತು, ಆರೋಗ್ಯ ಹದಗೆಟ್ಟ ಕಾಲದಿಂದ ಮೊದಲ ಬಾರಿ ಜನರಲ್ ಇಷ್ಟಪಡುತ್ತಿದ್ದ ಮುಸುಕಿನ ಜೋಳದ ಅಂಬಲಿಯನ್ನು ಕುಡಿದು ಹರ್ಷ ವ್ಯಕ್ತಪಡಿಸಿದ್ದು ಅವಳ ವಿಷಯವನ್ನು ಜನರಲ್‌ರಿಗೆ ತಿಳಿಸಲು ಸೂಕ್ತ ಸಮಯವಾಗಿತ್ತು.

ದೋಣಿ ಪಯಣದ ಮೊದಲ ದಿನವೇ ಕೊನೆಯದೂ ಆಗಬಹುದಾಗಿತ್ತು. ಅಂದು ಮಧ್ಯಾಹ್ನ ಎರಡು ಗಂಟೆಗೇ ಕತ್ತಲಾವರಿಸಿತ್ತು, ನೀರು ಉಕ್ಕಿ ಹರಿಯುತ್ತಿತ್ತು, ಗುಡುಗುಮಿಂಚುಗಳು ಭೂಮಂಡಲವನ್ನೇ ತಲ್ಲಣಗೊಳಿಸುತ್ತಿದ್ದವು, ದೋಣಿಯು ಬಂಡೆಗೆ ಬಡಿದು ಚೂರಾಗುವುದನ್ನು ತಪ್ಪಿಸಲು ಹುಟ್ಟು ಹಾಕುತ್ತಿದ್ದವರು ಹರಸಾಹಸ ಮಾಡುತ್ತಿದ್ದರು. ದೋಣಿಯನ್ನು ಉಳಿಸಲು ಕ್ಯಾಪ್ಟನ್ ಸಾಂಟೋಸ್ ಏರು ದನಿಯಲ್ಲಿ ಸೂಚನೆ ನೀಡುತ್ತಿದ್ದುದ'ನ್ನು ಜನರಲ್ ತಮ್ಮ ಗೂಡಾರದಲ್ಲಿ ಕುಳಿತೇ ಗಮನಿಸುತ್ತಿದ್ದರು.

ಕ್ಯಾಪ್ಟನ್‌ನ ಕೌಶಲ ಈ ತುರ್ತಿನಲ್ಲಿ ಸಾಕಾಗುವುದಿಲ್ಲವೇನೋ ಎಂಬಂತೆ ಅವರಿಗೆ ತೋರಿತು. ಅವರ ಗಮನ ಮೊದಲು ಕುತೂಹಲದಿಂದ ಕೂಡಿದ್ದು ಬರಬರುತ್ತ ಅತೀವ ಆತಂಕಕ್ಕೆ ಈಡುಮಾಡಿತ್ತು, ಆಘಾತ ಉಂಟಾಗುವ ಹೊತ್ತಿಗೆ ಕ್ಯಾಪ್ಟನ್ ತಪ್ಪು ಸೂಚನೆ ನೀಡಿದ್ದನೆಂಬುದು ಸ್ಪಷ್ಟವಾಗಿತ್ತು. ತಮ್ಮ ಮನಸ್ಸಿಗೆ ಅನ್ನಿಸಿದಂತೆ ಮಳೆಗಾಳಿಯಲ್ಲಿಯೇ ಹೊರಗೆ ನಡೆದು ಕಂದಕದ ಅಂಚಿನಲ್ಲಿ ಕ್ಯಾಪ್ಟನ್ ನೀಡಿದ ಸೂಚನೆಗೆ ವಿರುದ್ಧವಾದುದನ್ನು ಆಜ್ಞೆ ಮಾಡಿದರು:

“ಅದು ಸರಿಯಲ್ಲ, ಬಲಗಡೆ ತಿರುಗಿಸಿ, ಬಲಗಡೆ” ಎಂದು ಕಿರುಚಿದರು.

ಒಡಕಲಾಗಿದ್ದರೂ ಅದಮ್ಯ ಅಧಿಕಾರದಿಂದ ತುಂಬಿದ್ದ ಆ ಧ್ವನಿಗೆ ಹುಟ್ಟು ಹಾಕುವವರು ಸ್ಪಂದಿಸಿದ್ದರು, ಜನರಲ್ ಅಪಾಯ ನಿವಾರಣೆಯಾಗುವವರೆಗೂ ನಿರ್ದೇಶನಸೂತ್ರಗಳನ್ನು ತಮಗರಿವಿಲ್ಲದೆಯೇ ತಮ್ಮ ವಶದಲ್ಲಿರಿಸಿಕೊಂಡಿದ್ದರು. ಹೊರ ಬಂದಾಗ ಜೋಸೆ ಪೆಲಾಸಿಯೋಸ್ ಒಂದು ಹೊದಿಕೆಯನ್ನು ತಂದು ಅವರಿಗೆ ಹೊದಿಸಿದ್ದ. ವಿಲ್ಸನ್ ಮತ್ತು ಇಬಾರಾ ಅವರು ನೇರವಾಗಿ ನಿಲ್ಲಲು ನೆರವಾದರು. ರೇವಿನಲ್ಲಿ ಹಾಗೂ ದೋಣಿಯಲ್ಲಿ ತಾನು ಉಂಟುಮಾಡಿದ್ದ ಗೊಂದಲದ ಅರಿವಾಗಿ ಕ್ಯಾಪ್ಟನ್ ಸಾಂಟೋಸ್ ಸರಿದು, ಸೈನಿಕನ ವಿನಮ್ರತೆಯಿಂದ ಜನರಲ್ ಆಚೆ ಈಚೆ ತನಗಾಗಿ ಕಣ್ಣಾಡಿಸಿ ಕೊನೆಗೆ ತನ್ನನ್ನು ಕಾಣುವವರೆಗೂ ಬದಿಯಲ್ಲಿ ನಿಂತ, ಅವನ ಕಣ್ಣಲ್ಲಿ ಅಸ್ಥಿರತೆ ಮನೆಮಾಡಿತ್ತು.

“ನನ್ನ ಕ್ಷಮಿಸಿ, ಕ್ಯಾಪ್ಟನ್” ಎಂದರು ಜನರಲ್.

ಆದರೆ ಅವನ ಮನಸ್ಸಿನ ತಳಮಳ ಕಡಿಮೆಯಾಗಿರಲಿಲ್ಲ. ಆ ರಾತ್ರಿ ಅವರು ಮೊದಲ ಬಾರಿಗೆ ಮಲಗಲೆಂದು ತಂಗಿದ್ದ ತೀರದಲ್ಲಿ ಬೆಂಕಿ ಹಾಕಿ ಸುತ್ತಲೂ ಕೂತಿದ್ದರು. ಆಗ ಜನರಲ್ ತಮ್ಮ ಅನುಭವದ ನೌಕಾಘಾತಗಳ ಅವಿಸ್ಮರಣೀಯ ಪ್ರಸಂಗಗಳನ್ನು ಬಣ್ಣಿಸಿದರು. ಮೊದಲು ಹೇಳಿದ್ದು ಫರ್ನಾಂಡೋನ ತಂದೆ ಮತ್ತು ತಮ್ಮ ಅಣ್ಣ ಜುಆನ್ ವಿನ್ಸೆಂಟ್‌ಗೆ ಸಂಬಂಧಿಸಿದ್ದು: ವಾಷಂಗ್ಟನ್‌ನಲ್ಲಿ ಮೊದಲ ಗಣರಾಜ್ಯಕ್ಕಾಗಿ ಶಸ್ತ್ರಾಸ್ತ್ರಗಳನ್ನು ಕೊಂಡು ಹಡಗಿನಲ್ಲಿ ತುಂಬಿಕೊಂಡು ಮರಳುವಾಗ ನೌಕಾಘಾತದಲ್ಲಿ ಅವರು ಸತ್ತಿದ್ದರು. ತಾವು ಸವಾರಿ ಹೊರಟು ತುಂಬಿದ ಹೊಳೆ ಅರಉಕವನ್ನು ದಾಟುವಾಗ ಕುದುರೆಯು ತನ್ನ ತೊಡೆಗಳ ನಡುವೆಯಿದ್ದಂತೆಯೇ ಸತ್ತಿತ್ತು; ತಮ್ಮ ಬೂಟು ರಿಕಾಪಿನಲ್ಲಿ ಸಿಕ್ಕಿಹಾಕಿಕೊಂಡದ್ದರಿಂದಾಗಿ ತಾವೂ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುವಾಗ ಮಾಗದರ್ಶಕ ಹೇಗೋ ಚರ್ಮದ ಪಟ್ಟಿಗಳನ್ನು ಕತ್ತರಿಸಿ ತನ್ನನ್ನು ಉಳಿಸಿದ್ದ ಪ್ರಸಂಗ ನಿರೂಪಿಸಿದರು. ನ್ಯೂ ಗ್ರನೆಡಕ್ಕೆ ಸ್ವಾತಂತ್ರ್ಯ ನೀಡುವ ಭರವಸೆಯಿತ್ತು ಆಗಸ್ಟುರಕ್ಕೆ ವಾಪಸಾಗುವಾಗ

ಒರಿನೋಕೋ ನದಿಯನ್ನು ದಾಟಬೇಕಾಗಿ ಬಂತು, ಆಗ ತಾವು ಆ ಪ್ರವಾಹದಲ್ಲಿ ಬುಡಮೇಲಾಗಿದ್ದ ದೋಣಿ ಮತ್ತು ಅದರಲ್ಲಿ ಈಜು ಬಾರದೆ ಕಂಗಾಲಾಗಿದ್ದ ಸೇನಾಧಿಕಾರಿಯೊಬ್ಬನನ್ನು ಕಂಡಿದ್ದ ವಿಚಾರ ವರ್ಣಿಸಿದರು. ಆ ವ್ಯಕ್ತಿ ಜನರಲ್ ಸ್ಯೂಕ್ರ್ ಎಂದು ಯಾರೋ ಹೇಳಿದರು; ತಾವು ಕೋಪದಿಂದ ಅಂಥ ವ್ಯಕ್ತಿಯೇ ಇಲ್ಲ ಎಂದು ವಾದಿಸಿದ್ದರು. ವಾಸ್ತವವಾಗಿ ಆ ವ್ಯಕ್ತಿ ಆಂಟೋನಿಯೋ ಜೋಸೆ ದ ಸ್ಯೂಕ್ರ್, ಕೆಲವೇ ದಿನಗಳ ಹಿಂದಷ್ಟೇ ಅವನಿಗೆ ವಿಮೋಚನಾ ಪಡೆಯ ಜನರಲ್ ಸ್ಥಾನಕ್ಕೆ ಬಡ್ತಿ ನೀಡಲಾಗಿತ್ತು. ಆಗಿನಿಂದ ಅವನು ತಮಗೆ ತುಂಬ ಆತ್ಮೀಯ ಸ್ನೇಹಿತನಾಗಿದ್ದ.

"ಆ ಭೇಟಿಯ ವಿಷಯ ನನಗೆ ಗೊತ್ತಿತ್ತು, ಆದರೆ ನೌಕಾಘಾತದ ಬಗ್ಗೆ ಅಲ್ಲ" ಎಂದ ಜನರಲ್ ಕ್ಯಾರೆನೋ.

"ನಾನೂ ಅದನ್ನು ಸ್ಯೂಕ್ರ್‌ನ ಮೊದಲನೇ ನೌಕಾಘಾತ ಅಂತ ತಪ್ಪು ತಿಳಿದಿರಬಹುದು. ಆಗ ಅವನು ಮೋರಿಲೋ ಜೊತೆ ಕಾರ್ಟಾಜೆನದಿಂದ ತಪ್ಪಿಸಿಕೊಂಡ, ಸುಮಾರು ಇಪ್ಪತ್ತನಾಲ್ಕು ಗಂಟೆಗಳ ಕಾಲ ನೀರಲ್ಲೇ ತೇಲ್ತಾ ಇದ್ದಾ ಅಂತ ಕಾಣತ್ತೆ," ಎಂದ. ಜೊತೆಗೆ ಸಂಬಂದ ಇಲ್ಲದಿದ್ದರೂ, "ನಾನು ಪ್ರಯತ್ನಪಡ್ತಿರೋದು ಈ ಮಧ್ಯಾಹ್ನ ನಾನು ನಡೆದುಕೊಂಡ ರೀತಿಯನ್ನು ಕ್ಯಾಪ್ಟನ್ ಸಾಂಟೋಸ್‌ಗೆ ಅರ್ಥ ಮಾಡಿಸೋದಕ್ಕೆ" ಎಂದು ಸೇರಿಸಿದರು.

ಬೆಳಗಿನ ಮೊದಮೊದಲು, ಬೇರೆಯವರು ಇನ್ನೂ ಮಲಗಿರುವಾಗ, ಆತ್ಮದಿಂದ ಮಾತ್ರ ಉಕ್ಕಿ ಬರೋ ಅಂತಹ ವಾದ್ಯಗಳ ಜೊತೆಯಿರದ ಹಾಡುಗಾರಿಕೆ ಇಡೀ ಕಾಡನ್ನು ಕಂಪಿಸುವ ಹಾಗೆ ಮಾಡಿತು. ಜನರಲ್ ತಮ್ಮ ಜೋಲಿಮಂಚದಲ್ಲಿ ನೇರವಾಗಿ ಕೂತರು. "ಇಟೂರ್‌ಬೈಡ್ ಅದು" ಎಂದು ಜೋಸೆ ಪೆಲಾಸಿಯೋಸ್ ನಸುಕಿನಲ್ಲಿಯೇ ಗೊಣಗಿಕೊಂಡ. ಅವನು ಮಾತನ್ನಿನ್ನೂ ಮುಗಿಸಿರಲೇ ಇಲ್ಲ, ಅಷ್ಟರಲ್ಲಿ ಒಂದು ಒರಟು ಆಜ್ಞೆಯ ಧ್ವನಿ ಹಾಡಿನ ಮಧ್ಯೆ ಕೇಳಿಸಿತು.

ಆಗಸ್ಟೀನ್ ದ ಇಟೂರ್‌ಬೈಡ್ ಸ್ವಾತಂತ್ರ್ಯ ಸಂಗ್ರಾಮದ ಒಬ್ಬ ಜನರಲ್‌ನ ಹಿರಿಯ ಮಗ. ಆ ಜನರಲ್ ತಾನೇ ದೇಶದ ಚಕ್ರವರ್ತಿ ಅಂತ ಘೋಷಿಸಿಕೊಂಡಿದ್ದ, ಅಧಿಕಾರ ಗಳಿಸಲು ಒಂದು ವರ್ಷ ಹೆಣಗಿದ. ಮೊದಲ ಸಲ ನೋಡಿದಾಗ ಯುವಕರ ಆರಾಧ್ಯದೈವದ ಎದುರುಬದುರು ನಿಂತದ್ದರಿಂದ ತಮ್ಮ ಕಂಪಿಸುವ ಕೈಗಳನ್ನು ನಿಯಂತ್ರಿಸಲಾರದೆ ನಡುಗುತ್ತ ಸೆಟೆದು ನಿಂತಿದ್ದರು, ಆ ಕ್ಷಣದಿಂದಲೇ ಅವನ ಬಗ್ಗೆ ಜನರಲ್‌ರಿಗೆ ವಿಶೇಷ ಒಲವು ಮೂಡಿತ್ತು. ಆಗ ಅವನಿಗೆ ಇಪ್ಪತ್ತೆರಡು ವರ್ಷ. ಅವನಿಗೆ ಹದಿನೇಳು ತುಂಬುವ ಮೊದಲೇ ಅವನ ತಂದೆಯನ್ನು ಗುಂಡಿಟ್ಟು ಕೊಂದಿದ್ದರು; ದೇಶಾಂತರದಲ್ಲಿದ್ದಾಗ ಅವನ ಅನುಪಸ್ಥಿತಿಯಲ್ಲೇ ವಿಚಾರಣೆ ನಡೆಸಿ ದೇಶದ್ರೋಹದ ಆಪಾದನೆಯ ಮೇಲೆ ಮರಣದಂಡನೆ ವಿಧಿಸಿದ್ದು ಅವನಿಗೆ

ತಿಳಿದಿರಲೇ ಇಲ್ಲ; ಹೀಗಾಗಿ ಮೆಕ್ಸಿಕೋ ಪ್ರದೇಶದ ಒಂದು ಬಿಸಿ ಬೇಗೆಯ ಹಳ್ಳಿಗೆ ಬಂದ ಕೆಲವೇ ಗಂಟೆಗಳಲ್ಲಿ ಗುಂಡಿಗೆ ಬಲಿಯಾಗಿದ್ದ.

ಮೊದಲಿನಿಂದಲೂ ಜನರಲ್ ಮೇಲೆ ಮೂರು ವಿಷಯಗಳು ಪರಿಣಾಮ ಬೀರಿದ್ದವು. ಮೊದಲನೆಯದೆಂದರೆ, ಅಧಿಕಾರಿಗಳು ಗುಂಡಿಡಲು ಗೋಡೆಯ ಬಳಿ ನಿಲ್ಲಿಸಿದ್ದಾಗ ಆಗಸ್ಟೀನ್‌ನ ತಂದೆ ತನ್ನ ಕೊರಳಲ್ಲಿನ ಸರದ ತುದಿಯಲ್ಲಿ ಧರಿಸಿದ್ದ ಬೆಲೆಬಾಳುವ ಹರಳುಗಳ ಕುಂದಣ ಮಾಡಿದ್ದ ಚಿನ್ನದ ಗಡಿಯಾರವನ್ನು ತನಗೆಂದು ಕಳಿಸಿದ್ದುದು, ಇದರಿಂದ ತಮ್ಮ ಮೇಲೆ ಅವರಿಗೆ ಎಂಥ ಗೌರವವಿತ್ತೆಂಬುದನ್ನು ಯಾರೂ ಊಹಿಸಬಹುದಾಗಿತ್ತು. ಎರಡನೆಯದೆಂದರೆ, ರೇವಿನಲ್ಲಿ ರಕ್ಷಣಾ ಪಡೆಗಳು ತಮ್ಮನ್ನು ಗುರುತಿಸದಂತೆ ಹರಕಲು ಬಟ್ಟೆ ತೊಟ್ಟು ಬಂದರೂ ಕುದುರೆ ಸವಾರಿಯ ಗತ್ತಿನಿಂದಲೇ ಅವರನ್ನು ಗುರುತಿಸಿದ್ದನ್ನು ತಮಗೆ ಹೇಳಿದುದು. ಮೂರನೆಯದೆಂದರೆ, ಅವರು ಹಾಡಿದ್ದು.

ರಾಜಪ್ರಭುತ್ವದ ಪಿತೂರಿಯ ಭಾಗವಾಗಿ ಯುದ್ಧಕಲೆಯಲ್ಲಿ ಇವರು ಪರಿಣತಿ ಪಡೆದವನೆಂದು ನಂಬಿದ್ದ ಮೆಕ್ಸಿಕನ್ ಸರ್ಕಾರ ಅವರು ಕೊಲಂಬಿಯ ಸೈನ್ಯವನ್ನು ಸೇರದಿರುವಂತೆ ಎಲ್ಲ ರೀತಿಯ ಅಡ್ಡಿಗಳನ್ನು ಒಡ್ಡಿತ್ತು; ಸಿಂಹಾಸನಕ್ಕೆ ಪಾರಂಪರಿಕ ಹಕ್ಕಿದೆ ಎಂದು ಸುಳ್ಳೇ ಪ್ರತಿಪಾದಿಸುತ್ತಿದ್ದ ಅವನಿಗೆ ಜನರಲ್ ಅವರ ಬೆಂಬಲವಿದೆ ಎಂದೂ ಅದು ನಂಬಿತ್ತು. ಆಗಸ್ಟೀನ್‌ನನ್ನು ತನ್ನ ಸೈನ್ಯಕ್ಕೆ ಸೇರಿಸಿಕೊಳ್ಳುವುದರ ಜೊತೆಗೆ, ಅವನನ್ನು ತಮ್ಮ ಆಪ್ತ ಸಹಾಯಕನಾಗಿ ಮಾಡಿಕೊಂಡು ಜನರಲ್ ಒಂದು ರಾಜತಾಂತ್ರಿಕ ತಪ್ಪನ್ನು ಎಸಗಿದ್ದರು. ಒಂದು ದಿನವೂ ಸುಖ ಕಾಣದಿದ್ದರೂ ಆಗಸ್ಟೀನ್ ತನ್ನ ನಂಬಿಕೆಯನ್ನು ಪೂರ್ತಿ ಉಳಿಸಿಕೊಂಡಿದ್ದವನು; ಹಾಡುವುದಷ್ಟೇ ಸಂದಿಗ್ಧ ಸ್ಥಿತಿಯನ್ನು ಎದುರಿಸಲು ಅವನಿಗೆ ನೆರವಾಗಿದ್ದುದು.

ಈ ಕಾರಣದಿಂದಾಗಿ, ಮ್ಯಾಗ್ಡಲೀನದ ಆ ಅರಣ್ಯದಲ್ಲಿ ಅವನನ್ನು ಯಾರೋ ಸುಮ್ಮನಿರಿಸಿದಾಗ, ಹೊದ್ದುಕೊಂಡು ಮಲಗಿದ್ದ ಜನರಲ್ ಜೋಲಿಮಂಚಲ್ಲಿಯೇ ಎದ್ದು ಕುಳಿತಿದ್ದರು. ಆನಂತರ ಎದ್ದು ರಕ್ಷಣ ದಳದವರು ಹೊತ್ತಿಸಿದ್ದ ಬೆಂಕಿಯ ಬೆಳಕಲ್ಲಿ ಬಿಡಾರವನ್ನು ದಾಟಿಕೊಂಡು ಅವನನ್ನು ಕಾಣಲೆಂದು ಹೋದರು. ಹರಿಯುವ ನದಿಯನ್ನೇ ನೋಡುತ್ತ ದಡದಲ್ಲಿ ಕುಳಿತಿದ್ದ ಆಗಸ್ಟೀನ್ ಕಾಣಿಸಿದ.

"ಮುಂದುವರೆಸು, ಕ್ಯಾಪ್ಟನ್" ಎಂದರು ಜೋರಾಗಿ.

ಹೋಗಿ ಅವನ ಪಕ್ಕದಲ್ಲಿಯೇ ಕುಳಿತರು. ಹಾಡಿನ ಶಬ್ದಗಳು ತಿಳಿದಾಗ ತಾನೂ ಅವನೊಡನೆ ಕೀಚು ದನಿಗೂಡಿಸಿದ. ಅಂತಹ ತನ್ಮಯತೆಯೊಡನೆ ಬೇರಾರೂ ಹಾಡುವುದನ್ನು ಅವರು ಕಂಡಿರಲಿಲ್ಲ. ಅಂತೆಯೇ ಅವನಷ್ಟು ದುಃಖಿಯನ್ನಾಗಲೀ, ಆದರೂ ತನ್ನ ಸುತ್ತಲಿನ

ವಾತಾವರಣವನ್ನು ಸದಾ ಸಂತೋಷದಾಯಕವಾಗಿರಿಸುತ್ತಿದ್ದವರನ್ನಾಗಲೀ ಜನರಲ್ ನೋಡಿರಲಿಲ್ಲ. ಜಾರ್ಜ್‌ಟೌನ್‌ನ ಮಿಲಿಟರಿ ಶಾಲೆಯಲ್ಲಿ ತನ್ನ ಸಹಪಾಠಿಗಳಾಗಿದ್ದ ಫರ್ನಾಂಡೋ ಮತ್ತು ಆಂದ್ರೇ ಹಾಗೂ ಇಟೂರ್‌ಬೈಡ್ ಇವರು ಜನರಲ್ ಜೊತೆ ಸುತ್ತಲಿನ ಸೈನಿಕ ಬಿಡಾರದ ಬರಡು ವಾತಾವರಣಕ್ಕೆ ಯೌವನಭರಿತ ಉತ್ಸಾಹವನ್ನು ತಂದಿದ್ದ ತ್ರಿಮೂರ್ತಿಗಳು.

ಆಗಸ್ಟೀನ್ ಮತ್ತು ಜನರಲ್ ಹಾಡುವುದು ನಿಲ್ಲಿಸಿದ್ದು ಸುತ್ತಲ ಕಾಡಿನ ಪ್ರಾಣಿಗಳು ಗಲಿಬಿಯುಂಟುಮಾಡಿ ದಡದ ಮೇಲೆ ನಿದ್ರಿಸುತ್ತಿದ್ದ ಮೊಸಳೆಗಳು ಎಚ್ಚರಗೊಂಡು ನೀರಿನ ಎದೆಯು ಪ್ರಳಯಕಾಲದಲ್ಲಿಯಂತೆ ಪ್ರಕ್ಷುಬ್ಧಗೊಂಡಾಗಲೇ. ಸುತ್ತಲಿನ ಪ್ರಕೃತಿ ಎಚ್ಚರಗೊಂಡದ್ದನ್ನು ಕಂಡು ಆಶ್ಚರ್ಯದಿಂದ ಜನರಲ್, ಕ್ಷಿತಿಜದಂಚಿನಲ್ಲಿ ಬೆಳಕಿನಂತಿದ್ದ ಕಿತ್ತಳೆ ಬಣ್ಣದ ಪಟ್ಟೆ ಕಾಣುವವರೆಗೂ ನೆಲದ ಮೇಲೆ ಹಾಗೆಯೇ ಕೂತಿದ್ದರು. ಆನಂತರ ಮೇಲೇಳಲು ಇಟೂರ್‌ಬೈಡ್‌ನ ಭುಜದ ಮೇಲೆ ಕೈಯಿರಿಸಿ ಭಾರ ಬಿಟ್ಟರು.

"ಥ್ಯಾಂಕ್ ಯೂ, ಕ್ಯಾಪ್ಟನ್. ನಿನ್ನಂಥ ಹತ್ತು ಜನ ಹಾಡುಗಾರರು ಇಡೀ ಲೋಕವನ್ನೇ ಉಳಿಸಬಲ್ಲುದು" ಎಂದರು ಎದೆತುಂಬಿ.

"ಆ, ಜನರಲ್, ನೀವು ಹೀಗೆ ಹೇಳುವುದನ್ನು ನನ್ನ ತಾಯಿ ಕೇಳಿದ್ದರೆ ನಾನು ಏನು ಬೇಕಾದರೂ ಕೊಡುತ್ತಿದ್ದೆ" ಎಂದ ಇಟೂರ್‌ಬೈಡ್.

ಪ್ರಯಾಣದ ಎರಡನೆಯ ದಿನ ಆವರಿಗೆ ಅಚ್ಚುಕಟ್ಟಾದ ಹುಲ್ಲುಹಾಸಲಿದ್ದ ಕಾರ್ಖಾನೆಯ ಆವರಣಗಳೂ ಓಡಾಡುತ್ತಿದ್ದ ಠಾಕಣಗಳೂ ಕಾಣಿಸಿದವು, ಆನಂತರ ಅರಣ್ಯ ಶುರುವಾಯಿತು, ನಿರಂತರವಾಗಿ ಒಂದೇ ಬಗೆಯ ದೃಶ್ಯ. ಮೊದಲು, ನದಿದಂಡೆಗಳಲ್ಲಿ ವಾಸಿಸುತ್ತಿದ್ದ ಮರ ಕಡಿಯುವವರು ಬೀಳಿಸಿದ್ದ ಭಾರಿ ದಿಮ್ಮಿಗಳಿಂದ ಮಾಡಿದ ತೇಲೊಟ್ಟಿಲುಗಳು ನೀರಲ್ಲಿ ತೇಲುವುದು ಅವರ ಕಣ್ಣಿಗೆ ಬಿದ್ದಿತ್ತು. ಅವುಗಳ ಚಲನೆ ಎಷ್ಟು ನಿಧಾನಗತಿಯದೆಂದರೆ ನೀರಿನ ಹರಿವಿನಲ್ಲಿ ಅವು ನಿಶ್ಚಲವಾಗಿದ್ದಂತೆಯೇ ಕಾಣುತ್ತಿತ್ತು, ಅವುಗಳ ಮೇಲೆ ಬಿಸಿಲಿಂದ ರಕ್ಷಣೆ ಪಡೆಯಲು ಹಾಕಿದ್ದ ಸರಳ ತಾಳೆಯ ಒಪ್ಪಾರುಗಳ ಕೆಳಗೆ ಮಕ್ಕಳುಮರಿಗಳೊಂದಿಗೆ ಕುಳಿತು ಸಂಸಾರಗಳೇ ಪ್ರಯಾಣಿಸುತ್ತಿದ್ದವು. ಕಾಡಿನ ಕೆಲವು ತಿರುವುಗಳಲ್ಲಿ ಉಗಿಹಡಗುಗಳ ಸಿಬ್ಬಂದಿ ತಮ್ಮ ಬಾಯ್ಲರ್‌ಗಳಿಗೆ ಉರುವಲಾಗಿ ಊಡಲು ಮಾಡಿದ್ದ ವಿನಾಶ ಕಣ್ಣಿಗೆ ರಾಚುತ್ತಿತ್ತು.

"ಇನ್ನು ಮೇಲೆ ಮೀನುಗಳು ನೆಲದ ಮೇಲೆ ನಡೆಯೋದನ್ನು ಕಲಿತುಕೋಬೇಕು, ಯಾಕಂದ್ರೆ ನೀರೇ ಕಣ್ಮರೆಯಾಗುತ್ತಲ್ಲ" ಎಂದರು ಜನರಲ್.

ಹಗಲ ಹೊತ್ತು ಬಿಸಲು ರಣಗುಡುತ್ತಿತ್ತು, ಮಂಗಗಳ ದಂಡು ಹಾಗೂ ಹಕ್ಕಿಗಲು ಮಾಡುತ್ತಿದ್ದ ಸದ್ದು ಕಿವಿಯನ್ನು ಕೊರೆಯುತ್ತಿತ್ತು, ತಲೆ

ಚಿಟ್ಟು ಹಿಡಿಸುತ್ತಿತ್ತು; ಆದರೆ ರಾತ್ರಿಯ ಹೊತ್ತು ಮಾತ್ರ ತಂಪಾಗಿಯೂ ಪ್ರಾಶಾಂತವಾಗಿಯೂ ಇರುತ್ತಿತ್ತು. ವಿಶಾಲ ತೀರಗಳ ಉದ್ದಕ್ಕೂ ಮೊಸಳೆಗಳು ನಿಶ್ಚಲವಾಗಿ, ಚಿಟ್ಟೆಗಳನ್ನು ಹಿಡಿಯಲು ಬಾಯನ್ನು ಅಗಲವಾಗಿ ತೆರೆದುಕೊಂಡು ಗಂಟೆಗಟ್ಟಲೆ ಬಿದ್ದುಕೊಂಡಿರುತ್ತಿದ್ದವು. ನಿರ್ಜನ ಮನೆಗಳ ಸನಿಹದಲ್ಲಿಯೇ ಜೋಳದ ಪೈರಿನ ಹೊಲಗಳು, ಅವುಗಳ ಪಕ್ಕ ದೋಣಿ ಹಾದು ಹೋಗುವಾಗ ಬಗುಳುತ್ತಿದ್ದ ಮೂಳೆ ಬಿಟ್ಟುಕೊಂಡ ನಾಯಿಗಳು. ಜನವಸತಿಯಿಲ್ಲದ ಅರಣ್ಯಪ್ರದೇಶದಲ್ಲಿಯೂ ತಪೀರ್‌ಗಳನ್ನು ಹಿಡಿಯಲು ಬಿಸಿಲಿನಲ್ಲಿ ಇರಿಸಿದ್ದ ಬೋನುಗಳು ಹಾಗೂ ಮೀನು ಗಾಳಗಳು ಕಣ್ಣಿಗೆ ಬೀಳುತ್ತಿದ್ದವು, ಆದರೆ ಮನುಷ್ಯರ ಕುರುಹು ಮಾತ್ರ ಕಾಣಿಸುತ್ತಿರಲಿಲ್ಲ.

ಅಷ್ಟೊಂದು ವರ್ಷಗಳನ್ನು ಯುದ್ಧಗಳಲ್ಲಿ, ಆಡಳಿತದಲ್ಲಿ ಹಾಗೂ ಪ್ರೇಮದ ಕ್ಷಣಗಳಲ್ಲಿ ಕಳೆದ ಬಳಿಕ ಈಗಿನ ಸೋಮಾರಿತನ ಹಿಂಸಿಸುತ್ತಿತ್ತು. ಅಂದು ಜೋಲಿಮಂಚದಲ್ಲಿ ಮಲಗಿ ಆಲೋಚಿಸುವುದರ ಮೂಲಕ ಜನರಲ್ ದಿನವನ್ನು ಆರಂಭಿಸಿದ್ದರು. ಅಧ್ಯಕ್ಷ ಕ್ಯಾಸೆಡೋನ ಪತ್ರಕ್ಕೆ ತಕ್ಷಣವೇ ಉತ್ತರ ನೀಡಿದ್ದರಿಂದ ಪತ್ರವ್ಯವಹಾರ ಪೂರ್ಣಗೊಂಡಿತ್ತು, ಆದರೆ ಆಮೇಲೆಯೂ ಕೆಲಸಕ್ಕೆ ಬಾರದ ಪತ್ರಗಳನ್ನು ಹೇಳಿ ಬರೆಸುತ್ತ ಕಾಲ ಕಳೆದರು. ಮೊದಲ ಕೆಲವು ದಿನಗಳಲ್ಲಿಯೇ ಲಿಮದಲ್ಲಿನ ಗಾಳಿಮಾತುಗಳಿಂದ ತುಂಬಿದ್ದ ಆಗುಹೋಗುಗಳನ್ನು ಫರ್ನಾಂಡೋ ಗಟ್ಟಿಯಾಗಿ ಓದಿ ಮುಗಿಸಿದ್ದ. ಹೀಗಾಗಿ ಬೇರಾವುದೂ ಅವರಿಗೆ ಆಸಕ್ತಿಯನ್ನುಂಟುಮಾಡಲಿಲ್ಲ.

ಅವರು ಇಡಿಯಾಗಿ ಓದಿ ಮುಗಿಸಿದ್ದ ಕೊನೆಯ ಪುಸ್ತಕ ಅದು. ಯುದ್ಧಾನಂತರದ ಬಿಡುವಿನಲ್ಲಿ, ಪ್ರೇಮಪ್ರಕರಣಗಳ ನಂತರದ ವಿಶ್ರಾಂತಿ ಸಮಯದಲ್ಲಿ ಸಾವಧಾನವಾಗಿ ಓದಿನಲ್ಲಿಯೇ ಮುಳುಗಿರುತ್ತಿದ್ದ ಅವರ ಓದಿನಲ್ಲಿ ಕ್ರಮವಾಗಲೀ ಸ್ಪಷ್ಟ ವಿಧಾನವಾಗಲೀ ಇರಲಿಲ್ಲ. ಸಿಕ್ಕಿದ ಸಮಯದಲ್ಲಿ ಓದುತ್ತಿದ್ದರು, ಬೆಳಕು ಎಷ್ಟಿದ್ದರೂ ಸರಿ. ಕೆಲವೊಮ್ಮೆ ಮರಗಳ ಬುಡದಲ್ಲಿ ಉರುಳಿಕೊಂಡು, ಕೆಲವು ಬಾರಿ ಕುದುರೆಯ ಮೇಲೆ ಸವಾರಿ ಮಾಡುತ್ತ ಅಥವಾ ಬಿರುಬಿಸಿಲಿನಲ್ಲಿ, ಮತ್ತೂ ಕೆಲವು ಸಲ ಕೊರಕಲು ಹಾದಿಯಲ್ಲಿ ಕುಲುಕಾಡುತ್ತ ಹೋಗುತ್ತಿದ್ದ ಗಾಡಿಯೊಳಗಣ ಮಂದ ಬೆಳಕಿನಲ್ಲಿ, ಇನ್ನೂ ಕೆಲವೊಮ್ಮೆ ಜೋಲಿಮಂಚದಲ್ಲಿ ಮಲಗಿಕೊಂಡು ತೂಗಿಕೊಂಡು ಪತ್ರಗಳನ್ನು ಹೇಳಿ ಬರೆಸುತ್ತ. ಸಾಮಾನ್ಯ ಓದಿಗೆಂದು, ಗ್ರೀಕ್ ತತ್ವಜ್ಞಾನಿಗಳಿಂದ ಹಿಡಿದು ಹಸ್ತಸಾಮುದ್ರಿಕದ ಮೇಲಿನ ಗ್ರಂಥದವರೆಗೆ, ಅವರು ಆಯ್ಕೆ ಮಾಡಿಕೊಳ್ಳುತ್ತಿದ್ದ ಪುಸ್ತಕಗಳ ವಿಷಯವೈವಿಧ್ಯ ಲಿಮದ ಪುಸ್ತಕವ್ಯಾಪಾರಿ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿತ್ತು. ಯುವಕರಾಗಿದ್ದಾಗ ತಮ್ಮ ಅಧ್ಯಾಪಕ ಸಿಮೋನ್ ರೋಡ್ರಿಗೆಝ್ ಅವರ ಪ್ರಭಾವಕ್ಕೊಳಗಾಗಿ ಕಲ್ಪನಾರಮ್ಯ ಕತೆಗಳನ್ನೋದುತ್ತಿದ್ದರು, ತಮ್ಮದೇ ಆದರ್ಶ

ಮತ್ತು ಮನೋಭಾವಗಳ ಚಿತ್ರಣವನ್ನೇ ಓದುತ್ತಿದ್ದೇನೆಂಬಷ್ಟರ ಮಟ್ಟಿಗೆ ಅದರಲ್ಲಿ ತನ್ಮಯನಾಗುತ್ತಿದ್ದರು. ಓದು ಎಷ್ಟು ಭಾವಪೂರ್ಣವಾಗಿರುತ್ತಿತ್ತೆಂದರೆ ಜೀವಮಾನಪೂರ್ತಿ ಅವುಗಳ ನೆನಪು ಅವರ ಮನಸ್ಸಿನಲ್ಲಿ ಗುಂಯ್‌ಗುಡುವಂತಾಯಿತು. ಕೊನೆಯಲ್ಲಿ ಕಣ್ಣಿಗೆ ಬಿದ್ದದ್ದನ್ನೆಲ್ಲ ಓದುವಂತಾಯಿತು, ಅವರಿಗೆ ಅತ್ಯಂತ ಇಷ್ಟವಾದ ಲೇಖಕ ಎಂಬುವವನು ಯಾರೂ ಇರದಿದ್ದರೂ, ಬೇರೆ ಬೇರೆ ಕಾಲಗಳಲ್ಲಿ ಭಿನ್ನ ಲೇಖಕರು ಇಷ್ಟವಾಗಿದ್ದರು. ಅವರು ವಾಸಿಸಿದ ವಿವಿಧ ಮನೆಗಳಲ್ಲಿ ಗ್ರಂಥಗಳ ರಾಶಿಯೇ ತುಂಬಿರುತ್ತಿತ್ತು. ಮಲಗುವ ಮನೆ ಮತ್ತು ನಡುದಾರಿಗಳಲ್ಲಿಯೂ ಪುಸ್ತಕಗಳ ಕಪಾಟುಗಳನ್ನು ಜೋಡಿಸಿ ಓಡಾಡಲು ಮಧ್ಯೆ ಕಿರುಜಾಗವನ್ನಷ್ಟೇ ಬಿಡುವಂತಾಗುತ್ತಿತ್ತು. ಅವು ಪುಸ್ತಕ ಮತ್ತು ದಾಖಲೆಗಳ ಪರ್ವತಗಳ ನಡುವಣ ಕಂದರಗಳಂತೆ ಕಾಣುತ್ತಿದ್ದವು. ಕಾಲ ಸರಿದಂತೆ ಅವು ಹೆಚ್ಚಾಗುತ್ತ ಹಳೆಯದರ ಜೊತೆ ಹೊಸದೂ ಸೇರಿಕೊಳ್ಳುತ್ತಿದ್ದವು. ಬಳಿಯದ್ದ ಪುಸ್ತಕಗಳನ್ನೆಲ್ಲ ಓದಲು ಅವರಿಗೆ ಸಾಧ್ಯವಾಗಿರಲಿಲ್ಲ. ಒಂದೂರಿನಿಂದ ಮತ್ತೊಂದಕ್ಕೆ ಹೋಗಬೇಕಾಗಿ ಬಂದಾಗ ಪುಸ್ತಕಗಳನ್ನು ಆಪ್ತ ಸ್ನೇಹಿತರ ಜೋಪಾನಕ್ಕೆ ಒಪ್ಪಿಸುತ್ತಿದ್ದರು; ಆದರೆ ಅವುಗಳ ವಿಷಯ ಅವರಿಗೆ ಮತ್ತೆ ತಿಳಿಯುತ್ತಿರಲೇ ಇಲ್ಲ. ಹೋರಾಟದ ಬದುಕಿನ ಕಾರಣದಿಂದಾಗಿ ಪುಸ್ತಕ ಹಾಗೂ ದಾಖಲೆಗಳ ರಾಶಿಯನ್ನು ಹಿಂದೆಯೇ ಬಿಟ್ಟು ಹೋಗುತ್ತಿದ್ದರು; ಇಂಥ ಊರುಗಳು ಬೊಲಿವಿಯದಿಂದ ವೆನಿಝೂಲದವರೆಗಿನ ನಾಲ್ಕು ನೂರು ಲೀಗ್ ಉದ್ದಕ್ಕೂ ಚಾಚಿಕೊಂಡಿದ್ದವು.

ದೃಷ್ಟಿ ಮಸುಕಾಗುವುದಕ್ಕೂ ಮುಂಚಿನಿಂದಲೇ ಜನರಲ್ ಓದುವಂತೆ ಕಾರ್ಯದರ್ಶಿಗಳಿಗೆ ಆದೇಶಿಸಲು ತೊಡಗಿದ್ದರು; ತಾವೇ ಓದಲು ಹೋದರೆ ಕನ್ನಡಕದ ಕಿರಿಕಿರಿಯನ್ನು ತಡೆಯಲಾಗುತ್ತಿರಲಿಲ್ಲ. ಜೊತೆಗೇ ಓದುತ್ತಿದ್ದ ವಿಷಯಗಳ ಬಗೆಗಿನ ಆಸಕ್ತಿಯೂ ಕುಗ್ಗುತ್ತಿತ್ತು. ಇದಕ್ಕೆಲ್ಲ ತಮ್ಮ ನಿಯಂತ್ರಣ ಮೀರಿದ ಯಾವುದೋ ಕಾರಣವೆಂದು ಅವರು ಹೇಳುತ್ತಿದ್ದರು.

"ನಿಜ ಏನು ಅಂದರೆ ಒಳ್ಳೆಯ ಪುಸ್ತಕಗಳು ಕಡಿಮೆಯಾಗ್ತಿರೋದು" ಎನ್ನುತ್ತಿದ್ದರು.

ಪ್ರಯಾಣದ ಏಕತಾನತೆಯ ಬೇಸರವನ್ನು ತೋರಿಸಿಕೊಳ್ಳದಿದ್ದವನು ಜೋಸೆ ಪೆಲಾಸಿಯೋಸ್ ಮಾತ್ರ; ಶಕೆಯಾಗಲೀ ಅನನುಕೂಲಗಳಾಗಲೀ ಅವನ ಸನ್ನಡತೆ, ಉಡುಪು ಹಾಗೂ ಸೇವೆಯ ಅಚ್ಚುಕಟ್ಟುತನವನ್ನು ಸ್ವಲ್ಪವೂ ಕುಂದಿಸಲಿಲ್ಲ. ಅವನು ಜನರಲ್‌ಗಿಂತ ಆರು ವರ್ಷಗಳಷ್ಟು ಚಿಕ್ಕವನು, ಅವನ ಮನೆಯಲ್ಲೇ ಒಬ್ಬ ಆಫ್ರಿಕನ್ ಹೆಂಗಸಿನೊಡನೆ ಸ್ಪಾನಿಯಾರ್ಡ್ ಒಬ್ಬ ನಡೆಸಿದ ದುಸ್ಸಾಹಸದ ಫಲವಾಗಿ ಗುಲಾಮನಾಗಿ ಹುಟ್ಟಿದ್ದವನು; ತಂದೆಯಿಂದ ಅವನಿಗೆ ಕ್ಯಾರೆಟ್ ಬಣ್ಣದ ಕೂದಲು, ಮುಖಕೈಗಳ ಮೇಲಿನ ಮಚ್ಚೆಗಳು

ಹಾಗೂ ನಸುನೀಲಿ ಕಣ್ಣುಗಳು ಬಳುವಳಿಯಾಗಿ ಬಂದಿದ್ದವು. ಸಹಜ ಸಮಚಿತ್ತತೆಗೆ ವಿರುದ್ಧವಾಗಿ ಅವನು ಧರಿಸುತ್ತಿದ್ದುದು ಇಡೀ ಪರಿವಾರದಲ್ಲಿಯೇ ಪರಿಪೂರ್ಣವಾದ ಹಾಗೂ ದುಬಾರಿಯ ಉಡುಪುಗಳನ್ನು. ಜೀವಮಾನವಿಡೀ ಅವನು ಜನರಲ್ ಅವರ ಜೊತೆಯೇ ಕಳೆದಿದ್ದ – ಎರಡು ಬಾರಿ ದೇಶಭ್ರಷ್ಟನಾಗಿದ್ದಾಗ, ದಂಡಯಾತ್ರೆಯಲ್ಲಿ ಮೊದಲಿಂದ ಕೊನೆಯವರೆಗೆ, ಅವರ ಮುಂಚೂಣಿಯ ಕದನಗಳಲ್ಲಿ. ಸೈನಿಕ ಸಮವಸ್ತ್ರವನ್ನು ತೊಡಲು ತನ್ನ ಹಕ್ಕನ್ನು ಪ್ರತಿಪಾದಿಸದೆ ಅವನು ಸದಾ ಅಯೋಧನಾಗಿಯೇ ಇದ್ದ.

ಪ್ರಯಾಣದ ಪ್ರಯಾಸದ ಕಾಲವೆಂದರೆ ಅನಿವಾರ್ಯವಾಗಿ ಒಂದೆಡೆ ನಿಲ್ಲಬೇಕಾದದ್ದು. ಒಂದು ಮಧ್ಯಾಹ್ನ ತನ್ನ ಇಕ್ಕಟ್ಟಾದ ಕ್ಯಾನ್‌ವಾಸ್ ಬಿಡಾರದಲ್ಲಿಯೇ ಶತಪಥ ತುಳಿಯುತ್ತ ಬೇಸರಗೊಂಡ ಜನರಲ್ ಒಂದಷ್ಟು ದೂರ ನಡೆದಾಡುವ ಉದ್ದೇಶದಿಂದ ದೋಣಿಯನ್ನು ನಿಲ್ಲಲು ಹೇಳಿದರು. ಗಟ್ಟಿಯಾದ ಕೆಸರು ಮಣ್ಣಿನಲ್ಲಿ ಉಷ್ಟ್ರಪಕ್ಷಿಯಂತಹ ಯಾವುದೋ ಪಕ್ಷಿಯ ಎತ್ತಿನ ಗೊರಸಿನಷ್ಟು ದೊಡ್ಡದಾದ ಹೆಜ್ಜೆಗುರುತುಗಳು ಕಾಣಿಸಿದವು. ಹುಟ್ಟು ಹಾಕುತ್ತಿದ್ದವರಿಗೆ ಇದೇನೂ ಆಶ್ಚರ್ಯದ ವಿಷಯವಾಗಿರಲಿಲ್ಲ: ಹುಂಜಗಳಂತೆ ಗೊಂಡೆ ಪಂಜಗಳನ್ನು ಪಡೆದ ಸೀಬ ಮರಗಳಷ್ಟು ಎತ್ತರದ ಮನುಷ್ಯರು ಅಲ್ಲಿನ ನಿರ್ಜನ ಪ್ರದೇಶಗಳಲ್ಲಿ ಓಡಾಡುತ್ತಾರೆ ಎಂದರು. ಜನರಲ್ ಆ ಕಾಗಕ್ಕಗುಬ್ಬಕ್ಕನ ಕತೆಯನ್ನು ನಂಬಲಿಲ್ಲ; ಅತಿಮಾನುಷತೆಯ ಲವಲೇಶವನ್ನೂ ಅವರು ನಂಬುತ್ತಿರಲಿಲ್ಲ. ಆದರೆ ಅವರ ನಡೆದಾಟ ನಿರೀಕ್ಷೆಗಿಂತ ಹೆಚ್ಚು ಸಮಯ ತೆಗೆದುಕೊಂಡಿತು; ಇದರಿಂದಾಗಿ ಕ್ಯಾಪ್ಟನ್‌ನ ಮತ್ತು ಸೈನಿಕ ಸಲಹೆಗಾರರ ಇಷ್ಟದ ವಿರುದ್ಧವಾಗಿ ಆ ರಾತ್ರಿ ಅಲ್ಲಿಯೇ ಬಿಡಾರ ಹೂಡಬೇಕಾಯಿತು. ಅವರ ದೃಷ್ಟಿಯಲ್ಲಿ ಆ ಜಾಗ ತುಂಬ ಅಪಾಯಕಾರಿ ಮತ್ತು ಅನಾರೋಗ್ಯಕರ. ಶಕೆ ಮತ್ತು ಸೊಳ್ಳೆಗಳ ದಂಡು ಪರದೆಯೊಳಗಡೆಯೇ ಸೇರಿ ಕಿತ್ತು ತಿನ್ನುತ್ತಿದ್ದುದರಿಂದ ಜನರಲ್ ಆ ರಾತ್ರಿಯನ್ನು ನಿದ್ದೆಯಿಲ್ಲದೆ ಕಳೆಯಬೇಕಾಯಿತು. ಜೊತೆಗೆ ಪೂಮಗಳ ಭಯಗ್ರಸ್ತ ಕಿರಿಚಾಟದಿಂದಾಗಿ ರಾತ್ರಿಯಿಡೀ ಎಚ್ಚರವೇ ಇರಬೇಕಾಯಿತು. ನಸುಕಿನ ಎರಡು ಗಂಟೆಯ ಹೊತ್ತಿಗೆ ಬೆಂಕಿಯುರಿಯ ಸುತ್ತ ಕಾವಲು ನಿಂತಿದ್ದವರೊಡನೆ ಹರಟಲೆಂದು ಹೊರ ನಡೆದರು. ಆಮೇಲೆ ಮಲಗಿದವರಿಗೆ ಬೆಳಗಿನ ಜಾವ ಸೂರ್ಯೋದಯದಿಂದ ಹೊಳೆಯುತ್ತಿದ್ದ ಆ ವಿಶಾಲ ಜವುಗು ಪ್ರದೇಶವನ್ನು ನೋಡಿದಾಗಷ್ಟೇ ಕನಸು ಮುಗಿದದ್ದು.

“ಇನ್ನೇನು ಮಾಡೋದು, ಹುಂಜದ ಉಗುರುಗಳು ಇರೋ ನಮ್ಮ ಗೆಳೆಯರನ್ನು ನೋಡದೆಯೇ ಹೊರಡಬೇಕಾಗುತ್ತೆ” ಎಂದರು.

ಲಂಗರನ್ನು ಎಳೆದಾಗ, ಅಡಪು ರೋಗದಿಂದ ಬಳಲುತ್ತ ಸಣಕಲಾಗಿದ್ದ ಹಾಗೂ ಮುರುಟಾದ ಪಂಜವಿದ್ದ ನಾಯಿಯೊಂದು ದೋಣಿಯ ಮೇಲಕ್ಕೆ ಪುಟಕ್ಕನೆ ನೆಗೆಯಿತು. ಜನರಲ್‌ರ ಎರಡೂ ನಾಯಿಗಳು ಅದರ ಮೇಲೆ ದಾಳಿ ಮಾಡಿದವು, ಆದರೆ ಬಡಕಲು ನಾಯಿ ವೀರಾವೇಶದಿಂದ ಹೋರಾಡಿತು, ಗಂಟಲು ಕತ್ತರಿಸಿ ಮೈಮೇಲೆಲ್ಲ ರಕ್ತ ಸುರಿಯುತ್ತಿದ್ದರೂ ಶರಣಾಗಲು ಒಪ್ಪಲಿಲ್ಲ. ಅದನ್ನು ಇರಿಸಿಕೊಳ್ಳುವಂತೆ ಜನರಲ್ ಆಜ್ಞೆ ಮಾಡಿದರು. ಜೋಸೆ ಪೆಲಾಸಿಯೋಸ್ ಅದರ ಜವಾಬ್ದಾರಿ ವಹಿಸಿಕೊಂಡ; ಹಿಂದೆಯೂ ಅವನು ಅನೇಕ ಬೀದಿನಾಯಿಗಳ ರಕ್ಷಣೆ ಮಾಡಿದ್ದವರೇ.

ಅವರ ದೋಣಿಯ ಅಂಬಿಗನೊಬ್ಬನನ್ನು ಹೊಡೆದದ್ದರಿಂದ ನಿರ್ಜನ ದ್ವೀಪವೊಂದರಲ್ಲಿ ಪರಿತ್ಯಕ್ತನಾಗಿದ್ದ ಜರ್ಮನ್ ವ್ಯಕ್ತಿಯೊಬ್ಬನನ್ನೂ ಅವರು ಅವತ್ತೇ ರಕ್ಷಿಸಿದರು. ತಾನೊಬ್ಬ ಜ್ಯೋತಿಷಿ ಹಾಗೂ ಸಸ್ಯಶಾಸ್ತ್ರಜ್ಞನೆಂದು ಹೇಳಿಕೊಂಡು ಅವನು ದೋಣಿಯನ್ನು ಹತ್ತಿ ಬಂದಿದ್ದ, ಆದರೆ ಮಾತನಾಡುವಾಗ ಅವನಿಗೆ ಆ ಎರಡೂ ವಿಷಯಗಳ ಪರಿಜ್ಞಾನ ಕಿಂಚಿತ್ತೂ ಇರಲಿಲ್ಲವೆಂಬುದು ಗೊತ್ತಾಗಿತ್ತು. ಅಲ್ಲದೆ, ಹುಂಜದ ಉಗುರುಗಳು ಇರೋ ಜನಗಳನ್ನು ತಾನು ಕಣ್ಣಾರೆ ನೋಡಿರುವುದಾಗಿ ಹೇಳಿಕೊಂಡು, ಅಂಥ ಒಬ್ಬನನ್ನು ಜೀವಂತ ಹಿಡಿದು ಪಂಜರದಲ್ಲಿ ಕೂಡಿಹಾಕಿ, ಒಂದು ಶತಮಾನದ ಹಿಂದೆ ಆಂಡಲೂಸಿಯದ ರೇವುಪಟ್ಟಣಗಳ ಜನರಲ್ಲಿ ಸಂಚಲನವನ್ನುಂಟುಮಾಡಿದ್ದ ಅಮೆರಿಕಗಳ ಜೇಡ ಮಹಿಳೆಗೆ ಮಾತ್ರ ಹೋಲಿಸಬಹುದಾಗಿದ್ದ ಈ ವ್ಯಕ್ತಿಯನ್ನು ಇಡೀ ಯೂರೋಪ್‌ನಾದ್ಯಂತ ಪ್ರದರ್ಶನ ಮಾಡಲು ನಿರ್ಧರಿಸಿದ್ದುದಾಗಿಯೂ ಕೊಚ್ಚಿಕೊಂಡಿದ್ದ.

“ಅವನ ಬದಲು ನನ್ನ ಕರೆದುಕೊಂಡು ಹೋಗು, ಪಂಜರದಲ್ಲಿಟ್ಟು ಜಗತ್ತಿನ ಅತಿ ದೊಡ್ಡ ಮೂರ್ಖ ಇವನು ಅಂತ ಸಾರಿ ನೀನು ಅಂದುಕೊಂಡದ್ದಕ್ಕಿಂತ ಇನ್ನೂ ಹೆಚ್ಚು ಹಣ ಗಳಿಸಬಹುದು” ಎಂದಿದ್ದರು ಅವನಿಗೆ ಜನರಲ್.

ಅವನು ಬೂಟಾಟಿಕೆಯವನಾದರೂ ಕೇಡಿಗನಲ್ಲ ಎಂದು ಮೊದಲಿಗೆ ಭಾವಿಸಿದ್ದರು, ಆದರೆ ಬ್ಯಾರನ್ ಅಲೆಕ್ಸಾಂಡರ್ ವಾನ್ ಹಂಬೋಲ್ಟ್‌ನ ಗುದಮೈಥುನ ಹವ್ಯಾಸದ ಬಗ್ಗೆ ಆ ಜರ್ಮನ್ ಪೋಲಿ ಪೋಲಿಯಾಗಿ ವರ್ಣಿಸಲು ತೊಡಗಿದ ಮೇಲೆ, “ಅವನನ್ನ ಮತ್ತೆ ನಿರ್ಜನ ಪ್ರದೇಶದಲ್ಲಿ ಬಿಡಬೇಕು” ಎಂದು ಜೋಸೆ ಪೆಲಾಸಿಯೋಸ್‌ಗೆ ಹೇಳಿದ್ದರು. ಮಧ್ಯಾಹ್ನ ವಿರುದ್ಧ ದಿಕ್ಕಿಗೆ ಹೋಗುತ್ತಿದ್ದ ಅಂಚೆ ಹೊತ್ತ ಉಗಿದೋಣಿ ಎದುರಾಯಿತು. ಅಂಚೆ ಪ್ರತಿನಿಧಿ ಅಧಿಕೃತ ಪತ್ರಗಳಿದ್ದ ಚೀಲವನ್ನು ಬಿಚ್ಚಿ ತಮ್ಮ ಪತ್ರಗಳನ್ನೆಲ್ಲ ಅಲ್ಲೇ ಕೊಡುವಂತೆ ಮಾಡಲು ಜನರಲ್ ತಮ್ಮ ಜಾಣ್ಮೆಯನ್ನೆಲ್ಲ

ಬಳಸಬೇಕಾಯಿತು. ಆಮೇಲೆ ಆ ಜರ್ಮನ್ ವ್ಯಕ್ತಿಯನ್ನು ನೇರ್ ರೇವಿಗೆ ಕರೆದೊಯ್ಯಲು ಸೂಚಿಸಿದರು; ಉಗಿದೋಣಿಯಲ್ಲಿ ಅವಕಾಶವಿರದಿದ್ದರೂ ಪ್ರತಿನಿಧಿ ಅದಕ್ಕೆ ಒಪ್ಪಿದ. ಆ ರಾತ್ರಿ, ಪತ್ರಗಳನ್ನು ಫರ್ನಾಂಡೋ ಓದಿ ಹೇಳುತ್ತಿರುವಾಗ, ಜನರಲ್ "ಆ ತಾಯಿಗ್ಗಂಡ ಹಂಬೋಲ್ಟ್‌ನ ಒಂದು ರೋಮಕ್ಕೂ ಸಮನಲ್ಲ" ಎಂದು ಕೂಗಾಡಿದರು.

ಜರ್ಮನ್‌ನನ್ನು ಉಳಿಸುವುದಕ್ಕಿಂತಲೂ ಮುಂಚಿನಿಂದಲೇ ಜನರಲ್ ಬ್ಯಾರನ್ ಬಗ್ಗೆ, ಅವನು ಹೇಗೆ ಭಯಂಕರ ಕಾಡಿನಲ್ಲಿ ಬದುಕುಳಿದ ಎಂದು ಯೋಚಿಸುತ್ತಿದ್ದರು. ತಾವು ಪ್ಯಾರಿಸ್‌ನಲ್ಲಿದ್ದಾಗ ಅವನ ಭೇಟಿಯಾಗಿತ್ತು, ಅವನು ಅದೇ ತಾನೇ ವಿಷುವದ್ವೃತ್ತದ ಬಳಿಯ ದೇಶಗಳನ್ನು ಸಂದರ್ಶಿಸಿ ವಾಪಸಾಗಿದ್ದ. ತಾವು ಈವರೆಗೆ ಯಾವ ಹೆಂಗಸಿನಲ್ಲೂ ಕಾಣದ ಚೆಲುವಿನ ಜೊತೆಗೆ ಅಪಾರ ಬುದ್ಧಿವಂತಿಕೆ ಮತ್ತು ಪ್ರೌಢಿಮೆಗಳನ್ನು ಅವನಲ್ಲಿ ನೋಡಿದ ಜನರಲ್‌ರಿಗೆ ಆಶ್ಚರ್ಯವಾಗಿತ್ತು. ಅದರ ಜೊತೆಯಲ್ಲಿ, ಅಮೆರಿಕದಲ್ಲಿನ ಸ್ಪಾನಿಶ್ ವಸಾಹತುಗಳು ಸ್ವಾತಂತ್ರ್ಯವನ್ನು ಪಡೆಯಲು ಪಕ್ವವಾಗಿವೆ ಎಂಬ ಅವನ ನಂಬಿಕೆಯ ಬಗ್ಗೆ ಅವರಿಗೆ ಸಂಶಯವಿತ್ತು. ಕೆಲಸವಿಲ್ಲದೆ ಕೂತವನ ಮನಸ್ಸಿನಲ್ಲಿ ಸುಳಿಯಬಹುದಾದಂತೆ ಕೂಡ ಜನರಲ್‌ರಿಗೆ ಆ ಬಗ್ಗೆ ಕಿಂಚಿತ್ತಾದರೂ ಆಲೋಚನೆ ಬಂದಿರಲಿಲ್ಲ, ಆದರೆ ಹಂಬೋಲ್ಟ್ ಮಾತ್ರ ಸ್ವಲ್ಪವೂ ಸಂಶಯವಿಲ್ಲದೆ ದೀರ್ಘವಾಗಿ ವಿವರಿಸಿದ್ದ: "ಇಲ್ಲದಿರುವುದು ಮುಂದಾಳು, ಅಷ್ಟೆ."

ಈ ವಿಷಯವನ್ನವರು ಜೋಸೆ ಪೆಲಾಸಿಯೋಸ್‌ಗೆ ಹೇಳಿದ್ದು ಅನೇಕ ವರ್ಷಗಳ ಬಳಿಕ, ಕೂಝ್ಕೋದಲ್ಲಿ, ತಾವೇ ಆ ಮುಂದಾಳು ಎಂದು ಸಾಬೀತುಪಡಿಸಿ ಅತ್ಯಂತ ಯಶಸ್ವಿ ವ್ಯಕ್ತಿಯಾಗಿ ರೂಪುಗೊಂಡಿದ್ದ ಕ್ಷಣದಲ್ಲಿ. ಆದರೆ ಇದನ್ನು ಬೇರೆ ಯಾರಿಗೂ ಹೇಳಿರಲಿಲ್ಲ, ಆದರೆ ಬ್ಯಾರನ್‌ನ ವಿಷಯ ಪ್ರಸ್ತಾಪಗೊಂಡ ಪ್ರತಿ ಸಂದರ್ಭದಲ್ಲೂ ಅವನ ದೂರದೃಷ್ಟಿಯ ಬಗ್ಗೆ ಮನಸ್ಸಿನಲ್ಲಿಯೇ, "ಹಂಬೋಲ್ಟ್ ನನ್ನ ಕಣ್ಣು ತೆರೆಸಿದ" ಎಂದು ಗೌರವವನ್ನು ಸಲ್ಲಿಸುತ್ತಿದ್ದರು.

ಅವರು ಮ್ಯಾಗ್ಡಲೀನ ಗುಂಟ ಪ್ರಯಾಣಿಸುತ್ತಿದ್ದುದು ನಾಲ್ಕನೆಯ ಬಾರಿ, ಆದರೂ ಹಾಕಿದ ಹೆಜ್ಜೆಗಳನ್ನೇ ಬದುಕಿನಲ್ಲಿ ಮತ್ತೆ ಇಡುತ್ತಿರುವ ಭಾವನೆಯಿಂದ ತಪ್ಪಿಸಿಕೊಳ್ಳುವುದು ಮಾತ್ರ ಅವರಿಗೆ ಸಾಧ್ಯವಾಗಿರಲಿಲ್ಲ. ಅದರ ನೀರಲ್ಲಿ ಮೊದಲ ಸಲ ಸಾಗಿದ್ದುದು ೧೮೧೩ ರಲ್ಲಿ, ಅವರಾಗ ಮಿಲಿಟರಿಯಲ್ಲಿ ಕರ್ನಲ್, ತಮ್ಮ ದೇಶದಲ್ಲಿಯೇ ಸೋಲು ಕಂಡು, ಕ್ಯೂರಾಕವೋದಲ್ಲಿ ದೇಶಭ್ರಷ್ಟರಾಗಿದ್ದವರು ಯುದ್ಧವನ್ನು ಮುಂದುವರಿಸಲು ಸಂಪನ್ಮೂಲಗಳನ್ನರಸುತ್ತ ಅಲ್ಲಿಂದ ಕಾರ್ಟಜೆನ ದ ಇಂಡಿಯಸ್‌ಗೆ ಬಂದಿದ್ದರು. ನ್ಯೂ ಗ್ರನಡಾವನ್ನು ಅನೇಕ ಸ್ವಾಯತ್ತ ಭಾಗಗಳಾಗಿ

ತುಂಡರಿಸಲಾಗಿತ್ತು, ಸ್ಪಾನಿಯರ್ಡ್‌ಗಳ ಕ್ರೂರ ದಬ್ಬಾಳಿಕೆಯಿಂದಾಗಿ ಸ್ವಾತಂತ್ರ್ಯದ ಅಪೇಕ್ಷೆಯು ಜನಸಾಮಾನ್ಯರಲ್ಲಿ ಕುಂದುತ್ತಿತ್ತು, ಅಂತಿಮ ಗೆಲುವಿನ ಬಗ್ಗೆ ಹೆಚ್ಚು ಅನಿಶ್ಚಿತತೆಯುಂಟಾಗುತ್ತಿತ್ತು. ತಮ್ಮ ಮೂರನೆಯ ಪ್ರಯಾಣದಲ್ಲಿ, ದೋಣಿಯಲ್ಲಿ ಕುಳಿತು ಸಾಗುವಾಗ ಅವರೇ ಹೇಳುತ್ತಿದ್ದಂತೆ, ಬಿಡುಗಡೆಯ ಕಾರ್ಯವು ಕೊನೆಗಂಡರೂ ಅವರ ಗೀಳಾಗಿದ್ದ ವಿವಿಧ ಪ್ರದೇಶಗಳ ಒಗ್ಗೂಡುವಿಕೆಯ ಕನಸು ಮಾತ್ರ ಕ್ಷೀಣಿಸುತ್ತಿತ್ತು. ಕೊನೆಯದಾದ ಈ ಪ್ರಯಾಣದ ಹೊತ್ತಿಗೆ ಆ ಕನಸು ಹೆಚ್ಚು ಕಡಿಮೆ ನುಚ್ಚುನೂರಾಗಿತ್ತು, ಆದರೆ ಬೇಸರವಿಲ್ಲದೆ ಪದೇ ಪದೇ ಹೇಳುತ್ತಿದ್ದರು. “ಅಮೆರಿಕದ ಆಡಳತವನ್ನೆಲ್ಲ ಒಗ್ಗೂಡಿಸುವರೆಗೂ ನಮ್ಮ ಶತ್ರುಗಳದೇ ಮೇಲುಗೈಯಾಗಿರುತ್ತದೆ” ಎಂಬ ಅವರ ಒಂದು ವಾಕ್ಯದಲ್ಲಿ ಕನಸು ಉಸಿರಾಡುತ್ತಿತ್ತು.

ಜೋಸೆ ಪೆಲಾಸಿಯೋಸ್ ಜೊತೆ ಪಡೆದಿದ್ದ ಅಸಂಖ್ಯ ಅನುಭವಗಳಲ್ಲಿ ಅತ್ಯಂತ ಮನಕಲಕುವಂಥದ್ದೆಂದರೆ ಮೊದಲ ಪಯಣದ್ದು, ಅವರು ಆಗ ನದಿಯ ಬಿಡುಗಡೆಗೇ ಯುದ್ಧ ಹೂಡಬೇಕಾಗಿ ಬಂದಿತ್ತು. ಅವರು ಇನ್ನೂರು ಸೈನಿಕರ ನೇತೃತ್ವ ವಹಿಸಿದ್ದರು, ಸಿಕ್ಕಿದ ಆಯುಧಗಳನ್ನು ಕೈಲಿ ಹಿಡಿದುಕೊಂಡಿದ್ದರು, ಸುಮಾರು ಇಪ್ಪತ್ತು ದಿವಸಗಳಲ್ಲಿ ಮ್ಯಾಗ್ಡಲೀನ ನದಿ ಕೊಳ್ಳದಲ್ಲಿ ರಾಜಪ್ರಭುತ್ವವಾದಿಯಾದ ಒಬ್ಬ ಸ್ಪಾನಿಯಾರ್ಡ್ ಕೂಡ ಉಳಿಯಲಿಲ್ಲ. ಪಯಣದ ನಾಲ್ಕನೆಯ ದಿನದ ಹೊತ್ತಿಗೇ ಪ್ರತಿ ಹಳ್ಳಿಯಲ್ಲೂ ಹೆಂಗಸರು ದೋಣಿಗಳು ಹಾದು ಹೋಗುವುದನ್ನೇ ಸಾಲುಗಟ್ಟಿ ಕಾಯುತ್ತ ನಿಂತಿರುತ್ತಿದ್ದರು. ಇದನ್ನು ಕಂಡ ಜೋಸೆ ಪೆಲಾಸಿಯೋಸ್‌ಗೆ ಪರಿಸ್ಥಿತಿ ಎಷ್ಟು ಬದಲಾಗಿದೆಯೆಂಬುದು ಅರಿವಿಗೆ ಬಂತು. “ಅವರೆಲ್ಲ ವಿಧವೆಯರು” ಅವನೆಂದಿದ್ದ. ಜನರಲ್ ಹೊರಗೆ ಇಣುಕಿ ಅವರತ್ತ ನೋಡಿದ್ದರು, ಅವರೆಲ್ಲ ಕಪ್ಪು ಬಟ್ಟೆ ಧರಿಸಿ, ನದೀತೀರದಲ್ಲಿ ದುಃಖಿತ ಕಾಗೆಗಳಂತೆ ಸಾಲಾಗಿ ನಿಂತು ಸಹಾನುಭೂತಿಯ ದೃಷ್ಟಿಯಾದರೂ ಸರಿ ಎಂಬಂತೆ ಯಾವುದಕ್ಕಾಗಿಯೋ ಸುಡುಬಿಸಿಲಲ್ಲಿ ಕಾಯುತ್ತ ನಿಂತಿದ್ದರು. ಜನರಲ್‌ರಿಗೆ ಎಂದೂ ಮಗುವಿರದಿದ್ದರೂ ದೇಶದ ಎಲ್ಲ ವಿಧವೆಯರಿಗೂ ತಂದೆ ತಾಯಿ ಎಲ್ಲ ಅವರೇ ಆಗಿದ್ದರು ಎಂದು ಆಂಡ್ರೇಯ ತಮ್ಮ ಜನರಲ್ ಡಿಯೆಗೋ ಇಬಾರಾ ಹೇಳುತ್ತಿದ್ದ. ಅವರು ಎಲ್ಲಡೆ ಅವರನ್ನು ಹಿಂಬಾಲಿಸಿದರು, ಅವರೆಲ್ಲರನ್ನೂ ಮನದಾಳದ ಮಾತುಗಳಿಂದ ಅವರು ಸಮಾಧಾನಪಡಿಸುತ್ತಿದ್ದರು. ಆದರೂ ಹಳ್ಳಿಗಳಲ್ಲಿ ನದಿ ದಡದಲ್ಲಿ ನಿಂತಿರುತ್ತಿದ್ದ ವಿಷಣ್ಣರಾದ ಹೆಂಗಸರ ಸಾಲುಗಳನ್ನು ಕಂಡಾಗ ಅವರಿಗೆ ಅವರಿಗಿಂತ ತಮ್ಮ ಬಗ್ಗೆಯೇ ಹೆಚ್ಚು ಯೋಚನೆಯುಂಟಾಗುತ್ತಿತ್ತು.

"ಈಗ ನಾವೇ ವಿಧವೆಯರು, ಅನಾಥರು, ಗಾಯಾಳುಗಳು, ಸ್ವಾತಂತ್ರ್ಯದ ಅಸ್ಪೃಶ್ಯರು" ಎನ್ನುತ್ತಿದ್ದರು.

ಪ್ಯೂರ್ಟೋ ರಿಯಲ್ ಹೊತರು ಅವರು ಬೇರೆ ಎಲ್ಲಿಯೂ ನಿಲ್ಲದೆ ಮಾಂಪಾಕ್ಸ್‌ಗೆ ಬಂದರು, ಅಲ್ಲಿ ಒಕಾನಾ ಮ್ಯಾಗ್ಡಲೀನ ನದಿ ಬರಿದುಗೊಳ್ಳುತ್ತಿತ್ತು. ಅಲ್ಲಿ ಜನರಲ್ ಜೋಸೆ ಲಾರೆನ್ಸಿಯೋ ಸಿಲ್ವಾನನ್ನು ಭೇಟಿಯಾಗಿದ್ದರು, ಬಂಡಾಯಗಾರ ಗ್ರೆನೆಡಿಯರ್‌ಗಳ ಜೊತೆಗೆ ವೆನಿಝೂಲ ಸೈನಿಕರನ್ನು ಅವರ ದೇಶದ ಗಡಿಯವರೆಗೂ ತರುಮಿಕೊಂಡು ಹೋಗಿ ಅಟ್ಟುವ ಕಾರ್ಯವನ್ನು ಮುಗಿಸಿ ಅವನು ತನ್ನ ಪಡೆಯನ್ನು ಬಂದು ಸೇರಿದ್ದ.

ಜನರಲ್ ಕತ್ತಲಾಗುವವರೆಗೂ ದೋಣಿಯಲ್ಲಿಯೇ ಉಳಿದಿದ್ದರು, ಆಮೇಲೆ ತೀರದಲ್ಲಿ ನಿರ್ಮಿಸಿದ್ದ ಬಿಡಾರದಲ್ಲಿ ಮಲಗಲು ಹೋದರು. ದೋಣಿಯ ಮೇಲಿದ್ದಾಗ ತಮ್ಮನ್ನು ಭೇಟಿಯಾಗಲು ಬಯಸಿದ್ದ ಯುದ್ಧವಿಧವೆಯರನ್ನು ಬರಮಾಡಿಕೊಂಡ; ಯುದ್ಧಗಳ ಕಾರಣದಿಂದ ಅನಾಥರೂ ಅಸಹಾಯಕರೂ ಆಗಿದ್ದವರು ಅವರು. ಆಶ್ಚರ್ಯಕರವೆನ್ನಿಸುವಂತೆ ಖಚಿತ ವಿವರಗಳ ಸಮೇತ ಅವರೆಲ್ಲರ ಬಗೆಗಿನ ಮಾಹಿತಿಯನ್ನು ಅವರು ನೆನಪಿನಲ್ಲಿಟ್ಟುಕೊಂಡಿದ್ದರು. ಬದುಕುಳಿದಿದ್ದ ಅನೇಕ ಯೋಧರು ಬಡತನದ ದವಡೆಯಲ್ಲಿ ಸಿಕ್ಕಿದ್ದರು, ಉಳಿದವರು ಕೆಲವು ಹೊಸ ಯುದ್ಧಗಳಲ್ಲಿ ಪಾಲುಗೊಳ್ಳುವ ಮೂಲಕ ಬದುಕಿನ ದಾರಿಯನ್ನು ಹುಡುಕಿಕೊಂಡು ಹೋಗಿದ್ದರು, ಕೆಲವರು ದರೋಡೆಕೋರರೂ ಆಗಿ ಮಾರ್ಪಟ್ಟಿದ್ದರು. ವಿಮೋಚನಾ ಪಡೆಯ ಅಸಂಖ್ಯ ಸೈನಿಕರೂ ಇದೇ ರೀತಿ ದೇಶದ ಎಲ್ಲಡೆಯಲ್ಲೂ ಹರಡಿಕೊಂಡಿದ್ದರು. ಅವರಲ್ಲಿ ಒಬ್ಬ ತಮ್ಮ ಸ್ಥಿತಿಯನ್ನು ಅಡಕಗೊಳಿಸಿ ಒಂದೇ ಮಾತಿನಲ್ಲಿ ಕೇಳಿದ್ದ: "ಜನರಲ್, ನಮಗೀಗ ಸ್ವಾತಂತ್ರ್ಯ ಸಿಕ್ಕಿದೆ, ಆದರೆ ಅದನ್ನು ಏನು ಮಾಡೋಣ, ಹೇಳಿ?" ಗೆಲವಿನ ಅಮಲಿನಲ್ಲಿ ಈ ರೀತಿ ಸತ್ಯವನ್ನು ನುಡಿಯುವುದನ್ನು ಅವರಿಗೆ ತಾವೇ ಕಲಿಸಿದ್ದರು. ಆದರೆ ಈಗ ಸತ್ಯದ ಒಡೆಯರು ಬೇರೆಯಾಗಿದ್ದರು.

"ಸ್ವಾತಂತ್ರ್ಯ ಎಂಬುದು ಯುದ್ಧದ ಗುರಿಯಾಗಿತ್ತು, ತ್ಯಾಗ ಆಮೇಲೆ ಬರುವಂತಹುದು, ಅದೆಂದರೆ ಎಲ್ಲ ಪ್ರಾಂತಗಳನ್ನು ಒಗ್ಗೂಡಿಸಿ ಒಂದೇ ರಾಷ್ಟ್ರವನ್ನಾಗಿ ರೂಪಸುವುದು" ಎಂದಿದ್ದರು ಅವರು.

"ನಾವು ಬರೀ ತ್ಯಾಗಗಳನ್ನೇ ಮಾಡಿದ್ದೇವಲ್ಲ, ಜನರಲ್" ಎಂದು ಕೇಳಿದ ಅವರಲ್ಲೊಬ್ಬ.

ಅವರು ಮಾತ್ರ ಜಗ್ಗಲಿಲ್ಲ.

"ಮತ್ತಷ್ಟು ಮಾಡಬೇಕು, ಐಕ್ಯಕ್ಕೆ ಬೆಲೆ ಕಟ್ಟಲಾಗದು."

ರಾತ್ರಿ ಜೋಲಿಮಂಚವನ್ನು ಕಟ್ಟಿದ್ದ ಕಟ್ಟಡದ ಬಳಿ ಓಡಾಡುತ್ತಿದ್ದಾಗ ತಮ್ಮನ್ನು ನೋಡಲು ಬಂದಿದ್ದ ಮುಖ ತಿರುಗಿಸಿದ ಹೆಂಗಸೊಬ್ಬಳು ಕಣ್ಣಿಗೆ

ಬಿದ್ದಳು. ತಾವು ಬೆತ್ತಲಾಗಿರುವುದನ್ನು ನೋಡಿಯೂ ಆಕೆ ಮುಜುಗರಗೊಳ್ಳದಿದ್ದುದು ಅವರಲ್ಲಿ ಅಚ್ಚರಿಯನ್ನುಂಟುಮಾಡಿತು. ಅಷ್ಟೇ ಅಲ್ಲ, ಅವಳು ಮೆಲುವಾಗಿ ಹಾಡಿಕೊಳ್ಳುತ್ತಿದ್ದ ಸಾಲೂ ಕಿವಿಗೆ ಬಿತ್ತು: *"ಪ್ರೇಮಕ್ಕಾಗಿ ಪ್ರಾಣ ಬಿಡಲು ತಡವೆಂಬುದಿಲ್ಲ."* ಕಾವಲುಗಾರ ಎಚ್ಚರವಾಗಿ ಮೊಗಸಾಲೆಯಲ್ಲಿದ್ದ.

"ಇಲ್ಲಿ ಯಾರಾದರೂ ಹೆಂಗಸು ಬಂದಳಾ?" ಎಂದು ಅವನನ್ನು ಕೇಳಿದರು.

ಅವನಿಗೆ ಆ ಬಗ್ಗೆ ಖಚಿತವಾಗಿ ಗೊತ್ತಿತ್ತು. "ತಮ್ಮ ಯೋಗ್ಯತೆಗೆ ತಕ್ಕವರು ಯಾರೂ ಇಲ್ಲ, ಸಾಹೇಬರೇ" ಎಂದ.

"ಸಾಹೇಬರ ಯೋಗ್ಯತೆಗೆ ತಕ್ಕನಲ್ಲದವರು?"

"ಉಹ್ಞೂ, ಯಾರೂ ಇಲ್ಲ, ಇಲ್ಲಿ ಒಂದು ಲೀಗ್ ಸುತ್ತಳತೆಯಲ್ಲಿ ಯಾವ ಹೆಂಗಸೂ ಇಲ್ಲ."

ಆದರೆ ಜನರಲ್‌ರಿಗೆ ಆ ಬಗ್ಗೆ ಅನುಮಾನವಿರಲಿಲ್ಲ, ಹೀಗಾಗಿ ಅವಳಿಗಾಗಿ ಕಟ್ಟಡದ ಎಲ್ಲ ಕಡೆಗಳಲ್ಲಿಯೂ ಹುಡುಕಿದರು. ರಾತ್ರಿ ತಡವಾಯಿತು. ತಮ್ಮ ಜೊತೆ ಹುಡುಕುವಂತೆ ಆಪ್ತ ಸಹಾಯಕರಿಗೂ ಹೇಳಿದರು. ಮಾರನೆಯ ದಿನವೂ ಆ ಬಗ್ಗೆ ಪ್ರಶ್ನಿಸಿದರು; ಅದೇ ಉತ್ತರ: "ಯಾರೂ ಇಲ್ಲ". ಕೊನೆಗೆ ಸೋತರು. ಅಷ್ಟು ಹೊತ್ತಿಗೆ ಹೊರಡಲು ಒಂದು ಗಂಟೆ ತಡವಾಗಿತ್ತು. ಆ ವಿಚಾರ ಮತ್ತೆ ಪ್ರಸ್ತಾಪಗೊಳ್ಳಲಿಲ್ಲ. ಪಯಣ ಮುಂದುವರಿಸಿದ ಮೇಲೂ ಅವರಿಗೆ ಆ ಪ್ರಸಂಗ ನೆನಪಾದಾಗಲೆಲ್ಲ ಅವಳನ್ನು ತಾವು ಕಂಡದ್ದು ನಿಜ ಎಂದೇ ಅಂದುಕೊಳ್ಳುತ್ತಿದರು. ಜೋಸೆ ಪೆಲಾಸಿಯೋಸ್ ಅವರೊಡನೆ ಇನ್ನೂ ಹಲವು ವರ್ಷಗಳು ಇರುವವನಿದ್ದ, ಯಾವುದೇ ವಿವರವೂ ತಪ್ಪಿಹೋಗದ ಹಾಗೆ ಎಲ್ಲವನ್ನೂ ಪುನರ್ವಿಮರ್ಶಿಸುವುದಕ್ಕೆ ಬೇಕಾದಷ್ಟು ಸಮಯವಿರುತ್ತಿತ್ತು. ಅವರು ಸ್ಪಷ್ಟಪಡಿಸದಿದ್ದ ಒಂದೇ ವಿಷಯವೆಂದರೆ ಪ್ಯೂರ್ಟೋ ರಿಯಲ್‌ನಲ್ಲಿ ಕಂಡದ್ದು ಕನಸೋ, ಭ್ರಾಂತಿಯೋ, ದರ್ಶನವೋ ಎಂಬುದು ಮಾತ್ರ.

ಗಾಯ ಇನ್ನೂ ವಾಸಿಯಾಗಿರದಿದ್ದರೂ, ಅದಕ್ಕೆ ಹೆಸರೇ ಇರಲಿಲ್ಲ ಎಂಬುದನ್ನು ಆಹಾರದ ಮೇಲುಸ್ತುವಾರಿ ಹೊತ್ತವನು ಅರ್ಥಮಾಡಿಕೊಳ್ಳುವವರೆಗೆ, ಬೀದಿ ನಾಯಿಯ ವಿಚಾರ ಮುಂದೆ ಯಾರೂ ನೆನಪಿಸಿಕೊಂಡಿರಲಿಲ್ಲ. ಅದಕ್ಕೆ ಸ್ನಾನ ಮಾಡಿಸಿ ಮಗುವಿಗೆ ಹಾಕುವ ಪೌಡರ್ ಪೂಸಿದ್ದರು, ಆದರೆ ಅದರ ಕೆಟ್ಟ ಆಕಾರವಾಗಲೀ ವಾಕರಿಕೆ ಬರಿಸುವ ದುರ್ನಾತವಾಗಲೀ ಹೋಗಿರಲಿಲ್ಲ. ಜನರಲ್ ದೋಣಿಯ ಹಿಂಭಾಗದಲ್ಲಿ ನಿಂತಿದ್ದಾಗ ಜೋಸೆ ಪೆಲಾಸಿಯೋಸ್ ಅದನ್ನು ತಂದು ಮುಂದೆ ಹಿಡಿದಿದ್ದ.

"ಇದಕ್ಕೆ ಏನಂತ ಹೆಸರಿಡೋಣ?" ಎಂದು ಅವನು ಕೇಳಿದ.

ಜನರಲ್ ಒಂದು ಕ್ಷಣವೂ ಆ ಬಗ್ಗೆ ಆಲೋಚಿಸದೆ, "ಬೊಲಿವರ್" ಎಂದುತ್ತರಿಸಿದರು.

ದೋಣಿಗಳ ಸಮೂಹವೊಂದು ಹತ್ತಿರ ಬರುತ್ತಿದೆಯೆಂಬ ಸುದ್ದಿ ತಿಳಿದ ತಕ್ಷಣ ರೇವಿನಲ್ಲಿ ಬೀಡುಬಿಟ್ಟಿದ್ದ ಫಿರಂಗಿದೋಣಿಯು ಚಲಿಸಲು ತೊಡಗಿತು. ಗುಡಾರದ ಕಿಂಡಿಯ ಮೂಲಕ ಅದನ್ನು ಜೋಸೆ ಪೆಲಾಸಿಯೋಸ್ ನೋಡಿದ, ಜನರಲ್ ಕಣ್ಣು ಮುಚ್ಚಿ ಮಲಗಿದ್ದ ಜೋಲಿಮಂಚದ ಮೇಲೆ ಬಾಗಿ ಹೇಳಿದ:

"ಸರ್, ನಾವು ಮಾಂಪಾಕ್ಸ್‌ಗೆ ಬಂದೆವು."

"ದೇವರ ರಾಜ್ಯ" ಎಂದರು  ಜನರಲ್‌ಲ್ ಕಣ್ಣು ತೆರೆಯದೆಯೇ.

ಅವರು ತೀರದ ಕಡೆ ಸಾಗುತ್ತಿರುವಾಗ ನದಿ ವಿಶಾಲವಾಗಿಯೂ ಪ್ರಶಾಂತವಾಗಿಯೂ ಹರಿಯುತ್ತಿತ್ತು. ಜವುಗು ಭೂಮಿ ಕೊನೆ ಮೊದಲಿಲ್ಲದಂತೆ ಹಬ್ಬಿತ್ತು. ಶಕೆ ಎಷ್ಟು ಜೋರಾಗಿತ್ತೆಂದರೆ ಕೈಯಿಂದ ಮುಟ್ಟಬಹುದಾಗಿತ್ತು. ಮೊದಲ ಕೆಲವು ದಿನಗಳು ದೋಣಿಯ ಹಿಂಭಾಗದಲ್ಲಿ ತಟಕ್ಕನೆಯ ಬೆಳಗು ಜಾವಗಳು ಹಾಗೂ ಕೋರೈಸುವ ಸಂಜೆದೀಪ್ತಿಗಳನ್ನು ಯಾವ ಕಹಿಯೂ ಇಲ್ಲದೆ ಜನರಲ್ ಬಿಟ್ಟುಕೊಟ್ಟು ಖಿನ್ನತೆಗೊಳಗಾದರು. ಪತ್ರಗಳನ್ನು ಬರೆಸಲಿಲ್ಲ, ಓದಿಸಲಿಲ್ಲ, ಸಂಗಾತಿಗಳಿಗೆ ಜೀವನಾಸಕ್ತಿಯನ್ನು ತೋರಿಸುವ ಯಾವ ಪ್ರಶ್ನೆಗಳನ್ನೂ ಕೇಳಲಿಲ್ಲ. ಕಡುಬಿಸಿಲ ಮಧ್ಯಾಹ್ನನಿದ್ದೆ ಮಾಡುವಾಗಲೂ ಹೊದ್ದುಕೊಂಡು ಕಣ್ಣು ಮುಚ್ಚಿಕೊಂಡು ಜೋಲಿಮಂಚದಲ್ಲಿ ಮಲಗುತ್ತಿದ್ದರು. ತನ್ನ ಮಾತು ಕೇಳಿಸಿಲ್ಲವೆಂದು ಭಾವಿಸಿ ಜೋಸೆ ಪೆಲಾಸಿಯೋಸ್ ಹೇಳಿದ್ದನ್ನೇ ಪುನರುಚ್ಚರಿಸಿದ, ಆಗಲೂ ಜನರಲ್ ಪ್ರತಿಕ್ರಿಯಿಸಿದ್ದು ಕಣ್ಣು ಮುಚ್ಚಿಕೊಂಡೇ.

"ಮಾಂಪಾಕ್ಸ್ ಅಸ್ತಿತ್ವದಲ್ಲೇ ಇಲ್ಲ, ಕೆಲವು ವೇಳೆ ನಾವು ಅದರ ಕನಸು ಕಾಣ್ತೀವಿ, ಆದರೆ ಅದು ಇಲ್ಲವೇ ಇಲ್ಲ" ಎಂದರು.

"ಕೊನೆಯ ಪಕ್ಷ ಸಂಟಾ ಬಾರ್ಬರ ಗೋಪುರ ಇದೆ ಅಂತ ನಾನು ಪ್ರಮಾಣ ಮಾಡ್ತೀನಿ. ಅದು ನಂಗೆ ಇಲ್ಲಿಂದಲೇ ಕಾಣ್ತಿದೆ" ಎಂದು ಜೋಸೆ ಪೆಲಾಸಿಯೋಸ್ ಉತ್ತರಿಸಿದ್ದ.

ಬಳಲಿದ ತಮ್ಮ ಕಣ್ಣುಗಳನ್ನು ತೆರೆದ ಜನರಲ್ ಜೋಲಿಮಂಚದಲ್ಲಿ ಎದ್ದು ಕುಳಿತರು, ಮಧ್ಯಾಹ್ನದ ಸುಡುಬಿಸಿಲಲ್ಲಿ ಅತ್ಯಂತ ಹಳೆಯ ಹಾಗೂ ದೀರ್ಘಕಾಲ ಕಷ್ಟ ಕಂಡ ಮಾಂಪಾಕ್ಸ್ ನಗರವನ್ನು ಕಂಡರು; ಅದು ಯುದ್ಧದಲ್ಲಿ ಜರ್ಜರಿತವಾಗಿತ್ತು, ಗಣರಾಜ್ಯದ ಕ್ಷೋಭೆಯಲ್ಲಿ ತನ್ನ ಬೆಲೆ ಕಳೆದುಕೊಂಡಿತ್ತು, ಸಿಡುಬಿನಿಂದಾಗಿ ಅದರ ಗಾತ್ರ ಕುಗ್ಗಿತ್ತು. ಈ ಹೊತ್ತಿನಲ್ಲೇ ನದಿಯು ತನ್ನ ಪಾತ್ರವನ್ನು ಬದಲಿಸತೊಡಗಿ ನಗರವನ್ನು ಉಪೇಕ್ಷೆ ಮಾಡಿತ್ತು, ಶತಮಾನದ ಕೊನೆಯ ವೇಳೆಗೆ ಅದು ಸಂಪೂರ್ಣ ಜನವಿಹೀನವಾಗುವುದಿತ್ತು. ತೀರದಲ್ಲಿ ಬಿದ್ದಿದ್ದ ಕಲ್ಲುಗಳ ಜೊತೆಗೆ ಉಳಿದಿದ್ದುದೆಂದರೆ ಪ್ರವಾಹದಿಂದ ಕೊಚ್ಚಿಹೋದಾಗಲೆಲ್ಲ ಹಟದಿಂದ

ವಸಾಹತು ಗವರ್ನರ್‌ಗಳು ನದಿ ಪಾತ್ರದಲ್ಲಿ ಮತ್ತೆ ಮತ್ತೆ ನಿರ್ಮಿಸಿದ್ದ ಗಾರೆಯ ಕಟ್ಟಡದ ಅವಶೇಷಗಳು. ಯುದ್ಧನೌಕೆಯು ದೋಣಿಸಮೂಹವನ್ನು ಸಮೀಪಿಸಿತ್ತು, ಹಿಂದಿನ ವೈಸ್‌ರಾಯ್ ಕಾಲದ ಪೋಲೀಸ್ ಸಮವಸ್ತ್ರವನ್ನು ಇನ್ನೂ ಧರಿಸಿದ್ದ ಒಬ್ಬ ಕರಿಯ ಅಧಿಕಾರಿ ಫಿರಂಗಿಯನ್ನು ತಮ್ಮ ಕಡೆಗೆ ತಿರುಗಿಸಿದ. ಆಗ ಕ್ಯಾಪ್ಟನ್ ಕ್ಯಾಸಿಲ್ಡೋ ಸ್ಯಾಂಟೋಸ್ ಜೋರಾಗಿ ಕೂಗಿದ:

"ಏಯ್ ಕರಿಯ, ಮೂರ್ಖನಾಗಬೇಡ!"

ಅಂಬಿಗರು ಹುಟ್ಟುಹಾಕುವುದನ್ನು ನಿಲ್ಲಿಸಿದರು, ಹಾಗಾಗಿ ದೋಣಿಗಳು ನದಿಯ ಹರಿವಿನ ಅಂಕೆಯಲ್ಲಿದ್ದವು. ಆಜ್ಞೆಗಾಗಿ ಕಾಯುತ್ತಿದ್ದ ಶಸ್ತ್ರಸಜ್ಜಿತ ಸೈನಿಕರು ತಮ್ಮ ಬಂದೂಕುಗಳನ್ನು ಮೇಲೆತ್ತಿ ಫಿರಂಗಿದೋಣಿಗೆ ಗುರಿಯಿಟ್ಟು ನಿಂತರು. ಆದರೆ ಆ ಅಧಿಕಾರಿ ವಿಚಲಿತನಾಗಲಿಲ್ಲ.

"ಪಾಸ್‌ಪೋರ್ಟ್‌ಗಳು, ಕಾನೂನು ಪ್ರಕಾರ" ಎಂದು ಅವನು ಕೂಗಿದ. ಆಗಲೇ ಅವನಿಗೆ ಕಣ್ಣಿಗೆ ಬಿದ್ದದ್ದು ಗುಡಾರದಡಿಯಿಂದ ಹೊರಬಿದ್ದ ವಿಕ್ಷಿಪ್ತ ಚೇತನದ ದೇಹ, ಅದಮ್ಯ ಅಧಿಕಾರವನ್ನು ಮುಷ್ಟಿಯಲ್ಲಿ ಹಿಡಿದ ದಣಿದ ಕೈ ಬಂದೂಕುಗಳನ್ನಿಳಿಸಲು ಸೈನಿಕರಿಗೆ ಸನ್ನೆ ಮಾಡಿತು. ಆನಂತರ ಆ ಅಧಿಕಾರಿಗೆ ಕ್ಷೀಣಧ್ವನಿಯಲ್ಲಿ ಅವರು ಹೀಗೆಂದರು:

"ನಿಮಗೆ ನಂಬಿಕೆ ಬರದಿರಬಹುದು, ಕ್ಯಾಪ್ಟನ್, ಆದರೆ ನನ್ನ ಬಳಿ ಯಾವ ಪಾಸ್‌ಪೋರ್ಟೂ ಇಲ್ಲ."

ಇವರಾರೆಂಬುದು ಆ ಅಧಿಕಾರಿಗೆ ತಿಳಿಯದು. ಫರ್ನಾಂಡೋ ತಿಳಿಸಿದಾಗ ಅವನು ತನ್ನ ಆಯುಧಗಳೊಡನೆಯೇ ಪುಳಂಗನೆ ನೀರಿಗೆ ದುಮುಕಿ ಈ ಸಿಹಿ ಸುದ್ದಿಯನ್ನು ತಿಳಿಸಲು ನದೀತೀರದೆಡೆ ಧಾವಿಸಿದ. ಫಿರಂಗಿದೋಣಿಯ ಗಂಟೆಗಳು ಸದ್ದುಮಾಡುತ್ತ ಇವರ ದೋಣಿಸಮೂಹವನ್ನು ತನ್ನ ಕಾಪಿನಲ್ಲಿ ರೇವನ್ನು ಮುಟ್ಟಿಸಿತು. ನದಿಯ ಕೊನೆಯ ತಿರುವಿನಲ್ಲಿ ನಗರ ಪೂರ್ತಿ ಇನ್ನೂ ಕಣ್ಣಿಗೆ ಬೀಳುವ ಮೊದಲೇ ಊರಿನ ಎಂಟೂ ಚರ್ಚ್‌ಗಳ ಗಂಟೆಗಳು ಸದ್ದುಮಾಡಿ ಶುಭ ಸಮಾಚಾರವನ್ನು ಸಾರಿದವು.

ವಸಾಹತು ಕಾಲದಲ್ಲಿ ಸಂಟಾ ಕ್ರೂಝ್ ದ ಮಾಂಪಾಕ್ಸ್ ಕ್ಯಾರಿಬಿಯನ್ ದೇಶದ ತೀರ ಪ್ರದೇಶ ಹಾಗೂ ಒಳಭಾಗಗಳ ನಡುವೆ ವಾಣಿಜ್ಯ ಸೇತುವೆಯಾಗಿತ್ತು, ಸಂಪತ್ತಿನ ಉತ್ಪಾದನಾಮೂಲವಾಗಿತ್ತು. ಸ್ವಾತಂತ್ರ್ಯದ ಬಿರುಗಾಳಿ ಬೀಸತೊಡಗಿದ ಮೇಲೆ ಅಮೆರಿಕನ್ ಶ್ರೀಮಂತವರ್ಗದ ಬಿಗಿಹಿಡಿತದಲ್ಲಿದ್ದ ಪ್ರದೇಶವೇ ಮೊದಲು ಸ್ವಾತಂತ್ರ್ಯವನ್ನು ಘೋಷಿಸಿಕೊಂಡದ್ದು. ಮತ್ತೆ ಸ್ಪೇನ್‌ನ ವಶಕ್ಕೊಳಗಾಗಿದ್ದು ಮತ್ತೆ ಜನರಲ್ ಅವರಿಂದ ಬಿಡುಗಡೆಗೊಂಡಿತ್ತು. ಆ ಊರಿನಲ್ಲಿದ್ದುದು ನದೀತೀರಕ್ಕೆ ಸಮನಾಂತರವಾಗಿ ಸಾಗುತ್ತಿದ್ದ ಅಗಲವಾದ, ನೇರವಾದ ಮತ್ತು ಧೂಳು

ತುಂಬಿದ ಮೂರು ರಸ್ತೆಗಳು ಮಾತ್ರ. ಅವುಗಳಲ್ಲಿನ ಅಗಲವಾದ ಕಿಟಕಿಗಳಿದ್ದ ಒಂದಸ್ತಿನ ಮನೆಗಳಲ್ಲಿ ಇಬ್ಬರು ಕೌಂಟ್‌ಗಳೂ ಮೂರು ಮಂದಿ ಮಾರ್ಕ್ವಿಸ್‌ಗಳೂ ಇದ್ದರು. ಆ ಊರಿನ ಲೋಹ ಕುಶಲಕರ್ಮಿಗಳ ಬಗ್ಗೆ ಇದ್ದ ಒಳ್ಳೆಯ ಹೆಸರು ಗಣರಾಜ್ಯದ ಬದಲಾದ ಸ್ಥಿತಿಯಲ್ಲೂ ಮುಂದುವರಿದಿತ್ತು.

ಇಂಥ ಪರಿಸ್ಥಿತಿಯಲ್ಲಿ ಜನರಲ್ ತಮ್ಮ ವೈಭವದ ಬಗ್ಗೆ ಭ್ರಮನಿರಸನಗೊಂಡು, ಜಗತ್ತಿನ ಬಗೆಗಿನ ಮೋಹ ಕಳೆದುಕೊಂಡು ರೇವಿನಲ್ಲಿ ಬಂದಿಳಿದಾಗ ಅವರನ್ನು ಸ್ವಾಗತಿಸಲು ಕಾದು ನಿಂತಿದ್ದ ಜನಗಳ ಗುಂಪು ಅವರಲ್ಲಿ ಅಚ್ಚರಿ ಮೂಡಿಸಿತ್ತು. ವೆಲ್ವೆಟ್ ಟ್ರೌಸರ್‌ಗಳನ್ನು ಮತ್ತು ಎತ್ತರದ ಹಿಮ್ಮಡಿಯ ಬೂಟುಗಳನ್ನು ಧರಿಸಿ, ಸೆಕೆಯಿದ್ದರೂ ಹೊದಿಕೆಯನ್ನು ಮೈಮೇಲೆ ಸುತ್ತಿಕೊಂಡು, ರಾತ್ರಿ ಟೋಪಿಯ ಬದಲು ಹೊಂಡಾದಲ್ಲಿ ಜನರಿಗೆ ವಿದಾಯ ಹೇಳಲು ಕೈಲಿ ಹಿಡಿದು ಬೀಸಿದ್ದ ಅಗಲ ಅಂಚಿನ ಹ್ಯಾಟ್ ಧರಿಸಿ ಕೆಳಗಿಳಿದರು.

ಲ ಕಾನ್ಸೆಪ್ಸಿಯೋ ಚರ್ಚ್‌ನಲ್ಲಿ ಯಾರೋ ಒಬ್ಬ ಗಣ್ಯ ವ್ಯಕ್ತಿಯ ಅಂತ್ಯಕ್ರಿಯೆಯ ವಿಧಿಗಳು ನಡೆಯುತ್ತಿದ್ದವು. ಅದರಲ್ಲಿ ಭಾಗಿಗಳಾಗಲು ಊರಿನ ಎಲ್ಲ ನಾಗರಿಕ ಹಾಗೂ ಧಾರ್ಮಿಕ ಅಧಿಕಾರಿಗಳು, ಆರಾಧನಾ ಮಂಡಳಿಗಳ ಮತ್ತು ಧಾರ್ಮಿಕ ಶಾಲೆಗಳ ಸದಸ್ಯರು ಮತ್ತು ಉತ್ಕೃಷ್ಟ ಬಟ್ಟೆ ತೊಟ್ಟ ಪ್ರಮುಖ ನಾಗರಿಕರು ನೆರೆದಿದ್ದರು. ಗಂಟೆಗಳ ಘೋಷ ಅವರಲ್ಲಿ ಅದೇನು ಬೆಂಕಿ ಅನಾಹುತದ ಸೂಚನೆಯೋ ಎಂಬ ಗಲಿಬಿಲಿಯುಂಟುಮಾಡಿತು. ಆದರೆ ಸರಭರ ಬಂದ ಬೇಲಿಫ಼್ ಮೇಯರ್ ಕಿವಿಯಲ್ಲಿ ಸುದ್ದಿಯನ್ನು ಪಿಸುಗುಟ್ಟಿ, ಆಮೇಲೆ ಎಲ್ಲರಿಗೂ ಕೇಳುವಂತೆ ಜೋರಾಗಿ,

"ಅಧ್ಯಕ್ಷರು ರೇವಿನಲ್ಲಿ ಬಂದಿಳಿದಿದ್ದಾರೆ" ಎಂದು ಉದ್ಘೋಷಿಸಿದ.

ಏಕೆಂದರೆ ಅನೇಕರಿಗೆ ಅವರೀಗ ಅಧ್ಯಕ್ಷರಲ್ಲ ಎಂಬ ವಿಷಯವೂ ತಿಳಿದಿರಲಿಲ್ಲ. ಸೋಮವಾರ ಬೆಳಿಗ್ಗೆ ಹೊಂಡಾದಿಂದ ಬಂದಿದ್ದ ಒಬ್ಬ ಅಂಚೆವಾಹಕನು ನದೀತೀರದಲ್ಲಿದ್ದ ಎಲ್ಲ ಊರುಗಳಲ್ಲಿಯೂ ಸುದ್ದಿ ಹರಡಿದ್ದ, ಆದರೆ ಏನೆಂದು ಸ್ಪಷ್ಟಪಡಿಸಿರಲಿಲ್ಲ.

ಆ ಅಸ್ಪಷ್ಟತೆಯಿಂದಾಗಿ ಅನಿರೀಕ್ಷಿತ ಸ್ವಾಗತ ಸಮಾರಂಭವು ಹೆಚ್ಚು ಉತ್ಸಾಹದಿಂದ ಕೂಡಿರುವಂತಾಯಿತು. ಅಂತ್ಯಕ್ರಿಯೆಗೆ ಸೇರಿದವರಲ್ಲಿ ಬಹು ಪಾಲು ಜನರು ಇಲ್ಲಿಂದ ಪಾಳುಗೋಡೆಯ ಬಳಿಗೆ ಹೋಗುವರೆಂಬುದು ಸತ್ತ ವ್ಯಕ್ತಿಯ ಕಟುಂಬದವರಿಗೂ ಅರಿವಾಯಿತು. ವಿಧಿ ಪೂರ್ಣಗೊಳ್ಳುವ ಮುಂಚೆಯೇ ಅಂತ್ಯಕ್ರಿಯೆ ಕೊನೆಗಂಡಿತು, ತೀರ ಹತ್ತಿರದ ಕೆಲವರು ಮಾತ್ರ ಶವಪೆಟ್ಟಿಗೆಯ ಜೊತೆ ಸಮಾಧಿಸ್ಥಳಕ್ಕೆ ಹೋದರು. ಪಟಾಕಿಗಳ ಹಾಗೂ ಗಂಟೆಗಳ ಕಿವಿಗಡಚಿಕ್ಕುವ ಸದ್ದು ಎಲ್ಲೆಡೆ ಆವರಿಸಿತ್ತು.

ಮೇ ತಿಂಗಳ ಹಗುರ ಮಳೆಯ ಕಾರಣದಿಂದಾಗಿ ನದಿಯಲ್ಲಿ ನೀರು ಕಡಿಮೆಯಿತ್ತು. ಇದರ ಪರಿಣಾಮವೆಂದರೆ, ಜನರಲ್ ಮತ್ತವರ ಪರಿವಾರದವರು ರೇವನ್ನು ತಲುಪಲು ಪಾಳು ಬಿದ್ದ ಎತ್ತರದ ಬಂಡೆಗಳನ್ನೇರಿ ಬರಬೇಕಾಯಿತು. ತಮ್ಮನ್ನು ಎತ್ತಿಕೊಂಡು ಹೋಗಲು ಮುಂದಾದವನನ್ನು ಜನರಲ್ ರೇಗಿ ಸುಮ್ಮನಿರಿಸಿದ್ದರು. ಕಾಪ್ಟನ್ ಇಬಾರಾನ ತೋಳು ಹಿಡಿದೊಂಡು, ಪ್ರತಿ ಹೆಜ್ಜೆಗೂ ನಿಲ್ಲುತ್ತ, ನೇರವಾಗಿ ನಿಲ್ಲಲು ಹೆಣಗುತ್ತ, ಆದರೆ ಗತ್ತನ್ನು ಮಾತ್ರ ಬಿಟ್ಟುಕೊಡದೆ ತಾವೇ ಹತ್ತುತ್ತ ಬಂದರು.

ದೇಹದ ಸ್ಥಿತಿ ಮತ್ತು ಕೈಗಳ ಕೃಶತೆಯನ್ನು ಕಂಡವರು ಆಶ್ಚರ್ಯಪಡುವಂತೆ ರೇವಿನಲ್ಲಿದ್ದ ಅಧಿಕಾರಿಗಳ ಕೈಗಳನ್ನು ಬಿರುಸಿನಿಂದ ಕುಲುಕಿ ಉಭಯಕುಶಲೋಪರಿ ವಿಚಾರಿಸಿದರು. ಕಳೆದ ಬಾರಿ ಅಲ್ಲಿಗೆ ಬಂದಿದ್ದಾಗ ಅವರನ್ನು ನೋಡಿದ್ದವರು ತಮ್ಮ ನೆನಪುಗಳನ್ನು ನಂಬದಾದರು. ಅವರು ತನ್ನ ತಂದೆಯಷ್ಟು ವಯಸ್ಸಾದವನಂತೆ ಕಾಣುತ್ತಿದ್ದರು, ಆದರೆ ಅವರಲ್ಲಿದ್ದ ತುಸುವೇ ಉಸಿರು ಅವರಿಗಾಗಿ ವಿಶೇಷ ವ್ಯವಸ್ಥೆಗಳನ್ನು ಮಾಡುವಂತೆ ಪ್ರಚೋದಿಸಲು ಸಾಕಾಗಿತ್ತು. ತಮಗಾಗಿ ಏರ್ಪಡಿಸಿದ್ದ ಗುಡ್ ಫ್ರೈಡೆ ಮೆರವಣಿಗೆಯಲ್ಲಿ ಕೊಂಡೊಯ್ಯುವ ವೇದಿಕೆಗಳನ್ನು ಬೇಡವೆಂದರು, ಅಲ್ಲದೆ ಲ ಕಾನ್ಸೆಪ್ಸಿಯೋ ಚರ್ಚ್‌ವರೆಗೂ ನಡೆದೇ ಬರುವುದಾಗಿ ಹೇಳಿದರು. ಕೊನೆಯಲ್ಲ ಮಾತ್ರ ಮೇಯರ್‌ನ ಹೇಸರಗತ್ತೆಯನ್ನು ಹತ್ತಬೇಕಾಯಿತು, ರೇವಿಗೆ ಬಂದಿಳಿದಾಗ ಅವರ ದೌರ್ಬಲ್ಯವನ್ನು ಗಮನಿಸಿದ್ದ ಅಧಿಕಾರಿಯು ಅದನ್ನು ಆತುರದಿಂದ ಸಿದ್ಧಪಡಿಸಿ ತರಿಸಿದ್ದ.

ಕೆಂಪಾದ ಕೆಂಡಗಳಂತಹ ಸಿಡುಬಿನ ಕಲೆಗಳು ಅನೇಕರ ಮುಖಗಳ ಮೇಲೆ ಹುಲಿಪಟ್ಟೆಯಂತೆ ಇದ್ದುದನ್ನು ಜೋಸೆ ಪೆಲಾಸಿಯೋಸ್ ಗಮನಿಸಿದ್ದ, ಮ್ಯಾಗ್ಡಲೀನ ನದಿ ಪಾತ್ರದ ಆ ಭಾಗಕ್ಕೆ ಸೀಮಿತವಾಗಿದ್ದ ಕಠಿಣ ರೋಗ ಅದು. ದೇಶಭಕ್ತರಿಗೆ ಅದನ್ನು ಕಂಡರೆ ಸ್ಪಾನಿಯಾರ್ಡ್‌ಗಳ ಬಗ್ಗೆ ಇದ್ದುದಕ್ಕಿಂತ ಹೆಚ್ಚಿನ ಭಯ, ಏಕೆಂದರೆ ಅದು ನದಿಪಾತ್ರದ ವಿಮೋಚನೆಯ ಹೋರಾಟ ಕಾಲದಲ್ಲಿ ಪಡೆಗಳ ಸಾಕಷ್ಟು ಭಾಗವನ್ನು ಭಕ್ಷಣೆ ಮಾಡಿಬಿಟ್ಟಿತ್ತು. ಆಮೇಲೂ ಸಿಡುಬು ಮುಂದುವರಿದಾಗ, ದನಗಳ ಸಿಡುಬಿನ ಲಸಿಕೆಯನ್ನು ಜನಗಳಲ್ಲಿ ರೋಗನಿರೋಧಕವಾಗಿ ಚುಚ್ಚಲು ಜನರಲ್ ಒಬ್ಬ ಫ್ರೆಂಚ್ ಪ್ರಕೃತಿವೈದ್ಯನನ್ನು ದೀರ್ಘಕಾಲ ನಿಯೋಜಿಸಿದ್ದರು. ಆದರೆ ಈ ವಿಧಾನದಿಂದ ಅನೇಕ ಸಾವುಗಳುಂಟಾಗಿ ಜನರು ದನದ ಔಷಧಿಯ ಬಗ್ಗೆ ಮಾತನಾಡಲೂ ಹಿಂಜರಿಯುತ್ತಿದ್ದರು; ಅನೇಕ ತಾಯಂದಿರಿಗೆ ತಮ್ಮ ಮಕ್ಕಳು ರೋಗದ ಅಪಾಯವನ್ನೆದುರಿಸಿದರೂ ಪರವಾಯಿಲ್ಲ, ನಿರೋಧಕದ ಸಹವಾಸ ಸಾಕು ಎನ್ನಿಸಿತ್ತು. ಆದರೆ, ಅಧಿಕೃತ ವರದಿಗಳು ಆ ರೋಗದ ಪೀಡೆಯು ತಹಬಂದಿಗೆ ಬಂದಿದಿಯೆಂದು ಜನರಲ್ ನಂಬುವಂತೆ ಮಾಡಿತ್ತು. ಹೀಗಾಗಿ,

ಜೋಸೆ ಪೆಲಾಸಿಯೋಸ್ ಸಂದಣಿಯಲ್ಲಿದ್ದ ಅಂತಹ ಪಟ್ಟೆಗಳಿದ್ದ ಮುಖಗಳನ್ನು ತೋರಿಸಿದಾಗ ಜನರಲ್‌ರಿಗೆ ಉಂಟಾದ ಭಾವನೆಯೆಂದರೆ ಆಶ್ಚರ್ಯಕ್ಕಿಂತ ಹೆಚ್ಚಾಗಿ ಜಿಗುಪ್ಸೆ.

"ನಮ್ಮನ್ನು ಸಂತೋಷಪಡಿಸಬೇಕು ಅಂತ ಕೆಳ ಅಧಿಕಾರಿಗಳು ಸುಳ್ಳು ಹೇಳ್ತಿರೋವರೆಗೂ ಇದು ಹೀಗೇ ಆಗೋದು" ಎಂದರು ಜನರಲ್.

ರೇವಿನಲ್ಲಿ ಸ್ವಾಗತಿಸಿದವರ ಮುಂದೆ ಅವರು ಅಸಮಾಧಾನವನ್ನು ತೋರ್ಪಡಿಸಿಕೊಳ್ಳಲಿಲ್ಲ. ತಾವು ಅಧಿಕಾರತ್ಯಾಗ ಮಾಡಿದ ಬಗ್ಗೆ ಹಾಗೂ ಸಂಟಾ ಫ಼ ದ ಬೊಗೋಟದಲ್ಲಿ ಆವರಿಸಿದ ಅವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿದರು, ಅಂತೆಯೇ ಹೊಸ ಸರ್ಕಾರಕ್ಕೆ ಸಂಪೂರ್ಣ ಸಹಕಾರ ನೀಡುವಂತೆ ಕೇಳಿಕೊಂಡರು. "ಉಹ್ಞೂ, ಏಕತೆ ಅಥವಾ ಅನಾಯಕತ್ವ ಬಿಟ್ಟು ಬೇರೆ ಆಯ್ಕೆ ಇಲ್ಲ" ಎಂದರು. ತಾವು ಹೋಗುತ್ತಿರುವುದಾಗಿಯೂ, ವಾಪಸು ಬರುವುದಿಲ್ಲವೆಂದೂ ತಿಳಿಸಿದರು. ಇದಕ್ಕೆ ಕಾರಣ ದೇಹವನ್ನು ಆವರಿಸಿರುವ ಅನೇಕ ಗಂಭೀರ ರೋಗಗಳಿಗಿಂತ ಹೆಚ್ಚಾಗಿ ಇತರರ ನೋವು ತಮ್ಮ ಮನಸ್ಸಿನಲ್ಲಿ ಉಂಟುಮಾಡಿದ ವಿವರಿಸಲಾಗದ ದುಃಖಕ್ಕೆ ಪರಿಹಾರ ಕಂಡುಕೊಳ್ಳುವುದೆಂದೂ ವಿವರಿಸಿದರು. ಆದರೆ ತಾವು ಎಂದು ಹೋಗುವರೆಂಬುದನ್ನಾಗಲೀ ಎಲ್ಲಿಗೆ ಎಂಬುದನ್ನಾಗಲೀ ಹೇಳಲಿಲ್ಲ; ಜೊತೆಗೆ ಆವಶ್ಯಕವಲ್ಲದಿದ್ದರೂ ದೇಶವನ್ನು ಬಿಡಲು ಸರ್ಕಾರ ತಮಗಿನ್ನೂ ಪಾಸ್‌ಪೋರ್ಟ್ ನೀಡಿಲ್ಲವೆಂದೂ ಸೇರಿಸಿದರು. ಮಾಂಪಾಕ್ಸ್ ಇಪ್ಪತ್ತು ವರ್ಷಗಳ ಕಾಲ ತಮ್ಮ ಮೇಲೆ ಹರಿಸಿದ ವಿಶ್ವಾಸಕ್ಕೆ ಅಲ್ಲಿನ ಜನಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು. ನಾಗರಿಕ ಎಂಬುದನ್ನು ಬಿಟ್ಟು ಬೇರೆ ಯಾವುದೇ ಬಿರುದುಬಾವಲಿಯನ್ನು ತಮಗೆ ನೀಡದಿರುವಂತೆ ಕೇಳಿಕೊಂಡರು.

ಬದಲಾವಣೆ ಮಾಡಿದ ಟೇಡೆಯಮ್ ವಂದನೆಯ ಹಾಡನ್ನು ಹಾಡಲು ಜನಸಂದಣಿಯು ಸೇರಿದಾಗ, ಲ ಕಾನ್‌ಸೆಪ್ಸಿಯೋ ಚರ್ಚ್‌ನಲ್ಲಿ ಇನ್ನೂ ಅಂತ್ಯಸಂಸ್ಕಾರದ ವಾತಾವರಣವೇ ತುಂಬಿತ್ತು, ಅದರಲ್ಲಿ ಬಳಸಿದ್ದ ಹೂಗಳು ಮತ್ತು ಮೇಣದ ಬತ್ತಿಗಳ ವಾಸನೆಯು ಗಾಳಿಯಲ್ಲಿ ಇನ್ನೂ ಬೆರೆತುಕೊಂಡಿತ್ತು. ಪರಿವಾರದ ಉಳಿದವರ ಜೊತೆ ಕುಳಿತಿದ್ದ ಜೋಸೆ ಪೆಲಾಸಿಯೋಸ್‌ಗೆ ಪೀಠದಲ್ಲಿ ಜನರಲ್ ನೆಮ್ಮದಿಯಿಂದಿಲ್ಲದಿರುವುದನ್ನು ಗಮನಿಸಿದ. ಆದರೂ ಸುಂದರವಾದ ಸಿಂಹಸದೃಶ ತಲೆಯ ಮೇಯರ್ ಜನರಲ್‌ರ ಆಪ್ತವಲಯದಲ್ಲಿ ಪಕ್ಕದಲ್ಲಿಯೇ ಕುಳಿತಿದ್ದ. ಮಡ್ರೀಡ್‌ನ ಕೋರ್ಟಿನಲ್ಲಿ ದಾಂಧಲೆ ಮಾಡಿದ್ದ ಅಮೆರಿಕದ ಸುಂದರಿ ಬೆಂಘೂಮಿಯನ ವಿಧವೆ ಫ಼ರ್ನಾಂಡಾ ಆ ಸಮಾರಂಭದ ಉಸಿರುಕಟ್ಟಿಸುವ ವಾತಾವರಣದಿಂದ ಪಾರಾಗಲು ಜನರಲ್‌ರಿಗೆ ತನ್ನ ಕೈಯಲ್ಲಿದ್ದ ಶ್ರೀಗಂಧದ ಬೀಸಣಿಗೆಯನ್ನು ಕೊಟ್ಟಳು. ಹೆಚ್ಚು ಭರವಸೆಯಿಡದೆ ಅವರು ಅದನ್ನು ಆಚೀಚೆ

ಆಡಿಸತೊಡಗಿದರು; ಅದರ ಗಾಳಿಯ ಕಿರುದೆರೆಗಳೂ ಸಮಾಧಾನ ನೀಡದೆ ಶಕೆಯು ಅವರ ಉಸಿರಾಟಕ್ಕೇ ತೊಂದರೆ ಕೊಡತೊಡಗಿತು. ಆಗ ಮೇಯರ್‌ನ ಕಿವಿಯಲ್ಲಿ ಪಿಸುಗುಟ್ಟಿದರು:

"ನನ್ನ ನಂಬಿ, ನನಗೆ ಈ ಶಿಕ್ಷೆ ಯಾಕೆ?"

"ಜನರ ಪ್ರೀತಿಗೆ ನೀಡಬೇಕಾದ ಬೆಲೆ, ಮಹಾಸ್ವಾಮಿ" ಎಂದ ಮೇಯರ್.

"ಇದು ಪ್ರೀತಿಯಲ್ಲ, ಕೇವಲ ಕುತೂಹಲ ಅಂತ ದುಃಖದಿಂದ ಹೇಳಬೇಕಾಗಿದೆ."

ಟೇಡೆಯಮ್ ವಂದನೆಯ ಹಾಡು ಮುಗಿದಾಗ ನಸುಬಾಗಿ ಬೆಂಭೂಮಿಯನ ವಿಧವೆಗೆ ಗುಡ್ ಬೈ ಹೇಳಿದ ಜನರಲ್ ಬೀಸಣಿಗೆಯನ್ನು ವಾಪಸು ಮಾಡಿದರು. ಅದನ್ನು ಪುನಃ ಅವರಿಗೇ ಕೊಡಲು ಆಕೆ ಯತ್ನಿಸಿದಳು.

"ನಿಮ್ಮನ್ನು ಬಹುವಾಗಿ ಪ್ರೀತಿಸುವ ವ್ಯಕ್ತಿಯ ನೆನಪಾಗಿ ಇದನ್ನು ಇಟ್ಟುಕೊಳ್ಳುವ ಕೃಪೆ ತೋರಿ" ಎಂದು ಕೇಳಿಕೊಂಡಳು.

"ಸೆನೋರಾ, ದುಃಖದ ವಿಷಯವೆಂದರೆ, ನನ್ನ ಬದುಕಿನಲ್ಲಿ ನೆನಪಿಟ್ಟುಕೊಳ್ಳಬೇಕಾದಷ್ಟು ಕಾಲ ಉಳಿದಿಲ್ಲ" ಎಂದವನು ಉತ್ತರಿಸಿದ.

ಲ ಕಾನ್‌ಸೆಪ್ಸಿಯೋ ಚರ್ಚ್‌ನಿಂದ ಸ್ಯಾನ್ ಪೆಡ್ರೋ ಅಪಾಸಲ್ ಅಕಾಡೆಮಿಗೆ ಹೋಗುವ ದಾರಿಯಲ್ಲಿದ್ದ ಹೋಲಿ ವೀಕ್ ಮಂದಿರದಲ್ಲಿ ಉಸಿರುಕಟ್ಟಿಸುವ ಶಕೆಯಿಂದ ಸುಧಾರಿಸಿಕೊಳ್ಳಲು ಧರ್ಮಗುರು ಅವರಿಗೆ ಬಲವಂತ ಮಾಡಿದರು. ಅದು ಎರಡಂತಸ್ತಿನ ಒಂದು ಭವನ, ಜರೀಗಿಡ ಮತ್ತು ಪಿಂಕ್ ಗಿಡಗಳಿಂದಲೂ ಹಿತ್ತಿಲಿನಲ್ಲಿ ಹೊಳೆಯುವ ಹಣ್ಣುಬಿಡುವ ಮರಗಳಿಂದಲೂ ತುಂಬಿದ್ದ ಸನ್ಯಾಸಿಗೃಹ ಅದು. ಅದರ ಕಮಾನು ಚಾವಣಿಯ ಮೊಗಸಾಲೆಗಳು ಈ ತಿಂಗಳುಗಳಲ್ಲಿ ವಾಸಯೋಗ್ಯವಾಗಿರಲಿಲ್ಲ, ಅದಕ್ಕೆ ಕಾರಣ ರಾತ್ರಿಯ ಹೊತ್ತೂ ಬೀಸುವ ನದಿಯ ಅನಾರೋಗ್ಯಕರ ಗಾಳಿ. ಆದರೆ ವಿಶಾಲವಾದ ದಿವಾನಖಾನೆಯ ಪಕ್ಕದಲ್ಲಿಯೇ ಇದ್ದ ಕೋಣೆಗಳು ಮಾಗಿಕಾಲದಲ್ಲಿರುವಂತಹ ನೆರಳನ್ನು ನೀಡುವಂತೆ ದಪ್ಪವಾದ ಗಾರೆಗಚ್ಚಿನ ಗೋಡೆಗಳಿಂದ ನಿರ್ಮಿತವಾಗಿದ್ದವು.

ಎಲ್ಲ ಸಿದ್ಧತೆಗಳನ್ನೂ ಮಾಡಲು ಜೋಸೆ ಪೆಲಾಸಿಯೋಸ್ ಮೊದಲೇ ಅಲ್ಲಿಗೆ ಹೋಗಿದ್ದ. ಮಲಗುವ ಕೋಣೆಯ ಒರಟು ಗೋಡೆಗಳಿಗೆ ಹೊಸದಾಗಿ ಸುಣ್ಣ ಬಳಿಯಲಾಗಿತ್ತು, ಹೊರಗಡೆ ತೆರೆದಿದ್ದ ಹಸಿರು ಕದಗಳಿದ್ದ ಒಂದೇ ಕಿಟಕಿಯ ಮೂಲಕ ಮಂದ ಬೆಳಕು ಒಳಬರುತ್ತಿತ್ತು. ಹಿತ್ತಿಲ ತೋಟದ ಕಡೆಗಿದ್ದ ಕಿಟಕಿಯ ಕಡೆ ತಲೆಬದಿಗೆ ಬರುವಂತಿದ್ದ ಹಾಸಿಗೆಯನ್ನು ಅವರು ಕಾಲಬದಿಗೆ ಬರುವಂತೆ ಬದಲಾಯಿಸಲು ತಿಳಿಸಿದರು, ಇದರಿಂದಾಗಿ

ಜನರಲ್ ಮಲಗಿಕೊಂಡೇ ಮರಗಳಲ್ಲಿನ ಹಳದಿ ಪೇರಲಹಣ್ಣುಗಳನ್ನು ನೋಡುತ್ತ, ಅವುಗಳ ನರುಗಂಪನ್ನು ಆಸ್ವಾದಿಸಬಹುದಾಗಿತ್ತು.

ಜನರಲ್ ಫರ್ನಾಂಡೋನ ಭುಜಗಳನ್ನು ಅವಲಂಬಿಸಿ ನಡೆಯುತ್ತ ಬಂದರು, ಜೊತೆಯಲ್ಲಿ ಅಕಾಡೆಮಿಯ ರೆಕ್ಟರ್ ಆಗಿದ್ದ ಲ ಕಾನ್‌ಸೆಪ್ಸಿಯೋ ಚರ್ಚ್‌ನ ಧರ್ಮಗುರು ಇದ್ದರು. ಅವರು ಬಾಗಿಲ ಮೂಲಕ ಹಾದು ಬಂದ ಕೂಡಲೇ, ಕಿಟಕಿಯ ತಳದಲ್ಲಿದ್ದ ಪೇರಲ ಹಣ್ಣಿನ ಆಹ್ಲಾದಕರ ಪರಿಮಳ ಇಡೀ ಕೋಣೆಯನ್ನು ತುಂಬಿಕೊಂಡಿದ್ದರಿಂದ ಅಚ್ಚರಿಗೊಂಡು ತಮ್ಮ ಬೆನ್ನನ್ನು ಗೋಡೆಗೆ ಆನಿಸಿ ನಿಂತುಕೊಂಡರು. ಕಣ್ಣುಗಳನ್ನು ಮುಚ್ಚಿಕೊಂಡು, ಉಸಿರುಕಟ್ಟಿಸುವ ಆ ಕಡು ಸುಗಂಧವನ್ನು ನೀಳವಾಗಿ ತೆಗೆದುಕೊಳ್ಳಲಾರಂಭಿಸಿದರು. ಆನಂತರ ಕೋಣೆಯಲ್ಲೆಲ್ಲ ಸೂಕ್ಷ್ಮವಾಗಿ ಕಣ್ಣಾಡಿಸಿ ಅಲ್ಲಿನ ಎಲ್ಲವೂ ಹೊಸ ಆವಿಷ್ಕಾರವೇನೋ ಎಂಬಂತೆ ಪರಿಶೀಲಿಸಿದ.ರು ಅಲ್ಲಿ ಮೇಲ್ಕಟ್ಟಿನ ಮಂಚದೊಡನೆ ಮಹಾಗನಿ ಮರದಿಂದ ಮಾಡಿದ ಕಪಾಟು, ಅಮೃತಶಿಲೆಯ ಹಾಸುಗಲ್ಲಿದ್ದ – ಅದೂ ಮಹಾಗನಿಯಂದ ಮಾಡಿದ್ದೇ – ಮೇಜು ಹಾಗೂ ಕೆಂಪು ವೆಲ್ವೆಟ್ ಹೊದಿಸಿದ್ದ ಆರಾಮಕುರ್ಚಿಗಳಿದ್ದವು. ಕಿಟಕಿಯ ಪಕ್ಕದ ಗೋಡೆಯ ಮೇಲೆ ರೋಮನ್ ಅಂಕಿಗಳಿದ್ದ ಅಷ್ಟಕೋನಾಕೃತಿಯ ಗಡಿಯಾರವಿತ್ತು, ಆದರೆ ಅದು ಒಂದು ಗಂಟೆ ಏಳು ನಿಮಿಷಕ್ಕೆ ನಿಂತುಹೋಗಿತ್ತು.

"ಈ ಒಂದಾದರೂ ಹಿಂದಿನಂತೆಯೇ ಇದೆಯಲ್ಲ" ಎಂದರು ಜನರಲ್.

ಧರ್ಮಗುರುವಿಗೆ ಆಶ್ಚರ್ಯವಾಯಿತು.

"ಕ್ಷಮಿಸಿ, ಮಹಾಸ್ವಾಮಿ. ನನಗೆ ತಿಳಿದ ಮಟ್ಟಿಗೆ ಹಿಂದೆ ತಾವೆಂದೂ ಇಲ್ಲಿಗೆ ಬಂದೇ ಇರಲಿಲ್ಲವಲ್ಲ" ಎಂದರು.

ಜೋಸೆ ಪೆಲಾಸಿಯೋಸ್‌ಗೆ ಕೂಡ ಆಶ್ಚರ್ಯವೆನಿಸಿತ್ತು. ಹಿಂದೆಂದೂ ಅವರು ಅಲ್ಲಿಗೆ ಬಂದಿರಲಿಲ್ಲ, ಆದರೆ ಜನರಲ್‌ರಿಗೆ ಮಾತ್ರ ಸ್ಪಷ್ಟವಾಗಿ ನೆನಪಿತ್ತು, ಅನೇಕ ವಿಷಯಗಳನ್ನು ಖಚಿತವಾಗಿ ಹೇಳ ಎಲ್ಲರನ್ನೂ ದಂಗುಬಡಿಸಿದರು. ಆದರೆ ಕೊನೆಯಲ್ಲಿ ತಮ್ಮ ಎಂದಿನ ವ್ಯಂಗ್ಯದಿಂದ "ಪ್ರಾಯಶಃ ಅದು ಹಿಂದಿನ ಜನ್ಮದ್ದು. ಎಷ್ಟೇ ಆಗಲಿ, ಬಹಿಷ್ಕೃತನಾದ ವ್ಯಕ್ತಿಯೊಬ್ಬನ ಸೂರಿನಡಿ ನಡೆದಾಡಬಹುದಾದ ಈ ನಗರದಲ್ಲಿ ಏನು ಬೇಕಾದರೂ ಆಗಬಹುದಲ್ಲವೇ" ಎಂದ.

ಸ್ವಲ್ಪ ಹೊತ್ತಿನ ಬಳಿಕ ಒಂದು ಸಿಡಿಲು ಬಡಿದು ನಗರವನ್ನು ತಲ್ಲಣಗೊಳಿಸಿತು. ಇದರಿಂದಾಗಿ ಸ್ವಾಗತದ ಭರಾಟೆಯಿಂದ ಜನರಲ್ ಕೊಂಚ ಚೇತರಿಸಿಕೊಳ್ಳಲು ಸಾಧ್ಯವಾಯಿತು. ನೆರಳು ಪೇರಲದ ಸುಗಂಧಗಳಿಂದ ಕೂಡಿದ್ದ ಆ ಕೋಣೆಯಲ್ಲಿ ಉಡುಪಿನ ಸಮೇತ ಮಂಚದ ಮೇಲೆ ಉರುಳಿ

ಕಣ್ಣು ಮುಚ್ಚಿಕೊಂಡು ಮಲಗಿದಂತೆ ನಟಿಸಿದರು; ಆಮೇಲೆ ಗಲಾಟೆ ಮುಗಿದು ಪ್ರಶಾಂತ ವಾತಾವರಣ ಉಂಟಾಗಿ ವಾಸ್ತವವಾಗಿಯೂ ಅವರನ್ನು ನಿದ್ದೆ ಆವರಿಸಿತು. ಜೋಸೆ ಪೆಲಾಸಿಯೋಸ್‌ಗೆ ಇದು ತಿಳಿದದ್ದು ನಿದ್ದೆಯಲ್ಲಿ ಅವರು ತಮ್ಮ ಯೌವನದ ಮಾತುಗಾರಿಕೆ ಮತ್ತು ಕಂಚಿನ ಕಂಠದಿಂದ ಕನವರಿಸಿಕೊಳ್ಳಲು ಪ್ರಾರಂಭಿಸಿದಾಗ. ಈಗ ತಮ್ಮದಲ್ಲದಿದ್ದರೂ ನಾಶವಾಗಿದ್ದ ಕ್ಯಾರಕಾಸ್ ನಗರದ ಬಗ್ಗೆ, ಅದರ ಬೀದಿಗಳ ಗೋಡೆಗಳ ಮೇಲೆ ತಮ್ಮ ವಿರುದ್ಧ ಬರೆದಿದ್ದ ಮಾತುಗಳು ಹಾಗೂ ಎಲ್ಲಡೆ ತುಂಬಿಕೊಂಡಿದ್ದ ಮಾನವ ಹೇಸಿಗೆಯ ಬಗ್ಗೆ ಮಾತನಾಡಿಕೊಂಡರು. ಕಾಣದಿರುವ ಹಾಗೆ ಕೋಣೆಯ ಮೂಲೆಯೊಂದರಲ್ಲಿ ಆರಾಮ ಕುರ್ಚಿಯಲ್ಲಿ ಕುಳಿತ ಜೋಸೆ ಪೆಲಾಸಿಯೋಸ್ ಜನರಲ್‌ರ ಕನವರಿಕೆಯ ಮಾತುಗಳನ್ನು ಪರಿವಾರದವರ ಹೊರತು ಬೇರಾರೂ ಕೇಳಿಸಿಕೊಳ್ಳದಂತೆ ಎಚ್ಚರ ವಹಿಸಿದ. ಅರ್ಧ ತೆರೆದಿದ್ದ ಬಾಗಿಲಿನ ಮೂಲಕ ಕರ್ನಲ್ ವಿಲ್ಸನ್‌ಗೆ ಸನ್ನೆ ಮಾಡಿ ತೋಟದಲ್ಲಿ ಅಡ್ಡಾಡುತ್ತಿದ್ದ ರಕ್ಷಣಾ ಪಡೆಯ ಸೈನಿಕರನ್ನು ದೂರ ಕಳಿಸಲು ಸೂಚಿಸಿದ.

"ಇಲ್ಲಿ ಯಾರೂ ನಮ್ಮನ್ನು ಇಷ್ಟಪಡೋದಿಲ್ಲ, ಕ್ಯಾರಕಾಸ್‌ನಲ್ಲಿ ಯಾರೂ ನಮ್ಮ ಮಾತನ್ನು ಕೇಳೋದಿಲ್ಲ. ಅದೆಲ್ಲ ಮುಗಿದ ಅಧ್ಯಾಯ" ಎಂದು ಜನರಲ್ ನಿದ್ದೆಯಲ್ಲಿ ಬಡಬಡಿಸಿದರು.

ಕಹಿ ವಿಷಾದದಿಂದ ತಮ್ಮ ಹಿಂದಿನ ವೈಭವವನ್ನು ಛಿದ್ರಗೊಳಿಸಿ ಸಾವಿನ ಗಾಳಿ ಹೊತ್ತೊಯ್ಯುತ್ತಿರುವ ವಿಷಯವು ಕನವರಿಕೆಯಲ್ಲಿ ಮುಂದುವರಿದಿತ್ತು. ಒಂದು ಗಂಟೆಯ ಹೊತ್ತು ಈ ಕನವರಿಕೆ ಮುಂದುವರಿದು, ಮೊಗಸಾಲೆಯ ಗಲಾಟೆ ಹಾಗೂ ಯಾರದೋ ದರ್ಪಿಷ್ಟ ಗಡಸು ಧ್ವನಿ ಅವರನ್ನು ಎಚ್ಚರಗೊಳಿಸಿತು. ಕಣ್ಣು ಮುಚ್ಚಿಕೊಂಡೇ ಎಚ್ಚರಗೊಂಡ ಧ್ವನಿಯಲ್ಲಿ, "ಏನು ದರಿದ್ರ ನಡೀತಾ ಇದೆ ಇಲ್ಲಿ?" ಎಂದು ಇದ್ದಕ್ಕಿದ್ದಂತೆ ಘೂಂಕರಿಸಿದರು.

ನಡೆಯುತ್ತಿದ್ದುದೆಂದರೆ, ಮೊನಚು ಮತ್ತು ಧೈರ್ಯಗಳಿಂದ ಕೂಡಿದ ವಿಮೋಚನಾ ಹೋರಾಟದ ಹಿರಿಯ ಯೋಧ ಜನರಲ್ ಲೊರೆಂಝೋ ಕ್ಯಾರ್‌ಕೆಮೋ ಸಂದರ್ಶನದ ನಿಗದಿತ ಅವಧಿಗೆ ಮುಂಚೆಯೇ ಜನರಲ್ ಅವರನ್ನು ಕಾಣಲು ನುಗ್ಗಿಕೊಂಡು ಬಂದಿದ್ದು. ಶಸ್ತ್ರದಳದ ಲೆಫ್ಟಿನೆಂಟ್ ಒಬ್ಬನಿಗೆ ತನ್ನ ಕಿರುಗತ್ತಿಯಿಂದ ಹೊಡೆದು, ಆಮೇಲೆ ಕರ್ನಲ್ ವಿಲ್ಸನ್‌ನನ್ನು ಪಕ್ಕಕ್ಕೆ ತಳ್ಳಿ ಅವನು ಬಂದಿದ್ದ. ಅವನು ಬಾಗಿದ್ದು ಅಲೌಕಿಕ ಶಕ್ತಿಯ ಸಂಕೇತವಾದ ಧರ್ಮಗುರುವಿಗೆ ಮಾತ್ರ, ಅವರೇ ತಡೆಯೊಡ್ಡದೆ ಬದಿಯ ಕಚೇರಿಗೆ ಕರೆತಂದಿದ್ದರು. ವಿಲ್ಸನ್ ಈ ವಿಷಯ ತಿಳಿಸಿದಾಗ, ಜನರಲ್ ಕೋಪದಿಂದ ಕೂಗಾಡಿದರು:

"ನಾನು ಸತ್ತು ಹೋದೆನೆಂದು ಕ್ಯಾರ್‌ಕೆಮೋಗೆ ಹೇಳು! ಅಷ್ಟೇ, ನಾನು ಸತ್ತೆ ಅಂತ ಅವನಿಗೆ ಹೋಗಿ ಹೇಳು!"

ಗುಲ್ಲೆಬ್ಬಿಸಿದ್ದ ಆ ಯೋಧನನ್ನು ಕಾಣಲು ವಿಲ್ಸನ್ ಬದಿಯ ಕಚೇರಿಗೆ ಹೋದ. ಅವನು ಸಂದರ್ಭಕ್ಕೆ ತಕ್ಕಂತೆ ಪೆರೇಡ್ ಸಮವಸ್ತ್ರ ಧರಿಸಿ, ವೀರ ಪದಕಗಳ ರಾಶಿಯನ್ನು ಮೈಮೇಲೆ ಹೇರಿಕೊಂಡು ಬಂದಿದ್ದ. ಅಷ್ಟು ಹೊತ್ತಿಗೆ ಅವನ ದರ್ಪದ ಭರ ಇಳಿದಿತ್ತು, ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು.

"ಬೇಡ ವಿಲ್ಸನ್, ಜನರಲ್‌ರ ಮಾತುಗಳನ್ನು ಹೇಳಬೇಡಿ, ನನಗೆ ಎಲ್ಲ ಕೇಳಿಸಿತು."

ಜನರಲ್ ಕಣ್ಣು ಬಿಟ್ಟಾಗ ಕಾಣಿಸಿದ್ದು ಒಂದು ಗಂಟೆ ಏಳು ನಿಮಿಷ ತೋರಿಸುತ್ತಿದ್ದ ಗಡಿಯಾರ. ಅದಕ್ಕೆ ಕೀಲಿಕೊಡುವಂತೆ ಜೋಸೆ ಪೆಲಾಸಿಯೋಸ್‌ಗೆ ಸೂಚಿಸಿದರು; ಅವನು ನೆನಪಿನಿಂದ ಗಂಟೆ ಹೊಂದಿಸಿ ತನ್ನೆರಡು ಕೈಗಡಿಯಾರಗಳೊಂದಿಗೆ ಹೋಲಿಸಿ ಸರಿಪಡಿಸಿದ. ಕೊಂಚ ಸಮಯದ ಬಳಿಕ ಫ಼ರ್ನಾಂಡಾ ಬ್ಯಾರಿಗಾ ಒಳಗೆ ಬಂದು ಸ್ವಲ್ಪ ಬೆಂದ ತರಕಾರಿ ತಿನ್ನುವಂತೆ ಜನರಲ್‌ರಿಗೆ ಒತ್ತಾಯ ಮಾಡಿದಳು. ಹಿಂದಿನ ದಿನದಿಂದಲೂ ಏನೂ ತಿಂದಿರದಿದ್ದರೂ ಅವರು ಒಲ್ಲೆನೆಂದರು, ಆದರೆ ತಿನಿಸನ್ನು ಕಚೇರಿಗೇ ತರಬೇಕೆಂದು ಆಜ್ಞಾಪಿಸಿ ಸಂದರ್ಶನದ ಮಧ್ಯೆಯೇ ತಿನ್ನುವುದಾಗಿ ತಿಳಿಸಿದರು. ಈ ಮಧ್ಯೆ ಆಮಿಷಕ್ಕೊಳಗಾಗಿ ರೆಂಬೆಯಲ್ಲಿ ಜೋತು ಬಿದ್ದಿದ್ದ ಒಂದು ಪೇರಲ ಹಣ್ಣನ್ನು ಕಿತ್ತುಕೊಂಡರು. ಅದರ ಸುವಾಸನೆ ಒಂದು ಕ್ಷಣ ಅವರನ್ನು ತಲ್ಲೀನಗೊಳಿಸಿತು, ಆತುರದಿಂದ ಕಚ್ಚಿ ಮಗುವಿನಂತೆ ಖುಷಿಯಿಂದ ಅಗಿದರು, ಹಣ್ಣಿನ ಎಲ್ಲ ಮಗ್ಗುಲುಗಳನ್ನೂ ರುಚಿ ನೋಡಿದರು, ಏನನ್ನೋ ನೆನೆಸಿಕೊಂಡು ನೀಳವಾಗಿ ಉಸಿರು ಬಿಡುತ್ತ ನಿಧಾನವಾಗಿ ನುಂಗುತ್ತಿದ್ದರು. ಆನಂತರ ಜೋಲಿಮಂಚದ ಮೇಲೆ ಕುಳಿತು ತಮ್ಮ ಮಂಡಿಗಳ ನಡುವೆ ಹಣ್ಣುಗಳಿದ್ದ ಒಂದು ರೆಂಬೆಯನ್ನು ಇರುಕಿಸಿಕೊಂಡು ಉಸಿರು ಬಿಡಲೂ ಅವಕಾಶವಿಲ್ಲದಂತೆ ಒಂದೊಂದಾಗಿ ಎಲ್ಲವನ್ನೂ ತಿಂದು ಮುಗಿಸಿದರು. ಒಂದು ಹಣ್ಣು ಮಾತ್ರ ಉಳಿದಿದ್ದು ನೋಡಿ ಜೋಸೆ ಪೆಲಾಸಿಯೋಸ್ ಅಚ್ಚರಿಯಿಂದ,

"ಹೀಗಾದರೆ ಸಾಯ್ತೀವಿ, ಅಷ್ಟೆ" ಎಂದ.

ಜನರಲ್ ತಮಾಷೆಯಿಂದ ಅವನನ್ನು ಅಣಕಿಸುವ ದನಿಯಲ್ಲಿ, "ಈಗ ಇರೋದಕ್ಕೂ ಹೆಚ್ಚು ಸಾಯೋದೆಲ್ಲಿ?" ಎಂದು ಕೇಳಿದರು.

ನಿಗದಿಯಾಗಿದ್ದ ಮೂರೂ ಮೂವತ್ತಕ್ಕೆ ಸರಿಯಾಗಿ, ಸಂದರ್ಶನಕ್ಕೆ ಕಚೇರಿಯೊಳಕ್ಕೆ ಇಬ್ಬಿಬ್ಬರಂತೆ ಬಿಡಲು ಆದೇಶಿಸಿದರು; ಮತ್ತೊಬ್ಬನನ್ನು ಮಾತಾಡಿಸಬೇಕಾಗಿದೆಯೆಂಬುದರಿಂದ ಮೊದಲಿನವನ ಸಂದರ್ಶನವನ್ನು ಬೇಗ ಮುಗಿಸುವುದು ಅವರ ಉಪಾಯ. ಮೊದಲಿಗರಲ್ಲಿ ಒಬ್ಬನಾಗಿದ್ದ ಡಾ.

ನಿಕಾಸಿಯೋ ಡೆಲ್ ವಾಲೆಯು ಗಾಜಿನ ಕದಗಳಿದ್ದ ಕಿಟಕಿಯ ಕಡೆ ಬೆನ್ನುಮಾಡಿ ಕುಳಿತಿರುವುದನ್ನು ಗಮನಿಸಿದರು; ಅದರ ಮೂಲಕ ಹಿತ್ತಿಲಿನ ತೋಟ ಮತ್ತು ಅದರಾಚೆಗಿನ ಜವುಗು ನೆಲವೆಲ್ಲ ಕಾಣುತ್ತಿತ್ತು. ಜನರಲ್ ಕೈಯಲ್ಲಿ ಫರ್ನಾಂಡಾ ಬ್ಯಾರಿಗಾ ತಂದಿದ್ದ ಬೆಂದ ತರಕಾರಿಗಳಿದ್ದ ಪ್ಲೇಟ್ ಇತ್ತು, ಹೊಟ್ಟೆ ಬಿರಿಯ ಪೇರಲ ಹಣ್ಣುಗಳನ್ನು ತಿಂದಿದ್ದುದರಿಂದ ಅದರ ರುಚಿ ನೋಡಲೂ ಇಷ್ಟವಾಗಲಿಲ್ಲ. ಆನಂತರ ಡಾ. ಡೆಲ್ ವಾಲೆ ತನ್ನ ಸಂದರ್ಶನವನ್ನು ಅಲಂಕಾರರಹಿತ ಭಾಷೆಯಲ್ಲಿ ಸಂಕ್ಷಿಪ್ತವಾಗಿ ಹೀಗೆ ನಿರೂಪಿಸಿದ: "ಅವನ ಬೇಳೆ ಬೆಂದಿತು." ಸಂದರ್ಶನಕ್ಕೆ ಬಂದ ಪ್ರತಿಯೊಬ್ಬನೂ ತನ್ನದೇ ರೀತಿಯಲ್ಲಿ ಇದನ್ನು ಒಪ್ಪಿದ. ಅವರ ಶಕ್ತಿಹೀನತೆಯಿಂದ ಮನಕರಗಿದವರೂ ಅವರ ಬಗ್ಗೆ ಕರುಣೆ ತೋರಲಿಲ್ಲ: ಅಕ್ಕಪಕ್ಕದ ಹಳ್ಳಿಗಳಿಗೆ ಬಂದು ಮಕ್ಕಳಗೆ ಧರ್ಮಪಿತನಾಗಬೇಕೆಂದೋ, ಸಾರ್ವಜನಿಕ ಕೆಲಸಗಳನ್ನು ಉದ್ಘಾಟಿಸಬೇಕೆಂದೋ, ಸರ್ಕಾರದ ಉಪೇಕ್ಷೆಯ ಕಾರಣದಿಂದಾಗಿ ಜನರು ಅನುಭವಿಸುತ್ತಿದ್ದ ಬಡತನವನ್ನು ಕಣ್ಣಾರೆ ಕಾಣಬೇಕೆಂದೋ ಆಹ್ವಾನಿಸುತ್ತಿದ್ದರು.

ಒಂದು ಗಂಟೆಯ ಬಳಿಕ ಪೇರಲ ಹಣ್ಣುಗಳಿಂದಾಗಿ ಅವರಲ್ಲಿ ವಾಕರಿಕೆ ಮತ್ತು ಹೊಟ್ಟೆ ನುಲುಚುವಿಕೆ ಪ್ರಾರಂಭವಾಯಿತು. ಸಂದರ್ಶನಕ್ಕಾಗಿ ಬೆಳಿಗ್ಗೆಯಿಂದ ಕಾದಿದ್ದ ಪ್ರತಿಯೊಬ್ಬರನ್ನೂ ಕಾಣಬೇಕೆಂದು ಬಯಸಿದ್ದರೂ ಅವರು ಸಂದರ್ಶನವನ್ನು ಕೊನೆಗೊಳಿಸಬೇಕಾಯಿತು. ತಮಗೆ ಕಾಣಿಕೆ ನೀಡಲೆಂದು ಜನರು ತಂದಿದ್ದ ಕರುಗಳು, ಮೇಕೆಗಳು, ಕೋಳಿಗಳು ಮತ್ತಿತರ ವಸ್ತುಗಳನ್ನು ಇಡಲು ಅಂಗಳದಲ್ಲಿ ಜಾಗವೇ ಇರಲಿಲ್ಲ. ಗದ್ದಲವನ್ನು ಅಡಗಿಸಲು ಶಸ್ತ್ರಸಜ್ಜಿತ ಸೈನಿಕರು ಮಧ್ಯಪ್ರವೇಶಿಸಬೇಕಾಯಿತು, ಆದರೆ ಸಂಜೆಯ ಹೊತ್ತಿಗೆ ಯಥಾಸ್ಥಿತಿ ಮರಳಿತು. ಇದಕ್ಕೆ ಕಾರಣ ದೇವರು ಕಳಿಸಿದಂತೆ ಬಂದ ಮಳೆ; ಅದರಿಂದಾಗಿ ಗಾಳಿ ಶುಭ್ರವಾಯಿತು, ಪ್ರಶಾಂತತೆ ಗಾಢವಾಯಿತು.

ಜನರಲ್ ಖಡಾಖಂಡಿತವಾಗಿ ನಿರಾಕರಿಸಿದ್ದರೂ, ಹತ್ತಿರದ ಮನೆಯೊಂದರಲ್ಲಿ ಅವರ ಗೌರವಾರ್ಥವಾಗಿ ಒಂದು ಭೋಜನಕೂಟ ನಾಲ್ಕು ಗಂಟೆಗೆ ಏರ್ಪಾಡಾಗಿತ್ತು. ಆದರೆ ಅದು ಅವರಿಲ್ಲದೆಯೇ ನಡೆಯಬೇಕಾಯಿತು; ಏಕೆಂದರೆ ತಿಂದಿದ್ದ ಪೇರಲಹಣ್ಣುಗಳ ವಾಯುಪ್ರಕೃತಿಯ ಮಹಿಮೆಯು ಅವರ ಸ್ಥಿತಿಯನ್ನು ರಾತ್ರಿ ಹನ್ನೊಂದರವರೆಗೂ ಗಂಭೀರವಾಗಿರಿಸಿತ್ತು. ಅವರು ಜೋಲಿಮಂಚದಲ್ಲಿಯೇ ಒರಗಿದ್ದರು; ಹೊಟ್ಟೆಯಲ್ಲಿ ಚುಚ್ಚುವ ನೋವು, ಹೊರಬರುವ ಗಬ್ಬುವಾಸನೆಯ ಹೂಸು, ಪ್ರಾಣವನ್ನು ಹೊಟ್ಟೆಯ ಗಾಣದಲ್ಲಿ ತಿರುಚುವ ಹಾಗೆ ಅನುಭವ. ಧರ್ಮಗುರುಗಳು ಅವರಿಗಾಗಿ ಅಕಾಡೆಮಿಯ ಔಷಧಕಾರ ತಯಾರಿಸಿದ್ದ

ಮದ್ದನ್ನು ತಂದುಕೊಟ್ಟರು ಆದರೆ ಜನರಲ್ ಅದನ್ನು ತೆಗೆದುಕೊಳ್ಳಲು ನಿರಾಕರಿಸಿದರು. “ಒಂದು, ವಮನಕಾರಿ ಔಷಧಿಯನ್ನು ಕುಡಿದರೆ ಶಕ್ತಿಗುಂದತ್ತೆ, ಎರಡನೆಯದು ನನ್ನನ್ನು ಸೈತಾನ ಹೊತ್ತುಕೊಂಡು ಹೋಗೋ ಹಾಗೆ ಮಾಡತ್ತೆ” ಎಂದರು. ಆದದ್ದಾಗಲಿ ಎಂದು ಸುಮ್ಮನೆ ಬಿದ್ದುಕೊಂಡಿದ್ದರು, ತಣ್ಣನೆಯ ಬೆವರು ಮೂಳೆಯಲ್ಲೆಲ್ಲ ಚಳಿ ತುಂಬಿತು. ಅವರಲ್ಲಿ ಕಿಂಚಿತ್ ಉಲ್ಲಾಸವನ್ನು ತುಂಬಿದ್ದುದೆಂದರೆ, ತಮಗಾಗಿ ಏರ್ಪಾಟಾಗಿ ಆದರೆ ತಾವಿಲ್ಲದೆ ನಡೆಯುತ್ತಿದ್ದ ಭೋಜನಕೂಟದ ಮನೆಯಿಂದ ಗಾಳಿಯಲ್ಲಿ ತೇಲಿ ಬರುತ್ತಿದ್ದ ಮಧುರವಾದ ತಂತೀವಾದ್ಯ ಸಂಗೀತ. ಅವರ ಹೊಟ್ಟೆಯಲ್ಲಿನ ಪ್ರವಾಹದ ಭರಾಟೆ ನಿಧಾನವಾಗಿ ಕಡಿಮೆಯಾಗುತ್ತಿತ್ತು, ನೋವು ಹೋಯಿತು, ಸಂಗೀತ ನಿಂತಿತು, ಅವರು ಶೂನ್ಯದಲ್ಲಿ ತೇಲಾಡುತ್ತಿದರ್ರು.

ಮಾಂಪಾಕ್ಸ್‌ಗೆ ಅವರು ನೀಡಿದ್ದ ಕಳೆದ ಭೇಟಿಯೇ ಕೊನೆಯದಾಗುವಂತಿತ್ತು. ಪ್ರತ್ಯೇಕತೆಯ ಕನಸನ್ನು ತೊರೆಯಲು ನಿರಾಕರಿಸುತ್ತಿದ್ದ ಜನರಲ್ ಜೋಸೆ ಆಂಟೋನಿಯೋ ಪಯೆಝ್ ಜೊತೆಗೆ ತಮ್ಮ ಮಾಂತ್ರಿಕ ವ್ಯಕ್ತಿತ್ವದಿಂದ ತುರ್ತು ಸಂಧಾನವೊಂದನ್ನು ಪೂರ್ಣಗೊಳಿಸಿ ಕ್ಯಾರಕಾಸ್‌ನಿಂದ ಜನರಲ್ ವಾಪಸಾಗುತ್ತಿದ್ದ. ಸಟಾಂಡರ್ ಜೊತೆಗಿನ ಅವರ ದ್ವೇಷದ ವಿಷಯ ಆಗ ಎಲ್ಲರಿಗೂ ತಿಳಿದ ಮಾತಾಗಿತ್ತು; ಅವರು ಎಷ್ಟು ದೂರ ಹೋಗಿದರೆ'ಂದರೆ ಜನರಲ್‌ರ ಹೃದಯವನ್ನಾಗಲೀ ನೈತಿಕತೆಯನ್ನಾಗಲೀ ನಂಬದೆ ಅವರಿಂದ ಬಂದ ಪತ್ರಗಳನ್ನು ಸ್ವೀಕರಿಸಲೂ ನಿರಾಕರಿಸುತ್ತಿದ್ದ. “ನನ್ನ ಸ್ನೇಹಿತನೆಂದು ಕರೆದುಕೊಳ್ಳುವ ಕಷ್ಟದಿಂದ ನೀವು ಪಾರಾಗಿರಿ” ಎಂದು ಅವನು ಬರೆದಿದ್ದ. ಸಟಾಂಡರ್‌ವಾದಿಗಳ ಆಗಿನ ವಿದ್ವೇಷಕ್ಕೆ ಇದ್ದ ತಕ್ಷಣದ ಕಾರಣವೆಂದರೆ, ತಮ್ಮ ಎಲ್ಲ ಕೃತ್ಯಗಳ ಹಿಂದಿನ ಪ್ರೇರಣೆಯೆಂದರೆ ನಗರದ ಬಿಡುಗಡೆ ಮತ್ತು ವೈಭವ ಎಂದು ಕ್ಯಾರಕಾಸ್‌ನ ಜನತೆಯ ಮುಂದೆ ಜನರಲ್ ಹಿಂದೆ ಮುಂದೆ ನೋಡದೆ ಘೋಷಿಸಿದ್ದು. ನ್ಯೂ ಗ್ರನಡಾಗೆ ಮರಳುವಾಗ ಕಾರ್ಟಾಜೆನ ಮತ್ತು ಮಾಂಪಾಕ್ಸ್ ಅವರು ಪರಿಸ್ಥಿತಿಯನ್ನು ತಿಳಿಗೊಳಿಸಲು ಸೂಕ್ತ ಮಾತಿನ ಮೂಲಕ ಪ್ರಯತ್ನಿಸಿದ್ದರು: “ಕ್ಯಾರಕಾಸ್ ನನಗೆ ಜೀವವನ್ನು ಕೊಟ್ಟಿದ್ದರೆ, ನೀವು ನನಗೆ ವೈಭವವನ್ನು ನೀಡಿದ್ದೀರಿ.” ಆದರೆ ಆ ಮಾತು ಸಟಾಂಡರ್‌ವಾದಿಗಳ ಉದ್ರೇಕಕಾರಿ ಮಾತುಗಳ ದಾಳಿಯನ್ನು ಎದುರಿಸುವ ಆಲಂಕಾರಿಕ ಗುರಾಣಿಯಂತೆ ಕಂಡಿತ್ತು.

ಅಂತಿಮ ವಿನಾಶವನ್ನು ನಿವಾರಿಸುವ ಪ್ರಯತ್ನವಾಗಿ ಜನರಲ್ ಸಂಟಾ ಫ಼ ದ ಬೊಗೋಟಕ್ಕೆ ಒಂದು ಸೈನಿಕ ತುಕಡಿಯೊಂದಿಗೆ ವಾಪಸಾಗುತ್ತಿದ್ದರು; ಮಾರ್ಗಮಧ್ಯದಲ್ಲಿ ಮತ್ತಷ್ಟು ಮಂದಿ ಸೈನಿಕರು

ತಮ್ಮೊಡನೆ ಸೇರಿಕೊಳ್ಳುವರೆಂಬ ನಿರೀಕ್ಷೆ ಅವರದಾಗಿತ್ತು, ರಾಷ್ಟ್ರದ ಐಕ್ಯತೆಗೆ ಮತ್ತೊಮ್ಮೆ ಹೋರಾಟವನ್ನು ಆರಂಭಿಸುವ ಆಸೆ ಅವರದು. ಅದು ತಮ್ಮ ನಿರ್ಧಾರಕ ಗಳಿಗೆಯೆಂದು ಅವರು ಹೇಳಿದ್ದರು, ವೆನಿಜ಼ೂಲವು ಪ್ರತ್ಯೇಕವಾಗುವುದನ್ನು ತಪ್ಪಿಸಲು ಹೊರಟಾಗ ಅವರು ಹೇಳಿದ್ದು ಇಷ್ಟು. ಇನ್ನೊಂದಷ್ಟು ಆಳವಾಗಿ ಆಲೋಚಿಸಿದ್ದರೆ, ಕಳೆದ ಇಪ್ಪತ್ತು ವರ್ಷಗಳಲ್ಲಿ ಯಾವುದೇ ಕ್ಷಣವೂ ನಿರ್ಧಾರಕವಾಗಿರಲಿಲ್ಲವೆಂಬ ಅಂಶ ಅವರಿಗೇ ಮನದಟ್ಟಾಗುತ್ತಿತ್ತು. “ಇಡೀ ಚರ್ಚ್, ಇಡೀ ಸೈನ್ಯ, ರಾಷ್ಟ್ರದ ಬಹುತೇಕ ಜನರು ನನ್ನ ಕಡೆಗಿದ್ದಾರೆ” ಎಂದು ಆ ದಿನವನ್ನು ನೆನಸಿಕೊಂಡು ಅವರು ಆನಂತರ ಬರೆದಿದ್ದರು. ಆದರೆ ಈ ಎಲ್ಲ ಅನುಕೂಲಗಳ ನಡುವೆಯೂ, ದಕ್ಷಿಣವನ್ನು ಬಿಟ್ಟು ಉತ್ತರದ ಕಡೆಗೆ ಮತ್ತೆ ಅದಕ್ಕೆ ವಿರುದ್ಧವಾಗಿ ಅವರು ಹೊರಟಾಗ, ತಾವು ಬಿಟ್ಟು ಬಂದಿದ್ದ ಭಾಗವು ಹೊಸ ಅಂತಃಕಲಹದಿಂದ ನಾಶಗೊಂಡು ಕೈಬಿಟ್ಟುಹೋಗುತ್ತಿದ್ದವು ಎಂಬುದು ಮತ್ತೆ ಮತ್ತೆ ಸಾಬೀತಾಯಿತು ಎಂದು ಹೇಳಿದ್ದರು. ಅದು ಅವರ ಹಣೆಯಬರಹ.

ಅವನ ಹೋರಾಟದ ಸೋಲುಗಳಿಗೆ ಕಾರಣ ರಾತ್ರಿಯ ಅತಿರೇಕಗಳು ಎಂದು ಸಟಾಂಡರ್‌ವಾದಿಗಳ ಪರವಾಗಿದ್ದ ಪತ್ರಿಕೆಗಳು ಬರೆದವು. ಅವರ ಘನತೆಯನ್ನು ಕೀಳುಗೈಯಲೆಂದು ಸೃಷ್ಟಿಸಿದ್ದ ಇನ್ನೂ ಅನೇಕ ಸುಳ್ಳುಗಳಲ್ಲಿ, ಬೊಯೋಕ ಕದನದಲ್ಲಿ ಸೈನ್ಯಾಧಿಪತ್ಯವನ್ನು ವಹಿಸಿದ್ದವರು ಅವರಲ್ಲ, ಜನರಲ್ ಸಟಾಂಡರ್, ೧೮೧೯ ನೇ ಆಗಸ್ಟ್ ಏಳರಂದು ಸ್ವಾತಂತ್ರ್ಯವು ಅಲ್ಲಿ ಘೋಷಣೆಗೊಂಡಾಗ ಜನರಲ್ ಮೇಲುವರ್ಗದಲ್ಲಿ ಕುಖ್ಯಾತಳಾದ ಒಬ್ಬ ಮಹಿಳೆಯೊಂದಿಗೆ ತುಂಜದಲ್ಲಿ ಮೋಜುಮಾಡುತ್ತಿದ್ದರು ಎಂದು ಸಂಟಾ ಫ಼ ದ ಬೊಗೋಟದಲ್ಲಿ ಪ್ರಕಟಿಸಿದ್ದ ವರದಿಯೂ ಒಂದು.

ಏನಾದರಾಗಲಿ, ಅವರ ಹೆಸರಿಗೆ ಮಸಿ ಬಳಿಯಲು ಪ್ರಯತ್ನಿಸಿದ್ದು ರಾತ್ರಿ ಮೋಜಿನ ವದಂತಿ ಹಬ್ಬಿಸಿದ ಸಟಾಂಡರ್‌ವಾದಿಗಳ ಪತ್ರಿಕೆಗಳು ಮಾತ್ರವಲ್ಲ. ಸ್ವಾತಂತ್ರ್ಯ ಹೋರಾಟದ ಕನಿಷ್ಠ ಪಕ್ಷ ಮೂರು ಕದನಗಳಲ್ಲಿ ಸೋಲುಂಟಾದವು, ಅದಕ್ಕೆ ಕಾರಣ ಜನರಲ್ ಇರಬೇಕಾದ ಸ್ಥಳದಲ್ಲಿ ಇರದೇ ಯಾವುದೋ ಹೆಂಗಸಿನ ಜೊತೆ ಹಾಸಿಗೆಯಲ್ಲಿದ್ದುದು ಎಂದು ಅಂತಿಮ ವಿಜಯಕ್ಕೂ ಮುನ್ನವೇ ವದಂತಿ ಹಬ್ಬಿತು. ಮಾಂಪಾಕ್ಸ್‌ಗೆ ಅವರು ನೀಡಿದ್ದ ಮತ್ತೊಂದು ಭೇಟಿಯ ಸಂದರ್ಭದಲ್ಲಿ ಊರಿನ ಮೂರು ಬೀದಿಗಳ ಎರಡನೆಯದರಲ್ಲಿ ಸಾಲುಸಾಲಾಗಿ ಬಂದಿದ್ದ ಬೇರೆ ಬೇರೆ ಬಣ್ಣ-ವಯಸ್ಸುಗಳ ಹೆಂಗಸರು ಪೂಸಿಕೊಂಡಿದ್ದ ಅಗ್ಗದ ಸುಗಂಧವೇ ಗಾಳಿಯಲ್ಲಿ ತುಂಬಿತ್ತು, ಅವರು ಆ ಊರಿನಲ್ಲಿ ಸಿಕ್ಕಿದ ಅತ್ಯುತ್ತಮ ರೇಷ್ಮೆ ಉಡುಪು ಧರಿಸಿ, ಚಿತ್ರಗಳಿದ್ದ ಸ್ಯಾಟಿನ್ ಬಟ್ಟೆಯ ಕೊಡೆಗಳನ್ನು ಹಿಡಿದು ಮಗ್ಗುಲು ಜೀನುಗಳದ್ದ

ಕುದುರೆಗಳ ಮೇಲೆ ಕುಳಿತು ಬಂದರು ಎಂದು ಬರೆಯಲಾಯಿತು. ಆ ಹೆಂಗಸರು ಜನರಲ್‌ಗಿಂತ ಮೊದಲೇ ಪಯಣಿಸುತ್ತಿದ್ದ ಅವರ ಸೂಳೆಯರು ಎಂಬ ಕಲ್ಪನೆಯನ್ನು ಯಾರೂ ಅಲ್ಲಗಳೆಯಲಿಲ್ಲ. ಇತರ ಅನೇಕವಂತೆ ಅದೂ ಸುಳ್ಳು ಕಲ್ಪನೆ; ಯುದ್ಧಸಮಯದ ಅವರ ಅಂತಃಪುರವೆಂಬುದು ಸಮಾಧಿಯವರೆಗೂ ಅವರನ್ನು ಹಿಂಬಾಲಿಸಿ ಬಂದ ಹರಟೆಕಾಲದ ಊಹೆ.

ವರದಿಗಳನ್ನು ಮಾಡುವ ಈ ವಕ್ರ ವಿಧಾನದಲ್ಲಿ ಹೊಸದೇನೂ ಇರಲಿಲ್ಲ. ಸ್ಪೇನ್ ವಿರುದ್ಧದ ಯುದ್ಧಗಳಲ್ಲಿ ಸ್ಪಾನಿಶ್ ಸೇನಾಧಿಕಾರಿಗಳನ್ನು ದಾರಿತಪ್ಪಿಸಲು ಸುಳ್ಳು ಸುದ್ದಿಗಳನ್ನು ಮುದ್ರಿಸುವಂತೆ ಸಟಾಂಡರ್‌ಗೆ ಆಜ್ಞಾಪಿಸುವುದರ ಮೂಲಕ ಅವುಗಳನ್ನು ಜನರಲ್‌ರೇ ಬಳಸಿಕೊಂಡಿದ್ದರು. ಹೀಗಾಗಿ ಗಣರಾಜ್ಯವು ಅಸ್ತಿತ್ವಕ್ಕೆ ಬಂದ ಮೇಲೆ ಪತ್ರಿಕೆಗಳನ್ನು ದುರುಪಯೋಗಪಡಿಸಿಕೊಂಡನೆಂದು ಸಟಾಂಡರ್‌ನನ್ನು ಟೀಕಿಸಿದಾಗ ಅವರು ಅತೀವ ವ್ಯಂಗ್ಯದಿಂದ ಈ ರೀತಿ ಪ್ರತಿಕ್ರಿಯಿಸಿದರ್ರು:

"ನಮಗೆ ಒಳ್ಳೆಯ ಗುರು ಸಿಕ್ಕಿದ್ದರು, ಮಹಾಸ್ವಾಮಿ."

"ಕೆಟ್ಟ ಗುರು, ಯಾಕೆಂದರೆ ನಾವು ಸೃಷ್ಟಿಸಿದ್ದ ಸುದ್ದಿ ನಮ್ಮ ವಿರುದ್ಧವೇ ತಿರುಗಿದ್ದನ್ನು ನೀವು ಮರೆಯುವ ಹಾಗಿಲ್ಲ" ಎಂದಿದ್ದರು ಜನರಲ್.

ತಮ್ಮ ಬಗ್ಗೆ ಆಡಿದ ಮಾತುಗಳಿಗೆ, ನಿಜವಿರಲಿ ಸುಳ್ಳಿರಲಿ, ಅವರು ಸೂಕ್ಷ್ಮವಾಗಿದ್ದರೆಂದರೆ ಅಂಥ ಸುಳ್ಳಿನಿಂದ ಅವರೆಂದೂ ಚೇತರಿಸಿಕೊಳ್ಳಲಿಲ್ಲ, ತಮ್ಮ ಕೊನೆಯ ಕಾಲದವರೆಗೂ ಅವುಗಳನ್ನು ಅಲ್ಲಗಳೆಯುವುದರಲ್ಲೇ ನಿರತರಾಗಿದ್ದರು. ಇಷ್ಟಾದರೂ, ಸುಳ್ಳಿನಿಂದ ಪಾರಾಗಲು ಅವರು ಏನೂ ಮಾಡಲಿಲ್ಲ. ಇತರ ಸನ್ನಿವೇಶಗಳಲ್ಲಿಯಂತೆ, ಕಳೆದ ಬಾರಿ ಮಾಂಪಾಕ್ಸ್‌ನಲ್ಲಿದ್ದಾಗ ಅವರು ಒಬ್ಬ ಹೆಂಗಸಿಗಾಗಿ ತಮ್ಮ ಘನತೆಯನ್ನೇ ಪಣವಾಗಿಟ್ಟಿದ್ದರು.

ಆ ಹೆಂಗಸು ಜೋಸೆಫಾ ಸಗಾರಿಯೋ, ಫ್ರಾನ್ಸಿಸ್ಕನೆ ಕ್ರೈಸ್ತ ಸನ್ಯಾಸಿನಿಯ ವೇಷ ಧರಿಸಿ, ಜೋಸೆ ಪೆಲಾಸಿಯೋಸ್ ಹೇಳಿಕೊಟ್ಟಿದ್ದ "ಒಳ್ಳೆಯ ದೇಶ" ಎಂಬ ಸಂಕೇತಪದಗಳನ್ನು ಬಳಸಿಕೊಂಡು ಏಳು ರಕ್ಷಣಾಠಾಣೆಗಳನ್ನು ಹಾದು ಬಂದ ಉನ್ನತ ವರ್ಗದ ಮಾಂಪಾಕ್ಸ್‌ನವಳು. ಎಷ್ಟು ಬೆಳ್ಳಗಿದ್ದಳೆಂದರೆ ಅವಳ ಹೊಳೆಯುವ ಮೈ ಕತ್ತಲಲ್ಲೂ ಕಾಣಿಸುತ್ತಿತ್ತು. ಅಲ್ಲದೆ, ಆ ರಾತ್ರಿ ತನ್ನ ಅಲೌಕಿಕ ಚೆಲುವನ್ನು ಮೀರಿಸುವಂತೆ ಒಡವೆಗಳನ್ನು ತೊಟ್ಟಿದ್ದಳು; ಉಡುಪಿನ ಮೇಲೆ ಆ ಊರಲ್ಲೇ ತಯಾರಿಸಿದ್ದ ಉತ್ಕೃಷ್ಟ ಬಂಗಾರದ ಕೆಲಸ ಮಾಡಿದ ಕವಚವನ್ನು ಧರಿಸಿದ್ದಳು. ಅವಳನ್ನವರು ತನ್ನ ಜೋಲಿಮಂಚಕ್ಕೆ ಹೊತ್ತೊಯ್ಯಲು ಪ್ರಯತ್ನಿಸಿದಾಗ ಅವಳನ್ನು ಎತ್ತುವುದಕ್ಕೇ ಆಗಿರಲಿಲ್ಲ, ಅವಳು ತೊಟ್ಟ ಚಿನ್ನ ಅಷ್ಟು ಭಾರವಿತ್ತು. ರಾತ್ರಿಯೆಲ್ಲ ಕಳೆದ

ಮೇಲೆ ಬೆಳಗಿನ ಜಾವ ಅವಳು ಭಯದಿಂದ ಮತ್ತೊಂದು ರಾತ್ರಿಯೂ ಅಲ್ಲಿಯೇ ಉಳಿದುಕೊಳ್ಳುವಂತೆ ಕೇಳಿಕೊಂಡಿದ್ದಳು.

ಅದು ತುಂಬ ಅಪಾಯಕಾರಿಯಾಗಿತ್ತು, ಯಾಕೆಂದರೆ ಗುಪ್ತಚರನ ಪ್ರಕಾರ ಜನರಲ್‌ರನ್ನು ಅಧಿಕಾರಚ್ಯುತನನ್ನಾಗಿಸಿ ಕೊಲಂಬಿಯವನ್ನು ಪ್ರತ್ಯೇಕಗೊಳಿಸಲು ಸಟಾಂಡರ್ ಸಂಚುಮಾಡಿದ್ದ. ಆದರೂ ಅವರು ಉಳಿದುಕೊಂಡರು, ಒಂದು ರಾತ್ರಿ ಮಾತ್ರವಲ್ಲ, ಹತ್ತು ರಾತ್ರಿಗಳು. ಆಗ ಅವರಿಬ್ಬರೂ ಎಷ್ಟು ಸಂತಸದಿಂದಿದ್ದರೆಂದರೆ, ತಾವಿಬ್ಬರೂ ಜಗತ್ತಿನಲ್ಲಿ ಹಿಂದೆಂದೂ ಇಲ್ಲದಿದ್ದಂತಹ ಅಪೂರ್ವ ಪ್ರೇಮಿಗಳೆಂದು ನಂಬಿಕೊಂಡಿದ್ದರು.

ಅವಳು ತನ್ನ ಚಿನ್ನವನ್ನೆಲ್ಲ ಅವರಿಗೆ ಕೊಟ್ಟಳು. “ನಿಮ್ಮ ಯುದ್ಧಗಳಿಗಾಗಿ” ಎಂದಿದ್ದಳವಳು. ಅವರು ಅದನ್ನು ಬಳಸಿಕೊಂಡಿರಲಿಲ್ಲ, ಯಾಕೆಂದರೆ ಹಾಸಿಗೆಯಲ್ಲಿ ಪಡೆದ ಒಡವೆಗಳನ್ನು ಅನ್ಯಾಯದ ಗಳಿಕೆಯೆಂದು ಭಾವಿಸಿದ್ದ ಅವನ ಆದರ್ಶ; ಅದನ್ನೆಲ್ಲ ತಮ್ಮ ಗೆಳೆಯನೊಬ್ಬನ ವಶದಲ್ಲಿರಿಸಿದ್ದ. ಆಮೇಲೆ ಅದರ ವಿಷಯ ಮರೆತೇ ಬಿಟ್ಟ. ಅವರು ಕೊನೆಯ ಬಾರಿಗೆ ಮಾಂಪಾಕ್ಸ್‌ಗೆ ಭೇಟಿ ಕೊಟ್ಟಾಗ ಪೇರಲ ಹಣ್ಣಿನ ದಾಳಿಯ ನಂತರ ಒಳಗೇನಿದೆಯೆಂದು ನೋಡಲು ಪೆಟಾರಿಯನ್ನು ತೆರೆಯಲು ಆಜ್ಞಾಪಿಸಿದ್ದರು, ಆಗಷ್ಟೇ ನೆನಪಿಗೆಂದು ಅವಳು ಹೆಸರು ತಾರೀಕುಗಳೊಡನೆ ನೀಡಿದ್ದ ಚಿನ್ನದ ಒಡವೆಗಳನ್ನು ಕಂಡಿದ್ದರು.

ಅದೊಂದು ಪವಾಡಸದೃಶ ಕಾಣ್ಕೆ: ಜೋಸೆಫ಼ಾ ಸಗಾರಿಯೋಳ ಚಿನ್ನದ ಕವಚ ಅತ್ಯಾಕರ್ಷಕವಾದ ನಾನಾ ಬಗೆಯ ಲೋಹದ ಕೆಲಸದಿಂದ ಕೂಡಿತ್ತು, ಅದೆಲ್ಲದರ ಒಟ್ಟು ತೂಕ ಮೂವತ್ತು ಪೌಂಡ್‌ಗಳು. ಜೊತೆಗೆ ಚಿನ್ನದಿಂದ ಮಾಡಿದ್ದ ಇಪ್ಪತ್ಮೂರು ಫ಼ೋರ್ಕ್‌ಗಳು, ಇಪ್ಪತ್ನಾಲ್ಕು ಚಮಚಗಳು, ಇಪ್ಪತ್ನಾಲ್ಕು ಟೀಚಮಚಗಳು, ಸಕ್ಕರೆ ಹಾಕಿಕೊಳ್ಳುವ ಒಂದು ಸಣ್ಣ ಚಿಮುಟ, ಮತ್ತು ಭಾರಿ ಮೌಲ್ಯದ ಇತರೆ ಮನೆಸಾಮಾನುಗಳು ತುಂಬಿದ್ದ ಒಂದು ಸಂದೂಕು ಬೇರೆ. ಅವೆಲ್ಲ ನಾನಾ ಸಂದರ್ಭಗಳಲ್ಲಿ ಕಾಣಿಕೆಗಳಾಗಿ ಬಂದು ನೋಡಿಕೊಳ್ಳಲೆಂದು ಇತರರ ವಶಕ್ಕೊಪ್ಪಿಸಿ ಮರೆತುಬಿಟ್ಟಿದ್ದವು. ಜನರಲ್‌ರ ಆಸ್ತಿಯ ಅಮೋಘ ಅವ್ಯವಸ್ಥೆಯನ್ನು ಕಂಡಿದ್ದವರಿಗೆ, ಯೋಚಿಸದೇ ಇದ್ದ ಸ್ಥಳಗಳಲ್ಲಿ ಕಂಡ ಈ ಒಡವೆಗಳು ಅಚ್ಚರಿಯುಂಟುಮಾಡಲಿಲ್ಲ. ಚಪ್ಪಟೆ ಸಾಮಾನುಗಳನ್ನು ತಮ್ಮ ಸಾಮಾನುಗಳ ಜೊತೆ ಸೇರಿಸಬೇಕೆಂದೂ, ಪೆಟ್ಟಿಗೆಯಲ್ಲಿನ ಚಿನ್ನದ ಒಡವೆಗಳನ್ನು ಅವುಗಳ ಮಾಲೀಕರಿಗೇ ಹಿಂದಿರುಗಿಸಬೇಕೆಂದೂ ಅವರು ಸೂಚನೆ ನೀಡಿದರು. ಆದರೆ ಜೋಸೆಫ಼ಾ ಸಗಾರಿಯೋ ಮತ್ತವಳ ಕುಟುಂಬವು ದೇಶದ ಸುರಕ್ಷತೆಯ ವಿರುದ್ಧ ಪಿತೂರಿ ಮಾಡಿದ ಆರೋಪದ ಕಾರಣ ದೇಶಭ್ರಷ್ಟರಾಗಿ ಇಟಲಿಯಲ್ಲಿ

ವಾಸಿಸುತ್ತಿರುವರೆಂಬ ಆಶ್ಚರ್ಯದ ವಾರ್ತೆಯನ್ನು ಸ್ಯಾನ್ ಪೆಡ್ರೋ ಅಪಾಸಲ್‌ನ ರೆಕ್ಟರ್ ಆಗಿದ್ದ ಧರ್ಮಗುರುಗಳು ಹೇಳಿದರು.

"ಸಟಾಂಡರ್‌ನ ಮತ್ತೊಂದು ದುಷ್ಕೃತ್ಯ" ಎಂದರು ಜನರಲ್.

"ಇಲ್ಲ ಜನರಲ್, ತಿಳಿಯದೆ ತಾವೇ ಅವರನ್ನು ೧೮೨೮ ರ ಗಲಭೆಗಳ ನಂತರ ದೇಶದಿಂದ ಹೊರಹಾಕಿದಿರಿ" ಎಂದರು ಧರ್ಮಗುರುಗಳು.

ವಿಷಯವನ್ನು ವಿವರಿಸುವಾಗ ಅವರು ಚಿನ್ನವಿದ್ದ ಪೆಟಾರಿಯನ್ನು ಇದ್ದ ಕಡೆಯೇ ಉಳಿಸಿದರು, ಆನಂತರ ದೇಶಭ್ರಷ್ಟತೆಯ ವಿಚಾರವನ್ನವರು ಪ್ರಸ್ತಾಪಿಸಲಿಲ್ಲ. ಜನರಲ್ ಕಾರ್ಟಜೆನ ತೀರದಿಂದ ದೂರ ಹೋದ ಕ್ಷಣವೇ ಜೋಸೆ ಸಗಾರಿಯೋ ಹಾಗೂ ಮತ್ತಿತರ ಶತ್ರುಸಮೂಹವು ವಾಪಸಾಗುವರೆಂದು ಜೋಸೆ ಪೆಲಾಸಿಯೋಸ್‌ಗೆ ಅವರು ಆನಂತರ ತಿಳಿಸಿದರು.

"ಕ್ಯಾಸಾಂಡ್ರೋ ಈಗಾಗಲೇ ತಮ್ಮ ಬಟ್ಟೆಬರೆ ಗಂಟು ಕಟ್ಟುತ್ತಿರಬೇಕು" ಎಂದೂ ಹೇಳಿದರು.

ವಾಸ್ತವವೂ ಅದೇ: ಜನರಲ್ ಯೂರೋಪ್‌ಗೆ ಹೋಗುತ್ತಿರುವರೆಂಬುದನ್ನು ಕೇಳಿದ ಕ್ಷಣವೇ ಅನೇಕ ಮಂದಿ ದೇಶಭ್ರಷ್ಟರು ವಾಪಸಾಗಲು ತಯಾರಿ ನಡೆಸಿದ್ದರು. ಆದರೆ ತಣ್ಣಗೆ ಆಲೋಚಿಸುವ ಮತ್ತು ಆಳವಾದ ನಿರ್ಧಾರಗಳನ್ನು ಕೈಗೊಳ್ಳಬಲ್ಲ ಜನರಲ್ ಸಟಾಂಡರ್ ಮಾತ್ರ ಅಂತಹವರಲ್ಲಿ ಕೊನೆಯಲ್ಲಿ ಸೇರಿದ್ದ. ಅಧಿಕಾರತ್ಯಾಗದ ಸುದ್ದಿ ತಿಳಿದು ಅವನು ಜಾಗರೂಕನಾದ, ಆದರೆ ವಾಪಸಾಗುವ ಯಾವ ಸುಳುಹನ್ನೂ ನೀಡಿರಲಿಲ್ಲ; ಅಲ್ಲದೆ, ಕಳೆದ ವರ್ಷ ಅಕ್ಟೋಬರ್‌ನಲ್ಲಿ ಹ್ಯಾಂಬರ್ಗ್‌ಗೆ ಬಂದಿಳಿದ ಮೇಲೆ ತಾನು ತುಂಬ ಆಸೆಯಿಂದ ಕೈಗೊಂಡಿದ್ದ ಯೋರೋಪ್ ದೇಶಗಳ ಅಧ್ಯಯನ ಪ್ರವಾಸವನ್ನು ಮುಗಿಸಿಬಿಡುವ ಆತುರದ ತೀರ್ಮಾನವನ್ನೂ ಅವನು ಕೈಗೊಂಡಿರಲಿಲ್ಲ. ೧೮೩೧ ರ ಮಾರ್ಚ್ ೨ ರಂದು ಫ್ಲಾರೆನ್ಸ್‌ನಲ್ಲಿದ್ದಾಗ ಜನರಲ್ ಸತ್ತ ವಿಷಯವನ್ನು *'ಜರ್ನಲ್ ದ್ಯು ಕಾಮರ್ಸ್'* ಪತ್ರಿಕೆಯಲ್ಲಿ ಓದಿದ್ದ. ಆದರೆ ಆರು ತಿಂಗಳ ಬಳಿಕ ಹೊಸ ಸರ್ಕಾರವು ತನ್ನ ಸೈನಿಕ ಹುದ್ದೆ ಮತ್ತು ಗೌರವಗಳನ್ನು ಪುನಃಸ್ಥಾಪಿಸಿದ ಕಾಂಗ್ರೆಸ್, ತನ್ನ ಗೈರುಹಾಜರಿಯಲ್ಲೇ ಗಣರಾಜ್ಯದ ಅಧ್ಯಕ್ಷನಾಗಿ ಆಯ್ಕೆ ಮಾಡುವವರೆಗೂ ನಿಧಾನವಾಗಿ ವಾಪಸಾಗುವ ನಿರ್ಧಾರವನ್ನು ಬದಲಿಸಲಿಲ್ಲ.

ಮಾಂಪಾಕ್ಸ್ ಬಿಡುವ ಮುನ್ನ ಜನರಲ್ ತಮ್ಮ ಹಳೆಯ ಆಪ್ತ ಗೆಳೆಯ ಲೊರೆಂಝೋ ಕ್ಯಾರ್‌ಕೆಮೋನನ್ನು ಕಂಡರು. ಅವನು ಹಾಸಿಗೆ ಹಿಡಿದು ಮಲಗಿದ್ದನೆಂಬುದು ಜನರಲ್‌ರಿಗೆ ತಿಳಿದದ್ದು ಆಗಲೇ. ಇವರನ್ನು ಕಂಡು ಬರಮಾಡಿಕೊಳ್ಳಲೆಂದೇ ನಿನ್ನೆ ಮಧ್ಯಾಹ್ನ ತಾನೇ ಅವನು

ಹಾಸಿಗೆಯಿಂದ ಎದ್ದಿದ್ದ. ಕಾಯಿಲೆಯಿಂದ ಜರ್ಜರಿತನಾಗಿದ್ದರೂ ಕ್ಯಾರ್‌ಕೆಮೋ ತನ್ನ ದೇಹದ ಶಕ್ತಿಯನ್ನು ಒಗ್ಗೂಡಿಸಿಕೊಳ್ಳಬೇಕಾಗಿತ್ತು. ಮನಃಸ್ಥಿತಿಗೆ ಸಂಬಂಧವಿಲ್ಲದಂತೆಯೇ ತನ್ನ ಕಣ್ಣಿಂದ ಸುರಿಯುತ್ತಿದ್ದ ನೀರನ್ನೊರೆಸಿಕೊಳ್ಳಲು ದಿಂಬುಗಳನ್ನೇ ಒತ್ತಿಕೊಂಡು ಮಾತಾಡುವಾಗ ಅವನ ಧ್ವನಿ ಗುಡುಗುತ್ತಿತ್ತು.

ತಮ್ಮ ದುರದೃಷ್ಟಕ್ಕೆ ಅವರಿಬ್ಬರೂ ಒಟ್ಟಿಗೇ ಹಲುಬಿದರು, ದೇಶಗಳ ಅವಿವೇಕ ಮತ್ತು ಗೆಲವಿನ ಕೃತಘ್ನತೆಯ ಬಗ್ಗೆ ವಿಷಾದಿಸಿದರು, ಸದಾ ಅವರಬ್ಬರ ನಡುವಣ ಮಾತಿಗೆ ವಸ್ತುವಾಗುತ್ತಿದ್ದ ಸಟಾಂಡರ್ ಕುರಿತು ಬಡಬಡಿಸಿದರು. ಜನರಲ್ ಅಷ್ಟೊಂದು ಮಾತನಾಡುವವರಲ್ಲ. ೧೮೧೩ ರ ಹೋರಾಟ ಕಾಲದಲ್ಲಿ ವೆನಿಝೂಲವನ್ನು ಎರಡನೆಯ ಬಾರಿಗೆ ವಿಮೋಚನೆಗೊಳಿಸಲು ಗಡಿ ದಾಟಿ ಹೋಗಬೇಕೆಂಬ ಜನರಲ್‌ರ ಆಜ್ಞೆಯನ್ನು ಸಟಾಂಡರ್ ಪಾಲಿಸಲು ಸಿದ್ಧವಿಲ್ಲದಿದ್ದಾಗ ಅವರಿಬ್ಬರ ನಡುವೆ ದೊಡ್ಡ ಜಗಳವಾದ ಸಮಯದಲ್ಲಿ ಲೊರೆಂಝೋ ಕ್ಯಾರ್‌ಕೆಮೋ ಬಳಿಯೇ ಇದ್ದ. ಕಾಲ ಸರಿದರೂ ಅವರ ನಡುವಣ ಆಳವಾದ ಕಹಿತನವು ಉಲ್ಬಣಗೊಂಡುದಕ್ಕೆ ಇದೇ ಕಾರಣವೆಂದು ಜನರಲ್ ಕ್ಯಾರ್‌ಕೆಮೋ ಇನ್ನೂ ಭಾವಿಸಿದ್ದ.

ಮತ್ತೊಂದು ಕಡೆ, ಅದು ಕೊನೆಯಲ್ಲವೆಂದೂ ಗಾಢ ಸ್ನೇಹಕ್ಕೆ ನಾಂದಿಯೆಂದೂ ಜನರಲ್ ಭಾವಿಸಿದ್ದರು. ಅಲ್ಲದೆ, ಅವರ ನಡುವಣ ದ್ವೇಷಕ್ಕೆ ಕಾರಣವು ಜನರಲ್ ಪಯೆಝ್‌ಗೆ ನೀಡಿದ್ದ ಸವಲತ್ತುಗಳಾಗಲೀ ಬೊಲಿವಿಯ ನತದೃಷ್ಟ ಸಂವಿಧಾನವಾಗಲೀ ಪೆರುವಿನಲ್ಲಿ ಜನರಲ್ ಸ್ವೀಕರಿಸಿದ್ದ ಸಾರ್ವಭೌಮ ಗೌರವವಾಗಲೀ ಅವರು ಕೊಲಂಬಿಯದಲ್ಲಿ ಕಂಡಿದ್ದ ಆಜೀವ ಅಧ್ಯಕ್ಷತೆಯ ಮತ್ತು ಸೆನೇಟ್ ಸದಸ್ಯತ್ವದ ಕನಸಾಗಲೀ ಒಕಾನಾ ಸಮಾವೇಶದ ನಂತರ ತಾವು ವಹಿಸಿಕೊಂಡಿದ್ದ ನಿರಂಕುಶ ಅಧಿಕಾರವಾಗಲೀ ಆಗಿರಲಿಲ್ಲ. ಉಹ್ಞೂ, ಇವುಗಳಾಗಲೀ ಇಂತಹ ಇತರವಾಗಲೀ ಕಾಲ ಸರಿದಂತೆ ಅವರ ಭಯಂಕರ ದ್ವೇಷವು ಉಲ್ಬಣಿಸುತ್ತ ಹೋಗಿ ಸೆಪ್ಟೆಂಬರ್ ೨೫ ರಂದು ನಡೆದ ತಮ್ಮ ಹತ್ಯೆಯ ಸಂಚಿನಲ್ಲಿ ಪರ್ಯವಸಾನವಾಗಲು ಕಾರಣವಾಗಿರಲಿಲ್ಲ. “ನಿಜವಾದ ಕಾರಣವೆಂದರೆ ಸಟಾಂಡರ್‌ಗೆ ಈ ಭೂಖಂಡವು ಏಕರಾಷ್ಟ್ರವಾಗಲು ಇಷ್ಟವಿರಲಿಲ್ಲ ಎಂಬುದು. ಅಮೆರಿಕದ ಐಕ್ಯತೆಯು ಅವನಿಗೆ ಸಹಿಸಿಕೊಳ್ಳಲು ಅಸಾಧ್ಯವಾದುದಾಗಿತ್ತು” ಎಂದಿದ್ದರು ಜನರಲ್. ಮೊದಲಿನಿಂದಲೂ ವಿಫಲವಾದ ಹೋರಾಟದ ಕೊನೆಯ ಕದನಕಣದಂತೆ ಹಾಸಿಗೆಯಲ್ಲಿ ಮಲಗಿದ್ದ ಲೊರೆಂಝೋ ಕ್ಯಾರ್‌ಕೆಮೋನ ಕಡೆ ನೋಡಿ ತಮ್ಮ ಭೇಟಿಯನ್ನವರು ಮುಗಿಸಿದ್ದರು.

“ಈಗ ಇವೆಲ್ಲಕ್ಕೂ ಅರ್ಥವಿಲ್ಲ, ಯಾಕೆಂದರೆ ರೋಗಿ ಸತ್ತುಹೋದ” ಎಂದಿದ್ದರು ಜನರಲ್.

ಲೊರೆಂಜ಼ೋ ಕ್ಯಾರ್‌ಕೆಮೋ ಎದ್ದು ನಿಂತುದನ್ನು ನೋಡಿ, ಜನರಲ್‌ಗಾಗಲೀ ತನಗಾಗಲೀ ಅನುಭವಗಳಿಗಿಂತ ಅವುಗಳ ನೆನಪೇ ಹೆಚ್ಚು ಭಾರವೆನಿಸಿ ದುಃಖ ಉಕ್ಕಿತು, ಎಲ್ಲವನ್ನೂ ಕಳೆದುಕೊಂಡಂತೆ ಭಾಸವಾಯಿತು. ಜನರಲ್‌ರ ಕೈಗಳನ್ನು ತನ್ನೆರಡರ ನಡುವೆ ಹಿಡಿದುಕೊಂಡಾಗ ತಮ್ಮಿಬ್ಬರಿಗೂ ಒಂದು ಬಗೆಯ ಜ್ವರವಿದೆಯೆನ್ನಿಸಿ ತಮ್ಮಿಬ್ಬರಲ್ಲಿ ಯಾರ ಸಾವು ಪುನಃ ತಾವು ಭೇಟಿಯಾಗದಿರಲು ಕಾರಣವಾಗುವುದೋ ಎಂಬ ಆಲೋಚನೆ ಹರಿದು ಹೋಯಿತು.

“ನಾವು ಹಳೆಯ ಗೆಳೆಯ ಸಿಮೋನ್‌ನನ್ನು ಕಳೆದುಕೊಂಡು ಜಗತ್ತನ್ನೇ ಕಳೆದುಕೊಂಡೆವು” ಎಂದ ಲೊರೆಂಜ಼ೋ ಕ್ಯಾರ್‌ಕೆಮೋ.

“ಅವರು ನಮ್ಮಿಂದ ಕಸಿದುಕೊಂಡರು. ಈಗ ನಾವು ಮಾಡಬೇಕಾದ್ದೆಂದರೆ ಮೊದಲಿನಿಂದ ಆರಂಭಿಸೋದು” ಎಂದರು ಜನರಲ್.

“ನಾವು ಆರಂಭಿಸಿಯೇ ತೀರುತ್ತೇವೆ” ಎಂದ ಲೊರೆಂಜ಼ೋ ಕ್ಯಾರ್‌ಕೆಮೋ.

“ನಾನಲ್ಲ. ನನಗೀಗ ಉಳಿದಿರುವುದೆಂದರೆ ಅವರು ನನ್ನನ್ನು ಕಸದೊಡನೆ ಎಸೆಯುವುದು” ಎಂದರು ಜನರಲ್.

ನೆನಪಿಗೆಂದು ಲೊರೆಂಜ಼ೋ ಕ್ಯಾರ್‌ಕೆಮೋ ಅವರಿಗೆ ಒಂದು ಜೊತೆ ಪಿಸ್ತೂಲುಗಳನ್ನು ಸುಂದರವಾದ ಸ್ಯಾಟಿನ್ ಕವಚದಲ್ಲಿರಿಸಿ ಕಾಣಿಕೆಯಾಗಿತ್ತ. ಜನರಲ್‌ರಿಗೆ ಬಂದೂಕುಗಳು ಇಷ್ಟವಿಲ್ಲವೆಂಬುದು ಅವನಿಗೆ ಗೊತ್ತಿತ್ತು, ಅವರ ಖಾಸಗಿ ಹೋರಾಟದಲ್ಲಿ ಅವರು ನೆಚ್ಚಿಕೊಂಡಿದ್ದುದು ಕತ್ತಿಯನ್ನು. ಆದರೆ ಈ ಪಿಸ್ತೂಲುಗಳ ವೈಶಿಷ್ಟ್ಯವೆಂದರೆ ಅವುಗಳನ್ನು ಒಮ್ಮೆ ಪ್ರೇಮಕ್ಕಾಗಿ ನಡೆದ ದ್ವಂದ್ವಹೋರಾಟದಲ್ಲಿ ಬಳಸಲಾಗಿತ್ತು ಎಂಬುದು. ಅದನ್ನು ಸ್ವೀಕರಿಸುವಾಗ ಜನರಲ್ ಭಾವುಕರಾದರು.

ಮೇ ೨೩ ರಂದು ಸಂಜೆ ಪಯಣವನ್ನು ಮುಂದುವರಿಸಿದಾಗ ಶುಭಶಕುನಗಳಾಗಿದ್ದವು. ಅನುಕೂಲಕರವಾದ ಗಾಳಿಯೇ ಹುಟ್ಟುಹಾಕುವ ಅಂಬಿಗರಿಗಿಂತ ಹೆಚ್ಚಾಗಿ ದೋಣಿಗಳನ್ನು ಮುಂದೂಡುತ್ತಿತ್ತು. ದೋಣಿಸಮೂಹವು ಕಂದಕಗಳನ್ನೂ ವಿಶಾಲ ತೀರದ ಮರೀಚಿಕೆಗಳನ್ನೂ ಹಿಂದೆ ಹಾಕಿತು. ಈಗ ಅವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತಿದ್ದ ಮರದ ಕಾಂಡಗಳಿಂದ ಮಾಡಿದ್ದ ಓಡುಗಳೇ ತಮ್ಮ ದೋಣಿಗಳಿಗಿಂತ ವೇಗವಾಗಿ ಸಾಗುತ್ತಿರುವಂತೆ ತೋರಿತು. ಹಿಂದೆ ಕಂಡವು ಇದ್ದುದಕ್ಕಿಂತ ಭಿನ್ನವಾಗಿ ಇವುಗಳ ಮೇಲೆ ಸಣ್ಣ ಕನಸಿನ ಮನೆಗಳಿದ್ದವು; ಅವುಗಳ ಮುಂದೆ ಹೂದಾನಿಗಳನ್ನಿಟ್ಟಿದ್ದರು, ಒಣಗಲು ಬಟ್ಟೆಗಳನ್ನು ಹರವಿದ್ದರು; ತಂತಿಯಿಂದ ಮಾಡಿದ್ದ ಕೋಳಿ ಕುಕ್ಕೆಗಳು, ಕರಾವುಗಳು ಮತ್ತು ಕೊಳಕು ಹುಡುಗರು ಅವುಗಳ ಮೇಲಿದ್ದರು. ದೋಣಿಗಳು ಮುಂದೆ ಸಾಗಿದ ಮೇಲೂ ಮಕ್ಕಳು

ಕೈಬೀಸುತ್ತಲೇ ಇದ್ದರು. ಇವರ ದೋಣಿಸಮೂಹವು ರಾತ್ರಿಯಲ್ಲಿ ನಕ್ಷತ್ರಗಡಣದ ನಡುವೆ ಮುಂದೆ ಸಾಗುತ್ತಿತ್ತು. ಮುಂಜಾವಿನ ಹೊತ್ತಿಗೆ ಬೆಳಕಿನಲ್ಲಿ ಹೊಳೆಯುತ್ತಿದ್ದ ಝಂಬ್ರಾನೋ ನಗರ ಕಣ್ಣಿಗೆ ಬಿತ್ತು.

ಡಾನ್ ಕ್ಯಾಸ್ಟ್ಯುಲೋ ಕ್ಯಾಂಪಿಲೋ, ಅವನ ಅಡ್ಡ ಹೆಸರು ಪುಟಾಣಿ, ರೇವಿನಲ್ಲಿದ್ದ ದೊಡ್ಡ ಮರವೊಂದರ ಕೆಳಗೆ, ಜನರಲ್‌ರಿಗೆ ಅರ್ಪಿಸಲೆಂದು ಮನೆಯಲ್ಲಿ ಮಾಡಿದ್ದ ತೀರಪ್ರದೇಶದ ಸ್ಯಾಂಕೋಚೋದೊಡನೆ ಎದುರು ನೋಡುತ್ತಿದ್ದ. ಈ ಆಹ್ವಾನಕ್ಕೆ ಕಾರಣವಾಗಿದ್ದುದು, ಮೊದಲ ಬಾರಿ ಝಂಬ್ರಾನೋಗೆ ಬಂದಿದ್ದಾಗ ಜನರಲ್ ರೇವಿನ ಆಚೆ ಬಂಡೆಗಲ್ಲುಗಳ ಗುಡ್ಡದ ಮೇಲಿದ್ದ ಸಾಮಾನ್ಯ ಉಪಾಹಾರಗೃಹದಲ್ಲಿ ಊಟಮಾಡಿ, ಆನಂತರ ತಾವು ತೀರಪ್ರದೇಶದ ಸ್ಯಾಂಕೋಚೋ ತಿನ್ನುವದಕ್ಕಾದರೂ ಈ ಊರಿಗೆ ವರ್ಷಕ್ಕೊಮ್ಮೆ ಬರುವುದಾಗಿ ಹೇಳಿದ್ದರೆಂಬ ವದಂತಿ. ತಮ್ಮ ಅತಿಥಿ ಎಂಥ ಗಣ್ಯನೆಂಬುದರಿಂದ ಮನೆಯೊಡತಿ ಸಂಭ್ರಮಗೊಂಡು, ಬಡಿಸಲು ಪಾತ್ರೆತಟ್ಟೆಗಳನ್ನು ಶ್ರೀಮಂತ ಕ್ಯಾಮಿಲೋ ಮನೆಯಿಂದ ಎರವಲು ತಂದಿದ್ದಳು. ಆದರೆ ಜನರಲ್‌ರಿಗೆ ಆಗಿನ ಅನೇಕ ವಿವರಗಳು ನೆನಪಿನಲ್ಲಿರಲಿಲ್ಲ, ಅವರಿಗಾಗಲೀ ಜೋಸೆ ಪೆಲಾಸಿಯೋಸ್‌ಗೇ ಆಗಲೀ ತೀರಪ್ರದೇಶದ ಸ್ಯಾಂಕೋಚೋ ಮತ್ತು ವೆನಿಝೂಲದ ಹರ್ವಿಡೋ ಎರಡೂ ಒಂದೇನೇ ಎಂಬುದು ತಿಳಿದಿರಲಿಲ್ಲ. ಆದರೆ ಜನರಲ್ ಕ್ಯಾರೆನೋಗೆ ಮಾತ್ರ ಅವೆರಡೂ ಒಂದೇ ಎನ್ನಿಸಿತ್ತು. ಅವರು ಆ ತಿನಿಸನ್ನು ರೇವಿನ ಗುಡ್ಡದ ಮೇಲೆ ತಿಂದಿದ್ದರು, ಆದರೆ ನದಿಪ್ರಾಂತದಲ್ಲಿನ ಹೋರಾಟದ ಕಾಲದಲ್ಲಲ್ಲ, ಮೂರು ವರ್ಷಗಳ ಹಿಂದೆ ತಾವು ಉಗಿದೋಣಿಯಲ್ಲಿ ಅಲ್ಲಿಗೆ ಬಂದಿದ್ದಾಗ. ತಮ್ಮ ನೆನಪುಗಳಲ್ಲಿ ತಳಮಳಕಾರಿಯಾದವೇ ಎದ್ದು ನಿಲ್ಲುತ್ತಿದ್ದುದರಿಂದ ಕ್ಯಾರೆನೋ ಹೇಳಿದ್ದನ್ನು ಜನರಲ್ ಮರುಮಾತಿಲ್ಲದೆ ಒಪ್ಪಿಕೊಂಡರು.

ಕ್ಯಾಂಪಿಲೋ ಕುಟುಂಬದ ಒಡೆತನದ ಮನೆಯ ಒಳಾಂಗಣದಲ್ಲಿದ್ದ ದೊಡ್ಡ ಬಾದಾಮಿ ಮರಗಳ ಅಡಿಯಲ್ಲಿ ಶಸ್ತ್ರದಳದವರಿಗೆ ಊಟದ ಏರ್ಪಾಟುಮಾಡಲಾಗಿತ್ತು, ಮರದ ಹಲಗೆಗಳ ಮೇಲೆ ಬಟ್ಟೆಯ ಬದಲು ಬಾಳೆಯೆಲೆಗಳನ್ನು ಹರವಿ ಊಟ ಬಡಿಸಲಾಗಿತ್ತು. ಅಂಗಳದ ಎದುರಿನ ತಾರಸಿಯಲ್ಲಿ ಉತ್ಕೃಷ್ಟ ಮೇಜೊಂದನ್ನು ಹಾಕಿ ಜನರಲ್, ಅವರ ಅಧಿಕಾರಿಗಳು ಹಾಗೂ ಕೆಲವು ಮಂದಿ ಅತಿಥಿಗಳಿಗಾಗಿ ಇಂಗ್ಲಿಷ್ ಶೈಲಿಯಲ್ಲಿ ಸಜ್ಜುಗೊಳಿಸಲಾಗಿತ್ತು. ಮಾಂಪಾಕ್ಸ್‌ನಿಂದ ಬೆಳಿಗ್ಗೆ ನಾಲ್ಕು ಗಂಟೆಗೆ ಬಂದಿದ್ದ ಸುದ್ದಿಯಿಂದ ಅಚ್ಚರಿಯಾಯಿತೆಂದೂ, ಅದರಿಂದಾಗಿ ಮಂದೆಯಲ್ಲಿದ್ದ ಅತ್ಯಂತ ದೊಡ್ಡ ಮರಿಯನ್ನೇ ಕೊಂದು ಅಡುಗೆ ಸಿದ್ಧಪಡಿಸಲಾಯಿತೆಂದೂ ಮನೆಯೊಡತಿಯು ವಿವರಿಸಿದಳು. ಅದನ್ನು ಬೇಕಾದ ಗಾತ್ರದ ಹೋಳುಗಳಾಗಿ

ಕತ್ತರಿಸಿ ದೊಡ್ಡ ಪಾತ್ರೆಗಳಲ್ಲಿ ಬೇಯಿಸಿದ್ದ ಭಕ್ಷ್ಯಗಳೊಡನೆ ತೋಟದ ಹಣ್ಣುಗಳನ್ನೂ ಬಡಿಸಲಾಗಿತ್ತು.

ಮೊದಲೇ ತಿಳಿಸದೆ ತಮಗಾಗಿ ಭೋಜನಕೂಟವನ್ನು ಏರ್ಪಡಿಸಲಾಗಿದೆಯೆಂದು ತಡವಾಗಿ ತಿಳಿಸಿದ್ದರ ಬಗ್ಗೆ ಜನರಲ್‌ರಿಗೆ ಅಸಮಾಧಾನವುಂಟಾಯಿತು. ಅದನ್ನೊಪ್ಪಿಕೊಳ್ಳುವಂತೆ ಮಾಡಲು ಜೋಸೆ ಪೆಲಾಸಿಯೋಸ್ ತನ್ನ ಬುದ್ಧಿಯನ್ನೆಲ್ಲ ಖರ್ಚುಮಾಡಬೇಕಾಯಿತು. ಆದರೆ ಕೂಟದ ಆತ್ಮೀಯ ವಾತಾವರಣವು ಅವರ ಮನಸ್ಸನ್ನು ತಿಳಿಗೊಳಿಸಿತು. ಮನೆಯವರ ಸದಭಿರುಚಿಯ ಬಗ್ಗೆ ಜನರಲ್ ಹೊಗಳಿಕೆಯ ಮಾತುಗಳನ್ನಾಡಿದರು ಹಾಗೂ ಮನೆಯ ಹೆಣ್ಣುಮಕ್ಕಳು ಸಾಂಪ್ರದಾಯಿಕ ಉಪಚಾರದಿಂದ ಬಡಿಸಿದ ಬಗ್ಗೆ ತುಂಬ ಸಂತೋಷಗೊಂಡರು. ಎಲ್ಲಕ್ಕಿಂತ ಮಿಗಿಲಾಗಿ, ಅವರು ಪ್ರಶಂಸಿಸಿದ್ದು ಪಿಂಗಾಣಿ ಪಾತ್ರೆಪಡುಗಗಳ ಬಗ್ಗೆ ಮತ್ತು ಉತ್ಕೃಷ್ಟ ಬೆಳ್ಳಿ ಸಾಮಾನುಗಳ ಮೇಲೆ ಆಧುನಿಕತೆಯು ಹಾಳುಗೆಡವಿದ್ದ ಅನೇಕ ಹಳೆಯ ಲಾಂಛನಗಳನ್ನು ಕೆತ್ತಿದ್ದ ಬಗ್ಗೆ ಅವರಿಗೆ ಹರ್ಷವೆನಿಸಿತ್ತು.

ಅವರಿಗಾದ ಒಂದೇ ಒಂದು ಅಸಂತೋಷಕರವಾದ ಅನುಭವವೆಂದರೆ ಭೋಜನಕೂಟಕ್ಕೆ ಬಂದಿದ್ದ ಕ್ಯಾಂಪಿಲೋ ಕುಟುಂಬದ ಆಶ್ರಯದಲ್ಲಿದ್ದ ಒಬ್ಬ ಫ್ರೆಂಚ್ ವ್ಯಕ್ತಿಯು ಈ ಲೋಕದ ಬದುಕು ಮತ್ತು ಮುಂದಿನದರ ಅನೇಕ ರಹಸ್ಯಗಳ ಬಗ್ಗೆ ತನಗಿರುವ ಜ್ಞಾನವನ್ನು ಪ್ರದರ್ಶಿಸಲು ತವಕದಿಂದ ಮುಂದಾಗುತ್ತಿದುದು. ನೌಕಾಘಾತವೊಂದರಲ್ಲಿ ಅವನು ಎಲ್ಲವನ್ನೂ ಕಳೆದುಕೊಂಡಿದ್ದನಂತೆ, ಅವನ ಸಹಾಯಕರು ಮತ್ತು ಸೇವಕರ ಪರಿವಾರವೇ ಸುಮಾರು ಒಂದು ವರ್ಷದಿಂದಲೂ ಮನೆಯ ಅರ್ಧಭಾಗವನ್ನಾಕ್ರಮಿಸಿಕೊಂಡಿದ್ದರು; ಅವನಾದರೋ ಸಹಾಯ ನ್ಯೂ ಆರ್ಲಿಯನ್ಸ್‌ನಿಂದ ಬರುವುದೆಂಬ ನೆಚ್ಚಿಕೆಯಿಲ್ಲದ ನಿರೀಕ್ಷೆಯಲ್ಲಿದ್ದ. ಅವನ ಹೆಸರು ಡಯೋಕ್ಲೀಸ್ ಅಟ್ಲಾಂಟಿಕ್ ಎಂಬುದನ್ನು ಜೋಸೆ ಪೆಲಾಸಿಯೋಸ್ ಪತ್ತೆ ಹಚ್ಚಿದ್ದ, ಆದರೆ ಅವನ ತಿಳಿವಳಿಕೆ ಮತ್ತು ನ್ಯೂ ಗ್ರನಡಾದಲ್ಲಿ ಕೈಗೊಂಡಿರುವ ಕಾರ್ಯ ಇವುಗಳ ಬಗ್ಗೆ ಏನೂ ಗೊತ್ತಾಗಿರಲಿಲ್ಲ. ಕೈಯಲ್ಲಿ ಒಂದು ತ್ರಿಶೂಲ ಹಿಡಿದುಕೊಂಡು ಬರಿಮೈಯಲ್ಲಿ ನಿಂತರೆ ಅವನು ರಾಜ ನೆಪ್ಚೂನ್ ತರಹ ಕಾಣಿಸುತ್ತಿದ್ದ; ಊರಲ್ಲಿ ಅವನು ಹಂದಿಯಂತಹ ಹೆಂಡಬುರುಕ ಎಂದು ಕುಖ್ಯಾತನಾಗಿದ್ದ. ಆದರೆ ಭೋಜನಕಾಲದಲ್ಲಿ ಅವನು ಜನರಲ್ ಇದ್ದ ಮೇಜಿನ ಬಳಿ ಬರುವಂತೆ ಮಾಡಿತ್ತು; ಸ್ನಾನ ಮಾಡಿ ಉಗುರುಗಳನ್ನು ಸ್ವಚ್ಛಗೊಳಿಸಿಕೊಂಡು ಉಸಿರು ಕಟ್ಟಿಸುವ ಮೇ ಶಕೆಗೆ ತಕ್ಕ ಉಡುಪು ಧರಿಸಿ, ಪ್ಯಾರಿಸ್‌ನ ಅಂಗಡಿಗೆ ಚಳಿಗಾಲದಲ್ಲಿ ಬಂದಿರುವನೇನೋ ಎಂಬಂತೆ, ಚಿನ್ನದ ಗುಂಡಿಗಳ ನೀಲಿ ಜಾಕೆಟ್ ಮತ್ತು ಹಳೇ ಕಾಲದ ನೀಳ ಗೆರೆಗಳ ಟ್ರೌಸರ್ ಹಾಕಿಕೊಂಡಿದ್ದ.

ಮೊದಲಿನ ಕುಶಲೋಪರಿಗಳು ಮುಗಿದ ಕೂಡಲೇ ಅವನು ಪ್ರೌಢ ಸ್ಪಾನಿಶ್‌ನಲ್ಲಿ ಪ್ರಗಲ್ಭ ಉಪನ್ಯಾಸವನ್ನು ಕೊಡಲು ಶುರುಮಾಡಿದ. ಗ್ರೆನೋಬಲ್‌ನಲ್ಲಿ ಪ್ರಾಥಮಿಕ ಶಾಲೆಯಲ್ಲಿ ತನ್ನ ಸಹಪಾಠಿಯಾಗಿದ್ದವನೊಬ್ಬ ಹದಿನಾಲ್ಕು ವರ್ಷಗಳ ನಿದ್ರಾರಹಿತ ಸಂಶೋಧನೆ ಮಾಡಿ ಗ್ರೀಕ್ ಚಿತ್ರಲಿಪಿಯನ್ನು ಓದುವುದರಲ್ಲಿ ಯಶಸ್ವಿಯಾಗಿರುವನೆಂದು ಹೇಳಿದ. ಮೆಕ್ಕೆ ಜೋಳದ ಮೂಲ ಮೆಕ್ಸಿಕೋ ಅಲ್ಲವೆಂದೂ, ಮೆಸಪೊಟೋಮಿಯವೆಂದೂ, ಅಲ್ಲಿ ಕೊಲಂಬಸ್ ಆಂಟಿಲೀಸ್‌ಗೆ ಬರುವ ಮುಂಚಿನ ಪಳೆಯುಳಿಕೆಗಳು ಪತ್ತೆಯಾಗುರುವುವೆಂದೂ ನಿರೂಪಿಸಿದ. ಹಾಗೆಯೇ ಕಾಯಿಲೆಗಳ ಮೇಲೆ ಆಕಾಶಕಾಯಗಳು ಬೀರುವ' ಪ್ರಭಾವಗಳ ಬಗ್ಗೆ ಅಸ್ಸೀರಿಯನ್ನರು ಪ್ರಯೋಗಗಳ ಮೂಲಕ ಸಾಧಾರವಾಗಿ ಸ್ಥಾಪಿಸಿರುವುದಾಗಿ ನುಡಿದ. ವಿಶ್ವಕೋಶವೊಂದರಲ್ಲಿ ಹೇಳಿರುವುದಕ್ಕೆ ವಿರುದ್ಧವಾಗಿ, ಇತ್ತೀಚೆಗೆ ಕ್ರಿ. ಪೂ. ೪೦೦ ರವರೆಗೂ ಗ್ರೀಕರಿಗೆ ಬೆಕ್ಕುಗಳ ಬಗ್ಗೆ ಏನೂ ತಿಳಿದಿರಲಿಲ್ಲವೆಂದ. ಇವು ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ಅವನು ಉಪದೇಶಭಾಷಣಗಳನ್ನು ಕೊರೆಯುತ್ತ, ಮಧ್ಯೆ ಮಧ್ಯೆ ಅಮೆರಿಕನ್ ಅಡುಗೆಯ ಕೊರತೆಗಳ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಿದ್ದ.

ಎದುರಿನ ಸಾಲಿನಲ್ಲಿಯೇ ಕುಳಿತಿದ್ದರೂ ಜನರಲ್ ಸೌಜನ್ಯಕ್ಕಾದರೂ ಅವನ ಕಡೆಗೆ ಒಮ್ಮೆಯೂ ಗಮನ ಹರಿಸಲಿಲ್ಲ, ಬಹಳ ತಿನ್ನುವವನಂತೆ ತಲೆತಗ್ಗಿಸಿ ಊಟ ಮಾಡಿದ. ಜನರಲ್‌ರೊಡನೆ ಫ್ರೆಂಚ್‌ಮನ್ ತನ್ನ ತಾಯ್ನುಡಿಯಲ್ಲೇ ಮಾತನಾಡಲು ಮೊದಲಿನಿಂದಲೇ ಪ್ರಯತ್ನಿಸಿದರೂ, ಅವರು ಸೌಜನ್ಯಕ್ಕೆ ಸನ್ನೆಯ ಮೂಲಕ ಪ್ರತಿಕ್ರಿಯಿಸಿದರೂ ಮಾತು ಮಾತ್ರ ಸ್ಪಾನಿಶ್‌ನಲ್ಲಿಯೇ ಇರುತ್ತಿತ್ತು. ಜನರಲ್‌ರ ಆವತ್ತಿನ ತಾಳ್ಮೆ ಜೋಸೆ ಲಾರೆನ್ಸಿಯೋ ಸಿಲ್ವಾನಲ್ಲಿ ಆಶ್ಚರ್ಯವುಂಟುಮಾಡಿತ್ತು; ಏಕೆಂದರೆ ಸರ್ವಜ್ಞರೆಂಬಂತೆ ತೋರಿಸಿಕೊಳ್ಳುವ ಯೂರೋಪಿಯನ್ನರನ್ನು ಕಂಡರೆ ಜನರಲ್ ಉರಿದು ಬೀಳುತ್ತಿದ್ದುದು ಅವನಿಗೆ ಗೊತ್ತಿತ್ತು.

ಆ ಫ್ರೆಂಚ್ ವ್ಯಕ್ತಿ ಏರುದನಿಯಲ್ಲಿ ಅನೇಕರೊಂದಿಗೆ, ತನಗಿಂತ ತುಂಬ ದೂರದಲ್ಲಿ ಕುಳಿತಿದ್ದವರೊಂದಿಗೂ, ಮಾತನಾಡಲು ತೊಡಗುತ್ತಿದ್ದ; ಅದರಿಂದ ಸುವ್ಯಕ್ತವಾಗುತ್ತಿದ್ದುದೆಂದರೆ ಜನರಲ್‌ರ ಗಮನವನ್ನು ಸೆಳೆಯುವುದು ಎಂಬುದು. ಆನಂತರ, ಅವನೇ ಹೇಳಿದಂತೆ, ಹುಂಜದಿಂದ ಮೊಲದ ಕಡೆಗೆ, ಜಿಗಿಯುತ್ತ ಜನರಲ್‌ರಿಗೆ ನೇರವಾಗಿ ಒಂದು ಪ್ರಶ್ನೆ ಹಾಕಿದ: "ಹೊಸಗಣರಾಜ್ಯಗಳಿಗೆ ಸೂಕ್ತವಾದುದು ಯಾವ ಬಗೆಯ ಸರ್ಕಾರ?'". ತನ್ನ ಎಲೆಯಿಂದ ತಲೆಯನ್ನು ಮೇಲೆತ್ತದೆ ಜನರಲ್ ಕೇಳಿದರು:

"ನಿಮ್ಮ ಅಭಿಪ್ರಾಯ ಏನು?"

"ನನ್ನ ಅಭಿಪ್ರಾಯದಲ್ಲಿ ಬೋನಾಪಾರ್ಟೆಯ ನಿದರ್ಶನ ನಮಗೆ ಮಾತ್ರವಲ್ಲ, ಇಡೀ ಜಗತ್ತಿಗೇ ಸಮಂಜಸವಾದುದು" ಎಂದ ಫ್ರೆಂಚ್ ವ್ಯಕ್ತಿ.

"ನಿಮಗೆ ಹಾಗನ್ನಿಸುತ್ತದೆ ಎಂಬುದರ ಬಗ್ಗೆ ನನಗೆ ಅನುಮಾನವಿಲ್ಲ. ಯೂರೋಪ್ ಏನು ಕಂಡುಹಿಡಿದರೂ ಅದು ವಿಶ್ವಕ್ಕೆಲ್ಲ ಸೂಕ್ತವಾದದ್ದು, ಮಿಕ್ಕದ್ದೆಲ್ಲ ಹೇಯ ಎಂಬುದು ಯೂರೋಪಿಯನ್ನರ ಭಾವನೆ" ಜನರಲ್ ವ್ಯಂಗ್ಯವನ್ನು ಮರೆಮಾಚದೆ ಹೇಳಿದರು.

"ಮಹಾಸ್ವಾಮಿಯವರು ರಾಜಪ್ರಭುತ್ವವನ್ನು ಪ್ರತಿಪಾದಿಸಿದಿರಿ ಎಂಬುದು ನನ್ನ ತಿಳಿವಳಿಕೆ" ಫ್ರೆಂಚ್ ವ್ಯಕ್ತಿಯ ಉವಾಚ.

ಅದೇ ಮೊದಲ ಸಲ ಜನರಲ್ ಕಣ್ಣುಗಳನ್ನು ಮೇಲೆತ್ತಿ ನುಡಿದರು: "ಅದು ಇನ್ನು ಮುಂದೆ ನಿಮ್ಮ ಅಭಿಪ್ರಾಯವಾಗಿ ಉಳಿಯದಿರಲಿ. ನನ್ನ ಹುಬ್ಬನ್ನು ಕಿರೀಟವೆಂದೂ ಕಳಂಕಗೊಳಿಸಲು ಸಾಧ್ಯವಿಲ್ಲ." ಆಪ್ತಸಹಾಯಕರ ಗುಂಪಿನತ್ತ ಕಣ್ಣು ಹಾಯಿಸಿ ತಮ್ಮ ಮಾತನ್ನು ಮುಗಿಸಿದರು:

"ಇಟೂರ್‌ಬೈಡ್ ನನಗೆ ನೆನಪು ಮಾಡುತ್ತಾರೆ."

"ತಾವು ಯಾವ ವಿಷಯ ಹೇಳುತ್ತಿದ್ದೀರಿ? ತನ್ನ ತಂದೆಯನ್ನು ಗುಂಡಿಟ್ಟು ಕೊಂದಾಗ ಸಮ್ರಾಟನು ಯೂರೋಪಿನ ರಾಜಪ್ರಭುತ್ವವಾದಿಗಳಿಗೆ ಭಾರಿ ಪ್ರೋತ್ಸಾಹವನ್ನು ಕೊಟ್ಟ ಎಂಬ ಹೇಳಿಕೆಯ ಬಗ್ಗೆಯೇ?"

"ಆಗ ನಾನು ಕೊಟ್ಟ ಹೇಳೀಕೆಯಲ್ಲಿನ ಒಂದು ಪದವನ್ನೂ ಬದಲಾಯಿಸಲಾರೆ. ಇಟೂರ್‌ಬೈಡ್‌ನಂತಹ ಒಬ್ಬ ಸಾಮಾನ್ಯ ವ್ಯಕ್ತಿ ಅಂಥ ಅಸಾಮಾನ್ಯ ಕಾರ್ಯಗಳನ್ನು ಮಾಡುವುದು ನನಗೆ ಅಚ್ಚರಿಯುಂಟುಮಾಡಿದೆ. ದೇವರು ಅವನ ಪಾಡಿನಿಂದ ನನ್ನನ್ನು ಪಾರುಮಾಡಲಿ, ಅವನ ಕಾರ್ಯ ಮಾಡುವುದರಿಂದ ನನ್ನನ್ನು ಪಾರರುಮಾಡಿದಂತೆ. ಆದರೆ ನನಗೆ ಗೊತ್ತು ಅದೇ ಕೃತಘ್ನತೆಯಿಂದ ನನ್ನನ್ನೆಂದೂ ಅವನು ಪಾರುಮಾಡಲಾರ" ಎಂದರು ಜನರಲ್.

ಆಮೇಲೆ ತಮ್ಮ ಗಡಸನ್ನು ಮಿದುಗೊಳಿಸಿಕೊಳ್ಳಲು ಪ್ರಯತ್ನಸುತ್ತ, ಹೊಸ ಗಣರಾಜ್ಯಗಳಲ್ಲಿ ರಾಜಪ್ರಭುತ್ವವನ್ನು ಸ್ಥಾಪಿಸಲು ಮಾಡುವ ಸೂಚನೆಯು ಜನರಲ್ ಜೋಸೆ ಆಂಟೋನಿಯೋ ಪಯೆಝ್‌ನಿಂದ ಬಂದುದೆಂದು ವಿವರಿಸಿದರು. ಎಲ್ಲ ಬಗೆಯ ಸಮಾನ ಆಸಕ್ತಿಗಳ ಕಾರಣದಿಂದಾಗಿ ಅದಕ್ಕೆ ವ್ಯಾಪಕತೆ ದೊರಕಿತು, ತಾವೂ ಆ ಬಗ್ಗೆ ಆಲೋಚಿಸುಂತಾಯಿತು, ಅದು ಜೀವಿತಾವಧಿಯ ಅಧ್ಯಕ್ಷ ಹುದ್ದೆಯ ಆಳದಲ್ಲಿ ಹುದುಗಿತ್ತು, ಅದಕ್ಕೆ ಕಾರಣ ಅಮೆರಿಕದ ಐಕ್ಯ ಸಾಧನೆ ಮತ್ತದರ ಮುಂದುವರಿಕೆಗಾಗಿ ಏನು ಬೇಕಾದರೂ ಮಾಡಬೇಕೆಂಬ ಹೆಬ್ಬಯಕೆಯಾಗಿತ್ತು. ಆದರೆ ಅದು ಎಷ್ಟು ಅರ್ಥರಹಿತವೆಂಬುದು ಬಹು ಬೇಗನೆ ಅರಿವಾಗಿತ್ತು.

"ಒಕ್ಕೂಟದಿಂದ ಅದಕ್ಕೆ ವಿರುದ್ಧವಾದುದೇ ಸಂಭವಿಸುತ್ತದೆ. ಆ ವ್ಯವಸ್ಥೆಯು ನಮ್ಮ ದೇಶಗಳಿಗೆ ಕೈಗೆಟುಕದ್ದು ಎನಿಸುತ್ತದೆ, ಯಾಕೆಂದರೆ ಅದಕ್ಕೆ ನಮಗಿರುವುದಕ್ಕಿಂತ ಉನ್ನತ ಮಟ್ಟದ ಗುಣಗಳೂ ಪ್ರತಿಭೆಯೂ ಆವಶ್ಯಕ" ಎಂದು ಜನರಲ್ ವಿಶ್ಲೇಷಿಸಿದರು.

"ಏನಾದರಾಗಲಿ, ವ್ಯವಸ್ಥೆಗಳಿಗಿಂತ ಹೆಚ್ಚಾಗಿ ಅವುಗಳ ಅತಿರೇಕಗಳೇ ಅಮಾನವೀಯಗೊಳಿಸುವುದೆಂಬುದು ಇತಿಹಾಸ ಹೇಳುತ್ತದೆ" ಎಂದ ಫ್ರೆಂಚ್ ವ್ಯಕ್ತಿ.

"ಆ ಮಾತು ನಮಗೆಲ್ಲ ಕಂಠಪಾಠವಾಗಿದೆ. ಅದರ ತಳದಲ್ಲಿರುವುದು ಯೂರೋಪ್‌ನ ಅತಿ ದೊಡ್ಡ ಭಕ್ಷ್ಯತಯಾರಕನಾದ ಬೆಂಜಮಿನ್ ಕಾನ್‌ಸ್ಟೆಂಟ್‌ನ ಮೂರ್ಖತನ, ಅವನು ಮೊದಲು ಕ್ರಾಂತಿಗೆ ವಿರುದ್ಧವಾಗಿದ್ದ, ಆಮೇಲೆ ಅದರ ಪರವಾದ, ನೆಪೋಲಿಯನ್ ವಿರುದ್ಧ ಹೋರಾಡಿದ, ಆನಂತರ ಅವನ ಆಸ್ಥಾನಿಕರಲ್ಲಿ ಒಬ್ಬನಾದ. ಮಲಗುವಾಗ ಗಣರಾಜ್ಯದ ಪರವಾಗಿದ್ದವನು ಏಳುವಾಗ ರಾಜಪ್ರಭುತ್ವವಾದಿಯಾಗುತ್ತಿದ್ದ, ಅಥವಾ ಅದರ ಹಿಂದುಮುಂದು. ಈಗ ತನ್ನ ಯೂರೋಪಿಯನ್ ಅಹಂಕಾರದ ಕಾರ್ಯ ಮತ್ತು ಗತ್ತುಗಳಿಂದ' ಸತ್ಯದ ಪರಮ ರಕ್ಷಕನಾಗಿ ಮೆರೆಯುತ್ತಿದ್ದಾನೆ" ಎಂದು ಜನರಲ್ ಜನರಲ್‌ವಿವರಣೆ ನೀಡಿದರು.

"ದೌರ್ಜನ್ಯದ ವಿರುದ್ಧದ ಕಾನ್‌ಸ್ಟೆಂಟ್‌ನ ವಾದಗಳು ತುಂಬ ಸರಳವಾಗಿವೆ" ಎಂದ ಫ್ರೆಂಚ್ ವ್ಯಕ್ತಿ.

"ಶ್ರೀಮಾನ್ ಕಾನ್‌ಸ್ಟೆಂಟ್ ಕೂಡ, ಆದರ್ಶ ಫ್ರೆಂಚ್ ವ್ಯಕ್ತಿಯಂತೆ, ಆತ್ಯಂತಿಕ ಆಸಕ್ತಿಗಳ ಆರಾಧಕ. ಇನ್ನೊಂದೆಡೆ, ಈ ವಿವಾದದಲ್ಲಿ ಆಬ್ಬಟ್ ಪ್ರಾಡ್ಟ್ ಮಾಡಿದ ಒಂದೇ ಸರಳ ಹೇಳಿಕೆಯೆಂದರೆ ರಾಜಕೀಯ ಕಾರ್ಯನೀತಿಯು ಎಲ್ಲಿ ಮತ್ತು ಯಾವಾಗ ರೂಪಿತವಾಯಿತು ಎಂಬುದನ್ನವಲಂಬಿಸುತ್ತದೆ ಎಂಬುದು. 'ಸಾಯುವವರೆಗೂ ಹೋರಾಟ'ದ ಕಾಲದಲ್ಲಿ ನಾನೇ ಒಂದು ದಿನದಲ್ಲಿಯೇ, ಲ ಗೌರ್ಯದ ಆಸ್ಪತೆಯಲ್ಲಿದ್ದ ರೋಗಿಗಳು ಸೇರಿದಂತೆ, ಎಂಟು ನೂರು ಮಂದಿ ಸ್ಪಾನಿಶ್ ಯುದ್ಧಖೈದಿಗಳನ್ನು ಕೊಲ್ಲಲು ಆಜ್ಞೆಮಾಡಿದೆ. ಅದೇ ಪರಿಸ್ಥಿತಿಯಲ್ಲಿ, ಇವತ್ತೂ ಮತ್ತದೇ ಆಜ್ಞೆ ಮಾಡಲು ನನ್ನ ಧ್ವನಿ ನಡುಗುವುದಿಲ್ಲ, ಆದರೆ ಯೂರೋಪಿಯನ್ನರಿಗೆ ನನ್ನನ್ನು ಆಕ್ಷೇಪಿಸಲು ಯಾವ ನೈತಿಕ ಅಧಿಕಾರವೂ ಇರುವುದಿಲ್ಲ. ಯಾಕೆಂದರೆ ಯಾವುದಾರೂ ಪ್ರದೇಶದ ಇತಿಹಾಸವು ರಕ್ತ, ಹೀನಾಯ, ಅನ್ಯಾಯ ಇವುಗಳಲ್ಲಿ ಮುಳುಗಿದ್ದರೆ ಅದು ಯೂರೋಪ್‌ನ ಇತಿಹಾಸ ಮಾತ್ರ" ಎಂದರು ಜನರಲ್.

ತನ್ನ ವಿಶ್ಲೇಷಣೆಯಲ್ಲಿ ಅವರು ಹೆಚ್ಚು ಹೆಚ್ಚು ಆಳಕ್ಕೆ ಇಳಿದಷ್ಟೂ, ತಮ್ಮ ಕ್ರೋಧಾಗ್ನಿಗೆ ಹೆಚ್ಚು ಉರುವಲನ್ನು ಸುರಿದಷ್ಟೂ, ಇಡೀ ನಗರವನ್ನು

ಗಾಢ ಮೌನವು ಆವರಿಸುತ್ತಿತ್ತು. ಫ್ರೆಂಚ್ ವ್ಯಕ್ತಿ ಮೂಕವಿಸ್ಮಿತನಾದ, ಮಾತಿನ ನಡುವೆ ತಲೆ ಹಾಕಲು ಪ್ರಯತ್ನಿಸಿದ, ಆದರೆ ಜನರಲ್ ತಮ್ಮ ಕೈ ಆಡಿಸಿ ಆ ಪ್ರಯತ್ನಕ್ಕೆ ಕತ್ತರಿ ಹಾಕುತ್ತಿದ್ದರು. ಯೂರೋಪಿಯನ್ ಇತಿಹಾಸದಲ್ಲಿನ ಹೀನ ಮಾರಣಹೋಮಗಳನ್ನು ಜನರಲ್ ಎತ್ತಿ ತೋರಿಸುತ್ತಿದ್ದರು. ಸಂತ ಬಾರ್ಥೋಲೋಮ್ಯೂನ ರಾತ್ರಿಯಂದು ಹತ್ಯೆಯಾದವರ ಸಂಖ್ಯೆ ಹತ್ತು ಗಂಟೆಗಳಲ್ಲಿ ಎರಡು ಸಾವಿರವನ್ನು ತಲುಪಿತ್ತು. ಎನ್ಸೈಸಾನ್ಸ್‌ನ ವೈಭವದಲ್ಲಿ ಸಮ್ರಾಟನ ಸೈನ್ಯದಿಂದ ಸಂಬಳ ಪಡೆಯುತ್ತಿದ್ದ ಹನ್ನೆರಡು ಸಾವಿರ ಮಂದಿ ಕೂಲಿ ಸಿಪಾಯಿಗಳು ರೋಮ್ ಮೇಲೆ ದಾಳಿ ನಡೆಸಿ, ಅದನ್ನು ನಾಶ ಮಾಡಿ, ನಗರದ ಎಂಟು ಸಾವಿರ ಪ್ರಜೆಗಳ ಕತ್ತು ಕತ್ತರಿಸಿದರು. ಆಮೇಲೆ ಸಂತೀಕರಣ: 'ಭಯಂಕರ' ಎಂಬ ಬಿರುದಿಗೆ ಅರ್ಹನಾದ, ಎಲ್ಲ ರಷ್ಯನರ ಜ಼ಾರ್ ಆಗಿದ್ದ ನಾಲ್ಕನೆಯ ಇವಾನ್, ಮಾಸ್ಕೋ ಮತ್ತು ನೊವ್‌ಗೊರೋಡ್ ನಗರಗಳ ನಡುವೆ ವಾಸಿಸುತ್ತಿದ್ದ ಎಲ್ಲ ಜನರನ್ನೂ ಕೊಂದುಹಾಕಿಸಿದ್ದ, ಮತ್ತು ನೊವ್‌ಗೊರೋಡ್‌ನಲ್ಲಿ, ತನ್ನ ವಿರುದ್ಧ ಸಂಚು ಮಾಡುತ್ತಿರುವರೆಂಬ ಕಾರಣದಿಂದ, ಒಂದೇ ಏಟಿಗೆ ಅಲ್ಲಿನ ಎಲ್ಲ ಇಪ್ಪತ್ತು ಸಾವಿರ ಮಂದಿಯನ್ನು ಕೊಚ್ಚಿಹಾಕಿಸಿದ.

"ಆದ್ದರಿಂದ ನಾವೇನು ಮಾಡಬೇಕೆಂದು ಹೇಳುವುದನ್ನು ನಿಲ್ಲಿಸುವ ಉಪಕಾರ ಮಾಡಿ. ನಾವು ಹೇಗಿರಬೇಕೆಂದು ಉಪದೇಶ ಮಾಡಲು ಪ್ರಯತ್ನಿಸಬೇಡಿ, ನಮ್ಮನ್ನು ನಿಮ್ಮಂತೆಯೇ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಡಿ, ನೀವು ಎರಡು ಸಾವಿರ ವರ್ಷಗಳಷ್ಟು ಕಾಲ ಅಷ್ಟು ಕೆಟ್ಟದಾಗಿ ಮಾಡಿರುವುದನ್ನು ನಾವು ಇಪ್ಪತ್ತು ವರ್ಷಗಳಲ್ಲೆ ಉತ್ತಮವಾಗಿ ಮಾಡಬೇಕೆಂದು ಹೇಳಬೇಡಿ" ಎಂದ ಜನರಲ್‌ರು ಖಂಡತುಂಡವಾಗಿ.

ತಟ್ಟೆಯಲ್ಲಿ ಚಾಕುಫ್ಲೋರ್ಕುಗಳನ್ನು ಕತ್ತರಿಯಾಗಿಟ್ಟ ಅವರು ಮೊದಲ ಬಾರಿಗೆ ತಮ್ಮ ಉರಿಯುವ ಕಣ್ಣುಗಳನ್ನು ಫ್ರೆಂಚ್ ವ್ಯಕ್ತಿಯ ಮೇಲೆ ನೆಟ್ಟು, "ಅವೆಲ್ಲ ಹಾಳಾಗಲಿ, ನಾವು ಮಧ್ಯಕಾಲೀನ ಪ್ರಶಾಂತತೆಯನ್ನು ಹೊಂದಲು ಬಿಡಿ" ಎಂದರು.

ಮತ್ತೊಮ್ಮೆ ಕೆಮ್ಮು ಒತ್ತರಿಸಿ ಬಂದು ಉಸಿರಾಡಲೂ ಆಗಲಿಲ್ಲ. ಅದನ್ನು ಹೇಗೋ ಹತೋಟಿಗೆ ತಂದುಕೊಂಡ ಮೇಲೆ ಅವರಲ್ಲಿ ಕ್ರೋಧದ ಲವಲೇಶವೂ ಉಳಿದಿರಲಿಲ್ಲ. ಕಿಡ್ ಕ್ಯಾಂಪಿಲೋ ಕಡೆ ತಿರುಗಿ ಪ್ರಸನ್ನ ಮುಗುಳ್ನಗೆ ಬೀರಿದರು.

"ದಯವಿಟ್ಟು ಕ್ಷಮಿಸಿ ಗೆಳೆಯರೆ, ಇಂಥ ಅಮೋಘ ಭೋಜನಕೂಟದಲ್ಲಿ ಅಂತಹ ಕೂಗಾಟ ಬೇಕಾಗಿರಲಿಲ್ಲ" ಎಂದರು.

ಕರ್ನಲ್ ವಿಲ್ಸನ್ ಈ ಪ್ರಸಂಗವನ್ನು ಆ ಕಾಲದ ಚರಿತ್ರಕಾರನಿಗೆ ನಿರೂಪಿಸಿದರೂ ಅವನು ಅದನ್ನು ದಾಖಲಿಸುವ ಗೊಡವೆಗೆ ಹೋಗಲಿಲ್ಲ.

"ಬಡಪಾಯಿ ಜನರಲ್‌ರ ಸಂಗತಿ ಮುಕ್ತಾಯವಾಯಿತು" ಎಂದ ಅವನು. ಅವರ ಕೊನೆಯ ಪಯಣವನ್ನು ಕಂಡವರಿಗೆಲ್ಲ ಮೂಲತಃ ಇದ್ದುದು ಅದೇ ನಂಬಿಕೆ. ಪ್ರಾಯಶಃ ಈ ಕಾರಣದಿಂದಲೇ ಯಾರೂ ಬರಹದಲ್ಲಿ ಅದನ್ನೆಲ್ಲ ದಾಖಲಿಸಲಿಲ್ಲ. ಅವರ ಕೆಲವು ಮಂದಿ ಸಂಗಾತಿಗಳ ಪ್ರಕಾರ, ಜನರಲ್‌ರಿಗೆ ಇತಿಹಾಸದಲ್ಲಿ ಬಿಲ್‌ಕುಲ್ ಸ್ಥಾನವಿರಲಿಲ್ಲ.

ಝಂಬ್ರಾನೋ ಕಳೆದ ಮೇಲೆ ಕಾಡು ದಟ್ಟವಾಗಿತ್ತು, ಊರುಗಳು ಹೆಚ್ಚು ಗೆಲವಿನಿಂದಲೂ ವರ್ಣಮಯವಾಗಿಯೂ ಇದ್ದವು, ಕೆಲವು ಕಡೆಗಳಲ್ಲಂತೂ ಬೀದಿಗಳಲ್ಲಿ ಕಾರಣವಿಲ್ಲದೆಯೇ ಸಂಗೀತ ಮೊಳಗುತ್ತಿತ್ತು. ಜೋಲಿಮಂಚದಲ್ಲಿ ಅಡ್ಡಾಗಿ ಸಣ್ಣ ನಿದ್ದೆಯ ಮೂಲಕ ಫ್ರೆಂಚ್ ವ್ಯಕ್ತಿಯ ಅಧಿಕ ಪ್ರಸಂಗವನ್ನು ಜೀರ್ಣಮಾಡಿಕೊಳ್ಳಲು ಜನರಲ್ ಪ್ರಯತ್ನಿಸಿದರು, ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ. ಆ ಬಗ್ಗೆ ಯೋಚಿಸುವುದನ್ನು ಬಿಡುವುದು ಅವರಿಗೆ ಕಷ್ಟವಾಯಿತು, ಜೋಲಿಮಂಚದ ಏಕಾಂತತೆಯಲ್ಲಿ ಮತ್ತು ತಮ್ಮ ವಿರೋಧಿ ದೂರವಿರುವ ಈಗ ಹೊಳೆಯುತ್ತಿರುವ ಸಮಂಜಸ ವಾಕ್ಯಗಳು ಮತ್ತು ಅಜೇಯ ವಾದವೈಖರಿ ಆಗ ಬರಲಿಲ್ಲವೆಂಬ ವಿಷಾದವನ್ನು ಅವರು ಜೋಸೆ ಪೆಲಾಸಿಯೋಸ್‌ನೊಡನೆ ಹೇಳಿಕೊಂಡರು. ಆದರೆ ರಾತ್ರಿಯಾಗುವ ಹೊತ್ತಿಗೆ ಅವರ ಸ್ಥಿತಿ ಸುಧಾರಿಸಿತ್ತು. ಈ ನತದೃಷ್ಟ ಫ್ರೆಂಚ್ ವ್ಯಕ್ತಿಯ ಸ್ಥಿತಿಗತಿಗಳನ್ನು ಸರ್ಕಾರವು ಸುಧಾರಿಸಬೇಕೆಂಬ ಆದೇಶವನ್ನು ಕ್ಯಾರೆನೋಗೆ ನೀಡಿದರು.

ಸಮುದ್ರಕ್ಕೆ ಹತ್ತಿರವಾಗಿದ್ದೇವೆಂಬ ಭಾವನೆಯಿಂದ ಬಹು ಮಂದಿ ಸೇನಾಧಿಕಾರಿಗಳು ಉಲ್ಲಸಿತರಾಗಿದ್ದರು, ಪ್ರಕೃತಿಯಿಡೀ ತೋರಿಸುತ್ತಿದ್ದ ಉತ್ಸುಕತೆಯೇ ಇದಕ್ಕೆ ಸಾಕ್ಷಿಯಾಗಿತ್ತು. ಸಹಜ ಚಟುವಟಿಕೆಯಿಂದ ಅವರು ಅಂಬಿಗರಿಗೆ ಸಹಾಯಮಾಡಿದರು, ಬಂದೂಕು ತುದಿಯಿಂದ ಮೊಸಳೆಗಳನ್ನು ಚುಚ್ಚಿ ಬೇಟೆಯಾಡಿದರು, ಸುಲಭ ಕಾರ್ಯಗಳನ್ನು ಗೋಜಲುಗೊಳಿಸಿ ತಮ್ಮ ಶಕ್ತ್ಯಧಿಕವನ್ನು ಹಡಗಿನ ಗುಲಾಮರಂತೆ ಬಳಸತೊಡಗಿದರು. ಮತ್ತೊಂದೆಡೆ, ತನ್ನ ಕುಟುಂಬದ ಅನೇಕರಿಗೆ ಆಗಿದ್ದಂತೆ ತನಗೂ ಕಣ್ಣಿಗೆ ಪೊರೆ ಬಂದು ಕುರುಡಾಗಬಹುದೆಂಬ ಭಯ ಬಹಳ ಕಾಲದಿಂದ ಇದ್ದುದರಿಂದ, ಜೋಸೆ ಲಾರೆನ್ಸಿಯೋ ಸಿಲ್ವಾ ಸಾಧ್ಯವಾದಾಗಲೆಲ್ಲ ಹಗಲು ನಿದ್ದೆ ಮಾಡಿ ರಾತ್ರಿ ಕೆಲಸ ಮಾಡಿದ. ಕತ್ತಲಲ್ಲಿ ಕೆಲಸಮಾಡಿ ಕುರುಡನಾದರೂ ಉಪಯುಕ್ತನಾಗುವುದು ಹೇಗೆಂದು ಅಭ್ಯಾಸ ಮಾಡುತ್ತಿದ್ದ. ನಿದ್ದೆ ಬಾರದ ಸಂದರ್ಭಗಳಲ್ಲಿ ಕುಶಲಕೆಲಸಗಳಲ್ಲಿ ನಿರತನಾಗುವನೆಂಬುದನ್ನು ತಾನೇ ಕತ್ತರಿಸಿದ್ದ ದಿಮ್ಮಿಗಳಿಂದ ಹಲಗೆಗಳನ್ನು ಕೊಯ್ಯುವ, ತುಂಡುಗಳನ್ನು ಜೋಡಿಸುವ, ಇತರರ ನಿದ್ದೆ ಕೆಡಿಸಬಾರದೆಂದು ಸುತ್ತಿಗೆಯನ್ನು ಮೆಲ್ಲಗೆ ಕುಟ್ಟುವ ಸದ್ದು ಬಿಡಾರದಿಂದ ಅನೇಕ ವೇಳೆ ಹೊಮ್ಮುವುದನ್ನು ಕೇಳುವ ಮೂಲಕ ಜನರಲ್

ಅರಿಯುತ್ತಿದ್ದರು. ಮಾರನೆಯ ಹಗಲು ಬೆಳಕಿನಲ್ಲಿ ನೋಡಿದರೆ ಕತ್ತಲಲ್ಲಿ ಅಂಥ ನಯವಾದ ಮರಗೆಲಸ ಮಾಡಿರುವುದು ಆಶ್ಚರ್ಯವುಂಟುಮಾಡುತ್ತಿತ್ತು. ಪ್ಯೂರ್ಟೋ ರಿಯಲ್‌ನಲ್ಲಿ ಅಂದು ರಾತ್ರಿ ಪಹರೆಯವನು ಯಾರೋ ಕತ್ತಲಲ್ಲಿ ಜನರಲ್‌ರ ಜೋಲಿಮಂಚದಡಿ ನುಸುಳುತ್ತಿರುವರೆಂದು ಭಾವಿಸಿ ಜೋಸೆ ಲಾರೆನ್ಸಿಯೋ ಸಿಲ್ವಾಗೆ ಇನ್ನೇನು ಗುಂಡು ಹಾರಿಸುವುದರಲ್ಲಿದ್ದ, ಅವನು ಆಗ ತರಾತುರಿಯಿಂದ ಸಂಕೇತಪದವನ್ನು ಉಚ್ಚರಿಸಿದ್ದ.

ದೋಣಿಪಯಣ ಈಗ ಹೆಚ್ಚು ವೇಗವಾಗಿತ್ತು, ಪ್ರಶಾಂತವಾಗಿಯೂ ಇತ್ತು. ಕಮೋಡರ್ ಎಲ್ಬರ್‌ನ ಹಡಗು ಎದುರು ದಿಕ್ಕಿನಲ್ಲಿ ಹಾಯ್ದು ಹೋದಾಗ ಅದರ ಜಾಡಿನ ರಭಸವು ಇವರ ದೋಣಿಸಮೂಹವನ್ನು ತಲ್ಲಣಗೊಳಿಸಿತ್ತು, ಸಾಮಗ್ರಿ ತುಂಬಿದ್ದ ದೋಣಿಯಂತೂ ಮುಳುಗೇ ಹೋಗಿತ್ತು. ಹಾಯಿಯ ಮೇಲೆ ದೊಡ್ಡದಾಗಿ ಬರೆದಿದ್ದ *'ವಿಮೋಚಕ'* ಎಂಬ ಬರಹ ಕಾಣಿಸುತ್ತಿತ್ತು. ಅದನ್ನು ನೋಡಿದ ಜನರಲ್ ಅಪಾಯ ತಪ್ಪುವವರೆಗೂ ಯೋಚನೆಯಲ್ಲಿ ಮುಳುಗಿದರು. *'ವಿಮೋಚಕ'* ಎಂದು ಗೊಣಗಿಕೊಂಡ. ಅನಂತರ ಹಾಳೆ ಮಗುಚುವವರಂತೆ ತನ್ನಷ್ಟಕ್ಕೇ "ಅವನೇ ನಾನು ಎಂದು ಯೋಚಿಸಿದರೆ" ಅಂದುಕೊಂಡರು.

ರಾತ್ರಿ ಅವರು ಜೋಲಿಮಂಚದಲ್ಲಿ ಎಚ್ಚರವಾಗಿಯೇ ಇದ್ದರು, ಕಾಡಿನ ಕ್ಯಾಪ್ಯುಚಿನ್ ಕೋತಿಗಳು, ಕೊಕ್ಯಾಟೂಗಳು ಮತ್ತು ಅನಕೊಂಡಗಳ ಧ್ವನಿಗಳನ್ನು ಗುರುತಿಸುವ ವಿಷಯದಲ್ಲಿ ಹುಟುಹಾಕುತ್ತಿದ್ದವರ ನಡುವೆ ಪಂತ ನಡೆಯುತ್ತಿತ್ತು. ಆಮೇಲೆ ಅವರಲ್ಲೊಬ್ಬ ಕ್ಯಾಂಪೊಲೋಗಳು ಇಂಗ್ಲಿಷ್ ಪಿಂಗಾಣಿ ಸಾಮಾನುಗಳನ್ನೂ, ಬೊಹೆಮಿಯನ್ ಹರಳುಗಳನ್ನೂ ಮತ್ತು ಹಾಲೆಂಡ್ ಬಟ್ಟೆಗಳನ್ನೂ ಅಂಗಳದಲ್ಲಿ ಹೂತುಹಾಕಿದ್ದಾರೆ, ಯಾಕೆಂದರೆ ಅವರಿಗೆ ಕ್ಷಯ ಬಂದೀತೆಂಬ ಭಯ ಎಂದ.

ಜನರಲ್ ಈ ಹೊಸ ಜನಪ್ರಿಯ ರೋಗನಿದಾನದ ಬಗ್ಗೆ ಮೊದಲ ಬಾರಿ ಕೇಳಿದಂತಾಯಿತು, ಆದರೆ ಇದು ನದಿಯ ಉದ್ದಗಲಕ್ಕೂ ಜನಜನಿತವಾಗಿತ್ತು, ಹಾಗೆಯೇ ಬೇಗ ನದೀತೀರದ ಗುಂಟ ಹರಡುವುದು ಖಾತರಿಯಾಗಿತ್ತು. ಇದು ಜನರಲ್‌ರ ಮೇಲೆ ಪರಿಣಾಮ ಬೀರಿದೆ ಎಂಬುದು ಜೋಸೆ ಪೆಲಾಸಿಯೋಸ್‌ಗೆ ಗೊತ್ತಾಯಿತು, ಯಾಕೆಂದರೆ ಅವರು ಜೋಲಿಮಂಚದಲ್ಲಿ ತೂಗಾಡುವುದನ್ನು ನಿಲ್ಲಿಸಿದ್ದರು. ನಿಡುಗಾಲ ಆಲೋಚಿಸಿದ ಬಳಿಕ, "ನಾನು ಊಟಕ್ಕೆ ತೊಡಗಿದ್ದು ಜಾಗ ಶುಭ್ರ ಮಾಡಿಕೊಂಡ ಮೇಲೆಯೇ" ಎಂದರು.

ಮಾರನೆಯ ದಿನ ಅವರು ತಳವೂರಿದ್ದು ಟೆನೆರೈಫ್ ಎಂಬ ಹಳ್ಳಿಯಲ್ಲಿ, ಆಕಸ್ಮಿಕದಲ್ಲಿ ಮುಳುಗಿಹೋಗಿದ್ದ ಆಹಾರಸಾಮಗ್ರಿಗಳನ್ನು

ತುಂಬಿಸಿಕೊಳ್ಳಲು. ಜನರಲ್ ಮಾತ್ರ ದೋಣಿಯಲ್ಲೇ ಯಾರ ಕಣ್ಣಿಗೂ ಬೀಳದಂತಿದ್ದರು. ಲೆನೋಇಟ್ ಅಥವಾ ಲೆನೋಇರ್ ಎಂಬ ಕೊನೆಯ ಹೆಸರಿನ ಫ್ರೆಂಚ್ ವ್ಯಾಪಾರಿಯನ್ನು ಕರೆತರಲು ವಿಲ್ಸನ್‌ಗೆ ಹೇಳಿದರು, ಅವನ ಮಗಳು ಅನಿತಾಳಿಗೆ ಮೂವತ್ತು ವರ್ಷ ತುಂಬುವುದರಲ್ಲಿತ್ತು. ಆದರೆ ಟೆನೆರೈಫ಼್‌ನಲ್ಲಿ ವಿಚಾರಿಸಿದಾಗ ಏನೂ ಗೊತ್ತಾಗದಿದ್ದುದರಿಂದ, ಅಕ್ಕಪಕ್ಕದ ಊರುಗಳಾದ ಗ್ವಇಟಾರೋ, ಸಲಾಮಿನ ಮತ್ತು ಎಲ್ ಪಿನೋನ್‌ಗಳಲ್ಲೂ ಆ ಬಗ್ಗೆ ವಿಚಾರಿಸಬೇಕೆಂದು ಜನರಲ್ ಸೂಚಿಸಿದರು. ಕೊನೆಗೆ ಆ ವದಂತಿಯು ಸುಳ್ಳೆಂದು ಅವರಿಗೆ ಮನವರಿಕೆಯಾಯಿತು.

ಅವರ ಆಸಕ್ತಿಯನ್ನು ಅರ್ಥಮಾಡಿಕೊಳ್ಳಬಹುದಾಗಿತ್ತು: ಏಕೆಂದರೆ ನದೀಪ್ರಾಂತದ ಹೋರಾಟ ಕಾಲದಲ್ಲಿ ಅವರ ಮತ್ತು ಅನಿತಾ ಲೆನೋಇಟ್‌ಳ ನಡುವೆ ಅನೈತಿಕ ಸಂಬಂಧವುಂಟಾಗಿದೆಯೆಂಬ ಒಂದು ಕುತಂತ್ರದ ವದಂತಿ ಕ್ಯಾರಕಾಸ್‌ನಿಂದ ಲಿಮವರೆಗೆ ಅವರನ್ನು ಹಿಂಬಾಲಿಸಿತ್ತು. ಎರಡು ಕಾರಣಗಳಿಂದ ಅವರಿಗೆ ನೋವಾಗಿತ್ತು, ಆದರೆ ಆರೋಪ ಸುಳ್ಳೆಂದು ಸಾಬೀತುಮಾಡಲು ಅವರೇನೂ ಮಾಡುವಂತಿರಲಿಲ್ಲ. ಮೊದಲನೆಯದಾಗಿ, ಅವರ ತಂದೆ ಕರ್ನಲ್ ಜುವಾನ್ ವಿಸೆಂಟೆ ಒ಼ಬಲಿವರ್ ಕೂಡ ಹೆಂಗಸರೊಡನೆ, ಅವರಲ್ಲಿ ಕೆಲವರು ಅಪ್ರಾಪ್ತವಯಸ್ಕರು ಮತ್ತು ಇನ್ನೂ ಕೆಲವರ ಮೇಲೆ ತನ್ನ ಅಧಿಕಾರದ ಹಕ್ಕನ್ನು ಚಲಾಯಿಸಿ, ಹೊಂದಿದ್ದರೆನ್ನಲಾದ ಸಂಬಂಧದ ಬಗ್ಗೆ ಸ್ಯಾನ್ ಮೇಟಿಯೋದ ಬಿಷಪ್ ಮುಂದೆ ವಿಚಾರಣೆಯ ನಾನಾ ಅಧಿವೇಶನಗಳನ್ನೆದುರಿಸಬೇಕಾಯಿತೆಂಬುದು. ಎರಡನೆಯದಾಗಿ, ನದೀಪ್ರಾಂತದ ಹೋರಾಟ ಕಾಲದಲ್ಲಿ ಅವರು ಟೆನೆರೈಫ಼್‌ನಲ್ಲಿ ಕೇವಲ ಎರಡು ದಿನಗಳು ಮಾತ್ರವಿದ್ದು ಆ ಅವಧಿಯಲ್ಲಿ ಅಂತಹ ಗಾಢ ಪ್ರಣಯಕ್ಕೆ ಅವಕಾಶವಿಲ್ಲದಿದ್ದುದು. ಆದರೂ ವದಂತಿ ಎಷ್ಟು ದಟ್ಟವಾಗಿದ್ದಿತೆಂದರೆ, ಟೆನೆರೈಫ಼್‌ನ ಶ್ಮಶಾನದಲ್ಲಿದ್ದ ಸೆನೋರಿಟ ಆನ್ ಲೆನೋಇಟ್‌ನ ಸಮಾಧಿಯು ಆ ಶತಮಾನದವರೆಗೂ ಪ್ರೇಮಿಗಳ ಮಿಲನದ ಪವಿತ್ರ ಸ್ಥಳವಾಗಿತ್ತು.

ಅವರ ಪರಿವಾರದಲ್ಲಿ ಜೋಸೆ ಮರಿಯ ಕ್ಯಾರೆನೋ ತಮ್ಮ ಮೂಗಿನ ಕೆಳಗೇ ಅನುಭವಿಸಿದ ಮುಜಗರಕ್ಕೆ ಕಾರಣ ಸಲಿಗೆಯ ಟೀಕೆ. ಇಲ್ಲದಿದ್ದ ಕೈಗಳ ಚಲನೆ, ಬೆರಳುಗಳ ಸ್ಪರ್ಶಜ್ಞಾನ, ಚಳಯಿಂದಾಗಿ ಅವರು ಮೂಳೆಗಳಲ್ಲಿ ನೋವನ್ನು ಅನುಭವಿಸುವಂತಾಯಿತು. ತಮ್ಮ ಬಗ್ಗೆಯೇ ತಮಾಷೆ ಮಾಡಿಕೊಂಡು ನಗುವಷ್ಟು ಹಾಸ್ಯಪ್ರಜ್ಞೆ ಅವರಲ್ಲಿನ್ನೂ ಸಾಕಷ್ಟು ಉಳಿದಿತ್ತು. ಮತ್ತೊಂದೆಡೆ, ನಿದ್ದೆಯಲ್ಲಿ ಪ್ರಶ್ನೆಗಳಿಗೆ ಉತ್ತರ ನೀಡುವ ಅಭ್ಯಾಸ ಅವರಿಗೆ ಕಿರಿಕಿರಿಯುಂಟುಮಾಡುತ್ತಿತ್ತು. ಎಚ್ಚರ ಕಾಲದ ಯಾವ ಹಿಂಜರಿಕೆಯೂ ಇಲ್ಲದೆ ಯಾವ ವಿಷಯದ ಬಗ್ಗೆಯಾದರೂ ಅವರು

ನಿದ್ದೆಯಲ್ಲಿ ಸಂಭಾಷಣೆ ನಡೆಸುತ್ತಿದ್ದರು; ಎಚ್ಚರ ಕಾಲದಲ್ಲಿ ತನ್ನಲ್ಲೇ ಭದ್ರವಾಗಿರಿಸಿಕೊಳ್ಳುತ್ತಿದ್ದ ಗುರಿ–ನಿರಾಶೆಗಳನ್ನು ನಿದ್ದೆಯಲ್ಲಿ ಹೊರಹಾಕುತ್ತಿದ್ದರು. ಒಂದು ಸಂದರ್ಭದಲ್ಲಂತೂ, ಸೈನಿಕ ರಹಸ್ಯವೊಂದನ್ನು ನಿದ್ದೆಯಲ್ಲಿ ಬಯಲು ಮಾಡಿದರೆಂಬ ಆಧಾರರಹಿತ ಆರೋಪಕ್ಕೂ ಗುರಿಯಾಗಿದ್ದರು. ಪಯಣದ ಕೊನೆಯ ರಾತ್ರಿ, ಜೋಸೆ ಪೆಲಾಸಿಯೋಸ್ ಜನರಲ್‌ರ ಜೋಲಿಮಂಚದ ಪಕ್ಕದಲ್ಲಿದ್ದು ನೋಡುತ್ತಿರುವಂತೆಯೇ, ದೋಣಿಯ ಕೆಳಭಾಗದಲ್ಲಿ ಕ್ಯಾರೆನೋ ಹೇಳುತ್ತಿದ್ದುದು ಕೇಳಿಸಿತ್ತು:

"ಏಳು ಸಾವಿರದ ಎಂಟು ನೂರ ಎಂಬತ್ತೆರಡು."

"ಯಾವುದರ ಬಗ್ಗೆ ನೀವು ಹೇಳ್ತರೋದು?" ಎಂದು ಜೋಸೆ ಪೆಲಾಸಿಯೋಸ್ ಪ್ರಶ್ನಿಸಿದ್ದ.

"ನಕ್ಷತ್ರಗಳ ಬಗ್ಗೆ" ಎಂದ ಅವನು.

ಆಗ ಜನರಲ್ ಕಣ್ಣುಗಳನ್ನು ತೆರೆದು, ಕ್ಯಾರೆನೋ ನಿದ್ದೆಯಲ್ಲಿ ಮಾತನಾಡುತ್ತಿರುವನೆಂಬ ನಂಬಿಕೆಯಿಂದ, ತನ್ನ ಜೋಲಿಮಂಚದಲ್ಲಿ ಎದ್ದು ಕುಳಿತು ಕಿಟಕಿಯ ಮೂಲಕ ಆಕಾಶದತ್ತ ದೃಷ್ಟಿ ಬೀರಿದ್ದರು. ಅಲ್ಲಿದ್ದುದು ಹೊಳೆಯುತ್ತಿದ್ದ ಅಸಂಖ್ಯ ನಕ್ಷತ್ರಗಡಣ.

"ಅದರ ಹತ್ತರಷ್ಟಿರಬೇಕು" ಎಂದರು ಜನರಲ್.

"ನಾನು ಹೇಳಿದ್ದು ಸಂಖ್ಯೆಯ ವಿಚಾರ. ಜೊತೆಗೆ ನಾನು ಎಣಿಸ್ತಿದ್ದಾಗ ಎರಡು ಉಲ್ಕೆಗಳು ಹಾದು ಹೋದವು" ಎಂದ ಕ್ಯಾರೆನೋ.

ಆಮೇಲೆ ಜನರಲ್ ಜೋಲಿಮಂಚದಿಂದ ಇಳಿದು ಹೋಗಿ ನೋಡಿದಾಗ ಕ್ಯಾರೆನೋ ದೋಣಿಯ ಮೂತಿಯಲ್ಲಿ ಅಂಗಾತನಾಗಿ ಮಲಗಿದ್ದುದು ಕಾಣಿಸಿತು, ಎಚ್ಚರದಿಂದ ಗಮನಿಸುತ್ತಿದ್ದ, ಅವನ ಬತ್ತಲೆ ದೇಹದ ಮೇಲೆ ನಕ್ಷತ್ರಗಳಂತೆ ಕಲೆಗಳು ಅಡ್ಡಾದಿಡ್ಡಿಯಾಗಿ ಹರಡಿದ್ದವು. ಅವನು ತನ್ನ ತುಂಡು ತೋಳಿನಿಂದ ಎಣಿಸುತ್ತಿದ್ದ. ವೆನಿಝೂಲದಲ್ಲಿ ನಡೆದ ಸೆರಿಟೋಸ್ ಬ್ಲಾಂಕೋಸ್ ಯುದ್ಧದ ನಂತರ ಅವನನ್ನು ಕಂಡದ್ದು ಹೀಗೆಯೇ, ಮೈಮೇಲೆಲ್ಲ ರಕ್ತದ ಕಲೆಗಳು, ಗೀರು ಗಾಯಗಳು, ಸತ್ತಿದ್ದನೆಂದು ಭಾವಿಸಿ ಅವನನ್ನು ಕೆಸರಿನಲ್ಲಿ ಒಂಟಿಯಾಗಿ ಬಿಟ್ಟು ಹೋಗಿದ್ದರು. ಅವನಿಗೆ ಹದಿನಾಲ್ಕು ಇರಿತದ ಗಾಯಗಳಾಗಿದ್ದವು, ಅಂತಹ ಒಂದರಿಂದ ಅವನ ಒಂದು ತೋಳು ಕತ್ತರಿಸಿಹೋಗಿತ್ತು. ಆಮೇಲಿನ ಯುದ್ಧಗಳಲ್ಲೂ ಅವನಿಗೆ ಅನೇಕ ಗಾಯಗಳಾಗಿದ್ದವು. ಆದರೆ ಅವನ ನೈತಿಕ ಸ್ಥೈರ್ಯ ಮಾತ್ರ ಕುಗ್ಗಿರಲಿಲ್ಲ; ಎಡಗೈಯಿಂದಲೇ ಕೆಲಸ ಮಾಡಲು ಎಂಥ ಕೌಶಲವನ್ನು ಪಡೆದನೆಂದರೆ, ಅವನು ಬಿರುಸಿನ ಕತ್ತಿವರಸೆಗಾರನೆಂದು ಹೆಸರು ಪಡೆದನಲ್ಲದೆ, ಸುಂದರವಾದ ಕೈಬರಹಕ್ಕೂ ಹೆಸರುವಾಸಿಯಾದ.

"ನಕ್ಷತ್ರಗಳಿಗೂ ಬಾಳಿನಲ್ಲಿ ವಿನಾಶವಿದೆಯಲ್ಲ, ಹದಿನೆಂಟು ವರ್ಷಗಳ ಹಿಂದೆ ಇದ್ದುದಕ್ಕಿಂತ ಈಗಿರುವ ನಕ್ಷತ್ರಗಳ ಸಂಖ್ಯೆ ಕಡಿಮೆ" ಎಂದ ಕ್ಯಾರೆನೋ.

"ನಿನಗೆಲ್ಲೋ ಭ್ರಾಂತು" ಎಂದರು ಜನರಲ್.

"ಉಹ್ಞೂ, ನನಗೆ ವಯಸ್ಸೇನೋ ಆಗಿದೆ, ಆದರೆ ನಿಮ್ಮ ಮಾತು ನಂಬಲಾರೆ" ಎಂದ ಕ್ಯಾರೆನೋ.

"ನನಗೆ ನಿಗಿಂತ ಎಂಟು ವರ್ಷ ಹೆಚ್ಚು ವಯಸ್ಸಾಗಿದೆ" ಜನರಲ್ ಹೇಳಿದರು.

"ನನಗಾಗಿರೋ ಒಂದೊಂದು ಗಾಯಕ್ಕೂ ಎರಡೆರಡು ವರ್ಷಗಳಂತೆ ಹೆಚ್ಚು ಲೆಕ್ಕ ಹಾಕ್ತೀನಿ. ಹೀಗಾಗಿ ಮಿಕ್ಕೆಲ್ಲರಿಗಿಂತ ನನಗೇ ಹೆಚ್ಚು ವಯಸ್ಸಾಗಿದೆ" ಎಂದು ಕ್ಯಾರೆನೋ ವಿಶ್ಲೇಷಿಸಿದ.

"ಹಾಗಾದರೆ ಜೋಸೆ ಲಾರೆನ್ಸಿಯೋ ಎಲ್ಲರಿಗಿಂತ ವಯಸ್ಸಾದವನು. ಅವನಿಗೆ ಬುಲೆಟ್‌ನಿಂದ ಆರು ಸಲ ಗಾಯಗಳಾಗಿವೆ, ಏಳು ಸಲ ಈಟಿಯ ತಿವಿತ, ಎರಡು ಬಾರಿ ಬಾಣದಿಂದ ಗಾಯವಾಗಿದೆ" ಎಂಬುದು ಜನರಲ್‌ರ ವಿವರಣೆ.

ಕ್ಯಾರೆನೋಗೆ ಇದರಿಂದ ಅವಮಾನವಾದಂತಾಗಿ ನಂಜನ್ನು ಮರೆಮಾಚಿ, "ಹಾಗಾರೆ ತಾವು ತುಂಬ ಚಿಕ್ಕವರು, ಯಾಕೆಂದರೆ ನಿಮಗೆ ಒಂದು ಗೀಚುಗಾಯವೂ ಆಗಿಲ್ಲವಲ್ಲ" ಎಂದ.

ತನ್ನ ಬಗ್ಗೆ ಆಕ್ಷೇಪಣೆಯೆಂಬಂತೆ ಈ ಸತ್ಯವನ್ನು ಕೇಳಿದ್ದು ಮೊದಲ ಬಾರಿಯೇನಾಗಿರಲಿಲ್ಲ. ಆದರೆ ಕ್ಯಾರೆನೋ ಬಾಯಿಂದ ಈ ಮಾತು ಬಂದಾಗ ಅವರೇನೂ ಖೇದಗೊಂಡಂತೆ ಕಾಣಲಿಲ್ಲ. ಅವನ ಜೊತೆಗಿನ ಗೆಳೆತನ ಅತ್ಯಂತ ಕಹಿ ಗಳಿಗೆಗಳನ್ನು ಹಾದು ಬಂದಿತ್ತು. ಅವನ ಪಕ್ಕದಲ್ಲಿ ಕುಳಿತು ಆಗಸದಲ್ಲಿದ್ದ ನಕ್ಷತ್ರಗಳ ಮೇಲೆ ಗಮನ ಹರಿಸಲು ನೆರವಾದರು. ನಿಡು ಮೌನದ ನಂತರ ಕ್ಯಾರೆನೋ ಮಾತಾಡುವ ಹೊತ್ತಿಗೆ ಆಗಲೇ ಗಾಢ ನಿದ್ದೆಯಲ್ಲಿದ್ದ.

"ಈ ಪಪಯಣದೊಡನೆ ನಮ್ಮ ಬದುಕು ಕೊನೆಗೊಳ್ಳುತ್ತದೆ ಎಂಬುದನ್ನು ನಾನು ಒಪ್ಪುವುದಿಲ್ಲ" ಎಂದ.

"ಜೀವಕ್ಕೆ ಸಾವಿನಿಂದ ಮಾತ್ರ ಕೊನೆ ಬರೋದಿಲ್ಲ, ಬೇರೆ ವಿಧಾನಗಳೂ ಇವೆ, ಕೆಲವಂತೂ ಇನ್ನೂ ಹೆಚ್ಚು ಮರ್ಯಾದೆಯವು" ಎಂದರು ಜನರಲ್.

ಕ್ಯಾರೆನೋ ಇದನ್ನೊಪ್ಪಲಿಲ್ಲ.

"ನಾವು ಊದಾ ಬಣ್ಣದ ವರ್ಬೆನ ಹೂ ಹಾಕಿದ ನೀರಲ್ಲಿ ಸ್ನಾನ ಮಾಡಿದರೂ, ಮಾಡಬಹುದಾದ್ದು ಏನಾದರೂ ಇರಬೇಕು. ನಾವು ಮಾತ್ರ ಅಲ್ಲ, ಇಡೀ ವಿಮೋಚನಾ ಪಡೆ" ಎಂದ

ಎರಡನೇ ಬಾರಿಯ ಪ್ಯಾರಿಸ್ ಪ್ರವಾಸದ ಹೊತ್ತಿಗೆ ಜನರಲ್‌ರಿಗೆ ಊದಾ ಬಣ್ಣದ ವರ್ಬೆನ ಹೂ ಹಾಕಿದ ನೀರಲ್ಲಿನ ಸ್ನಾನದ ವಿಷಯ ಗೊತ್ತಿರಲಿಲ್ಲ; ತಮ್ಮ ದೇಶಲ್ಲಿದ್ದ ನಂಬಿಕೆ ಎಂದರೆ ಲಂಟಾನಾ ಹೂಗಳನ್ನು ಹಾಕಿದ ನೀರಲ್ಲಿ ಸ್ನಾನ ಮಾಡಿದರೆ ದುರದೃಷ್ಟ ಹೋಗುತ್ತದೆ ಎಂಬುದು. ಈ ಹೂಗಳ ವಿಷಯವಾಗಿ ಘನಘೋರ ವೈಜ್ಞಾನಿಕ ಗಾಂಭಿರ್ಯದಿಂದ ಹೇಳಿದ್ದವನು ಹಂಬೋಲ್ಡ್‌ಟ್‌ನ ಸಹಯೋಗಿ ಡಾ. ಐಮೀ ಬಾನ್‌ಪ್ಲಾಂಡ್. ಅದೇ ಸಮಯದಲ್ಲಿ ಅವರು ಫ್ರೆಂಚ್ ನ್ಯಾಯಾಲಯದಲ್ಲಿ ಒಬ್ಬ ಘನತೆವೆತ್ತ ಮ್ಯಾಜಿಸ್ಟ್ರೇಟ್ ಅನ್ನು ಭೇಟಿಯಾಗಿದ್ದರು: ಅವನು ಕ್ಯಾರಕಾಸ್‌ನ ಒಬ್ಬ ಯುವಕ, ಪ್ಯಾರಿಸ್‌ನ ಸಾಹಿತ್ಯಕ ವಲಯಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದ. ಅವನಿಗೆ ನೀಳವಾದ ಸುಂದರ ತಲೆಗೂದಲು, ಪವಿತ್ರಸ್ನಾನದಿಂದ ಊದಾ ಬಣ್ಣಕ್ಕೆ ತಿರುಗಿದ್ದ ಸಂತನಿಗಿರುವಂತಹ ಗಡ್ಡ.

ಕಂದಾಚಾರದದ ವಾಸನೆ ಇರುವುದರ ಮತ್ತು ಅತಿಮಾನುಷ ಕೃತಕತೆಯಿರುವುದರ ಬಗ್ಗೆ ಅಥವಾ ತಮ್ಮ ಗುರು ಸಿಮೋನ್ ರಾಡ್ರಿಗೆಝ್‌ರ ವೈಚಾರಿಕತೆಯ ವಿರುದ್ಧದ ಯಾವುದೇ ಪಂಥವನ್ನು ಕಂಡರೆ ಜನರಲ್‌ರಿಗೆ ನಗು. ಆಗ ಅವರಿಗಿನ್ನೂ ಇಪ್ಪತ್ತು ತುಂಬಿತ್ತು, ನೆಪೋಲಿಯನ್ ಬೊನಾಪಾರ್ಟೆಯ ಕಿರೀಟಧಾರಣೆಯಿಂದ ಕಣ್ಣು ಕೋರೈಸಿದ್ದ ಈಚಿನ ಮತ್ತು ಶ್ರೀಮಂತ ವಿಧುರ ಅವರು. ಅವರೊಬ್ಬ ಗಾರೆ ಕೆಲಸದವನು, ರೂಸೋನ 'ಎಮಿಲಿ' ಮತ್ತು 'ಲ ನೂವೆಲ್ ಹೆಲೌಸ್'ನ ತನಗಿಷ್ಟವಾದ ಪುಟಗಳಿಂದ ಸಾಲುಗಳನ್ನು ನೆನೆಪಿನಿಂದ ಉದ್ಧರಿಸಬಲ್ಲವರಾಗಿದ್ದರು. ಅವೆರಡೂ ಕೆಲ ಕಾಲ ಅವನ ಬದಿಯಲ್ಲಿ ಸದಾ ಇರುತ್ತಿದ್ದವು. ಗುರುವಿನ ಮಾರ್ಗದರ್ಶನದಲ್ಲಿ ತನ್ನ ಬೆನ್ನ ಮೇಲೆ ಸಾಮಾನುಚೀಲವನ್ನು ಹೊತ್ತು ಯೂರೋಪ್ ಪೂರ್ತಿ ಕಾಲುನಡಿಗೆಯಲ್ಲೇ ಸಂಚರಿಸಿದ್ದರು. ಬುಡದಲ್ಲಿ ರೋಮ್ ಇದ್ದ ಒಂದು ಬೆಟ್ಟದ ಮೇಲೆ ಡಾನ್ ಸಿಮೋನ್ ರಾಡ್ರಿಗೆಝ್ ಅವರು ಅಮೆರಿಕಗಳ ಹಣೆಬರಹವನ್ನು ಕುರಿತ ತಮ್ಮ ಮತ್ತೊಂದು ಪ್ರೌಢ ಭವಿಷ್ಯವಾಕ್ಕನ್ನು ನುಡಿದಿದ್ದರು. ಅವನ ಕಾಣ್ಕೆಯೂ ಸ್ಪಷ್ಟವಾಗಿತ್ತು.

"ಸ್ಪಾನಿಯಾರ್ಡ್‌ಗಳ ಚುಚ್ಚುವಿಕೆಗೆ ಮಾಡಬೇಕಾದ್ದೆಂದರೆ ಅವರನ್ನು ವೆನಿಝೂಲದಿಂದ ಒದ್ದು ಓಡಿಸುವುದು. ಹಾಗೆ ಮಾಡುವುದಾಗಿ ನಾನು ಪ್ರಮಾಣ ಮಾಡುತ್ತೇನೆ" ಎಂದಿದ್ದರು ಅವರು.

ತಮಗೆ ಪ್ರೌಢಾವಸ್ಥೆ ಬಂದು ಪಾರಂಪರಿಕ ಆಸ್ತಿಗೆ ಹಕ್ಕುದಾರರಾದಾಗ, ತಮ್ಮ ಹುಚ್ಚಿಗೆ ಹಾಗೂ ಉದ್ವೇಗ

ಮನೋಭಾವಕ್ಕನುಗುಣವಾಗಿ ಜೀವಿಸಲು ಆರಂಭಿಸಿದರು ಮೂರೇ ತಿಂಗಳಲ್ಲಿ ಒಂದೂವರೆ ಲಕ್ಷ ಫ್ರಾಂಕ್‌ಗಳನ್ನು ವ್ಯಯಿಸಿದರು. ಪ್ಯಾರಿಸ್‌ನ ಅತ್ಯಂತ ದುಬಾರಿ ಹೋಟಲಿನಲ್ಲಿ ಅತ್ಯಂತ ದುಬಾರಿ ಕೋಣೆಗಳಲ್ಲಿದ್ದರು; ಅವರಿಗೆ ಇಬ್ಬರು ಸಮವಸ್ತ್ರ ತೊಟ್ಟ ಸೇವಕರಿದ್ದರು, ಬಿಳಿ ಕುದುರೆಗಳು ಎಳೆಯುತ್ತಿದ್ದ ಗಾಡಿಯಿತ್ತು, ಅದಕ್ಕೆ ಒಬ್ಬ ಟರ್ಕಿಷ್ ಚಾಲಕ. ಪ್ರತಿ ಸಂದರ್ಭಕ್ಕೂ ಹೊಸ ಪ್ರೇಯಸಿ, ಅದು ತಮ್ಮ ಮೆಚ್ಚಿನ ಕೆಫೆ ದ ಪ್ರೊಕೋಪ್‌ನ ಮೇಜಾಗಿರಲಿ, ಅಥವಾ ಮಾಂಟ್‌ಮಾರ್ತ್‌ನಲ್ಲಿ ನರ್ತನಕೂಟವಾಗಿರಲಿ, ಇಲ್ಲವೇ ಅಪೇರಾದಲ್ಲಿ ಖಾಸಗಿ ಬಾಕ್ಸ್ ಆಗಿರಲಿ. ನಂಬುವ ಯಾರಿಗಾದರೂ ತಾವು ಒಂದೇ ದುರದೃಷ್ಟಕರ ರಾತ್ರಿ ರೂಲೆಟ್ ಜೂಜಿನಲ್ಲಿ ಮೂರು ಸಾವಿರ ಪೆಸೋಗಳನ್ನು ಸೋತಿದ್ದಾಗಿ ಹೇಳಿಕೊಳ್ಳುತ್ತಿದ್ದರು.

ಕ್ಯಾರಕಾಸ್‌ಗೆ ಹಿಂದಿರುಗಿದಾಗ ರೂಸೋ ಅವರಿಗೆ ಸ್ವಂತ ಹೃದಯಕ್ಕಿಂತ ಹತ್ತಿರದವನಾಗಿದ್ದ. ಯಾವುದೇ ಹಿಂಜರಿಕೆಯಿಲ್ಲದೆ ಅವರು 'ಲ ನೂವೆಲ್ ಹೆಲೌಸ್' ಅನ್ನು ಮತ್ತೆ ಮತ್ತೆ ಓದುತ್ತಿದ್ದರು, ಕೈಯಲ್ಲಿ ಹಿಡಿದು ಹಿಡಿದೂ ಪುಸ್ತಕದ ಹಾಳೆಗಳು ಸಡಿಲಾಗಿ ಬೀಳುತ್ತಿದ್ದವು, ಅಷ್ಟರ ಮಟ್ಟಿಗೆ. ಆದರೆ, ಸೆಪ್ಟೆಂಬರ್ ೨೫ ರಂದು ನಡೆದ ಕೊಲೆ ಯತ್ನಕ್ಕೆ ಕೆಲವೇ ದಿನಗಳ ಹಿಂದೆ, ಅವರ ಮನಸ್ಸಿನಲ್ಲಿನ್ನೂ ರೋಮನ್ ಪ್ರತಿಜ್ಞೆಯು ಗಟ್ಟಿಯಾಗಿದ್ದಾಗ, ಮ್ಯಾನ್ಯುಯೆಲ ಸಯೆನ್‌ಝ್ ಹತ್ತನೇ ಬಾರಿಗೆ 'ಎಮಿಲಿ'ಯನ್ನು ಓದುತ್ತಿದ್ದಾಗ ಮಧ್ಯೆ ತಡೆದಿದ್ದರು, ಅವರಿಗೆ ಆ ಪುಸ್ತಕ ಬೇಸರ ತರಿಸಿತ್ತು. "೧೮೦೪ ರಲ್ಲಿ ಪ್ಯಾರಿಸ್‌ನಲ್ಲಿದ್ದಾಗ ನನಗೆ ಆದಷ್ಟು ಬೇಸರ ಬೇರೆಲ್ಲೂ ಆಗಲಿಲ್ಲ" ಎಂದು ಅವಳಿಗೆ ಹೇಳಿದ್ದರು. ಮತ್ತೊಂದೆಡೆ, ಅಲ್ಲಿದ್ದಾಗ ತಾವು ಸಂತೋಷದಿಂದಿದ್ದುದು ಮಾತ್ರವಲ್ಲ ಜಗತ್ತಿನಲ್ಲಿಯೇ ಅತ್ಯಂತ ಸುಖಿ ಅಂದುಕೊಂಡಿದ್ದರು. ಅವರಿನ್ನೂ ತಮ್ಮ ವಿಧಿಯನ್ನು ಪಾವನವಾದ ವರ್ಬೆನದ ಬೂದು ಬಣ್ಣದಿಂದ ವರ್ಣಮಯಗೊಳಿಸಿರಲಿಲ್ಲ.

ಇಪ್ಪತ್ತಾರು ವರ್ಷಗಳ ಬಳಿಕ, ನದಿಯ ಮಾಂತ್ರಿಕ ಮೋಡಿಗೊಳಗಾಗಿ, ಸಾವುಸೋಲುಗಳ ಸುಳಿಯಲ್ಲಿರುವಾಗ, ಜೋಸೆ ಪೆಲಾಸಿಯೋಸ್ ತಮ್ಮ ಸ್ನಾನಕ್ಕಾಗಿ ನೀರಿಗೆ ಬೆರೆಸುತ್ತಿದ್ದ ಆರಿಗಾನೋ ಸೊಪ್ಪು ಮತ್ತು ಕಹಿ ಕಿತ್ತಳೆಗಳು ಹಾಳಾಗಲಿ ಎಂದು, ಕ್ಯಾರೆನೋ ಹೇಳಿದಂತೆ ವಿಮೋಚನೆಗೊಳಿಸುವ ಊದಾ ಬಣ್ಣದ ವರ್ಬೆನದ ಸಾಗರದಲ್ಲಿ ತಮ್ಮ ಭಿಕ್ಷುಕ ಸೈನಿಕ ಪಡೆ, ಕೆಲಸಕ್ಕೆ ಬಾರದ ತಮ್ಮ ಘನತೆ, ಎದ್ದು ಕಾಣುವ ತಮ್ಮ ತಪ್ಪುಗಳು ಇಡೀ ದೇಶ ಇವುಗಳೊಡನೆ ಮುಳುಗುವ ಧೈರ್ಯ ತಮಗಿದೆಯೇ ಎಂದು ಆಲೋಚಿಸುತ್ತಿದ್ದರು.

ಆ ರಾತ್ರಿ ಲಾಸ್ ಲಾನೋಸ್‌ನ ಅಗಾಧ ಅಳಿವೆಯಲ್ಲಿರುವಂತಹ ಗಾಢ ಮೌನ ಆವರಿಸಿತ್ತು, ಅನೇಕ ಲೀಗ್‌ಗಳ ದೂರದಲ್ಲಿ ಆಡಿಕೊಂಡ

ಪ್ರೀತಿಯ ಪಿಸುಮಾತುಗಳೂ ಗಾಳಿಯಲ್ಲಿ ತೇಲಿಕೊಂಡು ಬಂದು ಕಿವಿಗೆ ಬೀಳುವಷ್ಟು ಮಟ್ಟಿಗೆ. ಕ್ರಿಸ್ಟೋಫರ್ ಕೊಲಂಬಸ್ ಇಂಥಹ ಒಂದು ಕ್ಷಣವನ್ನು ಅನುಭವಿಸಿ ಬರೆದಿದ್ದ: "ರಾತ್ರಿಯಿಡೀ ಹಕ್ಕಿಗಳ ಹಾರಾಟವನ್ನು ಕೇಳಿಸಿಕೊಂಡೆ." ಯಾಕೆಂದರೆ ಅವರಿಗೆ ಅರವತ್ತೊಂಬತ್ತು ದಿನಗಳ ಸಮುದ್ರ ಪ್ರಯಾಣದ ನಂತರ ನೆಲ ಕಣ್ಣಿಗೆ ಬಿದ್ದಿತ್ತು. ಜನರಲ್‌ಗೂ ಹಾಗೆಯೇ ಆಗಿತ್ತು. ಸುಮಾರು ಎಂಟು ಗಂಟೆಯ ಹೊತ್ತಿಗೆ ಅವರು ಜೋರಾಗಿ ಮುನ್ನಡೆದರು. ಆಗಿನ್ನೂ ಕ್ಯಾರೆನೋ ನಿದ್ದೆ ಮಾಡುತ್ತಿದ್ದ. ಒಂದು ಗಂಟೆಯ ಬಳಿಕ ಮೇಲೆ ಎಷ್ಟು ಹಕ್ಕಿಗಳಿದ್ದುವೆಂದರೆ, ಅವುಗಳ ರೆಕ್ಕೆಬಡಿತದಿಂದ ಬೀಸಿದ ಗಾಳಿ ಸಹಜ ಮಾರುತಕ್ಕಿಂತ ವೇಗವಾಗಿತ್ತು. ಸ್ವಲ್ಪ ಸಮಯದ ನಂತರ, ಒಂದು ಮಹಾ ಮೀನು ನದಿಯ ತಳದ ನಕ್ಷತ್ರಗಳಲ್ಲಿ ಸೇರಿ ಹೋಗಿ, ದೋಣಿಯ ಕೆಳಗೆ ಈಜಲು ತೊಡಗಿತ್ತು. ಅವರಿಗೆ ಬಲವಾದ ಈಶಾನ್ಯ ಮಾರುತಗಳ ಬೀಸುವಿಕೆ ಅನುಭವಕ್ಕೆ ಬಂತು. ಹೃದಯಗಳಲ್ಲಿ ಉಕ್ಕಿದ ಸ್ವಾತಂತ್ರ್ಯದ ವಿಶಿಷ್ಟ ಅನುಭೂತಿಯನ್ನು ಅವರು ನೋಡಿಯೇ ಗುರುತಿಸಬೇಕಾಗಿರಲಿಲ್ಲ. "ದೇವರು ಕರುಣಾಮಯಿ" ಎಂದುಕೊಂಡರು ಜನರಲ್ ನಿಟ್ಟುಸಿರು ಬಿಟ್ಟು. "ನಾವು ತಲುಪಿದೆವು." ಹೌದು, ಅದು ನಿಜವಾಗಿತ್ತು. ಈ ಕಡೆ ಸಮುದ್ರ, ಅದರ ಆ ಕಡೆ ಜಗತ್ತು.

ಜನರಲ್ ಮತ್ತೆ ಟರ್ಬಾಕೋ ಸೇರಿದರು. ಅರ್ಧಚಂದ್ರಾಕೃತಿಯ ಕಮಾನುಗಳು ಮತ್ತು ನ್ಯೂ ಗ್ರನಡಾದ ಆರ್ಚ್‌ಬಿಷಪ್ ಮತ್ತು ಗವರ್ನರ್ ಆದ ಡಾನ್ ಆಂಟೋನಿಯೋ ಕ್ಯಾಬೆಲೆರೋ ಯ್ ಗೊಂಗೋರಾನ ಪ್ರೇತಾತ್ಮವು ತನ್ನ ಅನೇಕ ಪಾಪಗಳಿಂದಲೂ ಅಕ್ಷಮ್ಯ ಉಲ್ಲಂಘನೆಗಳಿಂದಲೂ ಪಾರಾಗಿ ನೆಮ್ಮದಿ ಪಡೆಯಲು ಕಿತ್ತಳೆ ಮರಗಳಡಿ ನಡೆದಾಡುತ್ತಿದ್ದುದನ್ನು ತಾವೇ ಕಂಡಿದ್ದ  ಜಲ್ಲಿ ತುಂಬಿದ ಅಂಗಳಕ್ಕೆದುರಾಗಿ, ನೆಲದಿಂದ ಸೂರಿನವರೆಗಿನ ಕಿಟಕಿಗಳಿಂದ ಕೂಡಿ ಕತ್ತಲು ಕತ್ತಲು ಕೋಣೆಗಳಿದ್ದ ಅದೇ ಮನೆಯಲ್ಲಿ ಉಳಿದುಕೊಂಡರು. ಕರಾವಳಿಯಲ್ಲಿ ಸಾಮಾನ್ಯವಾದ ಶಕೆ ಮತ್ತು ತೇವಾಂಶಗಳಿಂದ ಕೂಡಿರುವ ಹವಾಮಾನಕ್ಕೆ ವ್ಯತಿರಿಕ್ತವಾಗಿ ಟರ್ಬಾಕೋನಲ್ಲಿ ವಾತಾವರಣವು ತಂಪಾಗಿಯೂ ಆರೋಗ್ಯಕರವಾಗಿಯೂ ಇತ್ತು. ಏಕೆಂದರೆ ನಗರವು ಸಮುದ್ರಮಟ್ಟಕ್ಕಿಂತ ಎತ್ತರದಲ್ಲಿತ್ತು, ಜೊತೆಗೆ ಅಲ್ಲಿ ಹರಿಯುತ್ತಿದ್ದ ತೊರೆಗಳ ದಂಡೆಗಳ ಉದ್ದಕ್ಕೂ ಎದ್ದು ಕಾಣುವ ಬೇರುಗಳ ಭಾರಿ ಬೇ ಮರಗಳು ಬೆಳೆದಿದ್ದವು. ಸೈನಿಕರು ಆ ಮರಗಳಡಿಯ ನೆರಳಲ್ಲಿ ಅಡ್ಡಾಗಿ ವಿಶ್ರಾಂತಿ ಪಡೆಯುತ್ತಿದ್ದರು.

ಎರಡು ರಾತ್ರಿಗಳ ಹಿಂದೆ ಅವರು ಬರ್‍ರಾಂಕ ನುಎವವನ್ನು ತಲುಪಿದ್ದರು, ಅದು ನದಿ ಪಯಣದ ಕೊನೆಯ ತಾಣ. ನದಿ ಪಯಣದಿಂದ ಮುಕ್ತರಾದರೂ, ಕಬ್ಬು ಮತ್ತು ಕೆಸರಿನ ಹಾಗೂ ಅಕ್ಕಿ ಮೂಟೆಗಳು ಮತ್ತು ಹದಮಾಡದ ಚರ್ಮವನ್ನು ಪೇರಿಸಿಟ್ಟಿದ್ದ ಜಾಗಗಳ ಕೆಟ್ಟ ವಾಸನೆಯನ್ನು ಇಡೀ ರಾತ್ರಿ ಅನುಭವಿಸಬೇಕಾಗಿತ್ತು; ಯಾಕೆಂದರೆ ಅವರಿಗಾಗಿ ಬೇರೆ ವಸತಿಗೃಹವನ್ನು ಕಾಯ್ದಿರಿಸಿರಲಿಲ್ಲ, ಜೊತೆಗೆ ಅವರು ಹಿಂದೆಯೇ ಹೇಳಿದ್ದರೂ ಹೇಸರಗತ್ತೆಗಳು ಸಿದ್ಧವಾಗಿರಲಿಲ್ಲ. ಇದರ ಪರಿಣಾಮವಾಗಿ ಜನರಲ್ ಟರ್ಬಾಕೋಗೆ ಬರುವಷ್ಟರಲ್ಲಿ ನೆಂದು ಹೋಗಿದ್ದರು, ಮೈಯೆಲ್ಲ ನೋಯುತ್ತಿತ್ತು; ನಿದ್ದೆ ಮಾಡಬೇಕೆಂದು ಬಯಸಿದರೂ ನಿದ್ದೆ ಬರುವಂತಿರಲಿಲ್ಲ.

ಇನ್ನೂ ಸಾಮಾನುಗಳನ್ನು ಇಳಿಸಿಕೊಂಡಿರಲಿಲ್ಲ, ಅಷ್ಟರಲ್ಲಿಯೇ ಜನರಲ್‌ರ ಆಗಮನದ ಸುದ್ದಿ ಆರು ಲೀಗ್ ದೂರದಲ್ಲಿದ್ದ ಕಾರ್ಟೆಜೆನ ದ ಇಂಡಿಯಸ್ ಅನ್ನು ತಲುಪಿತ್ತು. ಆ ಪ್ರಾಂತದ ಕ್ವಾರ್ಟರ್ ಮಾಸ್ಟರ್ ಜನರಲ್ ಮತ್ತು ಮಿಲಿಟರಿ ದಂಡಾಧಿಕಾರಿಯಾದ ಜನರಲ್ ಮರಿಯಾನೋ ಮಾಂಟಿಲಾ ಜನರಲ್ ಅವರ ಗೌರವಾರ್ಥ ಅಲ್ಲಿ ಒಂದು ಸಾರ್ವಜನಿಕ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದ. ಆದರೆ ಜನರಲ್‌ರಿಗೆ ಮಾತ್ರ

ಪೂರ್ವನಿಶ್ಚಿತವಲ್ಲದ ಸಮಾರಂಭಗಳಿಗೆ ಹೋಗಲು ಮನಸ್ಸಿರಲಿಲ್ಲ. ತಮ್ಮನ್ನು ಸ್ವಾಗತಿಸಲು ರಾಜಮಾರ್ಗದುದ್ದಕ್ಕೂ ಮಳೆಯಲ್ಲಿಯೇ ಕಾದಿದ್ದವರ ಯೋಗಕ್ಷೇಮವನ್ನು ಹಳೆಯ ಸ್ನೇಹಿತರಂತೆ ವಿಚಾರಿಸಿದರೂ, ತಮ್ಮನ್ನು ತಮ್ಮ ಪಾಡಿಗೆ ಬಿಟ್ಟುಬಿಡುವಂತೆ ಕೇಳಿಕೊಂಡರು.

ವಾಸ್ತವವಾಗಿ, ಮರೆಮಾಚಲು ಎಷ್ಟು ಪ್ರಯತ್ನಿಸಿದರೂ, ಅವರ ದೇಹಸ್ಥಿತಿಯು ಮನಸ್ಥಿತಿಗಿಂತ ಕೆಟ್ಟಿತ್ತು, ಅದು ದಿನೇ ದಿನೇ ಕುಸಿಯುತ್ತಿದ್ದನ್ನು ಪರಿವಾರದವರು ಕಾಣಬಹುದಾಗಿತ್ತು. ಮನಸ್ಸಿನ ಮೇಲವರಿಗೆ ಹತೋಟಿಯಿರಲಿಲ್ಲ. ಅವರ ಮೈಬಣ್ಣ ಪೇಲವ ಹಸುರಿನಿಂದ ನಿರ್ಜೀವ ಹಳದಿಗೆ ತಿರುಗಿತ್ತು. ಜ್ವರ ಬಂದ ಹಾಗಿದ್ದುದರ ಜೊತೆಗೆ ತಲೆನೋವು ಭೂತದಂತೆ ಬೆಂಬತ್ತಿತ್ತು. ಊರಿನ ಧರ್ಮಗುರು ವೈದ್ಯನಿಗೆ ಹೇಳಿಕಳಿಸಲು ಮುಂದಾದರು, ಅದಕ್ಕವರು ಒಪ್ಪಲಿಲ್ಲ: “ವೈದ್ಯರ ಮಾತಿನಂತೆ ನಡೆದುಕೊಂಡಿದ್ದರೆ ನಾನು ಸತ್ತು ಎಷ್ಟೋ ವರ್ಷಗಳಾಗಿರುತ್ತಿತ್ತು” ಎಂದರು. ಕಾರ್ಟಜೆನಲ್ಲೆ ಮಾರನೇ ದಿನ ಪಯಣ ಮುಂದುವರಿಸಲು ಸಿದ್ಧರಾಗಿಯೇ ಅವನು ಟರ್ಬಾಕೋಗೆ ಬಂದಿದ್ದುದು. ಆದರೆ ಯೂರೋಪಿಗೆ ಹೋಗುವ ಹಡಗಾವುದೂ ರೇವಿನಲ್ಲಿಲ್ಲವೆಂದು ಬೆಳಿಗ್ಗೆಯ ಹೊತ್ತಿಗೆ ತಿಳಿಯಿತು, ಹಾಗೆಯೇ ಹಿಂದಿನ ಅಂಚೆಯಲ್ಲಿ ಅವರ ಪಾಸ್‌ಪಾರ್ಟ್ ಬಂದಿರಲಿಲ್ಲ ಕೂಡ. ಹೀಗಾಗಿ ಮೂರು ದಿನ ಅಲ್ಲಿದ್ದು ವಿಶ್ರಾಂತಿ ಪಡೆಯಲು ನಿರ್ಧರಿಸಿದರು. ಸೇನಾಧಿಕಾರಿಗಳಿಗೆ ಸಂತಸವಾಯಿತು, ಅವರ ದೇಹಸ್ಥಿತಿಯ ಕಾರಣದಿಂದ ಮಾತ್ರವಲ್ಲ, ವೆನಿಝೂಲದ ಪರಿಸ್ಥಿತಿಯ ಬಗೆಗಿನ ಮೊದಲ ರಹಸ್ಯ ವರದಿಗಳು ಅವರಿಗೆ ಅನುಕೂಲಕರವಾಗರಲಿಲ್ಲವೆಂದು ಸೂಚಿಸಿತ್ತು.

ಆದರೂ ಗೆಳೆಯರು ಪುಡಿ ಮುಗಿಯುವರೆಗೂ ಫಿರಂಗಿಗಳನ್ನು ಸಿಡಿಸುವುದನ್ನಾಗಲೀ, ಮನೆಯ ಬಳಿ ಬ್ಯಾಗ್‌ಪೈಪರ್‌ಗಳನ್ನು ನಿಲ್ಲಿಸಿ ರಾತ್ರಿ ಬಹುಕಾಲದವರೆಗೂ ನುಡಿಸುವುದನ್ನಾಗಲೀ ಅವರು ತಡೆಯಲಾಗಲಿಲ್ಲ. ಅಲ್ಲದೆ ನೆರೆಯ ಮರಿಯಲಬಾಜ ಪ್ರದೇಶಗಳಿಂದ ಕಪ್ಪು ಗಂಡಸರು–ಹೆಂಗಸರನ್ನು ಕರೆತರಲಾಗಿತ್ತು; ಹದಿನಾರನೆಯ ಶತಮಾನದ ಶ್ರೀಮಂತಪ್ರಭುಗಳಂತೆ ವೇಷ ಧರಿಸಿ, ಆಫ್ರಿಕನ್ ಕೌಶಲದಿಂದ ಸ್ಪಾನಿಶ್ ಆಸ್ಥಾನದ ಅಣುಕುವಾಡುಗಳನ್ನು ಅವರು ಅಭಿನಯಿಸುವವರಿದ್ದರು. ಇದಕ್ಕೆ ಕಾರಣ ಜನರಲ್ ಹಿಂದೆ ಭೇಟಿ ಕೊಟ್ಟಾಗ ಆ ಪ್ರದರ್ಶನಗಳನ್ನು ಎಷ್ಟು ಮೆಚ್ಚಿಕೊಂಡಿದ್ದರೆಂದರೆ, ಅನೇಕ ಬಾರಿ ಅವರನ್ನು ಕರೆಸಿ ಆಟಗಳನ್ನು ಆಡಿಸಿದ್ದರು. ಆದರೆ ಈ ಬಾರಿ ಅವರು ಅವರತ್ತ ಕಣ್ಣೆತ್ತಿ ನೋಡಲೂ ಇಲ್ಲ. “ಆ ಗದ್ದಲದ ಜನರ ಗುಂಪನ್ನು ಕಳಿಸಿ” ಎಂದು ಆಜ್ಞಾಪಿಸಿದ್ದರು.

ವೈಸ್‌ರಾಯ್ ಕ್ಯಾಬೆಲೇರೋ ಯ್ ಗೊಂಗೋರಾ ಆ ಮನೆಯನ್ನು ಕಟ್ಟಿಸಿ ಕಳೆದಮೂರು ವರ್ಷಗಳಿಂದ ಅಲ್ಲಿಯೇ ವಾಸವಾಗಿದ್ದರು; ಅಲ್ಲಿನ

ಕೋಣೆಗಳಲ್ಲಿ ಕೇಳಿ ಬರುತ್ತಿದ್ದ ವಿಚಿತ್ರ ಧ್ವನಿಗಳು ಅವರ ಆತ್ಮದ ಸಂಕಟದ ಚೀರಾಟ ಎಂದು ಹೇಳಲಾಗುತ್ತಿತ್ತು. ಕಳೆದ ಬಾರಿ ತಾನು ಬಳಸಿದ್ದ ಮಲಗುವ ಕೋಣೆಗೆ ಹೋಗಲು ಜನರಲ್ ನಿರಾಕರಿಸಿದರು; ಅವರು ಅದನ್ನು ದುಃಸ್ವಪ್ನದ ಕೋಣೆಯೆಂದು ಗುರುತಿಸಿದ್ದರು, ಏಕೆಂದರೆ ಅವರು ಅಲ್ಲಿ ಮಲಗಿದ್ದ ಪ್ರತಿಯೊಂದು ರಾತ್ರಿಯೂ ಬೆಳಗಿನ ಜಾವದವರೆಗೂ ಪದೇ ಪದೇ ಒಂದು ಕನಸು ಬೀಳುತ್ತಿತ್ತು: ಅದರಲ್ಲಿ ಹೊಳೆಯುವ ಕೂದಲಿನ ಒಬ್ಬ ಹೆಂಗಸು ಬಂದು ಅವರ ಕೊರಳ ಸುತ್ತ ಕೆಂಪು ಪಟ್ಟಿ ಕಟ್ಟುತ್ತಿದ್ದಳು, ಆಗ ಅವರಿಗೆ ಎಚ್ಚರವಾಗುತ್ತಿತ್ತು. ಅದಕ್ಕೆ ಅವರು ನಡುಮನೆಯಲ್ಲಿ ತಮ್ಮ ಜೋಲಿಮಂಚವನ್ನು ಸೂರಿನ ಲೋಹದ ಕೊಕ್ಕೆಗಳಿಗೆ ತೂಗು ಹಾಕಿಸಿಕೊಂಡು ಕೆಲ ಕಾಲ ಕನಸಿಲ್ಲದೆ ನಿದ್ದೆ ಮಾಡುತ್ತಿದ್ದರು. ಕುಂಭದ್ರೋಣ ಮಳೆ ಬಂದಾಗ ಬೀದಿಯಲ್ಲಿ ನಿಂತ ಕೆಲವು ಮಕ್ಕಳು ಅವರು ಮಲಗಿದ್ದುದನ್ನು ಕಿಟಕಿಯ ಮೂಲಕ ಇಣಿಕಿಣಿಕಿ ನೋಡುತ್ತಿದ್ದರು. ಒಬ್ಬ ಹುಡುಗ "ಬೊಲಿವರ್, ಬೊಲಿವರ್" ಎಂದು ಪಿಸುಗುಟ್ಟಿ ಅವರನ್ನು ಎಚ್ಚರಗೊಳಿಸಿದ. ಜ್ವರದಮಂಪರಿನಲ್ಲಿ ಅವನಿಗಾಗಿ ಹುಡುಕಿದರು, ಆಗ ಆ ಹುಡುಗ ಕೇಳಿದ್ದ: "ನೀನು ನನ್ನ ಪ್ರೀತಿಸ್ತೀಯಾ?"

ಜನರಲ್ ವಿಶಾಲ ಮುಗುಳ್ನಗೆಯೊಂದಿಗೆ ಅದನ್ನು ಅನುಮೋದಿಸಿದರು, ಆಮೇಲೆ ಮನೆಯಲ್ಲಿ ಓಡಾಡುತ್ತಿದ್ದ ಕೋಳಿಮರಿಗಳನ್ನು ಓಡಿಸುವಂತೆ ಹೇಳಿದರು, ಹುಡುಗರು ಹಾಗೇ ಮಾಡಿದರು, ಕಿಟಕಿಗಳನ್ನು ಮುಚ್ಚಿದರು, ಜನರಲ್ ಮತ್ತೆ ನಿದ್ದೆಗೊಳಗಾದರು. ಎರಡನೆಯ ಬಾರಿ ಎಚ್ಚರಾದಾಗ, ಮಳೆ ಇನ್ನೂ ಸುರಿಯುತ್ತಿತ್ತು, ಜೋಸೆ ಪೆಲಾಸಿಯೋಸ್ ಜೋಲಿಮಂಚಕ್ಕೆ ಸೊಳ್ಳೆ ಪರದೆ ಕಟ್ಟಲು ಹವಣಿಸುತ್ತಿದ್ದ.

"ಬೀದಿಯಲ್ಲಿ ನಿಂತುಕೊಂಡು ಒಬ್ಬ ಹುಡುಗ ವಿಚಿತ್ರ ಪ್ರಶ್ನೆ ಕೇಳಿದ ಹಾಗೆ ನನಗೆ ಕನಸು ಬಿತ್ತು" ಎಂದು ಜನರಲ್ ಅವನಿಗೆ ಹೇಳಿದರು.

ಆಮೇಲೆ ಕಳೆದ ಇಪ್ಪತ್ತು ನಾಲ್ಕು ಗಂಟೆಯಲ್ಲಿ ಮೊದಲ ಬಾರಿಗೆ ಸ್ವಲ್ಪ ಕಷಾಯ ಕುಡಿಯಲು ಒಪ್ಪಿದರು, ಆದರೆ ಪೂರ್ತಿ ಕುಡಿಯದಾದರು. ಮತ್ತೆ ಜೋಲಿಮಂಚದಲ್ಲಿ ಮಲಗಿಕೊಂಡರು, ತಲೆ ಸುತ್ತುವ ಅನುಭವ, ಸೂರಿನ ಜಂತೆಗಳಲ್ಲಿ ಜೋತು ಬಿದ್ದಿದ್ದ ಬಾವಲಿಗಳ ಮೇಲೇ ದೃಷ್ಟಿ ನೆಟ್ಟು ದೀರ್ಘ ಕಾಲ ಅರೆ ಎಚ್ಚರ ಸ್ಥಿತಿಯ ಆಲೋಚನೆಯಲ್ಲಿ ಮುಳುಗಿದ್ದರು. ಕೊನೆಗೆ ನಿಟ್ಟುಸಿರು ಬಿಟ್ಟು, "ನಾನು ಒಬ್ಬ ಪರದೇಶಿಯಂತೆ ಸಮಾಧಿಗೆ ಸಿದ್ಧನಾಗಿದ್ದೇನೆ" ಎಂದುಕೊಂಡರು.

ವಿಮೋಚನಾ ಪಡೆಯ ಹಿಂದಿನ ಅಧಿಕಾರಿಗಳು ಹಾಗೂ ಸಾಮಾನ್ಯ ಸೈನಿಕರು ದುಃಸ್ಥಿತಿ ಹೇಳಿಕೊಂಡರೆ ಅವರಿಗೆ ಧಾರಾಳವಾಗಿ ಹಣ ಕೊಡುತ್ತಿದ್ದರು, ಹೀಗಾಗಿ ಟರ್ಬಾಕೋನಲ್ಲಿ ನದೀತೀರದ ಕಾಲದಲ್ಲಿ ಅವರ

ಬಳಿ ಪ್ರಯಾಣ ವೆಚ್ಚದ ಕಾಲುಭಾಗವೂ ಉಳಿದಿರಲಿಲ್ಲ. ಪ್ರಾಂತ ಸರ್ಕಾರ ತನ್ನ ಮುರುಕಲು ಭಂಡಾರದಲ್ಲಿ ಅವರ ವೆಚ್ಚ ಭರಿಸಲು ಸಾಕಷ್ಟು ಹಣ ಉಳಿದಿತ್ತೇ ಅಥವಾ ಒಬ್ಬ ಸಟ್ಟಾ ವ್ಯಾಪಾರಿಯ ಜೊತೆ ಅದು ಸಂಧಾನ ಮಾಡಿಕೊಳ್ಳಬಹುದೇ ಎಂಬುದನ್ನು ಕಾದು ನೋಡಬೇಕಾಗಿತ್ತು. ಯೂರೋಪ್‌ನ ತಕ್ಷಣದ ವಸತಿಗಾಗಿ ಅವರು ಇಂಗ್ಲಂಡ್‌ನ ನೆರವನ್ನು ಆಧರಿಸಿದ್ದರು, ಅದನ್ನು ಪಡೆಯಲು ತಾವು ಹಲವಾರು ಸಹಾಯಗಳನ್ನು ಮಾಡಬೇಕಾಗಿತ್ತು. "ಇಂಗ್ಲಿಷರಿಗೆ ನನ್ನ ಮೇಲೆ ಪ್ರೀತಿ" ಎನ್ನುತ್ತಿದ್ದರು. ತಾವು, ಸೇವಕರು ಹಾಗೂ ಮಿತ ಪರಿವಾರವು ತಮ್ಮ ಹಿಂದಿನ ಘನತೆಗೆ ತಕ್ಕಂತೆ ಬದುಕಲು ಬೇಕಾದ ಹಣಕ್ಕೆ ಅವರು ಅರೋಅ ಗಣಿಗಳನ್ನು ಮಾರುವ ಆಲೋಚನೆ ಮಾಡಿದ್ದರು. ಆದರೆ ಅವರು ನಿಜವಾಗಿಯೂ ದೇಶತ್ಯಾಗ ಮಾಡಲು ಬಯಸಿದರೆ, ತಮ್ಮ ಮತ್ತು ಪರಿವಾರದವರ ಪ್ರಯಾಣದ ಹಾಗೂ ಜೊತೆಗಿನ ಖರ್ಚಿಗಾಗಿ ಹಣ ತುರ್ತು ಆವಶ್ಯಕವಾಗಿತ್ತು, ಆದರೆ ಕೈಯಲ್ಲಿದ್ದ ನಗದು ಆ ಯೋಚನೆ ಮಾಡದಂತೆ ತಡೆದಿತ್ತು. ತಮ್ಮ ಕೊನೆಯಿರದ ಭ್ರಮೆಯನ್ನವರು ತ್ಯಜಿಸಲು ಬಯಸಲಿಲ್ಲ, ಅದೂ ಅದರ ಆವಶ್ಯಕತೆ ಬಹಳವಿದ್ದಾಗ. ಜ್ವರದ ತಾಪ ಮತ್ತು ತಲೆ ಸಿಡಿತದಲ್ಲಿ ಏನಿಲ್ಲದಿದ್ದರೂ ಅವರಿಗೆ ಮಿಣುಕುಹುಳುಗಳು ಕಾಣುತ್ತಿದ್ದವು. ಕೊನೆಗೆ ಇಂದ್ರಿಯಗಳ ಪಟುತ್ವವನ್ನು ಕುಗ್ಗಿಸಿದ್ದ ಮಂಪರಿನಿಂದ ಹೊರಬಂದ ಅವರು ಫರ್ನಾಂಡೋಗೆ ಹೇಳಿ ಮೂರು ಪತ್ರಗಳನ್ನು ಬರೆಸಿದರು.

ಮೊದಲನೆಯದು, ಫೀಲ್ಡ್ ಮಾರ್ಷಲ್ ಸ್ಯೂಕ್ರ್‌ಗೆ ಬರೆದ ಹೃತ್ಪೂರ್ವಕ ಉತ್ತರ: ಅದರಲ್ಲಿ ಆ ಮಧ್ಯಾಹ್ನದ ತಮ್ಮ ಕಾಯಿಲೆಯ ಬಗ್ಗೆ ಹಿಂದೆ ಅನೇಕ ಬಾರಿ ತನಗೆ ಸಹಾನುಭೂತಿ ಬೇಕಾದ ಸನ್ನಿವೇಶಗಳಲ್ಲಿ ಮಾಡಿದ್ದಂತೆ ಏನೂ ಉಲ್ಲೇಖಿಸಿರಲಿಲ್ಲ. ಎರಡನೆಯ ಪತ್ರ ಕಾರ್ಟೆಜೆನದ ಸೇನಾ ಮುಖ್ಯಸ್ಥ ಡಾನ್ ಜುವಾನ್ ದ ದಯೋಸ್ ಅಮೆಡಾರ್‌ಗೆ, ಪ್ರಾಂತೀಯ ಖಜಾನೆಯಿಂದ ಎಂಟು ಸಾವಿರ ಪೆಸೋಗಳ ಡ್ರಾಫ್ಟ್ ಕಳಿಸಲು ಕೋರಿ. "ನಾನು ಹೊರಡುವುದಕ್ಕೆ ಈ ಹಣ ತುರ್ತಾಗಿ ಬೇಕಾಗಿದೆ" ಎಂದಿದ್ದರು ಪತ್ರದಲ್ಲಿ. ಅವರ ಕೋರಿಕೆ ಮಾನ್ಯಗೊಂಡಿತ್ತು, ನಾಲ್ಕು ದಿನ ಕಳೆಯುವುದರೊಳಗಾಗಿ ಅವರಿಂದ ಅನುಕೂಲಕರ ಉತ್ತರ ಬಂದಿತ್ತು, ಹೀಗಾಗಿ ಫರ್ನಾಂಡೋ ಹಣ ತರಲು ಕಾರ್ಟೆಜೆನಕ್ಕೆ ಹೋದ. ಜನರಲ್ ಬರೆಸಿದ್ದ ಮೂರನೆಯ ಪತ್ರವೆಂದರೆ, ಲಂಡನ್‌ನಲ್ಲಿ ಕೊಲಂಬಿಯ ರಾಯಭಾರಿಯಾಗಿದ್ದ ಕವಿ ಜೋಸೆ ಫರ್ನಾಂಡೆಝ್ ಮಡ್ರೀಡ್‌ಗೆ, ತಮ್ಮ ಪರವಾಗಿ ಸರ್ ರಾಬರ್ಟ್ ವಿಲ್ಸನ್ ಮತ್ತು ಕಾರ್ಕಾಸ್‌ನಲ್ಲಿ ಹೊಸ ಬಗೆಯ ಪರ್ಯಾಯ ಶಿಕ್ಷಣ ವ್ಯವಸ್ಥೆಗೆ ಅವರಿಂದ ಬರಬೇಕಾಗಿದ್ದ ಇಪ್ಪತ್ತು ಸಾವಿರ ಡ್ಯೂರೋಗಳನ್ನು ನೀಡುವಂತೆ ಇಂಗ್ಲಿಷ್‌ಮನ್ ಪ್ರೊಫೆಸರ್ ಜೋಸೆಫ್

ಲಾಂಕಾಸ್ಟರ್ ಅವರುಗಳಿಗೆ ಖಾತರಿ ಪತ್ರವನ್ನು ನೀಡಲು ಕೋರಿ. “ಇದರಲ್ಲಿ ನನ್ನ ಗೌರವದ ಪ್ರಶ್ನೆ ಅಡಗಿದೆ” ಎಂದು ಅದರಲ್ಲಿ ಬರೆಸಿದ್ದರು. ಬಹಳ ಕಾಲದಿಂದ ಬಗೆಹರಿಯದೆ ಉಳಿದಿದ್ದ ಈ ವಿಷಯವು ಈಗ ತೀರ್ಮಾನಗೊಳ್ಳುವುದು, ಮತ್ತು ತಮ್ಮ ಗಣಿಗಳು ಮಾರಾಟಗೊಳ್ಳುತ್ತವೆ ಎಂಬ ನಂಬಿಕೆ ಅವರದಾಗಿತ್ತು. ಆದರೆ ಆ ಪ್ರಯತ್ನ ಯಶಸ್ಸು ಕಂಡಿರಲಿಲ್ಲ: ಪತ್ರವು ಲಂಡನ್ ತಲುಪುವ ಹೊತ್ತಿಗಾಲೇ ರಾಯಭಾರಿ ಫರ್ನಾಂಡೆಝ್ ಮಡ್ರೀಡ್ ತೀರಿಕೊಂಡಿದ್ದರು.

ಇಸ್ಪೀಟು ಆಡುತ್ತ ಒಳ ಮೊಗಸಾಲೆಯಲ್ಲಿ ಜೋರಾಗಿ ಕೂಗಾಡುತ್ತಿದ್ದ ಅಧಿಕಾರಿಗಳಿಗೆ ಸುಮ್ಮನಿರಲು ಜೋಸೆ ಪೆಲಾಸಿಯೋಸ್ ಸೂಚಿಸಿದ, ಆದರೆ ಹತ್ತಿರದ ಚರ್ಚ್ ಗೋಪುರದ ಗಂಟೆಯು ಹನ್ನೊಂದು ಬಾರಿಸುವವರೆಗೂ ಅವರು ವಿವಾದವನ್ನು ಪಿಸುಮಾತಿನಲ್ಲೇ ಮುಂದುವರೆಸಿದ್ದರು. ಸ್ವಲ್ಪ ಸಮಯದ ನಂತರ ಸಾರ್ವಜನಿಕ ಸಮಾರಂಭದಲ್ಲಿನ ಬ್ಯಾಗ್‌ಪೈಪ್ ಮತ್ತು ಡ್ರಮ್‌ಗಳ ಸದ್ದು ನಿಂತಿತು, ದೂರದ ಸಮುದ್ರದಿಂದ ಬೀಸುವ ತಂಗಾಳಿಯು ಮಧ್ಯಾಹ್ನದ ಬಿರುಮಳೆಯ ನಂತರ ಮತ್ತೆ ಒಗ್ಗೂಡಿದ್ದ ದಟ್ಟವಾದ ಕಪ್ಪು ಮೋಡಗಳನ್ನು ಚದುರಿಸಿತು, ಕಿತ್ತಿಲೆ ಮರಗಳ ಒಳಾಂಗಣದಲ್ಲಿ ಪೂರ್ಣಚಂದ್ರನ ಕಿರಣಗಳು ರಾಶಿಯಾಗಿ ಸುರಿದವು.

ಕಡು ಜ್ವರದಲ್ಲಿ ಬೇಯುತ್ತ ಜೋಲಿಮಂಚದಲ್ಲಿ ಮಲಗಿದ್ದ ಜನರಲ್‌ರನ್ನು ಜೋಸೆ ಪೆಲಾಸಿಯೋಸ್ ಒಂದು ಕ್ಷಣವೂ ಬಿಟ್ಟಿರಲಿಲ್ಲ. ಎಂದಿನ ಪ್ರಮಾಣದಲ್ಲಿ ಸೋನಾಮುಖಿಯ ವಿರೇಚಕವನ್ನು ಸಿದ್ಧಪಡಿಸಿ ಅವರಿಗಿತ್ತ, ಯಾರಾದರೂ ಅಧಿಕಾರಸ್ಥರು ಉತ್ತಮ ವೈದ್ಯರಿಗೆ ಹೇಳಬಹುದು ಎಂದು ನಿರೀಕ್ಷಿಸಿದ, ಆದರೆ ಏನೂ ಉಪಯೋಗವಾಗಲಿಲ್ಲ. ಬೆಳಗಿನ ಜಾವದ ಹೊತ್ತಿಗೆ ಜನರಲ್ ಸುಮಾರು ಒಂದು ಗಂಟೆ ಕಾಲ ಕಣ್ಣು ಮುಚ್ಚಿದ್ದರು.

ಜನರಲ್ ಮರಿಯಾನೋ ಮಾಂಟೆಲ್ಲೋ ತಮ್ಮ ಆಯ್ದ ಕೆಲವು ಗೆಳೆಯರ ಜೊತೆ ಕಾರ್ಟೆಜೆನದಿಂದ ಅವರನ್ನು ನೋಡಲು ಬಂದ ದಿನ ಅವರೊಡನೆ ಬೊಲಿವರಿಸ್ಟ್ ಪಕ್ಷದ ಮೂವರು ಜುವಾನ್‌ಗಳೆಂದು ಹೆಸರಾದವರೂ ಇದ್ದರು. ಅವರೆಂದರೆ ಜುವಾನ್ ಗಾರ್ಸಿಯ ದ ರಯೋ, ಜುವಾನ್ ದ ಫ್ರಾನ್ಸಿಸ್ಕೋ ಮಾರ್ಟಿನ್ ಹಾಗೂ ಜುವಾನ್ ದ ದಯೋಸ್ ಅಮೆಡಾರ್. ಜೋಲಿಮಂಚದಲ್ಲಿ ಎದ್ದು ಕುಳಿತುಕೊಳ್ಳಲೂ ಪ್ರಯಾಸಪಡುವ ಹಾಗೂ ಆಲಂಗಿಸಲು ಏದುಸಿರುಬಿಡಬೇಕಾಗಿದ್ದ ಜನರಲ್‌ರ ದೇಹಸ್ಥಿತಿಯನ್ನು ಕಂಡು ಅವರು ಗಾಬರಿಗೊಂಡರು. ಅವರನ್ನು ಅಡ್ಮಿರಬಲ್ ಕಾಂಗ್ರೆಸ್‌ನಲ್ಲಿ ಕಂಡಿದ್ದರು, ಅವರೂ ಅದರಲ್ಲಿ ಭಾಗಿಗಳಾಗಿದ್ದರು; ಅಷ್ಟು ಕಡಿಮೆ ಅವಧಿಯಲ್ಲಿ ಜನರಲ್ ಅಷ್ಟು ಕ್ಷೀಣಗೊಂಡಿರುವದನ್ನು ನೋಡಿದ

ಅವರಿಗೆ ಅದನ್ನು ನಂಬಲೂ ಆಗಲಿಲ್ಲ. ಚರ್ಮದ ಕೆಳಗೆ ಮೂಳೆಗಳು ಎದ್ದು ಕಾಣುತ್ತಿದ್ದವು, ಕಣ್ಣುಗಳನ್ನು ಒಂದು ಕಡೆ ಕೇಂದ್ರೀಕರಿಸಲು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ತಮ್ಮ ಉಸಿರಿನ ಬಿಸುಪು ಅವರಿಗೇ ಗೊತ್ತಾಗುತ್ತಿದ್ದಿರಬೇಕು, ಯಾಕೆಂದರೆ ಅವರು ದೂರದಿಂದಲೇ ಮಾತಾಡುತ್ತಿದ್ದರು, ಅದೂ ಮಗ್ಗುಲಿಗೆ ತಿರುಗಿಕೊಂಡು. ಆದರೆ ಎದ್ದು ಕಾಣುತ್ತಿದುದೆಂದರೆ ಅವರ ಎತ್ತರ ಕುಸಿದಿದ್ದುದು, ಜನರಲ್ ಮಾಂಟಿಲ್ಲ ಆಲಂಗಿಸಿದಾಗ ಅವರು ಸೊಂಟ ಮಟ್ಟಕ್ಕೂ ಬಂದಿರಲಿಲ್ಲ.

ಅವರು ಎಂಬತ್ತೆಂಟು ಪೌಂಡ್ ತೂಕವಿದ್ದರು, ಆದರೆ ಸಾಯುವ ಹೊತ್ತಿಗೆ ಹತ್ತು ಪೌಂಡ್ ಕಡಿಮೆಯಾಗಿದ್ದರು. ಅವರ ಅಧಿಕೃತ ಎತ್ತರ ಒಂದು ಮೀಟರ್ ಅರವತ್ತೈದು ಸೆಂಟಿಮೀಟರ್‌ಗಳು, ಆದರೆ ವೈದ್ಯಕೀಯ ದಾಖಲೆಗಳ ಅಂಕಿಅಂಶಗಳಲ್ಲಿ ಒಮ್ಮತವಿರಲಿಲ್ಲ, ಶವಪರೀಕ್ಷೆಯ ಸಮಯದಲ್ಲಿ ನಾಲ್ಕು ಸೆಂಟಿಮೀಟರ್ ಕಡಿಮೆಯಿತ್ತು. ದೇಹದ ಅಳತೆಯೊಡನೆ ಹೋಲಿಸಿದರೆ, ಪಾದಗಳು ಸಣ್ಣಗಾಗಿದ್ದ ಕೈಗಳಷ್ಟೇ ಇದ್ದವು. ಆಗ ಅವರು ತಮ್ಮ ಟ್ರೌಸರ್‌ಗಳನ್ನು ಎದೆಯವರೆಗೆ ಅನ್ನಬಹುದಾದಷ್ಟು ಮೇಲಕ್ಕೆ ಧರಿಸಿದ್ದುದನ್ನೂ, ಅಂಗಿಯ ತೋಳುಗಳನ್ನು ಹಿಂದಕ್ಕೆ ಮಡಚಿಕೊಂಡಿದ್ದುದನ್ನೂ ಜೋಸೆ ಪೆಲಾಸಿಯೋಸ್ ಗಮನಿಸಿದ್ದ. ಈಗ ಜನರಲ್ ತಮ್ಮ ಸಂದರ್ಶನಕ್ಕೆ ಬಂದವರ ಕುತೂಹಲವನ್ನು ಗಮನಿಸಿ, ತಾವು ಧರಿಸುವ ಫ್ರೆಂಚ್ ಮೂವತ್ತೈದನೇ ಸಂಖ್ಯೆಯ ಬೂಟುಗಳು ಜನವರಿಯಿಂದ ತುಂಬ ದೊಡ್ಡದಾಗಿವೆಯೆಂದು ವಿವರಿಸಿದ್ದರು. ಸಮಯಸಂದರ್ಭವಿಲ್ಲದ ಚಾಟುನುಡಿಗೆ ಹೆಸರಾಗಿದ್ದ ಜನರಲ್ ಮಾಂಟಿಲ್ಲ ಸನ್ನಿವೇಶದ ಬಿಗುವಿಗೆ ತಮ್ಮ ಮಾತಿನಿಂದ ಕೊನೆ ಹಾಡಿದ್ದರು:

"ಮುಖ್ಯ ವಿಷಯವೆಂದರೆ, ತಮ್ಮ ಅಂತರಂಗ ಕುಸಿಯದಿರವುದು."

ಎಂದಿನಂತೆಯೇ, ತಾವೇ ಜೋರಾಗಿ ನಕ್ಕು ತಮ್ಮ ವಿನೋದಕ್ಕೆ ಒತ್ತು ನೀಡಿದ್ದರು. ಅದಕ್ಕೆ ಪ್ರತಿಯಾಗಿ ಜನರಲ್‌ರು ದೀರ್ಘಕಾಲದ ಒಡತಣದ ಪ್ರತೀಕವಾಗಿ ಮುಗುಳ್ನಕ್ಕು ವಿಷಯ ಬದಲಿಸಿದ್ದರು. ಹವಾಗುಣ ಉತ್ತಮಗೊಂಡು ಹೊರಗೆ ಕುಳಿತು ಮಾತುಕತೆಯಾಡಲು ಪ್ರಶಸ್ತವಾಗಿತ್ತು; ಆದರೂ ತಮ್ಮ ಮಲಗುವ ಕೋಣೆಯ ಜೋಲಿಮಂಚದಲ್ಲಿ ಕುಳಿತು ಅವರು ಬಂದವರೊಡನೆ ಉಭಯಕುಶಲೋಪರಿಯಲ್ಲಿ ತೊಡಗಿದರು.

ಅವರ ಮಾತುಕತೆಯ ಮುಖ್ಯ ವಿಷಯವೆಂದರೆ ದೇಶದ ಪರಿಸ್ಥಿತಿ. ಕಾರ್ಟಜೆನ ಬೊಲಿವರ್‌ವಾದಿಗಳು ಹೊಸ ಸಂವಿಧಾನವನ್ನು ಹಾಗೂ ಸಟಾಂಡರ್‌ವಾದಿ ವಿದ್ಯಾರ್ಥಿಗಳ ಒಪ್ಪಲಾರದ ಒತ್ತಡಕ್ಕೆ ಕಾಂಗ್ರೆಸ್ ಮಣಿದಿದೆಯೆಂಬ ನೆಪದಲ್ಲಿ ಆಯ್ಕೆಗೊಂಡಿದ್ದ ನಾಯಕರನ್ನು ಒಪ್ಪಿಕೊಳ್ಳಲು ಅವರು ನಿರಾಕರಿಸಿದ್ದರು. ಮತ್ತೊಂದು ಕಡೆ, ನಿಷ್ಠಾವಂತ ಸೈನ್ಯವು ಜನರಲ್‌ರ

ಆಜ್ಞೆಯಂತೆ ಅಂಚಿನಲ್ಲಿ ನಿಂತಿತ್ತು ಹಾಗೂ ಅವರನ್ನು ಬೆಂಬಲಿಸಿದ್ದ ಗ್ರಾಮೀಣ ಧರ್ಮಗುರುಗಳು ಸಂಘಟಿತರಾಗಲು ಅವಕಾಶವಾಗಿರಲಿಲ್ಲ. ಕಾರ್ಟೆಜೆನದ ರಕ್ಷಕಪಪಡೆಯ ಕಮಾಂಡರ್ ಆಗಿದ್ದ ಹಾಗೂ ತಮ್ಮ ಉದ್ದೇಶಕ್ಕೆ ಬದ್ಧನಾಗಿದ್ದ ಜನರಲ್ ಫ್ರಾನ್ಸಿಸ್ಕೋ ಕಾರ್ಮೋನ ಬಂಡಾಯವನ್ನು ಪ್ರೇರಿಸುವವುದರಲ್ಲಿದ್ದ, ಹಾಗೆ ಮಾಡುವುದಾಗಿ ಈಗಲೂ ಹೆದರಿಸುತ್ತಿದ್ದ. ತಮ್ಮನ್ನು ಕಾಣುವಂತೆ ಜನರಲ್ ಮಾಂಟಿಲಾ ಮೂಲಕ ಅವನಿಗೆ ಹೇಳಿಕಳಿಸಿದ್ದರು, ಅವನನ್ನು ಸಮಾಧಾನಪಡಿಸುವುದು ಅವರ ಉದ್ದೇಶವಾಗಿತ್ತು. ಆನಂತರ, ಅವರಲ್ಲಿ ಯಾರತ್ತಲೂ ನೇರವಾಗಿ ನೋಡದೆ, ವರನ್ನುದ್ಧೇಶಿಸಿ ಮಾತನಾಡುತ್ತ ಹೊಸ ಸರ್ಕಾರವನ್ನು ಕುರಿತ ತಮ್ಮ ಕ್ರೂರ ವಿಶ್ಲೇಷಣೆಯನ್ನು ನೀಡಿದರು:

"ಮಸ್ಕ್ವೇರ ಒಬ್ಬ ಹೆಡ್ಡ, ಕ್ಯಾಸೆಡೋ ಒಬ್ಬ ಅಡಿಗೆ ಭಟ್ಟ; ಅವರಿಬ್ಬರೂ ಸ್ಯಾನ್ ಬಾರ್ಟೋಲೊಮಿಯ ಪಡ್ಡೆ ಹುಡುಗರಿಗೆ ಹೆದರುತ್ತಿದ್ದಾರೆ."

ಅವರು ಕ್ಯಾರಿಬಿಯನ್‌ನಲ್ಲಿ ಹೇಳುತ್ತಿದ್ದುದು ಏನೆಂದರೆ, ಅಧ್ಯಕ್ಷ ಒಬ್ಬ ದುರ್ಬಲ ವ್ಯಕ್ತಿ ಮತ್ತು ಉಪಾಧ್ಯಕ್ಷ ಬೀಸುವ ಗಾಳಿಗೆ ತಕ್ಕಂತೆ ತಿರುಗುವ ಅವಕಾಶವಾದಿ ಎಂದು. ಅವರಿಬ್ಬರೂ ಒಬ್ಬ ಧರ್ಮಗುರುಗಳ ಸೋದರರಾಗಿರುವುದು ಆಶ್ಚರ್ಯಕರವೇನಲ್ಲ ಎಂದು ತಮ್ಮ ದುರ್ಭರ ಗಳಿಗೆಗಳಲ್ಲಿ ತೋರುವ ಕಹಿಯಿಂದ ಹೇಳಿದರು. ಚುನಾವಣೆಯಲ್ಲಿನ ಸೋಲಿಗಿಂತ ಹೆಚ್ಚಾಗಿ ಸಟಾಂಡರ್ ಒಳಗೊಳಗೇ ಪ್ಯಾರಿಸ್‌ನಿಂದ ಬರೆದ ಪತ್ರಗಳ ಮೂಲಕ ಮಾಡುತ್ತಿರುವ ಅಂತಃಕಲಹದ ಹುನ್ನಾರದ ಅಪಾಯವಿರುವ ಇಂಥ ಐತಿಹಾಸಿಕ ಸಂದರ್ಭದಲ್ಲಿ ಯಾರಾದರೂ ಊಹಿಸಬಹುದಾದದ್ದಕ್ಕಿಂತ ಹೊಸ ಸಂವಿಧಾನವು ಉತ್ತಮವಾಗಿರುವಂತೆ ತೋರುತ್ತದೆ ಎಂದರು. ಪೊಪಾಯಾನ್‌ನಲ್ಲಿ ಚುನಾಯಿತ ಅಧ್ಯಕ್ಷ ಪುನಃ ಪುನಃ ಸುವ್ಯವಸ್ಥೆ ಹಾಗೂ ಐಕ್ಯತೆಯನ್ನು ಕಾಪಾಡಲು ಕರೆ ಕೊಟ್ಟಿದ್ದರೂ, ತಾವು ಅಧ್ಯಕ್ಷ ಪದವಿಯನ್ನು ಒಪ್ಪಿಕೊಳ್ಳುವ ಬಗ್ಗೆ ಏನನ್ನೂ ಹೇಳಿಲ್ಲ ಎಂದರು.

"ಕ್ಯಾಸೆಡೋ ಆ ಕಚಡಾ ಕೆಲಸ ಮಾಡಲು ಕಾಯುತ್ತಿದ್ದಾನೆ" ಎಂದರು ಜನರಲ್.

"ಇಷ್ಟು ಹೊತ್ತಿಗಾಗಲೇ ಮಾಸ್ಕ್ವೇರ ಸಂಟಾ ಫ಼ ದ ಬೊಗೋಟದಲ್ಲಿಬೇಕು. ಅವನು ಸೋಮವಾರವೇ ಪೊಪಾಯಾನ್‌ನಿಂದ ಹೊರಟ" ಎಂದವರು ಮಾಂಟೆಲಾ.

ಜನರಲ್‌ರಿಗೆ ಈ ವಿಷಯ ಗೊತಿರಲಿಲ್ಲ, ಆದರೆ ಅವರಿಗೇನೂ ಆಶ್ಚರ್ಯವೆನಿಸಲಿಲ್ಲ. "ನೀವೇ ನೋಡುತ್ತೀರಿ: ಕ್ರಮ ತೆಗೆದುಕೊಳ್ಳುವ

ಸಮಯ ಬಂದಾಗ ಅವನು ಕೊಳೆತ ಕುಂಬಳಕಾಯಂತೆ ಕೆಳಗುದುರುತ್ತಾನೆ. ಅವನು ಸರ್ಕಾರದಲ್ಲಿ ಒಬ್ಬ ಕೂಲಿ ಕೆಲಸವನ್ನೂ ಮಾಡಲಾರದಾದ" ಎಂದು ನುಡಿದ ಜನರಲ್ ವಿಷಾದದಿಂದ ಕೂಡಿ ಗಾಢ ಯೋಚನೆಯಲ್ಲಿ ಮುಳುಗಿಬಿಟ್ಟರು. ಆಮೇಲೆ, "ತುಂಬ ಅನ್ಯಾಯ, ಸ್ಕ್ಯೂಕ್ರ್ ಸೂಕ್ತ ವ್ಯಕ್ತಿ" ಎಂದರು.

"ಎಲ್ಲ ಜನರಲ್‌ಗಳಲ್ಲಿ ಅತ್ಯುತ್ತಮನಾದವರು" ಎಂದು ಮುಗುಳ್ನಗುತ್ತ ನುಡಿದವನು ದ ಫ್ರಾನ್‌ಸಿಸ್ಕೋ ಮಾರ್ಟಿನ್.

ಈಗ ಆ ಮಾತು ದೇಶದಾದ್ಯಂತ ಜನಜನಿತವಾಗಿತ್ತು, ಅದನ್ನು ತಡೆಗಟ್ಟುವ ಜನರಲ್‌ರ ಪ್ರಯತ್ನ ವ್ಯರ್ಥವಾಗಿತ್ತು.

"ಅದು ಊರ್ಡಾನೆಟ ಅವರ ಸೊಗಸಾದ ಮಾತು" ಎಂದು ಮಾಂಟಿಲಾ ತಮಾಷೆ ಮಾಡಿದರು.

ಅಡ್ಡಮಾತುಗಳನ್ನು ಕಡೆಗಣಿಸಿದ ಜನರಲ್ ಸ್ಥಳೀಯ ರಾಜಕೀಯ ರಹಸ್ಯಗಳನ್ನು ಕೇಳಲು ಸಿದ್ಧರಾದರು, ಆದರೆ ಗಂಭೀರತೆಗಿಂತ ತಮಾಷೆಗಾಗಿ. ತಾವು ಈಗ ತಾನೇ ಮುರಿದಿದ್ದ ಗಾಂಭೀರ್ಯವನ್ನು ಮುನ್ಸೂಚನೆಯೊಲ್ಲದೆ ಮಾಂಟಿಲಾ ಮತ್ತೆ ಸ್ಥಾಪಿಸುತ್ತ ಹೇಳಿದರು: "ನನ್ನನ್ನು ಕ್ಷಮಿಸಬೇಕು, ಮಹಾಸ್ವಾಮಿಗಳು. ನಾನು ಫೀಲ್ಡ್ ಮಾರ್ಷಲ್ ಅವರಗೆ ಎಷ್ಟು ನಿಷ್ಠನೆಂಬುದು ಬೇರೆಲ್ಲರಿಗಿಂತ ತಮಗೇ ಚೆನ್ನಾಗಿ ತಿಳಿದಿದೆ, ಆದರೆ ಅವರು ಸೂಕ್ತ ವ್ಯಕ್ತಿಯಲ್ಲ," ಎಂದು ನಾಟಕೀಯ ಒತ್ತಿನಿಂದ ತಮ್ಮ ಮಾತನ್ನು ಮುಗಿಸಿದ್ದು ಹೀಗೆ: "ನೀವು."

ಅವರ ಮಾತನ್ನು ಮಧ್ಯದಲ್ಲಿಯೇ ತುಂಡರಿಸಿದ ಜನರಲ್, "ನಾನು ಅಸ್ತಿತ್ವದಲ್ಲೇ ಇಲ್ಲ" ಎಂದರು.

ಆಮೇಲೆ, ಇದೇ ಎಳೆಯನ್ನು ಹಿಡಿದು, ಫೀಲ್ಡ್ ಮಾರ್ಷಲ್ ಸ್ಕ್ಯೂಕ್ರ್ ಕೊಲಂಬಿಯದ ಅಧ್ಯಕ್ಷ ಪದವಿಯನ್ನು ಒಪ್ಪಿಕೊಳ್ಳುವಂತೆ ತಾವು ಮಾಡಿದ ಮನವಿಗಳನ್ನು ತಳ್ಳಿ ಹಾಕಿದ ವಿಷಯ ಹೇಳಿದರು. "ನಮ್ಮನ್ನು ಅನಾಯಕತ್ವದಿಂದ ಪಾರುಮಾಡಲು ಬೇಕಾದುದೆಲ್ಲ ಅವರಲ್ಲಿದೆ. ಆದರೆ ಅವರು ಮೋಹಿನಿಯ ಸಂಗೀತಕ್ಕೆ ಮನಸೋತರು" ಎಂದರು. ನಿಜವಾದ ಕಾರಣವೆಂದರೆ ಸ್ಕ್ಯೂಕ್ರ್‌ಗೆ ಅಧಿಕಾರ ಹಿಡಿಯುವ ಚಾತುರ್ಯವಿಲ್ಲ ಎಂಬುದು ಗಾರ್ಸಿಯ ಡೆಲ್ ರಿಯೋನ ಅನಿಸಿಕೆ. ಆದರೆ ಇದೇನೂ ದಾಟಲಾಗದ ಅಡ್ಡಿಯಲ್ಲ ಎಂಬುದು ಜನರಲ್‌ರ ವಿಶ್ಲೇಷಣೆ. "ಮಾನವನ ದೀರ್ಘ ಇತಿಹಾಸದಲ್ಲಿ ಚಾತುರ್ಯ ಎಂಬುದು ಆವಶ್ಯಕತೆಯ ಕೂಸು ಎಂಬುದು ಅನೇಕ ಬಾರಿ ಸಾಬೀತಾಗಿದೆ" ಎಂದರು. ಏನೇ ಆಗಲಿ, ಆಸೆಯು ಕಾಣಿಸಿಕೊಂಡದ್ದು ತೀರ ತಡವಾಗಿ, ಏಕೆಂದರೆ ಗಣರಾಜ್ಯದ ಅತ್ಯುತ್ತಮ ಜನರಲ್ ಈಗ ಸೇರಿದ್ದುದು ಕ್ಷಣಿಕವಾದ ಶಕ್ತಿಗಳ ಕೈಲಿ.

"ಗರಿಷ್ಠ ಅಧಿಕಾರವಿರುವುದು ಪ್ರೇಮದ ಶಕ್ತಿಯಲ್ಲಿ" ಎಂದ ಅವರು, "ಇದನ್ನು ಹೇಳಿದ್ದು ಸ್ವತಃ ಸ್ಯೂಕ್ರ್" ಎಂದು ತಮ್ಮ ಹಾಸ್ಯದ ಮಾತನ್ನು ಮುಗಿಸಿದರು.

ಟರ್ಬಾಕೋದಲ್ಲಿ ಜನರಲ್ ಅವನ ಬಗ್ಗೆ ಯೋಚಿಸುತ್ತಿದ್ದಾಗ ಫೀಲ್ಡ್ ಮಾರ್ಷಲ್ ಸ್ಯೂಕ್ರ್ ಭ್ರಮನಿರಸನಗೊಂಡು ಒಬ್ಬರೇ ಸಂಟಾ ಫ಼ ದ ಬೊಗೋಟ ಬಿಟ್ಟು ಕ್ವಿಟೋಗೆ ಹೊರಟಿದ್ದರು, ಆಗ ಅವರದು ವಯಸ್ಸು ಮತ್ತು ಆರೋಗ್ಯಗಳ ಉತ್ಕರ್ಷಕಾಲ, ಗರಿಮೆಯ ತುತ್ತತುದಿ. ಹೊರಡುವ ಹಿಂದಿನ ರಾತ್ರಿ ಅವರು ಮಾಡಿದ ಕೊನೆಯ ಕೆಲಸವೆಂದರೆ ತಮ್ಮ ಅನೇಕ ಯುದ್ಧಪ್ರಯತ್ನಗಳ ಬಗ್ಗೆ ಮಾರ್ಗದರ್ಶನ ಮಾಡಿದ್ದ ಈಜಿಪ್ಷಿಯನ್ ಪ್ರಾಂತದಲ್ಲಿದ್ದ ಹೆಸರಾಂತ ಜ್ಯೋತಿಷಿಯ ಭೇಟಿ, ಆ ಅತ್ಯಂತ ಪ್ರಕ್ಷುಬ್ಧ ಪರಿಸ್ಥಿತಿಯಲ್ಲೂ ಅವರಿಗೆ ಅನುಕೂಲಕರವಾಗಿದ್ದ ದಾರಿಯೆಂದರೆ ಸಮುದ್ರಮಾರ್ಗವೇ ಎಂದು ಆಕೆ ತಿಳಿಸಿದ್ದಳು. ತಮ್ಮ ತುರ್ತು ಕಾರ್ಯಗಳಿಗೆ ಅದು ನಿಧಾನದ್ದು ಎಂದು ಅಯಾಚುಕೋದ ಫೀಲ್ಡ್ ಮಾರ್ಷಲ್ ಭಾವಿಸಿದ್ದರು, ಹೀಗಾಗಿ ಭವಿಷ್ಯವಾಕ್ಕಿಗೆ ವಿರುದ್ಧವಾಗಿ ಭೂಮಾರ್ಗವಾಗಿ ಪಯಣಿಸುವ ಅಪಾಯವನ್ನೇ ಅವರು ಆಯ್ದುಕೊಂಡಿದ್ದರು.

"ಏನೂ ಮಾಡುವ ಹಾಗಿಲ್ಲ, ನಾವು ಸಿಕ್ಕಿಕೊಂಡಿದ್ದೇವೆ, ನಮ್ಮ ಅತ್ಯುತ್ತಮ ಸರ್ಕಾರ ಅತ್ಯಂತ ಹೀನಾಯವಾದ್ದು" ಎಂದು ಮಾತು ಮುಗಿಸಿದರು.

ಅವನಿಗೆ ಸ್ಥಳಿಯ ಬೆಂಬಲಿಗರ ಪರಿಚಯವಿತ್ತು. ಅವರೆಲ್ಲ ವಿಮೋಚನಾ ಹೋರಾಟದಲ್ಲಿ ಅಮೋಘ ಕಾರ್ಯ ಮಾಡಿದ್ದ ಅಪ್ರತಿಮ ವೀರರು, ಆದರೆ ರಾಜಕೀಯ ವಿದ್ಯಮಾನಗಳಲ್ಲಿ ಮತ್ತು ನರಭಕ್ಷಕ ಯೋಜನೆಗಳಲ್ಲಿ ಮಾತ್ರ ಕ್ಷುಲ್ಲಕ ಪುಡಾರಿಗಳು, ಅವರಲ್ಲಿ ಒಬ್ಬನಂತೂ ತನ್ನ ವಿರುದ್ಧ ಮಾಟಿಲಾ ಜೊತೆ ಸೇರುವವರೆಗೂ ಹೋಗಿದ್ದ. ಇತರರ ವಿಷಯದಲ್ಲಿ ಹೇಗೋ ಹಾಗೆಯೇ ಅವರನ್ನು ಆಕರ್ಷಿಸುವ ತನಕ ಅವರನ್ನು ನೆಮ್ಮದಿಯಾಗಿರಲು ಬಿಟ್ಟಿರಲಿಲ್ಲ. ಆನಂತರ ಸರ್ಕಾರವನ್ನು ಬೆಂಬಲಿಸಲು ಕೋರಿದ್ದ, ಅದೂ ಸ್ವಹಿತಾಸಕ್ತಿಗಳಿಗೆ ವಿರುದ್ಧವಾಗಿ. ಅವನು ಕೊಡುತ್ತಿದ್ದ ಕಾರಣ, ಎಂದಿನಂತೆಯೇ, ಉಪದೇಶಾತ್ಮಕವಾಗಿರುತ್ತಿತ್ತು: "ನಾಳೆ ಅವನು ಅಲ್ಲಿಲ್ಲದಿದ್ದಾಗ ತನ್ನನ್ನು ಬೆಂಬಲಿಸಲು ಕೇಳಿಕೊಂಡಿದ್ದ ಸರ್ಕಾರವೇ ಸಟಾಂಡರ್‌ನನ್ನು ವಾಪಸು ಕರೆಸಿಕೊಳ್ಳುತ್ತದೆ, ಅವನು ಹಿರಿಮೆಗರಿಮೆಗಳಿಂದ ಕೂಡಿ ತನ್ನ ಕನಸುಗಳ ಭಗ್ನಾವಶೇಷಗಳನ್ನು ತೊಡೆದು ಹಾಕಲು ವಾಪಸಾಗುತ್ತಾನೆ; ಅವನು ಅನೇಕ ವರ್ಷಗಳ ಯುದ್ಧಗಳ ಹಾಗೂ ತ್ಯಾಗಗಳ ಮೂಲಕ ಸಾಧಿಸಿದ್ದ ದೇಶದ ಐಕಮತ್ಯವು ಮತ್ತೆ ಛಿದ್ರಗೊಳ್ಳುತ್ತದೆ, ವಿಭಿನ್ನ ಬಣಗಳು ಒಡೆಯುತ್ತವೆ, ಮುಂದಿನ ಶತಮಾನಗಳಲ್ಲಿ ಅವನ ಹೆಸರಿಗೆ ಮಸಿ

ಬಳಿಯಲಾಗುತ್ತದೆ, ಅವನ ಕಾರ್ಯಗಳನ್ನು ತಿರಿಚಿ ಬಿಂಬಿಸಲಾಗುತ್ತದೆ. ಆದರೆ ಈಗ ಮತ್ತಷ್ಟು ರಕ್ತಪಾತವನ್ನು ತಡೆಯುವುದು ಅವನಿಗೆ ಸಾಧ್ಯವಾಗುವುದಾದರೆ, ಅವನಿಗೆ ಅದಾವುದೂ ಮುಖ್ಯವಾಗುವುದಿಲ್ಲ. "ದಂಗೆ ಎಂಬುದು ಸಮುದ್ರದ ಅಲೆಗಳಂತೆ ಒಂದರ ಹಿಂದೊಂದು ಬರುತ್ತವೆ. ಆ ಕಾರಣದಿಂದಲೇ ಅದನ್ನು ಕಂಡರೆ ನನಗಾಗದು" ಎಂದರು. ತಮ್ಮನ್ನು ಕಾಣಲು ಬಂದವರು ಅಚ್ಚರಿಪಡುವಂತೆ, "ನಂಬಿದರೆ ನಂಬಿ, ಬಿಟ್ಟರೆ ಬಿಡಿ, ನಾವು ಸ್ಪಾನಿಶ್‌ರ ವಿರುದ್ಧ ಮಾಡಿದ್ದು ಕೂಡ ಸರಿಯಾಗಲಿಲ್ಲವೇನೋ ಎಂಬ ವಿಷಾದ ಈಗೀಗ ನನಗಾಗುತ್ತಿದೆ" ಎಂದು ವಿವರಿಸಿದರು.

ಅವರ ಕೊನೆ ಸನ್ನಿಹಿತವಾಗುತ್ತಿದೆ ಎಂದು ಮಾಂಟಿಲಾ ಮತ್ತವರ ಗೆಳೆಯರಿಗೆ ಅನ್ನಿಸಿತು. ವಿದಾಯ ಹೇಳುವ ಮುಂಚೆ ಪ್ರತಿಯೊಬ್ಬನಿಗೂ ತಮಗೆ ಇಷ್ಟವಾದುದನ್ನು ಕೆತ್ತಿರುವ ಪದಕಗಳನ್ನು ನೀಡಿದರು. ಅದು ಮರಣೋತ್ತರ ಕಾಣಿಕೆ ಎಂಬ ಭಾವನೆ ಅವರಲ್ಲುಂಟಾಯಿತು. ಬಾಗಿಲೆಡೆಗೆ ಹೋಗುವಾಗ ಗಾರ್ಸಿಯ ಡೆಲ್ ರಿಯೋ ಮೆಲುದನಿಯಲ್ಲಿ ಹೇಳಿದ: "ಅವರ ಮುಖ ಹೆಣದ್ದರ ಹಾಗಿದೆ."

ಈ ಮಾತುಗಳು ಪ್ರತಿಧ್ವನಿಯಿಂದ ಮನೆಯಲ್ಲೆಲ್ಲ ಜೋರಾಗಿ ಪುನರುಕ್ತವಾಗಿ ರಾತ್ರಿಯೆಲ್ಲ ಜನರಲ್‌ರನ್ನು ಹಿಂಬಾಲಿಸಿತು. ಆದರೆ ಮಾರನೆಯ ದಿನ ಜನರಲ್ ಫ್ರಾನ್‌ಸಿಸ್ಕೋ ಕಾರ್ಮೋನ ಅವರು ಅಷ್ಟು ಚೆನ್ನಾಗಿರುವುದನ್ನು ನೋಡಿ ಅಚ್ಚರಿಗೊಂಡ. ಜನರಲ್ ಕಿತ್ತಿಳೆ ಹೂಗಳಿಂದ ಪರಿಮಳಭರಿತವಾಗಿದ್ದ ಒಳಾಂಗಣದಲ್ಲಿ ಜೋಲಿಮಂಚದಲ್ಲಿ ತೂಗಿಕೊಳ್ಳುತ್ತಿದ್ದರು. ಅದರ ಮೇಲೆ ರೇಷ್ಮೆ ದಾರದಿಂದ ಅವರ ಹೆಸರನ್ನು ಕಸೂತಿ ಮಾಡಲಾಗಿತ್ತು, ಪಕ್ಕದ ಊರು ಜ್ಯಾಸಿಂಟಾದಲ್ಲಿ ಅವರಿಗೆಂದೇ ಅದು ತಯಾರಾಗಿತ್ತು. ಜೋಸೆ ಪೆಲಾಸಿಯೋಸ್ ಅದನ್ನು ಎರಡು ಕಿತ್ತಿಳೆ ಮರಗಳ ನಡುವೆ ಕಟ್ಟಿದ್ದ. ಜನರಲ್ ಆಗತಾನೇ ಸ್ನಾನ ಮುಗಿಸಿದ್ದರು, ತಲೆಗೂದಲನ್ನು ಹಿಂದಕ್ಕೆ ಬಾಚಿಕೊಂಡು ಶರ್ಟ್ ಇಲ್ಲದೆ ಬರಿ ನೀಲಿ ಟ್ಯೂನಿಕ್ ತೊಟ್ಟಿದ್ದರು, ಅದರಿಂದ ಅವರಲ್ಲಿ ಒಂದು ಬಗೆಯ ಮುಗ್ಧತೆ ಮನೆಮಾಡಿತ್ತು. ನಿಧಾನವಾಗಿ ತೂಗಿಕೊಳ್ಳುತ್ತ ಅವರು ಅಧ್ಯಕ್ಷ ಕ್ಯಾಸೆಡೋಗೆ ಒಂದು ಕೋಪೋದ್ರಿಕ್ತ ಪತ್ರವನ್ನು ಫರ್ನಾಂಡೋಗೆ ಹೇಳಿ ಬರೆಸುತ್ತಿದ್ದರು. ಜನರು ಹೇಳುವಷ್ಟು ಅವರು ನಿಶ್ಶಕ್ತರಾಗಿರುವರೆಂದು ಜನರಲ್ ಕಾರ್ಮೋನಗೆ ಅನ್ನಿಸಲಿಲ್ಲ, ಅದಕ್ಕೆ ಕಾರಣ ಪ್ರಾಯಶಃ ಅವರ ವೈಶಿಷ್ಟ್ಯವೆನಿಸಿದ ಕಡುಕೋಪ ತುಂಬಿಕೊಂಡಿದ್ದುದು.

ಕಾರ್ಮೋನ ಎಲ್ಲಾದರೂ ಹಾದುಹೋದರೆ ಕಣ್ಣಿಗೆ ಬೀಳದವನೇನಲ್ಲ; ಜನರಲ್ ಅವನನ್ನು ಗಮನಿಸಿದರೂ ತಮ್ಮ ವಿರೋಧಿಗಳ ವಿಶ್ವಾಸಘಾತಕತನವನ್ನು ಖಂಡಿಸುವ ವಾಕ್ಯವೊಂದನ್ನು ಹೇಳಿ

ಬರೆಸುತ್ತಿದ್ದುದರಿಂದ ಅವನತ್ತ ನೋಡಲಿಲ್ಲ. ಆ ವಾಕ್ಯವನ್ನು ಮುಗಿಸಿದ ಮೇಲೆಯೇ ಅವರ ಕಣ್ಣು ಆ ದೈತ್ಯಗಾತ್ರನ ಕಡೆ ತಿರುಗಿದ್ದು, ಅವನು ಕಣ್ಣು ಮಿಟುಕಿಸದೆ ತಮ್ಮನ್ನೇ ನೋಡುತ್ತ ನಿಂತಿದ್ದ, ಅವನ ಇಡೀ ದೇಹ ಜೋಲಿಮಂಚಕ್ಕೆದುರಾಗಿತ್ತು. ಪೀಠಿಕೆಯ ಮಾತಗಳಿಲ್ಲದೆ ಅವನನ್ನು ನೇರವಾಗಿ ಕೇಳಿದರು:

"ನಾನು ದಂಗೆಗಳಿಗೆ ಪ್ರೇರಣೆ ನೀಡುತ್ತೇನೆಂದು ನೀವು ಭಾವಿಸುತ್ತೀರಾ?"

ತಮ್ಮ ಬಗ್ಗೆ ಕಹಿಯಾಗಿ ಪ್ರತಿಕ್ರಿಯಿಸುವನೆಂದು ಭಾವಿಸಿದ್ದ ಜನರಲ್ ಕಾರ್ಮೋನ ದರ್ಪದ ಲೇಪನವಿದ್ದ ದನಿಯಿಂದ ಕೇಳಿದ:

"ಜನರಲ್ ಅವರಿಗೆ ಆ ಆಲೋಚನೆ ಎಲ್ಲಿಂದ ಬಂತು?"

"ಎಲ್ಲಿಂದ ಬರುತ್ತದೋ ಅಲ್ಲಿಂದಲೇ" ಎಂದರು ಜನರಲ್.

ಆಗ ತಾನೇ ಸಂಟಾ ಫ಼ ದ ಬೊಗೋಟದಿಂದ ಅಂಚೆಯಲ್ಲಿ ಬಂದು ತಮ್ಮ ಕೈ ಸೇರಿದ್ದ ಪತ್ರಿಕಾವರದಿಗಳ ತುಣುಕುಗಳನ್ನು ಅವನ ಕೈಗಿತ್ತರು; ಕಾಂಗ್ರೆಸ್‌ನ ನಿರ್ಣಯಕ್ಕೆ ವಿರುದ್ಧವಾಗಿ ಮತ್ತೆ ಅಧಿಕಾರಕ್ಕೆ ಬರಲು ಶಸ್ತ್ರದಳಗಳು ಬಂಡಾಯವೇಳುವಂತೆ ತಾವು ಒಳಗೊಳಗೇ ಚಿತಾವಣೆ ಮಾಡುತ್ತಿರುವುದಾಗಿ ಅವುಗಳಲ್ಲಿ ಮತ್ತೊಮ್ಮೆ ಆರೋಪಿಸಲಾಗಿತ್ತು. "ಎಂಥ ಹೇಯ ಆಪಾದನೆ, ಐಕ್ಯತೆಯ ಬಗ್ಗೆ ನಾನು ಉಪದೇಶ ಮಾಡುತ್ತಿದ್ದರೆ, ಈ ಅರೆಬೆಂದ ಎಳಕರು ನನ್ನ ಮೇಲೆ ಪಿತೂರಿಯ ಗೂಬೆಯನ್ನು ಕೂರಿಸುತ್ತಿದ್ದಾರೆ." ಆ ತುಣುಕುಗಳನ್ನು ಓದಿದಾಗ ಜನರಲ್ ಕಾರ್ಮೋಗೆ ಒಂದು ಬಗೆಯಲ್ಲಿ ಭ್ರಮನಿರಸನವೇ ಉಂಟಾಯಿತು.

"ಸರಿ, ನಾನು ಅದನ್ನು ನಂಬಿದ್ದು ಮಾತ್ರವಲ್ಲ, ಅದು ನಿಜವಾಗಿದ್ದರೆಷ್ಟು ಚೆನ್ನ ಎಂದು ಯೋಚಿಸಿದವನು" ಎಂದ.

"ನನಗದು ಅರ್ಥವಾಗುತ್ತೆ" ಎಂದರು ಜನರಲ್.

ಯಾವ ಬಗೆಯ ಅಸಹನೆಯನ್ನೂ ತೋರಿಸಲಿಲ್ಲ, ಆದರೆ ಕಾಗದ ಹೇಳಿ ಬರೆಸುವ ತನಕ ಕಾಯಲು ಹೇಳಿದರು. ಆ ಪತ್ರದಲ್ಲಿ ಮತ್ತೆ ದೇಶವನ್ನು ಬಿಟ್ಟು ಹೋಗಲು ಅಧಿಕೃತ ಪರವಾನಗಿಯನ್ನು ನೀಡಲು ಕೇಳಿಕೊಂಡರು. ಅದನ್ನು ಮುಗಿಸುವಷ್ಟರಲ್ಲಿ ಪತ್ರಿಕೆಯ ತುಣುಕುಗಳನ್ನೋದಿ ಕಳೆದುಕೊಂಡಿದ್ದ ಸಮಸ್ಥಿತಿಯನ್ನು ಮತ್ತೆ ಸುಲಭವಾಗಿ ಪಡೆದುಕೊಂಡಿದ್ದರು. ನೆರವಿಲ್ಲದೆ ಎದ್ದು ನಿಂತು ಜನರಲ್ ಕಾರ್ಮೋನನ ತೋಳನ್ನು ಹಿಡಿದುಕೊಂಡು ನೀರಿನ ತೊಟ್ಟಿಯ ಸುತ್ತ ಸ್ವಲ್ಪ ನಡೆದಾಡಿದರು.

ಮೂರು ದಿವಸಗಳ ಸತತ ಮಳೆಯ ನಂತರ ಬೀಳುತ್ತಿದ್ದ ಸೂರ್ಯನ ಬೆಳಕು ಮರಗಳ ಎಲೆಗಳ ಮೂಲಕ ಚಿನ್ನದ ಹುಡಿಯನ್ನು ಸೋಸಿದಂತೆ ಕಾಣುತ್ತಿತ್ತು, ಇದರಿಂದ ಸ್ಫೂರ್ತಿಗೊಂಡ ಹಕ್ಕಿಗಳು ಕಿತ್ತಿಳೆ

ಹೂಗಳ ನಡುವೆ ಹಾಡುತ್ತ ಹಾರಾಡುತ್ತಿದ್ದವು. ಅದನ್ನು ಒಂದು ಕ್ಷಣ ಕೇಳಿಸಿಕೊಂಡ ಜನರಲ್ ಅದನ್ನು ಎದೆಯಲ್ಲಿ ತುಂಬಿಕೊಂಡು ಮೆಲುವಾಗಿ ನಿಟ್ಟುಸಿರು ಬಿಟ್ಟು, "ಅವು ಇನ್ನೂ ಹಾಡುತ್ತಿವೆಯಲ್ಲ" ಎಂದರು. ಆಂಟಿಲ್‌ಗಳಲ್ಲಿನ ಹಕ್ಕಿಗಳು ಜೂನ್‌ಗಿಂತ ಏಪ್ರಿಲ್ ತಿಂಗಳಲ್ಲಿ ಏಕೆ ಚೆನ್ನಾಗಿ ಹಾಡುತ್ತವೆ ಎಂಬುದಕ್ಕೆ ಪ್ರೌಢ ವಿವರಣೆಯನ್ನು ನೀಡಿದರು. ಆನಂತರ ದಡಕ್ಕನೆ ಮತ್ತೆ ತಮ್ಮ ಕಾರ್ಯಕ್ಕೆ ಮರಳಿದರು. ಹೊಸ ಸರ್ಕಾರದ ಅಧಿಕಾರವನ್ನು ಯಾವ ಷರತ್ತುಗಳಿಲ್ಲದೆ ಅನುಸರಿಸಲು ಹತ್ತು ನಿಮಿಷಗಳಿಂತ ಕಡಿಮೆ ಅವಧಿಯಲ್ಲಿ ಅವನ ಮನವೊಲಿಸಿದರು. ಆಮೇಲೆ ಕಾರ್ಮೋನ ಜೊತೆ ಬಾಗಿಲವರೆಗೂ ನಡೆದು ಕಳಿಸಿ ಮಲಗುವ ಕೋಣೆಗೆ ಮರಳಿ ಮ್ಯಾನ್ಯುಯೆಲ ಸಯೆನ್ಜ್‌ಗೆ ತಮ್ಮ ಕೈಯಲ್ಲೇ ಪತ್ರ ಬರೆಯಲು ತೊಡಗಿದರು. ಪತ್ರಗಳ ರವಾನೆಗೆ ಸರ್ಕಾರವು ಒಡ್ಡುತ್ತಿದ್ದ ಅಡೆತಡೆಗಳ ಬಗ್ಗೆ ಅವಳು ದೂರು ಹೇಳುತ್ತಲೇ ಇದ್ದಳಲ್ಲ.

ಪತ್ರವನ್ನು ಬರೆಯುತ್ತಿರುವಾಗಲೇ ಫರ್ನಾಂಡಾ ಬ್ಯಾರಿಗ ತಂದಿಟ್ಟಿದ್ದ ಜೋಳದ ಅಂಬಲಿಯನ್ನು ರುಚಿ ನೋಡವ ಹೊರತು ಅವರು ಬೇರೇನನ್ನೂ ಮಾಡಲಿಲ್ಲ. ಕಳೆದ ರಾತ್ರಿ ಫರ್ನಾಂಡೋ ಜೋರಾಗಿ ಓದಲು ಆರಂಭಿಸಿದ್ದ ಚೈನೀ ಸಸ್ಯಗಳ ಕುರಿತಾದ ಪುಸ್ತಕವನ್ನು ಮಧ್ಯಾಹ್ನ ಮಲಗುವಾಗ ಮುಂದುವರಿಸಲು ಹೇಳಿದರು. ಕೊಂಚ ಕಾಲದ ನಂತರ ಅವರ ಸ್ನಾನಕ್ಕೆಂದು ಅರಿಗಾನೋ ಸೊಪ್ಪು ಬೆರೆಸಿದ್ದ ನೀರು ಹಿಡಿದ ಜೋಸೆ ಪೆಲಾಸಿಯೋಸ್ ಕೋಣೆಯೊಳಗೆ ಬಂದ. ನೋಡಿದರೆ, ಫರ್ನಾಂಡೋ ಕುರ್ಚಿಯಲ್ಲೇ ನಿದ್ದೆ ಮಾಡುತ್ತಿದ್ದ, ಅವನ ತೊಡೆಯ ಮೇಲೆ ತೆರೆದ ಪುಸ್ತಕವಿತ್ತು. ಜೋಲಿಮಂಚದಲ್ಲಿದ್ದ ಜನರಲ್ ಎಚ್ಚರವಾಗಿಯೇ ಇದ್ದರು, ತಮ್ಮ ತುಟಿಯ ಮೇಲೆ ತೋರು ಬೆರಳನ್ನಿಟ್ಟುಕೊಂಡು ಮಾತಾಡದಿರಲು ಸನ್ನೆ ಮಾಡಿದರು. ಮೊದಲ ಬಾರಿಗೆ ಈ ಎರಡು ವಾರಗಳಿಂದ ಜನರಲ್‌ರಿಗೆ ಜ್ವರ ಬಂದಿರಲಿಲ್ಲ.

ಈ ರೀತಿ, ಬರುತ್ತಿದ್ದ ಅಂಚೆಗಳ ನಡುವೆ ಕಾಲ ಕಳೆಯುತ್ತ ಟರ್ಬಾಕೋದಲ್ಲಿ ಅವರು ಇಪ್ಪತ್ತೊಂಬತ್ತು ದಿನಗಳನ್ನು ಕಳೆದಿದ್ದರು. ಈ ಹಿಂದೆಯೂ ಅವರು ಅಲ್ಲಿಗೆ ಎರಡು ಬಾರಿ ಬಂದಿದ್ದರು, ಆದರೆ ಎರಡನೆಯ ಬಾರಿಗೆ ಈ ಮೂರು ವರ್ಷಗಳ ಹಿಂದೆ ಬಂದಿದ್ದಾಗ ಮಾತ್ರವೇ ಅಲ್ಲಿನ ಔಷಧಮೂಲಿಕೆಗಳ ವೈಶಿಷ್ಟ್ಯ ಗಮನಕ್ಕೆ ಬಂದಿದ್ದುದು. ಆಗ ಅವರು ಸಟಾಂಡರ್‌ನ ಪ್ರತ್ಯೇಕತೆಯ ಯೋಜನೆಗಳನ್ನು ತಡೆಯಲೆಂದು ಕ್ಯಾರಕಾಸ್‌ನಿಂದ ಸಂಟಾ ಫ ದ ಬೊಗೋಟಕ್ಕೆ ವಾಪಸು ಪ್ರಯಾಣ ಮಾಡುತ್ತಿದ್ದರು. ಆಗ ಹವಾಗುಣವು ಎಷ್ಟು ಒಗ್ಗಿತ್ತೆಂದರೆ ಅಂದುಕೊಂಡಿದ್ದಂತೆ ಎರಡು ರಾತ್ರಿಗಳ ಬದಲು ಹತ್ತು ದಿನಗಳ ಕಾಲ ಅಲ್ಲಿ ತಂಗಿದ್ದರು. ಆಗ ವಾತಾವರಣದೆಲ್ಲೆಡೆಯೂ ದೇಶಭಕ್ತಿ ತುಂಬಿತ್ತು. ಕೊನೆಯ ದಿನ ಅಂಥವೆಲ್ಲ

ಸರಿಹೋಗದಿದ್ದರೂ ಒಂದು ಮಹಾ ಗೂಳಿಕಾಳಗ ಏರ್ಪಾಡಾಗಿತ್ತು. ಒಂದು ಹೆಂಗರುವಂತೂ ಅವನ ಮೇಲಂಗಿಯ ಚುಂಗನ್ನು ಹರಿದು, ಜನರೆಲ್ಲ ಭಯದಿಂದ ಕೂಗುವಂತೆ ಮಾಡಿತ್ತು. ಈಗ, ಮೂರನೆಯ ಭೇಟಿಯಲ್ಲಿ, ಅವರ ಹಣೆಯಲ್ಲಿ ಬರೆದಿದ್ದ ಯಾತನೆ ತುಂಬಿಕೊಂಡಿತು, ಅಲ್ಲಿ ಕಾಲ ಕಳೆಯುವುದೇ ದುಸ್ತರವಾಗುವಷ್ಟು ಅದು ತೀವ್ರವಾಗಿತ್ತು. ಮಳೆ ಆಗಾಗ ಸುರಿಯುತ್ತಿತ್ತು, ಜನರಿಂದ ದೂರವಿಡುತ್ತಿತ್ತು, ಬದುಕೆಂದರೆ ಮತ್ತಷ್ಟು ಹಿನ್ನಡೆಗಳ ಸುದ್ದಿಗಳಿಗೆ ಕಾಯುವುದಷ್ಟೇ ಎನ್ನಿಸಿಬಿಟ್ಟಿತ್ತು. ಒಂದು ರಾತ್ರಿಯಂತೂ, ತೀವ್ರಗೊಂಡ ನಿದ್ರಾಹೀನತೆಯ ಎಚ್ಚರದಲ್ಲಿ ಜೋಲಿಮಂಚದಲ್ಲಿ ಮಲಗಿ ಹೇಳಿಕೊಂಡದ್ದು ಜೋಸೆ ಪೆಲಾಸಿಯೋಸ್‌ಗೆ ಕೇಳಿಸಿತ್ತು: "ಸ್ಯೂಕ್ರ್ ಎಲ್ಲಿರಬಹುದು ಎಂಬುದನ್ನು ದೇವರೇ ಬಲ್ಲ."

ಜನರಲ್ ಮಾಂಟಿಲಾ ಎರಡು ಬಾರಿ ವಾಪಸು ಬಂದು ನೋಡಿದಾಗ ಮೊದಲನೆಯ ದಿನಕ್ಕಿಂತ ಅವರ ಸ್ಥಿತಿ ತುಂಬ ವಾಸಿ ಎನ್ನಿಸಿತ್ತು. ಅದಕ್ಕೂ ಮಿಗಿಲಾಗಿ, ಜನರಲ್ ನಿಧಾನವಾಗಿ ತಮ್ಮ ಹಳೆಯ ಕಾರ್ಯಕ್ಷಮತೆಯನ್ನು ಮರಳಿ ಪಡೆಯುತ್ತಿದ್ದಾರೆ ಎಂದೂ ಅವರಿಗನಿಸಿತ್ತು. ಇದಕ್ಕೆ ಕಾರಣ ಕಾರ್ಟೆಜೆನದಲ್ಲಿನ ತಮ್ಮ ಬೆಂಬಲಿಗರು ಕಳೆದ ಭೇಟಿಯ ಸಂದರ್ಭದಲ್ಲಿ ಒಪ್ಪಂದವಾಗಿದ್ದಂತೆ ಹೊಸ ಸಂವಿಧಾನಕ್ಕಾಗಲೀ ಹೊಸ ಸರ್ಕಾರಕ್ಕಾಗಲೀ ಒಪ್ಪಿಗೆ ನೀಡಿಲ್ಲ ಎಂದು ಒತ್ತಿ ಹೇಳುತ್ತಿರುವುದು. ಜೋಕಿನ್ ಮಾಸ್ಕ್ವೇರ ಅಧ್ಯಕ್ಷ ಪದವಿಯನ್ನು ಒಪ್ಪಿಕೊಳ್ಳುವುದನ್ನು ಅವರು ಕಾಯುತ್ತಿದ್ದಾರೆ ಎಂಬ ನೆವವನ್ನು ಜನರಲ್ ಮಾಂಟಿಲ ಸೃಷ್ಟಿ ಮಾಡಿದ್ದರು.

"ಮೊದಲೇ ಅವರು ಒಪ್ಪಿಕೊಂಡರೆ ಅವರ ಪರಿಸ್ಥಿತಿ ಉತ್ತಮವಾಗುತ್ತೆ" ಎಂದರು ಜನರಲ್.

ಮುಂದಿನ ಭೇಟಿಯಲ್ಲಿ ಅವರು ಮತ್ತಷ್ಟು ಬಲವಾಗಿ ಆಕ್ಷೇಪಣೆ ಮಾಡಿದ್ದ, ಏಕೆಂದರೆ ಹುಡುಗರಾಗಿದ್ದಾಗಿನಿಂದ ಮಾಂಟಿಲ ಅವರಿಗೆ ಪರಿಚಿತ, ಹಾಗಾಗಿ ಅವರು ಬೇರೆಯವರ ಮೇಲೆ ಆರೋಪಿಸಿದ್ದ ವಿರೋಧ ವಾಸ್ತವವಾಗಿ ಅವರದೇ ಎಂಬುದು ಗೊತ್ತು. ವರ್ಗ ಮತ್ತು ವೃತ್ತಿಗಳನ್ನು ಆಧರಿಸಿದ ಗೆಳೆತನವು ಅವರನ್ನು ಬಂಧಿಸಿತ್ತು, ತಮ್ಮ ಬದುಕನ್ನವರು ಒಂದೇ ಬಗೆಯಲ್ಲಿ ಕಳೆದಿದ್ದರು. ಒಂದು ಹಂತದಲ್ಲಿ ಅವರ ಗೆಳೆತನವು ಎಷ್ಟು ತಣ್ಣಗಾಗಿತ್ತೆಂದರೆ ಕೆಲ ಕಾಲ ಮಾತು ಬಿಟ್ಟಿದ್ದರು. ಆ ಸಂದರ್ಭವೆಂದರೆ ಯುದ್ಧದ ಬಹು ಸಂದಿಗ್ಧ ಸನ್ನಿವೇಶದಲ್ಲಿ ಮಾಂಟಲ ಮಾಂಪಾಕ್ಸ್‌ನಲ್ಲಿ ಬದಲಿ ವ್ಯವಸ್ಥೆ ಮಾಡದೆ ಜನರಲ್‌ರನ್ನು ಬಿಟ್ಟು ಹೋಗಿದ್ದು, ಆಗ ಜನರಲ್ ತಮ್ಮೆಲ್ಲ ಕಷ್ಟಗಳಿಗೆ ಅವರ ನೈತಿಕ ಅಧಃಪತನ ಮತ್ತು ಬೇಜವಾಬ್ದಾರಿಗಳೇ ಕಾರಣವೆಂದು ಆರೋಪಿಸಿದ್ದರು. ಮಾಂಟಿಲ ಅದಕ್ಕೆ ತೋರಿದ ಪ್ರತಿಕ್ರಿಯೆ ಎಷ್ಟು ತೀವ್ರವಾಗಿತ್ತೆಂದರೆ ಜನರಲ್‌ರನ್ನು ದ್ವಂದ್ವಯುದ್ಧಕ್ಕೆ ಆಹ್ವಾನಿಸಿದ್ದರು,

ಆದರೆ ವೈಯಕ್ತಿಕ ಅಸಮಾಧಾನವನ್ನು ಮೀರಿ ಅವರು ಸ್ವಾತಂತ್ರ್ಯದ ಉದ್ದೇಶಸಾಧನೆಗೆ ಹೆಣಗಿದ್ದರು.

ಅವರು ಮಡ್ರೀಡ್‌ನ ಮಿಲಿಟರಿ ಅಕೆಡೆಮಿಯಲ್ಲಿ ಗಣಿತ ಮತ್ತು ತತ್ವಶಾಸ್ತ್ರಗಳನ್ನ ಅಧ್ಯಯನ ಮಾಡಿದ್ದರು, ವೆನಿಝೂಲದ ವಿಮೋಚನೆಯ ಮೊದಲ ಸುದ್ದಿ ತಲುಪುವವರೆಗೂ ದೊರೆ ಏಳನೆಯ ಫರ್ನಾಂಡೋನ ಮೈಗಾವಲು ಪಡೆಯಲ್ಲಿ ಕೆಲಸ ಮಾಡಿದ್ದರು. ಮೆಕ್ಸಿಕೋದಲ್ಲಿ ಒಳ್ಳೆಯ ಸಂಚುಗಾರನೆನಿಸಿದ್ದರು, ಕ್ಯುರಾಕೋದಲ್ಲಿ ಶಸ್ತ್ರಗಳ ಒಳ್ಳೆಯ ಕಳ್ಳಸಾಗಣೆದಾರನೆನಿಸಿದ್ದರು, ತಮ್ಮ ಹದಿನೇಳನೆಯ ವಯಸ್ಸಿನಲ್ಲಿ ಮೊದಲ ಬಾರಿಗೆ ಗಾಯಗೊಂಡಾಗಿನಿಂದ ಎಲ್ಲೆಡೆ ಒಳ್ಳೆಯ ಯೋಧನೆನಿಸಿಕೊಂಡಿದ್ದರು. ೧೮೨೧ ರಲ್ಲಿ ರಿಯೋಹಚದಿಂದ ಪನಾಮವರೆಗಿನ ಕರಾವಳಿಯನ್ನು ಸ್ಪಾನಿಯಾರ್ಡ್‌ಗಳಿಂದ ಮುಕ್ತಗೊಳಿಸಿದ್ದರು ಹಾಗೂ ಹೆಚ್ಚಿನ ಉತ್ತಮ ಸೈನ್ಯದೊಡನೆ ಹೋಗಿ ಕಾರ್ಟಜೆನವನ್ನು ವಶಪಡಿಸಿಕೊಂಡಿದ್ದರು. ಆಮೇಲೆ ಅವರು ಜನರಲ್‌ರೊಡನೆ ಘನತೆಯಿಂದ ಒಪ್ಪಂದಕ್ಕೆ ಮುಂದಾಗಿದ್ದರು: ನಗರದ ಚಿನ್ನದ ಕೀಲಿಕೈಗಳನ್ನು ಅವರಿಗೆ ಕಳಿಸಿದ್ದರು, ಜನರಲ್ ಇಂದ ಬ್ರಿಗೇಡಿಯರ್ ಜನರಲ್ ದರ್ಜೆಗೆ ಅವರಿಗೆ ಬಡ್ತಿ ನೀಡಿ ಕರಾವಳಿಯನ್ನು ವಶಕ್ಕೆ ತೆಗೆದುಕೊಳ್ಳಬೇಕೆಂಬ ಸರ್ಕಾರದ ಆಜ್ಞೆಯೊಂದಿಗೆ ಅವುಗಳನ್ನು ಅವರಿಗೇ ಮರಳಿಸಿದ್ದರು. ಅತಿರೇಕಗಳನ್ನು ವಿನೋದಪರತೆಯಿಂದ ನಿವಾರಿಸಿಕೊಳ್ಳುತ್ತಿದ್ದರೂ ಅವರು ಜನಮನ್ನಣೆಯ ಗವರ್ನರ್ ಆಗಿರಲಿಲ್ಲ. ಅವರ ಮನೆ ಇಡೀ ನಗರದಲ್ಲಿಯೇ ಅತ್ಯುತ್ತಮವಾಗಿತ್ತು, ಆಗ್ವಾಸ್ ವಿವಾಸ್‌ನಲ್ಲಿನ ಅವರ ಕಾರ್ಖಾನೆ ಆ ಪ್ರಾಂತದಲ್ಲಿಯೇ ಬಯಸುವಂಥದಾಗಿತ್ತು, ಅವನ್ನೆಲ್ಲ ಕೊಳ್ಳಲು ಅವರಿಗೆ ಹಣ ಎಲ್ಲಿಂದ ಬಂತೆಂದು ಜನರು ಬೀದಿಯ ಗೋಡೆಗಳ ಮೇಲೆ ದೊಡ್ಡದಾಗಿ ಬರೆದು ಕೇಳಿದ್ದರು. ಆದರೆ ಎಂಟು ವರ್ಷಗಳ ತ್ರಾಸದಾಯಕವೂ ಏಕಾಧಿಕಾರ ಚಲಾವಣೆಯನಂತರ ಅವರೊಬ್ಬ ಎದುರಿಸಲಸಾಧ್ಯವಾದ ಚಾಣಾಕ್ಷ ರಾಜಕಾರಣಿಯಾಗಿ ಬೆಳೆದು ಗವರ್ನರ್ ಆಗಿಯೇ ಮುಂದುವರಿದಿದ್ದರು.

ಪ್ರತಿಯೊಂದು ಬಲವಾದ ಆಕ್ಷೇಪಣೆಗೂ ಮಾಂಟಿಲ ಬೇರೆ ಬೇರೆ ವಿವರಣೆಗಳಿಂದ ಉತ್ತರಿಸಿದ್ದರು. ಆದರೆ, ಒಂದು ಸಂದರ್ಭದಲ್ಲಿ ನಿರಲಂಕಾರಿಕ ಸತ್ಯವನ್ನುಸುರಿದ್ದರು: ಕಾರ್ಟೆಜೆನದಲ್ಲಿನ ಬೊಲಿವರ್‌ವಾದಿಗಳು ರಾಜಿಯ ಸಂವಿಧಾನಕ್ಕೆ ಒಪ್ಪಿಗೆ ನೀಡದಿರಲು ಅಥವಾ ಸಾಮರಸ್ಯದಿಂದ ಕೂಡಿರದೆ ವ್ಯಾಪಕ ಅಪಸ್ವರದ ಹಾಡಾದ ದುರ್ಬಲ ಸರ್ಕಾರವನ್ನು ಬೆಂಬಲಿಸದಿರಲು ನಿರ್ಧರಿಸಿದ್ದರು. ಇದು ಸ್ಥಳೀಯ ರಾಜಕಾರಣಿಗಳ ವಿಶೇಷ ಗುಣವಾಗಿತ್ತು, ಅವರ ಭಿನ್ನಾಭಿಪ್ರಾಯಗಳು ಅನೇಕ ಐತಿಹಾಸಿಕ ದುರಂತಗಳಿಗೆ ಕಾರಣವಾಗಿದ್ದವು. “ಸರ್, ನಮ್ಮಲ್ಲಿನ ಅತ್ಯಂತ

ಉದಾರವಾದಿಗಳಾದ ತಾವೇನಾದರೂ ತಮ್ಮ ಕೆಲಸವನ್ನು ಹಾಳುಗೆಡವಲು ಉದಾರವಾದದ ಹೆಸರನ್ನು ಬಳಸಿಕೊಳ್ಳುವ ಜನರ ಕೃಪೆಯಡಿಯಲ್ಲಿ ನಮ್ಮನ್ನು ಬಿಟ್ಟರೆ ಅವರನ್ನು ತಪ್ಪು ತಿಳಿಯುವಂತಿಲ್ಲ" ಎಂದರು ಮಾಂಟಿಲ. ಹೀಗಾಗಿ ಸಮಸ್ಯೆಗಳನ್ನು ಬಗೆಹರಿಸುವ ಒಂದೇ ಮಾರ್ಗವೆಂದರೆ ಜನರಲ್ ದೇಶದಲ್ಲಿಯೇ ಉಳಿದು ಅದು ಛಿದ್ರಗೊಳ್ಳುವುದನ್ನು ತಪ್ಪಿಸುವುದು.

"ಸರಿ, ವಿಷಯ ಹಾಗೇ ಇದ್ದರೆ, ಕಾರ್ಮೋನಗೆ ವಾಪಸು ಬರಲು ಹೇಳಿ, ಬಂಡಾಯವೇಳಲು ಅವನನ್ನು ಒಪ್ಪಿಸೋಣ. ಕಾರ್ಟಜೆನಿನ್ನರು ದರ್ಪದಿಂದ ಪ್ರಚೋದಿಸುವ ಅಂತರ್ಯುದ್ಧದಷ್ಟು ರಕ್ತ ಅದರಿಂದೇನೂ ಸುರಿಯುವುದಿಲ್ಲ" ಎಂದು ಜನರಲ್ ತನಗೆ ವಿಶಿಷ್ಟವಾದ ವ್ಯಂಗ್ಯ ಸೇರಿಸಿ ನುಡಿದರು.

ಆದರೆ ಮಾಂಟಿಲರಿಗೆ ವಿದಾಯ ಹೇಳುವ ಹೊತ್ತಿಗೆ ಅವರ ಹಿಂದಿನ ಸಮಸ್ಥಿತಿ ಮರಳಿತ್ತು. ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಪಕ್ಷದ ನಾಯಕರನ್ನು ಟರ್ಬಾಕೋಗೆ ಕರೆತರಲು ಅವರಿಗೆ ಹೇಳಿದರು. ಜೊಕಿನ್ ಮಾಸ್ಕ್ವೇರ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದಾನೆ ಎಂಬ ಸುದ್ದಿಯನ್ನು ಜನರಲ್ ಕ್ಯಾರೆನೋ ತಂದಾಗಲೂ ಅವರಿಗಾಗಿ ಅಲ್ಲಿಯೇ ಕಾಯುತ್ತಿದ್ದರು.

ತಮ್ಮ ಹಣೆ ಬಡಿದುಕೊಂಡು, "ಹಾಳಾಗಿ ಹೋಗಲಿ. ಕಣ್ಣಾರೆ ಕಾಣೋವರೆಗೂ ನಾನದನ್ನು ನಂಬಲಾರೆ" ಎಂದು ಉದ್ಗರಿಸಿದರು.

ಅದೇ ಅಪರಾಹ್ನ ಆ ಸುದ್ದಿಯ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಮರಗಳನ್ನು ಬುಡಮೇಲು ಮಾಡುವಷ್ಟು ಜೋರಾಗಿ ಗಾಳಿ ಬೀಸುತ್ತ ಮಳೆ ಬರುತ್ತಿದ್ದರೂ ಜನರಲ್ ಮಾಂಟಿಲ ಖುದ್ದಾಗಿ ಹೋದರು. ಮಳೆಯಿಂದ ಅರ್ಧ ನಗರವೇ ಹಾನಿಗೊಳಗಾಯಿತು, ಮನೆಯ ತೋಟ ನಾಶವಾಯಿತು, ಮುಳುಗಿದ ಪ್ರಾಣಿಗಳನ್ನು ಪ್ರವಾಹ ಕೊಚ್ಚಿಕೊಂಡು ಹೋಯಿತು. ಆದರೆ ಕೆಟ್ಟ ಸುದ್ದಿಯ ಬಿರುಗಾಳಿಯನ್ನು ತಣ್ಣಗಾಗಿಸಿತು ಕೂಡ. ಬರುದಿನಗಳ ಬೇಸರದ ಬಾಧೆಯಿಂದ ಕೂಡಿದ ಅಧಿಕೃತ ಮೈಗಾವಲಿನವರು ಪರಿಸ್ಥಿತಿ ಮತ್ತಷ್ಟು ಹದಗೆಡದಿರುವಂತೆ ತಡೆದರು. ಯುದ್ಧರಂಗದ ಮಳೆ ಮೇಲಂಗಿಯನ್ನು ತೊಟ್ಟ ಮಾಂಟಿಲ ಸುರಕ್ಷತೆಯ ಕ್ರಮಗಳನ್ನು ನಿರ್ದೇಶಿಸಿದರು. ಕಿಟಕಿಯ ಮುಂದೆ ಒಂದು ತೂಗುಕುರ್ಚಿಯ ಮೇಲೆ ಕುಳಿತ ಜನರಲ್ ಮಲಗುವಾಗ ಹೊದೆಯುವ ಕಂಬಳಿಯನ್ನು ಮೈಮೇಲೆ ಸುತ್ತಿಕೊಂಡಿದ್ದರು; ಆಲೋಚನೆಯಲ್ಲಿ ಮುಳುಗಿದ್ದ ಅವರ ಉಸಿರಾಟ ಪ್ರಶಾಂತವಾಗಿತ್ತು, ಮಳೆಯ ಹೊಡೆತದಿಂದ ವಿನಾಶಗೊಂಡ ಅವಶೇಷಗಳನ್ನು ಹೊತ್ತು ತರುತ್ತಿದ್ದ ಕೆಸರಿನ ಪ್ರವಾಹದ ಮೇಲೆಯೇ ಅವರ ದೃಷ್ಟಿ ನೆಟ್ಟಿತ್ತು. ಹುಡುಗನಾದಾಗಿನಿಂದ ಆ ಕ್ಯಾರಿಬಿಯನ್ ವಿಕೋಪಗಳು ಅವರಿಗೆ ಪರಿಚಿತವೇ. ಆದರೂ, ಮನೆಯ ಪರಿಸ್ಥಿತಿಯನ್ನು ತಹಬಂದಿಗೆ ತರಲು

ಸೈನಿಕರು ತರಾತುರಿಯಿಂದ ಓಡಾಡುತ್ತಿರುವಾಗ ಅಂಥದ್ದನ್ನು ತಾವೆಂದೂ ಹಿಂದೆ ಕಂಡಿರಲಿಲ್ಲವೆಂದು ಜೋಸೆ ಪೆಲಾಸಿಯೋಸ್‌ಗೆ ಹೇಳುತ್ತಿದ್ದರು. ಕೊನೆಗೆ ಎಲ್ಲ ಪೂರ್ವಸ್ಥಿತಿಗೆ ಮರಳಿದಾಗ, ಮಾಂಟಿಲ ಕೋಣೆಯೊಳಗೆ ಬಂದರು. ಅವರ ಮೈಮೇಲಿಂದ ನೀರು ಜಿನುಗುತ್ತಿತ್ತು, ಮಂಡಿಯವರೆಗೆ ಎಲ್ಲವೂ ಕೆಸರುಮಯವಾಗಿತ್ತು. ಜನರಲ್‌ರ ನೋಟ ನೆಟ್ಟಲ್ಲಿಯೇ ನೆಟ್ಟಿತ್ತು.

"ಸರಿ, ಮಾಂಟಿಲ, ಮಾಸ್ಕ್ವೇರ ಈಗ ಅಧ್ಯಕ್ಷ, ಆದರೆ ಕಾರ್ಟಜೆನ ಇನ್ನೂ ಅವನಿಗೆ ಮನ್ನಣೆ ನೀಡಿಲ್ಲ" ಎಂದರು.

ಬಿರುಗಾಳಿಗಳು ತಮ್ಮ ಗಮನವನ್ನು ಸೆಳೆಯುವುದಕ್ಕೆ ಮಾಂಟಿಲ ಅವಕಾಶ ಕೊಡುವಂತಹವರಲ್ಲ.

"ಆವು ಕಾರ್ಟಜೆನದಲ್ಲಿಯೇ ಇದ್ದಿದ್ದರೆ ಇನ್ನೂ ಸುಲಭವಾಗುತ್ತಿತ್ತು."

"ಅಲ್ಲೇ ಅಪಾಯವಿರೋದು. ಆಗ ನಾನು ಎಲ್ಲದಕ್ಕೂ ತಲೆಹಾಕ್ತೀನಿ ಅನ್ನೋ ಆರೋಪ ಬರಿತ್ತಿತ್ತು. ನಾನು ಯಾವುದರ ಮುಂದಾಳಾಗಲೂ ಬಯಸೋದಿಲ್ಲ. ಅಲ್ಲದೆ, ಈ ವಿಷಯ ತೀರ್ಮಾನವಾಗೋವರೆಗೂ ನಾನಿಲ್ಲಿಂದ ಕದಲೋದಿಲ್ಲ" ಎಂದರು ಜನರಲ್, ತಮ್ಮ ಆಲೋಚನೆಯನ್ನು ಹೊರಹಾಕುತ್ತ.

ಆ ರಾತ್ರಿ ಜನರಲ್ ಮಾಸ್ಕ್ವೆರಾಗೆ ಒಂದು ಬೆಂಬಲದ ಪತ್ರವನ್ನು ಬರೆದರು: "ನೀವು ಅಧ್ಯಕ್ಷಪದವಿಯನ್ನು ಒಪ್ಪಿಕೊಂಡಿರುವುದಾಗಿ ಈಗ ತಾನೇ ತಿಳಿಯಿತು, ಅದರಿಂದ ನನಗೆ ಆಶ್ಚರ್ಯವೇನೂ ಆಗಲಿಲ್ಲ. ಇದರಿಂದ ವೈಯಕ್ತಿಕವಾಗಿ ಹಾಗೂ ದೇಶದ ದೃಷ್ಟಿಯಿಂದ ನನಗೂ ತುಂಬ ಸಂತೋಷವಾಗಿದೆ. ಆದರೆ ನಿಮಗೋಸ್ಕರ ನಾನು ಈಗ ಮಾತ್ರವಲ್ಲ, ಎಲ್ಲ ಕಾಲಕ್ಕೂ, ವಿಷಾದಗೊಳ್ಳುತ್ತೇನೆ" ಎಂದು ಅದರಲ್ಲಿ ಬರೆದಿದ್ದರು. ಪತ್ರದ ಕೊನೆಗೆ ಒಂದು 'ಬಿಟ್ಟದ್ದು' ಬರೆದರು: "ನಾನಿನ್ನೂ ದೇಶವನ್ನು ಬಿಟ್ಟು ಹೋಗದಿರಲು ಕಾರಣ ನನ್ನ ಪಾಸ್‌ಪೋರ್ಟ್ ಬಾರದಿರುವುದು, ಅದು ಬಂದ ತಕ್ಷಣ ಹೊರಟುಬಿಡುತ್ತೇನೆ."

ಭಾನುವಾರ ಜನರಲ್ ಡೇನಿಯಲ್ ಫ್ಲಾರೆನ್ಸಿಯೋ ಓ'ಲಿಯರಿ ಟರ್ಬಾಕೋಗೆ ಬಂದು ಇವರ ಪರಿವಾರವನ್ನು ಸೇರಿಕೊಂಡ. ಅವನು ಬ್ರಿಟಿಷ್ ತುಕಡಿಯ ಒಬ್ಬ ಪ್ರಮುಖ ಸದಸ್ಯ, ಈಚೆಗೆ ಕೆಲಕಾಲದಿಂದ ಜನರಲ್‌ರ ಆಪ್ತಸಹಾಯಕ ಹಾಗೂ ದುಭಾಷಿ ಕಾರ್ಯದರ್ಶಿಯಾಗಿದ್ದ. ಎಂದಿಗಿಂತ ಪ್ರಸನ್ನಮನಸ್ಕನಾಗಿದ್ದ ಮಾಂಟಿಲ ಕಾರ್ಟಜೆನದಿಂದ ಅವನೊಂದಿಗಿದ್ದರು. ಅವರಿಬ್ಬರೂ ಆ ಮಧ್ಯಾಹ್ನ ಕಿತ್ತಿಳೆ ಮರಗಳಡಿಯಲ್ಲಿ ಹಳೆಯ ಗೆಳೆಯರಾಗಿ ಜನರಲ್‌ರೊಡನೆ ಹಾಯಾಗಿ ಮಾತನಾಡಿದರು. ಓ'ಲಿಯರಿಯೊಡನೆ ಅವನ ಸೈನಿಕ ವೃತ್ತಿಜೀವನದ ಬಗ್ಗೆ ದೀರ್ಘ ಸಂಭಾಷಣೆ

ನಡೆಸಿದ ನಂತರ, ಜನರಲ್ ತಮ್ಮ ಹಳೆಯ ಪ್ರಶ್ನೆಯನ್ನು ಕೇಳಿದರು: "ಜನ ಏನಂತಾರೆ?"

"ತಾವು ದೇಶ ಬಿಟ್ಟು ಹೋಗೋದು ಸತ್ಯವಲ್ಲ ಅಂತ" ಎಂದ ಓ'ಲಿಯರಿ.

"ಆಹಾ! ಈ ಸಲ ಯಾಕೆ ಅಲ್ಲ ಅಂತ?"

"ಮಾನ್ಯುಯೆಲ ಹಿಂದೆ ಉಳಿಯುತ್ತಿರೋದರಿಂದ."

"ಆದರೆ ಅವಳು ಯಾವತ್ತೂ ಹಿಂದೆಯೇ ಉಳಿಯುತ್ತಿದ್ದಳಲ್ಲ" ಎಂದರು ಜನರಲ್ ಸರಳ ಪ್ರಾಮಾಣಿಕತೆಯಿಂದ.

ಮ್ಯಾನ್ಯುಯೆಲ ಸಯೆನ್‌ಜ್‌ಳ ಆಪ್ತ ಗೆಳೆಯನಾದ ಓ'ಲಿಯರಿಗೆ ಜನರಲ್ ಹೇಳುತ್ತಿರುವುದು ಸತ್ಯ ಎಂಬುದು ತಿಳಿದಿತ್ತು. ಅವಳು ಯಾವಾಗಲೂ ಹಿಂದೆ ಉಳಿದಿರುತ್ತಿದ್ದಳು ಎಂಬುದು ನಿಜವಾಗಿತ್ತು, ಅದಕ್ಕೆ ಕಾರಣ ಅವಳ ಇಷ್ಟ ಎಂದಲ್ಲ, ತಮ್ಮ ಪ್ರೇಮ ಸಾಂಪ್ರದಾಯಿಕ ಕಟ್ಟುಪಾಡಿಗೆ ಒಳಗಾಗದಿರುವುದನ್ನು ತಪ್ಪಿಸುವ ಹುಚ್ಚು ಪ್ರಯತ್ನದ ಫಲವಾಗಿ ಜನರಲ್ ಯಾವುದಾದರೂ ನೆಪದಿಂದ ಅವಳನ್ನು ಬಿಟ್ಟಿರುತ್ತಿದ್ದರು. "ನಾನು ಮತ್ತೆಂದೂ ಪ್ರೇಮದಲ್ಲಿ ಸಿಲುಕಿಕೊಳ್ಳಲಾರೆ" ಎಂದು ಅವರೊಮ್ಮೆ ತಮ್ಮ ಅಂಥ ಖಾಸಗಿ ವಿಷಯವನ್ನು ಹಂಚಿಕೊಳ್ಳಬಹುದಾದ ಒಬ್ಬನೇ ವ್ಯಕ್ತಿ ಜೋಸೆ ಪೆಲಾಸಿಯೋಸ್‌ನೊಡನೆ ಹೇಳಿಕೊಂಡಿದ್ದರು.

"ಅದು ಒಂದೇ ಬಾರಿಗೆ ಎರಡು ಆತ್ಮಗಳನ್ನು ಹೊಂದಿದಂತೆ" ಎಂಬುದು ಅವರು ಕೊಟ್ಟ ಕಾರಣ. ಮ್ಯಾನ್ಯುಯೆಲ ದಮನ ಮಾಡಲಾಗದ ಒಂದು ನಿರ್ಧಾರದಿಂದ ಹಾಗೂ ಘನತೆಯ ಹೆಸರಿನ ಯಾವುದೇ ಬಿಗುಮಾನವಿಲ್ಲದೆ ತನ್ನನ್ನು ಸಮರ್ಥಿಸಿಕೊಂಡಿದ್ದಳು, ಆದರೆ ಅವಳು ಅವರನ್ನು ಗೆಲ್ಲಲು ಪ್ರಯತ್ನಪಟ್ಟಷ್ಟೂ ಜನರಲ್ ಅವಳ ಬಂಧನದಿಂದ ಬಿಡುಗಡೆ ಹೊಂದಲು ಬಯಸುತ್ತಿದ್ದರು. ಅವರದು ನಿರಂತರದ ಹಾರಿಕೆಯ ಪ್ರೇಮ. ಕ್ವಿಟೋದಲ್ಲಿ ಎರಡು ವಾರಗಳ ಗಾಢ ಪ್ರೇಮಾನುಭವದ ನಂತರ, ಅವರು ರಯೋ ದ ಪ್ಲಾಟಾದ ವಿಮೋಚಕ ಜನರಲ್ ಜೋಸೆ ದ ಸ್ಯಾನ್ ಮಾರ್ಟಿನ್ ಜೊತೆ ಗುಯಾಕಿಲ್‌ಗೆ ಪಯಣ ಹೊರಡಬೇಕಾಗಿತ್ತು. ಅವಳು ಹಿಂದೆಯೇ ಉಳಿದಳು, ರಸದೂಟದ ನಡುವೆಯೇ ಎಲೆ ಬಿಟ್ಟು ಎದ್ದವರು ಅದೆಂಥ ಪ್ರೇಮಿ ಎಂಬ ಪ್ರಶ್ನೆಯನ್ನು ಕೇಳಿಕೊಂಡಳು. ಎಲ್ಲೇ ಹೋಗಲಿ, ಪ್ರತಿದಿನ ಕಾಗದ ಬರೆಯುವುದಾಗಿ ಅವರು ಮಾತುಕೊಟ್ಟಿದ್ದರು, ಯಾರನ್ನು ಎಂದಾದರೂ ಪ್ರೀತಿಸಿದ್ದಕ್ಕಿಂತ ಹೆಚ್ಚು ಅವಳನ್ನು ಪ್ರೀತಿಸುವುದಾಗಿ ಪ್ರಮಾಣ ಮಾಡಿದ್ದರು. ವಾಸ್ತವವಾಗಿಯೂ ಅವರು ಅವಳಿಗೆ ಕಾಗದಗಳನ್ನು ಬರೆದರು, ಕೆಲವು ವೇಳೆ ಸ್ವಂತ ಕೈಬರಹದಲ್ಲಿ, ಆದರೆ ಅವುಗಳನ್ನು ಕಳಿಸಲಿಲ್ಲ. ಮಧ್ಯೆ ಅವರು ಗರಾಕೊಯಾದ ಮಾತೃಪ್ರಧಾನ ವ್ಯವಸ್ಥೆಯ ಐದು ಮಂದಿ

ಗುರುತಿಲ್ಲದ ಹೆಂಗಸರ ಜತೆ ಸಮಾಧಾನ ಕಂಡುಕೊಂಡರು; ಐವತ್ತಾರರ ಅಜ್ಜಿ, ಮೂವತ್ತೆಂಟರ ಮಗಳು ಹಾಗೂ ಆಗ ತಾನೇ ಅರಳುತ್ತಿದ್ದ ಮೂವರು ಮೊಮ್ಮಗಳಂದಿರನ್ನು ಆಯ್ಕೆ ಮಾಡಿದ್ದ ಬಗ್ಗೆಯೂ ಅವರಿಗೆ ಖಚಿತ ಅರಿವಿರಲಿಲ್ಲ. ಗುಯಾಕಿಲ್‌ನಲ್ಲಿ ಕೆಲಸ ಮುಗಿದ ಬಳಿಕ ತಮ್ಮ ಚಿರಂತನ ಪ್ರೇಮದ ಬಗ್ಗೆ ಹೇಳಿ ಅವರೆಲ್ಲರಿಂದ ತಪ್ಪಿಸಿಕೊಂಡು ಬಂದಿದ್ದರು, ಮತ್ತೆ ಕ್ವಿಟೋಗೆ ಮರಳಿ ಮ್ಯಾನ್ಯುಯೆಲ ಸಯೆನ್‌ಜ್‌ಳ ಉಸುಕಿನಲ್ಲಿ ಹೂತು ಹೋಗಿದ್ದರು.

ಮಾರನೆಯ ವರ್ಷದ ಆರಂಭದಲ್ಲಿ, ತಮ್ಮ ಕನಸಿನ ಸಾಕಾರದ ಕೊನೆಯ ಪ್ರಯತ್ನವಾಗಿದ್ದ ಪೆರುವಿನ ವಿಮೋಚನಾ ಕಾರ್ಯವನ್ನು ಮುಗಿಸಲು, ಮತ್ತೆ ಅವಳನ್ನು ಬಿಟ್ಟು ಹೋಗಿದ್ದರು. ಮ್ಯಾನ್ಯುಯೆಲ ಅವರಿಗಾಗಿ ನಾಲ್ಕು ತಿಂಗಳು ಕಾದಳು; ಆದರೆ ಜನರಲ್‌ರ ಆಪ್ತ ಕಾರ್ಯದರ್ಶಿಯಾದ ಜುವಾನ್ ಜೋಸೆ ಸಂಟಾನ, ಯಜಮಾನರ ಪರವಾಗಿ ಬರೆಯುವುದು ಅಪರೂಪವಲ್ಲದಿದ್ದರೂ, ಅವುಗಳಲ್ಲಿ ಸ್ವಂತ ಆಲೋಚನೆ ಮತ್ತು ಭಾವನೆಗಳನ್ನು ತುಂಬುತ್ತಿದ್ದುದರಿಂದ, ಅವಳು ಲಿಮದಿಂದ ಹೊರಟುಬಿಟ್ಟಳು. ನೋಡಿದರೆ, ಜನರಲ್ ಲ ಮ್ಯಾಗ್ಡಲೀನದ ಆನಂದದ ಅರಮನೆಯಲ್ಲಿದ್ದರು, ಕಾಂಗ್ರೆಸ್ ಅವರಿಗೆ ಸರ್ವಾಧಿಕಾರಿಯ ಅಧಿಕಾರವನ್ನು ನೀಡಿತ್ತು, ಅಲ್ಲದೆ ಅವರು ಹೊಸ ಗಣರಾಜ್ಯದ ಆಸ್ಥಾನದ ದಿಟ್ಟ ಬೆಡಗಿಯರ ವಶವಾಗಿದ್ದರು. ಅಧ್ಯಕ್ಷರ ಅರಮನೆ ಎಷ್ಟು ಅವ್ಯವಸ್ಥೆಯಿಂದ ಕೂಡಿತ್ತೆಂದರೆ, ಮಲಗುವ ಕೋಣೆಗಳಲ್ಲಿನ ಗದ್ದಲದಿಂದ ನಿದ್ದೆ ಬಾರದೆಂದು ರಾವುತದಳದ ಒಬ್ಬ ಕರ್ನಲ್ ಒಂದು ಮಧ್ಯರಾತ್ರಿ ಹೊರಗೆ ಹೋಗಿಬಿಟ್ಟಿದ್ದ. ಮ್ಯಾನ್ಯುಯೆಲ ಅಲ್ಲಿಗೇ ಬಂದದ್ದರಿಂದ ಎಲ್ಲ ವಿದ್ಯಮಾನಗಳೂ ಅವಳ ಅರಿವಿಗೆ ಬಂದವು. ಅವಳು ಹುಟ್ಟಿದ್ದು ಕ್ವಿಟೋದಲ್ಲಿಯೇ, ಶ್ರೀಮಂತ ಅಮೆರಿಕನ್ ಭೂಒಡತಿ ಹಾಗೂ ಒಬ್ಬ ವಿವಾಹಿತ ಇವರ ಅನೈತಿಕ ಮಗುವಾಗಿ; ಹದಿನೆಂಟನೆಯ ವಯಸ್ಸಿನಲ್ಲಿ ತಾನು ಓದುತ್ತಿದ್ದ ಕಾನ್‌ವೆಂಟ್‌ನ ಕಿಟಕಿಯ ಮೂಲಕ ಹೊರಕ್ಕೆ ಹಾರಿ ರಾಜನ ಸೈನ್ಯದಲ್ಲಿನ ಒಬ್ಬ ಅಧಿಕಾರಿಯೊಡನೆ ಅವಳು ಓಡಿಹೋಗಿದ್ದಳು. ಆದರೆ ಎರಡು ವರ್ಷಗಳ ತರುವಾಯ, ತನಗಿಂತ ಎರಡರಷ್ಟು ವಯಸ್ಸಿನ ವಿನಯಶೀಲ ವೈದ್ಯ ಡಾ. ಜೇಮ್ಸ್ ಥಾರ್ನ್ ಜೊತೆ ಕನ್ಯೆಯ ಕಿತ್ತಿಳೆ ಹೂಗಳೊಂದಿಗೆ ಅವಳ ಮದುವೆ ಲಿಮದಲ್ಲಿ ನಡೆದಿತ್ತು. ಹೀಗಾಗಿ, ಅವಳು ತನ್ನ ಜೀವಿತಪ್ರೇಮಿಯನ್ನು ಹುಡುಕಿಕೊಂಡು ಪೆರುವಿಗೆ ಮರಳುವ ಹೊತ್ತಿಗೆ, ಅಪವಾದಗಳ ನಡುವೆ ಹೇಗೆ ಬಾಳಬೇಕೆಂಬ ಬಗ್ಗೆ ಅವಳಿಗೆ ಯಾರೂ ಪಾಠ ಹೇಳಿಕೊಡಬೇಕಾದ್ದಿರಲಿಲ್ಲ.

ಈ ಹೃದಯಕದನಗಳಲ್ಲಿ ಓ'ಲಿಯರಿ ಅವಳ ಅತ್ಯುತ್ತಮ ಆಪ್ತ ಸಹಾಯಕನಾಗಿದ್ದ. ಮೊದಮೊದಲು ಮ್ಯಾನ್ಯುಯೆಲ ಲ ಮ್ಯಾಗ್ಡಲೀನದಲ್ಲಿ ವಾಸಿಸುತ್ತಿರಲಿಲ್ಲ, ಇಷ್ಟ ಬಂದಾಗ ಮುಖ್ಯ ಪ್ರವೇಶದ ಮೂಲಕವಾಗಿ ಎಲ್ಲ ಸೈನಿಕ ಗೌರವಗಳೊಡನೆ ಬಂದು ಹೋಗುತ್ತಿದ್ದಳು. ಚಾಣಾಕ್ಷಳೂ, ಅದಮ್ಯಚೇತನಳೂ ಆದ ಅವಳಲ್ಲಿ ಸಮ್ಮೋಹಕ ಚೆಲುವಿತ್ತು, ಅಧಿಕಾರದ ಪರಿಜ್ಞಾನವಿತ್ತು ಮತ್ತು ಅಪ್ರತಿಮ ದೃಢತೆಯಿತ್ತು. ಗಂಡನಿಂದಾಗಿ ಅವಳು ಒಳ್ಳೆ ಇಂಗ್ಲಿಷ್ ಮಾತಾಡುತ್ತಿದ್ದಳು, ಅಲ್ಲದೆ ಸರಳವಾದರೂ ಅರ್ಥವಾಗುವಂತೆ ಫ್ರೆಂಚ್ ಮಾತಾಡಬಲ್ಲವಳಾಗಿದ್ದಳು, ಜೊತೆಗೆ ಆರಂಭಿಕರ ಭಕ್ತಿಭಾವದಿಂದ ಕ್ಲಾವಿಕಾರ್ಡ್ ಅನ್ನು ನುಡಿಸುತ್ತಿದ್ದಳು. ಅವಳ ಕೈಬರಹವನ್ನೋದಲು ಕಷ್ಟಕರವಾಗಿತ್ತು, ವಾಕ್ಯರಚನೆ ಅರ್ಥವಾಗದ್ದು, ಕಾಗುಣಿತದ ತಪ್ಪುಗಳನ್ನು ಕಂಡರೆ ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದಳು. ಬಳಿಯೇ ಉಳಿಸಿಕೊಳ್ಳಲು ಜನರಲ್ ಅವಳನ್ನು ತಮ್ಮ ಪ್ರಾಚ್ಯವಸ್ತು ಸಂರಕ್ಷಕಳೆಂದು ಕರೆಯುತ್ತಿದ್ದರು, ಇದರಿಂದ ಮ್ಯಾನ್ಯುಯೆಲ ತನ್ನ ಆಕರ್ಷಣೆಯಿಂದ ಪಳಗಿಸಿದ್ದ ಅಮೆಝೋನಿಯನ್ ಕಾಡುಪ್ರಾಣಿಗಳ ಗದ್ದಲದ ನಡುವೆ ಯಾವಾಗ ಬೇಕಾದರೂ ಎಲ್ಲಾದರೂ ಪ್ರಣಯನಿರತರಾಗಲು ಸುಲಭವಾಗುತ್ತಿತ್ತು.

ಆದರೆ, ಇನ್ನೂ ಸ್ಪಾನಿಶ್ ವಶಲ್ಲಿದ್ದ ಪೆರುವಿನ ದುರ್ದಮ್ಯ ಪ್ರದೇಶಗಳನ್ನು ಜನರಲ್ ವಶಪಡಿಸಿಕೊಳ್ಳಲು ಆರಂಭಿಸಿದಂತೆ, ಅವರ ನೌಕರವರ್ಗದೊಡನೆ ತನ್ನನ್ನೂ ಕರೆದೊಯ್ಯುವಂತೆ ಒಲಿಸಿಕೊಳ್ಳುವುದು ಮ್ಯಾನ್ಯುಯೆಲಳಿಗೆ ಅಸಾಧ್ಯವಾಯಿತು. ಅನುಮತಿಯಿಲ್ಲದೆಯೇ ಅವರನ್ನು ಹಿಂಬಾಲಿಸಿದಳು, ಪ್ರಥಮ ಮಹಿಳೆಗೆ ತಕ್ಕಂತಹ ಪೆಟ್ಟಿಗೆಗಳು, ಪ್ರಾಚ್ಯವಸ್ತುಗಳು ತುಂಬಿದ ಪೆಟಾರಿಗಳು ಹಾಗೂ ಅವರ ತೊತ್ತುಗಳ ಬಳಗದೊಡನೆ ಕೊಲಂಬಿಯನ್ ತುಕಡಿಯ ಹಿಂಬದಿಯಲ್ಲಿ ಹೋಗಿದ್ದಳು. ಸೈನಿಕರು ಅವಳ ಬಗ್ಗೆ ಗೌರವದ ನುಡಿಗಳನ್ನಾಡುತ್ತಿದ್ದರು. ಆಂಡೀಸ್‌ನ ತಲೆ ಗಿರಗುಟ್ಟಿಸುವ ಕಂದಕಗಳ ಗುಂಟ ಅವಳು ಮುನ್ನೂರು ಲೀಗ್ ದೂರವನ್ನು ಹೇಸರಗತ್ತೆಯ ಮೇಲೆ ಪ್ರಯಾಣಿಸಿದಳು, ನಾಲ್ಕು ತಿಂಗಳಲ್ಲಿ ಅವಳು ಜನರಲ್‌ರೊಡನೆ ಎರಡು ರಾತ್ರಿಗಳನ್ನು ಮಾತ್ರ ಕಳೆಯುವುದು ಸಾಧ್ಯವಾಗಿತ್ತು. ಅವುಗಳಲ್ಲಿ ಒಂದು ರಾತ್ರಿ ಆತ್ಮಹತ್ಯೆ ಬೆದರಿಕೆ ಹಾಕಿ ಅವರೊಡನಿದ್ದಳು. ಅವಳು ತಮ್ಮೊಡನೆ ಇರಲು ಸಾಧ್ಯವಾಗದಾಗ ಅವರು ದಾರಿಯಲ್ಲಿ ಕಂಡ ಹೆಣ್ಣುಗಳೊಡನೆ ತಾತ್ಕಾಲಿಕ ಸಂಬಂಧ ಹೊಂದುತ್ತಾರೆಂಬ ವಿಷಯ ತಿಳಿಯಲು ಅವಳಿಗೆ ಸ್ವಲ್ಪ ಕಾಲ ಬೇಕಾಯಿತು. ಅಂಥ ಹೆಣ್ಣುಗಳಲ್ಲಿ ಒಬ್ಬಳೆಂದರೆ ಮ್ಯಾನ್ಯುಯೆಲ ಮ್ಯಾಡ್ರೋನೋ ಎಂಬ ಇನ್ನೂ ಪಳಗದ ಹದಿನೆಂಟರ ಮುಲಾಟ (ಕೃಷ್ಣಶ್ವೇತೀಯ) ಬಾಲೆ, ಅವರ ನಿದ್ರಾಹೀನತೆಗೆ ಅರ್ಥವಂತಿಕೆಯನ್ನು ಕಲ್ಪಿಸಿದವಳು.

ಅವಳು ಕ್ವಿಟೋದಿಂದ ಮರಳಿದ ಮೇಲೆ, ಮಾನ್ಯುಯೆಲ ತನ್ನ ಗಂಡನನ್ನು ತೊರೆಯಲು ನಿರ್ಧರಿಸಿದ್ದಳು; ಅವಳ ಪ್ರಕಾರ ಅವನೊಬ್ಬ ಸಂತಸವಿಲ್ಲದೆ ಸಂಭೋಗಿಸುವ, ಜಾಣ್ಣುಡಿಯಿಲ್ಲದೆ ಸಂಭಾಷಿಸುವ, ಆತುರವಿಲ್ಲದೆ ನಡೆಯುವ, ಜನರನ್ನು ಬಾಗಿ ಬರಮಾಡಿಕೊಳ್ಳುವ, ಕುಳಿತುಕೊಳ್ಳುವಾಗ ನಿಲ್ಲುವಾಗ ಬಹು ಎಚ್ಚರಿಕೆ ತೋರುವ, ತಾನೇ ಮಾಡಿದ ತಮಾಷೆಗೂ ನಗದಿರುವ ರಸಹೀನ ಇಂಗ್ಲಿಷ್‌ಮನ್. ಆದರೆ ತನ್ನ ಕಾನೂನುಬದ್ಧ ಸ್ಥಾನಮಾನವನ್ನು ಯಾವುದೇ ಕಾರಣಕ್ಕೂ ಬಿಡದಿರುವಂತೆ ಜನರಲ್ ಅವಳ ಮನವೊಲಿಸಿದ್ದ, ಅವರ ಇಷ್ಟವನ್ನವಳು ನೆರವೇರಿಸಿದ್ದಳು.

ಅಯಾಚುಚೋ ಯುದ್ಧದಲ್ಲಿ ಗೆದ್ದು ಅರ್ಧಜಗತ್ತಿನ ಯಜಮಾನರಾದ ಒಂದು ತಿಂಗಳ ನಂತರ ಜನರಲ್ ಆಲ್ಟೋ ಪೆರುವಿಗೆ ಹೊರಟರು, ಅದೇ ಮುಂದೆ ಬೊಲಿವಿಯ ಗಣರಾಜ್ಯವಾದದ್ದು. ಮ್ಯಾನ್ಯುಯೆಲಳನ್ನು ಬಿಟ್ಟು ಹೋದದ್ದರ ಜೊತೆಗೆ, ಹೋಗುವ ಮುಂಚೆ ನಿರ್ಣಾಯಕ ಬೇರ್ಪಡೆಯ ಅನುಕೂಲಗಳನ್ನು ಅವಳಿಗೆ ವಿವರಿಸಿದ್ದರು. "ಮುಗ್ಧತೆ ಅಥವಾ ಗೌರವಗಳ ಅಡಿಯಲ್ಲಿ ನಮ್ಮನ್ನಾರೂ ಬೇರ್ಪಡಿಸಲಾರರು. ನೀನು ಮುಂದೆ ಗಂಡನೊಡನಿದ್ದೂ ಒಂಟಿಯಾಗಿರಬೇಕಾಗಿ ಬಂದರೆ, ನಾನು ಜಗತ್ತಿನ ನಡುವೆಯೇ ಒಂಟಿಯಾಗಿರುತ್ತೇನೆ. ನಮ್ಮನ್ನು ನಾವು ಗೆದ್ದ ಘನತೆಯೇ ನಮಗಿರುವ ಸಮಾಧಾನ" ಎಂದು ಅವಳಿಗೆ ಪತ್ರದಲ್ಲಿ ಬರೆದಿದ್ದರು. ಮೂರು ತಿಂಗಳು ಕಳೆಯುವ ಮುನ್ನವೇ ಅವರಿಗೆ ಮ್ಯಾನ್ಯುಯೆಲಳಿಂದ ಪತ್ರ ಬಂದಿತ್ತು: ತಾನು ಗಂಡನೊಡನೆ ಲಂಡನ್‌ಗೆ ಹೊರಟಿರುವುದಾಗಿ ತಿಳಿಸಿದ್ದಳು. ಈ ಸುದ್ದಿ ತಲುಪಿದಾಗ ಜನರಲ್ ಫ್ರಾನ್‌ಸಿಸ್ಕಾ ಝುಬೇಗಾ ದ ಗಮಾರಳ ಹಾಸಿಗೆಯಲ್ಲಿದ್ದರು; ಅವಳು ಕಾರ್ಯಶೀಲ ಉತ್ಸಾಹಿ ಹೆಂಗಸು, ಮುಂದೆ ಗಣರಾಜ್ಯದ ಅಧ್ಯಕ್ಷನಾಗಲಿದ್ದ ಫೀಲ್ಡ್ ಮಾರ್ಷಲ್ ಒಬ್ಬನನ್ನು ಮದುವೆಯಾಗಿದ್ದಳು. ಎರಡನೆಯ ಬಾರಿ ಸಂಭೋಗಕ್ಕೆ ತೊಡಗದೆ ಮ್ಯಾನ್ಯುಯೆಲಳಿಗೆ ಉತ್ತರ ಬರೆಯಲು ಕುಳಿತರು. ಅದರ ಒಕ್ಕಣೆ ಯುದ್ಧದಲ್ಲಿನ ಆಜ್ಞೆಯಂತಿತ್ತು: "ಸತ್ಯ ಹೇಳು, ಎಲ್ಲಿಗೂ ಹೋಗಬೇಡ." ತನ್ನ ಕೈಯಾರೆ ಕೊನೆಯ ವಾಕ್ಯದ ಕೆಳಗೆ ಗೆರೆ ಎಳೆದ: "*ನಿನ್ನ ಮೇಲಿನ ನನ್ನ ಪ್ರೇಮ ಅಚಲವಾದದ್ದು!*" ಅವಳು ಸಂತಸದಿಂದ ಅವರ ಆಜ್ಞೆ ಪಾಲಿಸಿದಳು.

ಜನರಲ್‌ರ ಕನಸು ನನಸಾಗದ ದಿನವೇ ಅದು ಭಗ್ನಗೊಳ್ಳಲೂ ಆರಂಭವಾಯಿತು. ಬೊಲಿವಿಯವನ್ನು ಸ್ಥಾಪಿಸಿ ಪೆರುವಿನ ಸಾಂಸ್ಥಿಕ ಪುನಸ್ಸಂಘಟನೆಯನ್ನು ಮಾಡಿದ ಕ್ಷಣವೇ ಅವರು ಜನರಲ್ ಪಯೆಝ್‌ನ ವೆನಿಝೂಲವನ್ನು ಪ್ರತ್ಯೇಕಿಸುವ ಪ್ರಯತ್ನವನ್ನು ನ್ಯೂ ಗ್ರನಡದಲ್ಲಿ ಸಟಾಂಡರ್ ಮಾಡುತ್ತಿದ್ದ ರಾಜಕೀಯ ಸಂಚುಗಳನ್ನೂ ವಿಫಲಗೊಳಿಸಲು ಸಂಟಾ ಫ ದ

ಬೊಗೋಟಕ್ಕೆ ತರಾತುರಿಯಿಂದ ಮರಳಬೇಕಾಯಿತು. ಈ ಸಂದರ್ಭದಲ್ಲಿ ಮಾನ್ಯುಯೆಲ ಅವರು ತಮ್ಮ ಹಿಂದೆ ಬರಲು ಅವಕಾಶ ನೀಡುವವರೆಗೆ ದೀರ್ಘ ಕಾಲ ಕಾಯಬೇಕಾಯಿತು, ಕೊನೆಗೆ ಅವರು ಒಪ್ಪಿದಾಗ ಅವಳು ಜಿಪ್ಸಿಗಳಂತೆ ಸಾಲುಗಾಡಿಗಳನ್ನು ಹೊರಡಿಸಿದಳು: ಒಂದು ಡಝನ್ ಹೇಸರಗತ್ತೆಗಳ ಮೇಲೆ ಪೆಟ್ಟಿಗೆಗಳು, ತನ್ನ ನಿತ್ಯತೊತ್ತುಗಳು, ಹನ್ನೆರಡು ಮೇನೆಗಳು, ಆರು ನಾಯಿಗಳು, ಅರಮನೆಯ ಅಶ್ಲೀಲಕೃತ್ಯಗಳನ್ನು ಅನುಕರಿಸಲು ತರಬೇತಿ ಪಡೆದ ಮೂರು ಕೋತಿಗಳು, ಸೂಜಿಯಲ್ಲಿ ದಾರ ಪೋಣಿಸಬಲ್ಲ ಒಂದು ಕರಡಿ, ಒಂಬತ್ತು ಪಂಜರಗಳಲ್ಲಿನ ಗಿಳಿಗಳು ಮತ್ತು ಸಟಾಂಡರ್‌ನನ್ನು ಮೂರು ಭಾಷೆಗಳಲ್ಲಿ ನಿಂದಿಸಬಲ್ಲ ಮಕಾಗಳು ಅದರಲ್ಲಿ ಸೇರಿದ್ದವು.

ಸೆಪ್ಟೆಂಬರ್ ಇಪ್ಪತ್ತೈದರ ಕೆಟ್ಟ ರಾತ್ರಿಯಂದು ಜನರಲ್‌ರ ಜೀವವನ್ನುಳಿಸಲೆಂಬಂತೆ ಸರಿಯಾದ ಸಮಯಕ್ಕೆ ಅವಳು ಸಂಟಾ ಫ಼ ದ ಬೊಗೋಟ ತಲುಪಿದಳು. ಅವರು ಈ ಹೊತ್ತಿಗೆ ಭೇಟಿಯಾಗಿ ಅರು ವರ್ಷಗಳೇ ಕಳೆದಿದ್ದವು, ಐವತ್ತು ವರ್ಷ ಅಂದರೆ ನಂಬಲಾಗದಷ್ಟು ಅವರಿಗೆ ವಯಸ್ಸಾದಂತಿತ್ತು, ಅವರು ಒಂಟಿತನದ ಕಾವಳದಲ್ಲಿ ಗುರಿಯಿಲ್ಲದೆ ತೊಳಲುತ್ತಿರುವಂತೆ ಮ್ಯಾನ್ಯುಯೆಲಳಿಗೆ ಅನ್ನಿಸಿತ್ತು. ಕ್ವಿಟೋ ಮತ್ತು ಗುಯಾಕಿಲ್‌ಗಳಲ್ಲಿ ನಡೆಯುತ್ತಿದ್ದ ಪೆರುವಿನ ವಸಾಹತು ಆಕಾಂಕ್ಷೆಯ ಕೃತ್ಯಗಳನ್ನು ದಮನ ಮಾಡಲು ಅವರು ಕೆಲವೇ ಕಾಲದ ನಂತರ ದಕ್ಷಿಣಕ್ಕೆ ಮರಳಬೇಕಾಗಿತ್ತು. ಆದರೆ ಅಷ್ಟು ಹೊತ್ತಿಗೆ ಅವರ ಪ್ರಯತ್ನಗಳೆಲ್ಲ ವ್ಯರ್ಥಗೊಂಡಿದ್ದವು. ಈ ಸಂದರ್ಭದಲ್ಲಿ ಮ್ಯಾನ್ಯುಯೆಲ ಸಂಟಾ ಫ಼ ದ ಬೊಗೋಟದಲ್ಲೇ ಉಳಿದಳು. ಅವರನ್ನು ಅನುಸರಿಸುವ ಬಯಕೆಯು ಅವಳಲ್ಲಿ ಕಿಂಚಿತ್ತೂ ಇರಲಿಲ್ಲ, ಏಕೆಂದರೆ ಅಡಗಿಕೊಳ್ಳಲು ಯಾವುದೇ ಆಶ್ರಯ ಈಗ ಅವಳ ಪಾಲಿಗೆ ಉಳಿದಿರಲಿಲ್ಲ.

ಆ ಮಧ್ಯಾಹ್ನ ಟರ್ಬಾಕೋದಲ್ಲಿ ಜನರಲ್ ತಾವು ಕದ್ದುಮುಚ್ಚಿ ಮಾಡುತ್ತಿದ್ದ ಪ್ರಣಯ ಪ್ರಸಂಗಗಳನ್ನು ನೆನಪಿಸಿಕೊಳ್ಳಲು ಬಯಸಿದ್ದಂತೆ ಇನ್ನು ಯಾವಾಗಲೂ ಬಯಸಿರಲಿಲ್ಲ ಎಂದು ಓ'ಲಿಯರಿ ತನ್ನ ನೆನಪುಗಳಲ್ಲಿ ದಾಖಲಿಸಿದ್ದಾನೆ. ಆ ಸಮಯದಲ್ಲಿ ಮಾಂಟಿಲಗೆ ಅನ್ನಿಸಿದ್ದೆಂದರೆ, ವೈಯಕ್ತಿಕ ಪತ್ರವೊಂದರಲ್ಲಿ ಮುಂದೆ ಬರೆದಿದ್ದ ಹಾಗೆ, ಇದು ಮುಪ್ಪಿನ ನಿಶ್ಚಿತ ಲಕ್ಷಣ. ಜನರಲ್‌ರ ಪ್ರಸನ್ನತೆ ಹಾಗೂ ಆತ್ಮವಿಶ್ವಾಸಗಳಿಂದ ಉತ್ತೇಜಿತರಾದ ಮಾಂಟಿಲಗೆ ಅವರನ್ನು ಲಘುವಾಗಿ ಚುಡಾಯಿಸುವ ಬಯಕೆಯನ್ನು ಹತ್ತಿಕ್ಕಿಕೊಳ್ಳಲಾಗಲಿಲ್ಲ:

"ಹಿಂದೆ ಉಳಿದವರು ಮ್ಯನ್ಯುಯೆಲ ಒಬ್ಬರೇ ಏನು?" ಎಂದು ಕೇಳಿದರು.

"ಎಲ್ಲರೂ ಹಿಂದೆ ಉಳಿದರು. ಆದರೆ ಎಲ್ಲರಿಗಿಂತ ಮಿಗಿಲಾಗಿ ಮ್ಯಾನ್ಯುಯೆಲ" ಎಂದು ಜನರಲ್ ಗಂಭೀರವಾಗಿ ಉತ್ತರಿಸಿದರು.

ಮಾಂಟಿಲ ಓ'ಲಿಯರಿಗೆ ಕಡೆ ಕಣ್ಣುಸನ್ನೆ ಮಾಡಿ, "ಹೇಳಿ, ಜನರಲ್, ಎಷ್ಟು ಜನ ಇದ್ದರು?" ಎಂದು ಪ್ರಶ್ನಿಸಿದರು.

ಜನರಲ್ ನುಣುಚಿಕೊಳ್ಳಲು ಯತ್ನಿಸುತ್ತ, "ನೀವಂದುಕೊಂಡದ್ದಕ್ಕಿಂತ ತುಂಬ ಕಡಿಮೆ ಮಂದಿ" ಎಂದರು.

ಆ ರಾತ್ರಿ, ಬಿಸಿಬಿಸಿಯಾಗಿ ಸ್ನಾನ ಮಾಡುತ್ತಿದ್ದಾಗ, ಜೋಸೆ ಪೆಲಾಸಿಯೋಸ್ ಜನರಲ್‌ರ ಪರವಾಗಿ ವಿವರಣೆ ನೀಡಲು ಪ್ರಯತ್ನಿಸಿದ: "ನನ್ನ ಲೆಕ್ಕಾಚಾರದ ಪ್ರಕಾರ ಮೂವತ್ತೈದು ಮಂದಿ ಇದ್ದರು" ಎಂದ. ಆಮೇಲೆ, "ಇದರಲ್ಲಿ ಏಕರಾತ್ರಿ ಹಕ್ಕಿಗಳು ಸೇರಿಲ್ಲ" ಎಂದು ಸ್ಪಷ್ಟನೆ ನೀಡಿದ. ಇದು ಜನರಲ್‌ರ ಲೆಕ್ಕಾಚಾರಕ್ಕೆ ಸರಿಹೊಂದುತ್ತಿತ್ತು, ಆದರೆ ಸಂದರ್ಶನದ ಕಾಲದಲ್ಲಿ ಆ ಬಗ್ಗೆ ಮಾತನಾಡುವ ಇಷ್ಟವಿರಲಿಲ್ಲ.

"ಓ'ಲಿಯರಿ ದೊಡ್ಡ ಮನುಷ್ಯ, ದೊಡ್ಡ ಯೋಧ, ನಂಬಿಕೆಗರ್ಹನಾದ ಗೆಳೆಯ, ಆದರೆ ಎಲ್ಲವನ್ನೂ ಟಿಪ್ಪಣಿ ಮಾಡಿಕೊಳ್ಳುತ್ತಾನೆ. ಬರವಣಿಗೆಯಲಿಟ್ಟ ನೆನಪುಗಳಿಗಿಂತ ಹೆಚ್ಚು ಅಪಾಯಕಾರಿಯಾದುದು ಮತ್ತೊಂದಿಲ್ಲ" ಎಂದು ವಿಶ್ಲೇಷಣೆ ಮಾಡಿದರು.

ಮಾರನೆಯ ದಿನ, ಗಡಿಯಲ್ಲಿನ ಪರಿಸ್ಥಿತಿಯ ಬಗ್ಗೆ ತಿಳಿಸಲು ನಡೆದ ದೀರ್ಘ ಖಾಸಗಿ ಸಂದರ್ಶನದ ನಂತರ, ಯೂರೋಪ್‌ಗೆ ಹೊರಟಿರುವ ಹಡಗುಗಳ ಇತ್ತೀಚಿನ ಚಲನದ ಬಗ್ಗೆ ಮಾಹಿತಿ ತರಲು ವಿಧ್ಯುಕ್ತ ಉದ್ದೇಶದಿಂದ ಕಾರ್ಟಜೆನಕ್ಕೆ ಹೋಗಲು ಓ'ಲಿಯರಿಗೆ ಹೇಳಿದರು, ಆದರೆ ನಿಜವಾದ ಉದ್ದೇಶ ಸ್ಥಳೀಯ ರಾಜಕೀಯ ವಿದ್ಯಮಾನಗಳ ಬಗ್ಗೆ ಅವನಿಗೆ ತಿಳಿವಳಿಕೆ ನೀಡುವುದೇ ಆಗಿತ್ತು. ಓ'ಲಿಯರಿ ಜೂನ್ ಹನ್ನೆರಡರಂದು ಶನಿವಾರ ಅಲ್ಲಿಗೆ ಹೋದಾಗ, ಆಗ ತಾನೇ ಕಾರ್ಟಜೆನ ಕಾಂಗ್ರೆಸ್ ಹೊಸ ಸಂವಿಧಾನಕ್ಕೂ ಆಯ್ಕೆ ಮಾಡಿದ್ದ ಅಧಿಕಾರಿಗಳಿಗೂ ನಿಷ್ಠೆಯನ್ನು ಘೋಷಿಸಿತ್ತು. ಮಾಂಟಿಲ ಜನರಲ್‌ರಿಗೆ ಈ ಸುದ್ದಿಯೊಂದಿಗೆ ಅನಿವಾರ್ಯ ಸಂದೇಶವೊಂದನ್ನೂ ರವಾನಿಸಿದರು: "ನಾವು ನಿಮಗಾಗಿಯೇ ಕಾಯುತ್ತಿದ್ದೇವೆ."

ಅವರಿಗಾಗಿ ಕಾಯುತ್ತಿರುವಾಗಲೇ, ಜನರಲ್ ತೀರಿಕೊಂಡಿರುವರೆಂಬ ಸುದ್ದಿಯನ್ನು ಕೇಳಿ ಮಲಗಿದ್ದವರು ಧಿಗ್ಗನೆ ಎದ್ದು ಕುಳಿತರು. ಸುದ್ದಿಯ ಸತ್ಯಾಸತ್ಯತೆಯನ್ನರಿಯಲು ಕುದುರೆಯೇರಿ ಟರ್ಬಾಕೋ ಕಡೆ ನಾಗಾಲೋಟದಿಂದ ಹೊರಟರು. ಹೋಗಿ ನೋಡಿದರೆ, ಜನರಲ್ ಹಿಂದೆಂದಿಗಿಂತ ಗೆಲವಾಗಿದ್ದರು, ಫ್ರೆಂಚ್ ವ್ಯಕ್ತಿ ಹಾಗೂ ಮಾರನೆಯ ವಾರ ಕಾರ್ಟಜೆನಕ್ಕೆ ಆಗಮಿಸಲಿದ್ದ ಇಂಗ್ಲಿಷ್ ಅಂಚೆದೋಣಿಯಲ್ಲಿ ಕೂಡಿ

ಯೂರೋಪ್‌ಗೆ ಪ್ರಯಾಣ ಬೆಳೆಸಲು ತಮ್ಮ ಆಹ್ವಾನದ ಮೇರೆಗೆ ಅಲ್ಲಿಗೆ ಬಂದಿದ್ದ ಕೌಂಟ್ ದ ರೇಜ್‌ಕೋರ್ಟ್‌ನ ಜೊತೆ ಊಟ ಮಾಡುತ್ತಿದ್ದರು. ಅಂದು ಜನರಲ್‌ರ ಅತ್ಯಂತ ಹಿತಕರ ದಿನ, ತಮ್ಮ ಅನಾರೋಗ್ಯವನ್ನು ನೈತಿಕ ಬಲದಿಂದ ಎದುರಿಸಲು ನಿರ್ಧರಿಸಿದ್ದರು, ಅದರಲ್ಲಿ ಅವರು ಯಶಸ್ವಿಯಾಗಿರಲಿಲ್ಲವೆಂದು ಯಾರೂ ಹೇಳುವ ಹಾಗಿರಲಿಲ್ಲ. ಆ ದಿನ ಬೇಗನೆ ಎದ್ದು, ಹಾಲು ಕರೆಯುವ ಹೊತ್ತಿಗೆ ತೋಟದಲ್ಲಿ ನಡೆದಾಡಿ ಶಸ್ತ್ರದಳದ ಸೈನಿಕರನ್ನು ಅವರ ಬಿಡಾರದಲ್ಲಿಯೇ ಸಂದರ್ಶಿಸಿ, ತಮ್ಮ ಜೀವನಸ್ಥಿತಿಯ ಬಗ್ಗೆ ಅವರ ಬಾಯಿಂದಲೇ ಕೇಳಿ ತಿಳಿದುಕೊಂಡು, ಅವರ ಪರಿಸ್ಥಿತಿಯನ್ನು ಸುಧಾರಿಸಲು ಸ್ಪಷ್ಟ ಆಜ್ಞೆಗಳನ್ನಿತ್ತಿದ್ದರು. ವಾಪಸು ಬರುವಾಗ ಮಾರುಕಟ್ಟೆಯಲ್ಲಿನ ಒಂದು ವಸತಿಗೃಹಕ್ಕೆ ಹೋಗಿ ಸ್ವಲ್ಪ ಕಾಫಿ ಕುಡಿದು, ಒಡೆದು ಹಾಕುವ ಹೀನಾಯವನ್ನು ತಪ್ಪಿಸಲು ಕಪ್ ಅನ್ನು ಕೈಲಿ ಹಿಡಿದುಕೊಂಡು ಬಂದಿದ್ದರು. ಮನೆಯ ಕಡೆ ಬರುತ್ತಿರುವಾಗ ಒಂದೆಡೆಯ ತಿರುವಿನಲ್ಲಿ ಶಾಲೆ ಬಿಟ್ಟ ಮಕ್ಕಳು ಅವರನ್ನು ಸುತ್ತುವರಿದು ಚಪ್ಪಾಳೆಯಿಕ್ಕಿ ಲಯಬದ್ಧವಾಗಿ ಹಾಡಿದರು: *“ವಿಮೋಚಕ ಬಹುಕಾಲ ಬದುಕಲಿ! ವಿಮೋಚಕ ಬಹುಕಾಲ ಬಾಳಲಿ!”* ಅವರಾಗಿಯೇ ದಾರಿ ಬಿಡದಿದ್ದರೆ ಅವರಿಂದ ತಪ್ಪಿಸಿಕೊಂಡು ಬರುವುದು ಹೇಗೆ ಎಂದು ಅವರಿಗೆ ಗಾಬರಿಯಾಗಿತ್ತು.

ಮನೆಗೆ ಬಂದಾಗ ಕೌಂಟ್ ದ ರೇಜ್‌ಕೋರ್ಟ್ ಪೂರ್ವಸೂಚನೆ ನೀಡದೆ ಆಗ ತಾನೇ ತಾವೆಂದೂ ಕಾಣದಿದ್ದ ಅತ್ಯಂತ ಚೆಲುವೆಯೂ ವಿಲಾಸಿಯೂ ಚತುರಳೂ ಆದ ಒಬ್ಬ ಹೆಣ್ಣಿನೊಡನೆ ಬಂದಿದ್ದ. ಅವಳು ಸವಾರಿಯ ಉಡುಪು ಧರಿಸಿದ್ದಳು, ಆದರೆ ವಾಸ್ತವವಾಗಿ ಬಂದಿದ್ದುದು ಕತ್ತೆ ಎಳೆದು ತಂದಿದ್ದ ಗಾಡಿಯಲ್ಲಿ. ಹೆಸರು ಕ್ಯಾಮಿ ಮತ್ತು ತಮ್ಮ ಊರು ಮಾರ್ಟಿನಿಕ್ ಎಂಬಷ್ಟು ಮಾಹಿತಿಯನ್ನು ಮಾತ್ರ ತನ್ನ ಬಗ್ಗೆ ತಿಳಿಸಿದ್ದಳು. ಕೌಂಟ್ ಕೂಡ ಹೆಚ್ಚೇನನ್ನೂ ಹೇಳಲಿಲ್ಲ, ಆದರೆ ದಿನ ಕಳೆದಂತೆ, ಅವರು ಅವಳಿಗಾಗಿ ಹುಚ್ಚಾಗಿದ್ದುದು ಮಾತ್ರ ಸ್ಪಷ್ಟವಾಯಿತು.

ಕ್ಯಾಮಿಲ್‌ಳ ಸಾನ್ನಿಧ್ಯವೇ ಮಿಕ್ಕ ದಿನಗಳಂದೂ ಜನರಲ್‌ರ ಉತ್ಸಾಹವನ್ನು ಇಮ್ಮಡಿಸಿತ್ತು, ಭಾರಿ ಭೋಜನ ಕೂಟವನ್ನೇರ್ಪಡಿಸಲು ಅವನು ಆಗಲೇ ಆಜ್ಞಾಪಿಸಿದ. ಕೌಂಟ್ ಸರಿಯಾದ ಸ್ಪಾನಿಶ್ ಮಾತಾಡುತ್ತಿದ್ದರೂ, ಸಂಭಾಷಣೆಯು ಮಾತ್ರ ಕ್ಯಾಮಿಲ್‌ಳ ಭಾಷೆಯಾದ ಫ್ರೆಂಚ್‌ನಲ್ಲಿ ಸಾಗಿತು. ತಾನು ಟ್ರೌಸ್‌ಇಲೆಟ್‌ನಲ್ಲಿ ಹುಟ್ಟಿದುದಾಗಿ ಅವಳು ಹೇಳಿಕೊಂಡಾಗ ಅವರ ಮಂಕಾದ ಕಣ್ಣುಗಳಲ್ಲಿ ಮಿಂಚು ಕಾಣಿಸಿತು.

“ಆ! ಜೋಸೆಫೀನ್ ಹುಟ್ಟಿದ ಜಾಗ” ಎಂದು ಉದ್ಗರಿಸಿದರು.

ಅವಳು ಮುಗುಳ್ನಕ್ಕಳು.

“ದಯವಿಟ್ಟು, ಮಹಾಸ್ವಾಮಿ, ನಿಮ್ಮಿಂದ ನಾನು ನಿರೀಕ್ಷಿಸಿದ್ದು ಬೇರೆಯವರು ಆಡುವುದಕ್ಕಿಂತ ಹೆಚ್ಚು ಜಾಣತನದ ಮಾತನ್ನ” ಎಂದಳು.

ಅವಳ ಮಾತಿನಿಂದ ತಮಗೆ ನೋವಾಗಿದೆಯೆಂಬುದನ್ನು ತೋರಿಸಿಕೊಂಡರು; ತಮ್ಮ ಮಾತಿನ ಸಮರ್ಥನೆಯಾಗಿ ಫ್ರಾನ್ಸ್‌ನ ಸಮ್ರಾಜ್ಞಿ ಮೇರಿ ಜೋಸೆಫ಼ಿಯ ಹುಟ್ಟೂರಾದ ಲ ಪೇಜೆರೀ ಪ್ಲಾಂಟೇಷನ್ ಬಗ್ಗೆ ಭಾವಗೀತಾತ್ಮಕ ವರ್ಣನೆಯನ್ನು ಮಾಡಿದರು. ಹಲವಾರು ಲೀಗ್‌ಗಳ ದೂರದಿಂದಲೇ ಆ ಊರು ವಿಸ್ತಾರವಾದ ಬಿದಿರುಮೆಳೆಯಾಚೆ ಹಕ್ಕಿಗಳ ಕೂಜನದ ನಡುವೆ ಮದ್ಯದ ಬಟ್ಟಿಗಳಂದ ಹೊಮ್ಮುತ್ತಿದ್ದ ವಾಸನೆಯಿಂದ ಕೂಡಿ ಕಾಣುತ್ತಿತ್ತು. ಜನರಲ್‌ಗೆ ವಿಷಯ ಅಷ್ಟು ಚೆನ್ನಾಗಿ ತಿಳಿದಿದ್ದುದು ಅವಳಲ್ಲಿ ಅಚ್ಚರಿಯುಂಟುಮಾಡಿತು.

“ವಾಸ್ತವವೆಂದರೆ ನಾನು ಅಲ್ಲಿಗಾಗಲೀ ಅಥವಾ ಮಾರ್ಟಿನಿಕ್‌ನ ಹೊರತು ಬೇರೆಡೆಗಾಗಲೀ ಎಂದೂ ಹೋದವನಲ್ಲ” ಎಂದರು.

“ಮತ್ತೆ ಅದರ ವಿಷಯ ಹೇಗೆ ಗೊತ್ತಾಯಿತು?” ಎಂದವಳು ಪ್ರಶ್ನಿಸಿದಳು.

“ಅದನ್ನು ತಿಳಿಯಲು ನಾನು ಅನೇಕ ವರ್ಷಗಳನ್ನೇ ಕಳೆದೆ. ನನಗೆ ಎಂದಾದರೊಂದು ದಿನ ಆ ದ್ವೀಪದಿಂದ ಬಂದ ಅತ್ಯಂತ ಚೆಲುವೆಯ ಮುಂದೆ ಹೇಳಲು ಅದು ಉಪಯೋಗಕ್ಕೆ ಬರುವುದೆಂಬುದು ಗೊತ್ತಿತ್ತು” ಎಂದ.

ಹೆಣಿಗೆ ಮಾಡಿದ ಹತ್ತಿಯ ಟ್ರೌಸರ್‌ಗಳು, ಸ್ಯಾಟಿನ್ ಮೇಲಂಗಿ ಹಾಗೂ ಕೆಂಪು ಪಾದರಕ್ಷೆಗಳನ್ನು ಅವರು ಧರಿಸಿದ್ದರು, ನಿಲ್ಲಿಸದೆ ಮಾತಾಡುತ್ತಿದ್ದರು, ಧ್ವನಿ ಒಡಕಲಾದರೂ ಮಾತಾಳಿಯಾಗಿತ್ತು. ಊಟದ ಮನೆಯಯಿಂದ ಕೊಲೋನ್‌ನ ಉಸಿರು ತೇಲಿ ಬರುತ್ತಿರುವುದನ್ನು ಅವಳು ಗಮನಿಸಿದಳು. ಅದು ತಮ್ಮ ದೌರ್ಬಲ್ಯವೆಂಬುದನ್ನವರು ಒಪ್ಪಿಕೊಂಡರು, ಎಷ್ಟರಮಟ್ಟಿಗೆ ಎಂದರೆ, ಕೊಲೋನ್‌ಗಾಗಿಯೇ ಸಾರ್ವಜನಿಕ ಹಣದಲ್ಲಿ ಎಂಟು ಸಾವಿರ ಪೆಸೋಗಳನ್ನು ವೆಚ್ಚಮಾಡಿರುವುದಾಗಿ ಶತ್ರುಗಳು ಆರೋಪಿಸಿದ್ದರು. ಹಿಂದಿನ ದಿನದಷ್ಟೇ ಶಕ್ತಿಹೀನರಾಗಿದ್ದರು, ಕೃಶಗೊಂಡ ಶರೀರ ಅವರ ಕಾಯಿಲೆಯ ತೀವ್ರತೆಯನ್ನು ಎತ್ತಿ ತೋರಿಸುತ್ತಿತ್ತು.

ಜನರ ಎದುರಲ್ಲಿ ಜನರಲ್ ಮುಜುಗರವಿಲ್ಲದ ಕುದುರೆ ಕಳ್ಳನಂತೆ ಪ್ರಮಾಣ ಮಾಡಬಲ್ಲವರಾಗಿದ್ದರು, ಆದರೆ ಒಬ್ಬ ಹೆಣ್ಣಿನ ಇರುವಿಕೆ ಅವರ ನಡತೆ ಹಾಗೂ ಭಾಷೆಗಳನ್ನು ಕೃತಕವೆನ್ನಿಸುವಷ್ಟು ನಯಗೊಳಿಸಲು ಸಾಕಾಗಿತ್ತು. ಸ್ವತಃ ಶ್ರೇಷ್ಠ ಬರ್ಗಂಡಿ ಸೀಸೆಯ ಬಿರಡೆ ತೆರೆದು, ಲೋಟದಲ್ಲಿ ಬಸಿದು ಅರ್ಪಿಸುವುದನ್ನು ನೋಡಿದ ಕೌಂಟ್ ಅದನ್ನು ವೆಲ್ವೆಟ್ ಆಲಿಂಗನ ಎಂದು ಹಿಂಜರಿಕೆಯಿಲ್ಲದೆ ವರ್ಣಿಸಿದ. ಕಾಫ಼ಿ ಸರಬರಾಜಾಗುತ್ತಿರುವಾಗ

ಕ್ಯಾಪ್ಟನ್ ಇಟೂರ್‌ಬೈಡ್ ಬಂದು ಅವರ ಕಿವಿಯಲ್ಲಿ ಏನೋ ಪಿಸುಗುಟ್ಟಿದ. ಕೇಳಿ ತುಂಬ ಗಂಭೀರರಾದರೂ ಆನಂತರ ಕುರ್ಚಿಯ ಹಿಂದಕ್ಕೊರಗಿ ಜೋರಾಗಿ ನಕ್ಕುಬಿಟ್ಟರು.

"ದಯವಿಟ್ಟು ಇದನ್ನು ಕೇಳಿ: ಕಾರ್ಟಜೆನದಿಂದ ಒಂದು ನಿಯೋಗವು ನನ್ನ ಅಂತ್ಯಕ್ರಿಯೆಗೆಂದು ಆಗಮಿಸಿದೆ!" ಎಂದು ಘೋಷಿಸಿದರು.

ಅವರು ನಿಯೋಗವನ್ನು ಒಳಗೆ ಬರಮಾಡಿಕೊಂಡರು. ಮಾಂಟಿಲ ಮತ್ತಿತರರಿಗೆ ಅವರ ತಮಾಷೆಯನ್ನು ಕೇಳಿ ನಗುವುದರ ಹೊರತು ಬೇರೆ ವಿಧಿಯಿರಲಿಲ್ಲ. ಆಪ್ತ ಸಹಾಯಕರು ಸ್ಯಾನ್ ಜೇಸಿಂಟೋದಿಂದ ಬಂದು ಕಳೆದ ರಾತ್ರಿಯಿಂದಲೂ ಸನಿಹದದಲ್ಲಿಯೇ ಉಳಿದಿದ್ದ ಬ್ಯಾಗ್‌ಪೈಪರ್‌ಗಳನ್ನು ಒಳಗೆ ಕರೆದರು, ವಯಸ್ಸಾದ ಗಂಡುಹೆಣ್ಣುಗಳು ಅತಿಥಿಗಳ ಗೌರವಾರ್ಥವಾಗಿ *ಕೂಂಬಿಯ* ನರ್ತನ ಮಾಡಿದರು. ಆಫ್ರಿಕನ್ ಮೂಲದ ಈ ಜಾನಪದ ನರ್ತನದ ಲಾಲಿತ್ಯವನ್ನು ಕಂಡು ಕ್ಯಾಮಿಲ್ ಅಚ್ಚರಿಗೊಂಡಳು, ಅದನ್ನು ಕಲಿಯುವುದಕ್ಕೂ ಆಸೆಪಟ್ಟಳು. ಜನರಲ್ ಒಳ್ಳೆಯ ನರ್ತಕರೆಂಬ ಹೆಸರು ಗಳಿಸಿದ್ದರು, ಕಳೆದ ಬಾರಿ ಭೇಟಿಕೊಟ್ಟಿದ್ದಾಗ ಅವರು ಒಬ್ಬ ನೃತ್ಯಪಟುವಿನಂತೆ *ಕೂಂಬಿಯ* ನರ್ತಿಸಿದ್ದನ್ನು ಭೋಜನಕೂಟಕ್ಕೆ ಬಂದಿದ್ದ ಅನೇಕರು ನೆನಪಿಸಿಕೊಂಡರು, ಆದರೆ ಕ್ಯಾಮಿಲ್ ತನ್ನೊಡನೆ ನರ್ತಿಸಲು ಕೇಳಿಕೊಂಡಾಗ ಅವರು ಆ ಗೌರವವನ್ನು ನಿರಾಕರಿಸಿದರು. "ಮೂರು ವರ್ಷಗಳೆಂದರೆ ದೀರ್ಘಕಾಲವೇ ಆಯಿತು" ಎಂದರು ಮುಗುಳ್ನಗುತ್ತ. ಎರಡು ಮೂರು ಹೆಜ್ಜೆಗಳನ್ನಿಡಲು ತೋರಿಸಿಕೊಟ್ಟ ಮೇಲೆ ಆಕೆಯೊಬ್ಬಳೇ ನರ್ತಿಸಿದಳು. ಆನಂತರ ಒಂದು ಕ್ಷಣ ಸಂಗೀತ ನಿಂತಿತು, ಇದ್ದಕ್ಕಿದ್ದಂತೆ ಜಯಕಾರ ಕೇಳಿಸಿತು, ಭಯಂಕರ ಸ್ಫೋಟದ ಸದ್ದುಗಳಾದವು, ಆಮೇಲೆ ಬಂದೂಕಿನ ಹೊಡೆತದ ಶಬ್ದ. ಕ್ಯಾಮಿಲ್ ಗಾಬರಿಗೊಂಡಳು.

"ಹಾಳಾಗಲಿ, ಅದು ಕ್ರಾಂತಿ!" ಎಂದ ಕೌಂಟ್ ಗಂಭೀರನಾಗಿ.

"ಅದರ ಆವಶ್ಯಕತೆ ಎಷ್ಟು ಎಂಬುದನ್ನು ನೀವು ಕಲ್ಪಿಸಿಕೊಳ್ಳಲಾರಿರಿ. ಆದರೆ ದುಃಖದ ವಿಷಯವೆಂದರೆ, ಅದು ಹುಂಜದ ಕಾಳಗ ಅಷ್ಟೆ" ಎಂದು ಜನರಲ್ ನಕ್ಕರು.

ಅದರ ಬಗ್ಗೆ ಯೋಚನೆಯೇ ಇಲ್ಲದವರಂತೆ ಕಾಫಿಯನ್ನು ಹೀರಿ ಮುಗಿಸಿದರು, ಸುತ್ತಲೂ ಕೈಬೀಸಿ ಕೋಳಿಕಾಳಗ ರಂಗಕ್ಕೆ ಬರಲು ಹೇಳಿದರು.

"ಬನ್ನಿ ಮಾಂಟಿಲ, ನಾನೆಷ್ಟು ಸತ್ತಿದ್ದೀನಿ ಅನ್ನೋದನ್ನ ನೋಡುವಿರಂತೆ" ಎಂದರು.

ಮಧ್ಯಾಹ್ನ ಎರಡು ಗಂಟೆಯ ವೇಳೆಗೆ ಅವರು ಕೋಳಿಕಾಳಗ ರಂಗಕ್ಕೆ ಬಂದರು, ಜೊತೆಯಲ್ಲಿ ಕೌಂಟ್ ರಯೋ ದ ರೇಜ್‌ಕೋಟ್‌ನ ಮುಂದಾಳುತ್ವದಲ್ಲಿನ ಒಂದು ದೊಡ್ಡ ಗುಂಪು ಕೂಡ ಇತ್ತು. ಆದರೆ ಬರೀ

ಗಂಡಸರಿಂದ ತಂಬಿದ್ದ ಅಂತಹ ಗುಂಪಿನಲ್ಲಿ ಎಲ್ಲರೂ ಕ್ಯಾಮಿಲ್‌ಳನ್ನು ಗಮನಿಸಿದರೇ ಹೊರತು ಜನರಲ್ ಅವರನ್ನಲ್ಲ. ಅಂತಹ ಕೋರೈಸುವ ಹೆಣ್ಣು ಜನರಲ್‌ರ ಪ್ರೇಯಸಿಯಲ್ಲ ಎಂಬುದನ್ನಾಗಲೀ, ಹೆಂಗಸರಿಗೆ ನಿಷಿದ್ಧವಾದ ಆ ಜಾಗದಲ್ಲಿ ಅವಳಿದ್ದುದನ್ನಾಗಲೀ, ಸಾಮಾನ್ಯವಾಗಿ ಅವರು ತನ್ನ ಪ್ರೇಯಸಿಯರ ಬಗೆಗಿನ ಸತ್ಯವನ್ನು ಮುಚ್ಚಿ ಹಾಕಲು ಹಲವು ಮಂದಿ ಗಂಡಸರನ್ನು ಕರೆತರುವ ವಾಡಿಕೆಯವರಾದ್ದರಿಂದ ಅವಳು ಕೌಂಟ್ ಜೊತೆ ಬಂದಿದ್ದಳೆಂಬುದನ್ನಾಗಲೀ ಯಾರೂ ನಂಬುವಂತಿರಲಿಲ್ಲ.

ಎರಡನೆಯ ಕಾಳಗ ಭೀಕರವಾಗಿತ್ತು. ಒಂದು ಕೆಂಪು ಹುಂಜ ಎದುರಾಳಿಯ ಕಣ್ಣುಗಳನ್ನು ತನ್ನ ಚುಚ್ಚುಮುಳ್ಳಗಳಿಂದ ಪರಚಿತು; ಕಣ್ಣು ಕಳೆದುಕೊಂಡರೂ ಇನ್ನೊಂದು ಹುಂಜ ಶರಣಾಗಲಿಲ್ಲ. ಉಗ್ರತೆಯಿಂದ ಶತ್ರುವಿನ ಮೇಲೆರಗಿತು, ಅದರ ತಲೆಯನ್ನು ಹರಿದು ಆತುರದಿಂದ ಕುಕ್ಕಿ ಕುಕ್ಕಿ ತಿನ್ನತೊಡಗಿತು.

"ಹಬ್ಬದಾಚರಣೆಯಲ್ಲಿ ಇಷ್ಟು ರಕ್ತ ಸುರಿದು ಹೋಗತ್ತೆ ಅಂತ ನಾನಂದುಕೊಂಡಿರಲಿಲ್ಲ. ಆದರೆ ಅದು ನನಗಿಷ್ಟವಾಯಿತು" ಎಂದಳು ಕ್ಯಾಮಿಲ್.

ಪ್ರೇಕ್ಷಕರು ಅಶ್ಲೀಲವಾಗಿ ಕೂಗುತ್ತ ಮತ್ತು ತಮ್ಮ ಆಯುಧಗಳಿಂದ ಗಾಳಿಯಲ್ಲಿ ಗುಂಡು ಹಾರಿಸಿ ಹುಂಜಗಳನ್ನು ಪ್ರಚೋದಿಸಿದರೆ ಇನ್ನಷ್ಟು ರಕ್ತ ಸುರಿಯುತ್ತದೆ ಎಂದು ಜನರಲ್ ವಿವರಿಸಿದರು, ಅವತ್ತು ಮಧ್ಯಾಹ್ನ ಒಬ್ಬ ಮಹಿಳೆ, ಅದೂ ಅಂಥ ಸುಂದರಿ ಎದುರಿಗಿದ್ದರೆ ಪ್ರೇಕ್ಷಕರಿಗೆ ಸಂಕೋಚವಾಗುವುದೆಂದೂ ನುಡಿದರು. ಅವಳ ಕಡೆ ಪ್ರಣಯಕಟಾಕ್ಷವನ್ನು ಬೀರಿ ಹೇಳಿದರು: "ಹೀಗಾಗಿ ತಪ್ಪು ನಿಮ್ಮದು." ಅವಳಿಗೆ ತಮಾಷೆಯೆನಿಸಿ ನಕ್ಕಳು.

"ತಪ್ಪು ತಮ್ಮದು, ಎಕ್ಸಲೆನ್ಸಿ, ಯಾಕಂದ್ರೆ ಇಷ್ಟು ವರ್ಷಗಳ ಕಾಲ ಆಡಳಿತ ನಡೆಸಿದರೂ ಹೆಂಗಸರು ಇರಲಿ ಬಿಡಲಿ ಗಂಡಸರು ತಮಗೆ ಸಹಜವಾದ ರೀತಿಯಲ್ಲೇ ನಡೆದುಕೊಳ್ಬೇಕು ಅನ್ನೋ ಕಾನೂನು ಮಾಡಲಿಲ್ಲವಲ್ಲ, ಅದಕ್ಕೆ."

ಅವರಿಗೆ ತಾಳ್ಮೆಗೆಡಲು ಆರಂಭವಾಯಿತು.

"ದಯವಿಟ್ಟು ನನ್ನನ್ನು ಎಕ್ಸಲೆನ್ಸಿ ಅಂತ ಕರೆಯಬೇಡಿ, ಎಷ್ಟು ಬೇಕೋ ಅಷ್ಟು ಮರ್ಯಾದೆ ತೋರಿಸಿದರೇ ನನಗೆ ತೃಪ್ತಿ" ಎಂದರು.

ಆ ರಾತ್ರಿ, ಸ್ನಾನದ ತೊಟ್ಟಿಯಲ್ಲಿ ವ್ಯರ್ಥವಾಗಿ ತೇಲುತ್ತಿರುವಾಗ, ಜೋಸೆ ಪೆಲಾಸಿಯೋಸ್ ಹೇಳಿದ: "ನಾವು ನೋಡಿರೋರಲ್ಲೆಲ್ಲ ಆಕೆ ಪರಮ ಸುಂದರಿ." ಜನರಲ್ ತಮ್ಮ ಕಣ್ಣು ತೆರೆಯಲಿಲ್ಲ, ಆದರೆ "ಆಕೆ ಹೇಸಿಕೆಯ ಹೆಂಗಸು" ಎಂದರು. ಬಹಳ ಜನಗಳ ಅಭಿಪ್ರಾಯವೆಂದರೆ, ಹುಂಜದ

ಕಾಳಗರಂಗದಲ್ಲಿ ಅವರ ನಡವಳಿಕೆಯು ತಮ್ಮ ಕಾಯಿಲೆಯ ಬಗೆಗಿನ ವಿವಿಧ ಸುದ್ದಿಗಳನ್ನು ವಿರೋಧಿಸಬೇಕೆಂಬ ಪೂರ್ವನಿಯೋಜಿತವಾದುದಾಗಿತ್ತು. ಅದು ಇತ್ತೀಚಿನ ದಿನಗಳಲ್ಲಿ ಎಷ್ಟು ಗಂಭೀರವಾಗಿ ಪರಿಣಮಿಸಿತ್ತೆಂದರೆ, ಅವರು ಸತ್ತಿರುವನೆಂದರೆ ಯಾರೂ ಅನುಮಾನಿಸುತ್ತಿರಲಿಲ್ಲ. ಅದರ ಪರಿಣಾಮ ಆಗಿಬಿಟ್ಟಿತ್ತು, ಕಾರ್ಟಜೆನದಿಂದ ಹೊರಟ ಅಂಚೆಯು ಅವರ ಆರೋಗ್ಯದ ಸುದ್ದಿಯನ್ನು ನಾನಾ ಮಾರ್ಗಗಳಲ್ಲಿ ಹರಡಿತ್ತು, ಅವರ ಬೆಂಬಲಿಗರು ಅದರ ಬಗ್ಗೆ ಎಷ್ಟು ತೀವ್ರವಾಗಿ ಸಂಭ್ರಮಿಸಿದರೆಂದರೆ, ನಡೆದ ಸಮಾರಂಭಗಳು ಸಂತೋಷಾಭಿವ್ಯಕ್ತಿಗಿಂತ ಕಾನೂನುಭಂಗಕ್ಕೇ ಮೀಸಲಾಗಿದ್ದವು.

ತಮ್ಮ ದೇಹವನ್ನೇ ಮೋಸಗೊಳಿಸುವುದರಲ್ಲಿ ಜನರಲ್ ಯಶಸ್ವಿಯಾಗಿದ್ದರು, ಯಾಕೆಂದರೆ ಆ ಮುಂದಿನ ದಿನಗಳಲ್ಲಿ ಅವರ ಚಟುವಟಿಕೆಗಳು ಹೆಚ್ಚಾದವು, ಆಪ್ತಸಹಾಯಕರೊಂದಿಗೆ ಮತ್ತೆ ಜೂಜುಮೇಜುಗಳ ಮುಂದೆ ಕುಳಿತುಕೊಳ್ಳತೊಡಗಿದರು, ಕೊನೆಯಿಲ್ಲದ ಆಟಗಳ ಮೂಲಕ ತಮ್ಮ ಬೇಸರವನ್ನು ನಿವಾರಿಸಿಕೊಳ್ಳುತ್ತಿದ್ದರು. ಅವರಲ್ಲಿ ಅತ್ಯಂತ ಕಿರಿಯನೂ ಮೋಜುಗಾರನೂ ಆಗಿದ್ದ ಆಂಡ್ರೇ ಇಬಾರಾನಲ್ಲಿ ಯುದ್ಧದ ಬಗ್ಗೆ ಇನ್ನೂ ರಮ್ಯಾಲೋಚನೆಗಳೇ ತುಂಬಿದ್ದವು. ಈ ಸಮಯದಲ್ಲಿ ಕ್ವಿಟೋದಲ್ಲಿದ್ದ ತನ್ನ ಪ್ರೇಯಸಿಗೆ ಅವನು ಹೀಗೆಂದು ಬರೆದಿದ್ದ: "ನೀನಿಲ್ಲದ ಶಾಂತಿಕಾಲಕ್ಕಿಂತ ನಿನ್ನ ತೋಳಲ್ಲಿ ಸಾಯುವುದೇ ಮೇಲು." ಅವರು ಕೊನೆಯಿಲ್ಲದಂತೆ ಹಗಲುರಾತ್ರಿಗಳೆನ್ನದೆ ಆಡುತ್ತಿದ್ದರು, ಕೆಲವು ವೇಳೆ ಇಸ್ಪೀಟಿನ ರಹಸ್ಯದ ಬಗ್ಗೆ ಚರ್ಚೆಯಲ್ಲಿ ಲೀನವಾಗುತ್ತಿದ್ದರು, ಕೆಲವು ಸಂದರ್ಭಗಳಲ್ಲಿ ಜೋರಾಗಿ ವಾದ ಮಾಡುತ್ತಿದ್ದರು; ಪಹರೆಯವರು ಬೆರಣಿಯಿಂದ ಬೆಂಕಿ ಮಾಡಿ ಉರಿ ಹಾಕಿದ್ದರೂ ಸೊಳ್ಳೆಗಳು ಮಳೆಗಾಲದಲ್ಲಿ ಎಡೆಬಿಡದೆ ದಾಳಿ ಮಾಡುತ್ತಿದ್ದವು, ರಾತ್ರಿ ಮಾತ್ರವಲ್ಲ, ಹಗಲು ಹೊತ್ತು ಕೂಡ. ಗುಅಡುಅಸ್‌ನ ಕೆಡುಕು ರಾತ್ರಿಯ ನಂತರ ಜನರಲ್ ಇಸ್ಪೀಟಿಗೆ ಕುಳಿತಿರಲಿಲ್ಲ, ವಿಲ್ಸನ್ ಜೊತೆಗಿನ ಕಟು ಘಟನೆ ಮರೆಯಲು ಎಷ್ಟೇ ಪ್ರಯತ್ನಿಸಿದರೂ ಅವರಲ್ಲಿ ಕಹಿ ನೆನಪನ್ನು ಉಳಿಸಿಬಿಟ್ಟಿತ್ತು. ತಮ್ಮ ಜೋಲಿಮಂಚದಲ್ಲಿ ಮಲಗಿಯೇ ಅವರ ಕಿರಿಚಾಟವನ್ನು, ರಹಸ್ಯಗಳನ್ನು, ಶಾಂತಿಯೆಂಬ ಭ್ರಮೆಯ ಕಾಲದಲ್ಲಿನ ಅವರ ನೆನಪುಗಳ ನಿರೂಪಣೆಯನ್ನು ಕೇಳಿಸಿಕೊಳ್ಳುತ್ತಿದ್ದರು. ಒಂದು ರಾತ್ರಿ, ಮನೆಯ ಸುತ್ತಲೂ ಅನೇಕ ಬಾರಿ ಸುತ್ತಾಡಿದ ಅವರು ಮೊಗಸಾಲೆಯಲ್ಲಿ ನಿಂತುಕೊಳ್ಳುವ ಬಯಕೆಯನ್ನು ತಡೆಯದಾದರು. ಎದುರು ಬಂದವರಿಗೆ ಸುಮ್ಮನಿರುವಂತೆ ಸನ್ನೆ ಮಾಡುತ್ತಿದ್ದರು, ಕೊನೆಗೆ ಆಂಡ್ರೇ ಇಬಾರಾನ ಹಿಂದೆ ನಿಂತರು. ಡೇಗೆಯ ಪಂಜಗಳೋ ಎನ್ನಿಸುವಂತೆ ತಮ್ಮ ಎರಡೂ ಕೈಗಳನ್ನು ಅವನ ಭುಜಗಳ ಮೇಲಿಟ್ಟು ಕೇಳಿದರು:

"ಹೇಳು ತಮ್ಮ, ನಿನಗೂ ನಾನು ಸತ್ತವನಂತೆ ಕಾಣ್ತೀನಾ?"

ಜನರಲ್‌ರ ನಡತೆಯ ಬಗ್ಗೆ ಅರಿವಿದ್ದ ಇಬಾರಾ, ಅವರೆಡೆಗೆ ನೋಡಲು ತಿರುಗಲಿಲ್ಲ. "ನಾನು ಹಾಗೆ ಭಾವಿಸಲಾರೆ, ಜನರಲ್" ಎಂದ.

"ಉಹ್ಞೂ, ಇಲ್ಲ ನೀನು ಕುರುಡನಾಗಿರಬೇಕು, ಇಲ್ಲವೇ ಸುಳ್ಳು ಹೇಳುತ್ತಿರಬೇಕು."

"ಅಥವಾ ನನ್ನ ಬೆನ್ನು ತಿರುಗಿದೆ" ಎಂದ ಇಬಾರಾ.

ಜನರಲ್‌ರಿಗೆ ಆಟ ಇಷ್ಟವಾಯಿತು, ಸ್ವಲ್ಪ ಕಾಲ ಸುಮ್ಮನೆ ಕುಳಿತು ಆಮೇಲೆ ಆಡಲು ತೊಡಗಿದರು. ಅವರು ಯಥಾಸ್ಥಿತಿಗೆ ಮರಳಿದರೆಂದು ಎಲ್ಲರಿಗೂ ಅನ್ನಿಸಿತು, ಆ ರಾತ್ರಿ ಮಾತ್ರವಲ್ಲ, ಮುಂದಿನ ರಾತ್ರಿಗಳು ಕೂಡ. "ನಾವು ಪಾಸ್‌ಪೋರ್ಟ್‌ಗಾಗಿ ಕಾಯ್ತಿದ್ದೀವಿ" ಎಂದಿದ್ದರು ಜನರಲ್. ಆದರೆ, ಇಸ್ಪೀಟಿನ ವಿಧಿ, ವೈಯಕ್ತಿಕ ಗಮನ, ಜನರಲ್, ಈ ಎಲ್ಲ ಇದ್ದರೂ ಅವರ ಪರಿವಾರದ ಅಧಿಕಾರಿಗಳು ಮಾತ್ರ ಗುರಿಯಿರದ ಕೊನೆಯಿರದ ಸುತ್ತಾಟದಿಂದ ಕಡುಬೇಸರಗೊಂಡಿದ್ದಾರೆ ಎಂದು ಜೋಸೆ ಪೆಲಾಸಿಯೋಸ್ ಮತ್ತೆ ಹೇಳಿದ.

ತಮ್ಮ ಅಧಿಕಾರಿಗಳ ಯೋಗಕ್ಷೇಮದ ವಿಷಯದಲ್ಲಿ, ದಿನನಿತ್ಯದ ವಿವರಗಳಿಂದ ಹಿಡಿದು ಅವರ ಬದುಕಿನ ಗುರಿಯ ವಿಶಾಲ ಕ್ಷಿತಿಜದವರೆಗೆ, ಅಷ್ಟು ಕಾಳಜಿ ಹೊಂದಿದವರು ಬೇರೆಯವರಿರಲಿಲ್ಲ, ಆದರೆ ಸಮಸ್ಯೆಗಳಿಗೆ ಪರಿಹಾರಗಳಿಲ್ಲದಾಗ ಅವರು ಆತ್ಮವಂಚನೆಯಿಂದಲೇ ಅವುಗಳನ್ನು ಪರಿಹರಿಸುತ್ತಿದ್ದರು. ವಿಲ್ಸನ್ ಜೊತೆಗಿನ ಘಟನೆ ನಡೆದಾಗಿನಿಂದ, ಆಮೇಲೆ ನದಿತೀರದುದ್ದಕ್ಕೂ ನರಳುವಿಕೆಯ ನಡುವೆಯೇ ಅವರ ಬಗ್ಗೆಯೇ ಆಲೋಚಿಸುತ್ತಿದ್ದರು. ವಿಲ್ಸನ್‌ನ ನಡವಳಿಕೆ ಹೇಳಿಕೊಳ್ಳಲಾಗದಂಥದ್ದು, ಆಳವಾದ ಹತಾಶೆ ಮಾತ್ರವೇ ಅಂತಹ ಬಿರುಸನ್ನುಂಟುಮಾಡಿರಲು ಸಾಧ್ಯ. "ಅವನು ತನ್ನ ತಂದೆಯಷ್ಟೇ ದೊಡ್ಡ ಯೋಧ" ಎಂದು ಜೂನಿನ್‌ನಲ್ಲಿ ಅವನು ಹೋರಾಡುತ್ತಿದ್ದ ರೀತಿಯನ್ನು ಕಂಡು ಉದ್ಗರಿಸಿದ್ದರು. ಫೀಲ್ಡ್ ಮಾರ್ಷಲ್ ಸ್ಯೂಕ್ರ್ ಟಾರ್ಕಿ ಕದನದ ಮುಗಿದ ಹೊಸತರಲ್ಲಿ ತನಗೆ ಕರ್ನಲ್ ದರ್ಜೆಗೆ ಬಡ್ತಿ ನೀಡಿದಾಗ ವಿಲ್ಸನ್ ಅದನ್ನು ನಿರಾಕರಿಸಿದ್ದನ್ನು ಕಂಡು ಅದನ್ನೊಪ್ಪಿಕೊಳ್ಳುವಂತೆ ಅವನ ಮನವೊಲಿಸಿದಾಗ, "ಆದರೆ ಅವರಿಗಿಂತ ವಿನಯಶೀಲ" ಎಂದೂ ಸೇರಿಸಿದ್ದರು.

ಯುದ್ಧಕಾಲದಲ್ಲಾಗಲೀ ಶಾಂತಿ ಸಮಯದಲ್ಲಾಗಲೀ ಜನರಲ್ ಅವರೆಲ್ಲರ ಮೇಲೆ ಹೇರಿದ್ದ ಕಟ್ಟುಪಾಡೆಂದರೆ, ಯೋಧಸಹಜ ಶಿಸ್ತು ಮಾತ್ರವಲ್ಲದೆ ಕಡುನಿಷ್ಠೆ. ಅವರು ಹೋರಾಡುವ ಯೋಧರೇ ಹೊರತು ಬಿಡಾರದಲ್ಲಿನ ಸೈನಿಕರಾಗಿರಲಿಲ್ಲ, ಏಕೆಂದರೆ ಅವರು ಎಷ್ಟರಮಟ್ಟಿಗೆ ಯುದ್ಧಗಳಲ್ಲಿ ತೊಡಗಿರುತ್ತಿದ್ದರೆಂದರೆ, ಬಿಡಾರದಲ್ಲುಳಿಯಲು ಸಮಯವೇ ಸಿಕ್ಕುತ್ತಿರಲಿಲ್ಲ. ಅವರಲ್ಲಿ ಎಲ್ಲ ಬಗೆಯವರಿದ್ದರು, ಆದರೆ ಜನರಲ್‌ರಿಗೆ

ಆಪ್ತವಾದ ಸ್ವಾತಂತ್ರ್ಯ ಗಳಿಸಿದ ಒಳಗುಂಪು ಅಮೆರಿಕದ ಶ್ರೀಮಂತವರ್ಗದ ಕೆನೆಪದರಕ್ಕೆ ಸೇರಿದವರು, ಅವರೆಲ್ಲ ರಾಜಕುಮಾರರಿಗೆ ತಕ್ಕ ಶಾಲೆಗಳಲ್ಲಿ ಕಲಿತಿದ್ದವರು. ತಮ್ಮ ಬದುಕನ್ನು ಅವರು ಹೋರಾಟದಲ್ಲಿಯೇ ಕಳೆದಿದ್ದರು, ಮನೆ ಹೆಂಡತಿ ಮಕ್ಕಳು ಮತ್ತೆಲ್ಲದರಿಂದ ದೂರವಾಗಿ, ಆವಶ್ಯಕತೆಗನುಗುಣವಾಗಿ ರಾಜಕಾರಣಿಗಳಾಗಿಯೂ ಅಧಿಕಾರಿಗಳಾಗಿಯೂ ರೂಪುಗೊಂಡಿದ್ದರು. ಇಟೂರ್‌ಬೈಡ್ ಮತ್ತು ಯರೋಪಿಯನ್ ಆಪ್ತಸಹಾಯಕನನ್ನು ಬಿಟ್ಟರೆ ಎಲ್ಲರೂ ವೆನಿಝೂಲದವರು ಹಾಗೂ ಸುಮಾರು ಎಲ್ಲರೂ ಜನರಲ್‌ರ ರಕ್ತಸಂಬಂಧಿಗಳೋ ಮದುವೆಯಿಂದ ಸಂಬಂಧಿಕರಾಗಿದ್ದವರೋ ಆಗಿದ್ದರು: ಫ಼ರ್ನಾಂಡೋ, ಜೋಸೆ ಲಾರೆನ್ಸಿಯೋ, ಇಬಾರಾಗಳು, ಬ್ರೈಸೆನೋ ಮೆಂಡೆಝ್. ವರ್ಗ ಹಾಗೂ ರಕ್ತಸಂಬಂಧ ಅವರನ್ನು ಒಂದುಗೂಡಿಸಿತ್ತು.

ಒಬ್ಬನು ಮಾತ್ರ ಉಳಿದವರೆಲ್ಲರಿಗಿಂತ ಭಿನ್ನ: ಜೋಸೆ ಲಾರೆನ್ಸಿಯೋ ಸಿಲ್ವ. ಅವನು ಲಾಸ್ ಲ್ಲಾನಸ್ ನದಿಯ ತೀರದ ಎಲ್ ಟಿಮಾಕೋ ಪಟ್ಟಣದ ಒಬ್ಬ ಸೂಲಗಿತ್ತಿಯ ಮತ್ತು ಆ ನದಿಯಲ್ಲಿ ಮೀನು ಹಿಡಿಯುವ ಬೆಸ್ತರವನ ಮಗ. ತಂದೆತಾಯಿಯರ ಕಾರಣದಿಂದಾಗಿ ಅವನ ಮೈಬಣ್ಣ ಕಪ್ಪಗಿತ್ತು, ಕೆಳವರ್ಗದ *ಪರ್ದೋ* ಸಂಕರತಳಿಗೆ ಸೇರಿದವನು, ಆದರೆ ಜನರಲ್ ಅವನಿಗೆ ಫ಼ೆಲೀಸಿಯ ಎಂಬ ತನ್ನ ಸೋದರ ಸಂಬಂಧದ ಹುಡುಗಿಯೊಂದಿಗೆ ಮದುವೆ ಮಾಡಿಸಿದ್ದರು. ಹದಿನಾರನೆಯ ವರ್ಷದಲ್ಲಿ ಒಬ್ಬ ಸ್ವಯಂಸೇವಕನಾಗಿ ವಿಮೋಚನಾದಳವನ್ನು ಸೇರಿ ವೃತ್ತಿ ಆರಂಭಿಸಿದ್ದ ಅವನು ಐವತ್ತೈದನೆಯ ವಯಸ್ಸಿನ ಹೊತ್ತಿಗೆ ಫ಼ೀಲ್ಡ್ ಜನರಲ್ ಪದವಿಗೇರಿದ್ದ, ಸ್ವಾತಂತ್ರ್ಯಸಂಗ್ರಾಮದ ಎಲ್ಲ ಅವಧಿಗಳಲ್ಲಿನ ಐವತ್ತೈದು ಯುದ್ಧಗಳಲ್ಲಿ ಭಾಗವಹಿಸಿ ಹದಿನೈದಕ್ಕಿಂತ ಹೆಚ್ಚಿನ ಸಂಖ್ಯೆಯ ತೀವ್ರಸ್ವರೂಪದ ಹಾಗೂ ಅಸಂಖ್ಯ ಸಾಧಾರಣ ಗಾಯಗಳನ್ನನುಭವಿಸಿದ್ದ, ನಾನಾ ಬಗೆಯ ಆಯುಧಾಘಾತಕ್ಕೆ ಸಿಲುಕಿದ್ದ. *ಪರ್ದೋ* ಎಂಬ ಕಾರಕ್ಕಾಗಿ ಅವನು ಎದುರಿಸಿದ್ದ ಒಂದೇ ತೊಂದರೆಯೆಂದರೆ ಒಮ್ಮೆ ಒಂದು ಭಾರಿ ನರ್ತನಕೂಟದಲ್ಲಿ ಇವನ ಜೊತೆ ನರ್ತಿಸಲು ಶ್ರೀಮಂತ ಮಹಿಳೆಯೊಬ್ಬಳು ನಿರಾಕರಿಸಿದ್ದು. ಆಗ ಜನರಲ್ ಮತ್ತೆ ವಾಲ್ಟ್ಸ್ ನುಡಿಸಲು ಹೇಳಿ ತಾವೇ ಅವನೊಡನೆ ನರ್ತಿಸಿದ್ದರು.

ಇದರ ಮತ್ತೊಂದು ತುದಿಯಲ್ಲಿದ್ದವನೆಂದರೆ ಜನರಲ್ ಓ'ಲಿಯರಿ. ಅವನು ಎತ್ತರವಾಗಿ ಗೋದಿ ಬಣ್ಣ ಹೊಂದಿ ಗಾಂಭಿರ್ಯದಿಂದ ಕೂಡಿದ್ದ, ಅವನ ಫ಼್ಲಾರೆಂಟೈನ್ ಸಮವಸ್ತ್ರ ಅದನ್ನು ಹೆಚ್ಚಿಸಿತ್ತು. ತನ್ನ ಹದಿನೆಂಟನೆಯ ವಯಸ್ಸಿಗೆ ರೆಡ್ ಹುಸ್ಸಾರ್‌ನಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಆಗಿ ವೆನಿಝೂಲಕ್ಕೆ ಬಂದಿದ್ದ, ಆನಂತರ ಸ್ವಾತಂತ್ರ್ಯಸಂಗ್ರಾಮಾವಧಿಯ ಎಲ್ಲ ಹೋರಾಟಗಳಲ್ಲಿ ಪಾಲುಗೊಂಡಿದ್ದ. ಇತರರಂತೆ ಅವನೂ ಅವಮಾನದ ಕ್ಷಣವನ್ನನುಭವಿಸಿದ್ದ:

ರಾಜಿಸೂತ್ರವೊಂದನ್ನು ಕಂಡುಕೊಳ್ಳಲು ಜನರಲ್ ಅವನನ್ನು ಕಳಿಸಿದ್ದಾಗ, ಸಟಾಂಡರ್ ಜೋಸೆ ಆಂಟೋನಿಯೋ ಪಯೆಜ಼್ ಜೊತೆ ಹೊಂದಿದ್ದ ವಿವಾದದಲ್ಲಿ ಅವನ ಪರವಾದ ಒಪ್ಪಂದಕ್ಕೆ ಬಂದಿದ್ದ. ಆದರೆ ಜನರಲ್ ಅವನೊಡನೆ ಮಾತು ನಿಲ್ಲಿಸಿದ್ದರು, ಹದಿನಾಲ್ಕು ತಿಂಗಳ ಕಾಲ ಅವನ ಪಾಡಿಗೇ ಬಿಟ್ಟಿದ್ದರು, ಆಮೇಲಷ್ಟೇ ಅವರ ಕೋಪ ಇಳಿದಿತ್ತು.

ಅವರಲ್ಲಿನ ಪ್ರತಿಯೊಬ್ಬನ ವೈಯಕ್ತಿಕ ಯೋಗ್ಯತೆ ಅಸಂದಿಗ್ಧವಾಗಿತ್ತು. ತೊಂದರೆಯೆಂದರೆ ಅವರ ಜೊತೆಗಿನ ಸಂಬಂಧದಲ್ಲಿ ಅಧಿಕಾರವೇ ಗೋಡೆಯಾಗಿ ಮಧ್ಯೆ ಬಂದುದು ಅವರ ಅರಿವಿಗೇ ಬಂದಿರಲಿಲ್ಲ, ತಾವು ಎಲ್ಲರೊಡನೆ ಸಲಿಗೆ ಮತ್ತು ಕರುಣೆ ತೋರಿಸುತ್ತೇನೆ ಎಂಬ ಆಲೋಚನೆ ಬಂದಾಗ ಅದು ಮತ್ತಷ್ಟು ಎತ್ತರವಾಗಿ ಬೆಳೆದಿತ್ತು. ಆದರೆ ಒಂದು ರಾತ್ರಿ ಅವರ ಮನಸ್ಥಿತಿಯನ್ನರಿಯುವಂತೆ ಜೋಸೆ ಪೆಲಾಸಿಯೋಸ್ ಜೊತೆ ಸಂಪೂರ್ಣ ಸಮಾನನ'ಂತೆ ಇಸ್ಪೀಟು ಆಡಿದ್ದರು, ಸೋತರೂ ಮನಸ್ಸು ಕಹಿಮಾಡಿಕೊಳ್ಳಲಿಲ್ಲ, ಕೊನೆಗೆ ಸೇನಾಧಿಕಾರಿಗಳೇ ತಮ್ಮ ಭಾವನೆಯನ್ನು ತೋಡಿಕೊಂಡಿದ್ದರು.

ಅವರ ಎದೆಗಳಲ್ಲಿ ಹಳೆಯ ಹತಾಶೆಗಳು ಭಾರವಾಗಿ ಕುಳಿತಿರದಿದ್ದುದು ಸ್ಪಷ್ಟವಾಗಿತ್ತು. ಯುದ್ಧದಲ್ಲಿ ಗೆದ್ದ ಬಳಿಕವೂ ಒಂದು ಬಗೆಯ ಸೋಲಿನ ಭಾವನೆ ತಮ್ಮನ್ನು ಆವರಿಸಿದ್ದ ಬಗ್ಗೆ ಅವರು ತಲೆಕೆಡಿಸಿಕೊಂಡಿರಲಿಲ್ಲ. ಸುಸಂಧಿಯ ತೋರಿಕೆಯನ್ನು ನಿವಾರಿಸಿಕೊಳ್ಳಲು ಜನರಲ್ ತಮ್ಮ ಬಡ್ತಿಗೆ ತಡಮಾಡಿದ ಬಗ್ಗೆಯಾಗಲೀ, ತಮ್ಮ ಬುಡಮೇಲುಗೊಂಡ ಹಾಗೂ ಅಲೆಮಾರಿಯಾದ ಬದುಕಿನ ಬಗ್ಗೆಯಾಗಲೀ, ಆಗಾಗ ಸಂಭವಿಸಿದ ಪ್ರಣಯಭಗ್ನಗಳ ಬಗ್ಗೆಯಾಗಲೀ ಅವರು ಚಿಂತಿಸಲಿಲ್ಲ. ದೇಶದ ಆರ್ಥಿಕ ಪರಿಸ್ಥಿತಿಯು ಸಂಕಷ್ಟದಲ್ಲಿದ್ದ ಕಾರಣದಿಂದ ಅವರ ಸೈನಿಕ ಸಂಬಳದಲ್ಲಿ ಮೂರನೇ ಒಂದು ಭಾಗದಷ್ಟು ಕಡಿತಗೊಳಿಸಲಾಗಿತ್ತು, ಆದರೂ ಸಂಬಳಗಳು ಮೂರು ತಿಂಗಳು ತಡವಾಗಿ ಸಂದಾಯವಾಗುತ್ತಿದ್ದವು. ಆನಂತರ ಅವುಗಳನ್ನು ಅನಿರ್ದಿಷ್ಟ ಮೌಲ್ಯದ ಸರ್ಕಾರೀ ಬಾಂಡ್‌ಗಳ ರೂಪದಲ್ಲಿ ವಿತರಿಸಿದಾಗ ಅವುಗಳನ್ನು ಅವರು ಕಡಿಮೆ ಬೆಲೆಗೆ ಸ್ಟಾಕ್ ವಹಿವಾಟುದಾರರಿಗೆ ಮಾರಿಕೊಂಡಿದ್ದರು. ಆದರೂ ಅವರು ಯೋಚಿಸಿರಲಿಲ್ಲ, ಜಗತ್ತಿನೆಲ್ಲೆಡೆ ಅನುರಣಿಸುವಂತೆ ಶಬ್ದಮಾಡಿ ಬಾಗಿಲನ್ನು ಬಡಿದು ಹೊರಟು ಹೋಗುತ್ತಿದ್ದ ಜನರಲ್‌ರ ನಿರ್ಗಮನದ ಬಗ್ಗೆಯೂ ಅವರಿಗೆ ಚಿಂತೆಯಿರಲಿಲ್ಲ, ಹೀಗೆ ಮಾಡಿ ತಮ್ಮನ್ನು ಹಗೆಗಳ ಕೈಗೆ ಒಪ್ಪಿಸುತ್ತಿರುವುದರ ಬಗ್ಗೆಯೂ ಅವರಿಗೆ ಬೇಗುದಿಯಿರಲಿಲ್ಲ. ಉಹ್ಞೂ: ಸಡಗರ ಇತರರಿಗಾಗಿ. ಆದರೆ ಅವರು ತಡೆದುಕೊಳ್ಳಲಾಗದಿದ್ದುದೆಂದರೆ ಜನರಲ್ ಅಧಿಕಾರತ್ಯಾಗ ಮಾಡುವ ನಿರ್ಧಾರ ಮಾಡುವುದರ ಮೂಲಕ ತಮ್ಮ ಮನಸ್ಸಿನಲ್ಲಿ ಉಂಟುಮಾಡಿದ್ದ

ಹಾಗೂ ತಮ್ಮ ಗುರಿಯಿರದ ಪಯಣವನ್ನು ಪಟ್ಟುಹಿಡಿದು ಮುಂದುವರೆಸುತ್ತಿದ್ದುದರಿಂದ ಹೆಚ್ಚು ಅಸಹನೀಯವಾಗುತ್ತಿದ್ದ ಅನಿಶ್ಚಿತತೆಯನ್ನು.

ಅಂದು ರಾತ್ರಿ ಜನರಲ್ ಅವರು ಎಷ್ಟು ಪ್ರಸನ್ನಚಿತ್ತನಾಗಿದ್ದರೆಂದರೆ, ತಮಗೂ ಸೇನಾಧಿಕಾರಿಗಳಿಗೂ ನಡುವೆ ಒಂದು ಗೆರೆ ಕರಿ ನೆರಳೂ ಇಲ್ಲವೆಂದು ಸ್ನಾನ ಮಾಡುವಾಗ ಜೋಸೆ ಪೆಲಾಸಿಯೋಸ್ ಮುಂದೆ ಹೇಳಿಕೊಂಡಿದ್ದರು. ಆದರೂ ಅವರ ಬಗ್ಗೆ ಸೇನಾಧಿಕಾರಿಗಳಿಗಿದ್ದ ಭಾವನೆಯೆಂದರೆ ತಾವು ಜನರಲ್‌ರಲ್ಲಿ ಬಿತ್ತಿರುವುದು ತಮ್ಮ ಬಗೆಗಿನ ಕೃತಜ್ಞತೆಯೂ ಅಲ್ಲ ಅಪರಾಧಿ ಮನೋಭಾವವೂ ಅಲ್ಲ, ಆದರೆ ಅಪನಂಬಿಕೆಯ ಬೀಜವನ್ನು ಎಂದು.

ಎಲ್ಲಕ್ಕಿಂತ ಮಿಗಿಲಾಗಿ, ದೋಣಿಮನೆಯಲ್ಲಿ ಜೊತೆ ಸಂಭಾಷಿಸಿದ ರಾತ್ರಿಯಿಂದಲೂ ಜೋಸೆ ಮರಿಯ ಕ್ಯಾರೆನ ಹಗೆತನ ತೋರಿಸುತ್ತ, ತನಗೇ ಅರಿವಿಲ್ಲದಂತೆ ತಾನು ವೆನಿಝೂಲದ ಪ್ರತ್ಯೇಕತಾವಾದಿಗಳೊಡನೆ ಸಂಪರ್ಕದಲ್ಲಿರುವ ಭಾವನೆಯನ್ನು ಜನರಲ್‌ರಲ್ಲಿ ಮೂಡಿಸಿದ್ದ. ಅಥವಾ, ಕೆಲವರು ಆಗ ಹೇಳಿದಂತೆ, ತಾನೊಬ್ಬ ಅವಕಾಶವಾದಿಯೆಂಬ ಭಾವನೆಯನ್ನು. ನಾಲ್ಕು ವರ್ಷಗಳ ಹಿಂದೆ ಜನರಲ್ ಅವನನ್ನು ತಮ್ಮ ಹೃದಯದಿಂದ ಹೊರದೂಡಿದ್ದರು, ಓ'ಲಿಯರಿ, ಮಾಂಟಿಲ, ಬ್ರೈಸಿನೋ ಮೆಂಡೆಝ್, ಸಂಟಾನಾ ಮತ್ತಿತರನ್ನು ದೂಡಿದಂತೆ; ಅದಕ್ಕೆ ಕಾರಣ ಅವನು ಸೈನ್ಯದ ಹಿತಕ್ಕೆ ವಿರುದ್ಧವಾಗಿ ಜನಪ್ರಿಯತೆಯನ್ನು ಪಡೆಯಲು ಯತ್ನಿಸುತ್ತಿರುವನೆಂಬ ಸಂಶಯ. ನಾಲ್ಕು ವರ್ಷಗಳ ಹಿಂದೆ ಮಾಡಿದಂತೆಯೇ, ಜನರಲ್‌ರು ಈಗ ಅವನನ್ನು ಹಿಂಬಾಲಿಸಿ ಚಲನವಲನಗಳನ್ನು ಗಮನಿಸಿ, ಅವನ ವಿರುದ್ಧದ ಎಲ್ಲ ಬಗೆಯ ವದಂತಿಗಳನ್ನು ಕೇಳಿ, ತಮ್ಮ ಸಂಶಯಗಳ ಕತ್ತಲಲ್ಲಿ ಒಂದಷ್ಟು ಬೆಳಕನ್ನು ಕಾಣಲು ತವಕಿಸಿದ್ದರು.

ಒಂದು ರಾತ್ರಿ, ಕ್ಯಾರೆನೋ ನಿದ್ದೆ ಮಾಡುತ್ತಿದ್ದನೋ ಎಚ್ಚರವಾಗಿದ್ದನೋ ತಿಳಿದಿರಲಿಲ್ಲ, ದೇಶದ ಹಿತದ ಉದ್ದೇಶದಿಂದ ಮಾಡುವ ದ್ರೋಹವೂ ಸರಿಯಾದುದೇ ಎಂದು ಪಕ್ಕದ ಕೋಣೆಯಲ್ಲಿ ಅವನು ಹೇಳಿದ್ದು ಕೇಳಿಸಿತ್ತು. ಆಗ ಜನರಲ್ ಅವನ ತೋಳು ಹಿಡಿದುಕೊಂಡು ಮೊಗಸಾಲೆಗೆ ಕರೆದೊಯ್ದು, ಅನಿವಾರ್ಯ ಸನ್ನಿವೇಶಗಳಲ್ಲಿ ಮಾತ್ರ ಬಳಸುತ್ತಿದ್ದ ತಮ್ಮ ಲೆಕ್ಕಾಚಾರದ ಆತ್ಮೀಯತೆಯ ಮೂಲಕ ಅವನನ್ನು ತಮ್ಮ ದುರ್ದಮ್ಯ ವರ್ಚಸ್ಸಿನ ಮೋಡಿಗೊಳಪಡಿಸಿದರು. ಕ್ಯಾರೆನೋ ಆಗ ಸತ್ಯವನ್ನು ಒಪ್ಪಿಕೊಂಡ. ಆದರೆ ತಮ್ಮ ಕೆಲಸವನ್ನು ಮೂಲೆಗೊತ್ತಿ ತಾವೆಷ್ಟು ಅಸಹಾಯಕರೆಂಬುದರ ಬಗ್ಗೆ ಚಿಂತಿಸದ ಜನರಲ್‌ರ ಕುರಿತು ಕಹಿ

ಭಾವನೆಯೇ ಉಂಟಾಯಿತು. ಆದರೆ ಮಗ್ಗುಲು ಬದಲಾಯಿಸುವ ಯೋಜನೆ ನಿಷ್ಠೆಯಿಂದ ಕೂಡಿತ್ತು. ಈ ಕುರುಡು ವ್ಯಕ್ತಿಯ ಪಯಣದಲ್ಲಿ ಭರವಸೆಯ ಬೆಳಕನ್ನು ಹುಡುಕಿ ದಣಿದು, ಆತ್ಮವಿಲ್ಲದ ಬದುಕನ್ನು ಸಾಗಿಸಲು ಸಾಧ್ಯವಿಲ್ಲದೆ, ಅವನು ವೆನಿಝೂಲಕ್ಕೆ ಓಡಿ ಹೋಗಿ ದೇಶದ ಒಗ್ಗೂಡಿಕೆಗಾಗಿ ಒಂದು ಆಂದೋಲನವನ್ನು ಸಂಘಟಿಸುವ ನಿರ್ಧಾರ ಕೈಗೊಂಡಿದ್ದ.

"ಇದಕ್ಕಿಂತ ಉತ್ತಮವಾದುದನ್ನು ನಾನು ಕಲ್ಪಿಸಿಕೊಳ್ಳಲಾರೆ" ಎಂದು ತನ್ನ ಮಾತನ್ನು ಮುಗಿಸಿದ್ದ.

"ನಿನಗೆ ವೆನಿಝೂಲದಲ್ಲಿ ಹೆಚ್ಚು ಮಾನ್ಯತೆ ದೊರಕುವುದೆಂಬ ನಂಬಿಕೆಯಿದೆಯೇ?" ಜನರಲ್‌ರ ಪ್ರಶ್ನೆ.

ಹೌದು ಎಂದು ಹೇಳುವ ಧೈರ್ಯ ಕ್ಯಾರೆನೋನಲ್ಲಿರಲಿಲ್ಲ.

"ಸರಿಯೇ, ಆದರೆ ಕನಿಷ್ಠ ಪಕ್ಷ, ಸ್ವದೇಶದಲ್ಲಿರಬಹುದಲ್ಲ" ಎಂದ.

"ಹುಚ್ಚು ಮಾತು. ನಮಗೆ ಅಮೆರಿಕವೇ ಸ್ವದೇಶ, ಆದರೆ ಅದರ ಪರಿಸ್ಥಿತಿಯೂ ಅಷ್ಟೇ: ಕಗ್ಗತ್ತಲು."

ಮುಂದೆ ಮಾತನಾಡಲು ಜನರಲ್ ಅವನಿಗೆ ಅವಕಾಶವನ್ನು ಕೊಡಲಿಲ್ಲ. ಅವನೊಡನೆ ದೀರ್ಘ ಕಾಲ ಮಾತನಾಡಿ, ತಮ್ಮ ಮನಸ್ಸಿನಾಳದ ಮಾತುಗಳನ್ನು ಹೇಳಿದರು; ಆದರೆ ಕ್ಯಾರೆನೋ ಆಗಲಿ ಬೇರೆಯವರಾಗಲೀ ಅದು ಸಮಂಜಸವೇ ಎಂಬುದು ತಿಳಿಯುವಂತಿರಲಿಲ್ಲ. ಕೊನೆಗೆ ಅವನ ಭುಜವನ್ನು ಚಪ್ಪರಿಸಿ ಕತ್ತಲಲ್ಲಿ ಬಿಟ್ಟು ಹೊರಬಂದರು.

"ಭ್ರಮಾಲೋಕವನ್ನು ಸೃಷ್ಟಿಸಿಕೊಳ್ಳಬೇಡ, ಕ್ಯಾರೆನೋ. ಎಲ್ಲ ಹಾಳಾಗಿದೆ"ಎಂದರು.

ಜೂನ್ ಹದಿನಾರರ ಬುಧವಾರದಂದು ಸುದ್ದಿ ಬಂತು: ಕಾಂಗ್ರೆಸ್ ತಮಗೆ ಜೀವಿತಾವಧಿಗೆ ನೀಡಲು ಒಪ್ಪಿದ್ದ ಪಿಂಚಣಿಯ ಪ್ರಸ್ತಾವನೆಗೆ ಸರ್ಕಾರ ಮಂಜೂರಾತಿ ನೀಡಿತ್ತು. ಜನರಲ್ ರಾಷ್ಟ್ರಾಧ್ಯಕ್ಷರಿಗೆ ಒಂದು ಔಪಚಾರಿಕ ಪತ್ರವನ್ನು ಬರೆದು ಕೃತಜ್ಞತೆಯನ್ನು ಸೂಚಿಸಿದ್ದರು, ಅದರಲ್ಲಿ ವ್ಯಂಗ್ಯದ ಸೆಳಕು ಇಲ್ಲದಿರಲಿಲ್ಲ. ಪತ್ರದ ಒಕ್ಕಣೆಯನ್ನು ಹೇಳಿ ಬರೆಸಿದ್ದು ಮುಗಿದ ಮೇಲೆ ಜೋಸೆ ಪೆಲಾಸಿಯೋಸ್ ಅನ್ನು ಅನುಕರಿಸುವ ಗೌರವಸೂಚಕ ಬಹುವಚನದಲ್ಲಿ ಗಂಭೀರವಾದ ದನಿಯಲ್ಲಿ ಫೆರ್ನಾಂಡೋಗೆ ಹೀಗೆಂದರು: "ನಾವೀಗ ಶ್ರೀಮಂತರಾದೆವು!" ಜೂನ್ ಹನ್ನೆರಡು ಮಂಗಳವಾರದಂದು ಅವರು ದೇಶವನ್ನು ಬಿಡಲು ಪಾಸ್‌ಪೋರ್ಟ್ ಕೂಡ ಬಂತು. ಅದನ್ನು ಗಾಳಿಯಲ್ಲಿ ಆಡಿಸುತ್ತ ಅವರೆಂದಿದ್ದರು: "ನಾವೀಗ ಸ್ವತಂತ್ರರಾಗಿದ್ದೇವೆ!" ಎರಡು ದಿನಗಳ ಬಳಿಕ, ಜೋಲಿಮಂಚದಲ್ಲಿ ಒಂದು ಗಂಟೆ ಅವಧಿಯ ಹೊರಳಾಟದ ನಂತರ ಕಣ್ಣುಬಿಟ್ಟು ಮೇಲೆದ್ದಾಗ ಹೀಗೆಂದರು: "ನಾವೀಗ ವಿಷಾದದಿಂದಿದ್ದೇವೆ!" ಇನ್ನು ತಡಮಾಡದೆ ಕಾರ್ಟಜೆನಕ್ಕೆ ಹೊರಡಲು ನಿರ್ಧರಿಸಿದರು, ಏಕೆಂದರೆ ತಂಪಾದ ಮೋಡ ತುಂಬಿದ ಹವೆ ಪ್ರಯಾಣಕ್ಕೆ ಪ್ರಶಸ್ತವಾಗಿತ್ತು. ತಮ್ಮ ಸೇನಾಧಿಕಾರಿಗಳಿಗೆ ನೀಡಿದ್ದ ಒಂದೇ ನಿರ್ದಿಷ್ಟ ಆಜ್ಞೆಯೆಂದರೆ, ಅವರು ನಾಗರಿಕ ವಸ್ತ್ರಗಳನ್ನು ಧರಿಸಬೇಕು ಹಾಗೂ ಯಾವುದೇ ಆಯುಧಗಳನ್ನು ಹಿಡಿಯಬಾರದು ಎಂಬುದು. ಅದಕ್ಕೆ ಅವರು ಯಾವುದೇ ವಿವರಣೆಯನ್ನು ನೀಡಲಿಲ್ಲ, ತಮ್ಮ ಉದ್ದೇಶದ ಬಗ್ಗೆ ಯಾರೂ ಊಹಿಸಲು ಅವಕಾಶ ನೀಡುವ ಯಾವುದೇ ಸುಳಿಹು ಕೊಡಲಿಲ್ಲ, ಬೇಕಾದವರಿಗೆ ಹೇಳಿ ಬೀಳ್ಕೊಳ್ಳಲೂ ಅವಕಾಶ ಕೊಡಲಿಲ್ಲ. ಮೈಗಾವಲ ಭಟರು ಸಿದ್ಧರಾದ ತಕ್ಷಣ ಅಧಿಕಾರಿಗಳು ತಾವೂ ಹೊರಡಲು ಸಜ್ಜಾದರು, ಅವರ ಸಾಮಾನು ಸರಂಜಾಮುಗಳನ್ನು ಉಳಿದ ಪರಿವಾರದೊಡನೆ ಹಿಂದಿನಿಂದ ತರುವ ಏರ್ಪಾಟಾಗಿತ್ತು.

ಪ್ರಯಾಣ ಕಾಲದಲ್ಲಿ ಜನರಲ್ ತಮಗೆದುರಾಗುವ ಜನತೆಯ ಕಷ್ಟಕಾರ್ಪಣ್ಯಗಳನ್ನು ವಿಚಾರಿಸುವ ಪರಿಪಾಟ ನಡೆದು ಬಂದಿತ್ತು: ಮಕ್ಕಳು ಮರಿಗಳ ವಯಸ್ಸು, ಅವರಿಗಿರಬಹುದಾದ ಕಾಯಿಲೆ, ವ್ಯವಹಾರ ವಹಿವಾಟುಗಳ ಪರಿಸ್ಥಿತಿ, ಯಾವುದೇ ವಿಷಯದ ಬಗ್ಗೆ ಅವರಿಗಿದ್ದ ಅಭಿಪ್ರಾಯ – ಹೀಗೆ. ಇಂಥ ಸಂದರ್ಭಗಳಲ್ಲಿ ಅವರೊಂದು ಮಾತನ್ನೂ ಆಡುತ್ತಿರಲಿಲ್ಲ, ಗತಿಯನ್ನು ಬದಲಿಸುತ್ತಿರಲಿಲ್ಲ, ಕೆಮ್ಮುತ್ತಿರಲಿಲ್ಲ,

ದಣಿವಾದಾಗಲೂ ಅದರ ಸುಳಿವು ಕೊಡುತ್ತಿರಲಿಲ್ಲ, ಆಗೆಲ್ಲ ದಿನದಲ್ಲಿ ಅವರು ಸೇವಿಸುತ್ತಿದ್ದುದು ಒಂದು ಬಟ್ಟಲು ಪೋರ್ಟ್ ದ್ರಾಕ್ಷಾರಸವನ್ನು ಮಾತ್ರ. ಮಧ್ಯಾಹ್ನ ಸುಮಾರು ನಾಲ್ಕು ಗಂಟೆಗೆ ಲ ಪೋಪ ಗುಡ್ಡದ ಮೇಲಿದ್ದ ಹಳೆಯ ಕಾನ್ವೆಂಟ್ ದಿಗಂತದ ಅಂಚಿನಲ್ಲಿರುವಂತೆ ಕಾಣುತ್ತಿತ್ತು. ಅದು ಸಾರ್ವಜನಿಕ ಪ್ರಾರ್ಥನೆಗಳನ್ನು ಸಲ್ಲಿಸುವ ಕಾಲ, ರಾಜಮಾರ್ಗದಲ್ಲಿ ಕಡಿದಾದ ಕಂದರದ ಇಳಿಜಾರಿನಲ್ಲಿ ಸಾಗುತ್ತಿದ್ದ ಯಾತ್ರಾರ್ಥಿಗಳು ಸಾಲುಗಟ್ಟಿದ ಇರುವೆಗಳಂತೆ ಕಾಣುತ್ತಿದ್ದರು. ಕೊಂಚ ಸಮಯದ ಬಳಿಕ ದೂರದಲ್ಲಿ ಟರ್ಕಿ ಬಝರ್ಡ್‌ಗಳು ಸಾರ್ವಜನಿಕ ಮಾರುಕಟ್ಟೆ ಹಾಗೂ ಕಸಾಯಿಖಾನೆಯ ನೀರಿನ ಸುತ್ತ ಹಾರಾಡುವ ದೃಶ್ಯ ಕಾಣಿಸಿತು. ಗೋಡೆಯನ್ನು ಕಂಡ ಜನರಲ್ ತಮ್ಮ ಆಸರೆಗಾಗಿ ಊರೆಗೋಲನ್ನು ನೀಡಲು ಬಂದ ಜೋಸೆ ಮರಿಯ ಕ್ಯಾರೆನೋ ಕಡೆ ಹೆಜ್ಜೆಯಿಟ್ಟು "ನಿಮಗೆ ರಹಸ್ಯ ಸಂದೇಶವೊಂದನ್ನು ತಂದಿದ್ದೇನೆ" ಎಂದು ಪಿಸುಮಾತಿನಲ್ಲಿ ನುಡಿದು, "ನಾವು ತಲುಪಿದ ತಕ್ಷಣ ಸ್ಯೂಕ್ರೆ ಎಲ್ಲಿ ಹೋದ ಎಂಬುದನ್ನು ಪತ್ತೆ ಹಚ್ಚು" ಎಂದು ಸೂಚಿಸಿದರು. ಆನಂತರ ಬೀಳ್ಕೊಡಲು ಎಂದಿನಂತೆ ಅವನ ಭುಜ ಚಪ್ಪರಿಸಿ, "ಈ ವಿಷಯ ನಮ್ಮಿಬ್ಬರಲ್ಲೇ ಇರಲಿ" ಎಂದು ಮಾತು ಮುಗಿಸಿದರು.

ರಾಜಮಾರ್ಗದಲ್ಲಿ ಮಾಂಟಿಲ್ಲ ದೊಡ್ಡ ಗುಂಪೊಂದರ ಜೊತೆಗೆ ಅವರ ಬರವಿಗಾಗಿ ಎದುರು ನೋಡುತ್ತ ನಿಂತಿದ್ದರು. ಸ್ಪಾನಿಶ್ ಜನರಲ್ ಏರ್ಪಡಿಸಿದ್ದ ಹಾಗೂ ಚುರುಕು ಹೇಸರಗತ್ತೆಗಳು ಎಳೆಯುತ್ತಿದ್ದ ಹಳೆಯ ಗಾಡಿಯಲ್ಲಿ ಜನರಲ್ ಕೊನೆತನಕ ತಮ್ಮ ಪಯಣವನ್ನು ಮುಂದುವರೆಸಬೇಕಾಗಿತ್ತು. ಸೂರ್ಯ ಇಳಿಯುತ್ತಿದ್ದರೂ, ಮಾವಿನ ತೋಪಿನ ಮರದ ಕೊಂಬೆಗಳು ನಗರವನ್ನು ಸುತ್ತುವರಿದ ಅವಶೇಷಗಳ ಕಾವಿನಲ್ಲಿ ಉರಿಯುವಂತೆ ಕಾಣುತ್ತಿದ್ದವು. ಒಂದು ಶತಮಾನದಿಂದ ಕೊಳೆತು ಬಿದ್ದಿದ್ದ ಕಸಾಯಿಖಾನೆಯ ರಕ್ತ ಮತ್ತು ಮಾಂಸದ ತುಂಡುಗಳ ಗಬ್ಬು ವಾಸನೆ ಕೊಲ್ಲಿಗಿಂತ ಅಸಹ್ಯಕರವಾಗಿತ್ತು, ಅನಾರೋಗ್ಯಕರವಾಗಿತ್ತು. ಅವರು ಮೀಡಿಯ ಲೂನ ಗೇಟ್ ಅನ್ನು ಹಾದು ಹೋದಾಗ ಬಯಲು ಮಾರುಕಟ್ಟೆಯಲ್ಲಿದ್ದ ಟರ್ಕಿ ಬಝರ್ಡ್‌ಗಳ ಒಂದು ದಂಡು ಗಾಬರಿಗೊಂಡು ಮೇಲೆದ್ದು ಹಾರತೊಡಗಿದವು. ಬೆಳಿಗ್ಗೆ ತಾನೇ ಒಂದು ಹುಚ್ಚು ನಾಯಿ ಬೇರೆ ಬೇರೆ ವಯಸ್ಸಿನ ಏಳು ಮಂದಿಯನ್ನು ಕಚ್ಚಿತ್ತು. ಅದರಲ್ಲಿ ಒಬ್ಬಾಕೆ ಕ್ಯಾಸ್ಟಿಲ್‌ನ ಬಿಳಿ ಹೆಂಗಸು, ಯಾವ ನಿರ್ದಿಷ್ಟ ಕೆಲಸ ಇಲ್ಲದಿದ್ದರೂ ಆಕೆ ಅಲ್ಲಿ ಸುಳಿದಾಡುತ್ತಿದ್ದಳು; ಕೆಲವರು ತೊತ್ತುಗಳ ಮನೆಗಳಗೆ ಸೇರಿದ್ದ ಹುಡುಗರು, ಅವರೆಲ್ಲ ಸೇರಿ ಕಲ್ಲು ಹೊಡೆದು ನಾಯಿಯನ್ನು ಸಾಯಿಸಿದ್ದರು. ಆದರೆ ನಾಯಿ ಮೂಡಿಸಿದ್ದ ಭಯ ಇನ್ನೂ ಅಲ್ಲೇ ಸುಳಿದಾಡುತ್ತಿತ್ತು. ನಾಯಿಯ ದೇಹವನ್ನು ಶಾಲೆಯ ಬಾಗಿಲಿಗೆ ನೇತುಹಾಕಿದ್ದರು. ಆಮೇಲೆ ಜನರಲ್

ಮಾಂಟಿಲ ಅದನ್ನು ಸುಡಲು ಏರ್ಪಾಟು ಮಾಡಿದ್ದರು; ಅದಕ್ಕಿದ್ದದ್ದು ಕೇವಲ ಆರೋಗ್ಯದ ಕಾರಣವಲ್ಲ, ನಾಯಿಯ ಕೇಡುಗ ಪ್ರೇತವನ್ನು ಜನ ಆಫ್ರಿಕನ್ ಮಾಟದಿಂದ ಬಿಡಿಸಲು ಪ್ರಯತ್ನಿಸುವುದನ್ನು ತಪ್ಪಿಸುವುದು.

ಜರೂರಾಗಿ ಹೇಳಿ ಕಳಿಸಿದ್ದರಿಂದಾಗಿ ಆ ಪ್ರದೇಶದ ನಿವಾಸಿಗಳು ಬೀದಿಗೆ ಬಂದಿದ್ದರು. ಉತ್ತರಾಯಣದ ಕಾರಣದಿಂದ ಆಗಿನ ಮಧ್ಯಾಹ್ನಗಳು ಪಾರದೀಪಕವಾಗಿಯೂ ನಿಧಾನವಾಗಿಯೂ ಆಗುತ್ತಿದ್ದವು. ಮನೆಯ ಬಾಲ್ಕನಿಗಳಲ್ಲಿ ಹೂತೋರಣಗಳು ರಾರಾಜಿಸುತ್ತಿದ್ದವು, ಹೆಂಗಸರು ಮಡ್ರಿಡ್‌ನ ಜನಪ್ರಿಯ ಶೈಲಿಯಲ್ಲಿ ಉಡುಪುಗಳನ್ನು ಧರಿಸಿದ್ದರು. ಚರ್ಚ್ ಗಂಟೆಗಳ ಸದ್ದು, ಸೈನಿಕ ಬ್ಯಾಂಡ್ ಸಂಗೀತ, ಕುಶಾಲ ತೋಪಿನ ಭಾರಿ ಶಬ್ದವೆಲ್ಲ ಸೇರಿ ಸಮುದ್ರದವರೆಗೂ ವ್ಯಾಪಿಸಿತ್ತು. ಆದರೆ ಜನರು ತಮ್ಮ ದುರವಸ್ಥೆಯನ್ನು ಮಾತ್ರ ಮರೆಮಾಚಲು ಸಾಧ್ಯವಾಗಿರಲಿಲ್ಲ. ತಮ್ಮ ಕಿರುಗುಟ್ಟುವ ಗಾಡಿಯಿಂದ ಹ್ಯಾಟನ್ನು ಬೀಸುವಾಗ ಜನರಲ್‌ರಿಗೆ ಸಂದರ್ಭದ ಕೊರೆ ಕಾಣುತ್ತಿತ್ತು; ೧೮೧೩ ರ ಆಗಸ್ಟ್‌ನಲ್ಲಿ ತಾವು ಕ್ಯಾರಕಾಸ್ ಪ್ರವೇಶಿಸಿದಾಗ ದೊರೆತಿದ್ದ ಭವ್ಯ ಸ್ವಾಗತದ ಸನ್ನಿವೇಶವನ್ನು ಅವರ ಮನಸ್ಸು ಇದರೊಂದಿಗೆ ಹೋಲಿಸುತ್ತಿತ್ತು. ತಮಗೆ ಕಿರೀಟ ತೊಡಿಸಿ ಹಾರತುರಾಯಿಗಳಿಂದ ಅಲಂಕರಿಸಿ ಕುಳ್ಳಿರಿಸಿದ್ದ ಗಾಡಿಯನ್ನು ನಗರದ ಆರು ಮಂದಿ ಕಡುಚೆಲುವೆಯರು ಎಳೆಯುತ್ತಿದ್ದರು, ಜನ ಸುತ್ತಲೂ ನಿಂತು ಕಣ್ಣಲ್ಲಿ ಆನಂದಬಾಷ್ಪವನ್ನು ತುಂಬಿಕೊಂಡಿದ್ದರು. ತಮ್ಮ ಹಿರಿಮೆಯ ತುತ್ತತುದಿಯ ಸಂಕೇತ ಅದು. ತಮ್ಮನ್ನು ಜನ 'ವಿಮೋಚನೆಯ ಹರಿಕಾರ' ಎಂದು ಕರೆದಿದ್ದರು. ಕ್ಯಾರಕಾಸ್ ಆಗಿನ್ನೂ ವಸಾಹತು ಪ್ರದೇಶದ ಮೂಲೆಯೊಂದರ ಊರು: ಕೊಳಕಾದ, ವಿಷಾದಭರಿತವಾದ, ಸಾಧಾರಣ ಊರು. ಆದರೆ ಆವಿಲದ ಮಧ್ಯಾಹ್ನ ಅವರ ನೆನಪುಗಳನ್ನು ತುಂಡರಿಸಿತು.

ಈ ಎರಡೂ ನೆನಪುಗಳು ಒಂದೇ ಜೀವಿತಕ್ಕೆ ಸೇರಿದವೆಂಬಂತೆ ಕಾಣಲಿಲ್ಲ, ಏಕೆಂದರೆ ಕಾರ್ಟಜೆನ ದ ಇಡಿಯಾಸ್ ಎಂಬ ವೀರನಗರಿಯು ಅನೇಕ ಕಾಲ ವೈಸ್‌ರಾಯ್‌ನ ರಾಜಧಾನಿಯಾಗಿತ್ತು, ಜಗತ್ತಿನ ಅತ್ಯಂತ ಸುಂದರ ಊರುಗಳಲ್ಲಿ ಅದೂ ಒಂದು ಎಂದು ಹೆಸರಾಗಿತ್ತು, ಆದರೆ ಈಗ ಅದರ ಹಳೆಯ ವೈಭವದ ನೆರಳು ಕೂಡ ಉಳಿದಿರಲಿಲ್ಲ. ಭೂಮಿ ಮತ್ತು ನೀರಿನ ಮೇಲಿನಿಂದಾದ ಒಂಬತ್ತು ಸೈನಿಕ ದಾಳಿಗಳಿಗೆ ಅದು ತುತ್ತಾಗಿತ್ತು, ಅಲ್ಲದೆ ಅನೇಕ ಸಲ ದರೋಡೆಕೋರರ ಹಾಗೂ ಜನರಲ್‌ಗಳ ಕೋಪಕ್ಕೆ ಪಕ್ಕಾಗಿತ್ತು. ಆದರೆ ಸ್ವಾತಂತ್ರ್ಯ ಸಂಗ್ರಾಮ ಮತ್ತು ಆನಂತರದ ಗುಂಪು ಘರ್ಷಣೆಗಳ ಕಾಲಗಳಲ್ಲಾದಷ್ಟು ಹಾನಿ ಬೇರಾವಾಗಲೂ ಆಗಿರಲಿಲ್ಲ. ಸುವರ್ಣ ಯುಗದಲ್ಲಿದ್ದ ಶ್ರೀಮಂತ ಕುಟುಂಬಗಳೆಲ್ಲ ನಗರವನ್ನು ಬಿಟ್ಟು ಹೋಗಿದ್ದವು. ಹಿಂದಿನ ಗುಲಾಮರಿಗೆ ಬಿಡುಗಡೆಯಿತ್ತರೂ ನಿರುಪಯುಕ್ತರಾಗಿ

ಅವರೆಲ್ಲ ಮೂಲೆಗುಂಪಾಗಿದ್ದರು. ಮಾರ್ಕ್ವಿಸ್‌ಗಳ ಅರಮನೆಗಳಲ್ಲಿ ಅನಾಥರು ಆಶ್ರಯ ಪಡೆದಿದ್ದರು, ಅವುಗಳಲ್ಲಿನ ಬೆಕ್ಕುಗಳಂತಹ ಗಡವ ಹೆಗ್ಗಣಗಳು ಬೀದಿಗಳಲ್ಲಿ ಕಸದ ರಾಶಿಗಳನ್ನೇ ಸೃಷ್ಟಿಸಿದ್ದವು. ಸ್ಪೈನ್‌ನ ದೊರೆ ನಿರೀಕ್ಷಣಾ ಗೋಪುರಗಳಿಂದ ತನ್ನ ದೂರದರ್ಶಕಗಳ ಮೂಲಕ ನೋಡಲು ಇಷ್ಟಪಟ್ಟಿದ್ದ ಊರಿನ ದುರ್ಗಮ ದುರ್ಗಗಳ ಬತೇರಿಗಳು ಸುತ್ತ ಬೆಳೆದ ಮುಳ್ಳುಪೊದೆಗಳಲ್ಲಿ ಮುಳುಗಿದ್ದವು. ಹದಿನೇಳನೆಯ ಶತಮಾನದಲ್ಲಿ ಗುಲಾಮ ವ್ಯಾಪಾರದ ಕಾರಣದಿಂದ ನಡೆಯುತ್ತಿದ್ದ ಭಾರಿ ವಹಿವಾಟುಗಳ ಜಾಗದಲ್ಲಿ ಉಳಿದಿದ್ದುದು ಒಂದೆರಡು ಪಾಳುಬಿದ್ದ ಅಂಗಡಿಗಳು. ಹಿಂದಿನ ವೈಭವಕ್ಕೂ ಈಗಿನ ತೆರೆದ ಚರಂಡಿಗಳಲ್ಲಿನ ಗಬ್ಬು ವಾಸನೆಗೂ ಅಜಗಜಾಂತರ. ನಿಟ್ಟುಸಿರು ಬಿಟ್ಟು ಜನರಲ್ ಮಾಂಟಿಲನ ಕಿವಿಯಲ್ಲಿ ಹೇಳಿದರು:

"ಕೆಲಸಕ್ಕೆ ಬಾರದ ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ ನಾವು ತೆತ್ತ ಬೆಲೆ ಎಂತಹುದು!"

ಆ ರಾತ್ರಿ ಕಾಲ್ ಲ ಫ್ಲ್ಯಾಕ್ಟೋರಿಯ ದಡದ ಮೇಲೆ ಊರೊಡೆಯನ ಮನೆಯಲ್ಲಿ ಮಾಂಟಿಲ ನಗರದ ಉನ್ನತ ಪ್ರಜೆಗಳ ಸಮಾವೇಶವೊಂದನ್ನು ಆಯೋಜಿಸಿದ್ದರು. ಹಿಂದೆ ಆ ಮನೆಯಲ್ಲಿ ವಾಸಿಸುತ್ತಿದ್ದ ಮಾರ್ಕ್ವಿಸ್ ದ ವಾಲ್ಡೆಹೊಯೋಸ್ ಖಳನಾಯಕನಂತೆ ಬಾಳುತ್ತ ಹಿಟ್ಟು ಮತ್ತು ಕಪ್ಪುಜನರ ಕಳ್ಳ ವ್ಯಾಪಾರದಲ್ಲಿ ತೊಡಗಿ ಅಪಾರ ಹಣ ಗಳಿಸಿದ್ದ. ಅಂದು ಪ್ರಮುಖರ ಮನೆಗಳ ಮುಂದೆ ಈಸ್ಟರ್ ದೀಪಗಳನ್ನು ಹಚ್ಚಿದ್ದರು, ಆದರೆ ಜನರಲ್‌ರಿಗೆ ಯಾವುದೇ ಭ್ರಮೆ ಉಳಿದಿರಲಿಲ್ಲ, ಯಾಕೆಂದರೆ ಕ್ಯಾರಿಬಿಯನ್ ದ್ವೀಪಗಳಲ್ಲಿ ಹಬ್ಬ ಆಚರಿಸಲು ಸಾವಿನಿಂದ ಹಿಡಿದು ಏನು ಬೇಕಾದರೂ ನೆವವಾಗಬಹುದು ಎಂಬ ವಿಷಯ ಅವರಿಗೆ ತಿಳಿದಿತ್ತು. ವಾಸ್ತವವಾಗಿ ಅದೊಂದು ಸುಳ್ಳು ಹಬ್ಬ. ಕಳೆದ ಕೆಲವು ದಿನಗಳಿಂದ ಕ್ಷುದ್ರ ಹಡುಗುಗಳ ಹೊರಮೈ ಅಲ್ಲಿ ಕಾಣಿಸಿದ್ದವು, ಮನೆಯೊಳಗಿನಿಂದ ಕಲ್ಲುಗಳನ್ನು ತೂರಿ ಪೋಲೀಸರ ಜೊತೆ ಆಯುಧ ಹಿಡಿದು ಹೋರಾಡಲು ವಿರೋಧ ಪಕ್ಷವು ರೌಡಿಗಳಿಗೆ ಚುಚ್ಚಿಕೊಟ್ಟಿತ್ತು. "ಅದರಿಂದಾಗಿ ಈಗ ಒಡೆಯಲು ಕಿಟಕಿಗಳಲ್ಲಿ ಗಾಜುಗಳೇ ಉಳಿದಿಲ್ಲ" ಎಂದು ಮಾಂಟಿಲ ತಮ್ಮ ಸಹಜ ವಿನೋದದಲ್ಲಿ ಹೇಳಿದ್ದರು. ಜನರ ಕ್ರೋಧವು ಜನರಲ್ ಅವರಿಗಿಂತಲೂ ತಮ್ಮ ವಿರುದ್ಧವೇ ತೀವ್ರವಾಗಿತ್ತೆಂಬುದರ ಅರಿವು ಅವರಿಗಿತ್ತು. ಸಶಸ್ತ್ರ ರಕ್ಷಣಾಬಲಕ್ಕೆ ಸ್ಥಳೀಯ ಯೋಧರನ್ನು ಅವರು ಸೇರಿಸಿದ್ದರು, ಮಾನ್ಯ ಅತಿಥಿಗೆ ಬೀದಿ ಕಾಳಗಗಳ ವಿಷಯ ತಿಳಿಸದಂತೆ ಅವರಿಗೆ ಆಜ್ಞೆ ಮಾಡಿದ್ದರು.

ಆ ರಾತ್ರಿ ಕೌಂಟ್ ದ ರೇಜ್‌ಕೋರ್ಟ್ ಜನರಲ್‌ರಲ್ಲಿಗೆ ಬಂದು ಇಂಗ್ಲಿಷ್ ಅಂಚೆ ದೋಣಿಯು ಬೋಕಾ ಚೀಕಾ ದ ಕೋಟೆಯ ಹತ್ತಿರ

ಬಂದಿದೆಯೆಂದೂ, ಆದರೆ ಅವರು ಹೊರಡುವಂತಿಲ್ಲವೆಂದೂ ಹೇಳಿದ. ಕಾರಣ, ಸಾಗರದ ಅಗಾಧತೆಯನ್ನು ಅದರಲ್ಲಿರುವ ಒಂದೇ ಕ್ಯಾಬಿನ್‌ನಲ್ಲಿ ಇಡುಕಿರಿದ ಹೆಂಗಸರ ಗುಂಪಿನೊಡನೆ ದಾಟಲು ಜನರು ಇಷ್ಟಪಡದಿರುವುದು. ಆದರೆ ಸತ್ಯವೆಂದರೆ, ಟರ್ಬಾಕೋದಲ್ಲಿ ಪುಷ್ಕಳ ಭೋಜನ ದೊರೆತರೂ, ಚಾಲಕರು ಸಾಹಸಿಗಳಾದರೂ, ತಮ್ಮ ಆರೋಗ್ಯ ಸುಧಾರಿಸಲು ಎಲ್ಲ ಪ್ರಯತ್ನಗಳನ್ನು ಮಾಡಿದ್ದರೂ, ಜನರಲ್‌ರು ಪ್ರಯಾಣ ಮಾಡುವ ಸ್ಥಿತಿಯಲ್ಲಿಲ್ಲವೆಂದು ಕೌಂಟ್ ಭಾವಿಸಿದ್ದು. ಲವಲವಿಕೆಯಿಂದಾಗಿ ಪ್ರಯಾಣದ ಆಯಾಸವನ್ನು ಮನಸ್ಸು ಸಹಿಸಬಹುದಾದರೂ, ದೇಹ ಅದಕ್ಕೆ ಸಿದ್ಧವಾಗಿರಲಿಲ್ಲವಾದ್ದರಿಂದ ಜನರಲ್‌ರನ್ನು ಸಾವಿಗೆ ಒಪ್ಪಿಸಲು ಅವನು ಸಿದ್ಧನಾಗಿರಲಿಲ್ಲ. ಆದರೆ ಯಾವುದೇ ಕಾರಣವು ಜನರಲ್‌ರು ಆ ರಾತ್ರಿ ಕೈಗೊಂಡ ನಿರ್ಧಾರವನ್ನು ಅಲುಗಾಡಿಸಲು ಶಕ್ಯವಾಗಲಿಲ್ಲ.

ಮಾಂಟಲ ಸೋಲನ್ನೊಪ್ಪಕೊಳ್ಳಲಿಲ್ಲ. ಅತಿಥಿಗಳಿಗೆ ಬೀಳ್ಕೊಡಿಗೆಯ ಮಾತುಗಳನ್ನು ಮುಂಚೆಯೇ ಹೇಳಿ ಕಾಯಿಲೆಯ ವ್ಯಕ್ತಿ ವಿಶ್ರಾಂತಿ ಪಡೆಯಲು ಅನುವು ಮಾಡಿಕೊಟ್ಟ. ಆದರೆ ಜನರಲ್‌ರು ಬಾಲ್ಕನಿಯಲ್ಲಿ ಕುಳಿತು ಕಾಣದಷ್ಟು ತೆಳುವಾದ ಮಸ್ಲಿನ್ ಟ್ಯೂನಿಕ್ ತೊಟ್ಟ ಹರೆಯದ ಹುಡುಗಿಯೊಬ್ಬಳು ಹಾರ್ಪ್ ವಾದ್ಯದೊಡನೆ ಹೇಳಿದ ಏಳು ಪ್ರಣಯಗೀತಗಳನ್ನು ಕೇಳುತ್ತ ಸ್ವಲ್ಪ ದೀರ್ಘ ಕಾಲವೇ ಕುಳಿತಿರಬೇಕಾಯಿತು. ಗೀತೆಗಳು ಎಷ್ಟು ಚೆಲುವಾಗಿದ್ದವೆಂದರೆ, ಅವುಗಳನ್ನು ಹಾಡಿದ ಪರಿ ಎಂಥ ಚೆಂದವಾಗಿತ್ತೆಂದರೆ, ಸಮುದ್ರದ ತಂಗಾಳಿಯು ಸಂಗೀತದ ಕೊನೆಯ ಪಲುಕುಗಳನ್ನು ಪೂರ್ತಿ ತೇಲಿಸಿಕೊಂಡು ಹೋಗುವವರೆಗೂ ಇಬ್ಬರೂ ಜನರಲ್‌ಗಳ ಬಾಯಲ್ಲಿ ಮಾತೇ ಹೊರಡಲಿಲ್ಲ. ತೂಗುಕುರ್ಚಿಯಲ್ಲಿ ಮಂಪರಿನಲ್ಲಿ ಕುಳಿತಿದ್ದ ಜನರಲ್ ವಾದ್ಯದ ನಾದದ ಅಲೆಗಳ ಮೇಲೆ ತೇಲುತ್ತಿದ್ದರು; ಒಳಗೇ ಪುಲಕಗೊಂಡು, ಪೂರ್ವಸೂಚನೆಯಿಲ್ಲದೆ ಕೊನೆಯ ಹಾಡಿನ ಚರಣಗಳನ್ನೆಲ್ಲ ಸ್ಪಷ್ಟವಾಗಿಯೂ ಇಂಪಾದ ಮೆಲುದನಿಯಲ್ಲಿ ಹಾಡಿಕೊಂಡರು. ಸಂಗೀತ ಮುಗಿದ ಮೇಲೆ ವಾದ್ಯಗಾರ್ತಿಯ ಕಡೆ ತಿರುಗಿ ಮನದಾಳದಿಂದ ಉಕ್ಕಿ ಬಂದ ಕೃತಜ್ಞತೆಯ ಮಾತುಗಳನ್ನು ಪಿಸುದನಿಯಲ್ಲಿ ಹೇಳಿದರು. ಅವರಿಗೆ ಕಾಣುತ್ತಿದ್ದುದೆಲ್ಲ ಬಾಡಿದ ಹೂದಂಡೆಯನ್ನು ತೊಟ್ಟ ಹಾರ್ಪ್ ಮಾತ್ರವೇ. ಆಗ ಅವರಿಗೆ ನೆನಪಾಯಿತು.

"ಹೊಂಡದಲ್ಲಿ ಪುರಾವೆ ಸಹಿತ ಸೆರೆಯಲ್ಲಿರುವ ಒಬ್ಬ ಕೊಲೆಯ ಆಪಾದಿತನಿದ್ದಾನೆ."

ಅವನ ಚಾಟು ಮಾತು ಮುಗಿಯುವ ಮೊದಲೇ ಮಾಂಟಿಲ ನಕ್ಕರು.

"ಅವನ ಕೊಂಬುಗಳ ಬಣ್ಣವೇನು?"

ಅದನ್ನು ಗಮನಿಸದೆ ಜನರಲ್ ಆ ವಿಷಯದ ಬಗ್ಗೆ ವಿವರವಾಗಿ ಹೇಳಿದರು, ಆದರೆ ಜಮೈಕದಲ್ಲಿ ಮಿರಾಂಡ ಲಿಂಡ್ಸೇ ಜೊತೆಗೆ ತಮಗಿದ್ದ ಪರಿಚಯವನ್ನು ಮಾತ್ರ ತಿಳಿಸಲಿಲ್ಲ. ಮಾಂಟಿಲ ಸರಳ ಪರಿಹಾರವೊಂದನ್ನು ಸೂಚಿಸಿದರು.

"ಅನಾರೋಗ್ಯದ ಕಾರಣವೊಡ್ಡಿ ಅವನು ಇಲ್ಲಿಗೆ ವರ್ಗಾವಣೆಗಾಗಿ ಕೇಳಿಕೊಳ್ಳಲಿ. ಒಮ್ಮೆ ಇಲ್ಲಿ ಬಂದರೆ ಕ್ಷಮಾದಾನಕ್ಕೆ ಏರ್ಪಾಟು ಮಾಡಬಹುದು."

"ಅದನ್ನು ನೀವು ಮಾಡಬಲ್ಲಿರಾ?" ಜನರಲ್‌ರ ಪ್ರಶ್ನೆ.

"ಉಹ್ಞೂ, ನಾನಲ್ಲ, ನಾವು."

ರಾತ್ರಿಯ ನಾಯಿಯ ಬೊಗಳುವಿಕೆಯನ್ನು ಗಮನಕ್ಕೆ ತಂದುಕೊಳ್ಳದೆ ಜನರಲ್ ಕಣ್ಣುಗಳನ್ನು ಮುಚ್ಚಿಕೊಂಡರು, ಅವರಿಗೆ ನಿದ್ದೆ ಹತ್ತಿರಬೇಕೆಂದು ಮಾಂಟಿಲ ಭಾವಿಸಿದರು. ನಿಡುಗಾಲದ ಆಲೋಚನೆಯ ಬಳಿಕ ಕಣ್ಣು ತೆರೆದು ವಿಷಯವನ್ನು ಅಲ್ಲಿಗೇ ಬಿಟ್ಟರು.

"ಆಗಲಿ, ಆದರೆ ನನಗೇನೂ ತಿಳಿಯದು."

ಆಗ ಅವರ ಗಮನಕ್ಕೆ ಬಂದುದೆಂದರೆ ಬೊಗಳುವಿಕೆಯು ಗೋಡೆಗಳ ಪ್ರದೇಶದ ನಡುವಿನ ಕೇಂದ್ರದಿಂದ ಹೊರಟು ದೂರದ ಜೌಗು ನೆಲದವರೆಗೂ ಹರಡುತ್ತಿದ್ದರೂ, ಅಲ್ಲಿನ ನಾಯಿಗಳು ಮಾತ್ರ ಪ್ರತಿಯಾಗಿ ಬೊಗಳಿ ಯಜಮಾನರಿರುವ ಸ್ಥಳದ ಬಗ್ಗೆ ತಿಳಿಸದಿರುವಂತೆ ತರಬೇತಿ ನೀಡಿದ್ದ ಅಂಶ. ರೇಬಿಸ್ ಹರಡದಿರುವಂತೆ ಬೀದಿ ನಾಯಿಗಳಿಗೆ ವಿಷವಿಕ್ಕಿ ಕೊಲ್ಲುತ್ತಿದ್ದ ಅಂಶವನ್ನು ಮಾಂಟಿಲ ಅವರಿಗೆ ಅರುಹಿದರು. ನಾಯಿ ಕಚ್ಚಿದ್ದ ಇಬ್ಬರು ಮಕ್ಕಳನ್ನು ಮಾತ್ರ ಗುಲಾಮ ವಲಯದಲ್ಲಿ ಪತ್ತೆ ಹಚ್ಚಲಾಗಿತ್ತು. ಮಿಕ್ಕವರನ್ನು, ಎಂದಿನಂತೆಯೇ ತಾಯ್ತಂದೆಯರು ಬಚ್ಚಿಟ್ಟುಕೊಂಡು ತಮ್ಮ ದೇವರ ಸನ್ನಿಧಿಯಲ್ಲಿಯೇ ಸಾಯಲು ಅವಕಾಶ ಮಾಡಿಕೊಡುತ್ತಿದ್ದರು; ಅಥವಾ ಮಾಟಗಾರ ವೈದ್ಯರ ಚಿಕಿತ್ಸೆಯಿಂದ ಪಾರು ಮಾಡಲು ಮರಿಯಲಬಾಜಾ ಪ್ರದೇಶದ ದೇಶಭ್ರಷ್ಟ ಗುಲಾಮರ ಬಳಿಗೆ ಅವರನ್ನು ಸರ್ಕಾರಕ್ಕೆ ಸುಳಿವು ಸಿಕ್ಕದ ರೀತಿಯಲ್ಲಿ ಕರೆದುಕೊಂಡು ಹೋಗುತ್ತಿದ್ದರು.

ಇಂತಹ ಕರಾಳ ಆಚರಣೆಗಳನ್ನು ತಡೆಯಲು ಜನರಲ್ ಯಾವಾಗಲೂ ಪ್ರಯತ್ನಿಸಿರಲಿಲ್ಲ, ಆದರೆ ನಾಯಿಗಳಿನ್ನು ವಿಷವಿಕ್ಕಿ ಕೊಲ್ಲವುದು ಮಾನವ ಪರಿಸ್ಥಿತಿಗೆ ತಕ್ಕುದಲ್ಲವೆಂಬುದು ಅವರ ಅನಿಸಿಕೆ. ಅವರಿಗೆ ನಾಯಿಗಳ ಬಗ್ಗೆ ಕುದುರೆ ಮತ್ತು ಹೂಗಳ ಬಗ್ಗೆಯಿರುವಷ್ಟೇ ಪ್ರೀತಿ. ಮೊದಲನೆಯ ಬಾರಿ ಅವರು ಯೂರೋಪ್‌ಗೆ ಹೋಗಿದ್ದಾಗ, ತಮ್ಮ ಜೊತೆಯಲ್ಲಿ ವೆರಾಕ್ರೂಜ್‌ವರೆಗೂ ಒಂದು ಜೊತೆ ನಾಯಿಮರಿಗಳನ್ನೂ ಒಯ್ದಿದ್ದರು. ನ್ಯೂ ಗ್ರೆನೆಡಾವನ್ನು ಬಿಡುಗಡೆಗೊಳಿಸಿ ಕೊಲಂಬಿಯ

ಗಣರಾಜ್ಯವನ್ನು ಸ್ಥಾಪಿಸಲು ನಡಿಗೆಯಲ್ಲಿ ಸಾಗಿದ್ದ ನಾಲ್ಕುನೂರು ಮಂದಿ ಸರಳವಸ್ತ್ರಧಾರಿ ಹೋರಾಟಗಾರರ ಜೊತೆ ಅವರ ಮುಖ್ಯಸ್ಥರಾಗಿ ವೆನಝೂಲದ ಲಾಸ್ ಲಾನೋಸ್ ಬಿಟ್ಟು ಆಂಡೀಸ್ ಅನ್ನು ದಾಟಿದಾಗ ಅವರೊಡನೆ ಹತ್ತಕ್ಕಿಂತಲೂ ಹೆಚ್ಚು ಸಂಖ್ಯೆಯ ನಾಯಿಗಳಿದ್ದವು. ಯುದ್ಧಕ್ಕೆ ಹೋಗುವಾಗೆಲ್ಲ ಅವುಗಳನ್ನು ಕರೆದೊಯ್ಯುತ್ತಿದ್ದ. ಹೋರಾಟದ ಆರಂಭದ ದಿನಗಳಿಂದಲೂ ಅವರೊಡನಿದ್ದ ಹಾಗೂ ಅನ್ಯಸಹಾಯವಿಲ್ಲದೆ ಸ್ಪಾನಿಶ್ ಸೈನ್ಯಕ್ಕೆ ಸೇರಿದ್ದ ಇಪ್ಪತ್ತು ರಕ್ತಪಿಪಾಸು ಬೇಟೆನಾಯಿಗಳ ದಳವನ್ನೇ ಸೋಲಿಸಿದ್ದ ನೆವಡೋ ಎಂಬ ಹೆಸರಿನ ಬಹು ಪ್ರಖ್ಯಾತ ನಾಯಿ ಕ್ಯಾರಬೋಬೋದ ಮೊದಲ ಯುದ್ಧದಲ್ಲಿಯೇ ಈಟಿಯ ಏಟಿಗೆ ಸಿಕ್ಕಿ ಹತ್ಯೆಗೊಂಡಿತ್ತು. ತಾವು ನೋಡಿಕೊಳ್ಳಬಹುದಾದುದಕ್ಕಿಂತ ಹೆಚ್ಚಿನ ಸಂಖ್ಯೆಯ ನಾಯಿಗಳನ್ನು ಲಿಮದಲ್ಲಿ ಮ್ಯಾನ್ಯುಯೆಲ ಸಯೆಂಝ್ ಸಾಕಿದ್ದಳು, ಅಲ್ಲದೆ ಅವುಗಳೊಡನೆ ಲ ಮ್ಯಾಗ್ಡಲೀನದ ತೋಟದಲ್ಲಿ ಅನೇಕ ಬಗೆಯ ಇತರ ಅಸಂಖ್ಯ ಪ್ರಾಣಿಗಳೂ ಇದ್ದವು. ಒಂದು ನಾಯಿ ಸತ್ತಾಗ ತಕ್ಷಣವೇ ಅದರ ಜಾಗದಲ್ಲಿ ಅಂಥದೇ ಅದೇ ಹೆಸರಿನ ಮತ್ತೊಂದನ್ನು ತರಬೇಕು, ಹಾಗಾದಾಗ ಅದೇ ಜೀವಿಸಿದೆ ಎಂಬ ಭಾವನೆ ಬರುತ್ತದೆ ಎಂದು ಜನರಲ್‌ರಿಗೆ ಯಾರೋ ಹೇಳಿದ್ದರು. ಆದರೆ ಅದಕ್ಕೆ ಅವರ ಒಪ್ಪಿಗೆಯಿರಲಿಲ್ಲ. ಪ್ರತಿ ಪ್ರಾಣಿಯೂ ವಿಶಿಷ್ಟವಾಗಿರಬೇಕು, ಅವುಗಳನ್ನು ಪ್ರತ್ಯೇಕವಾಗಿ, ಅವುಗಳಿಗೆ ವಿಶಿಷ್ಟವಾದ ಆಸೆಗೂಡಿದ ಕಣ್ಣುಗಳು ಮತ್ತು ಚಟುವಟಿಕೆಗಳೊಡನೆ, ತಾವು ನೆನಪಿನಲ್ಲಿಟ್ಟುಕೊಂಡಿರಬೇಕು, ಆಗ ಮಾತ್ರ ಅವು ಸತ್ತಾಗ ಸೂಕ್ತ ರೀತಿಯಲ್ಲಿ ಗೌರವಸೂಚನೆ ಸಾಧ್ಯ ಎಂಬುದು ಅವರ ಅನಿಸಿಕೆ. ಸೆಪ್ಟೆಂಬರ್ ೨೫ ರ ಕುರಾತ್ರಿ ನಡೆದ ದಾಳಿಯಲ್ಲಿ ಸಂಚುಗಾರರು ಎರಡು ಬೇಟೆನಾಯಿಗಳನ್ನು ತಲೆ ಕತ್ತರಿಸಿ ಕೊಂದಿದ್ದರು. ಕೊನೆಯ ಪ್ರಯಾಣವಾದ ಈಗ ತಮ್ಮ ಬಳಿ ಉಳಿದಿದ್ದುದು ಎರಡು, ಅವುಗಳೊಡನೆ ನದಿಯ ಮೇಲಿಂದ ತಂದಿದ್ದ ರೌದ್ರವೂ ಮುಂಗೋಪಿಗಳೂ ಆಗಿದ್ದ ಕೆಲವು. ಮೊದಲನೆಯ ದಿನವೇ ಐವತ್ತು ನಾಯಿಗಳಿಗೆ ವಿಷವೂಡಲಾಯಿತು ಎಂಬ ಮಾಂಟಿಲರ ಹೇಳಿಕೆಯು ಪ್ರೇಮಮಯೀ ಹಾರ್ಪ್ ಅವರಲ್ಲಿ ಸೃಷ್ಟಿಸಿದ್ದ ಕೋಮಲ ಮನೋಭಾವವನ್ನು ಹಾಳುಗೆಡವಿತ್ತು.

ಮಾಂಟಿಲ ಪ್ರಾಮಾಣಿಕವಾಗಿ ವಿಷಾದಗೊಂಡು ಇನ್ನು ಮಂದೆ ಬೀದಿ ನಾಯಿಗಳನ್ನು ಕೊಲ್ಲುವುದಿಲ್ಲವೆಂದು ಮಾತು ಕೊಟ್ಟರು. ಇದರಿಂದ ಮನಸ್ಸಿನ ತಲ್ಲಣ ಕೊನೆಗೊಂಡಿತ್ತು, ತಮ್ಮ ಮಾತನ್ನವರು ಉಳಿಸಿಕೊಳ್ಳುತ್ತಾರೆಂಬ ಭರವಸೆಯಿಂದಲ್ಲದಿದ್ದರೂ, ತಮ್ಮ ಜನರಲ್‌ಗಳ ಸದಭಿಲಾಷೆಯನ್ನು ಕಂಡು. ರಾತ್ರಿಯ ಪ್ರಶಾಂತತೆ ಅವರಿಗೆ ನಿಜವಾಗಿ ವಿಶ್ರಾಂತಿ ತಂದಿತು. ಬೆಳಕಿನಿಂದ ಕೂಡಿದ್ದ ಮೊಗಸಾಲೆಯಿಂದ ಬರುತ್ತಿದ್ದ

ಮಲ್ಲಿಗೆ ಗುಲಾಬಿಗಳ ಪರಿಮಳ, ವಜ್ರಾಲಂಕೃತಗೊಂಡಂತಿದ್ದ ವಾತಾವರಣ – ಇವುಗಳಿಂದಾಗಿ ಆಕಾಶದಲ್ಲಿ ಎಂದಿಗಿಂತ ಹೆಚ್ಚು ನಕ್ಷತ್ರಗಳಿದ್ದಂತೆ ಅನ್ನಿಸುತ್ತಿತ್ತು. ಕೊಲಂಬಸ್‌ನನ್ನು ನೆನಸಿಕೊಂಡು ಒಮ್ಮೆ ಅವರೇ ಹೇಳದ್ದರು: "ಏಪ್ರಿಲ್‌ನ ಆಂಡಲೂಸಿಯದಂತೆ." ಬೀಸುತ್ತಿದ್ದ ಗಾಳಿಯಂದಾಗಿ ಸದ್ದು–ವಾಸನೆಗಳು ದೂರವಾಗಿದ್ದವು, ಉಳಿದದ್ದು ಗೋಡೆಗಳಿಗೆ ಅಪ್ಪಳಿಸುತ್ತಿದ್ದ ಅಲೆಗಳ ಅಬ್ಬರ ಮಾತ್ರ.

"ಜನರಲ್, ದಯವಿಟ್ಟು ಹೋಗಬೇಡಿ", ಮಾಂಟಿಲ ಗೋಗರೆದರು.

"ಹಡಗು ಬಂದರಿನಲ್ಲಿ ಬಂದು ನಿಂತಿದೆಯಲ್ಲ."

"ಬೇರೆ ಪ್ರಯಾಣಿಕರಿರುತ್ತಾರಲ್ಲ" ಎಂದರು ಮಾಂಟಿಲ.

"ಪರವಾಯಿಲ್ಲ, ಅವರೆಲ್ಲ ಕೊನೆಗೆ" ಎಂದರು ಜನರಲ್.

ಏನಾರೂ ಬಗ್ಗಲಿಲ್ಲ. ತುಂಬ ಹೊತ್ತು ಕೇಳಿಕೊಂಡರೂ ಪ್ರಯೋಜನವಾಗದಿದ್ದಾಗ, ನಡೆಯುವ ಮುನ್ನಿನ ಕ್ಷಣದವರೆಗೂ ಉಳಿಸಿಕೊಳ್ಳುತ್ತೇನೆಂದು ಮಾತು ಕೊಟ್ಟಿದ್ದ ಗುಟ್ಟನ್ನು ಬಿಟ್ಟುಕೊಡದೆ ಮಾಂಟಿಲರಿಗೆ ಬೇರೆ ದಾರಿ ಉಳಿಯಲಿಲ್ಲ. ಜನರಲ್ ರಫೇಲ್ ಊರ್ಡಾನೆಟನ ನೇತೃತ್ವದ ಬೊಲಿವಿಯವಾದಿ ಸೇನಾಧಿಕಾರಿಗಳು ಸಂಟಾ ಫೆ ದ ಬೊಗೋಟದಲ್ಲಿ ಸೆಪ್ಟೆಂಬರ್ ಮೊದಲಿಗೆ ಬಂಡಾವೇಳಲು ಸಿದ್ಧರಾಗುತ್ತಿದ್ದರು. ಇದನ್ನು ಕೇಳಿ ಜನರಲ್ ಜನರಲ್ ಆಶ್ಚರ್ಯ ವ್ಯಕ್ತಪಡಿಸದೆ ಮಾಂಟಿಲರ ನಿರೀಕ್ಷೆಯನ್ನು ಸುಳ್ಳುಮಾಡಿದರು.

"ನನಗಿದು ಗೊತ್ತಿರಲಿಲ್ಲ, ಆದರೆ ಅದನ್ನು ಊಹಿಸುವುದೇನೂ ಕಷ್ಟವಲ್ಲ" ಎಂದರವರು.

ಆನಂತರ, ದೇಶದ ಎಲ್ಲ ನಿಷ್ಠಾವಂತ ಸೈನಿಕ ಪಾಳೆಯಗಳಲ್ಲಿಯೂ ವೆನಿಝೂಲದ ಅಧಿಕಾರಿಗಳ ಒಪ್ಪಿಗೆಯಿಂದ ರೂಪಿಸುತ್ತಿದ್ದ ಸೈನಿಕ ಸಂಚಿನ ವಿವರಗಳನ್ನು ಮಾಂಟಿಲ ಬಯಲು ಮಾಡಿದರು. ಜನರಲ್ ಆ ಬಗ್ಗೆ ಆಳವಾಗಿ ಯೋಚಿಸಿದರು. "ಅದಕ್ಕೆ ಅರ್ಥವೇ ಇಲ್ಲ, ಜಗತ್ತನ್ನುಳಿಸುವ ಬಯಕೆ ಊರ್ಡಾನೆಟಗೆ ಇದ್ದರೆ, ಪಯೆಜ್ ಜೊತೆ ಸಂಧಾನ ಮಾಡಿಕೊಂಡು, ಕ್ಯಾರಕಾಸ್‌ನಿಂದ ಪಟಗೋನಿಯವರೆಗಿನ ಕಳೆದ ಹದಿನೈದು ವರ್ಷಗಳ ಚರಿತ್ರೆಯನ್ನೆಲ್ಲ ಪುನರಾವರ್ತಿಸಲಿ" ಎಂದರು. ಆದರೂ ವಿಶ್ರಾಂತಿಗೆ ತೆರಳುವ ಮೊದಲು ಸಣ್ಣ ಪರಿಹಾರವೊಂದನ್ನು ಸೂಚಿಸಿದರು.

"ಸ್ಯೂಕ್ರ್‌ಗೆ ಇದು ಗೊತ್ತಾ?"

"ಇದಕ್ಕೆ ಅವನು ವಿರೋಧಿ" ಎಂದು ಮಾಂಟಿಲ ಉತ್ತರಿಸಿದರು.

"ಅದಕ್ಕೆ ಕಾರಣ, ಊರ್ಡಾನೆಟ ಜೊತೆಗಿನ ಅವನ ಜಗಳ ಅನ್ನೋದು ಸ್ಪಷ್ಟ" ಎಂದು ವಿಶ್ಲೇಷಿಸಿದರು ಜನರಲ್.

"ಉಹ್ಞೂ, ತನ್ನನ್ನು ಕ್ವಿಟೋದಿಂದ ದೂರ ಮಾಡುವ ಎಲ್ಲದಕ್ಕೂ ಅವನ ವಿರೋಧವಿದೆ" ಎಂದರು ಮಾಂಟಿಲ.

"ಏನಾದರಾಗಲಿ, ನೀವು ಮಾತಾಡಬೇಕಾದ್ದು ಅವನ ಜೊತೆಗೇ. ಇಲ್ಲಿ ನೀವು ನನ್ನ ಜೊತೆ ಸಮಯ ಹಾಳುಮಾಡ್ತಿದ್ದೀರಿ."

ಅದೇ ಅವರ ಕೊನೆಯ ಮಾತೆಂಬಂತೆ ಕಾಣಿಸಿತು. ಮಾರನೆಯ ದಿನ ಎದ್ದ ಕೂಡಲೇ ಕೊಲ್ಲಿಯಲ್ಲಿ ನಿಂತಿದ್ದ ಅಂಚೆ ಹಡಗಿಗೆ ಸಾಮಾನುಗಳನ್ನು ತುಂಬಲು ಜೋಸೆ ಪೆಲಾಸಿಯೋಸ್‌ಗೆ ಮಾಂಟಿಲ ಆಜ್ಞಾಪಿಸಿದರು; ಹಾಗೆಯೇ ಮಧ್ಯಾಹ್ನ ಹಡಗನ್ನು, ತಮ್ಮ ಮನೆಯ ಮಾಳಿಗೆಯಿಂದಲೇ ನೋಡಲು ಸಾಧ್ಯವಾಗುವಂತೆ, ಸಾಂಟೋ ಡಾಮಿಂಗೋ ಕೋಟೆಯ ಎದುರಿಗೆ ನಿಲ್ಲಿಸುವಂತೆ ಅದರ ಕ್ಯಾಪ್ಟನ್‌ಗೆ ಹೇಳಿ ಕಳಿಸಿದರು. ವ್ಯವಸ್ಥೆಗಳೆಲ್ಲ ಎಷ್ಟು ಕರಾರುವಾಕ್ಕಾಗಿದ್ದುವೆಂದರೆ, ತಮ್ಮೊಡನೆ ಯಾರು ಬರುತ್ತಾರೆಂದು ಹೇಳದಿದ್ದುದರಿಂದ, ತಾವಾರೂ ಅವರ ಜೊತೆಗೆ ಹೋಗುವುದಿಲ್ಲವೆಂದು ಭಾವಿಸಿದರು. ಜನವರಿಯಲ್ಲಿಯೇ ಮಾಡಿದ್ದ ಯೋಜನೆಗನುಗುಣವಾಗಿ ವಿಲ್ಸನ್ ಯಾರನ್ನೂ ವಿಚಾರಿಸದೆ ತನ್ನ ಸಾಮಾನುಗಳನ್ನು ಹಡಗಿಗೇರಿಸಿದ.

ಸಾಮಾನು ತುಂಬಿಕೊಂಡ ಆರು ವಾಗೀನುಗಳು ಹಡಗುಕಟ್ಟೆಯ ಕಡೆಗೆ ಬೀದಿಗಳಲ್ಲಿ ಸಾಗಿದುದನ್ನು ನೋಡಿದಾಗ, ಅವರು ಹೊರಡುವುದರ ಬಗ್ಗೆ ಕನಿಷ್ಠ ನಂಬಿಕೆಯಿದ್ದವರೂ ಅತ್ತ ಹೋದರು. ಈ ಸಂದರ್ಭದಲ್ಲಿ ಕ್ಯಾಮಿಲ್ ಜೊತೆಗೆ ಬಂದ ಕೌಂಟ್ ದ ರೇಜ್‌ಕೋರ್ಟ್ ಭೋಜನಕೂಟದಲ್ಲಿ ಗೌರವಾನ್ವಿತ ಅತಿಥಿಯಾಗಿದ್ದ. ಕೂದಲನ್ನು ಹಿಂದಕ್ಕೆಳೆದು ತುರುಬಾಗಿ ಕಟ್ಟಿಕೊಂಡು, ಹಸಿರು ಬಣ್ಣದ ಟ್ಯೂನಿಕ್ ಧರಿಸಿ, ಚಪ್ಪಲಿ ಮೆಟ್ಟಿ ಬಂದಾಗ ಅವಳು ಚಿಕ್ಕವಳಂತೆ ಕಾಣುತ್ತಿದ್ದಳು, ಕಣ್ಣುಗಳು ಕಡಿಮೆ ಕ್ರೂರವಾಗಿದ್ದವು. ಅವಳನ್ನು ನೋಡಿದ ಜನರಲ್ ತಮಗಾದ ಅಸಂತೋಷವನ್ನು ಹೊಗಳಿಕೆಯಲ್ಲಿ ಅಡಗಿಸಿದರು.

"ಹಸಿರು ಬಟ್ಟೆ ತೊಟ್ಟರೆ ಸುಂದರವಾಗಿ ಕಾಣಿಸುವುದರ ಬಗ್ಗೆ ದೇವಿಯವರಿಗೆ ಖಾತರಿಯಿರಬೇಕು" ಎಂದರು ಸ್ಪಾನಿಶ್‌ನಲ್ಲಿ.

ತಕ್ಷಣ ಆ ಮಾತನ್ನು ಕೌಂಟ್ ಭಾಷಾಂತರಿಸಿ ಹೇಳಿದ. ಅದನ್ನು ಕೇಳಿ ಕ್ಯಾಮಿಲ್ ಮುಕ್ತ ಹೆಂಗಸಿನಂತೆ ಜೋರಾಗಿ ನಕ್ಕಳು, ಅವಳ ಮಧುರ ಉಸಿರು ಮನೆಯನ್ನೆಲ್ಲ ಆವರಿಸಿತು. "ನಾವು ಮತ್ತೆ ಶುರು ಮಾಡುವುದು ಬೇಡ, ಡಾನ್ ಸಿಮೋನ್" ಎಂದು ಹೇಳಿದಳು. ಅವರಿಬ್ಬರಲ್ಲಿಯೂ ಏನೋ ಬದಲಾವಣೆಯಿತ್ತು, ಯಾಕೆಂದರೆ ಮೊದಲ ಬಾರಿ ಮಾಡಿದ್ದಂತೆ ಆಲಂಕಾರಿಕ ಮಾತುಗಳ ಹೋರಾಟಕ್ಕಿಳಿದು ಪರಸ್ಪರ ನೋಯಿಸಲು ಇಬ್ಬರಿಗೂ ಧೈರ್ಯ ಸಾಲದಾಗಿತ್ತು. ಇಂಥ ಸಂದರ್ಭಗಳಲ್ಲಿ ಮಾಡುತ್ತಿದ್ದಂತೆ ಫ್ರೆಂಚ್

ಮಾತಾಡಬಲ್ಲ ಸುಶಿಕ್ಷಿತ ಜನರೊಡನೆ ಕುಶಾಲಿನಿಂದ ಮಾತನಾಡುವ ಖುಷಿಯಲ್ಲಿ ಕ್ಯಾಮಿಲ್ ಅವರನ್ನು ಮರೆತಳು. ಫ್ರಯರ್ ಸೆಬಾಸ್ಟಿಯನ್ ದ ಸಿಗ್ವೆಂಛ಼ ಜೊತೆ ಮಾತಾಡಲೆಂದು ಜನರಲ್ ಹೊರಟರು. ಹಂಬೋಲ್ಡ್ಟ್ ೧೮೦೦ ರಲ್ಲಿ ಮೊದಲ ಬಾರಿ ನಗರಕ್ಕೆ ಬಂದಿದ್ದಾಗ ಅಂಟಿದ್ದ ಸಿಡುಬು ರೋಗವನ್ನು ವಾಸಿ ಮಾಡಿದ್ದ ಸಕಾರಣ ಗೆಲವಿನಿಂದ ಆ ಸಂತಸದೃಶ ಕೂಡಿದ್ದ. ಅವನು ಮಾಡಿದ್ದಕ್ಕೆ ಯಾವುದೇ ಮಹತ್ವ ನೀಡದ ಏಕೈಕ ವ್ಯಕ್ತಿಯೆಂದರೆ ಫ್ರಯರ್ ಮಾತ್ರ. “ಸಿಡುಬಿನಿಂದ ಕೆಲವರು ಸಾಯಬೇಕು, ಮತ್ತೆ ಕೆಲವರಲ್ಲ ಎಂಬುದು ದೈವನಿಯಾಮಕ, ಯಜಮಾನರು ಎರಡನೇ ಗುಂಪಿಗೆ ಸೇರಿದ್ದರು” ಎಂದು ಹೇಳುತ್ತಿದ್ದ. ಜನರಲ್ ಕಳೆದ ಬಾರಿ ಬಂದಿದ್ದಾಗ, ಅಗಿಲನ್ನು ಬಳಸಿ ತಯಾರಿಸಿದ ಔಷಧಗಳಿಂದ ಆತನು ಮುನ್ನೂರು ವಿವಿಧ ರೋಗಗಳನ್ನು ವಾಸಿಮಾಡಬಲ್ಲ ಎಂಬ ವಿಷಯವನ್ನು ಕೇಳಿದ್ದ ಅವರು ತನ್ನನ್ನು ಕಾಣುವಂತೆ ಅವರಿಗೆ ಹೇಳಿದ್ದ.

ಸೈನಿಕ ಬೀಳ್ಕೊಡಿಗೆ ಪೆರೇಡ್‌ಗೆ ಮಾಂಟಿಲ ಆಗಲೇ ವ್ಯವಸ್ಥೆ ಮಾಡಿದ್ದರು; ಅಷ್ಟು ಹೊತ್ತಿಗೆ ಜೋಸೆ ಪೆಲಾಸಿಯೋಸ್ ಬಂದರಿನಿಂದ ವಾಪಸಾದ, ಅವನೊಂದು ಅಧಿಕೃತ ಸಂದೇಶ ತಂದಿದ್ದ; ಮಧ್ಯಾಹ್ನದ ಊಟದ ಬಳಿಕ ಹಡಗು ಮನೆಯ ಮುಂದೆ ಬರುವುದಾಗಿ ಅದರಲ್ಲಿತ್ತು. ಜೂನ್‌ನ ಮಧ್ಯಾಹ್ನದ ಬಿಸಿಲಿನಿಂದ ರಕ್ಷಣೆಗೆಂದು ಸಾಂಟೋ ಡಾಮಿಂಗೋ ಕೋಟೆಯಿಂದ ಹಡಗಿನತನಕ ಜನರಲ್‌ರನ್ನು ಕರೆತರುವ ಸರಬರಾಜು ದೋಣಿಯ ಮೇಲೆ ಬಟ್ಟೆ ಚಾವಣಿ ಹೊದಿಸಬೇಕೆಂದು ಮಾಂಟಿಲ ಆಜ್ಞೆ ಮಾಡಿದರ್ದು. ಹನ್ನೊಂದು ಗಂಟೆಯ ಹೊತ್ತಿಗೆ ಮನೆಯಲ್ಲಿ ಆಹ್ವಾನಿತ ಅತಿಥಿಗಳ ದಂಡಿನ ಜೊತೆಗೆ ಹಾಗೇ ಬಂದವರ ಸಂದಣಿಯೂ ಸೇರಿದ್ದರಿಂದ ಬಿಸಿಲಿನ ಝಳ ಏರಿತು; ನೀಳ ಭೋಜನ ಮೇಜಿನುದ್ದಕ್ಕೂ ವಿವಿಧ ಬಗೆಯ ಭಕ್ಷ್ಯಭೋಜ್ಯಗಳನ್ನು ಬಡಿಸಲಾಗಿತ್ತು. ಕೋಣೆಯನ್ನು ಅಲುಗಾಡಿಸಿದ ಗದ್ದಲಕ್ಕೆ ಕಾರಣವೇನೆಂದು ತಿಳಿಯದೆ ಕ್ಯಾಮಿಲ್ ಗೊಂದಲಗೊಂಡಿದ್ದಾಗ, ಅವಳ ಕಿವಿಯ ಬಳಿ ಪಿಸುಗಟ್ಟುವ ದನಿಯೊಂದು ಉಸುರಿತು: *“ತಾವು ಇಲ್ಲಿದೀರಾ ಮೇಡಂ?”* ಪ್ರತಿ ತಿನಿಸನ್ನೂ ಜನರಲ್ ಸ್ವಲ್ಪ ಸ್ವಲ್ಪ ಆಕೆಗೆ ಬಡಿಸಿ, ಅವುಗಳ ಹೆಸರು, ಮಾಡುವ ವಿಧಾನ, ಅದರ ಮೂಲಗಳನ್ನು ತಿಳಿಸುತ್ತ ತಾವು ಸ್ವಲ್ಪ ಹೆಚ್ಚೇ ಬಡಿಸಿಕೊಳ್ಳುತ್ತಿದ್ದರು. ಇದನ್ನು ಕಂಡು ಅಡುಗೆಯವನಿಗೇ ಅಚ್ಚರಿಯಾಯಿತು, ಏಕೆಂದರೆ ಕೆಲ ಹೊತ್ತಿನ ಮುಂಚೆಯಷ್ಟೇ ಮೇಜಿನ ಮೇಲೆ ಈಗ ಬಡಿಸಿದ್ದುವಕ್ಕಿಂತ ವಿಶೇಷವಾದ ತಿನಿಸುಗಳನ್ನವರು ತಿರಸ್ಕರಿಸಿದರ್ದು. ಆನಂತರ ಗುಂಪುಗಳ ನಡುವೆ ಜಾಗ ಮಾಡಿಕೊಂಡು ಕುಳಿತುಕೊಳ್ಳುವ ಜಾಗಕ್ಕಾಗಿ ಹುಡುಕಾಡಿದ್ದರು. ಕೊನೆಗೆ ಆಕೆಯನ್ನು

ಉಷ್ಣವಲಯದ ವಿವಿಧ ಹೂಗಳ ಗಿಡಗಳಿದ್ದ ಮಾಳಿಗೆಯ ಬಳಿ ಕರೆತಂದು, ಪೀಠಿಕೆಯಿಲ್ಲದೆ ಸಲಹೆಯನ್ನು ಮುಂದಿಟ್ಟರು.

"ಕಿಂಗ್ಸ್ಟನ್‌ನಲ್ಲಿ ಒಬ್ಬರನ್ನೊಬ್ಬರು ನೋಡುವುದು ತುಂಬ ಸಂತಸದಾಯಕವಾಗಿರುತ್ತದಲ್ಲವೇ?" ಎಂದರು.

"ನನಗಂತೂ ಅದಕ್ಕಿಂತ ಸಂತೋಷ ತರುವುದು ಮತ್ತೊಂದಿಲ್ಲ. ನೀಲಿ ಬೆಟ್ಟಗಳೆಂದರೆ ನನಗೆ ಪ್ರಾಣ" ಎಂದು ಅವಳು ಕೊಂಚವೂ ಅಚ್ಚರಿಯನ್ನು ತೋರಿಸದೆ ನುಡಿದಳು.

"ಒಂಟಿಯಾಗಿ?"

"ನನ್ನ ಜೊತೆಗೆ ಯಾರೇ ಇದ್ದರೂ ನಾನಂತೂ ಒಂಟಿಯೇ" ಎಂದು ಕೊಂಚ ತುಂಟತನದಿಂದ ಹೇಳಿ, "ಎಕ್ಸಲೆನ್ಸಿ" ಎಂದು ಸೇರಿಸಿದಳು.

ಅವರು ಮುಗುಳ್ನಕ್ಕರು. "ನಿಮ್ಮನ್ನು ಹೈಸ್ಲಾಪ್‌ನಲ್ಲಿ ಕಾಣುತ್ತೇನೆ" ಎಂದರು.

ಅಷ್ಟೇ. ಪುನಃ ಕೋಣೆಯ ಮೂಲಕ ವಾಪಸು ಕರೆತಂದು, ಕುಲೀನ ಮಹಿಳೆಗೆ ತಕ್ಕನಾದ ರೀತಿಯಲ್ಲಿ ಆಕೆಗೆ ನಸು ಬಾಗಿ ಬೀಳ್ಕೊಂಡರು. ತಮ್ಮ ಊಟದ ತಟ್ಟೆಯಲ್ಲಿದ್ದುದನ್ನು ಮುಟ್ಟದೆಯೇ ಕಿಟಕಿಯ ಮುಂಚಾಚಿನ ಮೇಲಿರಿಸಿ, ತಮ್ಮ ಜಾಗಕ್ಕೆ ಬಂದು ಕುಳಿತುಕೊಂಡರು. ಉಳಿದುಕೊಳ್ಳುವ ನಿರ್ಧಾರವನ್ನು ಯಾವಾಗ ಅಥವಾ ಯಾಕೆ ಮಾಡಿದರೆಂಬುದನ್ನು ಯಾರೂ ಅರಿಯರು. ಸ್ಥಳೀಯ ಭಿನ್ನಾಭಿಪ್ರಾಯಗಳನ್ನು ಚರ್ಚಿಸುತ್ತ ರಾಜಕಾರಣಿಗಳು ಅವರ ಸುತ್ತ ನೆರೆದಿದ್ದರು. ಇದ್ದಕ್ಕಿದ್ದಂತೆ ಅವರು ದ ರೇಜ್‌ಕೋರ್ಟ್ ಕಡೆ ತಿರುಗಿ, ಮಾತಾಡುತ್ತಿದ್ದ ವಿಷಯಕ್ಕೆ ಸಂಬಂಧಿಸಿರದ್ದರೂ ಎಲ್ಲರಿಗೂ ಕೇಳಿಸುವಂತೆ ಹೇಳಿದರು: "ನೀವು ಹೇಳಿದ್ದು ನಿಜ ಕೌಂಟ್. ಇಷ್ಟು ಜನ ಹೆಂಗಸರನ್ನು ಕಟ್ಕೊಂಡು ನಾನೇನು ಮಾಡಲಿ, ಅದೂ ನಾನಿರುವ ಈ ದುಃಸ್ಥಿತಿಯಲ್ಲಿ?"

"ಸರಿಯಾಗಿ ಹೇಳಿದಿರಿ, ಜನರಲ್" ಎಂದ ಕೌಂಟ್ ನಿಟ್ಟುಸಿರು ಬಿಡುತ್ತ. ತಕ್ಷಣವೇ, "ಇನ್ನೊಂದು ವಿಷಯ, *ಶಾನಾನ್* ಮುಂದಿನ ವಾರ ಬರತ್ತೆ, ಅತಿಗಣ್ಯರ ಕೋಣೆ ಇರೋ ಇಂಗ್ಲಿಷ್ ಯುದ್ಧನೌಕೆ ಅದು, ಜೊತೆಗೆ ಅದರಲ್ಲಿ ಅತ್ಯುತ್ತಮ ವೈದ್ಯರೊಬ್ಬರು ಬೇರೆ ಇರ್ತಾರೆ."

"ಹಾಗಾದ್ರೆ, ಅದು ನೂರು ಮಂದಿ ಹೆಂಗಸರಿಗಿಂತ ಕಷ್ಟ" ಎಂದರು ಜನರಲ್.

ಈ ವಿವರಣೆ ಒಂದು ನಪವಾಗಿತ್ತು, ಅಷ್ಟೆ. ಏಕೆಂದರೆ ಒಬ್ಬ ಅಧಿಕಾರಿ ತನ್ನ ಕ್ಯಾಬಿನ್ ಅನ್ನು ಜಮೈಕ ತಲುಪುವರೆಗೂ ಅವರಿಗಾಗಿ ಬಿಟ್ಟುಕೊಡಲು ಸಿದ್ಧನಾಗಿದ್ದ. ಅವನ ಮಾತಿನ ಹಿಂದಿನ ಕಾರಣವನ್ನು ನಿರ್ದಿಷ್ಟವಾಗಿ ಗುರುತಿಸಿದವನೆಂದರೆ ಜೋಸೆ ಪೆಲಾಸಿಯೋಸ್ ಮಾತ್ರ.

ಅಸ್ಖಲಿತವಾಗಿ, “ನಮ್ಮ ಯಜಮಾನರ ಮನಸ್ಸಿನಲ್ಲಿ ಏನಿದೆಯೋ ಅದನ್ನು ಅವರು ಮಾತ್ರ ಬಲ್ಲರು” ಎಂದ. ಒಟ್ಟಾರೆ ಅವರು ಪ್ರಯಾಣ ಹೊರಡುವಂತಿರಲಿಲ್ಲ, ಯಾಕಂದರೆ ಅವರನ್ನು ಹತ್ತಿಸಿಕೊಳ್ಳಲೆಂದು ಬಂದ ದೋಣಿಯು ಸಾಂಟೋ ಡಾಮಿಂಗೋ ಎದುರಾಗಿ ಬಂದು ಗಂಭೀರವಾದ ಹಾನಿಗೊಳಗಾಗಿತ್ತು.

ಹೀಗಾಗಿ ಜನರಲ್ ಅಲ್ಲೇ ಉಳಿದುಕೊಂಡರು, ಆದರೆ ಮಾಂಟಿಲರ ಮನೆಯಲ್ಲಿರುವುದಿಲ್ಲವೆಂಬ ಷರತ್ತಿನ ಮೇಲೆ. ಅದು ಇಡೀ ನಗರದಲ್ಲಿಯೇ ಅತ್ಯಂತ ಸುಂದರವಾಗಿದ್ದ ಮನೆಯೆಂಬುದು ಜನರಲ್‌ರಿಗೆ ಗೊತ್ತಿತ್ತು, ಆದರೆ ಅದು ಸಮುದ್ರಕ್ಕೆ ಹತ್ತಿರದಲ್ಲಿದ್ದುದರಿಂದ ಅಲ್ಲಿನ ಶೀತವನ್ನು ಅವರ ಮೂಳೆಗಳು ತಡೆದುಕೊಳ್ಳುವಂತಿರಲಿಲ್ಲ, ಅದರಲ್ಲೂ ಚಳಿಗಾಲದಲ್ಲಿ; ಏಳುವ ಹೊತ್ತಿಗಾಗಲೇ ಹೊದಿಕೆಗಳು ಒದ್ದೆಯಾಗಿರುತ್ತಿದ್ದವು. ಆ ಪ್ರದೇಶದಲ್ಲಿದ್ದುದಕ್ಕಿಂತ ಕಡಿಮೆ ಬಿರುಸಿನ ಗಾಳಿ ಅವರಿಗೆ ಬೇಕಾಗಿತ್ತು. ಇದನ್ನು ಕೇಳಿ ಮಾಂಟಿಲ ಅವರಿನ್ನೂ ಸುಮಾರು ಕಾಲ ಉಳಿಯುವರೆಂದು ಅರ್ಥಮಾಡಿಕೊಂಡ; ಹೀಗಾಗಿ ಆತುರಾತುರವಾಗಿ ಅವರ ಪರ್ಯಾಯ ವಸತಿಗೆ ಏರ್ಪಾಡು ಮಾಡಿದರು.

ಲ ಪೋಪ ಬೆಟ್ಟದ ಬುಡದಲ್ಲಿಯೇ ಒಂದು ವಿಶ್ರಾಂತಿಗೃಹವಿತ್ತು; ರಾಜನಿಷ್ಠ ಸೈನ್ಯವು ಪಟ್ಟಣವನ್ನು ಮತ್ತೆ ವಶಪಡಿಸಿಕೊಳ್ಳಲು ಬಂದರೆ ಅವರ ಬಿಡಾರಕ್ಕೆ ಜಾಗ ಸಿಕ್ಕದಿರಲೆಂದು ೧೮೧೫ ರಲ್ಲಿ ಕಾರ್ಟೆಜೆನನ್‌ರು ಅದನ್ನು ಸುಟ್ಟುಹಾಕಿದ್ದರು. ಆ ತ್ಯಾಗವು ನಿರರ್ಥಕವಾಯಿತು, ಯಾಕಂದರೆ ನೂರ ಹದಿನಾರು ದಿನಗಳ ನಂತರ ಸ್ಪಾನಿಶ್ ಸೈನ್ಯವು ಕೋಟೆಯ ಪ್ರದೇಶವನ್ನು ವಶಪಡಿಸಿಕೊಂಡಿತ್ತು. ಈ ಮಧ್ಯೆ ಮುತ್ತಿಗೆಗೊಳಗಾಗಿದ್ದವರು ತಮ್ಮ ಷೂಗಳ ಅಟೆಯನ್ನೂ ತಿನ್ನುವ ಪರಿಸ್ಥಿತಿಯನ್ನು ತಲುಪಿದ್ದರು, ಹಸಿವಿನಿಂದ ಆರು ಸಾವಿರ ಜನ ಸತ್ತಿದ್ದರು. ಹದಿನೈದು ವರ್ಷಗಳ ಬಳಿಕವೂ ಬೂದಿಯಾಗಿದ್ದ ಆ ಪ್ರದೇಶವು ಮಧ್ಯಾಹ್ನದ ಬಿಸಿಲಿಗೆ ಮೈಯೊಡ್ಡಿ ಬಿದ್ದುಕೊಂಡಿತ್ತು. ಪುನರ್ನಿರ್ಮಾಣಗೊಂಡಿದ್ದ ಮನೆಗಳಲ್ಲಿ ಒಂದು ಸದ್ಯ ದೂರಪ್ರಯಾಣ ಕೈಗೊಂಡಿದ್ದ ಇಂಗ್ಲಿಷ್ ವ್ಯಾಪಾರಿ ಜೂಡಾಹ್ ಕಿಂಗ್‌ಸೆಲರ್‌ಗೆ ಸೇರಿದ್ದು. ಟರ್ಬಾಕೋದಿಂದ ಬಂದಾಗ ಅದು ಜನರಲ್ ಸಿಮೋನ್‌ನ ಗಮನವನ್ನು ಸೆಳೆದಿತ್ತು; ಅದರ ಗರಿಗಳ ಚಾವಣಿಯು ಅಚ್ಚುಕಟ್ಟಾಗಿದ್ದು ಗೋಡೆಗಳಿಗೆ ಆಕರ್ಷಕವಾದ ಬಣ್ಣ ಬಳಿಯಲಾಗಿತ್ತು, ಜೊತೆಗೆ ಅದು ಹಣ್ಣುಬಿಟ್ಟ ಮರಗಳ ತೋಪಿನಲ್ಲಿ ಹುದುಗಿಕೊಂಡಿತ್ತು. ಅಂತಹ ಭಾರಿ ಬಾಡಿಗೆದಾರನಿಗೆ ಅದು ತರ ಸಾಧಾರಣವಾದ ಮನೆಯೆಂಬುದು ಜನರಲ್ ಮಾಂಟಿಲನ ಭಾವನೆ. ಆದರೆ ಅಂತಹ ಗಬ್ಬು ಜಾಗದಲ್ಲಿಯೇ ಹಂಸತೂಲಿಕಾತಲ್ಪದಲ್ಲಿಯಂತೆ ಅಂಗಿಯಲ್ಲಿ ಮುದುರಿ ಮಲಗುವುದು ತನಗೆ ಅಭ್ಯಾಸವಾಗಿ ಹೋಗಿದೆಯೆಂದು ಜನರಲ್

ಹೇಳಿದ್ದ. ಹೀಗಾಗಿ ಅವನು ಅದನ್ನೇ ಅನಿರ್ದಿಷ್ಟಾವಧಿಗೆ ಬಾಡಿಗೆಗೆ ಗೊತ್ತು ಮಾಡಿದ; ಹಾಸಿಗೆಗೆ, ನೀರಿನ ಹೂಜಿಗೆ, ದಿವಾನಖಾನೆಯ ಆರು ಚರ್ಮದ ಪೀಠಗಳಿಗೆ ಹಾಗೂ ಸೆನರ್ ಕಿಂಗ್‌ಸೆಲರ್ ತನ್ನ ಮದ್ಯವನ್ನು ಬಟ್ಟಿ ಇಳಿಸಿಕೊಳ್ಳುತ್ತಿದ್ದ ಕೈತಯಾರಿಕೆಯ ಬಟ್ಟಿಯಂತ್ರಕ್ಕೆಂದು ಚಾರ್ಜು ಅಲಾಯಿದ. ಅಲ್ಲದೆ ಜನಲ್ ಮಾಂಟಿಲ ಸರ್ಕಾರಿ ಬಂಗಲೆಯಿಂದ ಒಂದು ವೆಲ್ವೆಟ್ ಆರಾಮಕುರ್ಚಿಯನ್ನೂ ತರಿಸಿದ; ರಕ್ಷಕಸಿಬ್ಬಂದಿಗೆಂದು ಬಿದಿರು–ಕೆಸರಿನಿಂದ ಬ್ಯಾರಕ್ ಒಂದನ್ನು ನಿರ್ಮಿಸಲು ಏರ್ಪಾಟು ಮಾಡಿದ. ಬಿಸಲ ಝಳ ಭಾರಿಯಾಗಿರುವಾಗಲೂ ಆ ಜಾಗ ತಂಪಾಗಿರುತ್ತಿತ್ತು, ಮಾರ್ಕ್ವಿಸ್ ದ ವಾಲ್ಡೆಹೊಯೋಸ್‌ನ ಬಂಗಲೆಗಿಂತ ಎಲ್ಲ ಕಾಲದಲ್ಲೂ ಇಲ್ಲಿ ಕಡಿಮೆ ತಂಡಿ. ಕಟ್ಟಡ್ಡದಲ್ಲಿ ಧಾರಾಳವಾಗಿ ಗಾಳಿ ಬೆಳಕು ಬರುತ್ತಿದ್ದ ಸದಾ ಓತಿಕೇತಗಳು ಓಡಾಡುತ್ತಿದ್ದ ನಾಲ್ಕು ಮಲಗುವ ಕೋಣೆಗಳಿದ್ದವು. ಹಣ್ಣಾದ ಹುಳಿ ರಾಮಫಲಗಳು ಬೆಳಗಿನ ಜಾವಗಳಲ್ಲಿ ಮರಗಳಿಂದ ಉದುರುವ ಶಬ್ದವನ್ನು ಕೇಳುತ್ತ ಮಲಗಿದರೆ ಜನರಲ್‌ರ ನಿದ್ರಾಹೀನತೆಯ ಅವಧಿ ಅಷ್ಟೊಂದು ಬರಡಾಗುವ ಸಂಭವ ಕಡಿಮೆ. ಮಧ್ಯಾಹ್ನದ ಹೊತ್ತು, ಅದೂ ದೊಡ್ಡ ಮಳೆ ಸುರಿಯುವಾಗ, ಬಡಬಗ್ಗರು ತಮ್ಮ ಮಕ್ಕಳನ್ನು ಹೊತ್ತು ಸುರಕ್ಷತೆಗಾಗಿ ಕಾನ್ವೆಂಟ್ ಕಡೆ ಹೋಗುವ ಮೆವಣಿಗೆಯನ್ನು ಕಾಣಬಹುದಾಗಿತ್ತು.

ಲ ಪೋಪದ ತಪ್ಪಲಿನ ಮನೆಗೆ ಹೋದ ಮೇಲೆ ಜನರಲ್ ಆ ಪ್ರದೇಶಕ್ಕೆ ಮೂರಕ್ಕಿಂತ ಹೆಚ್ಚು ಸಲ ಬರಲಿಲ್ಲ, ಆಗಲೂ ಕಾರ್ಟಜೆನಕ್ಕೆ ಬಂದಿದ್ದ ಆಂಟೋನಿಯೋ ಮಯುಕ್ಸಿ ಎಂಬ ಇಟಾಲಿಯನ್ ಚಿತ್ರಕಾರನಿಗೆ ಮಾದರಿಯಾಗಿ ಕುಳಿತುಕೊಳ್ಳಲು. ಅವರೆಷ್ಟು ನಿಶ್ಶಕ್ತನಾಗಿದ್ದನೆಂದರೆ ಮಾರ್ಕ್ವಿಸ್‌ನ ಮಹಲಿನ ಮಾಳಿಗೆಯ ಒಳಗೋಡೆಯ ಮೇಲೆ ಕುಳಿತುಕೊಳ್ಳಬೇಕಾಗಿತ್ತು; ಸುತ್ತಲೂ ಕಾಡುಗಿಡಗಳ ಹೂಗಳು ಮತ್ತು ಎಲ್ಲೆಡೆ ಹಕ್ಕಿಗಳ ಕಿಚಿಪಿಚಿ ಆವರಿಸಿರುತ್ತಿತ್ತು. ಇಷ್ಟಾದರೂ ಒಮ್ಮೆಗೇ ಒಂದು ತಾಸಿಗಿಂತ ಹೆಚ್ಚು ಕಾಲ ಅವರು ಕುಳಿತುಕೊಳ್ಳಲಾರದವರಾಗಿದ್ದರು. ಅವರಿಗೆ ತನ್ನ ಭಾವಚಿತ್ರ ಇಷ್ಟವಾಯಿತು, ಚಿತ್ರಕಾರ ಅವರ ಬಗ್ಗೆ ಅತೀವ ಅನುಕಂಪದಿಂದ ನೋಡಿದ್ದುದು ಸ್ಪಷ್ಟವಾಗಿತ್ತು.

ಅವರ ಮೇಲೆ ಹತ್ಯೆಯ ಪ್ರಯತ್ನ ನಡೆದ ಸೆಪ್ಟೆಂಬರ್‌ಗಿಂತ ಅನತಿ ಕಾಲದ ಹಿಂದಷ್ಟೆ ನ್ಯೂ ಗ್ರನಡಾದ ವರ್ಣಚಿತ್ರಕಾರ್ತಿ ಜೋಸೆ ಮರಿಯ ಎಸ್ಪಿನೋಸಳು ಸಂಟ ಫ಼ ಬೊಗೋಟದ ಸರ್ಕಾರಿ ಬಂಗಲೆಯಲ್ಲಿ ಅವರ ಭಾವಚಿತ್ರವೊಂದನ್ನು ರಚಿಸಿದ್ದಳು. ಆದರೆ ಅದು ತಮ್ಮ ಬಗ್ಗೆ ಅವರಿಗಿದ್ದ ಕಲ್ಪನೆಗೆ ಅನುಗುಣವಾಗಿರಲಿಲ್ಲ, ಈ ಬಗ್ಗೆ ತಮ್ಮ ಆಗಿನ ಕಾರ್ಯದರ್ಶಿ ಜನರಲ್ ಸಂಟಾನ ಜೊತೆ ಚರ್ಚೆ ನಡೆಸುವ ಬಯಕೆಯನ್ನು ಹತ್ತಿಕ್ಕಲಾಗಿರಲಿಲ್ಲ.

"ಈ ಭಾವಚಿತ್ರ ಯಾರದ್ದಿದ್ದ ಹಾಗಿದೆ ಗೊತ್ತಾ? ಅದೇ ಲ ಮೇಸಾದಿಂದ ಬಂದಿದ್ದನಲ್ಲ ಒಲಯ ಅಂತ ಒಬ್ಬ ಮುದುಕ, ಅವನದ್ದರ ಹಾಗೆ!"

ಮ್ಯಾನ್ಯುಯೆಲಗೆ ಈ ವಿಷಯ ತಿಳಿದಾಗ ಅವಳು ತನ್ನ ಕೋಪವನ್ನು ಮುಚ್ಚಿಟ್ಟುಕೊಂಡಿರಲಿಲ್ಲ, ಯಾಕೆಂದರೆ ಅವಳಿಗೆ ಆ ಮುದುಕನ ಪರಿಚಯವಿತ್ತು.

"ಅಂದರೆ ನಿಮಗೆ ನಿಮ್ಮ ಬಗ್ಗೆಯೇ ಒಳ್ಳೆಯ ಅಭಿಪ್ರಾಯ ಇಲ್ಲ ಅಂದ ಹಾಗಾಯಿತು. ಕಳೆದ ಸಲ ನಾವು ಒಲಯನನ್ನು ಕಂಡಾಗ ಅವನಿಗೆ ಸುಮಾರು ಎಂಬತ್ತು ವರ್ಷ, ನಿಂತುಕೊಳ್ಳೋಕ್ಕೆ ಕೂಡ ಅವನಿಗೆ ಸಾಧ್ಯವಾಗ್ತಾ ಇರಲಿಲ್ಲ" ಅಂದಿದ್ದಳು.

ಅವರ ಅತ್ಯಂತ ಹಳೆಯ ಭಾವಚಿತ್ರವೆಂದರೆ ಹದಿನಾರು ವರ್ಷವಾಗಿದ್ದಾಗ ಮಡ್ರಿಡ್‌ನಲ್ಲಿ ಒಬ್ಬ ಅನಾಮಧೇಯ ಚಿತ್ರಕಾರ ಬರೆದ ಕಿರುಚಿತ್ರ. ಮೂವತ್ತೆರಡಾಗಿದ್ದಾಗ ಹೈತಿಯಲ್ಲಿ ಮತ್ತೊಂದು ಚಿತ್ರ ರಚಿತವಾಗಿತ್ತು; ಅವೆರಡೂ ಅವರ ವಯಸ್ಸು ಹಾಗೂ ಕ್ಯಾರಿಬಿಯನ್ ಲಕ್ಷ್ಣಗಳಿಗೆ ಅನುಗುಣವಾಗಿದ್ದವು. ತಾಯಿ ಕಡೆಯ ಗುಲಾಮಳಲ್ಲಿ ಮಗನೊಬ್ಬನನ್ನು ಹುಟ್ಟಿಸಿದ್ದ ಒಬ್ಬ ಮುತ್ತಾತನ ಕಾಲದಿಂದ ಹರಿದು ಬಂದಿದ್ದ ಆಫ್ರಿಕನ್ ರಕ್ತದ ಧಾರೆಯೂ ಅವರಲ್ಲಿ ಇತ್ತು. ಅದು ಅವರ ದೇಹಲಕ್ಷಣಗಳಲ್ಲಿ ಎಷ್ಟು ಎದ್ದು ಕಾಣುತ್ತಿತ್ತೆಂದರೆ. ಲಿಮದ ಶ್ರೀಮಂತವರ್ಗ ಅವರನ್ನು ಸ್ಯಾಂಬೋ ಎಂದೇ ಕರೆಯುತ್ತಿತ್ತು. ಆದರೆ ಅವರ ಹಿರಿಮೆ ಏರುತ್ತಿದ್ದಂತೆ ಚಿತ್ರಕಾರರು ಅವರನ್ನು ಆದರ್ಶವ್ಯಕ್ತಿಯೆಂಬಂತೆ ಚಿತ್ರಿಸಲು ತೊಡಗಿದ್ದರು, ರಕ್ತವನ್ನು ಶುದ್ಧಿಗೊಳಿಸಿ, ಅವರ ಸುತ್ತ ಪ್ರಭಾವಳಿಯನ್ನು ನಿರ್ಮಿಸಿ ಕೊನೆಗೆ ಅವರನ್ನು ರೋಮನ್ ಪ್ರತಿಮೆಗಳ ಸಾಲಿನಲ್ಲಿ ನಿಲ್ಲಿಸುವ ತನಕ ಸಾಗಿದ್ದರು. ಆದರೆ ಎಸ್ಪಿನೋಸಳು ರಚಿಸಿದ್ದ ಭಾವಚಿತ್ರ ಮಾತ್ರ ಅವರನ್ನೇ ಹೋಲುತ್ತಿತ್ತು; ಸಾಯುವ ಮುಂಚಿನವರೆಗೂ ತನ್ನಿಂದಲೂ ಬಚ್ಚಿಟ್ಟುಕೊಂಡಿದ್ದು ಒಳಗೇ ತಿನ್ನುತ್ತಿದ್ದ ರೋಗದಿಂದ ನಲವತ್ತೈದಕ್ಕೇ ನವೆದುಹೋದ ದೇಹ.

ಒಂದು ರಾತ್ರಿ ಲ ಪೋಪದ ತಪ್ಪಲಿನ ಮನೆಯಲ್ಲಿ ಅಸ್ತವ್ಯಸ್ತ ನಿದ್ದೆಯಿಂದ ಎಚ್ಚರಗೊಂಡಾಗ ಮಲಗುವ ಕೋಣೆಯ ಮೂಲೆಯೊಂದರಲ್ಲಿ ಚಿಕ್ಕ ಹುಡುಗಿಯೊಬ್ಬಳು ಕುಳಿತಿದ್ದುದನ್ನು ಜನರಲ್ ಕಂಡರು; ಅವಳು ಧರ್ಮೋಪದೇಶದ ಸಮಾವೇಶದಲ್ಲಿ ತೊಡುವ ಒಂದು ಬರ್ಲಾಪ್‌ನ ಟ್ಯೂನಿಕ್ ಧರಿಸಿದ್ದಳು, ತಲೆಗೂದಲ ಮೇಲೆ ಹೊಳೆಯುವ ಮಿಣುಕುಹುಳುಗಳ ಕಿರೀಟವೊಂದನ್ನರಿಸಿಕೊಂಡಿದ್ದಳು. ಬಟ್ಟಲಲ್ಲಿ ಮಿಣುಕುಹುಳುಗಳನ್ನಿರಿಸಿಕೊಂಡು ದಾರಿದೀಪ ಮಾಡಿಕೊಂಡ

ಇಂಡಿಯನ್ನರನ್ನು ವಸಾಹತು ದಿನಗಳಲ್ಲಿ ಕಂಡ ಯೂರೋಪಿಯನ್ ಪ್ರವಾಸಿಗರು ಅಚ್ಚರಿಗೊಳ್ಳುತ್ತಿದ್ದರು. ಆದರೆ ಮುಂದೆ ಅದು ಇಡೀ ಗಣರಾಜ್ಯದಲ್ಲಿ ಫ್ಯಾಷನ್ ಎಂಬಂತಾಗಿತ್ತು; ಅವನ್ನು ಮಿನುಗುವ ಹೂದಂಡೆಯಂತೆ ಹೆಂಗಸರು ತುರುಬಿಗೆ ಧರಿಸುತ್ತಿದ್ದರು, ಹಣೆಯ ಮೇಲೆ ಸೀಮಂತಮಣಿಯಂತೆ ಇಳಿಬಿಟ್ಟುಕೊಂಡಿರುತ್ತಿದ್ದರು, ಅಥವಾ ತಮ್ಮ ಎದೆಗಳ ಮೇಲೆ ಚಮಕಿಸುವ ಮಾಲೆಯಂತೆ ಹಾಕಿಕೊಂಡಿರುತ್ತಿದ್ದರು. ಆ ರಾತ್ರಿ ಮಲಗುವ ಕೋಣೆಗೆ ಬಂದಿದ್ದ ಆ ಹುಡುಗಿ ಅವುಗಳನ್ನು ಕೂದಲಲ್ಲಿ ಹಾರದಂತೆ ಹೆಣೆದುಕೊಂಡದ್ದರಿಂದ ಮುಖ ಕಾಂತಿಯಿಂದ ಬೆಳಗುತ್ತಿತ್ತು. ಅವಳ ಮುಖ ನಿರ್ಭಾವುಕತೆ ಹಾಗೂ ಒಂದು ತೆರನಾದ ನಿಗೂಢತೆಯಿಂದ ಕೂಡಿತ್ತು. ಇಪ್ಪತ್ತರ ವಯಸ್ಸಿನಲ್ಲಿಯೇ ಅವಳ ಕೂದಲು ನರೆಯ ತೊಡಗಿತ್ತು. ಹೆಂಗಸರಲ್ಲಿನ ಬಹು ಅಮೌಲ್ಯವೆಂದು ಅವರು ಭಾವಿಸಿದ್ದ ಗುಣ ಅವಳಲ್ಲಿದ್ದ ಕುರುಹನ್ನು ಜನರಲ್ ಬಹು ಬೇಗ ಗುರುತಿಸಿದ್ದರು: ಅದೇ ಅಕಲುಷಿತ ಬುದ್ಧಿವಂತಿಕೆ. ಅವಳು ರಕ್ಷಕದಳದ ಬಿಡಾರಕ್ಕೆ ಬಂದಿದ್ದುದು ತನ್ನನ್ನು ಯಾವುದೇ ಉದ್ದೇಶಕ್ಕೆ ಸಮರ್ಪಿಸಿಕೊಳ್ಳಲು. ಉಸ್ತುವಾರಿ ಅಧಿಕಾರಿಗೆ ಅವಳು ವಿಶೇಷ ವ್ಯಕ್ತಿಯಂತೆ ಕಂಡು, ಜನರಲ್‌ರಿಗೆ ಅವಳ ಬಗ್ಗೆ ಆಸಕ್ತಿಯುಂಟಾಗಬಹುದೆಂದು ಜೋಸೆ ಪೆಲಾಸಿಯೋಸ್ ಜೊತೆ ಅವಳನ್ನು ಕಳಿಸಿದ್ದ. ಜೋಲಿಮಂಚಕ್ಕೆ ಹೊತ್ತೊಯ್ಯಲು ಶಕ್ತಿ ಉಳಿದಿರದಿದ್ದುದರಿಂದ ಜನರಲ್ ಅವಳನ್ನು ಮಗ್ಗುಲಲ್ಲಿ ಮಲಗಲು ಆಹ್ವಾನಿಸಿದರು. ತನ್ನ ತಲೆಯ ದಂಡೆಯನ್ನು ತೆಗೆದು, ಮಿಣುಕುಹುಳುಗಳನ್ನು ತನ್ನೊಡನೆ ತಂದಿದ್ದ ಕಬ್ಬಿನ ಜಲ್ಲೆಗಳಲ್ಲಿ ಇಟ್ಟು ಬಂದು ಅವರ ಪಕ್ಕ ಮಲಗಿದಳು. ಮೊದಲು ಅದೂ ಇದೂ ಮಾತುಗಳನ್ನಾಡಿದ ಜನರಲ್ ಕೊನೆಗೆ ಧೈರ್ಯಮಾಡಿ ಕಾರ್ಟಜೆನದ ಜನತೆ ತಮ್ಮ ಬಗ್ಗೆ ಹೊಂದಿರುವ ಅಭಿಪ್ರಾಯ ಎಂತಹುದು ಎಂದು ಕೇಳಿದರು.

"ಜನ ಏನಂದುಕೊಳ್ತಾರೆ ಅಂದರೆ ಜನರಲ್‌ರವರು ಚೆನ್ನಾಗಿಯೇ ಇದ್ದಾರೆ, ಆದರೆ ಜನರ ಸಹಾನುಭೂತಿ ಗಳಸೋಕೆ ಕಾಯಿಲೆ ಬಂದವರಂತೆ ತೋರಿಸ್ಕೋತಾರೆ ಅಂತ."

ರಾತ್ರಿ ಅಂಗಿಯನ್ನು ಕಳಚಿ ಹಾಕಿದ ಅವರು ಮೋಂಬತ್ತಿಯ ಬೆಳಕಲ್ಲಿ ತಮ್ಮ ದೇಹವನ್ನು ಪರೀಕ್ಷೆ ಮಾಡಲು ಹುಡುಗಿಗೆ ಹೇಳಿದರು. ದೇಹ ಎಷ್ಟು ನವೆಯಬಹುದು ಎಂಬ ಅರಿವು ಆಗ ಅವಳಿಗುಂಟಾಯಿತು: ಒಣಗಿದ ಹೊಟ್ಟೆ, ಚರ್ಮದ ಮೇಲೆದ್ದು ಕಾಣುವ ಪಕ್ಕೆಗಳು, ಮೂಳೆ–ಚಕ್ಕಳವಾದ ಕೈಕಾಲುಗಳು – ಈ ಎಲ್ಲ ಕೂದಲಿಲ್ಲದ, ಸಾವಿನಂತೆ ಪೇಲವವಾದ ಕವಚದಲ್ಲಿ ಹುದುಗಿದ್ದವು, ಮುಖ ಮಾತ್ರ ಗಾಳಿಮಳೆಗೆ ಸಿಕ್ಕು ಮತ್ತಾರದೋ ಎನ್ನುವಂತೆ ತೋರುತ್ತಿತ್ತು.

"ನನಗೆ ಉಳಿದಿರೋದು ಸಾವು ಮಾತ್ರ" ಎಂದರು ಜನರಲ್.

"ನೀವು ಯಾಗಲೂ ಇದ್ದದೇ ಹೀಗೆ, ಆದರೆ ಈಗ ಹಾಗೆ ತೋರಿಸಿಕೊಳ್ಳೋದು ನಿಮಗೆ ಹೊಂದಿಕೆಯಾಗತ್ತೆ ಅಂತ ಜನ ಹೇಳ್ತಾರೆ" ಅಂದಳು ಹುಡುಗಿ ಮತ್ತೆ.

ಆದರೆ ಅವರು ಅವಳ ಮಾತನ್ನೊಪ್ಪಲಿಲ್ಲ; ತಮ್ಮ ಕಾಯಿಲೆಯ ಬಗ್ಗೆ ಮತ್ತಷ್ಟು ಖಚಿತ ಆಧಾರಗಳನ್ನೊದಗಿಸಿದರು. ಈ ಮಧ್ಯೆ ಅವಳು ಸಂಭಾಷಣೆಯ ಸೂತ್ರ ಹರಿಯದಂತೆಯೇ ನಿದ್ದೆಯನ್ನು ಹೊಕ್ಕು ಹೊರಬಂದು ಮಾಡುತ್ತಿದ್ದಳು. ರಾತ್ರಿಯಿಡೀ ಅವರು ಅವಳನ್ನು ಒಮ್ಮೆಯೂ ಮುಟ್ಟಲಿಲ್ಲ; ಅವಳ ತಾರುಣ್ಯವೆಂಬ ಬಾಲಸೂರ್ಯನ ಬಿಸುಪೇ ಸಾಕಾಗಿತ್ತು. ಆಗ, ಕಿಟಕಿಯ ಹೊರಗೆ ಕ್ಯಾಪ್ಟನ್ ಇಟೂರ್‌ಬೈಡ್ ಹಾಡತೊಡಗಿದ:

*"ಬಿರುಗಾಳಿ ಜೊತೆಯಲ್ಲಿ ಮಳೆಗಾಳಿ ಬೀಸಿದರೆ*
*ತೋಳಿಂದ ನನ್ನ ಕೊರಳ ಸುತ್ತ ಬಳಸು*
*ಸಾಗರ ಕಬಳಿಸಿಬಿಡಲಿ ನಮ್ಮ"*

ಅದು ಮತ್ತೊಂದು ಸನ್ನಿವೇಶದ ಹಾಡು, ಪೇರಲಹಣ್ಣಿನ ಪ್ರಚೋದಕ ಶಕ್ತಿಯನ್ನು ಹೊಟ್ಟೆಯಲ್ಲಿ ಮತ್ತು ಹೆಣ್ಣಿನ ಸೆಳೆತವನ್ನು ಕತ್ತಲೆಯಲ್ಲಿ ತಡೆದುಕೊಳ್ಳಬಹುದಾಗಿದ್ದ ಕಾಲದ್ದು. ಜನರಲ್ ಮತ್ತು ಹುಡುಗಿ – ಇಬ್ಬರೂ ಹಾಡನ್ನು ತನ್ಮಯತೆಯಿಂದ ಎಂಬಂತೆ ಕೇಳಿಸಿಕೊಂಡರು, ಆದರೆ ಹುಡುಗಿ ಮುಂದಿನ ಚರಣದ ನಡುವೆಯೇ ನಿದ್ದೆಗೆ ಜಾರಿದಳು; ಕೊಂಚ ಹೊತ್ತಿನ ನಂತರ ಅವರೂ ಒಂದು ಬಗೆಯ ವಿಶ್ರಾಂತಿರಹಿತ ಮಂಪರಿಗೊಳಗಾದರು. ಹಾಡಿನ ನಂತರರದ ಮೌನ ಎಷ್ಟು ಪರಿಶುದ್ಧವಾಗಿತ್ತೆಂದರೆ, ಅವಳೆದ್ದು ಜನರಲ್‌ರನ್ನು ಎಚ್ಚರಗೊಳಿಸಲೆಂದು ಶತಪದ ತುಳಿಯುವಾಗ ನಾಯಿಗಳು ಬೊಗುಳ ತೊಡಗಿದ್ದು,. ಕತ್ತಲಲ್ಲಿ ಅವಳು ಚಿಲಕಕ್ಕೆ ಕೈಹಾಕಿದ ಸದ್ದು ಅವರಿಗೆ ಕೇಳಿಸಿತು.

"ಕನ್ಯೆಯಾಗಿಯೇ ಹೋಗ್ತಾ ಇದ್ದೀಯಾ!" ಎಂದರು.

ಅವಳು ಕಿಲಕಿಲ ನಕ್ಕು ನುಡಿದಳು: "ತಮ್ಮ ಜೊತೆ ಒಂದು ರಾತ್ರಿ ಕಳೆದ ಮೇಲೆ ಯಾರೂ ಕನ್ಯೆಯಾಗಿ ಉಳಿಯೋದು ಸಾಧ್ಯವಿಲ್ಲ."

ಅವಳು ಹೊರಬಿದ್ದಳು, ತಮ್ಮ ಜೀವನದಲ್ಲಿ ಸುಳಿದು ಹೋದ ಎಲ್ಲ ಹೆಂಗಸರಂತೆಯೇ. ಯಾಕೆಂದರೆ, ಕೆಲವರಂತೂ ಕೆಲವೇ ಗಂಟೆಗಳ ಕಾಲ ಜೊತೆ ಇದ್ದವರು, ಅವರಲ್ಲಿ ಯಾರಿಗೂ ಅವರು ಉಳಿಯುವಂತೆ ಹೇಳಿರಲೇ ಇಲ್ಲ. ಅವರ ಬಳಿ ಹೋಗಲು ಪ್ರಣಯಾತುರದಲ್ಲಿ ಅವರು ಜಗತ್ತನ್ನೇ ಬದಲಿಸಬಲ್ಲವರಾಗಿದ್ದರು. ಒಮ್ಮೆ ತೃಪ್ತಿಗೊಂಡರೆಂದರೆ, ಅವರನ್ನು ನೆನಪಿನಲ್ಲಿ ಉಳಿಸಿಕೊಳ್ಳುತ್ತೇನೆಂಬ ಭ್ರಮೆಯಲ್ಲಿ, ದೂರದಿಂದ ಅವರಿಗೆ ಭಾವೋದ್ವೇಗದ ಪತ್ರಗಳನ್ನು ಬರೆಯುವುದರಲ್ಲಿ, ಹಾಗೂ ತಮ್ಮನ್ನವರು ಮರೆಯದಿರುವಂತೆ

ಮಾಡಲು ಬೆಲೆ ಬಾಳುವ ಉಡುಗೊರೆಗಳನ್ನು ಕಳಿಸುವುದರಲ್ಲಿ ಅವರು ಸಮಾಧಾನಪಟ್ಟುಕೊಳ್ಳುತ್ತಿದ್ದರೇ ಹೊರತು, ಪ್ರೇಮಕ್ಕಿಂತ ಹೆಮ್ಮೆಯನ್ನೇ ಹೋಲುತ್ತಿದ್ದ ಭಾವನೆಯಿಂದಾಗಿ ಅವರೆಂದೂ ತಮ್ಮ ಬದುಕಿನಲ್ಲಿ ಅವರಿಗೊಂದು ಎಡೆಯಿತ್ತಿರಲಿಲ್ಲ.

ಆ ರಾತ್ರಿ ಒಬ್ಬರೇ ಆದ ಮೇಲೆ, ಮೊಗಸಾಲೆಯ ಬೆಂಕಿಯ ಮುಂದೆ ಇತರ ಅಧಿಕಾರಿಗಳೊಡನೆ ಹರಟೆ ಹೊಡೆಯುತ್ತಿದ್ದ ಇಟೂರ್‌ಬೈಡ್‌ನನ್ನು ಸೇರಿಕೊಳ್ಳಲು ಅವರು ಎದ್ದು ಹೊರಟ. ಬೆಳಗಿನ ಜಾವದವರೆಗೂ ಹಾಡುತ್ತಿರುವಂತೆ ಅವನನ್ನು ಪ್ರಚೋದಿಸಿದರು, ಜೊತೆಗೆ ಕರ್ನಲ್ ಜೋಸೆ ದ ಲ ಪರೇದಸ್ ಗಿಟಾರ್ ನುಡಿಸುತ್ತಿದ್ದ. ಒತ್ತಾಯಿಸಿದ ಹಾಡುಗಳಿಂದಾಗಿ ಅವರ ಮನಃಸ್ಥಿತಿ ಸರಿಯಾಗಿಲ್ಲವೆಂಬ ಭಾವನೆ ಎಲ್ಲರಲ್ಲೂ ಮೂಡಿತು.

ಆ ಕಾಲದ ಫ್ಯಾಷನಬಲ್ ಮಟ್ಟುಗಳ ಬಗೆಗಿನ ಉತ್ಸಾಹದೊಡನೆ ಯೂರೋಪ್‌ಗೆ ಎರಡನೆಯ ಬಾರಿ ಪ್ರವಾಸ ಕೈಗೊಂಡು ಕ್ಯಾರಕಾಸ್‌ನಲ್ಲಿ ನಡೆದ ಸುಪ್ರಸಿದ್ಧ ಮೆಸ್ಟಿಜ಼ೋಸ್ ಮದುವೆಗಳಲ್ಲಿ ತಾರಕದಲ್ಲಿ ಹಾಡಿಯೂ ಅತ್ಯುನ್ನತ ಸೊಬಗಿನಿಂದ ನರ್ತಿಸಿಯೂ ಬಂದಿದ್ದರು. ಯುದ್ಧವು ಅವರ ಅಭಿರುಚಿಯನ್ನು ಬದಲಿಸಿತ್ತು. ಪ್ರಥಮ ಪ್ರಣಯಗಳ ಸಂಶಯ ಕ್ಷಣಗಳಲ್ಲಿ ಕೈಹಿಡಿದು ನಡೆಸಿದ್ದ ಜನಪ್ರಿಯ ಪ್ರಣಯ ಗೀತಗಳ ಜಾಗವನ್ನು ಎದೆತುಂಬುವ ವಾಲ್ಟ್‌ಜ಼್‌ಗಳೂ ಚಟುಲ ಗತಿಗಳೂ ಆಕ್ರಮಿಸಿದ್ದವು. ಕಾರ್ಟಜೆನದಲ್ಲಿ ಅಂದು ರಾತ್ರಿ ಮತ್ತೆ ತಮ್ಮ ಯೌವನಕಾಲದ ಗೀತಗಳಿಗಾಗಿ ಬೇಡಿಕೆಯಿತ್ತಿದ್ದರು; ಅವುಗಳಲ್ಲಿ ಕೆಲವು ಎಷ್ಟು ಹಳೆಯವೆಂದರೆ, ಎಲ್ಲವನ್ನೂ ನೆನಪಿಟ್ಟುಕೊಳ್ಳಲು ಇನ್ನೂ ತೀರ ಚಿಕ್ಕವನಾಗಿದ್ದ ಇಟೂರ್‌ಬೈಡ್‌ಗೆ ಅವುಗಳನ್ನು ತಾವೇ ಹೇಳಿಕೊಡಬೇಕಾಗಿತ್ತು. ಜನರಲ್‌ರ ಅಂತರಂಗದಲ್ಲಿ ಕಾವೇರುವ ಹೊತ್ತಿಗೆ ಪ್ರೇಕ್ಷಕರೆಲ್ಲ ಜಾಗ ಖಾಲಿ ಮಾಡಿದ್ದರು, ಕೊನೆಗೆ ಕೆಂಡದ ಬದಿ ಅವರೊಡನೆ ಉಳಿದವನು ಇಟೂರ್‌ಬೈಡ್ ಒಬ್ಬನೇ.

ಅದೊಂದು ವಿಚಿತ್ರ ರಾತಿ, ಆಗಸದಲ್ಲಿ ಒಂದಾದರೂ ನಕ್ಷತ್ರ ಕಾಣಿಸುತ್ತಿರಲಿಲ್ಲ, ಸಮುದ್ರದ ಮೇಲಿಂದ ಗಾಳಿ ತೀಡುತ್ತಿತ್ತು, ಅನಾಥರ ರೋದನದಿಂದಲೂ ವಿನಾಶದ ಗಂಧದಿಂದಲೂ ವಾತಾವರಣ ಭಾರವಾಗಿತ್ತು. ರಾತ್ರಿಯೆಲ್ಲ ನಿರಂತರವಾಗಿ ಹಾಡಲು ಇಟೂರ್‌ಬೈಡ್ ಎಷ್ಟು ಸಮರ್ಥನಾಗಿದ್ದನೋ, ಬೂದಿ ಗುಡ್ಡೆಯ ಮುಂದೆ ಕುಳಿತು ಆಳವಾದ ಯೋಚನೆಗಳಲ್ಲಿ ಮುಳುಗಿದಾಗ್ಗವನು ಅಷ್ಟೇ ಮಹಾ ಮೌನಿ. ಕಡ್ಡಿಯೊಂದರಿಂದ ಬೆಂಕಿಯನ್ನು ಕೆದಕುತ್ತ ಜನರಲ್‌ರು ಮೌನವನ್ನು ಮುರಿದು “ಮೆಕ್ಸಿಕೋದಲ್ಲಿ ಜನ ಏನು ಮಾತಾಡಿಕೋತಾರೆ?” ಎಂದು ಕೇಳಿದರು.

"ನನಗಲ್ಲಿ ಯಾರೂ ಪರಿಚಯದವರಿಲ್ಲ, ನಾನೊಬ್ಬ ದೇಶಭ್ರಷ್ಟ" ಎಂದ ಇಟೂರ್‌ಬೈಡ್.

"ನಾವೆಲ್ಲ ದೇಶಭ್ರಷ್ಟರೇ. ಇದು ಆರಂಭವಾದಾಗಿನಿಂದ ನಾನು ವೆನಿಝೂಲದಲ್ಲಿ ವಾಸಿಸಿದ್ದು ಆರು ವರ್ಷ ಮಾತ್ರ, ಮಿಕ್ಕ ಕಾಲವನ್ನೆಲ್ಲ ವಿಪತ್ತುಗಳಿಂದ ಪಾರಾಗಲು ಅರ್ಧ ಪ್ರಪಂಚವನ್ನೆಲ್ಲ ಸುತ್ತಿದ್ದಾಯಿತು. ಸ್ಯಾನ್ ಮೇತಿಯೋದಲ್ಲಿ ಒಂದು ಹರ್ವಿಡೋ ತಿನ್ನಲು ಎಂಥ ಪಾಡು ಪಡಬೇಕಾಗಿತ್ತು ಅನ್ನೋದನ್ನ ನೀನು ಕಲ್ಪಿಸಿಕೊಳ್ಳಲಾರೆ ಕೂಡ."

ಅವರ ಮನಸ್ಸಾಗಲೇ ಬಾಲ್ಯದ ದೂರದ ಸಕ್ಕರೆ ಕಾರ್ಖಾನೆಯ ಕಡೆ ಹಾರಿಹೋದಂತಿತ್ತು, ನಂದಿ ಹೋಗುತ್ತಲಿದ್ದ ಬೆಂಕಿಯ ಕಡೆ ಗಾಢ ಮೌನದಿಂದ ನೋಡುತ್ತಿದ್ದ ಅವರ ರೀತಿ ಹಾಗಿತ್ತು. ಮತ್ತೆ ಮಾತಾಡಿದಾಗ ಪುನಃ ವಾಸ್ತವಕ್ಕೆ ಮರಳಿದ ಹಾಗೆ ಕಾಣಿಸಿತು: "ನಮ್ಮ ಮುಂದಿರುವ ಪ್ರಶ್ನೆಯ ಪೆಡಂಭೂತವೆಂದರೆ, ನಾವು ಸ್ಪಾನಿಯಾರ್ಡ್‌ಗಳಾಗಿರುವುದನ್ನು ನಿಲ್ಲಿಸಿ ದಿನದಿನಕ್ಕೂ ಹೆಸರುಗಳನ್ನೂ ಸರ್ಕಾರಗಳನ್ನೂ ಬದಲಾಯಿಸಿಕೊಳ್ಳುವ ದೇಶಗಳಲ್ಲಿ ಒಂದೇ ಸಮನೆ ಸುತ್ತಾಡುತ್ತ ನಮಗೆ ನಮ್ಮದು ಯಾವ ಊರು ಎಂಬುದೇ ತಿಳಿಯುತ್ತಿಲ್ಲ." ಪುನಃ ಬೂದಿಯ ಮೇಲೆ ದೀರ್ಘ ಕಾಲ ನೋಟ ನಟ್ಟು ಆನಂತರ ಮತ್ತೊಂದು ಧ್ವನಿಯಲ್ಲಿ ಕೇಳಿದರು:

"ಈ ಜಗತ್ತಿನಲ್ಲಿ ಇಷ್ಟೊಂದು ದೇಶಗಳಿದ್ದರೂ ಇಲ್ಲಿಗೆ ಬರಬೇಕೆಂದು ನಿನಗನಿಸಿದ್ದಾದರೂ ಹೇಗೆ?"

ಉತ್ತರ ನೀಡುವ ಮೊದಲು ಇಟೂರ್‌ಬೈಡ್ ದೀರ್ಘ ಪೀಠಿಕೆ ಹಾಕಿದ: "ನಮಗೆ ಮಿಲಿಟರಿ ಶಾಲೆಯಲ್ಲಿ ಹೇಳಿಕೊಟ್ಟದ್ದೆಂದರೆ ಕಾಗದದ ಮೇಲೆ ಯುದ್ಧ ಮಾಡುವುದು. ಮಣ್ಣಿನ ಭೂಪಟಗಳ ಮೇಲೆ ಪುಟ್ಟ ಪುಟ್ಟ ಸೀಸದ ಸೈನಿಕರ ಜೊತೆ ನಾವು ಹೋರಾಡಿದೆವು. ಭಾನುವಾರಗಳಂದು ದನಗಳು ಹಾಗೂ ಪ್ರಾರ್ಥನೆ ಮುಗಿಸಿ ಮರಳುತ್ತಿದ್ದ ಹೆಂಗಸರ ಜೊತೆ ನಮ್ಮನ್ನು ಸಮೀಪದ ಹುಲ್ಲುಗಾವಲುಗಳಿಗೆ ಕರೆದೊಯ್ಯುತ್ತಿದ್ದರು. ನಾವು ಸಿಡಿತದ ಆಘಾತ ಮತ್ತು ಸಿಡಿಮದ್ದಿನ ವಾಸನೆಗಳಿಗೆ ಒಗ್ಗಿಕೊಳ್ಳಲೆಂದು ಕರ್ನಲ್ ಫಿರಂಗಿಯಿಂದ ಗುಂಡು ಹಾರಿಸುತ್ತಿದ್ದರು, ಗೊತ್ತಾ? ಆಗ ಅತ್ಯಂತ ಪ್ರಸಿದ್ಧ ಅಧ್ಯಾಪಕರು ಎಂದರೆ ಒಬ್ಬ ವಿಕಲಾಂಗ ಇಂಗ್ಲಿಷ್‌ಮನ್; ಶತ್ರು ಕೊಲ್ಲಲು ಬಂದಾಗ ಕುದುರೆಯಿಂದ ಹಾರಿಕೊಳ್ಳೋದನ್ನ ನಮಗೆ ಹೇಳಿಕೊಟ್ಟದ್ದು ಅವರೇ."

ಜನರಲ್ ಮಧ್ಯೆ ಬಾಯಿ ಹಾಕಿ ಕೇಳಿದರು: "ನಿನಗೆ ನಿಜವಾದ ಸೈನಿಕ ಆಗಬೇಕು ಅಂತ ಆಗ ಅನ್ನಿಸಿತ್ತಾ?"

"ಹ್ಞೂ, ನಿಮ್ಮ ಯುದ್ಧ, ಜನರಲ್. ಆದರೆ ನನ್ನನ್ನು ಸೈನ್ಯ ಒಪ್ಪಿಕೊಳ್ಳಲು ಎರಡು ವರ್ಷಗಳೇ ಬೇಕಾದವು. ಆದರೆ ನಿಜವಾದ ರಕ್ತ–

ಮಾಂಸಗಳ ಯುದ್ಧ ಅಂದರೆ ಏನು ಅಂತ ಈಗಲೂ ಗೊತ್ತಿಲ್ಲ" ಎಂದ ಇಟೂರ್‌ಬೈಡ್.

ಇಷ್ಟಾದರೂ ಈವರೆಗೆ ಜನರಲ್ ಅವನ ಮುಖವನ್ನು ನೋಡಿರಲಿಲ್ಲ. "ಹ್ಯೂ, ನೀನು ಆರಿಸಿಕೊಂಡದ್ದು ಸರಿಯಲ್ಲದ ಗುರಿಯನ್ನ. ಇಲ್ಲಿ ನಡೆಯೋ ಯುದ್ಧಗಳೆಂದರೆ ಅಂತಃಕಲಹಗಳು ಮಾತ್ರ, ಅಂದರೆ ತಾಯಿಯನ್ನೇ ಕೊಲ್ಲೋದು ಅಂತ ಅರ್ಥ" ಎಂದರು. ಆಗಲೇ ಬೆಳಗಿನ ಜಾವವಾಗಿದೆ ಅಂತ ಜೋಸೆ ಪೆಲಾಸಿಯೋಸ್ ನೆರಳುಗಳಿಂದಲೇ ಸೂಚಿಸಿದ. ಆಮೇಲೆ ಅವರು ಕೋಲಿನಿಂದ ಬೂದಿಯನ್ನು ಕೆದಕಿ ಇಟೂರ್‌ಬೈಡ್‌ನ ತೋಳನ್ನು ಹಿಡಿದುಕೊಂಡು ಎದ್ದು ನಿಂತರು.

"ನಾನು ನೀನಾಗಿದ್ದರೆ ಅವಮಾನ ಆವರಿಸೋದಕ್ಕೆ ಮುಂಚೆ ಆದಷ್ಟು ಬೇಗ ಇಲ್ಲಿಂದ ಕಾಲ್ತೆಗೀತಾ ಇದ್ದೆ" ಎಂದರು.

ಲ ಪೋಪ ತಪ್ಪಲಿನ ಮನೆಯಲ್ಲಿ ಕ್ಷುದ್ರ ಶಕ್ತಿಗಳು ನೆಲಸಿವೆ ಅಂತ ಜೋಸೆ ಪೆಲಾಸಿಯೋಸ್ ಜನರಲ್ ಸಾಯುವ ದಿನದವರೆಗೂ ಹೇಳುತ್ತಲೇ ಇದ್ದ. ವೆನಝೂಲದಿಂದ ಬಂದ ಹಡಗಿನ ಅಧಿಕಾರಿ ಜೋಸೆ ಥಾಮಸ್ ಮಶಾಡೋ ಅನೇಕ ಸೈನಿಕ ನೆಲೆಗಳು ಪ್ರತ್ಯೇಕತಾವಾದಿ ಸರ್ಕಾರವನ್ನು ಧಿಕ್ಕರಿಸಿವೆ ಹಾಗೂ ಜನರಲ್‌ರನ್ನು ಬೆಂಬಲಿಸುವ ಹೊಸ ಪಕ್ಷವೊಂದು ಪ್ರಬಲವಾಗುತ್ತಿದೆ ಎಂಬ ಸುದ್ದಿ ತಂದ. ಜನರಲ್ ಅವನನ್ನು ಏಕಾಂತದಲ್ಲಿ ಭೇಟಿಯಾಗಿ ಅವನ ಮಾತುಗಳನ್ನು ಗಮನವಿಟ್ಟು ಕೇಳಿದರು, ಆದರೆ ಅವರಲ್ಲಿ ಉತ್ಸಾಹ ಮಾತ್ರ ಉಳಿದಿರಲಿಲ್ಲ. "ಸುದ್ದಿಯೇನೋ ಒಳ್ಳೆಯದೇ, ಆದರೆ ತೀರ ತಡವಾಯಿತು. ಇನ್ನು ನನ್ನ ವಿಷಯ, ಬಡಪಾಯಿ ವಿಕಲಾಂಗ, ಇಡೀ ಜಗತ್ತಿನ ವಿರುದ್ಧ ನಾನೇನು ಮಾಡಿಯೇನು?" ಎಂದರು. ಈ ದೂತನನ್ನು ಸಕಲ ಗೌರವಗಳಿಂದ ಉಳಿಸಲು ಸೂಚನೆಯಿತ್ತರು, ಆದರೆ ಉತ್ತರ ಕೊಡುವುದಕ್ಕೆ ಮಾತ್ರ ಒಪ್ಪಲಿಲ್ಲ. "ನಮ್ಮ ತಾಯ್ನಾಡಿನ ಆರೋಗ್ಯ ಸುಧಾರಿಸತ್ತೆ ಅಂತ ನನಗನ್ನಿಸಲ್ಲ" ಎಂದರು.

ಆದರೆ ಕ್ಯಾಪ್ಟನ್ ಮಶಾಡೋಗೆ ವಿದಾಯ ಹೇಳಿದ ಮೇಲೆ ಜನರಲ್ ಕ್ಯಾರೆನೋ ಕಡೆ ತಿರುಗಿ ಹೀಗೆ ಕೇಳಿದರು: "ಸ್ಯೂಕ್ರೆ ಎಲ್ಲಿದ್ದಾನೆ ಅಂತ ಪತ್ತೆ ಹಚ್ಚಿದಿರಾ?" ಅವನು ತನ್ನ ಹೆಂಡತಿ ಮತ್ತು ಮಗಳ ಜೊತೆ ಹಾಯಾಗಿ ಕಾಲ ಕಳೆಯಲು ಸಂಟಾ ಫ಼ ದ ಬೊಗೋಟವನ್ನು ಮೇ ಮಧ್ಯಭಾಗದಲ್ಲಿಯೇ ಬಿಟ್ಟಿದ್ದ.

"ಬೇಕಾದಷ್ಟು ಕಾಲ ಹಾಯಾಗಿ ಕಳೆದರು, ಯಾಕಂದ್ರೆ ಅಧ್ಯಕ್ಷ ಮಾಸ್‌ಕ್ವೇರಾ ಅವರನ್ನು ಪೊಪಾಯನ್ ರಸ್ತೆಯ ಮೂಲಕ ಕಳಿಸಿದ್ರು."

"ನನಗೆ ನಂಬಕ್ಕೇ ಆಗ್ತಾ ಇಲ್ಲ, ಅವನು ರಸ್ತೆ ಪ್ರಯಾಣ ಮಾಡಿದನಾ?"

"ಹೌದು, ಜನರಲ್."

"ಅಯ್ಯೋ ದೇವೇ!" ಎಂದು ಅವರು ಉದ್ಗರಿಸಿದರು.

ಅದೊಂದು ಮುನ್ನರಿವಿನ ಉದ್ಗಾರವಾಗಿತ್ತು. ಅಂದು ರಾತ್ರಿಯೇ ಅವರಿಗೆ ಸುದ್ದಿ ಬಂದು ಫೀಲ್ಡ್ ಮಾರ್ಷಲ್ ಸ್ಯೂಕ್ರ್ ಜೂನ್ ನಾಲ್ಕರಂದು ಬೆರ್ರುಕೋಸ್‌ನ ಕತ್ತಲು ಕವಿದ ರಸ್ತೆಯಲ್ಲಿ ಹೋಗುತ್ತಿರುವಾಗ ಅವನನ್ನು ಸುತ್ತುವರಿದು ಬೆನ್ನಿಗೆ ಗುಂಡು ಹೊಡೆದು ಕೊಂದಿದ್ದ ವಿಷಯ ತಿಳಿಯಿತು. ಜನರಲ್ ಸಂಜೆಯ ಸ್ನಾನ ಮುಗಿಸಿ ಕೂತಿದ್ದ ಹೊತ್ತಿನಲ್ಲಿ ಮಾಂಟಿಲ ಈ ಕೆಟ್ಟ ಸುದ್ದಿಯೊಡನೆ ಬಂದಿದ್ದರು, ಅವರಿಗೆ ವರದಿಯನ್ನು ಪೂರ್ತಿ ಕೇಳುವ ತಾಳ್ಮೆಯೂ ಉಳಿದಿರಲಿಲ್ಲ. ಹಣೆ ಚಚ್ಚಿಕೊಂಡು ರಾತ್ರಿ ಊಟಕ್ಕಾಗಿ ಮೇಜಿನ ಮೇಲಿರಿಸಿದ್ದ ಪದಾರ್ಥಗಳ ಕೆಳಗಿನ ಬಟ್ಟೆಯನ್ನು ಹರಿದಿದ್ದರು, ಅವರನ್ನು ಕ್ರೋಧ ಆವರಿಸಿತ್ತು.

"ಓ ಹಾಳಾಗಲಿ!" ಎಂದು ಕಿರುಚಿದರು.

ಅವರ ಕಿರಿಚಾಟ ಮನೆಯಲ್ಲೆಲ್ಲ ಅನುರಣಿಸಿತು, ಕೊಂಚ ಹೊತ್ತಿನಲ್ಲಿ ತಮ್ಮ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡರು. ಕುರ್ಚಿಯಲ್ಲಿ ದೊಪ್ಪನೆ ಕುಸಿದು ಕೂತರು; "ಅದು ಒಬಾಂಡೋನ ಕೆಲಸ" ಎಂದು ಬುಸುಗುಡುತ್ತಿದ್ದರು. ಅದನ್ನೇ ಮತ್ತೆ ಮತ್ತೆ ಹೇಳುತ್ತಿದ್ದು: "ಅದು ಅವನದೇ ಕೆಲಸ, ಸ್ಪಾನಿಯಾರ್ಡ್‌ಗಳ ಎಂಜಲು ತಿಂದ ಕೊಲೆಗಾರ ಒಬಾಂಡೋ." ಅವರು ಹೇಳುತ್ತಿದ್ದುದು ನ್ಯೂ ಗ್ರನಡಾದ ದಕ್ಷಿಣ ತುದಿಯಲ್ಲಿನ ಪ್ಯಾಸ್ಟೋದಲ್ಲಿ ಕಮಾಂಡರ್ ಆಗಿದ್ದ ಜನರಲ್ ಜೋಸೆ ಮರಿಯ ಒಬಾಂಡೋನ ಬಗ್ಗೆ; ಈ ಕೃತ್ಯದಿಂದ ಅವನು ಜನರಲ್‌ರ ಸಂಭಾವ್ಯ ಉತ್ತರಾಧಿಕಾರಿಯನ್ನು ಇಲ್ಲವಾಗಿಸಿ, ಛಿದ್ರವಾಗಿದ್ದ ಗಣರಾಜ್ಯಕ್ಕೆ ತಾನೇ ಅಧ್ಯಕ್ಷನಾಗಿ ಆನಂತರ ಅದನ್ನು ಸಟಾಂಡರ್‌ಗೆ ವರ್ಗಾಯಿಸುವುದನ್ನು ಖಚಿತಪಡಿಸಿಕೊಂಡಿದ್ದ. ಕೊಲೆಗೈಯಲು ಆರಿಸಿಕೊಂಡಿದ್ದ ಸಂಟಾ ಫ಼ ದ ಬೊಗೋಟದ ಮುಖ್ಯ ಚೌಕದೆಡೆಗೆ ಮನೆಯಿಂದ ತಾನು ಹೊರಟಾಗ ಫೀಲ್ಡ್ ಮಾರ್ಷಲ್ ಸ್ಯೂಕ್ರ್ ರಾತ್ರಿಯ ಮೈಕೊರೆಯುವ ದಟ್ಟ ಮಂಜಿನಲ್ಲಿ ಉಣ್ಣೆಯ ಕಪ್ಪು ನೀಳ ಕೋಟು ಮತ್ತು ಸಾಧಾರಣ ಹ್ಯಾಟ್ ಧರಿಸಿ ಕೈಗಳನ್ನು ಕೋಟ್ ಜೇಬುಗಳಲ್ಲಿರಿಸಿಕೊಂಡು ಕ್ಯಾಥೆಡ್ರೀಲ್‌ನ ಅಂಗಳದಲ್ಲಿ ಒಂಟಿಯಾಗಿ ನಡೆಯುತ್ತಿದ್ದುದನ್ನು ಕಂಡು ತನಗೆ ಏನೋ ತಳಮಳವಾದುದಾಗಿ ಸಂಚುಗಾರರಲ್ಲಿ ಒಬ್ಬ ಆನಂತರ ನೆನಪಿಸಿಕೊಂಡಿದ್ದ.

ಸ್ಯೂಕ್ರ್‌ನ ಮರಣದ ವಿಷಯ ತಿಳಿದ ರಾತ್ರಿ ಜನರಲ್ ರಕ್ತ ವಾಂತಿಮಾಡಿಕೊಂಡರು. ಈ ವಿಷಯವನ್ನು ಜೋಸೆ ಪೆಲಾಸಿಯೋಸ್ ಮುಚ್ಚಿಟ್ಟ, ಬಚ್ಚಲು ಮನೆಯ ನೆಲವನ್ನು ಸ್ಪಂಜಿನಿಂದ ತೊಳೆಯುತ್ತಿದ್ದುದನ್ನು ಕಂಡ ಜನರಲ್ ಚಕಿತರಾಗಿದ್ದರು. ಹೇಳದೆಯೇ ಅವನು ಈ ಎರಡು

ಗುಟ್ಟುಗಳನ್ನು ಬಚ್ಚಿಟ್ಟುಕೊಂಡಿದ್ದ: ಈಗಾಗಲೇ ಕೆಟ್ಟ ಸುದ್ದಿ ತಳಮಳಗೊಳಿಸಿರುವಾಗ ಮತ್ತಷ್ಟು ಆಘಾತಕಾರಕ ವಿಷಯಗಳನ್ನು ಅದಕ್ಕೆ ಸೇರಿಸಲು ಅವನು ಇಷ್ಟಪಡಲಿಲ್ಲ.

ಇಂಥದೇ ಮತ್ತೊಂದು ರಾತ್ರಿ, ಗುಯಾಕಿಲ್‌ನಲ್ಲಿ, ತಾನು ಅಕಾಲದ ವೃದ್ಧಾಪ್ಯಕ್ಕೆ ಸಲ್ಲುತ್ತಿರುವ ಅರಿವು ಜನರಲ್‌ರಿಗೆ ಉಂಟಾಗಿತ್ತು. ಈಗಲೂ ಅವರು ಭುಜದವರೆಗೆ ಕೂದಲನ್ನು ಇಳಿಬಿಟ್ಟುಕೊಂಡು ಸೌಕರ್ಯಕ್ಕಾಗಿ ಕತ್ತಿನ ಹಿಂದೆ ರಿಬ್ಬನ್‌ನಿಂದ ಕಟ್ಟಿಕೊಂಡಿದ್ದರು; ಯುದ್ಧವಾಗಲೀ ಪ್ರಣಯವಾಗಲೀ ಅವರು ಇದುವರೆಗೂ ಹೀಗೆಯೇ ಇದ್ದದ್ದು. ಆದರೆ ಆ ರಾತ್ರಿ ಕೂದಲು ನರೆಯುತ್ತಿರುವುದನ್ನು ಹಾಗೂ ಮುಖದ ಮೇಲೆ ಸುಕ್ಕುಗಳು ಮೂಡಿರುವುದನ್ನು ಗಮನಿಸಿದ್ದರು, ಇದರಿಂದಾಗಿ ಅವರಿಗೆ ಬೇಗುದಿಯಾಗಿತ್ತು. “ನೀನೇನಾದರೂ ಈಗ ನನ್ನ ಕಂಡರೆ ಗುರುತಿಸಲಾರೆ, ನನಗೀಗ ನಲವತ್ತೊಂದು ವರ್ಷ, ಆದರೆ ನಾನು ಅರುವತ್ತರ ಮುದುಕನಂತೆ ಕಾಣುತ್ತಿದ್ದೇನೆ” ಎಂದು ಗೆಳೆಯನೊಬ್ಬನಿಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿದ್ದರು. ಆ ರಾತ್ರಿ ಕೂದಲನ್ನು ಕತ್ತರಿಸಿಕೊಂಡಿದ್ದರು. ಕೊಂಚ ಕಾಲದ ಬಳಿಕ ಪೋರ್ಟೋಸಿಯಲ್ಲಿ, ಕೈಬೆರಳುಗಳ ನಡುವೆಯೇ ಬೀಸಿಕೊಂಡು ಹೋಗುತ್ತಿರುವ ತಮ್ಮ ಯೌವನದ ಗಾಳಿಯನ್ನು ತಡೆಯಲು ಕ್ಷೌರಮಾಡಿಕೊಂಡು ಮೀಸೆ ಹಾಗೂ ಕೆನ್ನೆಯ ಕೂದಲನ್ನು ತೆಗೆದು ಹಾಕಿದ್ದರು.

ಸ್ಯೂಕ್ರ್‌ನ ಕೊಲೆಯಾದ ನಂತರ ತಮ್ಮ ವಯಸ್ಸನ್ನು ಮುಚ್ಚಿಕೊಳ್ಳುವ ಯಾವ ಪರಿಕರಗಳನ್ನೂ ಅವರು ಮೇಜಿನ ಮೇಲಿರಿಸಿಕೊಂಡಿರಲಿಲ್ಲ. ಲ ಪೋಪ ತಪ್ಪಲಿನ ಮನೆ ದುಃಖದಲ್ಲಿ ಮುಳುಗಿತ್ತು. ಅಧಿಕಾರಿಗಳು ಇಸ್ಪೀಟಾಟವನ್ನು ನಿಲ್ಲಿಸಿದ್ದರು, ಮೊಗಸಾಲೆಯಲ್ಲಿ ಸೊಳ್ಳೆಗಳನ್ನು ಓಡಿಸಲು ಬೆಂಕಿ ಹಾಕಿಕೊಂಡು ಸುತ್ತ ಕುಳಿತು ಮಾತನಾಡುತ್ತಲೋ ಅಥವಾ ಮಲಗುವ ಪಡಸಾಲೆಯಲ್ಲಿ ವಿವಿಧ ಹಂತಗಳಲ್ಲಿ ಕಟ್ಟಿದ್ದ ಜೋಲಿಮಂಚಗಳಲ್ಲಿ ಬಿದ್ದುಕೊಂಡೋ ರಾತ್ರಿಗಳನ್ನು ಕಳೆಯುತ್ತಿದ್ದರು.

ಜನರಲ್‌ರ ಮನಸ್ಸಿನ ಕಹಿ ತೊಟ್ಟು ತೊಟ್ಟಾಗಿ ಜಿನುಗುತ್ತಿತ್ತು. ಅನೈಚ್ಛಿಕವಾಗಿಯೇ ಇಬ್ಬರು ಮೂವರು ಅಧಿಕಾರಿಗಳನ್ನು ಆರಿಸಿ, ರಾತ್ರಿಯೆಲ್ಲ ಅವರನ್ನು ಎಚ್ಚರವಾಗಿರಿಸಿ ತಮ್ಮ ಹೃದಯವನ್ನು ವ್ರಣವಾಗಿಸಿದ್ದ ಕಟು ಅನುಭವಗಳನ್ನು ತೋಡಿಕೊಳ್ಳತೊಡಗಿದ್ದರು. ಪೆರುವಿನ ವಿಮೋಚನಾ ಕಾರ್ಯವನ್ನು ಪೂರೈಸಲು ಬೇಕಾದ ಸೈನಿಕರನ್ನಾಗಲೀ ಹಣವನ್ನಾಗಲೀ ಕಳಿಸದೆ ಸೈನ್ಯವು ಕರಗಿ ಹೋಗುವ ಸ್ಥಿತಿಯನ್ನು ತಂದಿಟ್ಟಿದ್ದ ಕೊಲಂಬಿಯದ ನೇಮಿತ ಅಧ್ಯಕ್ಷನಾಗಿದ್ದ ಸಟಾಂಡರ್‌ನ ಜಿಪುಣತನದ ಹಳೆಯ ಕತೆಯನ್ನು ನಿರೂಪಿಸಿ ಅವರನ್ನು ಕೇಳುವಂತೆ ಮಾಡುತ್ತಿದ್ದರು.

"ಅವನೊಬ್ಬ ಹುಟ್ಟ ಜಿಪುಣ, ಎಂಜಲು ಕೈಯಲ್ಲಿ ಕಾಗೆ ಓಡಿಸೋನಲ್ಲ. ಆದರೆ ಅವನ ತರ್ಕ ಮತ್ತಷ್ಟು ವಿಕೃತವಾದದ್ದು; ವಸಾಹತುವಿನ ಗೆರೆಯಾಚೆ ನೋಡಬಲ್ಲ ವಿವೇಚನೆಯೇ ಅವನಿಗಿರಲಿಲ್ಲ" ಎಂದು ವಿಶ್ಲೇಷಣೆ ಮಾಡಿದ್ದ.

ಅಮೆರಿಕದ ಐಕ್ಯವನ್ನು ಘೋಷಿಸುವ ಪ್ರಶ್ನೆ ಮಾತ್ರ ಉಳಿದಿರುವುದರಿಂದ, ಸಟಾಂಡರ್ ತಾನಾಗಿ ಬಿಟ್ಟು ಹೋಗಿರುವ ಕಾರಣ ಪನಾಮದ ಕಾಂಗ್ರೆಸ್‌ಗೆ ಸಂಯುಕ್ತ ಸಂಸ್ಥಾನಗಳನ್ನು ಆಹ್ವಾನಿಸುವುದು ಸಮಗ್ರತೆಗೆ ಮಾರಣಾಂತಿಕ ಹೊಡೆತ ಎಂಬುದನ್ನವರು ಸಾವಿರದೊಂದನೇ ಬಾರಿ ಪುನರುಚ್ಚರಿಸಿದರು.

"ಇದು ಬೆಕ್ಕನ್ನು ಇಲಿಗಳ ಹಬ್ಬಕ್ಕೆ ಆಹ್ವಾನಿಸಿದ ಹಾಗೆ. ಯಾಕಂದರೆ, ಈ ಖಂಡವನ್ನು ಪವಿತ್ರ ಸ್ನೇಹಕೂಟವಾಗಿಸುವ ಬದಲು ಜನಪ್ರಿಯ ಸರ್ಕಾರಗಳಿರುವ ದೇಶಗಳ ಒಕ್ಕೂಟವಾಗಿ ಪರಿವರ್ತಿಸುತ್ತಿದ್ದೇವೆ ಎಂದು ನಮ್ಮ ಮೇಲೆ ಆರೋಪ ಹೊರಿಸಲು ಸಂಯುಕ್ತ ಸಂಸ್ಥಾನಗಳು ಹವಣಿಸುತ್ತಿರುವುದರಿಂದ" ಎಂದು ವಿವರಿಸಿದರು.

ಉದ್ದೇಶ ಸಾಧನೆಗಾಗಿ ಸಟಾಂಡರ್ ಹೊಂದಿರುವ ಅನೂಹ್ಯ ಸಮಚಿತ್ತತೆಯ ಬಗೆಗಿನ ತಮ್ಮ ಭಯವನ್ನವರು ಮತ್ತೊಮ್ಮೆ ವ್ಯಕ್ತಪಡಿಸಿದರು. "ಅವನು ಸತ್ತ ಮೀನಿನಷ್ಟೇ ನಿರ್ಭಾವುಕ" ಎಂದು ಬಣ್ಣಿಸಿದರು. ಸಟಾಂಡರ್ ಲಂಡನ್‌ನಿಂದ ಪಡೆದಿದ್ದ ಸಾಲಗಳ ಬಗ್ಗೆಯೂ ತನ್ನ ಸ್ನೇಹಿತರ ಲಂಚಗುಳಿತನವನ್ನು ಪ್ರೋತ್ಸಾಹಿಸಿದ ಬಗ್ಗೆಯೂ ಅದೆಷ್ಟನೆಯ ಬಾರಿಯೋ ಉಗ್ರವಾಗಿ ಖಂಡಿಸಿದರು. ಅವನನ್ನು ನೆನಪಿಸಿಕೊಂಡಾಗಲೆಲ್ಲ, ಖಾಸಗಿಯಾಗಲೀ ಸಾರ್ವಜನಿಕವಾಗಿಯಾಗಲೀ, ಆಗಲೇ ಪರ್ಯಾಪ್ತವಾಗಿ ವಿಷಮಯವಾಗಿದ್ದ ರಾಜಕೀಯ ವಾತಾವರಣಕ್ಕೆ ಮತ್ತಷ್ಟು ವಿಷವನ್ನು ಸುರಿಯುತ್ತಿದ್ದರು. ಈ ವಿಷಯದಲ್ಲಿ ಅವರು ನಿಯಂತ್ರಣ ಕಳೆದುಕೊಂಡಿದ್ದರು.

"ಜಗತ್ತು ಛಿದ್ರವಾಗತೊಡಗಿದ್ದೇ ಹೀಗೆ" ಎಂಬುದು ಅವರ ಅಂಬೋಣ.

ಸಾರ್ವಜನಿಕ ಹಣದ ಬಳಕೆಯಲ್ಲಿ ಅವರೆಷ್ಟು ಕಟ್ಟುನಿಟ್ಟೆಂದರೆ ಈ ವಿಷಯಕ್ಕೆ ಬಂದಾಗ ತಮ್ಮ ಕ್ರೋಧವನ್ನು ತಡೆದುಕೊಳಲಾಗುತ್ತಿರಲಿಲ್ಲ. ತಾವು ಅಧ್ಯಕ್ಷರಾಗಿದ್ದಾಗ ಯಾರಾದರೂ ನೌಕರರು ಸಾರ್ವಜನಿಕ ಹಣದಲ್ಲಿ ಹತ್ತು ಪೆಸೋಗಳಿಗಿಂತ ಹೆಚ್ಚು ದುರುಪಯೋಗಪಡಿಸಿಕೊಂಡದ್ದು ಕಂಡರೆ ಮರಣದಂಡನೆಯನ್ನೇ ವಿಧಿಸಿಬಿಡುತ್ತಿದ್ದರು. ಆದರೆ ತಮ್ಮ ಸ್ವಂತ ಹಣವನ್ನು ವೆಚ್ಚ ಮಾಡುವಾಗ ಧಾರಾಳಿ, ಸ್ವಾತಂತ್ರ್ಯ ಸಂಗ್ರಾಮದ ಅವಧಿಯಲ್ಲಿ ಕೆಲವೇ ವರ್ಷಗಳಲ್ಲಿ ವಂಶಪಾರಂಪರ್ಯವಾಗಿ ಬಂದಿದ್ದ ಅಪಾರ ತಮ್ಮ

ಸಿರಿಯನ್ನವರು ಖರ್ಚು ಮಾಡಿದ್ದರು. ಅವರ ಸಂಪಾದನೆಯೆಲ್ಲ ಯುದ್ಧ ವಿಧವೆಯರು ಮತ್ತು ಯುದ್ಧದಲ್ಲಿ ಅಂಗವಿಕಲರಾದವರ ನಡುವೆ ಹಂಚಿಹೋಗುತ್ತಿತ್ತು. ಹಿರಿಯರಿಂದ ಬಂದಿದ್ದ ಕಬ್ಬಿನ ತೋಟವನ್ನೆಲ್ಲ ತಮ್ಮ ಸೋದರಸೋದರಿಯರ ಮಕ್ಕಳಿಗೇ ಬಿಟ್ಟುಕೊಟ್ಟಿದ್ದರು, ಕ್ಯಾರಕಾಸ್‌ನ ಮನೆ ಸೋದರಿಯರ ಪಾಲಾಯಿತು, ತಮ್ಮ ಪಾಲಿನ ಬಹುಪಾಲು ಜಮೀನನ್ನೆಲ್ಲ ಗುಲಾಪದ್ಧತಿಯ ರದ್ದತಿಗೆ ಮುನ್ನವೇ ತಾವು ಬಿಡುಗಡೆಗೊಳಿಸಿದ್ದ ಅನೇಕ ಮಂದಿ ಗುಲಾಮರಿಗೆ ಹಂಚಿಬಿಟ್ಟಿದ್ದರು. ದೇಶ ವಿಮೋಚನೆಗೊಂಡ ಸಂಭ್ರಮದ ದಿನಗಳಲ್ಲಿ ಲಿಮದ ಕಾಂಗ್ರೆಸ್ ಅವರಿಗೆ ಕೊಡಮಾಡಿದ್ದ ಹತ್ತು ಲಕ್ಷ ಪೆಸೋಗಳ ಕೊಡುಗೆಯನ್ನು ಒಪ್ಪಿಕೊಂಡಿರಲಿಲ್ಲ. ಸರ್ಕಾರ ತಾನು ಆರಾಮವಾಗಿ ಬದುಕಲೆಂದು ನೀಡಿದ್ದ ಮಾನ್ಸೊರೇಟ್ ಭೂಮಿಯನ್ನು ಆರ್ಥಿಕ ಸಂಕಷ್ಟದಲ್ಲಿದ್ದ ಗೆಳೆಯನೊಬ್ಬನಿಗೆ ಅಧಿಕಾರತ್ಯಾಗಕ್ಕಿಂತ ಕೆಲವೇ ದಿನ ಮುಂಚೆ ಕೊಟ್ಟಿದ್ದರು. ಅಪೂರೆಯಲ್ಲಿ ತಾನು ಮಲಗಿದ್ದ ಜೋಲಿಮಂಚದಿಂದ ಎದ್ದು ಅದನ್ನು ಜ್ವರದಿಂದ ಬಳಲುತ್ತಿದ್ದ ಸ್ಕಾಟ್ ಒಬ್ಬನಿಗೆ ವಿಶ್ರಾಂತಿ ಪಡೆಯಲೆಂದು ಬಿಟ್ಟುಕೊಟ್ಟಿದ್ದ, ಆಗ ತಾವು ಯುದ್ಧಕವಚ ತೊಟ್ಟು ನೆಲದ ಮೇಲೇ ಮಲಗಿದ್ದರು. ಕ್ವೇಕರ್ ಉಪದೇಶಕನಾದ ಜೋಸೆಫ್ ಲಂಕಾಸ್ಟರ್‌ಗೆ ತಮ್ಮ ನಿಧಿಯಿಂದ ಕೊಟ್ಟು ತೀರಿಸಬೇಕೆಂದುಕೊಂಡಿದ್ದ ಇಪ್ಪತ್ತು ಸಾವಿರ ಡ್ಯೋರೋಗಳಷ್ಟು ನಗದು ಸಾಲ ವೈಯಕ್ತಿಕವಾದುದಾಗಿರದೆ ಸರ್ಕಾರದ್ದಾಗಿತ್ತು. ತಾವು ಬಹುವಾಗಿ ಇಷ್ಟಪಟ್ಟಿದ್ದ ಕುದುರೆಗಳನ್ನು ಸ್ನೇಹಿತರ ಬಳಿಯೇ – ಭವ್ಯವೂ ಸುಪ್ರಸಿದ್ಧವೂ ಆದ ಪಲಾಮೋ ಬ್ಲಾಂಕೋ ಅನ್ನು ಕೂಡ ಫೀಲ್ಡ್ ಮಾರ್ಷಲ್ ದ ಸಂಟಾ ಕ್ರೂಝ್‌ನ ಬಳಿ ಬೊಲಿವಿಯದಲ್ಲಿ – ಬಿಟ್ಟು ಬಂದಿದ್ದರು. ಹೀಗಾಗಿಯೇ ಸಾಲದ ಹಣದ ದುರುಪಯೋಗವೆಂದರೆ ವಿಶ್ವಾಸಘಾತಕತನ ಎನ್ನುವಷ್ಟರ ಮಟ್ಟಿಗೆ ಪಿತ್ತ ನೆತ್ತಿಗೇರುತ್ತಿತ್ತು.

"ಕ್ಯಾಸಾಂಡ್ರೋ ಮಾತ್ರ ಸೆಪ್ಟೆಂಬರ್ ೨೫ ರಂದು ನಿರಪರಾಧಿಯೆಂದು ಸಾಬೀತಾಯಿತು, ಅನ್ನಿ. ಯಾಕಂದರೆ ಅವನು ಒಳ್ಳೆಯ ರೂಪವನ್ನು ಗುರುತಿಸುವುದರಲ್ಲಿ ಪಳಗಿದವನು. ಆದರೆ ಅವನ ಗೆಳೆಯರು ಮಾತ್ರ ಹಣವನ್ನು ಇಂಗ್ಲಂಡ್‌ಗೆ ತೆಗೆದುಕೊಂಡು ಹೋದರು, ಆ ಹಣ ಯಾವುದು ಅಂದ್ರೆ ಇಂಗ್ಲಿಷ್‌ನೋರು ಆಕಾಶದೆತ್ತರ ಬಡ್ಡಿಗೆ ದೇಶಕ್ಕೆ ಕೊಟ್ಟ ಸಾಲದ ಮೊಬಲಗನ್ನು ಹೆಚ್ಚಿಸಿ ಆ ದುಬಾರಿ ಬಡ್ಡಿಯಿಂದ ಪಡೆದ ಲಾಭ" ಕೇಳುವವರ ಮುಂದೆಲ್ಲ ಹೀಗೆ ಹೇಳಿಕೊಳ್ಳುತ್ತಿದ್ದರು ಜನರಲ್.

ರಾತ್ರಿ ಪೂರ್ತಿ ಎಲ್ಲರೆದುರಿಗೆ ತಮ್ಮ ಹೃದಯದ ರಾಡಿಯನ್ನು ತೋರಿಸುತ್ತಿದ್ದರು. ನಾಲ್ಕನೆಯ ದಿನ ಬೆಳಗಿನ ಜಾವದ ಹೊತ್ತಿಗೆ ಬಿಕ್ಕಟ್ಟು ಚಿರಂತನವೆನಿಸಿದಾಗ, ಹತ್ಯೆಯ ವಿಷಯ ತಿಳಿದಾಗ ಯಾವ ಉಡುಪಿನಲ್ಲಿದ್ದರೋ ಅದರಲ್ಲೇ ಮೊಗಸಾಲೆಯ ಬಾಗಿಲಲ್ಲಿ ಕಾಣಿಸಿಕೊಂಡು

ಜನರಲ್ ಬ್ರೈಸೆನೋ ಮೆಂಡೆಥ್ ಅನ್ನು ಪಕ್ಕಕ್ಕೆ ಕರೆದು, ಮೊದಲ ಕೋಳಿ ಕೂಗುವವರೆಗೂ ಅವನ ಜೊತೆ ಏಕಾಂತದಲ್ಲಿ ಮಾತಾಡುತ್ತಲೇ ಇದ್ದರು: ಸುತ್ತಲೂ ಸೊಳ್ಳೆ ಪರದೆ ಕಟ್ಟಿದ್ದ ಜೋಲಿಮಂಚದಲ್ಲಿ ಜನರಲ್, ಅದರ ಪಕ್ಕದಲ್ಲೇ ಜೋಸೆ ಪೆಲಾಸಿಯೋಸ್ ಕಟ್ಟಿಕೊಟ್ಟಿದ್ದ ಮತ್ತೊಂದರಲ್ಲಿ ಬ್ರೈಸೆನೋ ಮೆಂಡೆಥ್. ಪ್ರಾಯಶಃ ಅವರಿಬ್ಬರಿಗೂ ಕೂತು ಮಾತಾಡುವ ಶಾಂತಿಕಾಲದ ಅಭ್ಯಾಸ ಮರೆತೇ ಹೋಗಿತ್ತೇನೋ, ಕೆಲವೇ ದಿನಗಳಲ್ಲಿ ಮತ್ತೆ ಸೈನಿಕ ಬಿಡಾರದ ಅನಿಶ್ಚಿತ ರಾತ್ರಿಗಳಿಗೇ ಮರಳಿದ್ದರು. ಜೋಸೆ ಮರಿಯ ಕ್ಯಾರೆನೋ ಟರ್ಬಾಕೋದಲ್ಲಿ ವ್ಯಕ್ತಪಡಿಸಿದ್ದ ಕಳವಳ ಮತ್ತು ಅಪೇಕ್ಷೆಗಳು ಅವನೊಬ್ಬರದೇ ಅಲ್ಲ, ವೆನಿಝೂಲದ ಬಹುತೇಕ ಅಧಿಕಾರಿಗಳದು ಕೂಡ ಎಂಬ ಅಂಶ ಅವತ್ತಿನ ಸಂಭಾಷಣೆಯಿಂದ ಜನರಲ್‌ರಿಗೆ ಮನವರಿಕೆಯಾಯಿತು. ಅವರ ವಿರುದ್ಧ ನ್ಯೂ ಗ್ರನೆಡನ್‌ರು ಕ್ರಮ ತೆಗೆದುಕೊಂಡ ನಂತರ ಅವರಿಗೆ ತಾವು ಎಂದಿಗಿಂತಲೂ ಹೆಚ್ಚು ವೆನಿಝೂಲನ್ನರು ಎಂಬ ಭಾವನೆಯುಂಟಾಗಿತ್ತು, ಆದರೆ ಅವರು ದೇಶದ ಸಮಗ್ರತೆಗಾಗಿ ಜೀವ ತೆರಲೂ ಸಿದ್ಧರಾಗಿದ್ದರು. ವೆನಿಝೂಲದಲ್ಲಿ ಹೋರಾಟವನ್ನು ಮುಂದುವರೆಸಲು ಜನರಲ್ ಏನಾದರೂ ಆಜ್ಞೆಯಿತ್ತಿದ್ದರೆ ಅವರೆಲ್ಲ ಗುಂಪಾಗಿ ಅಲ್ಲಗೆ ಹೋಗುತ್ತಿದ್ದರು. ಅಂಥವರಲ್ಲಿ ಬ್ರೈಸೆನೋ ಮೆಂಡೆಥ್ ಮೊದಲನೆಯವನಾಗಿರುತ್ತಿದ್ದ.

ಆವು ಬಹು ಕೆಟ್ಟ ದಿನಗಳು. ಜನರಲ್ ಕಾಣಲು ಸಿದ್ಧನಾದ ಒಬ್ಬನೇ ಸಂದರ್ಶಕನೆಂದರೆ ಒಬ್ಬ ಪೋಲಿಶ್, ಕರ್ನಲ್ ಮೈಸೀಸ್ಲಾ ನೇಪಿಯರ್‌ಸ್ಕಿ, ಫ್ರಯೆಡ್‌ಲಂಡ್‌ನ ವೀರ ಮತ್ತು ಲೀಪ್‌ಝಿಗ್ ದುರಂತದಲ್ಲಿ ಬದುಕುಳಿದವನು; ಕೊಲಂಬಿಯ ಸೈನ್ಯ ಸೇರಲೆಂದು ಅವನು ಜನರಲ್ ಪೋನಿಯಟೋವ್‌ಸ್ಕಿಯಿಂದ ಶಿಫಾರಸನ್ನೂ ತಂದಿದ್ದ.

"ನೀವು ಬಂದದ್ದು ತೀರ ತಡವಾಯಿತು. ಇಲ್ಲಿ ಈಗ ಏನೂ ಉಳಿದಿಲ್ಲ" ಎಂದು ಜನರಲ್ ಅವನಿಗೆ ತಿಳಿಸಿದ್ದರು.

ಸ್ಯೂಕ್ರ್ ಸತ್ತ ನಂತರ ಎಲ್ಲ ಶೂನ್ಯವಾದಂತಾಯಿತು. ಇದನ್ನೇ ಅವರು ನೇಪಿಯರ್‌ಸ್ಕಿಗೂ ಹೇಳಿದ್ದು, ಇದನ್ನು ನೇಪಿಯರ್‌ಸ್ಕಿ ತನ್ನ ಪ್ರವಾಸಕಥನದಲ್ಲಿ ಹೇಳಿದ್ದ; ಒಂದು ನೂರ ಎಂಬತ್ತು ವರ್ಷಗಳ ಬಳಿಕ ಚರಿತ್ರೆಯ ಪುನಾರಚನೆಯ ಸಂದರ್ಭದಲ್ಲಿ ನ್ಯೂ ಗ್ರನೆಡದ ಮಹಾಕವಿಯೊಬ್ಬ ಇದನ್ನು ಬಳಸಿಕೊಂಡಿದ್ದ. ನೇಪಿಯರ್‌ಸ್ಕಿ ಶ್ಯಾನನ್ ಹಡಗನ್ನೇರಿ ಬಂದಿದ್ದ. ಅದರ ಕ್ಯಾಪ್ಟನ್ ಅವನೊಡನೆ ಜನರಲ್‌ರ ಮನೆಗೆ ಬಂದಿದ್ದ; ಆಗ ಜನರಲ್ ತಾವು ಯೂರೋಪ್‌ಗೆ ಹೋಗುವ ಬಯಕೆ ಹೊಂದಿರುವುದಾಗಿ ಮುಂದೆ ಹೇಳಿಕೊಂಡಿದ್ದರು. ಆದರೆ ಪ್ರಯಾಣ ಕೈಗೊಳ್ಳುವ ಶಕ್ತಿ ಅವರಲ್ಲಿಲ್ಲದಿರುವುದನ್ನು ಇಬ್ಬರೂ ಗಮನಿಸಿದ್ದರು. ಹಡಗು ಕಿಂಗ್‌ಸ್ಟನ್‌ಗೆ ಹೋಗುವಾಗ ಮಧ್ಯೆ ಲ ಗಯಾರದಲ್ಲಿ ನಿಂತು ಕಾರ್ಟೆಜೆನಕ್ಕೆ

ಮರಳುತ್ತಿದ್ದುದರಿಂದ, ವಾಪಸಾಗುವಾಗ ತಮಗೆ ಹಣ ಕಳಿಸುವಂತೆ ಅರೋವಾ ಗಣಿಗಳಿಗೆ ಸಂಬಂಧಿಸಿದ ಮಾತುಕತೆಗಳಲ್ಲಿ ವೆನಿಝೂಲದ ತಮ್ಮ ಏಜೆಂಟನಿಗೆ ಕೇಳಿಕೊಂಡ ಪತ್ರವೊಂದನ್ನು ಬರೆದು ಜನರಲ್ ಕ್ಯಾಪ್ಟನ್ ಕೈಲಿ ಕಳಿಸಿದ್ದರು. ಆದರೆ ಯಾವ ಉತ್ತರವೂ ಇಲ್ಲದೆ ಹಡಗು ವಾಪಸಾಗಿತ್ತು, ಇದರಿಂದ ಜನರಲ್‌ರಿಗೆ ತೀವ್ರ ನಿರಾಶೆಯಾಗಿತ್ತು, ಅವನು ಹೊರಡುವ ಬಗ್ಗೆ ವಿಚಾರಿಸುವ ಧೈರ್ಯ ಯಾರಿಗೂ ಆಗಲಿಲ್ಲ.

ಸಮಾಧಾನ ತರುವ ಸಣ್ಣ ಸುದ್ದಿಯೂ ಇರಲಿಲ್ಲ. ಬಂದ ಸುದ್ದಿಗಳನ್ನು ಮತ್ತಷ್ಟು ಕೆಟ್ಟದ್ದಾಗಿಸದಿರುವ ಬಗ್ಗೆ ಜೋಸೆ ಪೆಲಾಸಿಯೋಸ್ ತನ್ನ ಮಟ್ಟಿಗೆ ತುಂಬ ಜಾಗರೂಕನಾಗಿದ್ದು ಎಷ್ಟು ಸಾಧ್ಯವೋ ಅಷ್ಟನ್ನು ಬಯಲುಮಾಡದೇ ಇದ್ದ. ಜನರಲ್‌ರನ್ನು ಕುಗ್ಗಿಸುವ ಹಾಗೂ ಅವರಿಗೆ ತಿಳಿಸದೆ ಮುಚ್ಚಿಟ್ಟ ಪರಿವಾರದಲ್ಲಿದ್ದ ಅಧಿಕಾರಿಗಳಿಗೆ ಕಳವಳವುಂಟುಮಾಡಿದ್ದ ವಿಚಾರವೆಂದರೆ ರಕ್ಷಣಾದಳದ ರಾವುತರೂ ಶಸ್ತ್ರಸಜ್ಜಿತ ಯೋಧರೂ ವಾಸಿಯಾಗದ ಗುಪ್ತ ಲೈಂಗಿಕ ರೋಗಗಳನ್ನು ಹರಡುತ್ತಿದ್ದುದು. ಇದು ಆರಂಭಗೊಂಡದ್ದು ಹೊಂಡಾದಲ್ಲಿ ಇಡೀ ಬಿಡಾರವನ್ನು ಸುತ್ತಾಡಿದ್ದ ಇಬ್ಬರು ಹೆಂಗಸರಿಂದ, ಸೈನಿಕರು ಹೋದೆಡೆಯಲ್ಲೆಲ್ಲ ತಮ್ಮ ಲಾಂಪಟ್ಯದ ಮೂಲಕ ಇದನ್ನು ಹರಡುತ್ತ ಬಂದಿದ್ದರು. ಆ ಹೊತ್ತಿಗೆ ಇದರಿಂದ ಪಾರಾದವರು ಯಾರೂ ಇರಲಿಲ್ಲ, ವೈದ್ಯವಾಗಲೀ ಮಾಟವಾಗಲೀ ಇದನ್ನು ತಡೆಗಟ್ಟಲು ಸಾಧ್ಯವಾಗಿರಲಿಲ್ಲ.

ಯಜಮಾನರ ಮನಸ್ಸು ಅನವಶ್ಯಕವಾಗಿ ಕ್ಷೋಭೆಗೊಳ್ಳುವುದನ್ನು ತಪ್ಪಿಸಲು ಜೋಸೆ ಪೆಲಾಸಿಯೋಸ್ ಕೈಗೊಂಡ ಕ್ರಮವು ಪರಿಪೂರ್ಣವೇನಾಗಿರಲಿಲ್ಲ. ಒಂದು ರಾತ್ರಿ, ಪೀಠಿಕೆಯಿಲ್ಲದ ಒಂದು ಟಿಪ್ಪಣಿಯು ಕೈಬದಲಾಯಿಸುತ್ತ ಹೋಗಿ ಕೊನೆಗೆ ಜನರಲ್‌ರ ಕೈ ಸೇರಿತು, ಆದರೆ ಇದು ಹೇಗಾಯಿತು ಎಂಬುದು ಮಾತ್ರ ತಿಳಿಯಲಿಲ್ಲ. ಕನ್ನಡಕವಿಲ್ಲದೆ ದೂರ ಹಿಡಿದು ಓದಿದ ಜನರಲ್ ಅದನ್ನು ಕೈಬೆರಳುಗಳ ನಡುವೆ ಮೋಂಬತ್ತಿಯ ಉರಿಗೆ ಹಿಡಿದು ಬೂದಿಯಾಗಿಸಿದರು.

ಜನರಲ್ ಪದಚ್ಯುತಗೊಂಡು ದೇಶ ಬಿಟ್ಟು ಹೋಗುತ್ತಿರುವರೆಂಬ ಸುದ್ದಿ ತಿಳಿದ ಮಾಂಪಾಕ್ಸ್‌ಗೆ ಹೋಗುವ ಹಾದಿಯಲ್ಲಿ ಸೋಮವಾರ ಜೋಸೆಫ಼ ಸೆಗ್ರಾರಿಯೋ ತನ್ನ ಗಂಡ ಮತ್ತು ಮಕ್ಕಳೊಡನೆ ಇಲ್ಲಿಗೆ ಬಂದಳು. ಟಿಪ್ಪಣಿಯಲ್ಲಿ ಏನಿತ್ತು ಎಂಬುದನ್ನು ಜನರಲ್ ಯಾರಿಗೂ ಹೇಳಲಿಲ್ಲ, ರಾತ್ರಿಯೆಲ್ಲ ಅಶಾಂತರಾಗಿದ್ದು ಬೆಳಗಿನ ಜಾವದ ಹೊತ್ತಿಗೆ ಅವಳಿಗೆ ಒಂದು ಸಂಧಾನದ ಸೂಚನೆ ಕಳಿಸಿದರು. ಆದರೆ ಅವರ ಕೋರಿಕೆಯನ್ನು ಒಪ್ಪದ ಅವಳು ಕ್ಷಣ ಮಾತ್ರವೂ ನಿಧಾನಿಸದೆ ಪೂರ್ವನಿರ್ಧಾರಿತವಾದ ತನ್ನ ಪಯಣವನ್ನು ಮುಂದುವರಿಸಲು ತೀರ್ಮಾನಿಸಿದಳು. ಸತ್ತಂತಿರುವ

ವ್ಯಕ್ತಿಯೊಡನೆ ಮಾಡಿಕೊಳ್ಳುವ ರಾಜಿಯು ಅರ್ಥಹೀನವಾದದ್ದರಿಂದ ತಾನು ಹಾಗೆ ತೀರ್ಮಾನ ಕೈಗೊಂಡುದಾಗಿ ಅವಳು ಜೋಸೆ ಪೆಲಾಸಿಯೋಸ್‌ಗೆ ಹೇಳಿದಳು.

ಆ ವಾರ ಬಂದ ಸುದ್ದಿಯೆಂದರೆ ಜನರಲ್‌ರ ಪುನರಾಗಮನಕ್ಕಾಗಿ ಮ್ಯಾನ್ಯುಯೆಲ ಸಯೆನ್‌ಜ಼್‌ಳ ವೈಯಕ್ತಿಕ ಹೋರಾಟವು ಸಂಟಾ ಫ಼ ದ ಬೊಗೋಟದಲ್ಲಿ ಆರಂಭವಾಗಿದೆ ಎಂಬುದು. ಅವಳ ಜೀವನವನ್ನು ಅಸಾಧ್ಯವನ್ನಾಗಿಸಲು ತನ್ನ ರಕ್ಷಣೆಯಲ್ಲಿರುವ ಸಾರ್ವಜನಿಕ ಪತ್ರಗಳನ್ನು ಹಿಂದಿರುಗಿಸಲು ಗೃಹ ಸಚಿವಾಲಯವು ಆಕೆಗೆ ಆಜ್ಞೆ ಮಾಡಿತ್ತು. ಆದರೆ ಅದನ್ನವಳು ತಿರಸ್ಕರಿಸಿದ್ದಳು ಮಾತ್ರವಲ್ಲ, ತನ್ನ ವಿರುದ್ಧ ಮಾಡುತ್ತಿದ್ದ ಪ್ರಚೋದನೆಗಳಿಂದ ಸರ್ಕಾರವು ಹುಚ್ಚಾಗಿತ್ತು. ತನ್ನ ಇಬ್ಬರು ಗುಲಾಮ ಹೆಂಗಸರ ಜೊತೆ ಸೇರಿ ಅವಳು ಹಗರಣಗಳನ್ನು ಸೃಷ್ಟಿಸಿ, ಜನರಲ್ ಸಿಮೋನ್ ಬೊಲಿವರ್‌ರ ಗುಣಗಳನ್ನು ವೈಭವೀಕರಿಸಿ ಕರಪತ್ರಗಳನ್ನು ಹಂಚಿದಳು, ಸಾರ್ವಜನಿಕ ಕಟ್ಟಡಗಳ ಗೋಡೆಗಳ ಮೇಲೆ ಇದ್ದಿಲಿನಿಂದ ಬರೆದಿದ್ದ ಘೋಷಣೆಗಳನ್ನು ಅಳಿಸಿ ಹಾಕಿಸಿದ್ದಳು. ಕರ್ನಲ್ ಸಮವಸ್ತ್ರ ಧರಿಸಿ ಸೈನಿಕ ಬಿಡಾರಗಳಿಗೆ ಬಂದು ಯೋಧರ ಸಡಗರಗಳಲ್ಲಿ ಮಾತ್ರವಲ್ಲದೆ ಅಧಿಕಾರಗಳ ಸಂಚುಗಳಲ್ಲಿಯೂ ಭಾಗಿಯಾಗುತ್ತಿದ್ದ ವಿಷಯ ಜನಜನಿತವಾಗಿತ್ತು. ಊರ್ಡಾನೆಟನ ಮೂಗಿನ ಕೆಳಗೇ ಜನರಲ್‌ರಿಗೆ ಸಂಪೂರ್ಣ ಅಧಿಕಾರವನ್ನು ಪುನಾಸ್ಥಾಪಿಸ'ಬೇಕೆಂಬ ಸೈನಿಕ ಬಂಡಾಯವನ್ನು ಪ್ರಚೋದಿಸುತ್ತಿದ್ದಾಳೆನ್ನುವ ಗುರುತರ ಆರೋಪವೂ ಅವಳ ಮೇಲಿತ್ತು.

ಆದರೆ ಅಂತಹ ಪ್ರಯತ್ನ ಮುಂದುವರಿಸಲು ಜನರಲ್‌ರಿಗೆ ಶಕ್ತಿ ಇದೆಯೇ ಎಂಬುದನ್ನು ನಂಬುವುದೇ ಕಷ್ಟವಾಗಿತ್ತು. ಅವರಲ್ಲಿ ರಾತ್ರಿ ಕಾಣಿಸಿಕೊಳ್ಳುತ್ತಿದ್ದ ಜ್ವರ ಪುನರಾವರ್ತಿಸುವುದು ಹೆಚ್ಚಿತ್ತು, ಕೆಮ್ಮೋ ಕರುಳಿರಿಯುವಂತಿತ್ತು. ಒಂದು ಬೇಳಗಿನ ಜಾವ "ದೇಶದ ಮಂಕಣ್ಣ" ಎಂದು ಕೂಗಿದ್ದು ಕೇಳಿ ಜೋಸೆ ಪೆಲಾಸಿಯೋಸ್ ಜನರಲ್‌ರ ಮಲಗುವ ಕೋಣೆಗೆ ಓಡಿ ಬಂದಿದ್ದ. ಅದು ಅಧಿಕಾರಿಗಳನ್ನು ಬೈಯಲು ಜನರಲ್ ಬಳಸುತ್ತಿದ್ದ ಮಾತು. ಬಂದು ನೋಡಿದರೆ ಅವರ ದವಡೆ ರಕ್ತದಲ್ಲಿ ನೆಂದಿತ್ತು. ಮುಖಕ್ಷೌರ ಮಾಡಿಕೊಳ್ಳುವಾಗ ಕೆನ್ನೆಗೆ ಗಾಯವಾಗಿತ್ತು, ಅವರಿಗೆ ಕೋಪ ಬಂದಿದ್ದುದು ಅದಕ್ಕಲ್ಲ, ತಮ್ಮ ಒಡ್ಡತನಕ್ಕೆ. ಕರ್ನಲ್ ವಿಲ್ಸನ್‌ನಿಂದ ತುರ್ತು ಕರೆಯನ್ನು ಹೊತ್ತು ಔಷಧಿ ಹಚ್ಚಲು ಬಂದವನು ಜನರಲ್‌ರ ಹತಾಶೆಯ ಆಳವನ್ನು ಕಂಡು ಒಂದೆರಡು ಹನಿ ಬೆಲಡಾನ ಮದ್ದನ್ನಿತ್ತು ಅವರನ್ನು ಶಾಂತವಾಗಿರಿಸಲು ಪ್ರಯತ್ನಿಸಿದ್ದ. ಆದರೆ ಜನರಲ್ ಅವನನ್ನು ತಡೆದರು. "ಇರಲಿ ಬಿಡು, ಹತಾಶೆ ಅನ್ನೋದು ಪಾಪಿಷ್ಟನ ಆರೋಗ್ಯ" ಎಂದಿದ್ದರು.

ಅವರ ಸೋದರಿ ಮರಿಯ ಆಂಟೋನಿಯ ಕ್ಯಾರಕಾಸ್‌ನಿಂದ ಪತ್ರ ಬರೆದು, “ಇಲ್ಲಿಗೆ ವಾಪಸು ಬಂದು ಈ ಅವ್ಯವಸ್ಥೆಯನ್ನು ಸರಿಪಡಿಸಲು ನೀನು ನಿರಾಕರಿಸುತ್ತಿದ್ದೀಯೆ ಎಂದು ಎಲ್ಲರೂ ದೂರುತ್ತಿದ್ದಾರೆ” ಎಂದು ಬರೆದಿದ್ದಳು. ಹಳ್ಳಿಯ ಪುರೋಹಿತರೂ ಅವರ ಪರವಾಗಿಯೇ ತೀರ್ಮಾನ ಕೈಗೊಂಡಿದ್ದರು, ಸೈನ್ಯ ಬಿಟ್ಟು ಹೋಗುತ್ತಿದ್ದವರನ್ನಂತೂ ತಡೆಯಲು ಸಾಧ್ಯವೇ ಇರಲಿಲ್ಲ, ಅವರನ್ನು ಹೊರತು ಉಳಿದ ಯಾರನ್ನೂ ಒಪ್ಪುವುದಿಲ್ಲವೆಂದು ಹೇಳುವ ಶಸ್ತ್ರಸಜ್ಜಿತರು ಗುಡ್ಡಗಾಡುಗಳಲ್ಲಿ ತುಂಬಿಕೊಂಡಿದ್ದರು. “ಇದೊಂದು ಹುಚ್ಚರ ಕುಣಿತ, ಕ್ರಾಂತಿ ಮುಗಿದ ಮೇಲೂ ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲ” ಎಂದು ಅವರ ಸೋದರಿ ಬರೆದಿದ್ದಳು. ಅವರ ವಿರುದ್ಧ ಕೆಲವರು ಸ್ವಲ್ಪ ಕಾಲ ಗಲಾಟೆ ಮಾಡಿದರು, ಅವಮಾನಕರ ಘೋಷಣೆಗಳು ಪ್ರತಿ ದಿನವೂ ದೇಶದ ಗೋಡೆಗಳ ಮೇಲೆ ಕಾಣಿಸಿಕೊಳ್ಳುತ್ತಿದ್ದವು. ಅವರ ಕುಟುಂಬದ ಮುಂದಿನ ಐದು ಪೀಳಿಗೆಗಳನ್ನು ನಾಶಮಾಡಬೇಕೆಂದು ದೊಡ್ಡಕ್ಷರಗಳಲ್ಲಿ ಬರೆಯಲಾಗಿತ್ತು.

ವೆನಿಝೂಲದ ಕಾಂಗ್ರೆಸ್ ವ್ಯಾಲೆನ್ಸಿಯದಲ್ಲಿ ಸೇರಿದ್ದಾಗ ಅಂತಿಮ ಪ್ರಹಾರ ಬಿದ್ದಿತ್ತು; ಪ್ರತ್ಯೇಕತೆ ಮತ್ತು ಜನರಲ್ ಕೊಲಂಬಿಯದ ಗಡಿಯೊಳಗೆ ಇರುವವರೆಗೂ ನ್ಯೂ ಗ್ರನೆಡ ಮತ್ತು ಈಕ್ವೆಡಾರ್‌ಗಳ ಜೊತೆ ಯಾವುದೇ ಒಪ್ಪಂದ ಕೂಡದೆಂಬ ಖಚಿತ ನಿರ್ಣಯವು ಕಾರ್ಯಕ್ರಮದ ಕೊನೆಯಲ್ಲಿ ಒಪ್ಪಿತವಾಯಿತು. ಈ ನಿರ್ಣಯಕ್ಕೇ ಅಲ್ಲದೆ, ಈ ಬಗೆಗಿನ ಅಧಿಕೃತ ಆದೇಶವನ್ನು ಸಂಟಾ ಫ಼ ದ ಬೊಗೋಟದಿಂದ ಹೊತ್ತು ತಂದ ಸೆಪ್ಟೆಂಬರ್ ೧೫ ರ ಸಂಚುಗಾರರಲ್ಲಿ ಒಬ್ಬನೂ ತಮ್ಮ ಬದ್ಧದ್ವೇಷಿಯೂ ಆದ ಗಡೀಪಾರಾಗಿದ್ದ ಒಬ್ಬನನ್ನು ಅಧ್ಯಕ್ಷ ಮಾಸ್ಕ್ವೇರಾ ಗೃಹ ಸಚಿವನನ್ನಾಗಿ ಮಾಡಲು ಕರೆತಂದಿದ್ದುದು ಅವರಿಗೆ ಖೇದವನ್ನುಂಟುಮಾಡಿತ್ತು. “ಈ ಸಂಗತಿ ನನ್ನ ಬದುಕಿನಲ್ಲೇ ತುಂಬ ಆಘಾತವನ್ನುಂಟುಮಾಡಿರರೋ ಸಂಗತಿ” ಎಂದಿದ್ದರು ಜನರಲ್. ಇಡೀ ರಾತ್ರಿ ವಿವಿಧ ಕಾರ್ಯದರ್ಶಿಗಳಿಗೆ ವಿಭಿನ್ನ ಬಗೆಯ ಪತ್ರಗಳನ್ನು ಹೇಳಿ ಬರೆಸುವುದರಲ್ಲಿಯೇ ಕಳೆದರು, ಆದರೆ ಕೊನೆಗೆ ತೀವ್ರ ಕ್ರೋಧದಿಂದಲೇ ನಿದ್ದೆ ಹೊದರು. ಕ್ಷೋಭೆಯಿಂದ ಕೂಡಿದ್ದ ನಿದ್ದೆಯ ಬಳಿಕ ಬೆಳಗಿನ ಜಾವ ಜೋಸೆ ಪೆಲಾಸಿಯೋಸ್‌ಗೆ ಹೇಳಿದರು: “ನಾನು ಸತ್ತ ದಿನ ಕ್ಯಾರಕಾಸ್‌ನ ಗಂಟೆಗಳು ಸಂಭ್ರಮದಿಂದ ಮೊಳಗುತ್ತವೆ.”

ಆದದ್ದು ಇಷ್ಟು ಮಾತ್ರವಲ್ಲ. ಜನರಲ್‌ರ ಸಾವಿನ ಸುದ್ದಿ ಕೇಳಿದ ಮರಾಕೈಬೋದ ಗವರ್ನರ್ ಬರೆದ: “ಈ ಮಹಾ ಸುದ್ದಿಯು ಸಂಶಯಾತೀತವಾಗಿ ದೇಶದ ವಿಮೋಚನೆ ಹಾಗೂ ಪ್ರಗತಿಗೆ ಹೇಳಲಾಗದಷ್ಟು ಅನುಕೂಲವನ್ನುಂಟುಮಾಡುತ್ತದೆ ಎಂಬ ಅಂಶವನ್ನು ನಾನು ಒತ್ತಿ ಹೇಳಬಯಸುತ್ತೇನೆ. ಕೆಡುಕಿನ ಮಹಾ ಪ್ರತಿಭೆಯೂ ಅನಾಯಕತ್ವದ

ಬೆಂಕಿಯುಂಡೆಯೂ ದೇಶದ ದಮನಕಾರಕನೂ ಆದವನು ಕಣ್ಮರೆಯಾಗಿದ್ದಾನೆ." ಮೊದಲು ಕ್ಯಾರಕಾಸ್‌ನ ಸರ್ಕಾರಕ್ಕೆ ತಿಳಿಸುವ ಆದೇಶವಾಗಿ ಹೊರಬಿದ್ದುದು ಕೊನೆಯಲ್ಲಿ ರಾಷ್ಟ್ರೀಯ ಘೋಷಣೆಯಾಗಿ ಮಾರ್ಪಟ್ಟಿತ್ತು.

ಆ ನತದೃಷ್ಟ ದಿನಗಳ ಭಯಾನಕತೆಯ ನಡುವೆ ಜನರಲ್‌ರ ಹುಟ್ಟಿದ ಹಬ್ಬದ ಬೆಳಗಿನ ಜಾವ ಐದು ಗಂಟೆಗೇ ಜೋಸೆ ಪೆಲಾಸಿಯೋಸ್ ಶುಭಾಶಯ ಹೇಳಿದ: "ಜುಲೈ ಇಪ್ಪತ್ತನಾಲ್ಕು ಅಂದರೆ ಸಂತ ಕ್ರಿಸ್ಟೀನಾ, ವರ್ಜಿನ್ ಮತ್ತು ಹುತಾತ್ಮರ ಪರ್ವದಿನಗಳು." ಅವರು ಕಣ್ಣು ತೆರೆದು ತಾವು ದುರದೃಷ್ಟದ ಕೂಸು ಎಂಬುದನ್ನು ನೆನಸಿಕೊಂಡಿರಬೇಕು.

ಅವರು ರೂಢಿ ಮಾಡಿಕೊಂಡಿದ್ದುದು ಹುಟ್ಟು ಹಬ್ಬದ ಬದಲು ಸಂತಳ ಪರ್ವದಿನ ಆಚರಿಸುವುದನ್ನು. ಕ್ಯಾಥೋಲಿಕ್ ಪಂಚಾಂಗದ ಪ್ರಕಾರ ಸಂತರುಗಳಲ್ಲಿ ಏಳು ಮಂದಿ ಸಿಮೋನ್‌ಗಳು; ಕ್ರಿಸ್ತನ ಶಿಲುಬೆಯನ್ನು ಹೊರುವುದರಲ್ಲಿ ಸಹಾಯ ಮಾಡಿದ್ದ ಸಂತನ ಜೊತೆ ತನ್ನನ್ನು ಗುರುತಿಸಿಕೊಳ್ಳುವುದು ಅವರಿಗೆ ಹೆಚ್ಚು ಇಷ್ಟ, ಆದರೆ ವಿಧಿ ಅವರನ್ನು ಅಕ್ಟೋಬರ್ ಇಪ್ಪತ್ತೆಂಟು ಪರ್ವದಿನವನ್ನಾಗಿ ಹೊಂದಿದ್ದ ಈಜಿಪ್ಟ್ ಮತ್ತು ಇಥಿಯೋಪಿಯಗಳ ಅಪಾಸಲ್ ಮತ್ತು ಧರ್ಮಬೋಧಕನಾದ ಮತ್ತೊಬ್ಬ ಸಿಮೋನ್‌ನ್ನಾಗಿ ಮಾಡಿತ್ತು, ಒಮ್ಮೆ ಆ ದಿನದಂದು, ಸಂಟಾ ಫ಼ ದ ಬೊಗೋಟದಲ್ಲಿನ ಆಚರಣೆಯಲ್ಲಿ ಅವರಿಗೆ ಗೌರವದ ಹೂಗುಚ್ಛವನ್ನು ತೊಡಿಸಲಾಗಿತ್ತು. ಅದನ್ನು ನಗುನಗುತ್ತಲೇ ಅವರು ಒಳಗಿನ ಕಹಿಯ ಜೊತೆಗೆ ಜನರಲ್ ಸಟಾಂಡರ್‌ನ ತಲೆಗೆ ತೊಡಿಸಿದ್ದರು, ಅವನೋ ನಿರ್ಭಾವುಕನಾಗಿ ಅದನ್ನು ಸ್ವೀಕರಿಸಿದ್ದ. ಆದರೆ ಅವರು ತಮ್ಮ ಬದುಕನ್ನು ಗುರುತಿಸಿದ್ದುದು ಹೆಸರಿನಿಂದಲ್ಲ ವಯಸ್ಸಿನಿಂದ. ಅವರಿಗೆ ನಲವತ್ತೇಳು ವಿಶೇಷ ಮಹತ್ವದ್ದೆನಿಸಿತ್ತು, ಯಾಕೆಂದರೆ ಹಿಂದಿನ ವರ್ಷ ಜುಲೈ ಇಪ್ಪತ್ತನಾಲ್ಕರಂದು ಸುತ್ತಲೂ ಕವಿದಿದ್ದ ಕಹಿ ಸುದ್ದಿಗಳು ಮತ್ತು ಹಿಂಡುವ ಜ್ವರದ ಸನ್ನಿಯ ನಡುವೆ ಒಂದು ಮುನ್ಸೂಚನೆ ಅವರನ್ನು ನಡುಗಿಸಿತ್ತು, ಅಂಥದ್ದರಲ್ಲಿ ನಂಬಿಕೆಯಿಲ್ಲದಿದ್ದರೂ. ಸಂದೇಶ ಸ್ಪಷ್ಟವಾಗಿತ್ತು: ಮುಂದಿನ ಹುಟ್ಟು ಹಬ್ಬದವರೆಗೂ ತಾವು ಬದುಕಿದ್ದರೆ, ಮುಂದೆ ಯಾವುದೂ ತಮ್ಮನ್ನು ಕೊಲ್ಲಲಾರದು. ತರ್ಕಬದ್ಧವಾಗಿರದಿದ್ದರೂ, ಅವರನ್ನು ಇಲ್ಲಿಯವರೆಗೂ ಜೀವಂತವಾಗಿರಿಸಿದ್ದ ಶಕ್ತಿ ಆ ರಹಸ್ಯ ದೈವವಾಣಿಯೇ.

"ನಲವತ್ತೇಳು ವರ್ಷ, ಇನ್ನೂ ಬದುಕಿದ್ದೀನಲ್ಲ!" ಎಂದು ಗೊಣಗಿಕೊಂಡರು.

ಜನರಲ್ ತಮ್ಮ ಜೋಲಿಮಂಚದಲ್ಲಿಯೇ ಎದ್ದು ಕುಳಿತರು; ಎಲ್ಲ ಅಪಾಯಗಳ ನಡುವೆಯೂ ತಾವು ಬದುಕಿರುವ ಖಚಿತ ವಾಸ್ತವವು ಅವರ

ಮನದಲ್ಲಿ ಶಕ್ತಿ ತುಂಬಿ ಎದೆಯಲ್ಲಿ ಸಂತಸ ಮೂಡಿಸಿತು. ಕೊಲಂಬಿಯದ ಐಕ್ಯಕ್ಕಾಗಿ ವೆನಿಝೂಲಕ್ಕೆ ಹೋಗಿ ಹೋರಾಡಲು ಸಿದ್ಧವಾಗಿದ್ದವರ ಕೇಂದ್ರ ವ್ಯಕ್ತಿಯಾದ ಬ್ರೈಸೆನೋ ಮೆಂಡೆಝ್ ಅನ್ನು ಕರೆದು, ಅವನ ಮೂಲಕ ತಮ್ಮ ಹುಟ್ಟು ಹಬ್ಬದ ಶುಭಾಶಯಗಳನ್ನು ಸಲ್ಲಿಸಲು ಅಧಿಕಾರಿಗಳಿಗೆ ಅವಕಾಶ ಒದಗಿಸಿದರು.

"ವೆನಿಝೂಲದಲ್ಲಿ ಹೊರಾಡಲು ಇಷ್ಟಪಡೋ ಲೆಫ್ಟಿನೆಂಟ್ ಶ್ರೇಣಿಯಿಂದ ಮೊದಲುಗೊಂಡು ಪ್ರತಿಯೊಬ್ಬನೂ ಗಂಟುಮೂಟೆ ಕಟ್ಟಿಕೊಳ್ಳಲಿ" ಎಂದು ಹೇಳಿದರು.

ಹಾಗೆ ಮಾಡಿದವರಲ್ಲಿ ಜನರಲ್ ಬ್ರೈಸೆಂಕೋ ಮೆಂಡೆಝ್ ಮೊದಲಿಗ. ಕಾರ್ಟಜೆನ ದಂಡಿನ ಇನ್ನಿಬ್ಬರು ಜನರಲ್‌ಗಳು, ನಾಲ್ವರು ಕರ್ನಲ್‌ಗಳು ಹಾಗೂ ಎಂಟು ಮಂದಿ ಕ್ಯಾಪ್ಟನ್‌ಗಳು ಅದರಲ್ಲಿ ಸೇರಿಕೊಂಡರು. ಆದರೆ ಜನರಲ್‌ರ ಹಿಂದಿನ ಮಾತನ್ನು ಕ್ಯಾರೆನೋ ನೆನಪಿಸಿದಾಗ ಅವರೆಂದರು: "ನಿನ್ನನ್ನು ಇನ್ನಷ್ಟು ಹೆಚ್ಚಿನ ಉದ್ದೇಶಕ್ಕಾಗಿ ಕಾದಿರಿಸಿಕೊಂಡಿದ್ದೇನೆ."

ಜೊತೆಯಲ್ಲಿ ಜೋಸೆ ಲಾರೆನ್ಸಿಯೋ ಸಿಲ್ವ ಕೂಡ ಹೋಗಬೇಕೆಂದು ಅವರು ಹೊರಡುವ ಎರಡು ಗಂಟೆಗಳ ಮುಂಚೆ ನಿರ್ಧರಿಸಿದ; ಜಡ್ಡುಗಟ್ಟಿದ ದೈನಿಕವು ತನ್ನ ಹದಗೆಡುತ್ತಿರುವ ಕಣ್ಣುಗಳ ಚಿಂತೆಯನ್ನು ಹೆಚ್ಚಿಸುತ್ತಿದೆ ಎಂದು ಭಾವಿಸಿದ್ದ. ಆದರೆ ಸಿಲ್ವ ಈ ಗೌರವವನ್ನು ನಿರಾಕರಿಸಿದ.

"ಸೋಮಾರಿತನವೂ ಯುದ್ಧವೇ, ಅದೂ ತುಂಬ ಕಷ್ಟವಾದ್ದು. ಹೀಗಾಗಿ, ಜನರಲ್ ಬೇರೆ ರೀತಿ ಆಜ್ಞೆ ಮಾಡದಿದ್ದರೆ ನಾನಿಲ್ಲೇ ಉಳಿಯುತ್ತೇನೆ" ಎಂದವನು ವಿವರಿಸಿದ.

ಮತ್ತೊಂದೆಡೆ, ಇಟೂರ್‌ಬೈಡ್, ಫರ್ನಾಂಡೋ, ಮತ್ತು ಆಂಡ್ರೆ ಇಬಾರಾ ಅವರಿಗೆ ಇತರರನ್ನು ಸೇರಿಕೊಳ್ಳಲು ಅನುಮತಿಯನ್ನು ನಿರಾಕರಿಸಲಾಯಿತು. "ನೀವು ಹೊರಡುವುದಾದರೆ ಅದು ಮತ್ತೊಂದೆಡೆಗೆ" ಎಂದರು ಜನರಲ್ ಇಟೂರ್‌ಬೈಡ್‌ಗೆ. ಜನರಲ್ ಡಿಎಗೋ ಇಬಾರಾ ಈಗಾಗಲೇ ಹೋರಾಟದಲ್ಲಿರುವುದರಿಂದ ಇಬ್ಬರು ಸೋದರರು ಒಂದೇ ಯುದ್ಧದಲ್ಲಿ ಪಾಲುಗೊಳ್ಳುವುದು ಹೆಚ್ಚಾಗುವುದೆಂಬ ವಿಚಿತ್ರ ಕಾರಣವನ್ನು ಆಂಡ್ರೇಗೆ ಹೇಳಿದರು. ಫರ್ನಾಂಡೋ ಸೇರಿಕೊಳ್ಳಲು ಮುಂದೆ ಬರಲಿಲ್ಲ, ತನಗೆ ಎಂದಿನ ಉತ್ತರವೇ ಸಿಕ್ಕುವುದೆಂದು ಅವನಿಗೆ ಖಾತರಿಯಾಗಿತ್ತು: "ವ್ಯಕ್ತಿ ಯುದ್ಧಕ್ಕೆ ಇಡಿಯಾಗಿ ಹೋಗಬೇಕು, ಎರಡು ಕಣ್ಣುಗಳನ್ನೂ ಬಲ ತೋಳನ್ನೂ ಬಿಟ್ಟು ಅಲ್ಲ." ಈ ಉತ್ತರವು ಸೈನ್ಯದಲ್ಲಿ ಒಂದರ್ಥದಲ್ಲಿ ಶ್ರೇಷ್ಠತೆಯನ್ನೇ ಸೂಚಿಸುತ್ತದೆಯೆಂದು ಅವನು ಸಮಾಧಾನ ತಾಳಿದ.

ಅನುಮತಿಯಿತ್ತ ರಾತ್ರಿಯೇ ಮಾಂಟಿಲ ಪ್ರಯಾಣದ ನಿಧಿಯನ್ನು ತಂದರು; ಪ್ರತಿಯೊಬ್ಬರನ್ನೂ ಅಪ್ಪುಗೆ ಮತ್ತು ಒಂದೆರಡು ಮಾತುಗಳಿಂದ ಜನರಲ್ ಸರಳ ಬೀಳ್ಕೊಡುಗೆ ಸಮಾರಂಭದಲ್ಲಿಯೂ ಪಾಲುಗೊಂಡರು. ಅವರು ಒಬ್ಬೊಬ್ಬರಾಗಿ ಹೊರಟರು, ಬೇರೆ ಬೇರೆ ಮಾರ್ಗಗಳ ಮೂಲಕ, ಕೆಲವರು ಜಮೈಕಕ್ಕೆ, ಕೆಲವರು ಕ್ಯುರಾಕೋಗೆ, ಮತ್ತೂ ಕೆಲವರು ಗೌಜಿರಾಕ್ಕೆ; ಎಲ್ಲರೂ ಮಫ್ತಿಯಲ್ಲೇ ಇದ್ದರು, ಯಾವುದೇ ಆಯುಧವನ್ನೋ ಅಥವಾ ತಮ್ಮ ಗುರುತನ್ನು ತೋರಿಸುವ ಮತ್ತೇನನ್ನೋ ಹಿಡಿಯದೆ; ಸ್ಪಾನಿಶ್ ವಿರುದ್ಧ ಗುಪ್ತ ಕಾರ್ಯಾಚರಣೆಯಲ್ಲಿ ಹೀಗೆ ಮಾಡುವುದನ್ನವರು ಕಲಿತಿದ್ದರು. ಬೆಳಗಿನ ಜಾವದ ಹೊತ್ತಿಗೆ ಲ ಪೋಪದ ತಪ್ಪಲಿನ ಮನೆಯು ಭಾಗಗಳಾಗಿ ವಿಂಗಡಿಸಿದ ಬಿಡಾರವಾಗಿತ್ತು. ಹೊಸ ಹೋರಾಟವು ಹಿಂದಿನ ವೈಭವವನ್ನು ಮತ್ತೆ ಹಸಿರಾಗಿಸುವುದೆಂಬ ಭರವಸೆ ಜನರಲ್‌ರಲ್ಲಿ ಸ್ಥೈರ್ಯ ತುಂಬಿತ್ತು.

## ಅಧ್ಯಾಯ ೬

ಜನರಲ್ ರಫ಼ೇಲ್ ಊರ್ಡಾನೆಟ ಸೆಪ್ಟೆಂಬರ್ ಐದರಂದು ಅಧಿಕಾರ ವಹಿಸಿಕೊಂಡ. ಕಾನ್ಸ್‌ಟಿಟ್ಯೂಯೆಂಟ್ ಕಾಂಗ್ರೆಸ್‌ನ ಆದೇಶ ಕೊನೆಯ ಹಂತ ತಲುಪಿತ್ತು, ದಂಗೆಯನ್ನು ಕಾನೂನುಬದ್ಧಗೊಳಿಸುವ ಬೇರಾವುದೇ ಪ್ರಾಧಿಕಾರವಿರಲಿಲ್ಲ, ಆದರೆ ಬಂಡಾಯಗಾರರು ಸಂಟಾ ಫ಼ ದ ಬೊಗೋಟದ ನಗರ ಪರಿಷತ್ತಿಗೆ ಮನವಿ ಮಾಡಿಕೊಂಡರು, ಜನರಲ್‌ರು ಅಧಿಕಾರ ವಹಿಸಿಕೊಳ್ಳುವವರೆಗೂ ಊರ್ಡಾನೆಟ ಅಧಿಕಾರ ನಿರ್ವಹಿಸುವನೆಂದು ಅದು ತೀರ್ಮಾನಿಸಿತು. ಇದು ಸವನ್ನದ ಸಣ್ಣ ಭೂಹಿಡುವಳಿದಾರರು ಹಾಗೂ ಗ್ರಾಮೀಣ ಧರ್ಮಬೋಧಕರ ನೆರವಿನೊಡನೆ ಸರ್ಕಾರದ ಸೈನ್ಯವನ್ನು ಸೋಲಿಸಿ ನ್ಯೂ ಗ್ರನೆಡದಲ್ಲಿ ಬೀಡುಬಿಟ್ಟಿದ್ದ ವೆನಿಝೂಲದ ಸೈನ್ಯ ಮತ್ತು ಅಧಿಕಾರಿಗಳ ಬಂಡಾಯದ ಶಿಖರಕ್ರಿಯೆಯಾಗಿತ್ತು. ಇದೇ ಕೊಲಂಬಿಯ ಗಣರಾಜ್ಯದಲ್ಲಿ ನಡೆದ ಮೊದಲನೆಯ ದಂಗೆ ಹಾಗೂ ಆ ಶತಮಾನದಲ್ಲಿ ಮುಂದೆ ನಾವು ಅನುಭವಿಸಬೇಕಾಗಿದ್ದ ನಲವತ್ತೊಂಬತ್ತು ಅಂತರ್ಯುದ್ಧಗಳಲ್ಲಿ ಮೊದಲನೆಯದು. ಶೂನ್ಯದಲ್ಲಿ ಒಬ್ಬಂಟಿಗಳಾದ ಅಧ್ಯಕ್ಷ ಜೋಕಿನ್ ಮಾಸ್ಕ್ವೇರ ಮತ್ತು ಉಪಾಧ್ಯಕ್ಷ ಕ್ಯಾಸೆಡೋ ಪದತ್ಯಾಗ ಮಾಡಿದರು. ಹೀಗೆ ನೆಲದ ಮೇಲೆ ಬಿದ್ದಿದ್ದ ಅಧಿಕಾರವನ್ನು ಊರ್ಡಾನೆಟ ಕೈಗೆತ್ತಿಕೊಂಡ; ಅವನ ಸರ್ಕಾರ ಕೈಗೊಂಡ ಮೊದಲ ಕೆಲಸವೆಂದರೆ ಜನರಲ್‌ರಿಗೆ ಗಣರಾಜ್ಯದ ಅಧ್ಯಕ್ಷ ಪದವಿಯನ್ನು ಒಪ್ಪಿಸಲು ಒಂದು ವೈಯಕ್ತಿಕ ನಿಯೋಗವನ್ನು ಕಳಿಸಿದ್ದು.

ತನ್ನ ಯಜಮಾನರ ಆರೋಗ್ಯ ಸ್ಥಿರವಾಗಿದೆ ಎಂದು ಜೋಸೆ ಪೆಲಾಸಿಯೋಸ್‌ಗೆ ಅನ್ನಿಸಿ ತುಂಬ ದಿನಗಳೇ ಕಳೆದಿವೆ, ಸೈನಿಕ ಬಂಡಾಯದ ಸುದ್ದಿ ತಿಳಿದ ತಕ್ಷಣವೇ ತಲೆನೋವು ಹಾಗೂ ಮಂಪರು ಜ್ವರಗಳು ಶಸ್ತ್ರತ್ಯಾಗ ಮಾಡಿದ್ದವು. ಆದರೆ ಇವೆರಡರಿಂದಲೂ ಅವರಿಗೆ ಹೆಚ್ಚು ಸಂಕಟವುಂಟಾಗಿರಲಿಲ್ಲ. ಜನರಲ್‌ರಿಗೆ ಬಾಹ್ಯ ಪರಿಹಾರ ನೀಡುವಲ್ಲಿ ಫ಼್ರಯರ್ ಸೆಬಾಸ್ಟಿಯನ್ ದ ಸಿಗ್ವಿಯೆನ್‌ಝ಼ನ ಸಹಕಾರ ಕೋರಿದ್ದ ಮಾಂಟಿಲರಿಗೆ ಚಿಂತೆ ತಂದಿತ್ತು. ಅವನು ಇದನ್ನು ಮಾಡಲು ದಕ್ಷನಾಗಿದ್ದ, ಒಪ್ಪಿಯೂ ಇದ್ದ. ಊರ್ಡಾನೆಟನ ಸಂದೇಶವಾಹಕರಿಗೆ ಕಾಯುತ್ತ ಚೆಸ್ ಆಟದಲ್ಲಿ ಅನ್ಯಮನಸ್ಕನಾಗಿ ಸೋತಿದ್ದ.

ಎರಡನೆಯ ಯೂರೋಪ್ ಪ್ರವಾಸದಲ್ಲಿ ಜನರಲ್ ತಮ್ಮ ಕಾಯಿಗಳನ್ನು ನಡೆಸುವುದರಲ್ಲಿ ಪಳಗಿದ್ದರು, ಪೆರುವಿನ ದೀರ್ಘ ಹೋರಾಟಕಾಲದಲ್ಲಿ ಬೇಸರದ ರಾತ್ರಿಗಳಂದು ಜನರಲ್ ಓ'ಲಿಯರಿ ಜೊತೆ

ಆಟವಾಡಿ ಅದರಲ್ಲಿ ಪರಿಣತಿ ಸಾಧಿಸಿದ್ದರು. ಆದರೆ ಅವರಿಗೆ ಹೆಚ್ಚು ಮುಂದುವರಿಯಲು ಶಕ್ತಿಯಿರಲಿಲ್ಲ. "ಚದುರಂಗ ಆಟವಲ್ಲ, ಅದೊಂದು ಹುಚ್ಚು. ಇದನ್ನಾಡಲು ಧೈರ್ಯ ಬೇಕು" ಎನ್ನುತ್ತಿದ್ದರು. ಆದರೂ ಸಾರ್ವಜನಿಕ ಶಿಕ್ಷಣ ಕ್ಷೇತ್ರದಲ್ಲಿ ತಾವು ಕೈಗೊಂಡ ಕಾರ್ಯಕ್ರಮಗಳಲ್ಲಿ ಚದುರಂಗವನ್ನು ಉಪಯುಕ್ತವೂ ಪ್ರಮಾಣಿಕವೂ ಆದ ಕ್ರೀಡೆಯೆಂದು ಶಾಲೆಗಳಲ್ಲಿ ಬೋಧಿಸಲು ಸೂಚಿಸಿದ್ದರು. ವಾಸ್ತವ ಸಂಗತಿಯೆಂದರೆ, ಆ ನಿಡು ಆಟದಲ್ಲಿ ತೊಡಗಲು ಸಾಮರ್ಥ್ಯವಿಲ್ಲದೆ ಅದನ್ನು ಮುಂದುವರಿಸಲಿಲ್ಲ. ಇದಕ್ಕೂ ಹೆಚ್ಚು ಗಂಭಿರ ವಿಚಾರಗಳ ಬಗ್ಗೆ ಆಲೋಚಿಸಲು ಮನಸ್ಸನ್ನು ಕೇಂದ್ರೀಕರಿಸಬೇಕಾಗಿತ್ತು.

ಫ್ರಯರ್ ಸೆಬಾಸ್ಟಿಯನ್ ಬಂದಾಗ ಜನರಲ್ ಜೋಲಿಮಂಚದಲ್ಲಿ ಮಲಗಿ ಜೋರಾಗಿ ತೂಗಿಕೊಳ್ಳುತ್ತಿದ್ದರು; ಊರ್ಡಾನೆಟನ ಸಂದೇಶವಾಹಕರು ಬರುವುದನ್ನು ಎದುರು ನೊಡಲು ಅನುಕೂಲವಾಗಲೆಂದು ಜೋಲಿಯನ್ನು ಬೀದಿಯೆದುರು ತೂಗು ಹಾಕಲು ಹೇಳಿದ್ದರು. "ಓ, ಫಾದರ್, ನೀವು ಶಿಕ್ಷೆ ಕೊಡುವುದರಲ್ಲಿ ನಿಸ್ಸೀಮರು" ಅವನನ್ನು ಕಂಡಾಗ ಉದ್ಗರಿಸಿದರು. ಜನರಲ್ ಕುಳಿತಿರುತ್ತಿದ್ದುದು ಕಾಯಿಗಳನ್ನು ಪ್ರತಿ ಸಲ ನಡೆಸುವಾಗ ಬೇಕಾದ ಹೊತ್ತು ಮಾತ್ರ, ಹಾಗೆ ಮಾಡಿ ಫ್ರಯರ್ ಯೋಚಿಸುವಷ್ಟು ಹೊತ್ತು ನಿಂತಿರುತ್ತಿದ್ದರು.

"ನನ್ನ ಗಮನ ಬೇರೆಡೆ ಸೆಳೆಯಬೇಡಿ, ಸರ್, ನಿಮಗೆ ಸರಿಯಾಗಿ ಪಾಠ ಕಲಿಸ್ತೀನಿ."

"ಸೋಲಿನ ಹಿಂದೆ ಬರುವುದೇ ಹೆಮ್ಮೆ" ಎಂದರು ಜನರಲ್ ನಗುತ್ತ.

ಇವರು ಆಡುವಾಗ ಓ'ಲಿಯರಿ ಮೇಜಿನ ಪಕ್ಕ ನಿಂತು ಚದುರಂಗದ ಹಾಸನ್ನು ಗಮನಿಸುತ್ತ ಜನರಲ್‌ರಿಗೆ ಸಲಹೆಗಳನ್ನು ನೀಡುತ್ತಿದ್ದ, ಅವರು ಕೋಪದಿಂದ ಅದೆಲ್ಲವನ್ನೂ ತಿರಸ್ಕರಿಸುತ್ತಿದ್ದರು. ಆದರೆ ಪ್ರತಿಸಲ ಗೆದ್ದಾಗಲೂ ಎದ್ದು ಮೊಗಸಾಲೆಗೆ ಹೋಗಿ ಅಲ್ಲಿ ಇಸ್ಪೀಟಾಡುತ್ತಿದ್ದ ಅಧಿಕಾರಿಗಳಿಗೆ ತಮ್ಮ ಗೆಲವಿನ ವಿಷಯ ತಿಳಿಸುತ್ತಿದ್ದರು. ಒಮ್ಮೆ ಆಟದ ನಡುವೆ ಅವರೇನಾದರೂ ನೆನಪುಗಳನ್ನು ಬರೆದಿಡುವ ಆಲೋಚನೆ ಮಾಡಿದ್ದಾರೆಯೇ ಎಂದು ಫ್ರಯರ್ ಕೇಳಿದ್ದ.

"ಎಂದೆಂದಿಗೂ ಇಲ್ಲ, ಅವೆಲ್ಲ ಸತ್ತವರು ಕೊಡುವ ಕಷ್ಟಗಳು" ಎಂದಿದ್ದರು ಖಂಡತುಂಡವಾಗಿ.

ಜನರಲ್‌ರ ದೊಡ್ಡ ಗೀಳು ಎಂದರೆ ಅಂಚೆ, ಅದೇ ಅವರು ಹುತಾತ್ಮನಾಗಲೂ ಕಾರಣ. ಇತ್ತೀಚಿನ ಸುದ್ದಿಗಳಿಗೆ ಕಾಯುತ್ತ ಸಂಟಾ ದ ಬೊಗೋಟದ ಅಂಚೆ ಹಡಗುಗಳು ಹೊರಡಲು ನಿಧಾನ ಮಾಡಿ ಸಂಪರ್ಕ ಅಂಚೆಯಾಳುಗಳನ್ನು ಕಾತರದಿಂದ ಸುಸ್ತಾಗುವಂತೆ ಮಾಡುತ್ತಿದ್ದ ಗೊಂದಲದ ದಿನಗಳಲ್ಲಂತೂ ಅವರ ಈ ಗೀಳು ಮತ್ತಷ್ಟು ತೀವ್ರವಾಗುತ್ತಿತ್ತು. ಮತ್ತೊಂದೆಡೆ,

ರಹಸ್ಯ ಅಂಚೆಗಳು ಹೆಚ್ಚು ವೇಗವಾಗಿಯೂ ಮತ್ತೆ ಮತ್ತೆಯೂ ಬರತೊಡಗಿದ್ದವು. ಇದರಿಂದಾಗಿ ಜನರಲ್‌ರಿಗೆ ಅಂಚೆ ಬರುವ ಮುಂಚೆಯೇ ಸುದ್ದಿ ತಿಳಿಯುತ್ತಿತ್ತು, ಹೀಗಾಗಿ ಅವರಿಗೆ ನಿರ್ಧಾರ ತೆಗೆದುಕೊಳ್ಳಲು ಸಾಕಷ್ಟು ಸಮಯಾವಕಾಶ ಸಿಕ್ಕುತ್ತಿತ್ತು.

ಸೆಪ್ಟೆಂಬರ್ ಹದಿನೇಳರಂದು, ಗೂಢಚಾರರು ಹತ್ತಿರದಲ್ಲಿರುವರೆಂದು ತಿಳಿದಾಗ ಅವರನ್ನು ಟರ್ಬಾಕೋ ರಸ್ತೆಯಲ್ಲಿ ಭೇಟಿ ಮಾಡಲು ಕ್ಯಾರೆನೋ ಮತ್ತು ಓ'ಲಿಯರಿಗಳನ್ನು ಕಳಿಸಿದರು. ಕರ್ನಲ್ ವಿನ್ಸೆಂಟ್ ಪಿನೆರೀಸ್ ಮತ್ತು ಕರ್ನಲ್ ಜೂಲಿಯನ್ ಸಂಟಾ ಮರಿಯರು ಕಂಡ ಮೊದಲ ಆಶ್ಚರ್ಯವೆಂದರೆ ಸಂಟಾ ಫ಼ ದ ಬೋಗೋಟದಲ್ಲಿ ಜನರ ಮಾತಿಗೆ ವಸ್ತುವಾಗಿದ್ದ ಆ ನಿಶ್ಶಕ್ತ ಬಡಪಾಯಿ ಲವಲವಿಕೆಯಿಂದಿದ್ದುದು. ಮನೆಯಲ್ಲಿ ಒಂದು ಸಮಾರಂಭ ಏರ್ಪಾಟಾಯಿತು: ಅದರಲ್ಲಿ ನಾಗರಿಕ ಹಾಗು ಸೈನಿಕ ಗಣ್ಯರು ಸೇರಿದ್ದರು, ಎರವಲು ಮಾತುಗಳು ಹಾಗೂ ದೇಶದ ಹಿತಕ್ಕಾಗಿ ಹಾರೈಕೆಗಳು ಸೇರಿದ್ದವು. ಸಮಾರಂಭ ಮುಗಿದ ಮೇಲೆ ಜನರಲ್‌ರು ಗೂಢಚಾರರನ್ನು ಪಕ್ಕಕ್ಕೆ ಕರೆದು ವಾಸ್ತವ ಸಂಗತಿಗಳನ್ನು ತಿಳಿಸಿದರು. ಭಾವುಕತೆಯಲ್ಲಿ ಸಮಾಧಾನ ಕಾಣುತ್ತಿದ್ದ ಕರ್ನಲ್ ಸಂಟಾ ಮರಿಯ ಅಂತಿಮ ತುರುಫ಼ು ಎಸೆದ: ಜನರಲ್ ಏನಾದರೂ ಈ ಆಹ್ವಾನವನ್ನು ಒಪ್ಪಿಕೊಳ್ಳದಿದ್ದರೆ ದೇಶದಲ್ಲಿ ಭಯಂಕರ ಅನಾಯಕತ್ವವುಂಟಾಗುತ್ತದೆ. ಆದರೆ ಜನರಲ್ ನುಣುಚಿಕೊಳ್ಳುವ ಮಾತಾಡಿದರು:

"ಮೊದಲು ಅಸ್ತಿತ್ವ, ಆನಂತರ ಸುಧಾರಣೆಗಳು. ರಾಜಕೀಯ ದಿಗಂತಗಳು ಸ್ಪಷ್ಟಗೊಳ್ಳೋವರೆಗೂ ದೇಶ ಅನ್ನೊದು ಇದೆಯೋ ಇಲ್ಲವೋ ತಿಳಿಯೋದಿಲ್ಲ."

ಈ ಮಾತಿನ ಅರ್ಥ ಕರ್ನಲ್ ಸಂಟಾ ಮರಿಯಗೆ ಆಗಲಿಲ್ಲ.

"ನಾನು ಹೇಳಿದ್ದು ಏನು ಅಂದ್ರೆ, ತುರ್ತಾಗಿ ಆಗಬೇಕಾದ್ದು ಬಲಪ್ರಯೋಗದಿಂದ ದೇಶದ ಐಕ್ಯವನ್ನು ಮತ್ತೆ ಸ್ಥಾಪಿಸೋದು. ಆದರೆ ಆ ದಾರಿಯ ಆರಂಭ ಆಗಬೇಕಾಗಿರೋದು ವೆನಿಝೂಲದಲ್ಲಿ, ಇಲ್ಲಲ್ಲ" ಎಂದು ವಿವರಿಸಿದರು.

ಆ ಕ್ಷಣದಿಂದ ಅದೇ ಭಾವನೆ ಅವರ ಮನಸ್ಸಿನಲ್ಲಿ ಉಳಿಯಿತು; ಮೊದಲಿನಿಂದ ಮತ್ತೆ ಆರಂಭಿಸುವುದು, ಶತ್ರು ಹೊರಗೆ ಎಲ್ಲೋ ಇಲ್ಲ ಮನೆಯಲ್ಲಿಯೇ ಇದ್ದಾನೆ ಅನ್ನುವುದನ್ನು ತಿಳಿಯುವುದು. ಸಟಾಂಡರ್ ಮತ್ತು ಸಟಾಂಡರ್‌ವಾದಿಗಳಿಂದ ಪ್ರತಿನಿಧಿಸಲ್ಪಟ್ಟ ಪ್ರತಿ ದೇಶದ ಸ್ವಲ್ಪಜನಾಧಿಪತ್ಯಗಳು ಐಕ್ಯದ ವಿರುದ್ಧ ಆಮರಣ ಹೋರಾಟವನ್ನು ಸಾರಿವೆ, ಏಕೆಂದರೆ ಅದರಿಂದ ಸ್ಥಳೀಯ ಹಿರಿಯ ಕುಟುಂಬಗಳ ಹಿತಾಸಕ್ತಿಗಳಿಗೆ ಅನನುಕೂಲಕರ.

"ಇದೇ ನಿಜವಾದ ಕಾರಣ, ಏಕೈಕ ಕಾರಣ, ಛಿದ್ರತೆಯ ಹೋರಾಟ ನಮ್ಮನ್ನ ಕೊಲ್ತಿದೆ. ಅತ್ಯಂತ ವಿಷಾದದ ಸಂಗತಿ ಅಂದ್ರೆ, ತಾವು ಜಗತ್ತನ್ನು ಬದಲಾಯಿಸ್ತಿದೀವಿ ಅಂತ ಅವರು ಅಂದ್ಕೊಂಡಿದಾರೆ, ಆದರೆ ವಾಸ್ತವವಾಗಿ ಮಾಡ್ತಿರೋದು ಸ್ಪೇನ್‌ನ ಅತ್ಯಂತ ಪ್ರತಿಗಾಮಿ ಆಲೋಚನೆಯನ್ನ" ಎಂದರು ಜನರಲ್.

ಉಸಿರೆಳೆದುಕೊಂಡು ಅವರು ಮಾತನ್ನು ಮುಂದುವರಿಸಿದರು: "ನನಗೆ ಗೊತ್ತು ನನ್ನ ಬಗ್ಗೆ ಲೇವಡಿ ಮಾಡ್ತಾರೆ ಅಂತ. ಯಾಕೇಂದ್ರೆ, ನಾನು ಒಂದೇ ದಿನ ಒಬ್ಬರಿಗೇ ಬರೆದ ಒಂದೇ ಪತ್ರದಲ್ಲಿ ಮೊದಲು ಒಂದು ವಿಷಯ ಹೇಳಿ, ಆಮೇಲೆ ಅದಕ್ಕೆ ವಿರುದ್ಧವಾದ್ದನ್ನ ಹೇಳಿದ್ದೀನಿ. ರಾಜಪ್ರಭುತ್ವ ಯೋಜನೆಯನ್ನು ಒಪ್ಪಿದೆ, ಆಥವಾ ಅದಕ್ಕೆ ಒಪ್ಪಿಗೆ ನೀಡಲಿಲ್ಲ ಅತವಾ ಒಮ್ಮೆಗೇ ಎಲ್ಲೋ ಒಂದು ಕಡೆ ಎರಡಕ್ಕೂ ಒಪ್ಪಿಗೆ ನೀಡಿದೆ." ಜನರ ಬಗ್ಗೆ ತೀರ್ಮಾನ ಹಾಗೂ ಚರಿತ್ರೆಯನ್ನು ನಿರ್ವಹಿಸುವ ರೀತಿ ಅವರ ಮನಸ್ಸಿಗೆ ತೋಚಿದಂತೆ ಇರುತ್ತದೆ, ಫರ್ನಾಂಡೋ ವಿರುದ್ಧ ಹೋರಾಡುತ್ತ ಮಾರಿಲೋನ ಒಲಿದರು ಅನ್ನುವ, ಸ್ಪೈನ್ ವಿರುದ್ಧ ಕೊನೆತನಕ ಯುದ್ಧ ಸಾರಿದರೂ ಅದರ ಆಶಯಕ್ಕೇ ಬದ್ಧನಾಗಿದ್ದರು ಅನ್ನುವ, ಯುದ್ಧದಲ್ಲಿ ಗೆಲವು ಸಾಧಿಸುವುದಕ್ಕಾಗಿ ಹೈತಿಯ ಮೇಲೆ ಅವಲಂಬಿಸಿ ಆನಂತರ ಪನಾಮದ ಕಾಂಗ್ರೆಸ್‌ನಿಂದ ದೂರವಿಡುವ ಉದ್ದೇಶದಿಂದ ಅದನ್ನು ಬೇರೆ ದೇಶ ಎಂದು ಪರಿಗಣಿಸಿದ್ದು', ಮೇಸನ್ ಆಗಿದ್ದು ಪ್ರಾರ್ಥನಾ ಸಭೆಗಳಲ್ಲಿ ವಾಲ್ಟೇರ್‌ನನ್ನು ಓದುತ್ತಿದ್ದರೂ ಚರ್ಚ್‌ನ ಸಮರ್ಥಕರಾಗಿದ್ದರು, ಇಂಗ್ಲಿಷ್‌ರನ್ನು ಒಲಿದಂತೆ ಕಂಡರೂ ಫ್ರೆಂಚ್‌ರನ್ನು ಓಲೈಸಿದರು, ಲಘು ಮನೋಭಾವದವರು, ಆಷಾಢಭೂತಿ, ಕೊನೆಗೆ ನಿಷ್ಠಾಹೀನ, ಯಾಕಂದರೆ ಸ್ನೇಹಿತರನ್ನು ಮುಂದೆ ಹೊಗಳಿ ಹಿಂದೆ ಅವರ ಬಗ್ಗೆ ತುಚ್ಛವಾಗಿ ಮಾತಾಡುವವರು ಎಂದೆಲ್ಲ ಆರೋಪಗಳು ಅವರ ಮೇಲಿದ್ದವು. "ಇವೆಲ್ಲ ನಿಜ, ಆದರೆ ಪರಿಸ್ಥಿತಿಯನ್ನು ಅವಲಂಬಿಸಿದವು; ಯಾಕೇಂದ್ರೆ ನಾನು ಮಾಡಿದ್ದೆಲ್ಲವೂ ಈ ಭೂಖಂಡವನ್ನು ಒಂದೆ ಸ್ವತಂತ್ರ ದೇಶವಾಗಿ ಮಾಡುವ ಉದ್ದೇಶದಿಂದ, ಅಲ್ಲದೆ ಈ ವಿಷಯಕ್ಕೆ ಸಂಬಂಧಿಸಿದಂತೆ ನನ್ನಲ್ಲಿ ಯಾವತ್ತೂ ದ್ವಂದ್ವವಿರಲಿಲ್ಲ ಅಥವಾ ಕಿಂಚಿತ್ತು ಸಂಶಯವೂ ಇರಲಿಲ್ಲ" ಎಂದು ವಿವರಿಸಿದರು. ಕೊನೆಗೆ ಶುದ್ಧ ಕ್ಯಾರಿಬಿಯನ್ ಶೈಲಿಯಲ್ಲಿ ಹೇಳಿದರು: "ಉಳಿದದ್ದೆಲ್ಲ ಬೊಗಳೆ ಮಾತುಗಳು."

ಎರಡು ದಿನಗಳ ನಂತರ ಜನರಲ್ ಬ್ರೈಸೆನೋ ಮೆಂಡೆಝ್‌ಗೆ ಕಳಿಸಿದ ಪತ್ರದಲ್ಲಿ ಅವರು ಹೀಗೆ ಬರೆದಿದ್ದರು: "ಸನ್ನಿವೇಶಗಳು ನೀಡಿದ ಅಪ್ಪಣೆಯನ್ನು ಪಾಲಿಸಲು ನಾನು ಇಷ್ಟಪಡುತ್ತಿಲ್ಲ, ಯಾಕೆಂದರೆ ಬಂಡುಕೋರರ ನಾಯಕನೆಂದಾಗಲೀ ಅಥವಾ ಜಯಶಾಲಿಗಳ ಸೈನ್ಯಬಲದ ಕಾರಣ ನಾಮಕರಣಗೊಂಡವನೆಂದಾಗಲೀ ಗುರುತಿಸಿಕೊಳ್ಳಲು ನಾನು

ಇಚ್ಛಿಸೋದಿಲ್ಲ.” ಆದರೆ ಅಂದು ರಾತ್ರಿಯೇ ಜನರಲ್ ರಫೇಲ್ ಉರ್ಡಾನೆಟಗೆಂದು ಫರ್ನಾಂಡೋಗೆ ಹೇಳಿ ಬರೆಸಿದ ಮತ್ತೆರಡು ಪತ್ರಗಳಲ್ಲಿ ಅಷ್ಟು ಒರಟಾದ ಮಾತುಗಳು ನುಸುಳದಂತೆ ಎಚ್ಚರವಹಿಸಿದ್ದರು.

ಮೊದಲನೆಯ ಪತ್ರ ಔಪಚಾರಿಕ ಉತ್ತರದ್ದು, ಅದರಲ್ಲಿ “ಅತ್ಯಂತ ಘನತೆವೆತ್ತ ಮಹಾಸ್ವಾಮಿಗಳೇ” ಎಂಬ ಒಕ್ಕಣೆಯನ್ನೊಳಗೊಂಡಂತೆ ಎಲ್ಲವೂ ಗಂಭಿರವಾಗಿದ್ದವು. ಹಿಂದಿನ ಸರ್ಕಾರ ಪತನಗೊಂಡ ಮೇಲೆ ಗಣರಾಜ್ಯದಲ್ಲಿ ಕಾಣಿಸಿಕೊಂಡ ಅನಾಯಕತ್ವ ಮತ್ತು ಮಾತ್ಸ್ಯನ್ಯಾಯದ ಕಾರಣ ದಂಗೆ ಅನಿವಾರ್ಯವಾಗಿತ್ತೆಂದು ಅದರಲ್ಲಿ ಸಮರ್ಥಿಸಿಕೊಂಡಿದ್ದರು. “ಅಂಥ ಸನ್ನಿವೇಶಗಳಲ್ಲಿ ಜನರನ್ನು ವಂಚಿಸಲು ಸಾಧ್ಯವಿಲ್ಲ” ಎಂದು ಬರೆದಿದ್ದರು. ಆದರೆ ತಾವು ಅಧ್ಯಕ್ಷ ಪದವಿಯನ್ನು ಒಪ್ಪಿಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕಿದ್ದರು. ಅವರು ಒಪ್ಪಿದುದೆಂದರೆ ಒಬ್ಬ ಸಾಧಾರಣ ಸೈನಿಕನಾಗಿ ಸರ್ಕಾರಕ್ಕೆ ಸೇವೆ ಸಲ್ಲಿಸಲು ಸಂಟಾ ಫ಼ ದ ಬೊಗೋಟಕ್ಕೆ ವಾಪಸಾಗುವ ಇಚ್ಛೆ.

ಎರಡನೆಯದು ಖಾಸಗಿ ಪತ್ರ, “ನನ್ನ ಪ್ರಿಯ ಜನರಲ್” ಎಂಬ ಸಂಬೋಧನೆಯ ಮೂಲಕ ಈ ಅಂಶವನ್ನು ಮೊದಲಲ್ಲೇ ಸ್ಪಷ್ಟಪಡಿಸಿದ್ದರು. ಅದು ವಿವರವಾಗಿತ್ತು, ನೇರವಾಗಿತ್ತು, ತಮ್ಮ ಹಿಂಜರಿಕೆಯ ಕಾರಣಗಳ ಬಗ್ಗೆ ಕೊಂಚವೂ ಅನುಮಾನಕ್ಕೆ ಆಸ್ಪದವೀಯದಂತಿತ್ತು. ಡಾನ್ ಜೋಕಿನ್ ಮಾಸ್ಕ್ವೇರ ತನ್ನ ಪದವಿಯನ್ನು ತೊರೆದಿಲ್ಲವಾದ್ದರಿಂದ, ಮುಂದೆ ಜನರಲ್‌ರನ್ನು ಪದವಿಯ ಆಕ್ರಮಣಕಾರಿಯೆಂದು ಕರೆದು ಅಧ್ಯಕ್ಷಪದವಿಯ ಮೇಲೆ ತನ್ನ ಕಾನೂನುಬದ್ಧ ಹಕ್ಕು ಸ್ಥಾಪಿಸಬಹುದಾಗಿತ್ತು. ಹೀಗಾಗಿ ತಾವು ಅಧಿಕೃತ ಉತ್ತರದಲ್ಲಿ ಬರೆದುದನ್ನೇ ಇಲ್ಲಿಯೂ ಪುನರಾವರ್ತಿಸಿದ್ದರು: ಎಲ್ಲಿಯವರೆಗೆ ಕಾನೂನುಬದ್ಧ ಆಣತಿಯಿಲ್ಲವೋ ಅಲ್ಲಿಯವರೆಗೆ ಅಧಿಕಾರಸ್ವೀಕರಿಸುವ ಸಾಧ್ಯತೆ ಇರಲಾರದೆಂದು ಪ್ರತಿಪಾದಿಸಿದ್ದರು.

ಎರಡೂ ಪತ್ರಗಳನ್ನು ಒಂದೇ ಅಂಚೆಯ ಮೂಲಕ ಕಳಿಸಲಾಯಿತು, ಜೊತೆಯಲ್ಲಿ ರಾಗದ್ವೇಷಗಳನ್ನು ಬದಿಗಿರಿಸಿ ಹೊಸ ಸರ್ಕಾರವನ್ನು ಬೆಂಬಲಿಸುವಂತೆ ಕೋರುವ ಘೋಷಣೆಯ ಮೂಲ ಪ್ರತಿಯನ್ನು ಲಗತ್ತಿಸಲಾಗಿತ್ತು. ಆದರೆ ಯಾವುದಕ್ಕೂ ಅಂಟಿಕೊಳ್ಳದೆ ದೂರ ಉಳಿದರು. “ನಾನು ಮಹತ್ತರ ಕೊಡುಗೆಯನ್ನು ನೀಡಬಲ್ಲೆನೆಂದು ಅನ್ನಿಸಿದರೂ, ನಾನು ಏನನ್ನೂ ನೀಡಲಾರೆ” ಎಂದು ಆನಂತರ ಹೇಳಿದ್ದರು. ತಾವು ಅಧಿಕಾರದಲ್ಲಿರಬೇಕೆಂದು ಆಶಿಸಿದವರ ಬಗ್ಗೆ ಕೆಲವು ಹೊಗಳಿಕೆಯ ಮಾತುಗಳನ್ನು ಸೇರಿಸಿದ್ದನ್ನು ಜನರಲ್ ಆನಂತರ ಗಮನಿಸಿದ್ದರು. ಎರಡನೆಯ ಪತ್ರದಲ್ಲಿದ್ದ ಅತ್ಯಂತ ಗಮನಾರ್ಹ ಅಂಶವೆಂದರೆ, ಅವರ ಆಜ್ಞಾಪನಾ ಶೈಲಿ, ಅದು ಅಧಿಕಾರವನ್ನೆಲ್ಲ ಕಳೆದುಕೊಂಡವನಲ್ಲಿರುವುದು

ಅಚ್ಚರಿ ಹುಟ್ಟಿಸುವಂಥದು. ಜನರಲ್ ಜೋಸೆ ಮರಿಯ ಒಬಾಂಡೋ ಮತ್ತು ಜನರಲ್ ಜೋಸೆ ಹಿಲೇರಿಯೋ ಲೋಪೆಜ಼್ ಅವರು ಕೇಂದ್ರ ಸರ್ಕಾರದ ವಿರುದ್ಧ ನಡೆಸಿರುವ ಅರ್ಥಹೀನ ಹೋರಾಟವನ್ನು ಸಮರ್ಥವಾಗಿ ಎದುರಿಸಲು ಅನುವಾಗುವಂತೆ ಕರ್ನಲ್ ಫ಼್ಲಾರೆನ್ಸಿಯೋ ಜಿಮೆನೆಜ಼್‌ಗೆ ಬಡ್ತಿ ನೀಡಿ ಆವಶ್ಯಕವಾದ ಸೈನ್ಯಬಲ ಮತ್ತು ಪರಿಕರಗಳನ್ನು ಒದಗಿಸಿ ಕಳಿಸುವಂತೆ ಬೇಡಿಕೆಯನ್ನೂ ಸಲ್ಲಿಸಿದ್ದರು: "ಸ್ಯೂಕ್ರ್ ಅನ್ನು ಕೊಲೆಗೈದ"ವರು ಎಂದು ಒತ್ತಿ ಬರೆದಿದ್ದರು. ಜೊತೆಗೆ ಇತರ ಕೆಲವು ಅಧಿಕಾರಿಗಳನ್ನು ವಿವಿಧ ಹುದ್ದೆಗಳಿಗೆ ಶಿಫಾರಸು ಮಾಡಿದ್ದರು. "ಈ ವಿಷಯಗಳ ಬಗ್ಗೆ ನಿಗಾ ವಹಿಸಿ. ಬೊಯಾಕಾವನ್ನೊಳಗೊಂಡಂತೆ ಮ್ಯಾಗ್ಡಲೀನದಿಂದ ವೆನಿಝೂಲವರೆಗಿನ ಮಿಕ್ಕ ವಿಷಯಗಳ ಬಗ್ಗೆ ನಾನು ಗಮನ ಹರಿಸುತ್ತೇನೆ" ಎಂದು ಊರ್ಡಾನೆಟನಿಗೆ ಬರೆದಿದ್ದರು. ಎರಡು ಸಾವಿರ ಮಂದಿ ಸೈನಿಕರ ನಾಯಕತ್ವ ವಹಿಸಿ ಸಂಟಾ ಫ಼ ದ ಬೊಗೋಟಕ್ಕೆ ಬಂದು ಸಾರ್ವಜನಿಕ ಶಾಂತಿ ಸುವ್ಯವಸ್ಥೆಗಳ ಮರುಸ್ಥಾಪನೆಗೆ ಮತ್ತು ಹೊಸ ಸರ್ಕಾರದ ಸ್ಥಿರತೆಗೆ ನೆರವಾಗಲು ತಾವು ಸಿದ್ಧವಿರುವುದಾಗಿ ತಿಳಿಸಿದ್ದರು.

ನಲವತ್ತೆರಡು ದಿನಗಳವರೆಗೆ ಊರ್ಡಾನೆಟನ ಕಡೆಯಿಂದ ಯಾವುದೇ ಸುದ್ದಿ ಬರಲಿಲ್ಲ. ಆದರೆ ನಾಲ್ಕು ವಿಭಾಗಗಳಿಗೆ ಸೈನಿಕ ಆಜ್ಞೆಗಳನ್ನು ನೀಡುವುದರ ಹೊರತು ಬೇರೇನೂ ಮಾಡದಿದ್ದ ಆ ದೀರ್ಘ ತಿಂಗಳು ಪತ್ರಗಳನ್ನು ಬರೆಯುತ್ತಲೇ ಇದ್ದರು. ಹಡಗುಗಳು ಬಂದವು, ಹೋದವು. ಒಂದು ಬಗೆಯ ರಾಜಕೀಯ ಒತ್ತಡದಂತೆ ಕಾಲಕಾಲಕ್ಕೆ ಆ ಕುರಿತು ಪ್ರಸ್ತಾಪಿಸುತ್ತಿದ್ದರೂ ತಮ್ಮ ಯೂರೋಪ್ ಪ್ರಯಾಣದ ಬಗೆಗಿನ ಯಾವುದೇ ಮಾತಿರಲಿಲ್ಲ. ಲ ಪೋಪದ ತಪ್ಪಲಿನ ಮನೆಯು ಇಡೀ ದೇಶದ ಕೇಂದ್ರದಂತಾಯಿತು, ಆ ತಿಂಗಳುಗಳಲ್ಲಿ ಅವರು ತಮ್ಮ ಜೋಲಿಮಂಚದಿಂದ ಯಾವುದೇ ಸೈನಿಕ ತೀರ್ಮಾನಗಳನ್ನು ಕೈಗೊಳ್ಳಲಿಲ್ಲ ಅಥವಾ ಪ್ರೇರಿಸಲಿಲ್ಲ. ಹಂತ ಹಂತವಾಗಿ, ಯಾವುದೇ ಇಚ್ಛೆಯಿಲ್ಲದೆಯೇ, ಸೈನ್ಯ ವ್ಯವಹಾರಗಳಿಗೆ ಹೊರತಾದ ತೀರ್ಮಾನಗಳಲ್ಲಿ ಅವನು ಭಾಗಿಯಾಗುವಂತಾಯಿತು. ಆಪ್ತ ಗೆಳೆಯ ಸೆನೋರ್ ಟ್ಯಾಟಿಸ್‌ಗೆ ಅಂಚೆ ಕಚೇರಿಯಲ್ಲಿ ಒಂದು ಒಳ್ಳೆಯ ಹುದ್ದೆ ಕೊಡಿಸುವಂತಹ ಅಥವಾ ಮನೆಯಲ್ಲಿ ನೆಮ್ಮದಿಯಿಂದ ಕೂತಿರಲಾರದ ಜನರಲ್ ಜೋಸೆ ಯೂಕ್ರೋಸ್ ಅನ್ನು ಮತ್ತೆ ಹೋರಾಟಕ್ಕೆ ಮರಳಿಸುವಂತಹ ಕ್ಷುಲ್ಲಕ ಎನ್ನಬಹುದಾದ ವಿಚಾರಗಳಲ್ಲಿಯೂ ಅವರು ತೊಡಗಿಕೊಂಡರು.

ಈ ಸಮಯದಲ್ಲಿ ಅವರು ಹಳೆಯ ಮಾತನ್ನೇ ಹೊಸ ತೀವ್ರತೆಯಿಂದ ನುಡಿಯುತ್ತಿದ್ದರು: "ನನಗೆ ವಯಸ್ಸಾಯಿತು, ಕಾಯಿಲೆ ಬೇರೆ, ದಣಿದಿದ್ದೀನಿ, ಭ್ರಮನಿರಸನವಾಗಿದೆ, ಕೋಟಲೆಗಳಲ್ಲಿ ಸಿಲುಕಿಸಿದ್ದೀನಿ,

ನಿಂದೆಗೊಳಗಾಗಿದ್ದೀನಿ ಹಾಗೂ ಅವಜ್ಞೆಗೊಳಗಾಗಿದ್ದೀನಿ.” ಆದರೆ ಅವರನ್ನು ನೋಡಿದವರಾರೂ ಆ ಮಾತುಗಳನ್ನು ನಂಬುತ್ತಿರಲಿಲ್ಲ, ಯಾಕಂದರೆ ಪೆಟ್ಟು ತಿಂದ ಬೆಕ್ಕಿನಂತೆ ಕೊಂಚ ಕಾಲ ಒದ್ದಾಡುವಂತೆ ಕಂಡರೂ ಅವೆಲ್ಲ ಸರ್ಕಾರವನ್ನು ಬಲಿಷ್ಠಗೊಳಿಸುವಂಥವೇ ಆಗಿದ್ದವು; ವಾಸ್ತವವಾಗಿ ಮುಖ್ಯಜನರಲ್‌ನ ಅಧಿಕಾರ–ಸಾಮರ್ಥ್ಯಗಳಿರುವವರ ಹಾಗೆ, ವೆನಿಝೂಲವನ್ನು ಮತ್ತೆ ಗಳಿಸಿ ಆನಂತರ ಜಗತ್ತಿನ ಅತ್ಯಂತ ಹಿರಿಯ ಒಪ್ಪಂದವನ್ನು ಮಾಡಿಕೊಳ್ಳಲು ಬೇಕಾದ ರೀತಿಯಲ್ಲಿ ಸೈನಿಕ ಕಾರ್ಯಾಚರಣೆಯ ಪ್ರತಿ ವಿವರವನ್ನೂ ಸೇರಿಸಿ ಯೋಜನೆ ಹಾಕುತ್ತಿದರ್ದು.

ಅದಕ್ಕಿಂತ ಪ್ರಶಸ್ತ ಸಂದರ್ಭವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಲಿಬರಲ್ ಪಕ್ಷ ಸೋಲನ್ನನುಭವಿಸಿತ್ತು, ಸಟಾಂಡರ್ ಪ್ಯಾರಿಸ್‌ನಲ್ಲಿದ್ದ, ಆಗ ನ್ಯೂ ಗ್ರನಡ ಊರ್ಡಾನೆಟನ ಕೈಲಿ ಸುರಕ್ಷಿತವಾಗಿತ್ತು. ಹೊಸ ಗಣರಾಜ್ಯ ಸ್ಥಾಪನೆಯ ಉದ್ದೇಶದಿಂದ ಕ್ವಿಟೋ ಮತ್ತು ಗುಯಾಕಿಲ್‌ಗಳನ್ನು ಕೊಲಂಬಿಯದಿಂದ ಬೇರ್ಪಡಿಸಿದ್ದ ಅವನಷ್ಟೇ ಮಹತ್ವಾಕಾಂಕ್ಷಿಯಾದ ವೆನಿಝೂಲದ ನಾಯಕ ಫ್ಲಾರಿಸ್ ಈಕ್ವೆಡಾರ್ ಅನ್ನು ಸೇರಿಸುವ ಭರವಸೆಯಿತ್ತಿದ್ದರು; ಸ್ಯೂಕ್ರ್‌ನ ಹತ್ಯೆಗೈದವರನ್ನು ಸೋಲಿಸಿದ ನಂತರ ಅವನನ್ನು ಆ ಉದ್ದೇಶಕ್ಕಾಗಿ ಮತ್ತೆ ತನ್ನೆಡೆಗೆ ಸೆಳೆಯುವ ಭರವಸೆ ಜನರಲ್‌ಗಿತ್ತು. ತಮ್ಮ ಗೆಳೆಯ ಫೀಲ್ಡ್ ಮಾರ್ಷಲ್ ದ ಸಂಟಾ ಕ್ರೂಝ್ ಕೈಲಿ ಬೊಲಿವಿಯ ಸುರಕ್ಷಿತವಾಗಿತ್ತು, ಈಚೆಗಷ್ಟೇ ಅವನು ತಮಗೆ ಹೋಲಿ ಸೀ (ಊಡಟಿಥಿ ಖಿಜಚಿ) ಯ ರಾಯಭಾರಿಯ ಹುದ್ದೆ ನೀಡುವುದಾಗಿ ಹೇಳಿದ್ದ. ಹೀಗಾಗಿ ಅವರ ತಕ್ಷಣದ ಗುರಿಯೆಂದರೆ ವೆನಿಝೂಲವನ್ನು ಜನರಲ್ ಪಯೆಝ್‌ನ ಹಿಡಿತದಿಂದ ಸಂಪೂರ್ಣವಾಗಿ ತಪ್ಪಿಸಿ ತಮ್ಮ ವಶಪಡಿಸಿಕೊಳ್ಳುವುದು.

ಜನರಲ್‌ರ ಸೈನಿಕ ಕಾರ್ಯಾಚರಣೆಯ ಯೋಜನೆಯು, ಪಯೆಝ್ ಮಾರಕೈಬೋದ ರಕ್ಷಣೆಯಲ್ಲಿ ನಿರತನಾಗಿರುವಾಗ ಕ್ಯುಕೂರದಿಂದ ಬೃಹತ್ ದಾಳಿಯನ್ನು ನಡೆಸುವ ಗುರಿಯನ್ನು ಹೊಂದಿದಂತಿತ್ತು. ಆದರೆ ಸೆಪ್ಟೆಂಬರ್ ಒಂದರಂದು ರಿಯೋಹಚ ಪ್ರಾಂತವು ತನ್ನ ಸೇನಾಧಿಪತಿಯನ್ನು ಪದಚ್ಯುತಗೊಳಿಸಿತ್ತು, ಕಾರ್ಟೆಜೆನದ ಅಧಿಕಾರವನ್ನು ಮಾನ್ಯ ಮಾಡಲು ನಿರಾಕರಿಸಿತ್ತು ಹಾಗೂ ತಾನು ವೆನಿಝೂಲದ ಭಾಗವೆಂದು ಘೋಷಿಸಿಕೊಂಡಿತ್ತು. ಮಾರಕೈಬೋ ತಕ್ಷಣದ ಬೆಂಬಲವನ್ನು ಘೋಷಿಸುವುದರೊಂದಿಗೆ ಅದರ ರಕ್ಷಣೆಗಾಗಿ ಸೆಪ್ಟೆಂಬರ್ ಇಪ್ಪತ್ತೈದರ ಪ್ರಕರಣದ ರೂವಾರಿ, ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ವೆನಿಝೂಲ ಸರ್ಕಾರದ ಆಶ್ರಯ ಪಡೆದಿದ್ದ ಜನರಲ್ ಪೆಡ್ರೋ ಕ್ಯಾರುಜೋ ಅನ್ನು ಕಳಿಸಿಕೊಟ್ಟಿದ್ದರು.

ತಮಗೆ ತಿಳಿದ ತಕ್ಷಣ ಮಾಂಟಿಲ ಸುದ್ದಿ ತಂದಿದ್ದರು, ಆದರೆ ಆ ಹೊತ್ತಿಗಾಗಲೇ ಆ ವಿಷಯ ಜನರಲ್‌ರಿಗೆ ಗೊತ್ತಾಗಿ ಖುಷಿಯಿಂದಿದ್ದರು; ಯಾಕೆಂದರೆ ರಿಯೋಹಚ ದಂಗೆಯು ಮಾರಕೈಬೋ ವಿರುದ್ಧ ಮತ್ತೊಂದು ದಿಕ್ಕಿನಲ್ಲಿ ಕಾರ್ಯಶೀಲವಾಗಲು ಹೊಸತೂ ಉತ್ತಮವೂ ಆದ ಸೈನ್ಯ ರಚನೆಯ ಯೋಜನೆಯನ್ನು ಸಮರ್ಥಿಸಿತ್ತು.

"ಅಷ್ಟೇ ಅಲ್ಲದೆ ಕ್ಯಾರುಜೋ ನಮ್ಮ ಕೈಯಲ್ಲೇ ಇದ್ದಾನೆ."

ಅಂದು ರಾತ್ರಿಯೇ ಅವರು ಅಧಿಕಾರಿಗಳೊಡನೆ ಏಕಾಂತ ಸಭೆ ಸೇರಿ ಗಾಢ ಭಾವುಕತೆಯಿಂದ ತಮ್ಮ ತಂತ್ರಗಳ ನಿಖರ ಸ್ವರೂಪವನ್ನು ವಿವರಿಸಿದರು; ಜೊತೆಗೆ ಭೂಪ್ರದೇಶದ ಏರುಪೇರು, ಶತ್ರುಗಳ ಅನೀರಿಕ್ಷಿತ ವ್ಯೂಹದಲ್ಲಿಯೂ ಇಡೀ ಸೈನ್ಯ ಚದುರಂಗದಾಟದ ಕಾಯಿಗಳಂತೆ ಸಾಗಬೇಕಾದ ಬಗೆ ಇವುಗಳನ್ನು ಕುರಿತು ಹೇಳಿದರು. ಅವರಿಗೆ ಯಾವುದೇ ಅಧಿಕಾರಿ ಪಡೆದ ಔಪಚಾರಿಕ ಶಿಕ್ಷಣದ ಹಿನ್ನೆಲೆಯಿರಲಿಲ್ಲ, ಅವರೆಲ್ಲ ಸ್ಪೈನ್‌ನ ಅತ್ಯುತ್ತಮ ಸೈನಿಕ ಶಾಲೆಗಳಲ್ಲಿ ಅಧ್ಯಯನ ಮಾಡಿದ್ದವರು, ಆದರೆ ಸೂಕ್ಷ್ಮ ವಿವರಗಳ ಸಮೇತ ಒಂದು ಸನ್ನಿವೇಶವನ್ನು ಕಲ್ಪನೆಯಲ್ಲಿ ಮೂಡಿಸಿಕೊಳ್ಳಬಲ್ಲವರಾದ್ದರು. ಅವರ ದರ್ಶಕ ನೆನಪು ಎಷ್ಟು ಅಗಾಧವಾದುದೆಂದರೆ, ಹಲವಾರು ವರ್ಷಗಳ ಹಿಂದೆ ಎದುರಿಸಿದ್ದ ಅಡ್ಡಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಬಲ್ಲವರಾಗಿದ್ದರು. ಯುದ್ಧಕಲೆಯಲ್ಲಿ ಪರಿಣತನೆಂದು ಹೇಳಲು ಬಾರದಿದ್ದರೂ ಅವರು ಉಕ್ಕಿಸಬಲ್ಲ ಸ್ಫೂರ್ತಿ ಮಾತ್ರ ಅಮೋಘವಾದುದಾಗಿತ್ತು.

ನಸುಕಿನ ವೇಳೆಗೆ ಯೋಜನೆ ಮುಕ್ತಾಯಗೊಂಡಿತು. ಅದು ಪರಿಪೂರ್ಣವಾಗಿತ್ತು, ಉಗ್ರವಾದುದಾಗಿತ್ತು, ಮತ್ತು ಮರಾಕೈಬೋನ ಮೇಲಿನ ದಾಳಿ ನವೆಂಬರ್ ಕೊನೆಯ ವೇಳೆಗೆ, ಅಥವಾ ಏನಾದರೂ ಅನಿರೀಕ್ಷಿತ ಪರಿಸ್ಥಿತಿ ಎದುರಾದರೆ, ಡಿಸೆಂಬರ್ ಆರಂಭಕ್ಕೆ, ನಡೆಯಬೇಕೆಂಬಷ್ಟು ಕರಾರುವಾಕ್ಕಾದ ಲೆಕ್ಕಾಚಾರದ್ದಾಗಿತ್ತು. ಒಂದು ಜಡಿಮಳೆಯ ಮಂಗಳವಾರ ಬೆಳಿಗ್ಗೆ ಎಂಟು ಗಂಟೆಗೆ ಅಂತಿಮ ಪರಿಶೀಲನೆ ಮುಗಿಯುವ ಹೊತ್ತಿಗೆ, ನ್ಯೂ ಗ್ರನಡದ ಪ್ರಮುಖನಾದೊಬ್ಬ ಸಾಮಾನ್ಯ ವಸ್ತ್ರಧಾರಿ ಜನರಲ್ ಹಾಜರಿಲ್ಲದಿರುವ ಮುಖ್ಯ ಅಂಶದ ಕಡೆಗೆ ಮಾಂಟಿಲ ಗಮನ ಸೆಳೆದರು.

"ಕೆಲಸಕ್ಕೆ ಬಾರದವರಲ್ಲಿ ನ್ಯೂ ಗ್ರನಡದ ಆ ಒಬ್ಬನೇ ಅಲ್ಲ ಇರೋದು, ಅಸಮರ್ಥರಾದೋರು ಮೂರ್ಖರು" ಎಂದರು ಜನರಲ್.

ಮಾತನ್ನು ಸಹನೀಯವಾಗಿಸಲು ಮಾಂಟಿಲ ಹೇಳಿದರು: "ಜನರಲ್‌ಗಳೇ, ತಾವು ಯಾವ ಕಡೆ ಹೋಗ್ತೀರಿ?"

"ಕ್ಯುಕೂರ ಆಗಲೀ ರಿಯೊಹಚ ಆಗಲಿ ಈಗ ನಾನು ತಲೆ ಕೆಡಿಸಿಕೊಳ್ಳೋದಿಲ್ಲ" ಎಂದುತ್ತರಿಸಿದರು.

ಇನ್ನೇನು ಹೊರಡಲು ತಿರುಗಬೇಕೆನ್ನುವಷ್ಟರಲ್ಲಿ, ಜನರಲ್ ಕ್ಯಾರೆನೋನ ಅಸಮಾಧಾನದ ಮುಖಚರ್ಯೆಯನ್ನು ಕಂಡು ಬಹು ಕಾಲದ ಮಾತನ್ನು ತಾವು ಉಳಿಸಿಕೊಳ್ಳದಿರುವುದನ್ನು ನೆನಪಿಸಿತು. ಸತ್ಯವೆಂದರೆ, ಶತಾಯ ಗತಾಯ ಅವನನ್ನು ತನ್ನ ಕಡೆ ಉಳಿಸಿಕೊಳ್ಳಬೇಕೆನ್ನುವುದು ಅವರ ಆಸೆ, ಆದರೆ ಅವನ ಅಸಹಿಷ್ಣುತೆಯನ್ನು ತಡೆದುಕೊಳ್ಳಲಾರದಾದರು. ಎಂದಿನಂತೆ ಅವನ ಭುಜವನ್ನು ಚಪ್ಪರಿಸಿ, "ಪ್ರಮಾಣವಾಗಿಯೂ ಕ್ಯಾರೆನೋ, ನೀವೂ ನಮ್ಮ ಜೊತೆ ಇರ್ತೀರಿ" ಎಂದರು.

ಎರಡು ಸಾವಿರ ಮಂದಿ ಸೈನಿಕರ ವಿಶೇಷ ಪಡೆಯು ಸೆಪ್ಟೆಂಬರ್ ೨೫ ರಂದು ಕಾರ್ಟಜೆನದಿಂದ ಯಾನ ಹೊರಟಿತು; ಆ ದಿನವನ್ನು ಸಾಂಕೇತಿಕವೆಂಬ ಕಾರಣಕ್ಕಾಗಿ ಆರಿಸಿಕೊಳ್ಳಲಾಗಿತ್ತು. ಆ ಪಡೆಯ ನಾಯಕತ್ವವು ಜನರಲ್‌ಗಳಾದ ಮರಿಯಾನೋ ಮಾಂಟಿಲ, ಜೋಸೆ ಫೆಲಿಕ್ಸ್ ಬ್ಲಾಂಕೊ ಮತ್ತು ಜೋಸೆ ಮರಿಯ ಕ್ಯಾರೆನೋ ಅವರುಗಳದಾಗಿತ್ತು. ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳುತ್ತಲೇ ಯುದ್ಧವನ್ನು ಸನಿಹದಿಂದ ನಿರುಕಿಸಲು ಅನುಕೂಲವಾಗುವಂತೆ ಜನರಲ್ ಅವರಿಗಾಗಿ ಸಂಟಾ ಮಾರ್ಟಾದ ಒಳಪ್ರದೇಶಗಳಲ್ಲಿ ಮನೆಯನ್ನು ಹುಡುಕುವ ಕೆಲಸವನ್ನು ಅವರು ಮೂವರಿಗೂ ಪ್ರತ್ಯೇಕವಾಗಿ ವಹಿಸಲಾಗಿತ್ತು. ಅವರು ತಮ್ಮ ಆಪ್ತ ಗೆಳೆಯನೊಬ್ಬನಿಗೆ ಈ ರೀ ಬರೆದಿದ್ದರು: "ಆಲಸ್ಯವನ್ನು ನೀಗಿಕೊಂಡು ಆರೋಗ್ಯವನ್ನು ಸುಧಾರಿಸಿಕೊಳ್ಳುವ ಚಟುವಟಿಕೆಗಳಲ್ಲಿ ತೊಡಗಲು ಇನ್ನೆರಡು ದಿನಗಳಲ್ಲಿ ನಾನು ಸಂಟಾ ಮಾರ್ಟಾಕ್ಕೆ ಹೊರಡುತ್ತೇನೆ." ಈ ಕೆಲಸವನ್ನವರು ಬಹು ಬೇಗನೇ ಕೈಗೊಂಡರು: ಅಕ್ಟೋಬರ್ ಒಂದರಂದು ಪ್ರಯಾಣ ಆರಂಭಿಸಿದರು. ಅಕ್ಟೋಬರ್ ಎರಡರಂದು ಮಾರ್ಗ ಮಧ್ಯದಲ್ಲಿಯೇ ಜನರಲ್ ಜಸ್ಟೋ ಬ್ರೈಸೆನೋಗೆ ಬರೆದ ಪತ್ರದಲ್ಲಿ ಹೆಚ್ಚು ಖಚಿತವಾಗಿ ಹೀಗೆಂದು ಬರೆದಿದ್ದರು: "ಮರಾಕೈಬೋ ವಿರುದ್ಧದ ಹೋರಾಟದಲ್ಲಿ ನನ್ನ ಪಾಲನ್ನು ನಿರ್ವಹಿಸಲು ನಾನು ಸಂಟಾ ಮಾರ್ಟಾ ಕಡೆ ಪಯಣ ಹೊರಟಿದ್ದೇನೆ." ಅಂದೇ ಊರ್ಡಾನೆಟನಿಗೆ ಮತ್ತೊಂದು ಪತ್ರ ಬರೆದರು: "ನಾನು ಇದುವರೆಗೂ ನೋಡಿರದ ಪ್ರದೇಶವನ್ನು ಕಾಣುವ ಇಚ್ಛೆಯಿಂದ ಮತ್ತು ತಮ್ಮ ಅಭಿಪ್ರಾಯಗಳ ಗಾಢ ಪ್ರಭಾವವನ್ನು ಬೀರಬಲ್ಲ ಕೆಲವು ಮಂದಿ ಶತ್ರುಗಳನ್ನು ಭ್ರಮನಿರಸನಗೊಳಿಸಲು ಸಂಟಾ ಮಾರ್ಟಾ ಕಡೆ ಪಯಣ ಹೊರಟಿದ್ದೇನೆ." ತಮ್ಮ ಪಯಣದ ನಿಜವಾದ ಉದ್ದೇಶವನ್ನು ಬಹಿರಂಗಗೊಳಿಸಿದ್ದು ಆಗಲೇ: "ಮೊದಲು ರಯೋಹಚ ವಿರುದ್ಧದ ಕಾರ್ಯಚರಣೆಯನ್ನು ಖುದ್ದಾಗಿ ಪರಿಶೀಲಿಸುತ್ತೇನೆ, ಆನಂತರ ಮರಾಕೈಬೋ ಮತ್ತು ಸೈನಿಕ ಪಡೆಗಳ ಕಾರ್ಯವಿಧಾನದ ಮೇಲೆ ನಾನು ಯಾವ ಬಗೆಯಲ್ಲಾದರೂ ಪ್ರಭಾವ ಬೀರಬಹುದೋ ಎಂಬುದನ್ನು

ಖಚಿತಪಡಿಸಿಕೊಳ್ಳುತ್ತೇನೆ.” ಸರಿಯಾದ ದೃಷ್ಟಿಯಿಂದ ನೋಡಿದಾಗ ಜನರಲ್‌ರು ಸೋತು ದೇಶ ಬಿಟ್ಟು ಓಡಿಹೋಗುತ್ತಿದ್ದ ನಿವೃತ್ತ ವ್ಯಕ್ತಿಯಾಗಿರದೆ ಹೋರಾಟ ನಿರತನಾದ ಸೇನಾಪತಿಯಂತೆ ಕಾಣುತ್ತಿದ್ದರು.

ಕಾರ್ಟೆಜೆನದಿಂದ ಹೊರಡುವ ಮುಂಚೆ ಹೋರಾಟಕ್ಕೆ ಆವಶ್ಯಕವಾದ ವಿಷಯಗಳನ್ನು ಬಗೆಹರಿಸಬೇಕಾಗಿತ್ತು. ಅಧಿಕೃತ ಬೀಳ್ಕೊಡಿಗೆಗಳಿಗೆ ಆಗ ಅವಕಾಶವಿರಲಿಲ್ಲ, ಹಾಗಾಗಿ ಮೊಂಚೆಯೇ ಕೆಲವೇ ಮಂದಿ ಸ್ನೇಹಿತರಿಗೆ ವಿಷಯ ತಿಳಿಸಿದ್ದರು. ಅವರ ಸೂಚನೆಯ ಪ್ರಕಾರ, ಫರ್ನಾಂಡೋ ಮತ್ತು ಜೋಸೆ ಪಲಾಸಿಯೋಸ್, ಅನಿಶ್ಚಿತ ಅವಧಿಯ ಯುದ್ಧದ ಸಮಯದಲ್ಲಿ ಅನವಶ್ಯಕವಾದ ಹೊರೆಯನ್ನು ನಿವಾರಿಸಿಕೊಳ್ಳಲೋಸುಗ ಸಾಮಾನು ಸರಂಜಾಮುಗಳ ಅರ್ಧದಷ್ಟನ್ನು ಸ್ನೇಹಿತರ ಅಥವಾ ವಾಣಿಜ್ಯ ಸಂಸ್ಥೆಗಳ ವಶದಲ್ಲಿ ಬಿಟ್ಟರು. ಹತ್ತು ಪೆಟ್ಟಿಗೆಗಳಲ್ಲಿ ತುಂಬಿದ ಕಾಗದಪತ್ರಗಳನ್ನು ಸ್ಥಳಿಯ ವ್ಯಾಪಾರಿ ಡಾನ್ ಜುವಾನ್ ಪವಾಜ್ಯೂಗೆ ಒಪ್ಪಿಸಿ, ಅದನ್ನೆಲ್ಲ ಮುಂದೆ ತಾವು ತಿಳಿಸುವ ಪ್ಯಾರಿಸ್‌ನ ವಿಳಾಸಕ್ಕೆ ಕಳಿಸಲು ಹೇಳಿದರು. ಜೊತೆಗೆ ವಿಳಾಸದಾರನು ತನ್ನ ಕೈಮೀರಿದ ಕಾರಣದಿಂದ ಅದನ್ನು ಪಡೆಯಲಾಗದಿದ್ದರೆ ಅವನ್ನೆಲ್ಲ ಸುಟ್ಟುಹಾಕಬೇಕೆಂದೂ ಪವಾಜ್ಯೂಗೆ ಸೂಚಿಸಲಾಗಿತ್ತು.

ಕೊನೆ ಗಳಿಗೆಯಲ್ಲಿ ತಮ್ಮ ಚಿಕ್ಕಪ್ಪನ ಬರೆಯುವ ಸಲಕರಣೆಗಳ ನಡುವೆ ಸಿಕ್ಕಿ ಎಲ್ಲಿಂದ ಬಂತು ಎಂಬುದನ್ನು ಪತ್ತೆ ಹಚ್ಚಲಾಗದಿದ್ದ ಇನ್ನೂರು ಔನ್ಸ್ ಚಿನ್ನವನ್ನು ಫರ್ನಾಂಡೋ ಬುಷ್ ಅಂಡ್ ಕಂಪೆನಿಯ ಬ್ಯಾಂಕ್‌ನಲ್ಲಿಟ್ಟರು. ಹಾಗೆಯೇ ಮೂವತ್ತೈದು ಚಿನ್ನದ ಪದಕಗಳಿದ್ದ ಭರಣಿಯೊಂದನ್ನು ಹಾಗೂ ಇನ್ನೂರ ತೊಂಬತ್ತನಾಲ್ಕು ದೊಡ್ಡ, ಅರುವತ್ತೇಳು ಸಣ್ಣ ಮತ್ತು ತೊಂಬತ್ತಾರು ಮಧ್ಯಮ ಗಾತ್ರದ ಬೆಳ್ಳಿ ಪದಕಗಳಿದ್ದ ವೆಲ್ವೆಟ್ ಸಂಚಿ, ಜನರಲ್‌ರ ಚಿತ್ರವಿದ್ದ ಕೆಲವನ್ನೂ ಒಳಗೊಂಡಂತಹ ನಲವತ್ತು ಚಿನ್ನ ಹಾಗೂ ಬೆಳ್ಳಿ ಪದಕಗಳಿದ್ದ ಅಂಥದೇ ಇನ್ನೊಂದು ಸಂಚಿಯನ್ನೂ ಜುವಾನ್ ದ ಫ್ರಾನ್ಸಿಸ್ಕೋ ಮಾರ್ಟಿನ್ ಹತ್ತಿರ ಠೇವಣಿಯಿಟ್ಟರು. ಜೊತೆಗೆ, ಮಾಂಪಾಕ್ಸ್‌ನಿಂದ ತಂದಿದ್ದ ಊಟದ ಮೇಜಿನ ಮೇಲಿಡುವ ಚಿನ್ನದ ಉಪಕರಣಗಳನ್ನಿರಿಸಿದ್ದೊಂದು ಹಳೆಯ ವೈನ್ ಮಕರಿ, ಕೆಲವು ಹಳೆಯ ಹಾಸುಗೆ ಬಟ್ಟೆಗಳು, ಪುಸ್ತಕಗಳನ್ನು ತುಂಬಿದ ಎರಡು ಪೆಟ್ಟಿಗೆಗಳು, ವಜ್ರದ ಕುಂದಣವಿದ್ದ ಒಂದು ಕತ್ತಿ ಮತ್ತು ಕೆಲಸಕ್ಕೆ ಬಾರದ ಹಳೆಯ ಬಂದೂಕವೊಂದನ್ನೂ ಅವನ ಬಳಿಯೇ ಇರಿಸಿದರು. ಉಳಿದ ಕೆಲವು ಸಣ್ಣ ಪುಟ್ಟ ವಸ್ತುಗಳಲ್ಲಿ, ಮೂವತ್ತೊಂಬತ್ತನೆಯ ವಯಸ್ಸಿಗೇ ಮುಖಕ್ಷೌರ ಮಾಡಿಕೊಳ್ಳುವಾಗ ಅನುಭವಕ್ಕೆ ಬಂದಿದ್ದ ಜನರಲ್‌ರ ದೂರದೃಷ್ಟಿಯು ಓದಲು ಕಾಗದ ಹಿಡಿಯಲು ತೋಳಿನ ಉದ್ದ ಸಾಲದೆನಿಸುವಷ್ಟರವರೆಗೆ

ವ್ಯತ್ಯಾಸವಾದಂತೆಲ್ಲ ಬದಲಾಯಿಸಿಕೊಂಡು ಬಂದಿದ್ದ ಹಲವಾರು ಹಳೆಯ ಕನ್ನಡಕಗಳು ಸೇರಿದ್ದವು.

ಹಲವಾರು ವರ್ಷಗಳ ಕಾಲ ಹೋದಲ್ಲೆಲ್ಲ ತಮ್ಮೊಡನೆ ಸಂಚರಿಸಿದ್ದ ಆದರೆ ಒಳಗೇನಿದೆ ಎಂದು ತಿಳಿಯದ ಒಂದು ಪೆಟಾರಿಯನ್ನು ಜೋಸೆ ಪೆಲಾಸಿಯೋಸ್ ಡಾನ್ ಜುವಾನ್ ದ ಡಯೋಸ್ ಆಮಡೋರ್ ಬಳಿ ಇಟ್ಟ. ಜನರಲ್ ಅವರ ಒಂದು ವೈಶಿಷ್ಟ್ಯವೆಂದರೆ, ಅನಿರೀಕ್ಷಿತವೆನಿಸುವ ವಸ್ತುಗಳು ಹಾಗೂ ವಿಶೇಷ ಗುಣಗಳಾವುವೂ ಇರದ ವ್ಯಕ್ತಿಗಳ ಬಗ್ಗೆ ಬೆಳೆಸಿಕೊಳ್ಳುವ ಅದಮ್ಯ ಮೋಹ ಮತ್ತು ಕೆಲಕಾಲದ ನಂತರ ಅವುಗಳನ್ನು ಬಿಡಲಾರದೆ ಅನಿವಾರ್ಯವಾಗಿ ತಮ್ಮೊಡನೆ ಕರೆದೊಯ್ಯುವ ಅಭ್ಯಾಸ. ಆ ಪೆಟಾರಿಯನ್ನು ಜನರಲ್ ೧೮೨೬ ರಲ್ಲಿ ಲಿಮದಿಂದ ಸಂಟಾ ಫ಼ ದ ಬೊಗೋಟದವರೆಗೆ ಒಯ್ದಿದ್ದರು, ಸೆಪ್ಟೆಂಬರ್ ೨೫ ರ ಹತ್ಯೆಯ ಪ್ರಯತ್ನದ ನಂತರ ತಮ್ಮ ಕೊನೆಯ ಹೋರಾಟಕ್ಕೆಂದು ದಕ್ಷಿಣಕ್ಕೆ ವಾಪಸಾದಾಗಿನಿಂದಲೂ ಅದನ್ನು ಜೊತೆಗಿರಿಸಿಕೊಂಡಿದ್ದರು. "ಖಚಿತವಾಗಿ ನಮ್ಮದಲ್ಲ ಎಂದು ಗೊತ್ತಿಲ್ಲದಿರುವಾಗ ಅದನ್ನು ಬಿಟ್ಟು ಹೋಗುವುದಾದರೂ ಹೇಗೆ?" ಎಂದು ಕೇಳುತ್ತಿದ್ದರು. ಅಧಿಕಾರತ್ಯಾಗದ ಬಗ್ಗೆ ನಿರ್ಧಾರವಾಗಿ ಕಾಂಗ್ರೆಸ್‌ಗೆ ತಿಳಿಸಲು ಕೊನೆಯ ಬಾರಿಗೆ ಸಂಟಾ ಫ಼ ದ ಬೊಗೋಟಕ್ಕೆ ವಾಪಸಾದಾಗ ಈ ಪೆಟಾರಿಯು ಅವರ ಹಳೆಯ ವೈಭವದ ಸಾಮಾನುಗಳಲ್ಲಿ ಒಂದಾಗಿತ್ತು. ಒಮ್ಮೆ ಕಾರ್ಟೆಜೆನದಲ್ಲಿ ಎಲ್ಲ ಸಾಮಾನುಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಅದನ್ನು ತೆಗೆದಿದ್ದರು, ನೋಡಿದರೆ ಕಳೆದುಹೋಯಿತೆಂದು ಭಾವಿಸಲಾಗಿದ್ದ ಅನೇಕ ಬಿಡಿ ಸಲಕರಣೆಗಳು ಅದರಲ್ಲಿ ಇಡುಕಿರಿದಿದ್ದವು: ಕೊಲಂಬಿಯದಲ್ಲಿ ಟಂಕಿತವಾಗಿದ್ದ ನಾನ್ನೂರ ಹದಿನೈದು ಚಿನ್ನದ ನಾಣ್ಯಗಳು, ಜನರಲ್ ಜಾರ್ಜ್ ವಾಷಿಂಗ್‌ಟನ್‌ನ ಹಳೆಯ ವರ್ಣ ಭಾವಚಿತ್ರ, ಅವರ ಕೂದಲ ಜೊಂಪೆ, ಇಂಗ್ಲಂಡ್‌ನ ರಾಜ ಅವರಿಗಿತ್ತಿದ್ದ ಚಿನ್ನದ ನಶ್ಯದ ಡಬ್ಬಿ, ಪುರಾತನ ವಸ್ತುಗಳನ್ನಿಡುವ ವಜ್ರದ ಕೀಲಿಕೈಯೊಂದಿಗಿನ ಚಿನ್ನದ ಭರಣಿ, ಹಾಗೂ ವಜ್ರದ ಕುಂದಣವಿರುವ ಬೊಲಿವಿಯದ ಒಂದು ದೊಡ್ಡ ನಕ್ಷತ್ರಪದಕ. ಜೋಸೆ ಪೆಲಾಸಿಯೋಸ್ ಅವೆಲ್ಲಕ್ಕೂ ವಿವರಣೆಗಳನ್ನು ಅಂಟಿಸಿ ಜುವಾನ್ ದ ಫ಼್ರಾನ್ಸಿಸ್ಕೋ ಮಾರ್ಟಿನ್‌ನ ಮನೆಯಲ್ಲಿರಿಸಿ, ಎಲ್ಲದಕ್ಕೂ ರಸೀತಿ ಪಡೆದ. ಈಗ ಉಳಿದ ಅವರ ಸಾಮಾನುಗಳ ಗಾತ್ರ ಹಿಡಿತಕ್ಕೆ ಸಿಕ್ಕುವಂತಹದಾಯಿತು: ಆದರೂ ಅವರ ಪ್ರತಿನಿತ್ಯದ ಉಡುಪುಗಳಿದ್ದ ನಾಲ್ಕು ಪೆಟ್ಟಿಗೆಗಳಲ್ಲಿ ಮೂರು, ಮತ್ತೊಂದರಲ್ಲಿ ಹಳೆಯ ಊಟದ ಮೇಜಿನ ಮೇಲಿನ ವಸ್ತ್ರಗಳಿದ್ದ ಪೆಟ್ಟಿಗೆಯೊಂದು, ಮುಂದೆ ಎಂದಾದರೂ ಗಣ್ಯ ಅತಿಥಿಗಳು ಬಂದರೆ ಉಪಯೋಗಕ್ಕೆ ಬಂದಾವೆಂದು ಬಿಟ್ಟು ಹೋಗಲು ಅಥವಾ ಮಾರಲು ಬಯಸದೆ ಜೊತೆಯಲ್ಲಿಯೇ ಒಯ್ಯಲು ಜನರಲ್ ಇಚ್ಛಿಸಿದ ಅಪ್ರತಿಮ

ಶೈಲಿಯ ಚಿನ್ನ ಮತ್ತು ಬೆಳ್ಳಿಯ ಉಪಕರಣಗಳಿದ್ದ ಒಂದು ಸಂದೂಕು ಉಳಿದೇ ಉಳಿದವು. ಇವನ್ನೆಲ್ಲ ಹರಾಜು ಹಾಕಿ ತಮ್ಮ ಮಿತ ಹಣಕಾಸು ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಹೇಳಿದರೂ ಜನರಲ್ ಒಪ್ಪಿರಲಿಲ್ಲ, ಅವೆಲ್ಲ ದೇಶದ ಆಸ್ತಿ ಎಂದೇ ವಾದಿಸುತ್ತಿದ್ದರು.

ಕಡಿಮೆ ಸರಂಜಾಮು ಮತ್ತು ಪರಿವಾರದೊಂದಿಗೆ ಅವರು ಮೊದಲನೆಯ ದಿನ ಟರ್ಬಾಕೋವರೆಗೂ ಸಾಗಿದರು. ಮಾರನೆಯ ದಿನ ಒಳ್ಳೆಯ ಹವಾಮಾನವಿದ್ದುದರಿಂದ ಪಯಣ ಮುಂದುವರೆಸಿದರೂ ಮಧ್ಯಾಹ್ನದ ವೇಳೆಗೆ ಬೀದಿ ಬದಿಯಲ್ಲಿಯೇ ಬಿಡಾರ ಹೂಡಬೇಕಾಯಿತು; ಮಳೆ ಮತ್ತು ಕೊಚ್ಚೆಯ ಮೇಲೆ ಬೀಸಿ ಬರುತ್ತಿದ್ದ ಗಬ್ಬು ವಾಸನೆಯ ಗಾಳಿಯಲ್ಲಿಯೇ ರಾತ್ರಿಯನ್ನೆಲ್ಲ ಕಳೆಯಬೇಕಾಯಿತು. ಪ್ಲೀಹ ಮತ್ತು ಯಕೃತ್ತುಗಳಲ್ಲಿ ನೋವು ಎಂದು ಜನರಲ ಹೇಳಿದರು, ಫ್ರೆಂಚ್ ಕೈಪಿಡಿಗೆ ಅನುಸಾರವಾಗಿ  ಜೋಸೆ ಪೆಲಾಸಿಯೋಸ್ ಔಷಧಿಯನ್ನು ತಯಾರಿಸಿದ. ಆದರೆ ನೋವು ತೀವ್ರವಾದುದಲ್ಲದೆ ಜ್ವರವೂ ಹೆಚ್ಚಾಯಿತು. ನಸುಕಿನ ವೇಳೆಗೆ ಎಷ್ಟು ನಿತ್ರಾಣಗೊಂಡಿದ್ದರೆಂದರೆ ಪ್ರಜ್ಞೆ ತಪ್ಪಿದ್ದ ಅವರನ್ನು ಸೋಲೆದಾದ್ ನಗರದವರೆಗೂ ಹೊತ್ತೇ ಸಾಗಿಸಬೇಕಾಯಿತು; ಅಲ್ಲಿ ಅವರ ಹಳೆಯ ಗೆಳೆಯ ಡಾನ್ ಪೆಡ್ರೋ ಜುವಾನ್ ವಿಸ್ಬಾಲ್‌ರ ಮನೆಯಲ್ಲಿ ಅವರನ್ನು ಮಲಗಿಸಲಾಯಿತು. ಅಕ್ಟೋಬರ್‌ನ ಜಡಿಮಳೆಯಿಂದ ಮತ್ತಷ್ಟು ಹದಗೆಟ್ಟ ನೋವನ್ನನುಭವಿಸುತ್ತ ಅಲ್ಲಿ ಅವರು ಒಂದು ತಿಂಗಳಿಗೂ ಹೆಚ್ಚಿನ ಕಾಲ ಉಳಿಯಬೇಕಾಯಿತು.

ಸೋಲೆದಾದ್ ಒಳ್ಳೆಯ ಹೆಸರು; ಅದರಲ್ಲಿ ಉರಿಯುವ ಬಡವರೇ ವಾಸಿಸುವ ಬಿಕೋ ಎನ್ನುವ ನಾಲ್ಕು ಬೀದಿಗಳಿದ್ದವು; ಅದು ಹಿಂದೊಮ್ಮೆ ಬರ್ರಾಂಕಾ ದ ಸ್ಯಾನ್ ನಿಕೋಲಾಸ್ ಎಂದು ಕರೆಯಲಾಗುತ್ತಿದ್ದ ಸ್ಥಳದಿಂದ ಎರಡು ಲೀಗ್ ದೂರವಿತ್ತು; ಇದೇ ಮುಂದೆ ಕೆಲವೇ ವರ್ಷಗಳಲ್ಲಿ ಸಂಪದ್ಭರಿತವೂ ಆದರಪೂರಿತವೂ ಆದ ನಗರವಾಗಿ ಬೆಳೆದು ಬರಾಂಕಿಲಾ ಎಂಬ ಹೆಸರನ್ನು ಪಡೆಯಿತು. ಆರೋಗ್ಯ ಸುಧಾರಿಸಲು ಇದಕ್ಕಿಂತ ಉತ್ತಮವಾದ ಊರಾಗಲೀ ಮನೆಯಾಗಲೀ ಜನರಲ್‌ರಿಗೆ ಸಿಕ್ಕುವುದು ದುಸ್ತರವಾಗಿತ್ತು. ಆರು ಆಂಡಲೂಸಿಯನ್ ಉಪ್ಪರಿಗೆಗಳಿಂದ ಮನೆಯಲ್ಲಿ ಬೆಳಕು ಸುರಿಯುತ್ತಿತ್ತು, ಮೊಗಸಾಲೆಯ ಶತಮಾನಕಾಲದ ಸೀಬ ಮರದ ನೆರಳಂತೂ ಧ್ಯಾನಕ್ಕೆ ಸೂಕ್ತ ಸ್ಥಳವಾಗಿತ್ತು; ಪಾಳುಬಿದ್ದ ಚರ್ಚ್ ಹಾಗೂ ಹಿತಕರವಾದ ಬಣ್ಣಗಳನ್ನು ಹಾಕಿದ ಮತ್ತು ತಾಳೆಗರಿಗಳ ಚಾವಣಿಯುಳ್ಳ ಮನೆಗಳಿದ್ದ ನಿರ್ಜನವಾದೊಂದು ಸಣ್ಣ ಚೌಕ ಮಲಗುವ ಮನೆಯ ಕಿಟಕಿಯಿಂದ ಕಾಣಿಸುತ್ತಿತ್ತು.

ಆದರೆ ಮನೆಯ ಶಾಂತ ವಾತಾವರಣವೇನೂ ಜನರಲ್‌ರಿಗೆ ಸಹಾಯಕವಾಗಲಿಲ್ಲ. ಮೊದಲನೆಯ ರಾತ್ರಿ ಸ್ವಲ್ಪ ತಲೆಸುತ್ತು ಕಾಣಿಸಿಕೊಂಡಿತು, ಆದರೆ ಅದು ತನ್ನಲ್ಲಿ ಹೊಸತಾಗಿ ಕಾಣಿಸಿಕೊಂಡ ನಿತ್ರಾಣದ ಕುರುಹೆಂದು ಅವರು ಒಪ್ಪಿಕೊಳ್ಳಲಿಲ್ಲ; ತಮ್ಮ ಕಾಯಿಲೆಯನ್ನವರು ಚಳಿ ಮತ್ತು ಬಿಸಿಲುಗಳ ಕಾರಣದಿಂದ ಹೆಚ್ಚಾದ ಸಂಧಿವಾತದಿಂದಾಗಿ ತೀವ್ರಗೊಂಡ ಪಿತ್ತಾಧಿಕ್ಯವೆಂದು ಫ್ರೆಂಚ್ ಕೈಪಿಡಿಗೆ ಅನುಸಾರವಾಗಿಯೇ ವರ್ಣಿಸಿದರು. ವಿಭಿನ್ನ ರೋಗಗಳಿಗೆಂದು ಒಟ್ಟಿಗೆ ನಿಡುತ್ತಿದ್ದ ವಿವಿಧ ಔಷಧಿಗಳಿಂದಾಗಿ ಅವರ ಸಿಡುಕಿನ ಗೊಣಗಾಟ ಹೆಚ್ಚಾಯಿತು, ಒಂದು ಕಾಯಿಲೆಗೆ ಉತ್ತಮವೆನಿಸಿದ ಔಷಧಿ ಉಳಿದ ಕಾಯಿಲೆಗಳನ್ನು ಉಲ್ಬಣಗೊಳಿಸುವುದೆಂದು ಅವರು ವಾದಿಸುತ್ತಿದ್ದರು. ಒಲ್ಲದವನಿಗೆ ಔಷಧಿಯು ಮೈಗೆ ಹತ್ತುವುದಿಲ್ಲವೆಂಬುದೂ ಅವರಿಗೆ ತಿಳಿದಿತ್ತು; ಒಳ್ಳೆಯ ವೈದ್ಯರಿಲ್ಲದಿರುವ ಬಗ್ಗೆ ಪ್ರತಿನಿತ್ಯವೂ ದೂರುತ್ತಿದ್ದರು, ಆದರೆ ನೋಡಲು ಬಂದ ವೈದ್ಯರಿಂದ ತಪಾಸಣೆಗೊಳಗಾಗಲು ಅವರು ನಿರಾಕರಿಸುತ್ತಿದ್ದರು.

ಈ ಸಮಯದಲ್ಲಿಯೇ ತನ್ನ ತಂದೆಗೆ ಬರೆದ ಪತ್ರದಲ್ಲಿ ಕರ್ನಲ್ ವಿಲ್ಸನ್, ಜನರಲ್ ಯಾವುದೇ ಕ್ಷಣದಲ್ಲಾದರೂ ಸಾಯಬಹುದು, ಆದರೆ ವೈದ್ಯರ ತಪಾಸಣೆಗೊಳಗಾಗಲು ಅವರು ನಿರಾಕರಿಸುತ್ತಿರುವುದಕ್ಕೆ ಕಾರಣ ತಿರಸ್ಕಾರವಲ್ಲ ಸಾವಿನ ಮುಂಚಿನ ವಿಷಮಸ್ಥಿತಿ ಎಂದು ಬರೆದಿದ್ದ. ವಾಸ್ತವವಾಗಿ ಜನರಲ್ ಹೆದರುವುದು ರೋಗಕ್ಕೆ ಮಾತ್ರ, ಹಾಗಾಗಿ ತಮ್ಮ ಜೀವಿತದ ಮಹತ್ವದ ಕಾರ್ಯದಿಂದ ವಿಮುಖಗೊಳ್ಳಲು ಇಚ್ಚಿಸದೆ ಅವರು ಅದನ್ನೆದುರಿಸಲು ನಿರಾಕರಿಸುತ್ತಿದ್ದಾರೆ ಎಂದೂ ಸೇರಿಸಿದ್ದ. "ರೋಗಶುಶ್ರೂಷೆ ಎಂದರೆ ಹಡಗಿನಲ್ಲಿ ಕೆಲಸ ಮಾಡಿದಂತೆ" ಎಂದು ಜನರಲ್ ಅವನಿಗೆ ಹೇಳಿದ್ದರಂತೆ. ನಾಲ್ಕು ವರ್ಷಗಳ ಹಿಂದೆ ಲಿಮದಲ್ಲಿ ಬೊಲಿವಿಯದ ಸಂವಿಧಾನ ರಚನೆಯಲ್ಲಿ ತೊಡಗಿದ್ದಾಗ ರೋಗಕ್ಕೆ ಪರಿಪೂರ್ಣ ಚಿಕಿತ್ಸೆಗೊಳಗಾಗಿ ಎಂದು ಓ'ಲಿಯರಿ ಸೂಚಿಸಲು ಅವರು ಖಚಿತವಾಗಿ ನುಡಿದಿದ್ದರಂತೆ: "ಇಬ್ಬರು ಶತ್ರುಗಳನ್ನು ಒಮ್ಮೆಗೇ ಗೆಲ್ಲುವುದು ಅಸಾಧ್ಯ" ಎಂದು.

ನಿರಂತರ ಚಲನೆ ಹಾಗೂ ಸ್ವಾವಲಂಬನೆಗಳು ರೋಗವನ್ನು ಓಡಿಸುವ ತಾಯಿತಗಳು ಎಂಬುದು ಅವರ ದೃಢವಾದ ನಂಬಿಕೆ. ಹಿಂದೆ ಊಟಮಾಡಿಸುವಾಗ ಮಗುವೇನೋ ಎಂಬಂತೆ ಫರ್ನಾಂಡಾ ಬ್ಯಾರಿಗ ಅವರ ಕೊರಳ ಸುತ್ತ ಒಂದು ಕರವಸ್ತ್ರ ಕಟ್ಟಿ ಚಮಚದಿಂದ ತಿನ್ನಿಸುವುದು ವಾಡಿಕೆ, ಜನರಲ್ ತುತ್ತು ಹಾಕಿಸಿಕೊಂಡು ಮೌನವಾಗಿ ಅಗಿಯುತ್ತ ಅದನ್ನು ನುಂಗಿದ ಮೇಲೆ ಬಾಯಿ ತೆರೆಯುತ್ತಿದ್ದರಂತೆ. ಬೇರೆಯವರ ಸಹಾಯದ ಆವಶ್ಯಕತೆಯಿಲ್ಲ ಎಂದು ತೋರಿಸಲು ಈಗ ಅವರು ತಟ್ಟೆ–ಚಮಚಗಳನ್ನು

ತೆಗೆದುಕೊಂಡು ತಮ್ಮ ಕೈಯಲ್ಲೇ ತಿನ್ನುತ್ತಿದ್ದರು, ಕೊರಳ ಸುತ್ತ ವಸ್ತ್ರ ಇರುತ್ತಿರಲಿಲ್ಲ. ಸೇವಕರು ಸಹಾಯಕರು ಮಾಡುತ್ತಿದ್ದ ದಿನಚರಿಯ ಕೆಲಸಗಳನ್ನು ಜನರಲ್ ತಾವೇ ಮಾಡಿಕೊಳ್ಳತೊಡಗುವುದನ್ನು ಕಂಡಾಗ ಜೋಸೆ ಪೆಲಾಸಿಯೋಸ್‌ನ ಕರುಳು ಚುರ್ ಎನ್ನುತ್ತಿತ್ತು, ದೌತಿಗೆ ಮಸಿ ಸುರಿಯುವಾಗ ಅವರು ಮೈಮೇಲೆಲ್ಲ ಚೆಲ್ಲಿಕೊಳ್ಳುವುದನ್ನು ಕಂಡು ತಡೆದುಕೊಳ್ಳಲಾಗುತ್ತಿರಲಿಲ್ಲ. ಎಷ್ಟೇ ಕಾಯಿಲೆಯಿರಲಿ ಜನರಲ್‌ರ ಕೈ ನಡುಗುವುದಿಲ್ಲ, ವಾರಕ್ಕೊಮ್ಮೆ ತಾವೇ ಉಗುರುಗಳನ್ನು ಕತ್ತರಿಸಿಕೊಳ್ಳುತ್ತಾರೆ, ಪ್ರತಿನಿತ್ಯ ಮುಖಕ್ಷೌರ ಮಾಡಿಕೊಳ್ಳುತ್ತಾರೆ, ಎಂಥ ಅದ್ಭುತ ಎಂದೇ ಎಲ್ಲರೂ ನಂಬಿದ್ದರು.

ಲಿಮದಲ್ಲಿನ ಸ್ವರ್ಗದಲ್ಲಿ ಒಂದು ರಾತ್ರಿ ಜನರಲ್‌ರು ಒಬ್ಬ ಯುವತಿಯೊಂದಿಗೆ ಆನಂದಕರವಾಗಿ ಕಳೆದಿದ್ದರು, ಅವಳ ಚರ್ಮದ ಪ್ರತಿ ಮಿಲಿಮೀಟರ್ ಕೂಡ ಮುಚ್ಚಿತ್ತು. ನಸುಕಿನಲ್ಲಿ ಮುಖಕ್ಷೌರ ಮಾಡಿಕೊಳ್ಳುವಾಗ ತೃಪ್ತ ಹೆಂಗಸಿನಂತೆ ಪ್ರಶಾಂತವಾಗಿ ನಿದ್ರೆ ಮಾಡುತ್ತ ಹಾಸಿಗೆಯಲ್ಲಿ ಬತ್ತಲೆ ಮಲಗಿದ್ದುದನ್ನು ಕಂಡಾಗ ಧಾರ್ಮಿಕ ವಿಧಿಯ ಮೂಲಕ ಅವಳನ್ನು ಎಲ್ಲ ಕಾಲಕ್ಕೂ ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆಯುಂಟಾಯಿತು. ಅವಳ ಮೈಮೇಲೆಲ್ಲ ಕ್ಷೌರದ ನೊರೆ ಬಳಿದು ಪ್ರೀತಿಯ ಆವೇಶದಲ್ಲಿ ಅವಳ ಕೂದಲನ್ನು ತಮ್ಮ ರೇಜರಿನಿಂದಲೇ ತೆಗೆದಿದ್ದರು; ಒಮ್ಮೆ ಬಲಗೈಯಿಂದ ಒಮ್ಮೆ ಎಡಗೈಯಿಂದ ಅವಳ ದೇಹದ ಪ್ರತಿ ಭಾಗದ ಕೂದಲನ್ನೂ, ಒತ್ತಾಗಿ ಒಗ್ಗೂಡಿದ್ದ ಹುಬ್ಬುಗಳನ್ನೂ, ತೆಗೆದು ಅವಳನ್ನು ಮತ್ತಷ್ಟು ಬೆತ್ತಲುಗೊಳಿಸಿದ್ದರಂತೆ. ತನ್ನನ್ನವರು ಅಷ್ಟೊಂದು ಪ್ರೀತಿಸುತ್ತಾರೆಯೇ ಎಂದು ಅವಳು ಗದ್ಗದಿತಳಾಗಿ ಕೇಳಿದಾಗ, ತನ್ನ ಜೀವಮಾನವಿಡೀ ಅನೇಕ ಹೃದಯಗಳಲ್ಲಿ ಸುರಿದಿದ್ದ ಯಾಂತ್ರಿಕ ಮಾತುಗಳನ್ನೇ ಒಂದಿಷ್ಟೂ ಕಕ್ಕುಲತೆಯಿಲ್ಲದೆ ಉಸುರಿದ್ದರು: “ಈ ಜಗತ್ತಿನಲ್ಲಿನ ಬೇರೆಲ್ಲರಿಗಿಂತ ಹೆಚ್ಚಾಗಿ.”

ಮತ್ತೊಮ್ಮೆ, ಸೋಲೆದಾದ್ ನಗರದಲ್ಲಿ ಮುಖಕ್ಷೌರ ಮಾಡಿಕೊಳ್ಳುವಾಗ ಅದೇ ಬಲಿಕಾರ್ಯಕ್ಕೆ ಮುಂದಾದರು. ಬಿಳಿ ಕೂದಲನ್ನು ತೆಗೆದುಕೊಳ್ಳುವ ಬಾಲಿಶವೆನಿಸುವ ಪ್ರಚೋದನೆಗೊಳಗಾದರು, ಆನಂತರ ಹುಲ್ಲನ್ನು ಕತ್ತರಿಸುವಂತೆ ಮತ್ತಷ್ಟನ್ನು ಪ್ರಜ್ಞಾಪೂರ್ವಕವಾಗಿ ಕತ್ತರಿಸಿಕೊಂಡರು, ಜೊತೆಗೆ ತಮ್ಮ ಒಡಕು ದನಿಯಲ್ಲಿ *ಲ ಅರೌಕಾನಾ* ಅನ್ನು ಗುನುಗುನಿಸಿದರು. ಯಾರೊಡನೆ ಮಾತಾಡುತ್ತಿದ್ದಾರೆ ಎಂದು ತಿಳಿಯುವ ಕುತೂಹಲದಿಂದ ಜೋಸೆ ಪೆಲಾಸಿಯೋಸ್ ಮಲಗುವ ಕೋಣೆಗೆ ಬಂದಾಗ ನೊರೆ ಹಚ್ಚಿದ ತಲೆಯ ಭಾಗವನ್ನವರು ತೆಗೆದುಕೊಳ್ಳುತ್ತಿದ್ದುದು ಕಾಣಿಸಿತು. ತಲೆಯಲ್ಲಿ ಒಂದು ಕೂದಲೂ ಉಳಿದಿರಲಿಲ್ಲ.

ಮಾಟದಿಂದ ಅವರಿಗೆ ಗುಣವೇನೂ ಆಗಲಿಲ್ಲ. ಹಗಲ ಹೊತ್ತು ರೇಷ್ಮೆ ಟೋಪಿ ಮತ್ತು ರಾತ್ರಿ ಕೆಂಪು ಹುಡ್ ಧರಿಸುತ್ತಿದ್ದರಾದರೂ ಜೋರಾಗಿ ಬೀಸುವ ಶೀತಲ ಗಾಳಿಯನ್ನು ಅವರಿಂದ ತಡೆದುಕೊಳ್ಳಲಾಗುತ್ತಿರಲಿಲ್ಲ. ಹಾಲು ಚೆಲ್ಲಿದಂಥ ಬೆಳುದಿಂಗಳು ತುಂಬಿದ ಮನೆಯಲ್ಲಿ ಓಡಾಡಲೆಂದು ಏಳುತ್ತಿದ್ದರು, ಆದರೆ ಈಗ ಶಕೆಯ ರಾತ್ರಿಯಲ್ಲೂ ಬೆತ್ತಲೆ ಹೋಗಲಾಗದೆ ಶೀತ ಬಡಿದೀತೆಂದು ಮೈಮೇಲೆ ಹೊದಿಕೆ ಹೊದಿರುತ್ತಿದ್ದರು. ಹಗಲ ಹೊತ್ತು ಹೊದಿಕೆ ಸಾಕಾಗುತ್ತಿರಲಿಲ್ಲ, ಹಾಗಾಗಿ ರೇಷ್ಮೆ ಟೋಪಿಯ ಮೇಲೆ ಕೆಂಪು ಹುಡ್ ಧರಿಸಲು ನಿರ್ಧರಿಸಿದ್ದರು.

ಸೈನ್ಯದ ಕ್ಷುಲ್ಲಕ ಸಂಚುಗಳೂ ರಾಜಕಾರಣಿಗಳ ಬೈಗುಳಗಳೂ ಅವರ ಮೈಯುರಿಸುತ್ತಿದ್ದವು, ಇದರಿಂದಾಗಿ ಒಂದು ದಿನ ಮಧ್ಯಾಹ್ನ ಅವುಗಳನ್ನು ತಡೆದುಕೊಳ್ಳಬಾರದೆಂದು ಮೇಜು ಕುಟ್ಟಿ ದೃಢ ನಿರ್ಧಾರ ಕೈಗೊಂಡರು. “ನನಗೆ ಕ್ಷಯ ಬಡಿದಿದೆ ಅಂತ ಅವರಿಗೆ ಹೇಳು” ಎಂದು ಕಿರುಚಿದ್ದರು. ನಿರ್ಧಾರ ಎಷ್ಟು ಆಳವಾಗಿತ್ತೆದರೆ ಮನೆಯಲ್ಲಿ ಸೈನಿಕ ಸಮವಸ್ತ್ರ ತೊಡುವುದನ್ನಾಗಲೀ ಆಚರಣೆಗಳನ್ನು ನಡೆಸುವುದನ್ನಾಗಲೀ ನಿಷೇಧಿಸಿದರು. ಆದರೆ ಅವುಗಳಿಲ್ಲದೆ ತಾವೇ ಬದುಕಲು ಸಾಧ್ಯವಿರಲಿಲ್ಲ, ಆದ್ದರಿಂದ ಅವರ ಆಜ್ಞೆಗೆ ವಿರುದ್ಧವಾಗಿ ಸಂತೈಕೆಯ ಸಂದರ್ಶನಗಳೂ ಗುಪ್ತ ಸಭೆಗಳು ಎಂದಿನಂತೆಯೇ ಮುಂದುವರಿದವು. ಆಮೇಲೆ ತುಂಬ ರೋಗಪೀಡಿತರಾಗಿ ವೈದ್ಯರಿಗೆ  ತೋರಿಸಿಕೊಳ್ಳಲು ಒಪ್ಪಿದರು, ಒಂದು ಷರತ್ತಿನ ಮೇಲೆ: ತಮ್ಮನ್ನು ತಪಾಸಣೆ ಮಾಡುವುದಾಗಲೀ, ಪ್ರಶ್ನೆ ಕೇಳುವುದಾಗಲೀ ಅಥವಾ ಯಾವುದೇ ಔಷಧಿಯನ್ನು ಕುಡಿಯಲು ಕೊಡುವುದಾಗಲೀ ಮಾಡಬಾರದು. “ಬರೀ ಮಾತನಾಡಲು” ಎಂದಿದ್ದರು.

ಆಯ್ಕೆಗೊಂಡ ವೈದ್ಯರಿಗಿಂತ ಹೆಚ್ಚು ಇಷ್ಟಪಡಬಹುದಾದವರು ಇರಲು ಸಾಧ್ಯವಿರಲಿಲ್ಲ. ಹರ್‌ಕ್ಯುಲಿಸ್ ಗ್ಯಾಸ್ಟೆಲ್‌ಬೋಂಡೋ ಧಡೂತಿ ಮನುಷ್ಯ, ಪ್ರಶಾಂತ ಮುಖಮುದ್ರೆಯವರು, ಮುಖದ ಮೇಲೆ ಸದಾ ತೃಪ್ತಿ, ತಲೆ ಪೂರ್ತಿ ಬಕ್ಕವಾಗಿ ಹೊಳೆಯುತ್ತಿತ್ತು; ಅವರದು ಪೂರ್ತಿ ಮುಳುಗಿಹೋದವನ ತಾಳ್ಮೆ, ಇದೇ ಎದುರಿಗಿದ್ದವರ ನೋವನ್ನು ನಿವಾರಿಸುವಂತಿತ್ತು. ಅವರ ಸಂಶಯ ಸ್ವಭಾವ ಮತ್ತು ವೈಜ್ಞಾನಿಕ ಧೈರ್ಯಗಳು ಕರಾವಳಿಯುದ್ದಕ್ಕೂ ಮನೆಮಾತಾಗಿದ್ದವು. ಪಿತ್ತದ ತೊಂದರೆಗಳಿಗೆ ಅವರು ನೀಡುತ್ತಿದ್ದುದೆಂದರೆ ಚೀಸ್ ಜೊತೆ ಕರಗಿಸಿದ ಚಾಕೋಲೇಟ್ ಕೆನೆ; ಜೀರ್ಣ ಸಮಸ್ಯೆಯ ತೀಕ್ಷ್ಣತೆಯನ್ನು ಕಡಿಮೆ ಮಾಡಿ ದೀರ್ಘಾಯುಷ್ಯವನ್ನು ನೀಡುವುದು ಸಂಭೋಗ ಎಂದು ಹೇಳುತ್ತಿದ್ದರು. ಕಾಗದದ ಚೂರುಗಳು ಸುತ್ತಿದ ಡ್ರೈವರ್ಸ್ ಸಿಗಾರ್‌ಗಳನ್ನು ಕೊನೆಯಿಲ್ಲದಂತೆ ತಾವೇ ಸೇದುತ್ತಿದ್ದರು. ದೇಹದ ಎಲ್ಲ ಬಗೆಯ ಸಮತೋಲನಕ್ಕೆಂದು ಅವರು

ತನ್ನ ರೋಗಿಗಳಿಗೆ ಸೂಚಿಸುತ್ತಿದ್ದ ಪರಿಹಾರವೂ ಇದೇ. ರೋಗವು ಪೂರ್ತಿ ಗುಣವಾಗದಿದ್ದರೂ ಅವರ ಆಲಂಕಾರಿಕ ಮಾತುಗಾರಿಕೆ ತಮಗೆ ಮುದ ನೀಡುವುದೆಂದು ರೋಗಿಗಳೇ ಹೇಳುತ್ತಿದ್ದರು. ಅವರದು ಸುಲಭದ ನಗು.

"ಬೇರೆ ವೈದ್ಯರ ಬಳಿಗೆ ಹೋದ ಕೆಲವು ರೋಗಿಗಳೂ ಸಾಯ್ತಾರೆ, ಆದರೆ ನನ್ನಲ್ಲಿ ಬಂದವರು ಸ್ವಲ್ಪ ಹಾಯಾಗಿ" ಎನ್ನುತ್ತಿದ್ದರು ಅವರು.

ಅವರು ಮಾನ್ಯ ಬಾರ್ತೋಲೊಮಿ ಮೊಲಿನಾರಿಸ್‌ನ ಗಾಡಿಯಲ್ಲಿ ಬಂದರು; ಸ್ವಯಮಿಚ್ಛೆಯಿಂದ ಬರುತ್ತಿದ್ದ ಸಂದರ್ಶಕರನ್ನೆಲ್ಲ ಆ ಗಾಡಿ ದಿನದಲ್ಲಿ ಅನೇಕ ಬಾರಿ ಹೊತ್ತು ತರುತ್ತಿತ್ತು, ಆದರೆ ಈಚೆಗೆ ಜನರಲ್‌ರು ಆಹ್ವಾನವಿಲ್ಲದ ಸಂದರ್ಶಕರನ್ನು ನಿಷೇಧಿಸಿದ್ದರು. ವೈದ್ಯರು ಸುಕ್ಕಾದ ಬಿಳಿ ಉಡುಪು ಧರಿಸಿ ನೀರನ್ನು ತಡೆಯುವದಕ್ಕಿಂತ ಹೆಚ್ಚಾಗಿ ಒಳಗೇ ಸುರಿಸುತ್ತಿದ್ದ ಅಸಂಖ್ಯ ತೂತುಗಳಿದ್ದ ಕೊಡೆ ಹಿಡಿದು ಮಳೆಯಲ್ಲಿಯೇ ಬಂದಿದ್ದರು, ಅವರ ಕೋಟಿನ ಜೇಬುಗಳಲ್ಲಿ ಏನೇನೋ ತಿಂಡಿ ಪದಾರ್ಥಗಳಿಂದ ತುಂಬಿದ್ದವು. ಔಪಚಾರಿಕ ಸ್ವಾಗತದ ಮಾತುಗಳಾದ ಬಳಿಕ ಅವರು ಮಾಡಿದ ಮೊದಲ ಕೆಲಸವೆಂದರೆ, ಅರ್ಧ ಸೇದಿದ್ದ ತಮ್ಮ ಸಿಗಾರ್‌ನ ವಾಸನೆಗಾಗಿ ಕ್ಷಮೆ ಕೇಳಿದ್ದು. ತಂಬಾಕು ಹೊಗೆಯನ್ನು ಆಗ ಮಾತ್ರವಲ್ಲ, ಯಾವಾಗಲೂ ಸಹಿಸದ ಜನರಲ್‌ರು ಅವರನ್ನಾಗಲೇ ಕ್ಷಮಿಸಿದ್ದರು.

"ನನಗದರ ಅಭ್ಯಾಸ ಆಗಿದೆ. ನಿಮ್ಮದಕ್ಕಿಂತ ಕೆಟ್ಟ ಸಿಗಾರ್‌ಗಳನ್ನು ಮ್ಯಾನ್ಯುಯೆಲ ಸೇದುತ್ತಾಳೆ, ಮಲಗಿಕೊಂಡು ಕೂಡ, ಆದರೆ ಅವಳು ಹೊಗೆ ಬಿಡುವುದು ನಿಮಗಿಂತ ಹತ್ತಿರದಿಂದ" ಎಂದು ಹೇಳಿದರು.

ಡಾಕ್ಟರ್ ಗ್ಯಾಸ್ಟೆಲ್‌ಬೋಂಡೋ ತಕ್ಷಣ ತಮ್ಮ ಮನಸ್ಸಿನಲ್ಲಿ ಕೊರೆಯುತ್ತಿದ್ದ ವಿಷಯವನ್ನು ಹೇಳಲು ಆ ಸಂದರ್ಭವನ್ನು ಬಳಸಿಕೊಂಡರು: "ನಿಜ ನಿಜ, ಹೇಗಿದಾರೆ ಅವರು?"

"ಯಾರು?"

"ಡೋನಾ ಮ್ಯಾನ್ಯುಯೆಲ."

ಜನರಲ್‌ರ ಉತ್ತರ ತಕ್ಷಣ ಬಂತು: "ಚೆನ್ನಾಗಿದಾಳೆ."

ಎದ್ದು ಕಾಣುವಂತೆಯೇ ಮಾತಿನ ವಿಷಯ ಬದಲಾಯಿಸಿ, ಆಮೇಲೆ ಅವರು ತಮ್ಮ ಅಸಂಬದ್ಧತೆಯನ್ನು ಮುಚ್ಚಿಕೊಳ್ಳಲು ಜೋರಾಗಿ ನಕ್ಕರು. ತಾವು ತಪ್ಪಿಸಿಕೊಳ್ಳಲು ಬಯಸುವ ಯಾವುದಾದರೂ ಪರಿವಾರದವರ ಪಿಸುಮಾತಿಗೆ ವಸ್ತುವಾಗಬಲ್ಲುದೆಂಬುದು ಜನರಲ್‌ರಿಗೆ ತಿಳಿದಿತ್ತು. ಅವರೆಂದೂ ತಮ್ಮ ಈ ವಿಜಯಗಳ ಬಗ್ಗೆ ಕೊಚ್ಚಿಕೊಳ್ಳುತ್ತಿರಲಿಲ್ಲ, ಅವು ಅಸಂಖ್ಯವೂ ಎದ್ದು ಕಾಣುವಂಥವೂ ಆದವು ಬೇರೆ, ಹೀಗಾಗಿ ಅವರ ಮಲಗುವ ಕೋಣೆಯ ರಹಸ್ಯಗಳು ಎಲ್ಲರಿಗೂ ತಿಳಿದಂಥವೇ ಆಗಿದ್ದವು. ಒಂದು ಸಾಧಾರಣ ಪತ್ರ ಲಿಮದಿಂದ ಕ್ಯಾರಕಾಸ್ ತಲುಪಲು ಮೂರು

ತಿಂಗಳು ಹಿಡಿಯುತ್ತಿತ್ತು, ಆದರೆ ಅವರ ಸಾಹಸಗಳ ಬಗೆಗಿನ ಪಿಸುಮಾತು ಮಾತ್ರ ಮನೋವೇಗದಿಂದ ಹರಡುತ್ತಿದ್ದವು. ಪುಕಾರುಗಳು ಜನರಲ್‌ರನ್ನು ಎರಡನೆಯ ನೆರಳಿನಂತೆ ಹಿಂಬಾಲಿಸುತ್ತಿದ್ದವು, ಅವರ ಪ್ರಣಯವರ್ತಿಗಳಿಗೆ ಅಳಿಸಲಾರದ ಮುದ್ರೆ ಬೀಳುತ್ತಿದ್ದವು, ಆದರೆ ಅವರು ಮಾತ್ರ ತಮ್ಮ ರಹಸ್ಯಗಳನ್ನು ಪವಿತ್ರ ವಿಧಿಯಂತೆ ವ್ಯರ್ಥವಾಗಿ ಕಾಪಾಡಿಕೊಂಡೇ ಬಂದಿದ್ದರು. ತಾವು ಕೂಡಿದ ಯಾವ ಹೆಂಗಸಿನ ಬಗ್ಗೆಯೂ ಅವರು ಅನುಚಿತವಾಗಿ ಮಾತಾಡಿದ್ದನ್ನು ಜೋಸೆ ಪೆಲಾಸಿಯೋಸ್‌ನ ಹೊರತು ಬೇರಾರೂ ಕೇಳಿರಲಿಲ್ಲ, ಯಾಕೆಂದರೆ ಅವನು ಅವರ ಎಲ್ಲ ಕಾರ್ಯಗಳಲ್ಲೂ ನೆರವಿಗ; ಮ್ಯಾನ್ಯುಯೆಲ ಜೊತೆಗಿನ ತನ್ನ ಯಜಮಾನರ ಆತ್ಮೀಯ ಸಂಬಂಧವು ರಹಸ್ಯವಾಗಿ ಉಳಿದಿಲ್ಲದೇ ಇದ್ದರೂ ಆ ಬಗ್ಗೆಯೂ, ಡಾಕ್ಟರ್ ಗ್ಯಾಸ್ಟೆಲ್‌ಬೋಂಡೋ ಪಡೆದಷ್ಟು ಕೂಡ, ಕುತೂಹಲವಿರದ ಮುಗ್ಧ ಅವನು.

ಆ ಒಂದು ಮುಜುಗರದ ಕ್ಷಣ ಬಿಟ್ಟರೆ ಡಾಕ್ಟರ್ ಗ್ಯಾಸ್ಟೆಲ್‌ಬೋಂಡೋರದು ವಿವೇಕದ ನಡವಳಿಕೆಯೇ ಸರಿ. ತಮ್ಮ ತಿಳಿವಿನ ಹುಚ್ಚಿನಿಂದ ಲವಲವಿಕೆ ತಂದುಕೊಂಡು, ಜೇಬಿನಲ್ಲಿ ತುಂಬಿಕೊಂಡು ಬಂದಿದ್ದ ಜೇನಿನಲ್ಲಿ ಅದ್ದಿದ ಕ್ಯಾಂಡಿ, ಬಾದಾಮಿ ಮಿಠಾಯಿ ಹಾಗೂ ಚಾಕೋಲೇಟ್ ಮತ್ತು ಕ್ಯಾಸವಾ ಮಿಠಾಯಿಗಳನ್ನು ಇತ್ತಾಗ ಜನರಲ್‌ರು ಅವುಗಳನ್ನು ತೆಗೆದುಕೊಂಡು ಅನ್ಯಮನಸ್ಕತೆಯಿಂದ ತಿಂದರು. ಇಂಥ ಅಂಗಡಿ ತಿನಿಸುಗಳು ಹಸಿವನ್ನು ಹಿಂಗಿಸಲು ಸಹಕಾರಿಯೇ ವಿನಾ, ತಾವು ಬಯಸುವ ತೂಕ ಹೆಚ್ಚಿಸುವುದಲ್ಲ ಎಂಬುದು ಅವರ ವಾದ. "ಯೋಚಿಸಬೇಡಿ ಜನರಲ್, ಬಾಯೊಳಗೆ ಹೋದದ್ದೆಲ್ಲ ತೂಕ ಹೆಚ್ಚಿಸತ್ತೆ, ಅದನ್ನು ಬಿಟ್ಟು ಹೋದದ್ದೆಲ್ಲ ತೂಕ ಇಳಿಸತ್ತೆ" ಎಂದು ವೈದ್ಯರು ಹೇಳಿದರು. ಈ ವಾದ ಜನರಲ್‌ರಿಗೆ ಎಷ್ಟು ಮುದ ನೀಡಿದವೆಂದರೆ ಒಂದು ಬಟ್ಟಲು ವೈನ್ ಮತ್ತು ಒಂದು ಕಪ್ ಆರೋರೂಟ್ ಅನ್ನು ವೈದ್ಯರೊಡನೆ ಕುಡಿಯಲು ಒಪ್ಪಿಗೆ ನೀಡಿದರು.

ವೈದ್ಯರು ಅಷ್ಟೊಂದು ಕಷ್ಟಪಟ್ಟು ಹದಗೊಳಿಸಿದ್ದ ಮುದದ ವಾತಾವರಣವು ಒಂದು ಕೆಟ್ಟ ವಾರ್ತೆ ಬಂದು ಹಾಳಾಯಿತು. ಕಾರ್ಟೆಜೆನದಲ್ಲಿ ವಾಸಿಸುತ್ತಿದ್ದ ಮನೆಯಲ್ಲಿನ ಅವರ ಮಂಚ, ಹಾಸಿಗೆ ಮಗ್ಗುಲು ಹಾಸಿಗೆ ಹಾಗೂ ಅಲ್ಲಿದ್ದಾಗ ಅವರು ಮುಟ್ಟಿದ ಪ್ರತಿಯೊಂದನ್ನೂ ಸಾಂಕ್ರಾಮಿಕದ ಭಯದಿಂದ ಮನೆಯೊಡೆಯ ಸುಟ್ಟುಹಾಕಿದನೆಂದು ಯಾರೋ ಜನರಲ್‌ರಿಗೆ ತಿಳಿಸಿದರು. ಸುಟ್ಟ ಸಾಮಾನುಗಳ ಹೊಸತರ ಬೆಲೆಯ ಮೊತ್ತ ಹಾಗೂ ಮನೆಯ ಬಾಡಿಗೆಯನ್ನು ಒಡೆಯನಿಗೆ ನೀಡುವಂತೆ ಹಣವನ್ನಿರಿಸಿದ್ದ ಡಾನ್ ಜುವಾನ್ ದ ಡಯೋಸ್ ಆಮಡಾರ್‌ಗೆ ಜನರಲ್‌ರು ಸೂಚನೆ ಕಳಿಸಿದರು. ಆದರೆ ಇದು ಅವರ ಮನಸ್ಸಿನ ಕಹಿಯನ್ನು ಕಡಿಮೆ ಮಾಡಲಿಲ್ಲ.

ಕೆಲ ದಿನಗಳ ಬಳಿಕ ಅವರಿಗೆ ಮತ್ತಷ್ಟು ನೋವುಂಟುಮಾಡುವ ಪ್ರಸಂಗ ನಡೆಯಿತು: ಸಂಯುಕ್ತ ಸಂಸ್ಥಾನಗಳಿಗೆ ಹೋಗುವ ದಾರಿಯಲ್ಲಿ ಡಾನ್ ಜೋಕಿನ್ ಮಾಸ್ಕ್ವೇರ ಈ ಪ್ರದೇಶವನ್ನು ಹಾದು ಹೋಗಿದ್ದರೂ ಜನರಲ್‌ರನ್ನು ಭೇಟಿ ಮಾಡುವ ಸೌಜನ್ಯ ತೋರಿರಲಿಲ್ಲ. ತಮ್ಮ ಮನಃಕ್ಷೋಭೆಯನ್ನು ಮುಚ್ಚಿಟ್ಟುಕೊಳ್ಳದೆ ಅನೇಕರನ್ನು ವಿಚಾರಿಸಿ, ಮಾಸ್ಕ್ವೇರ ಯುದ್ಧದ ಹಡಗಿಗೆ ಕಾಯುತ್ತ ಕರಾವಳಿ ಪ್ರದೇಶದಲ್ಲಿ ಒಂದು ವಾರಕ್ಕಿಂತ ಹೆಚ್ಚು ಅವಧಿ ಇದ್ದರೆಂಬುದನ್ನೂ, ಹಲವು ಸಮಾನ ಸ್ನೇಹಿತರನ್ನೂ ಕೆಲ ಮಂದಿ ಶತ್ರುಗಳನ್ನು ಕಂಡಿದ್ದರೆಂಬುದನ್ನೂ ಅವರು ತಿಳಿದುಕೊಂಡು ಎಲ್ಲರ ಮುಂದೆಯೂ ಜನರಲ್ ಈ ಕೃತಘ್ನತೆಯ ಬಗ್ಗೆ ತಮ್ಮ ಅಸಮಾಧಾನವನ್ನು ತೋಡಿಕೊಂಡರು. ಅವರು ತಂಗುವ ಹೊತ್ತಿಗೆ ಜನರಲ್ ಆಗಲೇ ಹಡಗಿಗೆ ಹೋಗುವ ದೋಣಿಯನ್ನೇರಿದ್ದು, ತಮ್ಮನ್ನು ಬೀಳ್ಕೊಡಲು ಬಂದವರ ಮುಂದೆಲ್ಲ ತಮ್ಮ ಖಚಿತ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ತೋರ್ಪಡಿಸಿದ್ದರು: "ಎಂದೂ ಮರೀಬೇಡಿ, ಆ ಮನುಷ್ಯ ಯಾರನ್ನೂ ಪ್ರೀತಿಸುವವನಲ್ಲ."

ಇಂತಹ ದೂಷಣೆಗಳ ಬಗ್ಗೆ ಜನರಲ್‌ರು ಅದೆಷ್ಟು ಸೂಕ್ಷ್ಮ ಮನಸ್ಸಿನವರೆಂಬುದು ಜೋಸೆ ಪೆಲಾಸಿಯೋಸ್‌ಗೆ ತಿಳಿದಿತ್ತು. ತಮ್ಮ ವಿಶ್ವಾಸದ ಬಗ್ಗೆ ಅಪನಂಬಿಕೆಯನ್ನು ವ್ಯಕ್ತಪಡಿಸುವುದಕ್ಕಿಂತ ಹೆಚ್ಚಿನ ನೋವು ಬೇರಾವುದರಿಂದಲೂ ಅವರಿಗಾಗುತ್ತಿರಲಿಲ್ಲ, ಸಮುದ್ರವನ್ನು ಸೀಳುವ ಮತ್ತು ಬೆಟ್ಟಗಳನ್ನೊಡೆಯುವ ತಮ್ಮ ಸಾಮರ್ಥ್ಯವನ್ನು ತೋರ್ಪಡಿಸಿ ಅಂತಹವರ ತಪ್ಪನ್ನು ತೋರಿಸುತ್ತಿದ್ದರು. ತಮ್ಮ ಉಚ್ಛ್ರಾಯದ ಕಾಲದಲ್ಲಿ ಅಂಗೋಸ್ತುಅರದ ಬಾಲೆ ಡೆಲ್ಫೀನ ಗಾರ್ಡಿಯೋಲ ಅವರ ಚಾಂಚಲ್ಯದಿಂದ ಬೇಸತ್ತು ಬಂದಾಗ ಮುಖಕ್ಕೆ ತನ್ನ ಮನೆ ಬಾಗಿಲನ್ನು ಬಡಿದಿದ್ದಳು. "ನೀವು ಮತ್ತಾರಿಗಿಂತಲೂ ದೊಡ್ಡ ಮನುಷ್ಯರು, ಜನರಲ್ ಅವರೇ, ಆದರೆ ಪ್ರೇಮ ಎಂಬುದು ನಿಮಗಿಂತಲೂ ಬಹು ದೊಡ್ಡದು" ಅಂದಿದ್ದಳು. ಆಗ ಅವರು ಅಡುಗೆ ಮನೆಯ ಬಾಗಿಲ ಮೂಲಕ ಮನೆಯನ್ನು ಹೊಕ್ಕು ಅವಳೊಡನೆ ಮೂರು ದಿನಗಳನ್ನು ಕಳೆದಿದ್ದರು; ತಮ್ಮ ಹೃದಯದ ಆರ್ದ್ರತೆಯ ಬಗ್ಗೆ ಡೆಲ್ಫಿನಳಲ್ಲಿ ನಂಬುಗೆಯುಂಟು ಮಾಡಲು ಕಾಲ ಕಳೆಯುತ್ತ ಹೋರಾಟದ ಒಂದು ಮಜಲನ್ನೂ ತಮ್ಮ ಜೀವನವನ್ನೂ ಹಾಳುಮಾಡಿಕೊಂಡಿದ್ದರು.

ಮಾಸ್ಕ್ವೇರ ದೂರವಿದ್ದ, ಆದರೆ ತಮ್ಮ ಹಗೆತನವನ್ನವರು ಸಿಕ್ಕಿದವರ ಮುಂದೆಲ್ಲ ಹೇಳಿಕೊಳ್ಳುತ್ತಿದ್ದರು. ವೆನಿಝೂಲ ಜನರಲ್‌ರಿಗೆ ಛೀಮಾರಿ ಹಾಕಿ ಅವರನ್ನು ದೇಶಭ್ರಷ್ಟಗೊಳಿಸುವ ನಿರ್ಧಾರ ಕುರಿತ ಅಧಿಕೃತ ಅಧಿಸೂಚನೆಯನ್ನು ಹೊರಡಿಸಲು ಒಪ್ಪಿಗೆ ನೀಡಿದ ವ್ಯಕ್ತಿಗೆ ಪ್ರೇಮದ ಬಗ್ಗೆ ಮಾತನಾಡಲು ಇರುವ ಹಕ್ಕನ್ನು ಪ್ರಶ್ನಿಸುವುದರಲ್ಲಿ ಅವರಿಗೆ ದಣಿವೆಂಬುದಿರಲಿಲ್ಲ. "ನಾನು ಅದನ್ನು ಒಪ್ಪದೆ ಅವರು ಇತಿಹಾಸದಿಂದ

ಬಹಿಷ್ಕಾರಕ್ಕೊಳಗಾಗುವುದನ್ನು ತಪ್ಪಿಸಿದ್ದಕ್ಕಾಗಿ ಅವರು ನನಗೆ ಕೃತಜ್ಞರಾಗಿರಬೇಕು" ಎಂದವರು ಕಿರುಚಿದರು. ತಾವು ಮಾಸ್‌ಕ್ವೇರಗೆ ಮಾಡಿದುದೆಲ್ಲವನ್ನೂ ನೆನಪಿಸಿಕೊಂಡರು, ಅವನ ಗ್ರಾಮ್ಯ ಆತ್ಮರತಿಯ ಮೂರ್ಖ ಕೃತ್ಯಗಳನ್ನೆಲ್ಲ ಸಹಿಸಿಕೊಂಡದ್ದನ್ನು ಹೇಳಿದರು. ಕೊನೆಗೆ ತನ್ನ ಹತಾಶೆ ಕೋಪಗಳನ್ನು ವ್ಯಕ್ತಪಡಿಸಲು ಒಂದು ದೀರ್ಘವಾದ ಪತ್ರವನ್ನು ಬರೆದು ಆ ಮೂಲಕ ಪ್ರಪಂಚದಲ್ಲಿ ಎಲ್ಲೇ ಇದ್ದರೂ ಮಾಸ್‌ಕ್ವೇರಗೆ ಅದರ ದನಿ ತಲುಪುವಂತೆ ಮಾಡಿದರು.

ಮತ್ತೊಂದೆಡೆ, ಬಾರದ ಸುದ್ದಿಯು ಕಾಣದ ದಟ್ಟ ಕಾವಳದಂತೆ ಅವರನ್ನು ಆವರಿಸಿತು. ಊರ್ಡಾನೆಟ ತಮ್ಮ ಪತ್ರಗಳಿಗೆ ಇನ್ನೂ ಉತ್ತರಿಸಿರಲಿಲ್ಲ. ಅವನ ಪ್ರತಿನಿಧಿಯಾದ ಬ್ರೈಸೆನೋ ಮೆಂಡೆಝ್ ಒಂದು ದೀರ್ಘ ಪತ್ರ ಬರೆದು ಅವರಿಗಿಷ್ಟವಾದ ಜಮೈಕದ ಕೆಲವು ಹಣ್ಣುಗಳೊಡನೆ ಕಳಿಸಿದ್ದ, ಆದರೆ ಅದನ್ನು ತರುತ್ತಿದ್ದ ಸಂದೇಶವಾಹಕ ನೀರಲ್ಲಿ ಮುಳಗಿ ಹೋಗಿದ್ದ. ಅವನ ಪೂರ್ವಭಾಗದ ಪ್ರತಿನಿಧಿಯಾದ ಜಸ್ಟೋ ಬ್ರೈಸೆನೋನ ನಿಷ್ಕ್ರಿಯತೆಯು ಅವರಲ್ಲಿ ಹತಾಶೆಯುಂಟುಮಾಡಿತ್ತು. ಊರ್ಡಾನೆಟನ ಮೌನವು ದೇಶವನ್ನೆಲ್ಲ ನೆರಳಿನಂತೆ ಆವರಿಸಿತ್ತು. ಲಂಡನ್‌ನಲ್ಲಿ ತಮ್ಮ ಪ್ರತಿನಿಧಿಯಾಗಿದ್ದ ಫರ್ನಾಂಡೆಝ್ ಮಡ್ರಿಡ್‌ನ ಸಾವು ಜಗತ್ತಿನ ಮೇಲೆ ಕರಿನೆರಳನ್ನು ಕವಿಸಿತ್ತು.

ಜನರಲ್‌ರಿಗೆ ತಿಳಿದಿರದಿದ್ದುದೆಂದರೆ, ಊರ್ಡಾನೆಟ ಯಾವುದೇ ಸುದ್ದಿಯನ್ನು ಕಳಿಸಿರದಿದ್ದರೂ ತಮ್ಮ ಪರಿವಾರದವರ ಜೊತೆ ನಿರಂತರವಾದ ಸಂಪರ್ಕದಲ್ಲಿದ್ದು, ಅವರ ಅಸಂದಿಗ್ಧ ಉತ್ತರವನ್ನು ಪಡೆಯಲು ಉತ್ತೇಜಿಸುತ್ತಿದ್ದ ವಿಷಯ. ಅವನು ಓ'ಲಿಯರಿಗೆ ಹೀಗೆ ಬರೆದಿದ್ದ: "ಜನರಲ್‌ರು ಅಧ್ಯಕ್ಷ ಪದವಿಯನ್ನು ಒಪ್ಪಿಕೊಳ್ಳುತ್ತಾರೆಯೋ ಇಲ್ಲವೋ ಎಂಬ ಬಗ್ಗೆ ನನಗೆ ನಿಶ್ಚಿತ ಉತ್ತರ ಬೇಕು, ಎಂದೆಂದಿಗೂ ಸಿಕ್ಕದ ಭ್ರಮಾಕೃತಿಯನ್ನು ಹಿಡಿಯಲು ಜೀವಮಾನವಿಡೀ ವ್ಯರ್ಥಪ್ರಯತ್ನ ಮಾಸುವುದರಲ್ಲಿ ಅರ್ಥವಿಲ್ಲ." ಓ'ಲಿಯರಿ ಮತ್ತು ಅವನ ಸುತ್ತಲಿದ್ದವರು ಆ ಮಾತು ಈ ಮಾತು ಆಡುತ್ತ ಊರ್ಡಾನೆಟ ಬಯಸಿದ ಉತ್ತರಕ್ಕೆ ಸುಳಿವನ್ನು ಪಡೆಯಲು ಪ್ರಯತ್ನಿಸಿದ್ದರು, ಆದರೆ ಜನರಲ್‌ರು ಮಾತ್ರ ತಡೆದುಕೊಳ್ಳಲಾಗದಂತೆ ಹಾರಿಕೆಯ ಉತ್ತರಗಳನ್ನು ನೀಡುತ್ತಿದ್ದರು.

ಅಂತೂ ಕೊನೆಗೊಮ್ಮೆ ರಯೋಹಚದಿಂದ ನಿರ್ದಿಷ್ಟ ಸುದ್ದಿ ಬಂದಾಗ, ಅದು ಯಾವುದೇ ಕೆಡುಕಿನ ಸೂಚನೆಗೂ ಮಿಗಿಲು ಗಂಭೀರವಾಗಿತ್ತು. ರೂಪಿಸಿದ್ದ ಯೋಜನೆಯಂತೆ ಅಕ್ಟೋಬರ್ ೨೦ ರಂದು ಜನರಲ್ ಮ್ಯಾನ್ಯುಯೆಲ್ ವಾಲ್ಡೆಝ್ ಯಾವುದೇ ನಿರೋಧವಿಲ್ಲದೆ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದ, ಆದರೆ ಮಾರನೆಯ ಆಯಕಟ್ಟಿನ ಅವರ

ಇಬ್ಬರು ಸಹಚರರನ್ನು ವಾರವೇ ಕ್ಯಾರಿಜೋ ಕೊಂದಿದ್ದ. ಗೌರವಯುತ ರಾಜೀನಾಮೆಯಂತೆ ತೋರುವ ಪತ್ರವೊಂದನ್ನು ವಾಲ್ಡೆಜ್ ಮಾಂಟಿಲರಿಗೆ ನೀಡಿದ್ದ, ಆದರೆ ಜನರಲ್‌ರು ಅದನ್ನು ಅಗೌರವವೆಂದು ಭಾವಿಸಿದರು. "ಆ ಹಂದಿ ಭಯದಿಂದ ನಡುಗುತ್ತಿದ್ದಾನೆ" ಎಂದಿದ್ದರು. ಮುಂದಿನ ಎರಡು ವಾರಗಳಲ್ಲೇ ಮರಕೈಬುವನ್ನು ಸೆರೆ ಹಿಡಿಯಲು ಪ್ರಯತ್ನ ನಡೆಸಲು ಯೋಜಿಸಲಾಗಿತ್ತು, ಆದರೆ ಇಷ್ಟು ಹೊತ್ತಿಗೆ ರಯೋಹಚವನ್ನು ಹತೋಟಿಯಲ್ಲಿರಿಸಿಕೊಳ್ಳುವುದು ಅಸಾಧ್ಯವಾದ ಕನಸಾಗಿತ್ತು.

"ಥತ್, ಎಲ್ಲ ಹಾಳಾಯಿತು, ನಮ್ಮ ಮುಖ್ಯ ದಳಪತಿಗಳು ಸೈನಿಕ ಬಂಡಾಯವನ್ನು ಬಗ್ಗು ಬಡಿಯಲು ಸಮರ್ಥರಾಗಲಿಲ್ಲ" ಎಂದು ಜನರಲ್ ಕೂಗಾಡಿದ್ದರು.

ಆದರೆ ಅವರ ಮೇಲೆ ಆಳವಾದ ಪ್ರಭಾವ ಬೀರಿದ ಸುದ್ದಿಯೆಂದರೆ ಸರ್ಕಾರದ ಸೈನ್ಯ ಹತ್ತಿರವಾಗುತ್ತಿದ್ದಂತೆ, ಅದನ್ನು ರಯೋಹಚ ಪ್ರಾಂತದ ಆರಾಧ್ಯಮೂರ್ತಿಯೆನಿಸಿದ ಅಡ್ಮಿರಲ್ ಪ್ಯಾಡಿಲನನ್ನು ಕೊಂದವನೆಂದು ತಿಳಿದಿದ್ದ ಜನರಲ್‌ರದೆಂದು ಭಾವಿಸಿ ಜನರು ಓಡತೊಡಗಿದರೆಂಬುದು. ಅಲ್ಲದೆ, ಈ ದುರಂತವು ದೇಶಾದ್ಯಂತ ಬೇರೆಯವುಗಳೊಡನೆ ಸೇರಿದ ಹಾಗಿದ್ದುದು. ಎಲ್ಲೆಲ್ಲೂ ಅನಾಯಕತ್ವ ಮತ್ತು ಗೊಂದಗಳೇ ತುಂಬಿದ್ದವು, ಊರ್ಡಾನೆಟನ ಸರ್ಕಾರ ಅವುಗಳನ್ನು ಹತ್ತಿಕ್ಕಲು ಅಸಮರ್ಥವಾಗಿತ್ತು.

ಸಂಟಾ ಫ಼ ದ ಬೊಗೋಟದಿಂದ ಇತ್ತೀಚಿನ ಸುದ್ದಿ ತಂದಿದ್ದ ವಿಶೇಷ ಪ್ರತಿನಿಧಿಯನ್ನು ಜನರಲ್‌ರು ಯದ್ವಾ ತದ್ವಾ ಬೈಯುತ್ತಿದ್ದುದನ್ನು ಕಂಡ ಡಾ. ಗ್ಯಾಸ್ಟೆಲ್‌ಬೋಂಡೊ ಅವರಿಗೆ ಕೋಪಕ್ಕಿರುವ ಚೈತನ್ಯದಾಯಕತೆಯ ಬಗ್ಗೆ ಮತ್ತೆ ಅಚ್ಚರಿಯೆನಿಸಿತು. "ಈ ಸರ್ಕಾರ ಕೆಲಸಕ್ಕೆ ಬಾರದ್ದು, ಗಣ್ಯರು ಹಾಗೂ ಜನಗಳನ್ನು ತೊಡಗಿಸಿಕೊಳ್ಳೋದರ ಬದಲು ಅವರನ್ನೇ ದುರ್ಬಲಗೊಳಿಸ್ತಿದೆ. ಸರ್ಕಾರ ಮತ್ತೆ ಬೀಳತ್ತೆ, ಪುನಃ ಮೇಲೇಳಲ್ಲ, ಯಾಕೇಂದ್ರೆ ಅದನ್ನು ರಚಿಸಿರೋ ಮಂದಿ ಮತ್ತು ಅದನ್ನು ಸಹಿಸಿಕೊಂಡಿರೋ ಜನತೆ ಇಬ್ಬರೂ ಸರ್ವನಾಶವಾಗಿ ಬಿಡ್ತಾರೆ" ಎಂದೆಲ್ಲ ಕೂಗಾಡುತ್ತಿದ್ದರು.

ಅವರನ್ನು ಸಮಾಧಾನಪಡಿಸುವ ವೈದ್ಯರ ಪ್ರಯತ್ನಗಳೆಲ್ಲ ವಿಫಲವಾದವು, ಯಾಕೆಂದರೆ ಮುಗಿಸಿದ ನಂತರ ಮತ್ತೆ ಜೋರು ದನಿಯಲ್ಲಿ ಸರ್ಕಾರದ ಟೀಕೆಯನ್ನು ಪ್ರಾರಂಭಿಸಿ ತಮ್ಮ ಸಿಬ್ಬಂದಿಯವರಲ್ಲಿದ್ದ ಕಪ್ಪುಪಟ್ಟಿ ನೀಡಿದರು. ಕಳೆದ ಮೂರು ಯುದ್ಧಗಳ ವೀರ ಕರ್ನಲ್ ಜೋಕಿನ್ ಬಾರಿಗಾ ಏನು ಬೇಕಾದರೂ ಮಾಡಬಲ್ಲವನು, "ಕೊಲೆಯನ್ನು ಕೂಡ" ಎಂದರು. ಸ್ಕ್ರೂಕ್ರ್‌ನ ಕೊಲೆಯ ಸಂಚಿನಲ್ಲಿ ಪಾಲುದಾರನೆಂದು ಸಂಶಯಿಸಿ ಜನರಲ್ ಪೆಡ್ರೋ ಮಾರ್ಗುಯೆಟೋ ಅನ್ನು ಪಡೆಗಳ ನಾಯಕತ್ವ ವಹಿಸಲು

ಅಸಮರ್ಥ ಎಂದು ಆರೋಪಿಸಿದರು. ಕಾಲುಕದಲ್ಲಿ ತಮ್ಮ ಪರಮ ನಿಷ್ಠಾವಂತ ಹಿಂಬಾಲಕನಾಗಿದ್ದ ಜನರಲ್ ಗಾಂಜ಼ಾಲೆಜ಼್ ಬಗ್ಗೆ "ಅವನ ರೋಗಗಳೆಂದರೆ ದೌರ್ಬಲ್ಯ ಮತ್ತು ಹೂಸುಬಿಡುವುದು" ಎಂದು ತೀಕ್ಷ್ಣವಾಗಿ ಹೇಳಿದರು. ಕಳೆದ ಇಪ್ಪತ್ತು ವರ್ಷಗಳಿಂದ ಹೃದಯಕ್ಕೆ ಬೇಕಾಗಿದ್ದ ವಿಶ್ರಾಂತಿ ನೀಡಲು ಏದುಸಿರು ಬಿಡುತ್ತ ತೂಗು ಕುರ್ಚಿಯಲ್ಲಿ ಕುಸಿದು ಕುಳಿತರು. ಬಾಗಿಲುವಾಡಕ್ಕೆ ಒರಗಿ ಅಚ್ಚರಿಯಿಂದ ಮರವಟ್ಟು ನೋಡುತ್ತಿದ್ದ ಡಾ. ಗ್ಯಾಸ್ಟೆಲ್‌ಬೋಂಡೊ ಕಡೆ ತಿರುಗಿ ದನಿ ಎತ್ತರಿಸಿ "ಎಷ್ಟೇ ಆಗಲಿ, ಜೂಜಾಡಿ ಎರಡು ಮನೆ ಕಳೆದುಕೊಂಡವನಿಂದ ನೀವು ಏನನ್ನು ತಾನೇ ನಿರೀಕ್ಷಿಸಬಹುದು?" ಎಂದರು.

ಡಾ. ಗ್ಯಾಸ್ಟೆಲ್‌ಬೋಂಡೊ ಗಲಿಬಿಲಿಗೊಳಗಾದರು. "ನಾವು ಯಾರ ಬಗ್ಗೆ ಮಾತಾಡ್ತಿದ್ದೀವಿ?" ಎಂದರು.

"ಉರ್ಡಾನೆಟ ಬಗ್ಗೆ. ಮರಾಕೈಬುನಲ್ಲಿ ನೌಕಾಪಡೆಯ ಒಬ್ಬ ಕಮಾಂಡರ್‌ಗೆ ಅವುಗಳನ್ನು ಕಳೆದುಕೊಂಡ, ಆದರೆ ತಾನು ಅವುಗಳನ್ನು ಮಾರಾಟಮಾಡಿದ ಹಾಗೆ ದಾಖಲೆಗಳಲ್ಲಿ ತೋರಿಸಿಕೊಂಡ" ಎಂದು ಜನರಲ್ ವಿವರಿಸಿದರು.

ಆವಶ್ಯಕವಾದಷ್ಟು ಉಸಿರು ತೆಗೆದುಕೊಂಡು, "ಆದರೆ ನಯವಂಚಕ ಸಟಾಂಡರ್‌ಗೆ ಹೋಲಿಸಿದರೆ ಇವರೆಲ್ಲ ಸಂತರು ಅಂತಲೇ ಹೇಳ್ಬೇಕು. ಇಂಗ್ಲಿಷ್‌ನವರಿಂದ ಪಡೆದ ಸಾಲದಲ್ಲಿ ಅವನ ಸ್ನೇಹಿತರು ದುಡ್ಡು ಹೊಡೆದರು, ವಾಸ್ತವ ಬೆಲೆಗಿಂತ ಹತ್ತು ಪಟ್ಟು ಕಡಿಮೆಗೆ ಸರ್ಕಾರಿ ಬಾಂಡ್‌ಗಳನ್ನು ಕೊಂಡುಕೊಂಡರು, ಸರ್ಕಾರ ಅವುಗಳನ್ನು ನೂರರಷ್ಟು ಹೆಚ್ಚಿನ ಮೊತ್ತಕ್ಕೆ ಮತ್ತೆ ಕೊಂಡುಕೊಂಡಿತು" ಎಂದು ವಿವರಿಸಿದರು. ಎಂಥ ಸಂದರ್ಭದಲ್ಲೂ ತಾವು ಸಾಲಕ್ಕೆ ವಿರೋಧ ವ್ಯಕ್ತಪಡಿಸದಿರಲು ಕಾರಣ ಭ್ರಷ್ಟಾಚಾರದ ಭಯವಲ್ಲ, ಅಷ್ಟೊಂದು ರಕ್ತಪಾತದಿಂದ ಪಡೆದ ಸ್ವಾತಂತ್ರ್ಯಕ್ಕೆ ಅದು ತೂಗುಕತ್ತಿಯಾಗಿತ್ತು ಎಂದು ವಿವರಿಸಿದರು.

"ನಾನು ಸ್ಪಾನಿಶ್‌ಗಿಂತ ಹೆಚ್ಚು ದ್ವೇಷಿಸೋದು ಸಾಲವನ್ನ. ಅದಕ್ಕೇ, ದೇಶಕ್ಕೆ ನಾವೇನು ಒಳ್ಳೆಯದು ಮಾಡಿದ್ದೀವೋ ಅದೆಲ್ಲ ಸಾಲ ತೆಗೆದುಕೊಂಡರೆ ಹಾಳಾಗಿಬಿಡತ್ತೆ, ಯಾಕಂದ್ರೆ ನಿರಂತರವಾಗಿ ನಾವು ಬಡ್ಡಿ ಕಟ್ತಾನೇ ಹೋಗ್ಬೇಕು ಅಂತ ನಾನು ಸಟಾಂಡರ್‌ಗೆ ಎಚ್ಚರಿಕೆ ಕೊಟ್ಟಿದ್ದೆ. ಈಗ ಸ್ಪಷ್ಟವಾಯಿತು: ಸಾಲ ಕೊನೇಲಿ ನಮ್ಮನ್ನ ನಾಶಮಾಡತ್ತೆ ಅನ್ನೋದು" ಎಂದರು.

ಸೋತವರ ಜೀವಗಳನ್ನು ಗೌರವಿಸಬೇಕು ಎಂಬ ಊರ್ಡಾನೆಟನ ನಿರ್ಧಾರಕ್ಕೆ ಈಗಿನ ಸರ್ಕಾರ ಅಧಿಕಾರಕ್ಕೆ ಬಂದ ಹೊಸತರಲ್ಲಿ ಒಪ್ಪಿಗೆ ನೀಡಿದ್ದು ಮಾತ್ರವಲ್ಲ ಅದನ್ನು ಹೊಸ ಯುದ್ಧನೀತಿಯಾಗಿಯೂ ಎತ್ತಿ

ಹಿಡಿದಿತ್ತು. "ನಾವು ಸ್ಪಾನಿಶ್‌ರಿಗೆ ಏನು ಮಾಡಿದೆವೋ ಅದನ್ನು ನಮ್ಮ ಈಗಿನ ಶತ್ರುಗಳು ನಮಗೆ ಮಾಡಬಾರದು" ಎಂದರು. ಅಂದರೆ ಸಾಯುವವರೆಗೂ ಹೋರಾಡುವುದು. ಆದರೆ ಸೋಲೆದಾದ್‌ನ ಕಳೆದಿದ್ದ ಒಂದು ಕಡುರಾತ್ರಿ ಬರೆಸಿದ ಭಯಂಕರ ಪತ್ರವೊಂದರಲ್ಲಿ, ಅಂತರ್ಯುದ್ಧಗಳಲ್ಲಿ ಯಾವಾಗಲೂ ಹೆಚ್ಚು ಬರ್ಬರವಾದ ಪಕ್ಷವೇ ಗೆಲವು ಪಡೆದಿರುವುದು ಎಂದು ಊರ್ದಾನೆಟನಿಗೆ ಎಚ್ಚರಿಸಿದ್ದರು.

"ಡಾಕ್ಟ್ರೇ, ನನ್ನ ನಂಬಿ, ಶತ್ರುಗಳ ರಕ್ತ ಸುರಿಸಿದಲ್ಲದೆ ನಮ್ಮ ಅಧಿಕಾರ ಮತ್ತು ಜೀವಗಳನ್ನು ಉಳಿಸಿಕೊಳ್ಳಕ್ಕಾಗಲ್ಲ" ಎಂದು ಸ್ಪಷ್ಟಪಡಿಸಿದರು.

ಆನಂತರ ಮೊದಲಿನಷ್ಟೇ ಎಚ್ಚರಿಕೆಯಿಂದ ಅವರ ಕೋಪವು ಯಾವುದೇ ಕುರುಹನ್ನೂ ಉಳಿಸದೆ ಕೊನೆಗಂಡಿತು; ಈಗ ತಾನೇ ತಾವು ಜನ್ಮ ಜಾಲಾಡಿದ್ದ ಸೇನಾಧಿಕಾರಿಗಳ ಶುದ್ಧೀಕರಣಕ್ಕೆ ಜನರಲ್‌ರು ಮುಂದಾದರು: "ಎಲ್ಲ ಸಂದರ್ಭಗಳಲ್ಲೂ ನಾನೇ ತಪ್ಪು ಮಾಡಿದೋನು. ಅವರಿಗೆಲ್ಲ ಸ್ವಾತಂತ್ರ್ಯ ಪಡೆಯೋದಷ್ಟೇ ಗುರಿಯಾಗಿತ್ತು, ಅದು ತಾನೇ ತಕ್ಷಣ ಆಗೋ ಅಂತಹದ್ದು ಮತ್ತು ಎದ್ದು ಕಾಣೊದು, ಅದಕ್ಕೆ ಸರಿಯಾಗಿ ಕೆಲಸ ಮಾಡದಿದ್ದರೆ ಮಾತ್ರ ಅವರದು ತಪ್ಪು!" ಮೂಳೆಚಕ್ಕಳವಾಗಿದ್ದ ತಮ್ಮೊಂದು ತೋಳು ನೀಡಿ ಎದ್ದು ನಿಲ್ಲಲು ವೈದ್ಯರ ನೆರವು ಕೋರಿ, ತಮ್ಮ ಮಾತನ್ನು ನಿಟ್ಟುಸಿರಿನೊಂದಿಗೆ ಕೊನೆಗೊಳಿಸಿದರು: "ನಾನು ಕನಸುಗಳಲ್ಲಿ ಕಳೆದುಹೋಗಿರೋನು, ಇಲ್ಲದ ಕಪ್ಪು ಬೆಕ್ಕನ್ನ ಕತ್ತಲೆ ಕೋಣೇಲಿ ಹುಡುಕ್ತಾ ಇರೋನು."

ಈ ಹೊತ್ತಿನಲ್ಲಿಯೇ ಅವರು ಇಟೂರ್‌ಬೈಡ್‌ನ ಹಣೆಬರಹವನ್ನು ನಿರ್ಧರಿಸಿದ್ದು. ಅಕ್ಟೋಬರ್ ಕೊನೆಯ ವೇಳೆಗೆ ಇಟೂರ್‌ಬೈಡ್‌ಗೆ, ಜಾರ್ಜ್‌ಟೌನ್‌ನಲ್ಲಿ ಇನ್ನೂ ಜೀವಿಸಿದ್ದ ಅವನ ತಾಯಿಯಿಂದ ಒಂದು ಪತ್ರ ಬಂತು; ಅದರಲ್ಲಿ ಆಕೆ ಬರೆದಿದ್ದ ಸಂಗತಿಯೆಂದರೆ, ಮೆಕ್ಸಿಕೋದಲ್ಲಿ ಉದಾರವಾದಿ ಪಡೆಗಳ ಮುನ್ನಡೆಯಿಂದಾಗಿ ತಮ್ಮ ಕುಟುಂಬಕ್ಕೆ ಸ್ವದೇಶವಾಸದ ನಿರೀಕ್ಷೆ ದೂರ ದೂರ ಸರಿಯುತ್ತಿದೆ ಎಂಬುದು. ಚಿಕ್ಕಂದಿನಿಂದಲೇ ಹೊತ್ತು ತಂದಿದ್ದ ಸಂಶಯಕ್ಕೆ ಈ ಅನಿಶ್ಚಿತತೆಯೂ ಸೇರಿ ಸಹಿಸಲಸಾಧ್ಯವೆನಿಸಿತು. ಒಂದು ಮಧ್ಯಾಹ್ನ, ಇಟೂರ್‌ಬೈಡ್‌ನನ್ನು ಅವಲಂಬಿಸಿ ಜನರಲ್ ಮೊಗಸಾಲೆಯಲ್ಲಿ ನಡೆಯುತ್ತಿರುವಾಗ, ಅವರ ಮನಸ್ಸಿನಲ್ಲಿ ಒಂದು ಅನಿರೀಕ್ಷಿತ ನೆನಪು ಮೂಡಿತು.

"ಮೆಕ್ಸಿಕೋ ಬಗ್ಗೆ ನನ್ನಲ್ಲಿ ಒಂದೇ ಒಂದು ಕಹಿ ನೆನಪು ಉಳಿದಿದೆ: ವೆರಾಕ್ರೂಝ್‌ನಲ್ಲಿ ಬಂದರಿನ ಕ್ಯಾಪ್ಟನ್‌ನ ಮ್ಯಾಸ್ಟಿಫ಼್ ಜಾತಿಯ ನಾಯೊಂದು ನಾನು ಸ್ಪೈನ್‌ನಿಂದ ಕರೆದೊಯ್ಯುತ್ತಿದ್ದ ಎರಡು ನಾಯಿಮರಿಗಳನ್ನು ಚಿಂದಿ ಮಾಡಿಬಿಟ್ಟಿದ್ದು" ಎಂದರು.

ಅಲ್ಲದೆ, ಅದು ಜಗತ್ತಿನಲ್ಲಿ ತಾವು ಪಡೆದ ಮೊದಲ ಅನುಭವ ಕೂಡ, ಹೀಗಾಗಿ ಅದು ಎಂದೆಂದಿಗೂ ಮನಸ್ಸಿನಲ್ಲಿ ಉಳಿಯುವಂತಾಗಿತ್ತು. ೧೭೭೯ ರ ಫೆಬ್ರವರಿಯಲ್ಲಿ ತಾವು ಯೂರೋಪ್‌ಗೆ ಹೋಗುವಾಗ ವೆರಾಕ್ರೂಜ್ ಅಲ್ಪಕಾಲದ ವಿಶ್ರಾಂತಿಸ್ಥಳವಾಗಬೇಕಿತ್ತು, ಆದರೆ ಅದರ ಮುಂದಿನ ಬಂದರಾದ ಹವಾನವನ್ನು ಇಂಗ್ಲಿಷ್‌ರು ಮುತ್ತಿದ್ದರಿಂದಾಗಿ ಅಲ್ಲಿ ತಾವು ಎರಡು ತಿಂಗಳು ಕಳೆಯುವಂತಾಗಿತ್ತು. ಈ ವಿಳಂಬದಿಂದಾಗಿ ಅವರು ಮೆಕ್ಸಿಕೋ ನಗರಕ್ಕೆ ಕೋಚ್‌ನಲ್ಲಿ ಹೋಗುವಂತಾಗಿ ಹಿಮಾವೃತ ಜ್ವಾಲಾಮುಖಿಗಳು ಹಾಗೂ ಕನಸಿನಂತಹ ಮರಳುಗಾಡುಗಳ ನಡುವಣ ಮೂರು ಸಾವಿರ ಮೀಟರ್ ಎತ್ತರವನ್ನು ಹತ್ತಿ ಕ್ರಮಿಸಬೇಕಾಯ್ತು; ಅದಕ್ಕೂ ಅಲ್ಲಿಯವರೆಗೆ ಅವರು ಇದ್ದ ಅರಾಗುಅ ಕಣಿವೆಗೂ ಅಜಗಜಾಂತರ. "ಚಂದ್ರ ಕಾಣಿಸುವುದು ಹಾಗೆಯೇ ಇರಬೇಕು ಎಂದು ನಾನಂದುಕೊಂಡೆ" ಎಂದರು. ಮೆಕ್ಸಿಕೋ ನಗರದಲ್ಲಿನ ಅಕಲುಷಿತ ವಾತಾವರಣ ಹಾಗೂ ಕೆಂಪು ಕತ್ತಾಳೆ ಹುಳು, ಆರ್ಮೆಡಿಲೋ, ನದಿ ಹುಳು, ಸೊಳ್ಳೆ ಮೊಟ್ಟೆ, ಕೀಚು ಮಿಡತೆ, ಕಪ್ಪಿರುವೆಗಳು, ಕಾಡುಬೆಕ್ಕು, ಜೇನು ಜೀರುಂಡೆ, ಸಾಕಿದ ಕಾಡುಪಾಪ, ಕಾಳು ಮಿಡತೆ, ಎಲ್ಲ ಬಗೆಯ ಹಕ್ಕಿ, ಗಿಡ್ಡ ನಾಯಿ, ಬುಡುಬುಡಿಕೆ ಹಾವು, ಜೀವವಿರುವಂತೆ ಹಾರುವ ಬೀನ್ ಬೀಜಸಾಲು ಎಲ್ಲವನ್ನೂ ಆಹಾರವಾಗಿ ಮಾರುವ ಸಾರ್ವಜನಿಕ ಮಾರುಕಟ್ಟೆಗಳ ವಿಸ್ತಾರ ಮತ್ತು ಶುದ್ಧತೆಗಳು ಅವರಿಗೆ ಅಚ್ಚರಿಯೆನಿಸಿತ್ತು. "ಅಲ್ಲಿನ ಜನ ಓಡಾಡುವುದನ್ನೆಲ್ಲ ತಿನ್ನುತ್ತಾರೆ" ಎಂದರು. ನಗರದ ಉದ್ದಗಲಕ್ಕೂ ಹರಿಯುವ ಅಸಂಖ್ಯ ಕಾಲುವೆಗಳಲ್ಲಿನ ತಿಳಿ ನೀರು, ಬಣ್ಣ ಬಳಿದ ದೋಣಿಗಳು, ಹೂಗಳ ವೈಪುಲ್ಯ ಮತ್ತು ವೈಭವಗಳನ್ನು ಕಂಡು ಸೋಜಿಗವಾಗಿತ್ತು. ಆದರೆ ಫೆಬ್ರುವರಿಯ ಕಿರು ದಿನಗಳು, ಮಿತಭಾಷಿ ಇಂಡಿಯನ್ನರು, ಜಡಿ ಮಳೆಗಳಿಂದಾಗಿ ಅವರಿಗೆ ಖಿನ್ನತೆ ಆವರಿಸಿತ್ತು, ಮೊದಲ ಬಾರಿಗೆ ಅನುಭವಕ್ಕೆ ಬಂದ ಇವೆಲ್ಲ ಮುಂದೆ ಸಂಟಾ ಫೆ ದ ಬೊಗೋಟ, ಲಿಮ, ಲ ಪಾಜ್ ಮತ್ತು ಆಂಡೀಸ್‌ನ ಉದ್ದ-ಎತ್ತರಗಳಲ್ಲಿ ಅವರ ಹೃದಯವನ್ನು ಹಿಂಡಿತ್ತು. ಪರಿಚಯಪತ್ರವನ್ನು ತಂದಿದ್ದ ಬಿಷಪ್‌ರು ವೈಸ್‌ರಾಯ್ ಅವರನ್ನು ಭೇಟಿ ಮಾಡಿಸಲು ಇವರ ಕೈಹಿಡಿದು ಕರೆದೊಯ್ದಿದ್ದರು. ಬಿಷಪ್‌ರಿಗಿಂತ ಹೆಚ್ಚು ಧಾರ್ಮಿಕವಾಗಿದ್ದಂತೆ ಕಾಣಿಸಿದ್ದ ವೈಸ್‌ರಾಯ್ ಷೋಕಿಲಾಲನಂತೆ ಉಡುಪು ಧರಿಸಿದ್ದ ಸಣಕಲ ಕಪ್ಪು ಹುಡುಗನ ಕಡೆ ಗಮನವನ್ನೇ ಕೊಡದೆ ಫ್ರೆಂಚ್ ಕ್ರಾಂತಿಯ ಬಗ್ಗೆ ಮೆಚ್ಚಿಕೆಯ ಮಾತುಗಳನ್ನಾಡಿದ್ದರು. "ವೈಸ್‌ರಾಯ್‌ರಿಗೆ ರಾಜಕೀಯದ ಬಗ್ಗೆ ಏನಾದರೂ ಹೇಳಲೇಬೇಕು ಎಂದು ಹದಿನಾರರ ಆ ವಯಸ್ಸಿನಲ್ಲಿ ನಾನು ಭಾವಿಸಿದ್ದರಿಂದ ನನ್ನ ಜೀವವೇ ಹೋಗಬಹುದಾಗಿತ್ತು" ಎಂದವರು ತಮಾಷೆಯಿಂದ ನುಡಿದರು. ಪಯಣವನ್ನು ಮುಂದುವರೆಸುವ ಮುಂಚೆ ತಮ್ಮ ಚಿಕ್ಕಪ್ಪ ಡಾನ್

ಪೆಡ್ರೋ ಪಲಾಸಿಯೋ ಸೋಜೋ ಅವರಿಗೆ ಈಗಲೂ ಉಳಿದಿರುವ ಮೊದಲ ಪತ್ರವನ್ನು ಬರೆದಿದ್ದರು. “ನನ್ನ ಕೈಬರಹವಂತೂ ನಾನೇ ಓದಲಾರದಷ್ಟು ಕೆಟ್ಟದಾಗಿತ್ತು: ಪ್ರಯಾಣದ ದಣಿವಿನಿಂದಾಗಿ ಹಾಗಿದೆ ಅಂತ ಚಿಕ್ಕಪ್ಪನವರಿಗೆ ಹೇಳಿದ್ದೆ” ಎಂದು ದುರ್ಬಲ ನಗುವಿನೊಡನೆ ಹೇಳಿದರು. ಪತ್ರದ ಒಂದೂವರೆ ಪುಟಗಳಲ್ಲಿ ನಲವತ್ತು ಕಾಗುಣಿತದ ತಪ್ಪುಗಳಿದ್ದವಂತೆ, ಅದೂ ಒಂದೇ ಪದವನ್ನು ಎರಡು ಸಲ ತಪ್ಪಾಗಿ ಬರೆದಿದ್ದರಂತೆ: ‘ಮಗ’ ಬದಲು ಮಗ್ಗ’ ಅಂತ.

ಇಟೂರ್‌ಬೈಡ್ ಏನೂ ಹೇಳಿರಲಿಲ್ಲ, ನೆನಪಿನಲ್ಲಿ ಯಾವುದೂ ಉಳಿದಿರಲಿಲ್ಲ. ಮೆಕ್ಸಿಕೋ ಬಗ್ಗೆ ಉಳಿದಿದ್ದ ಒಂದೇ ನೆನಪೆಂದರೆ ಹುಟ್ಟಿನಿಂದಲೇ ಬಂದಿದ್ದ ತಮ್ಮ ಖಿನ್ನತೆಯನ್ನು ಹೆಚ್ಚಿಸಿದ್ದ ಹಲವಾರು ದುರ್ಘಟನೆಗಳ ಮೊತ್ತ ಮಾತ್ರ, ಇದನ್ನು ಅರ್ಥಮಾಡಿಕೊಳ್ಳಲು ಜನರಲ್‌ರಿಗೆ ಕಾರಣಗಳಿದ್ದವು.

“ಊರ್ಡಾನೆಟನ ಜೊತೆ ಇರಬೇಡಿ, ಸಂಯುಕ್ತ ಸಂಸ್ಥಾನಗಳಿಗೆ ಕುಟುಂಬದ ಜೊತೆ ಹೋಗಬೇಡಿ. ಅದು ಸರ್ವಶಕ್ತ, ಭಯಾನಕ, ಅದರ ಬಿಡುಗಡೆಯ ಕತೆಯೆಂದರೆ ಕೊನೆಯಲ್ಲಿ ನಮಗೆಲ್ಲ ದುರ್ಗತಿಯನ್ನು ತರುವಂಥದು” ಎಂದವರಿಗೆ ಹೇಳಿದ್ದರು.

ಅವರ ಮತುಗಳ ಪರಿಣಾಮವೆಂದರೆ ಅನಿಶ್ಚಿತತೆಯೊಡನೆ ಮತ್ತೊಂದು ಸಂಶಯವನ್ನು ಸೇರಿಸಿದುದು. ಇಟೂರ್‌ಬೇಡ್ “ನನ್ನ ಗಾಬರಿಗೊಳಿಸಬೇಡಿ, ಜನರಲ್” ಎಂದು ಉದ್ಗರಿಸಿದ್ದ.

“ಹೆದರಬೇಡಿ, ಸತ್ತರೂ ಸರಿ, ಯಾರಾದರೂ ಕೊಂದರೂ ಸರಿ, ನೀವು ಮೆಕ್ಸಿಕೋಗೆ ಹೋಗಬೇಕು. ಇನ್ನೂ ಚಿಕ್ಕವರಾಗಿರುವ ಈಗಲೇ ಹೋಗಿ, ಯಾಕಂದರೆ ತಡವಾಗಿಬಿಡುವ ದಿನ ಬರತ್ತೆ, ಆಗ ಇಲ್ಲೂ ಸಲ್ಲದ ಅಲ್ಲೂ ಸಲ್ಲದ ಪರಿಸ್ಥಿತಿ ಉಂಟಾಗತ್ತೆ. ನೀವು ಎಲ್ಲ ಕಡೆಯೂ ಅಪರಿಚಿತರಾಗ್ತೀರಿ, ಅದಂತೂ ಸಾವಿಗಿಂತ ಅತ್ತತ್ತ” ಎಂದು ಜನರಲ್‌ರು ನಿಶ್ಚಲ ದನಿಯಲ್ಲಿ ಹೇಳಿದ್ದರು. ಅವರ ಕಣ್ಣುಗಳಲ್ಲಿ ದೃಷ್ಟಿ ನೆಟ್ಟು, ತಮ್ಮ ಎದೆಯ ಮೇಲೆ ಅಂಗೈ ಇಟ್ಟುಕೊಂಡು “ನನ್ನನ್ನೇ ನೋಡಿ” ಎಂದು ಹೇಳಿದ್ದರು.

ಹೀಗಾಗಿ ಇಟೂರ್‌ಬೈಡ್ ಡಿಸೆಂಬರ್ ಆರಂಭದಲ್ಲಿ ಊರ್ಡಾನೆಟನಿಗೆ ಬರೆದ ಎರಡು ಪತ್ರಗಳ ಸಮೇತ ಹೊರಟಿದ್ದ. ಇವುಗಳಲ್ಲಿನ ಒಂದು ಪತ್ರದಲ್ಲಿ, ಇಟೂರ್‌ಬೈಡ್, ವಿಲ್ಸನ್ ಮತ್ತು ಫರ್ನಾಂಡೋ ಇವರುಗಳು ತಮ್ಮ ಮನೆಯಲ್ಲಿ ಅತ್ಯಂತ ವಿಶ್ವಾಸಾರ್ಹ ವ್ಯಕ್ತಿಗಳು ಎಂದು ಜನರಲ್‌ರು ಬರೆದಿದ್ದರು. ಸಂಟಾ ಫ ದ ಬೊಗೋಟದಲ್ಲಿ ಅವನು ಯಾವುದೇ ನಿರ್ದಿಷ್ಟ ಗುರಿಯಿಲ್ಲದೆ ಮಾರನೆಯ ವರ್ಷದ

ಏಪ್ರಿಲ್‌ವರೆಗೂ ಉಳಿದಿದ್ದ, ಊರ್ಡಾನೆಟನನ್ನು ಆ ಹೊತ್ತಿಗೆ ಸಂಟಾಂಡರ್‌ವಾದಿಗಳ ಸಂಚಿನಿಂದ ಪದಚ್ಯುತಗೊಳಿಸಲಾಯಿತು. ಅವನ ತಾಯಿಯು ತನ್ನ ಸತತ ಒತ್ತಾಯದಿಂದ ಅವನನ್ನು ವಾಷಿಂಗ್‌ಟನ್‌ನಲ್ಲಿನ ಮೆಕ್ಸಿಕನ್ ಆಯೋಗದ ಕಾರ್ಯದರ್ಶಿಯಾಗಿ ನಾಮಕರಣ ಮಾಡುವುದರಲ್ಲಿ ಯಶಸ್ವಿಯಾದಳು. ತನ್ನ ಉಳಿದ ಕಾಲದಲ್ಲಿ ಅವನು ಸಾರ್ವಜನಿಕ ಜೀವನದಲ್ಲಿ ಅನಾಮಧೇಯನಾಗಿ ಉಳಿದ, ಮುಂದಿನ ಮೂವತ್ತೈದು ವರ್ಷಗಳವರೆಗೆ ಅವನ ಕುಟುಂಬದ ವಿಷಯ ಏನೂ ತಿಳಿಯಲಿಲ್ಲ, ಆಗ ಫ್ರೆಂಚ್ ಪಡೆಯಿಂದ ಚಕ್ರವರ್ತಿಯಾಗಿ ಪ್ರತಿಷ್ಠಾಪನೆಗೊಂಡಿದ್ದ ಹ್ಯಾಪ್ಸ್‌ಬರ್ಗ್‌ನ ಮ್ಯಾಕ್ಸಿಮಿಲಿಯನ್ ಆನಂತರದ ಮೂರನೆಯ ಪೀಳಿಗೆಯ ಇಟೂರ್‌ಬೈಡ್ ವಂಶದ ಇಬ್ಬರು ಹುಡುಗರನ್ನು ಆರಿಸಿಕೊಂಡು ತನ್ನ ಕಾಲ್ಪನಿಕ ಸಿಂಹಾಸನದ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಂಡಿದ್ದ.

ಊರ್ಡಾನೆಟನಿಗೆ ಬರೆದ ಮತ್ತೊಂದು ಪತ್ರದಲ್ಲಿ, ತಮ್ಮ ಕಗ್ಗತ್ತಲೆಯ ಕಾಲದ ಬಗ್ಗೆ ಯಾವ ಸುಳುಹೂ ಸಿಕ್ಕದಂತೆ ತಾವು ಹಿಂದೆ ಬರೆದಿದ್ದ ಮತ್ತು ಮುಂದೆ ಬರೆಯಬಹುದಾದ ಎಲ್ಲ ಪತ್ರಗಳನ್ನೂ ನಾಶಮಾಡಿಬಿಡಲು ಜನರಲ್‌ರು ಸೂಚಿಸಿದ್ದರು. ಆದರೆ ಊರ್ಡಾನೆಟ ಜನರಲ್‌ರ ಮಾತನ್ನು ನಡೆಸಲಿಲ್ಲ, ಅವನೇ ಐದು ವರ್ಷಗಳ ಹಿಂದೆ ಜನರಲ್ ಸಟಾಂಡರ್‌ಗೆ ಇಂತಹುದೇ ವಿನಂತಿಯನ್ನು ಮಾಡಿಕೊಂಡಿದ್ದ: "ನಾನು ಬದುಕಿರುವಾಗಲಾಗಲೀ ಸತ್ತ ನಂತರವಾಗಲೀ ನನ್ನ ಪತ್ರಗಳನ್ನು ಬಹಿರಂಗಗೊಳಿಸಬೇಡಿ, ಯಾಕೆಂದರೆ ಅವುಗಳಲ್ಲಿ ಸಾಕಷ್ಟು ಸ್ವತಂತ್ರ ಮನೋಭಾವವೂ ಅವ್ಯವಸ್ಥೆಯೂ ತುಂಬಿವೆ." ಸಟಾಂಡರ್ ಕೂಡ ಅವರ ಮಾತನ್ನು ನಡೆಸಿಕೊಟ್ಟಿರಲಿಲ್ಲ; ಜನರಲ್‌ರದ್ದಂತಲ್ಲದೆ ಅವನ ಪತ್ರಗಳು ಸ್ವರೂಪ ಮತ್ತು ವಸ್ತುಗಳ ವಿಷಯದಲ್ಲಿ ಪರಿಪೂರ್ಣಗಿದ್ದವು, ಅಲ್ಲದೆ ಅವುಗಳ ಅಂತಿಮ ಗುರಿ ಇತಿಹಾಸವೇ ಎಂಬ ಅರಿವಿನಿಂದ ಅವನು ಅವುಗಳನ್ನು ಬರೆದಿದ್ದುದು ಮೊದಲ ನೋಟಕ್ಕೆ ಸ್ಪಷ್ಟವಾಗಿ ಕಾಣುತ್ತಿತ್ತು.

ವೆರಾಕ್ರೂಝ್‌ನಿಂದ ಬಂದಿದ್ದ ಪತ್ರದಿಂದ ಪ್ರಾರಂಭವಾಗಿ, ತಮ್ಮ ಸಾವಿಗೆ ಆರು ದಿನಗಳ ಹಿಂದೆಯಷ್ಟೇ ಹೇಳಿ ಬರೆಸಿದ್ದ ಕೊನೆಯ ಪತ್ರದವರೆಗೆ ಜನರಲ್‌ರು ಕನಿಷ್ಠವೆಂದರೂ ಹತ್ತು ಸಾವಿರ ಪತ್ರಗಳನ್ನು ಬರೆದಿದ್ದರು; ಅವುಗಳಲ್ಲಿ ಕೆಲವು ಸ್ವಹಸ್ತದಿಂದ ಬರೆದವಾದರೆ, ಹಲವು ತಮ್ಮ ಕಾರ್ಯದರ್ಶಿಗಳಿಗೆ ಹೇಳಿ ಬರೆಸಿದವು, ಮತ್ತೂ ಕೆಲವು ತಮ್ಮ ಸೂಚನೆಗಳನ್ನನುಸರಿಸಿ ಅವರು ರಚಿಸಿದವು. ಕೆಲವು ಸಂದರ್ಭಗಳಲ್ಲಿ ಅವರು ಕಾರ್ಯದರ್ಶಿಗಳ ತಲೆ ಚಿಟ್ಟು ಹಿಡಿಸಿದರೆ, ಮತ್ತೆ ಕೆಲವದರಲ್ಲಿ ಇದು ಹಿಂದುಮುಂದಾಗಿತ್ತು. ತಾವು ಹೇಳಿ ಬರೆಸಿದ್ದ ಪತ್ರವೊಂದರ ಬರಹ ಸ್ಫುಟವಾಗಿರಲಿಲ್ಲವೆಂದು ಅದನ್ನು ಮತ್ತೆ ನಕಲು ಮಾಡಲು ಹೇಳುವುದರ

ಬದಲು, ತಮ್ಮ ಕಾರ್ಯದರ್ಶಿಯ ಬಗ್ಗೆ ಅವರು ಒಂದು ಸ್ವತಃ ಸಾಲು ಬರಹವನ್ನು ಸೇರಿಸಿದ್ದರು: “ಮ್ಯಾರೆಲ್ ಇವತ್ತು ಎಂದಿಗಿಂತ ದಡ್ಡತನದಿಂದ ಕೂಡಿದ್ದಾನೆ ಎಂಬುದು ನಿಮಗೆ ತಿಳಿದಿರಲಿ.” ೧೮೧೭ ರಲ್ಲಿ, ಭೂಖಂಡದ ಬಿಡುಗಡೆಯನ್ನು ಪೂರ್ಣಗೊಳಿಸಲು ಅಂಗೋಸ್ತುರಾದಿಂದ ಹೊರಡುವ ಹಿಂದಿನ ದಿನ, ತಮ್ಮ ಸರ್ಕಾರದ ಅಲ್ಲಿನವರೆಗಿನ ವ್ಯವಹಾರಗಳನ್ನು ಪೂರ್ಣಗೊಳಿಸಲು ಒಂದೇ ಸಮಕ್ಕೆ ಹದಿನಾಲ್ಕು ಪತ್ರಗಳನ್ನು ಹೇಳಿ ಬರೆಸಿದ್ದರು. ಅನೇಕ ಮಂದಿ ಕಾರ್ಯದರ್ಶಿಗಳಿಗೆ ಹೇಳಿ ಒಂದೇ ಬಾರಿಗೆ ಬೇರೆ ಬೇರೆಯವರಿಗೆ ಪತ್ರಗಳನ್ನು ಜನರಲ್ ಬರೆಸುತ್ತಿದ್ದರೆಂಬ ಐತಿಹ್ಯವು ಬೆಳೆಯಲು ಇದು ಕಾರಣವಾಗಿರಬೇಕು, ಇದನ್ನು ಮುಂದೆ ಯಾರೂ ಅಲ್ಲಗಳೆಯಲಿಲ್ಲ.

ಅಕ್ಟೋಬರ್ ಬರಿ ಮಳೆಯ ಸದ್ದಿನ ಮಟ್ಟಕ್ಕೆ ಇಳಿಯಿತು. ಅವರು ಮತ್ತೆ ತಮ್ಮ ಕೋಣೆಯಿಂದ ಹೊರಬರಲೇ ಇಲ್ಲ, ಅವರನ್ನು ಕಂಡು ಉಣಬಡಿಸಲು ಅವಕಾಶವೀಯುವಂತೆ ಮಾಡಲು ಡಾ. ಗ್ಯಾಸ್ಪೆಲ್‌ಬೋಂಡೋ ತಮ್ಮ ಬುದ್ಧಿಯನ್ನೆಲ್ಲ ಉಪಯೋಗಿಸಬೇಕಾಗಿತ್ತು. ಸ್ವಲ್ಪವೂ ಮಿಸುಕಾಡದೆ ಜನರಲ್‌ರು ನಿರ್ಜನ ಚೌಕದಲ್ಲಿ ಆಲೋಚನಾಪರರಾಗಿ ಮಳೆಯನ್ನೇ ನೋಡುತ್ತ ಜೋಲಿಮಂಚದಲ್ಲಿ ಮಲಗಿರುವಾಗ, ತಮ್ಮ ಕಳೆದ ಬದುಕಿನ ಸೂಕ್ಷ್ಮ ವಿವರಗಳನ್ನೆಲ್ಲ ನೆನಪಿಸಿಕೊಳ್ಳುತ್ತಿರುವರೆಂಬ ಭಾವನೆ ಜೋಸೆ ಪೆಲಾಸಿಯೋಸ್‌ಗೆ ಆಗುತ್ತಿತ್ತು.

“ಕರುಣಾಮಯ ದೇವರೇ, ಮ್ಯಾನ್ಯುಯೆಲಳಿಗೆ ಏನಾಗಿದೆ?” ಎಂದು ಒಂದು ಮಧ್ಯಾಹ್ನ ನಿಟ್ಟುಸಿರುಬಿಡುತ್ತ ಕೇಳಿದ್ದರು.

“ಅವರು ಚೆನ್ನಾಗಿರುವರೆಂಬುದಷ್ಟು ನಮಗೆ ಗೊತ್ತು, ಮಿಕ್ಕ ವಿಷಯದ ಬಗ್ಗೆ ಅವರೇನೂ ತಿಳಿಸಿಯೇ ಇಲ್ಲ” ಎಂದಿದ್ದ ಜೋಸೆ ಪೆಲಾಸಿಯೋಸ್.

ಊರ್ಡಾನೆಟ ಅಧಿಕಾರ ಸ್ವೀಕರಿಸಿದ ಮೇಲೆ ಅವಳನ್ನು ಮೌನ ಆವರಿಸಿತ್ತು. ಜನರಲ್‌ರು ಅವಳಿಗೆ ಮತ್ತೆ ಪತ್ರ ಬರೆದಿರಲಿಲ್ಲ, ಆದರೆ ತಮ್ಮ ಪ್ರಯಾಣದ ಬಗ್ಗೆ ಈಚಿನ ವಿವರಗಳನ್ನು ಆಕೆಗೆ ತಿಳಿಸುವಂತೆ ಫರ್ನಾಂಡೋಗೆ ಸೂಚನೆ ನೀಡಿದ್ದರು. ಕಳೆದ ಆಗಸ್ಟ್‌ನಲ್ಲಿ ಅವಳಿಂದ ಕೊನೆಯ ಪತ್ರ ಬಂದಿತ್ತು, ಅದರಲ್ಲಿ ಸೈನ್ಯ ಬಂಡಾಯಕ್ಕೆ ನಡೆದಿರುವ ಸಿದ್ಧತೆಗಳ ಬಗ್ಗೆ ತುಂಬ ರಹಸ್ಯ ಮಾಹಿತಿಯಿತ್ತು, ಆದರೆ ಶತ್ರುಗಳಿಗೆ ಪತ್ರ ಸಿಕ್ಕಿದರೆ ಅರ್ಥವಾಗದಿರುವಂತೆ ಮಾಡಲು ಮೋಡಿ ಅಕ್ಷರದಲ್ಲಿ ಸಂಗತಿಗಳನ್ನು ಜಟಿಲಗೊಳಿಸಿ ಬರೆದಿದ್ದರಿಂದ ಎಷ್ಟೋ ವಿಷಯಗಳು ಸ್ಪಷ್ಟಗೊಂಡಿರಲೇ ಇಲ್ಲ.

ಜನರಲ್‌ರ ವಿವೇಕಯುತ ಸಲಹೆಗಳಿಗೆ ಕಿವಿಗೊಡದೆ, ತುಂಬಿದ ಅಥವಾ ಅತಿಯಾದ ಸಂತಸದಿಂದ ಮ್ಯಾನ್ಯುಯೆಲ ದೇಶದ ಬೊಲಿವರ್‌ವಾದಿಗಳ ನಾಯಕತ್ವವನ್ನು ವಹಿಸಿಕೊಂಡು ಸರ್ಕಾರದ ವಿರುದ್ಧ ಕಾಗದ ಸಮರವನ್ನು ಸಾರಿದ್ದಳು. ಅವಳ ವಿರುದ್ಧ ಕ್ರಮ ಕೈಗೊಳ್ಳಲು ಅಧ್ಯಕ್ಷ ಮಾಸ್ಕ್ವೇರಾಗೆ ಧೈರ್ಯ ಬರಲಿಲ್ಲ, ಆದರೆ ತನ್ನ ಸಚಿವರು ಆ ಕೆಲಸ ಮಾಡುವುದನ್ನು ತಡೆಯಲಿಲ್ಲ. ಅಧಿಕೃತ ಪತ್ರಿಕೆಗಳು ಮಾಡುತ್ತಿದ್ದ ಆಕ್ರಮಣದ ವಿರುದ್ಧ ಮ್ಯಾನ್ಯುಯೆಲ ಕಟುಟೀಕೆಯ ಬರಹಗಳನ್ನು ಮುದ್ರಿಸಿ ತನ್ನ ತೊತ್ತುಗಳೊಡನೆ ಕುದುರೆಯ ಮೇಲೆ ಸಾಗುತ್ತ ಕಾಲ್ ರಿಯಲ್ ಉದ್ದಕ್ಕೂ ಹಂಚಿದಳು. ತನ್ನ ಅಸ್ತ್ರವನ್ನು ಸಿದ್ಧಗೊಳಿಸಿಕೊಂಡು ಜನರಲ್‌ರ ವಿರುದ್ಧ ಅಪಪ್ರಚಾರ ಮಾಡುತ್ತಿದ್ದವರನ್ನು ಹೊರಪ್ರದೇಶಗಳಲ್ಲಿನ ಅಡ್ಡಾದಿಡ್ಡಿ ಬೀದಿಗಳಲ್ಲಿ ಅಟ್ಟಾಡಿಸಿಕೊಂಡು ಹೋದಳು, ಪ್ರತಿನಿತ್ಯ ಗೋಡೆಗಳ ಮೇಲೆ ಕಾಣಿಸಿಕೊಳ್ಳುತ್ತಿದ್ದ ಘೋಷಣೆಗಳ ಮೇಲೆ ಅವಕ್ಕಿಂತಲೂ ಕಟುವಾದುವನ್ನು ಬರೆಸಿದಳು.

ಕೊನೆಯಲ್ಲಿ, ಅವಳ ಹೆಸರಿನಲ್ಲಿಯೇ ಅವಳ ವಿರುದ್ಧ ಅಧಿಕೃತ ಸಮರ ಸಾರಲಾಯಿತು. ಆದರೆ ಅವಳು ಮಾತ್ರ ಸಗ್ಗಲಿಲ್ಲ. ಸರ್ಕಾರದಲ್ಲಿದ್ದ ಅವಳ ಆಪ್ತರು ಒಂದು ರಾಷ್ಟ್ರೀಯ ಆಚರಣೆಯ ದಿನ ಜನರಲ್‌ರನ್ನು ಮೂರ್ಖರ ರಾಜನಂತೆ ಚಿತ್ರಿಸುವ ವ್ಯಂಗ್ಯಚಿತ್ರವನ್ನು ಊರಿನ ಮುಖ್ಯ ಚೌಕದಲ್ಲಿರಿಸಿ ಅದನ್ನು ಪಟಾಕಿಯೊಡನೆ ಸಿಡಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವುದನ್ನು ಅವಳಿಗೆ ತಿಳಿಸಿದರು. ಮ್ಯಾನ್ಯುಯೆಲ ತನ್ನ ತೊತ್ತಿನೊಡನೆ ಹೋಗಿ ರಕ್ಷಕದಳದವರ ಮೇಲೆ ರಾವುತದಳದಂತೆ ಕುದುರೆಯನ್ನು ನುಗ್ಗಿಸಿ ಆ ಚಿತ್ರವನ್ನು ಕೆಡವಿದಳು. ಒಂದು ಸೈನ್ಯ ತುಕಡಿಯ ಮುಖ್ಯಸ್ಥನಾಗಿದ್ದ ಮೇಯರ್ ಮಲಗಿಕೊಂಡಿದ್ದ ಅವಳನ್ನು ಸೆರೆಹಿಡಿಯಲು ಸ್ವತಃ ಪ್ರಯತ್ನಿಸಿದ. ಆದರೆ ಅವರ ಬರುವಿಕೆಯನ್ನು ಎದುರು ನೋಡುತ್ತ ಅವಳು ಒಂದು ಜೊತೆ ಪಿಸ್ತೂಲುಗಳೊಂದಿಗೆ ಸಿದ್ಧವಾಗಿದ್ದಳು; ಆದರೆ ಉಭಯತ್ರರ ಸಮಾನ ಗೆಳೆಯರ ಮಧ್ಯಸ್ತಿಕೆಯಿಂದಾಗಿ ದೊಡ್ಡ ಅನಾಹುತ ನಡೆಯುವುದು ತಪ್ಪಿತು.

ಅವಳನ್ನು ಸುಮ್ಮನಾಗಿಸಿದ್ದ ಏಕೈಕ ಸಂಗತಿಯೆಂದರೆ ಊರ್ಡಾನೆಟ ಅಧಿಕಾರವನ್ನು ವಹಿಸಿಕೊಂಡದ್ದು. ಅವನು ಅವಳ ನಿಜವಾದ ಸ್ನೇಹಿತನಾಗಿದ್ದ, ಅವನಾದರೋ ಅವಳನ್ನು ತನ್ನ ಉತ್ಸಾಹಶಾಲೀ ಸಂಗಾತಿಯೆಂದು ಭಾವಿಸಿದ್ದ. ಜನರಲ್‌ರು ದಕ್ಷಿಣದಲ್ಲಿ ಪೆರುವಿನ ಆಕ್ರಮಣಕಾರರ ವಿರುದ್ಧ ಹೋರಾಡುತ್ತಿದ್ದಾಗ ಅವಳು ಸಂಟಾ ಫ಼ ದ ಬೊಗೋಟದಲ್ಲಿ ಏಕಾಂಗಿಯಾಗಿರಬೇಕಾದ ಸಂದರ್ಭದಲ್ಲಿ ಊರ್ಡಾನೆಟ ನಂಬಿಕಸ್ಥ ಗೆಳೆಯನಾಗಿ ಸುರಕ್ಷತೆಯ ಜೊತೆಗೆ ಅವಳ ಆವಶ್ಯಕತೆಗಳ ಕಡೆಗೂ

ಗಮನ ಹರಿಸಿದ್ದ. ಕಾಂಗ್ರೆಸ್‌ನಲ್ಲಿ ಜನರಲ್‌ರು ತಮ್ಮ ದುರದೃಷ್ಟಕರ ಹೇಳಿಕೆಯನ್ನು ನೀಡಿದಾಗ, ಊರ್ಡಾನೆಟನಿಗೆ "ಹಿಂದಿನ ಗೆಳೆತನವನ್ನಷ್ಟೇ ಅಲ್ಲದೆ ಒಪ್ಪಂದ ಮಾಡಿಕೊಳ್ಳಲೂ ಹೃತ್ಪೂರ್ವಕವಾಗಿ ಸಿದ್ಧನಿದ್ದೇನೆ" ಎಂದು ಪತ್ರ ಬರೆಯಲು ಮನವೊಲಿಸಿದ್ದವಳೂ ಮ್ಯಾನ್ಯುಯೆಲಳೇ. ಈ ಧೈರ್ಯದ ಆಹ್ವಾನವನ್ನು ಊರ್ಡಾನೆಟ ಒಪ್ಪಿಕೊಂಡಿದ್ದ, ಸೈನಿಕ ಬಂಡಾಯದ ನಂತರ ಮ್ಯಾನ್ಯುಯೆಲ ಇದಕ್ಕಾಗಿ ಕಾಣಿಕೆಯನ್ನೂ ಸಲ್ಲಿಸಿದ್ದಳು. ಸಾರ್ವಜನಿಕ ಜೀವನದಿಂದ ಎಷ್ಟರ ಮಟ್ಟಿಗೆ ಹಿಂದೆ ಸರಿದಳೆಂದರೆ, ಅವಳು ಸಂಯುಕ್ತ ಸಂಸ್ಥಾನಗಳಿಗೆ ಹೋಗಿರುವಳೆಂಬ ವದಂತಿ ಅಕ್ಟೋಬರ್ ಆರಂಭದ ಹೊತ್ತಿಗೇ ಹರಡಿತ್ತು, ಅದನ್ನು ಯಾರೂ ಅನುಮಾನಿಸ'ಲಿಲ್ಲ. ಈ ಕಾರಣದಿಂದಲೇ ಜೋಸೆ ಪೆಲಾಸಿಯೋಸ್ ಹೇಳಿದ್ದು ಸರಿಯಾಗಿಯೇ ಇತ್ತು: ಅವಳ ಬಗ್ಗೆ ಯಾವುದೇ ಸುದ್ದಿ ಬಾರದ್ದರಿಂದ ಮ್ಯಾನ್ಯುಯೆಲ ಆರೋಗ್ಯವಾಗಿದ್ದಾಳೆ.

ಮಳೆಯಿಂದಾಗಿ ಏಕಾಂಗಿಯಾಗಿ ಯಾತಕ್ಕೆ ಅಥವಾ ಯಾರಿಗೆ, ಯಾಕೆ ಎಂದು ತಿಳಿಯದೆಯೇ ಕಾಯುತ್ತಿದ್ದಾಗ, ಹಿಂದಿನದರ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದ ಒಂದು ಸಂದರ್ಭದಲ್ಲಿ, ಜನರಲ್‌ರು ನಿದ್ದೆಯಲ್ಲಿ ಜೋರಾಗಿ ಕೂಗಿದರು. ಬಿಕ್ಕುಗಳ ಸದ್ದನ್ನು ಆಲಿಸಿದ ಜೋಸೆ ಪೆಲಾಸಿಯೋಸ್‌ಗೆ ಅದು ನದಿ ದಡದ ಮೇಲಿನ ಬಿಡಾಡಿ ನಾಯಿಯದು ಎಂದು ಮೊದಲು ಅನ್ನಿಸಿತ್ತು, ಆದರೆ ಅದು ಯಜಮಾನರದ್ದಾಗಿದ್ದುದು ಆನಂತರ ಗೊತ್ತಾಯಿತು. ಇದರಿಂದ ಅವನಿಗೆ ಇರುಸುಮುರುಸಾಯಿತು: ಏಕೆಂದರೆ ಅವರೊಂದಿಗೆ ತನಗಿದ್ದ ದೀರ್ಘ ಕಾಲದ ಆತ್ಮೀಯ ಒಡನಾಟದಲ್ಲಿ ಅವರು ಅತ್ತಿದ್ದುದು ಒಂದು ಬಾರಿ ಮಾತ್ರ, ಅದೂ ಕೋಪತಪ್ತರಾಗಿದ್ದಾಗ, ದುಃಖದಲ್ಲಿದ್ದಾಗ ಅಲ್ಲ. ಆಗ ಅವನು ಮೊಗಸಾಲೆಯಲ್ಲಿ ಕಾವಲಿದ್ದ ಕ್ಯಾಪ್ಟನ್ ಇಬಾರಾನನ್ನು ಕರೆದ, ಅವನಿಗೂ ಬಿಕ್ಕುಗಳ ಸದ್ದು ಕೇಳಿಸಿತ್ತು.

"ಅದರಿಂದ ಅವರಿಗೆ ಒಳ್ಳೆಯದೇ ಆಗುತ್ತೆ" ಎಂದ ಇಬಾರಾ.

"ನಮ್ಮೆಲ್ಲರಿಗೂ" ಎಂದ ಜೋಸೆ ಪೆಲಾಸಿಯೋಸ್.

ಜನರಲ್‌ರು ಎಂದಿಗಿಂತ ಹೆಚ್ಚು ಕಾಲ ನಿದ್ದೆ ಮಾಡಿದರು, ಹತ್ತಿರದಲ್ಲಿದ್ದ ತೋಪಿನ ಮರಗಳ ಹಕ್ಕಿಗಳ ದನಿಯಿಂದಾಗಲೀ ಅಥವಾ ಚರ್ಚ್‌ನ ಗಂಟೆಯ ಸದ್ದಿನಿಂದಾಗಲೀ ಅವರು ಎಚ್ಚರಗೊಳ್ಳಲಿಲ್ಲ. ಜೋಸೆ ಪೆಲಾಸಿಯೋಸ್ ಅನೇಕ ಬಾರಿ ಜೋಲಿಮಂಚದ ಮೇಲಿನಿಂದ ಇಣುಕಿ ನೋಡಿ ಅವರು ಉಸಿರಾಡುತ್ತಿರುವುದನ್ನು ಖಚಿತಪಡಿಸಿಕೊಂಡ. ಅವರು ಎದ್ದಾಗ ಆಗಲೇ ಎಂಟು ಗಂಟೆಯಾಗಿತ್ತು, ಸೆಕೆ ಶುರುವಾಗಿತ್ತು.

"ಇವತ್ತು ಅಕ್ಟೋಬರ್ ೧೬, ಶನಿವಾರ ಶುದ್ಧತೆಯ ದಿನ (ಖ್ರಜ ಆಚಿಥಿ ಔಜಿ ಕಜಾಣಥಿ)" ಎಂದ ಜೋಸೆ ಪೆಲಾಸಿಯೋಸ್.

ಜನರಲ್‌ರು ಜೋಲಿಮಂಚದಿಂದೆದ್ದು ಕಿಟಕಿಯ ಮೂಲಕ ನೋಡಿದಾಗ ನಿರ್ಜನವಾದ ದೂಳು ತುಂಬಿದ ಚೌಕ, ಗಿಲಾವು ಕಿತ್ತು ಬರುತ್ತಿದ್ದ ಚರ್ಚ್‌ನ ಗೋಡೆಗಳು ಮತ್ತು ಸತ್ತ ನಾಯಿಗಾಗಿ ಗದ್ದಲ ಮಾಡುತ್ತಿದ್ದ ಟರ್ಕಿ ಡೇಗೆಗಳು ಕಾಣಿಸಿದವು. ಬೆಳಗಿನ ಕಡು ಬಿಸಿಲು ಅಂದು ಬರಲಿದ್ದ ಬಿರುಸೆಕೆಯ ಮುನ್ಸೂಚನೆಯಾಗಿತ್ತು.

"ಇಲ್ಲಿಂದ ಹೊರಟು ಬಿಡೋಣ; ಕಾಳಗದ ಪಡೆಗಳ ಗುಂಡಿನ ಸದ್ದನ್ನು ಕೇಳಿಸಿಕೊಳ್ಳೋದು ನನಗಿಷ್ಟವಿಲ್ಲ" ಎಂದರು ಜನರಲ್.

ಜೋಸೆ ಪೆಲಾಸಿಯೋಸ್ ನಡುಗಿಹೋದ. ಅವನು ಆ ಗಳಿಗೆಯನ್ನು ಬೇರೊಂದು ಕ್ಷಣ ಮತ್ತು ಸ್ಥಳಗಳಲ್ಲಿ ಬದುಕಿದ್ದ, ಆದರೆ ಜನರಲ್‌ರು ಆಗ ಇದ್ದ ರೀತಿಯಲ್ಲಿ, ನೆಲಗಟ್ಟಿನ ಒರಟು ಇಟ್ಟಿಗೆಗಳ ಮೇಲೆ, ನೀಳ ಒಳುಡುಪು ಮತ್ತು ಬೋಳು ತಲೆಗೆ ಮಲಗುವಾಗಿನ ಟೋಪಿ ಧರಿಸಿ ನಿಂತಿದ್ದರು. ಹಳೆಯ ಕನಸು ವಾಸ್ತವದಲ್ಲಿ ಕಾಣಿಸಿಕೊಂಡಿತ್ತು.

"ನಾವು ಅದನ್ನೆಲ್ಲ ಕೇಳಿಸಿಕೊಳ್ಳುವುದೇ ಬೇಡ" ಎಂದು ಹೇಳಿದ ಜೋಸೆ ಪೆಲಾಸಿಯೋಸ್ ಉದ್ದೇಶಪೂರ್ವಕ ಸಂಕ್ಷಿಪ್ತತೆಯಿಂದ ಸೇರಿಸಿದ್ದ: "ಜನರಲ್ ಪಯರ್‌ಗೆ ಆಂಗೋಸ್ತುರದಲ್ಲಿ ಗುಂಡಿಕ್ಕಲಾಯ್ತು, ಆದರೆ ಇವತ್ತು ಅಪರಾಹ್ನ ಐದಕ್ಕಲ್ಲ, ಹದಿಮೂರು ವರ್ಷಗಳ ಹಿಂದ ಇವತ್ತಿನಂತಿದ್ದ ಒಂದು ದಿನ."

ಕ್ಯುರಾಕುವದ ಮೂವತ್ತೈದರ ಹರೆಯದ ಮ್ಯುಲಾಟೋ (ಬಿಳಿಪು-ಕಪ್ಪು ವ್ಯಕ್ತಿಗಳಿಗೆ ಹುಟ್ಟಿದವನು) ಜನರಲ್ ಮ್ಯಾನ್ಯುಯೆಲ್ ಪಯರ್ ದೇಶದ ಸೈನ್ಯದಲ್ಲಿ ಮಿಕ್ಕೆಲ್ಲರಿಗಿಂತ ಹೆಚ್ಚಿನ ಖ್ಯಾತಿ ಗಳಿಸಿದ್ದ, ಮಾರಿಲೋನ ದಾಳಿಯನ್ನೆದುರಿಸಲು ವಿಮೋಚನಾ ಪಡೆಯು ಹಿಂದೆಂದಿಗಿಂತ ಹೆಚ್ಚು ಐಕಮತ್ಯದಿಂದಿರುವುದು ಆವಶ್ಯಕವಾಗಿದ್ದಾಗ ಅವನು ಜನರಲ್‌ರ ಅಧಿಕಾರವನ್ನು ಒರೆಗೆ ಹಚ್ಚಿದ್ದ. ಜನರಲ್‌ರ ರೂಪಿನಲ್ಲಿದ್ದ ಕ್ಯಾರಕಾಸ್‌ನ ಬಿಳಿಯ ಶ್ರೀಮಂತರಾಳಿಕೆಗೆ ಪ್ರತಿರೋಧ ಒಡ್ಡಲು ಪಯರ್ ಕಪ್ಪು ಜನರು, ಮ್ಯುಲಾಟೋಗಳು, ಝಾಂಬೋಗಳು ಹಾಗೂ ದೇಶದ ದರಿದ್ರರಿಗೆಲ್ಲ ಕರೆಯಿತ್ತಿದ್ದ. ಜನರಲ್ ಪಯರ್‌ನ ಜನಪ್ರಿಯತೆ ಹಾಗೂ ಪ್ರಭಾವಳಿಗಳು ಜೋಸೆ ಆಂಟೋನಿಯೋ ಪಯೆಝ್‌ನದರಂತೆ ಅಥವಾ ರಾಜಪ್ರಭುತ್ವವಾದಿ ಬೋವ್ಸ್‌ನದರ ಹಾಗಿತ್ತು, ಅವನ ಪ್ರಭಾವವು ವಿಮೋಚನಾ ಪಡೆಯ ಕೆಲವು ಬಿಳಿಯ ಅಧಿಕಾರಿಗಳ ಮೇಲೂ ಆಗಿತ್ತು. ಜನರಲ್‌ರು ತಮ್ಮ ಒಲಿಸುವಿಕೆಯ ಜಾಣ್ಮೆಯನ್ನೆಲ್ಲ ಬಳಸಿಕೊಂಡಿದ್ದರು, ಆವರ ಆಜ್ಞೆಯಂತೆಯೇ ಪಯರ್‌ನನ್ನು ಸೆರೆಹಿಡಿದು, ಮುಂದೆ ಕೊನೆಯ ಪಯಣಕಾಲದಲ್ಲಿ ಮ್ಯಾಗ್ಡಲೀನ ನದಿಯ ಗುಂಟ ತಮ್ಮ ಜೊತೆ ಬರಲಿದ್ದ ಕೆಲಮಂದಿಯೂ ಸೇರಿದಂತೆ ಆಪ್ತ ಅಧಿಕಾರಿಗಳೊಡನೆ ಜನರಲ್‌ರು ತಳವೂರಿದ್ದ ತಾತ್ಕಾಲಿಕ ರಾಜಧಾನಿ

ಅಂಗೋಸ್ತುರಕ್ಕೆ ಕರೆತರಲಾಗಿತ್ತು. ಜನರಲ್‌ರು ಹೆಸರಿಸಿದ್ದವರಿಂದ ಕೂಡಿದ ವಿಚಾರಣಾ ಮಂಡಳಿಯು, ಅದರಲ್ಲಿ ಪಯರ್‌ನ ಗೆಳೆಯರೂ ಸೇರಿದ್ದರು, ಕ್ಷಿಪ್ರ ತೀರ್ಪು ನೀಡಿತ್ತು. ಜೋಸೆ ಮರಿಯ ಕ್ಯಾರೆನೋ ಪ್ರಾಸೆಕ್ಯೂಟರಾಗಿ ಕಾರ್ಯ ನಿರ್ವಹಿಸಿದ. ಸ್ಪೈನ್‌ನ ಅಧಿಕಾರಶಾಹಿಯ ವಿರುದ್ಧ ಹೋರಾಡಿದ ವೀರರಲ್ಲಿ ಪಯರ್ ಅತ್ಯಂತ ಪ್ರಮುಖರಲ್ಲೊಬ್ಬನೆಂದು ಅವನ ಪರ ಅಧಿಕೃತ ವಕೀಲ ಹೊಗಳಿದಾಗ ಸುಳ್ಳನ್ನೇನೂ ಹೇಳಿರಲಿಲ್ಲ. ಅವನ ಮೇಲಿನ ಸೈನ್ಯ ತೊರೆದ, ಬಂಡಾಯ ಮಾಡಿದ ಮತ್ತು ದೇಶದ್ರೋಹದ ಆರೋಪಗಳು ಸಾಬೀತುಗೊಂಡವೆಂದು ನಿಶ್ಚಯಿಸಿ ಅವನಿಗೆ ಮರಣದಂಡನೆ ಹಾಗೂ ಅವನ ಸೈನಿಕ ಬಿರುದುಗಳನ್ನು ಕಿತ್ತುಕೊಳ್ಳುವ ತೀರ್ಪು ನೀಡಲಾಯಿತು. ಜನರಲ್‌ರು ಆ ದಂಡನೆಗಳನ್ನು, ಅದರಲ್ಲೂ ಮಾರಿಲೋ ಅನೇಕ ಭಾಗಗಳನ್ನು ಮತ್ತೆ ವಶಪಡಿಸಿಕೊಂಡಿರುವ ಮತ್ತು ದೇಶಪ್ರೇಮಿಗಳ ನೈತಿಕ ಬಲ ಕುಗ್ಗಿ ಸೋಲಿನ ಭಯ ಹೆಚ್ಚಿರುವ ಸಂದರ್ಭದಲ್ಲಿ, ಒಪ್ಪುವುದಿಲ್ಲವೆಂದು ಅವರ ಯೋಗ್ಯತೆಯನ್ನು ಬಲ್ಲವರು ಭಾವಿಸಿದರು. ಜನರಲ್‌ರ ಮೇಲೆ ನಾನಾ ಬಗೆಯ ಒತ್ತಡಗಳಿದ್ದವು, ಬ್ರೈಸೆನೋ ಮೆಂಡೆಝ್‌ನನ್ನೊಳಗೊಂಡಂತೆ ತಮ್ಮ ಆಪ್ತ ಗೆಳೆಯರ ಅಭಿಪ್ರಾಯಗಳನ್ನು ಸೌಜನ್ಯದಿಂದ ಆಲಿಸಿದರು, ಆದರೆ ಅವರ ನಿಶ್ಚಯವು ನಿಶ್ಚಲವಾಗಿತ್ತು. ಹಿಂಬಡ್ತಿಯ ದಂಡನೆಯನ್ನು ರದ್ದು ಮಾಡಿದರೂ, ಶಸ್ತ್ರಪಡೆಯ ಗುಂಡಿಗೆ ಆಹುತಿಯಾಗುವ ದಂಡನೆಯನ್ನು ದೃಢಪಡಿಸಿದರು, ಅಲ್ಲದೆ ವಧೆಯನ್ನು ಬಹಿರಂವಾಗಿ ಮಾಡಲು ಆಜ್ಞಾಪಿಸುವುದರ ಮೂಲಕ ಅದನ್ನು ಮತ್ತಷ್ಟು ಹಿಂಸಕವನ್ನಾಗಿಸಿದರು. ಏನು ಕೆಡುಕು ಬೇಕಾದರೂ ಸಂಭವಿಸಬಹುದಾದ ಕೊನೆಯಿರದ ರಾತ್ರಿಯಾಗಿ ಅದು ಪರಿಣಮಿಸಿತು. ಅಕ್ಟೋಬರ್ ೧೬ ರಂದು ಅಪರಾಹ್ನ ಐದು ಗಂಟೆಗೆ ಬಿರುಬಿಸಿಲಿನಲ್ಲಿ, ಆರು ತಿಂಗಳ ಹಿಂದಷ್ಟೇ ಸ್ಪಾನಿಶ್‌ರಿಂದ ಪಯರ್ ಸ್ವತಃ ವಶಪಡಿಸಿಕೊಂಡಿದ್ದ ಅಂಗೋಸ್ತುರ ನಗರದ ಚೌಕದಲ್ಲಿ ದಂಡನೆಯನ್ನು ಜಾರಿಗೊಳಿಸಲಾಯಿತು. ಇದಕ್ಕಾಗಿ ಟರ್ಕಿ ಕೋಳಿಗಳು ತಿಂದು ಮಿಕ್ಕಿದ್ದ ಸತ್ತ ನಾಯಿಯ ಅವಶೇಷವನ್ನು ತೆಗೆಸಿ ಜಾಗವನ್ನು ಶಸ್ತ್ರದಳದ ಮುಖ್ಯಸ್ಥ ತೆರವುಗೊಳಿಸಿದ್ದ, ಅಲ್ಲದೆ ವಧೆಯ ಗಾಂಭೀರ್ಯವನ್ನು ಪ್ರಾಣಿಗಳು ಬಂದು ಹಾಳುಮಾಡುವುದನ್ನು ತಪ್ಪಿಸಲು ಗೇಟುಗಳನ್ನು ಮುಚ್ಚಿಸಿದ್ದ. ಇಚ್ಛೆಗೆ ವಿರುದ್ಧವಾಗಿ ಪಯರ್‌ನ ಕಣ್ಣಿಗೆ ಬಟ್ಟೆ ಕಟ್ಟಿ ತನ್ನ ವಧೆಗೆ ಆಜ್ಞಾಪಿಸುವ ಗೌರವವನ್ನು ಅವನಿಗೆ ನಿರಾಕರಿಸಿದ್ದ, ಆದರೆ ಅವನು ಮಾತ್ರ ಶಿಲುಬೆಯನ್ನು ಮುತ್ತಿಕ್ಕಿ, ಬಾವುಟಕ್ಕೆ ವಂದನೆ ಸಲ್ಲಿಸುವುದರ ಮೂಲಕ ಜಗತ್ತಿಗೆ ವಿದಾಯ ಹೇಳಿದ್ದ.

ಈ ವಧೆಯನ್ನು ವೀಕ್ಷಿಸಲು ಜನರಲ್‌ರು ನಿರಾಕರಿಸಿದ್ದರು. ಅವರೊಡನೆ ಮನೆಯಲ್ಲಿದ್ದ ಏಕೈಕ ವ್ಯಕ್ತಿಯೆಂದರೆ ಜೋಸೆ ಪೆಲಾಸಿಯೋಸ್,

ಗುಂಡಿನ ಸದ್ದು ಕೇಳಿಸಿದಾಗ ಯಜಮಾನರು ಕಣ್ಣೀರು ತಡೆದುಕೊಳ್ಳಲು ಹೆಣಗುತ್ತಿರುವುದು ಅವನಿಗೆ ಕಾಣಿಸಿತು. ಪಡೆಗಳಿಗೆ ಈ ಬಗ್ಗೆ ಮಾಡಿದ ಘೋಷಣೆಯ ಕಾಲದಲ್ಲಿ ಅವರೆಂದಿದ್ದರು: "ನಿನ್ನೆ ನನಗೆ ದುಃಖದ ದಿನ." ಅದು ದೇಶವನ್ನುಳಿಸುವ ರಾಜಕೀಯ ಆವಶ್ಯಕತೆಯಾಗಿತ್ತು, ಅದು ಬಂಡಾಯಗಾರರ ಮನವೊಲಿಸಿತು, ಹೀಗಾಗಿ ಅಂತರ್ಯುದ್ಧ ತಪ್ಪಿತು ಎಂದೇ ಜೀವಮಾನವಿಡೀ ಅವರು ಬಣ್ಣಿಸುತ್ತಿದ್ದರು. ಏನೇ ಆಗಲಿ, ಅದು ಅವರ ಅಧಿಕಾರಾವಧಿಯ ಅತ್ಯಂತ ಅನಾಗರಿಕ ಕೃತ್ಯವಾಗಿತ್ತು, ಅಷ್ಟೇ ಸಾಂದರ್ಭಿಕವೂ ಆದುದಾಗಿತ್ತು, ಯಾಕೆಂದರೆ ಅದರಿಂದ ಅವರ ಅಧಿಕಾರ ದೃಢಗೊಂಡಿತ್ತು, ಸೇನೆಯನ್ನು ಒಗ್ಗೂಡಿಸಿತ್ತು, ಹಾಗೂ ಅವರ ಔನ್ನತ್ಯದ ಹಾದಿಯನ್ನು ಸುಗಮಗೊಳಿಸಿತ್ತು.

ಕಾಲದ ವೈಪರೀತ್ಯಕ್ಕೆ ತಾವು ಬಲಿಯಾಗಿದ್ದುದು ಹದಿಮೂರು ವರ್ಷಗಳ ನಂತರ ಸೋಲೆದಾದ್‌ನಲ್ಲಿರುವ ಈಗಲೂ ಅವರ ಅರಿವಿಗೆ ಬಂದಂತೆ ತೋರಲಿಲ್ಲ. ಅವರು ಚೌಕದೆಡೆಗೆ ದೃಷ್ಟಿ ನಟ್ಟೇ ಇದ್ದರು, ಅಷ್ಟರಲ್ಲಿ ಹಾಲಿಗಾಗಿ ಮಾರಲೆಂದು ಪೇಟೆಗೆ ಒಯ್ಯುತ್ತಿದ್ದ ತೆಂಗಿನಕಾಯಿಗಳ ಹೊರೆ ಹೊತ್ತ ಕತ್ತೆಯ ಮುಂದೆ ಚಿಂದಿ ತೊಟ್ಟ ಮುದುಕಿಯೊಬ್ಬಳು ಹಾದು ಹೋದಳು, ನೆರಳಿಗೆ ಹೆದರಿ ಟರ್ಕಿ ಡೇಗೆಗಳು ಹಾರಿಹೋದವು. ಆಗ ನಿಟ್ಟುಸಿರು ಬಿಡುತ್ತ ಅವರು ಮೇಲೆದ್ದು ತಮ್ಮ ಜೋಲಿಮಂಚದೆಡೆಗೆ ಸಾಗಿದರು, ಅಂಗೋಸ್ತುರದ ಆ ದುರಂತ ರಾತ್ರಿಯಿಂದಲೂ ಜೋಸೆ ಪಲಾಸಿಯೋಸ್ ಕೇಳಲು ತವಕಿಸಿದ್ದ ಉತ್ತರವನ್ನು ಯಾರೂ ಕೇಳದಿದ್ದರೂ ತಾವಾಗಿ ಹೇಳಿದರು: "ನಾನು ಮತ್ತೆ ಅದನ್ನೇ ಮಾಡುತ್ತೇನೆ."

# ಅಧ್ಯಾಯ ೭

ಬಹು ದೊಡ್ಡ ಗಂಡಾಂತರವೆಂದರೆ ನಡೆಯುವುದು, ಅದಕ್ಕೆ ಕಾರಣ ಬೀಳುವ ಭಯವಲ್ಲ, ಆ ಪ್ರಯತ್ನಕ್ಕೆ ಅವರು ತೆರಬೇಕಾದ ಬೆಲೆ. ಮತ್ತೊಂದೆಡೆ, ಮನೆಯಲ್ಲಾದರೆ ತಾವಾಗಿ ಹತ್ತಲು ಸಾಧ್ಯವಾದರೂ ಇತರರು ಸಹಾಯ ಮಾಡಲು ಮುಂದಾಗುವುದು ಸಕಾರಣವಾಗಿತ್ತು. ಆದರೆ, ಆಧಾರಕ್ಕಾಗಿ ಮತ್ತೊಬ್ಬರ ತೋಳನ್ನು ಹಿಡಿದುಕೊಳ್ಳುವುದು ಆವಶ್ಯಕವಾದಾಗಲೂ ಅದಕ್ಕಾಗಿ ಅವರು ಕೇಳುತ್ತಿರಲಿಲ್ಲ.

"ಥ್ಯಾಂಕ್ ಯೂ, ಆದರೆ ನಾನೇ ಅದನ್ನು ಮಾಡಿಕೊಳ್ಳಬಲ್ಲೆ" ಎಂದು ಅವರು ಹೇಳುತ್ತಿದ್ದರು.

ಒಂದು ದಿನ ಅವರ ಕೈಲಾಗಲಿಲ್ಲ. ಇನ್ನೇನು ಮೆಟ್ಟಿಲುಗಳನ್ನಿಳಿಯಲು ಒಬ್ಬರೇ ತೊಡಗಬೇಕು, ಆಗ ಇಡೀ ಜಗತ್ತೇ ಕಣ್ಮರೆಯಾಯಿತು. "ನನಗೆ ಕಾಲೇ ನಿಲ್ಲಲಿಲ್ಲ, ಹೇಗೆ ಅಂತ ಗೊತ್ತಾಗಲಿಲ್ಲ, ಅರ್ಧ ಸತ್ತ ಹಾಗಾಗಿದ್ದೆ" ಎಂದು ತಮ್ಮ ಸ್ನೇಹಿತರೊಬ್ಬರ ಬಳಿ ಹೇಳಿಕೊಂಡಿದ್ದರು. ನಡೆದಿದ್ದು ಇನ್ನೂ ಭೀಕರವಾದ್ದು: ಬಿದ್ದು ಸಾಯದಿದ್ದುದು ಒಂದು ಪವಾಡವೆಂದೇ ಹೇಳಬೇಕು, ಏಕೆಂದರೆ ಬವಳಿ ಬಂದು ಅವರನ್ನು ಮೆಟ್ಟಿಲ ಪಕ್ಕಕ್ಕೆ ನೂಕಿತು, ಮೆಟ್ಟಿಲುಗಳ ಮೇಲೆ ಉರುಳಿ ಬೀಳದಿರಲು ಕಾರಣ ಅವರ ದೇಹ ತೀರ ಹಗುರವಾಗಿದ್ದುದು.

ಹಿಂದೆ ಭೇಟಿನೀಡಿದ್ದಾಗ ಜನರಲ್‌ರನ್ನಿರಿಸಿಕೊಂಡಿದ್ದ ಹಾಗೂ ಅವರಿಗಾಗಿ ಕಾಲ್ ಆ್ಯಂಚಾ ಎದುರಿಗೆ ಒಳ್ಳೆ ಗಾಳಿಬೆಳಕಿನ ಅದೇ ಕೋಣೆಯನ್ನು ಮೀಸಲಿರಿಸಿಕೊಂಡಿದ್ದ ಡಾನ್ ಬಾರ್ತೋಲೋಮಿ ಮೊಲಿನಾರಿಸ್‌ರ ಬಂಡಿಯಲ್ಲಿ ಅವರನ್ನು ಬ್ಯಾರಂಕಾ ದ ಸ್ಯಾನ್ ನಿಕೋಲೇಸ್‌ಗೆ ಡಾ. ಗ್ಯಾಸ್ಟೆಲ್‌ಬೋಂಡೋ ಕರೆದೊಯ್ದರು. ದಾರಿಯಲ್ಲಿ, ಅವರಿಗೆ ತುಂಬ ಕಿರುಕುಳ ನೀಡುತ್ತಿದ್ದ ಗಟ್ಟಿ ದ್ರವವೊಂದು ಎಡ ಅಶ್ರುನಾಳದ ಮೂಲಕ ಸುರಿಯಲಾರಂಭಿಸಿತು. ಪ್ರಯಾಣಕಾಲದಲ್ಲಿ ಅವರಿಂದ ಎಲ್ಲವನ್ನೂ ಬೇರ್ಪಡಿಸಲಾಯಿತು; ಹಲವು ವೇಳೆ ಅವರು ಪ್ರಾರ್ಥನೆ ಸಲ್ಲಿಸುವಂತೆ ಕಂಡರೂ ವಾಸ್ತವವಾಗಿ ತಮ್ಮ ಇಷ್ಟವಾದ ಕವಿತೆಗಳಿಂದ ಪದ್ಯಗಳನ್ನು ಮೆಲುವಾಗಿ ಹೇಳಿಕೊಳ್ಳುತ್ತಿದ್ದರು. ವೈದ್ಯರು ತಮ್ಮ ಕರವಸ್ತ್ರದಿಂದ ಅವರ ಕಣ್ಣುಗಳನ್ನೊರೆಸಿದರು, ತಮ್ಮ ಶುದ್ಧತೆಯ ಬಗ್ಗೆ ತುಂಬ ಸೂಕ್ಷ್ಮರಾದ ಜನರಲ್‌ರು ತಾವೇ ಒರೆಸಿಕೊಳ್ಳದಿದ್ದುದು ಅವರಿಗೆ ಅಚ್ಚರಿ ತಂದಿತ್ತು. ನಗರ

ಪ್ರವೇಶದಲ್ಲಿ ತೊಂಡು ದನಗಳ ಹಿಂಡೊಂದು ಬಂಡಿಯನ್ನು ಮುಗ್ಗರಿಸಿ ಓಡಿತ್ತು, ಅದರ ಹಿಂಬದಿಯ ಬರ್ಲಿನ್ ಕೋಚ್ ಬಿದ್ದು ಅದರಲ್ಲಿದ್ದ ಪ್ಯಾರಿಸ್ ಪಾದ್ರಿ ಪಲ್ಟಿ ಹೊಡೆದು ಆಮೇಲೆ ತಮ್ಮ ಕಾಲ ಮೇಲೆ ಎದ್ದು ನಿಂತಿದ್ದರು, ಅವರ ತಲೆಯಿಂದ ಕಾಲಿನವರೆಗೆ ಮರಳು ಮೆತ್ತಿಕೊಂಡು ಬೆಳ್ಳಗಾಗಿತ್ತು, ಹಣೆ ಮತ್ತು ಕೈಗಳಲ್ಲಿ ರಕ್ತ ಬಂದಿತ್ತು, ಆದರೂ ಅವರು ಮೇಲೇಳಲಿಲ್ಲ. ಈ ಆಘಾತದಿಂದ ತತ್ತರಿಸಿದ್ದ ಶಸ್ತ್ರದಳದವರು, ದಾರಿಯಲ್ಲಿ ನಿಂತು ಅಪಘಾತವನ್ನು ತಮಾಷೆಯೆನ್ನುವಂತೆ ನಿಂತು ನೋಡುತ್ತ ಬಂಡಿಯೊಳಗಿನ ಕತ್ತಲೆಯಲ್ಲಿ ಶವದಂತೆ ಕೂತಿದ್ದ ಪ್ರಯಾಣಿಕರಾರೆಂದು ಅರಿಯದ ಜನ ಹಾಗೂ ಬತ್ತಲೆ ಹುಡುಗರ ನಡುವೆಯೇ ದಾರಿ ಮಾಡಿಕೊಟ್ಟರು.

ವೈದ್ಯರು ಪುರೋಹಿತರನ್ನು ಜನರಲ್‌ರಿಗೆ ಪರಿಚಯ ಮಾಡಿಕೊಟ್ಟರು: ಪುರೋಹಿತರು ತಮ್ಮ ಉಪದೇಶ ವೇದಿಕೆಗಳ ಮೂಲಕ ಖಂಡಿಸಿ ಲಂಪಟರೆಂದು ಅವರಿಗೆ ಬಹಿಷ್ಕಾರ ಹಾಕಿದಾಗ ಜನರಲ್‌ರನ್ನು ಬೆಂಬಲಿಸಿದ ಕೆಲವೇ ಮಂದಿ ಪುರೋಹಿತರುಗಳಲ್ಲಿ ಇವರೂ ಸೇರಿದ್ದರಂತೆ. ಏನು ನಡೆದಿತ್ತೆಂಬುದು ಜನರಲ್‌ರಿಗೆ ಅರ್ಥವಾದಂತೆ ಕಾಣಲಿಲ್ಲ, ಆದರೆ ಪಾದ್ರಿಗಳ ನಿಲುವಂಗಿಗೆ ರಕ್ತ ಮೆತ್ತಿಕೊಂಡಿರುವುದನ್ನು ಕಂಡು ಪ್ರಪಂಚ ಅರಿವಿಗೆ ಬಂದಿತು. ಸಾರ್ವಜನಿಕ ಬೀದಿಗಳಲ್ಲಿ ಹೋಗುವ ಬಂಡಿಗಳಿಂದಾಗಿ ನಗರದಲ್ಲಿ ಪಾದಚಾರಿಗಳು ಕ್ಷೇಮದಿಂದ ಓಡಾಡುವುದೇ ದುಸ್ತರವಾಗಿರುವ ಕಾರಣ ಜನರಲ್‌ರು ತಮ್ಮ ಅಧಿಕಾರ ಬಳಸಿ ತೊಂಡು ದನಗಳನ್ನು ನಿಯಂತ್ರಿಸಲು ಪಾದ್ರಿ ಕೇಳಿಕೊಂಡರು.

"ಪೂಜ್ಯರೇ, ಆ ಬಗ್ಗೆ ಯೋಚನೆ ಬಿಡಿ, ಇಡೀ ದೇಶದಲ್ಲಿನ ಪರಿಸ್ಥಿತಿಯೇ ಹೀಗಿದೆ" ಎಂದು ಅವರೆಡೆಗೆ ನೋಡದೆಯೇ ಉತ್ತರವಿತ್ತರು.

ವಿಶಾಲವೂ ನಿರ್ಜನವೂ ಆದ ಗುಂಡಿ ತುಂಬಿದ ಬೀದಿಗಳಲ್ಲಿ ಹನ್ನೊಂದು ಗಂಟೆಯ ಸೂರ್ಯ ನಿಶ್ಚಲವಾಗಿ ನಿಂತಿದ್ದ, ಇಡೀ ನಗರ ಸೆಕೆಯಿಂದ ಏದುಸಿರು ಬಿಡುತ್ತಿತ್ತು. ಬಿದ್ದುದರಿಂದ ಚೇತರಿಸಿಕೊಳ್ಳಲು ಅಲ್ಲಿ ಆವಶ್ಯಕತೆಗಿಂತ ಹೆಚ್ಚು ಕಾಲ ಕಳೆಯಬೇಕಾಗಿರದಿದ್ದುದರಿಂದ ಜನರಲ್‌ರಿಗೆ ಸಂತಸವಾಗಿತ್ತು; ಕ್ಷುಭಿತ ಸಮುದ್ರದಲ್ಲಿ ದೋಣಿಯಲ್ಲಿ ಹೋಗಲು ಅವರಿಗೆ ಆಸೆ, ಏಕೆಂದರೆ ಸಮುದ್ರ ಪಯಣದಲ್ಲಿ ಹೊಟ್ಟೆ ತೊಳಸುವುದು ದೇಹವನ್ನು ಪಿತ್ಥದಿಂದ ಶಮನಗೊಳಿಸಿ ಹೊಟ್ಟೆಯನ್ನು ಶುದ್ಧಿಮಾಡಲು ಒಳ್ಳೆಯದೆಂದು ಫ್ರೆಂಚ್ ಕೈಪಿಡಿ ಸೂಚಿಸಿತ್ತು. ಬಿದ್ದುದರಿಂದ ಅವರು ಬೇಗ ಚೇತರಿಸಿಕೊಂಡರು, ಆದರೆ ದೋಣಿಗೆ ಏರ್ಪಾಟು ಮಾಡುವುದಾಗಲೀ, ಕೆಟ್ಟ ಹವೆಯನ್ನು ನಿಯಂತ್ರಿಸುವುದಾಗಲೀ ಅಷ್ಟು ಸುಲಭವಾಗಿರಲಿಲ್ಲ.

ತಮ್ಮ ದೇಹದ ಮೊಂಡುತನದಿಂದ ಕ್ರುದ್ಧರಾದ ಜನರಲ್‌ರು ಯಾವುದೇ ಸಾಮಾಜಿಕ ಅಥವಾ ರಾಜಕೀಯ ಚಟುವಟಕೆಯಲ್ಲಿ ಭಾಗವಹಿಸುವ ಶಕ್ತಿ ಹೊಂದಿರಲಿಲ್ಲ, ಅವರು ಬರಮಾಡಿಕೊಳ್ಳುತ್ತಿದ್ದ ಸಂದರ್ಶಕರೆಂದರೆ ವಿದಾಯ ಹೇಳಲು ಬರುತ್ತಿದ್ದ ಹಳೆಯ ಗೆಳೆಯರನ್ನಷ್ಟೆ. ಮನೆ ವಿಶಾಲವಾಗಿತ್ತು, ನವೆಂಬರ್‌ನಲ್ಲಿ ಎಷ್ಟು ಸಾಧ್ಯವೋ ಅಷ್ಟು ತಂಪಾಗಿತ್ತು, ಅದರ ಒಡೆಯರು ಅದನ್ನು ಅವರಿಗಾಗಿ ಖಾಸಗಿ ಆಸ್ಪತ್ರೆಯೆಂಬಂತೆ ಮಾರ್ಪಡಿಸಿದ್ದರು. ಯುದ್ಧ ನಾಶಪಡಿಸಿದ್ದ ಅನೇಕರಲ್ಲಿ ಡಾನ್ ಬಾರ್ತೊಲೋಮಿ ಮೊಲಿನಾರಿಸ್ ಕೂಡ ಒಬ್ಬ, ಅವನಲ್ಲಿ ಉಳಿದಿದ್ದುದು ಪೋಸ್ಟ್ ಮಾಸ್ಟರ್ ಕೆಲಸ ಮಾತ್ರ, ಅದನ್ನೂ ಅವನು ಕಳೆದ ಹತ್ತು ವರ್ಷಗಳಿಂದ ಸಂಬಳವಿಲ್ಲದೆ ನಿರ್ವಹಿಸುತ್ತಿದ್ದ. ಅವನು ಪರಮ ದಯಾಳು, ಜನರಲ್‌ರು ಕಳೆದ ಬಾರಿ ಇಲ್ಲಿಗೆ ಬಂದಾಗಿನಿಂದ ಅವನನ್ನು ಪಾಪ ಎಂದೇ ಕರೆಯುತ್ತಿದ್ದರು. ಮನಸೆಳೆಯುವ ಚೆಲುವುಳ್ಳ ಅವನ ಹೆಂಡತಿ ಮಾತೃಯಾಜಮಾನ್ಯದ ಪ್ರತೀಕದಂತಿದ್ದಳು; ಕಸೂತಿ ಕೆಲಸ ಮಾಡಿ ಅದನ್ನು ಯೂರೋಪಿಯನ್ ಹಡಗುಗಳಲ್ಲಿ ಒಳ್ಳೆಯ ಬೆಲೆಗೆ ಮಾರುತ್ತಿದ್ದಳು; ಆದರೆ ಜನರಲ್‌ರು ಇಲ್ಲಿಗೆ ಬಂದಾಗಿನಿಂದ ತನ್ನ ಸಮಯವನ್ನೆಲ್ಲ ಅವರಿಗಾಗಿ ಮೀಸಲಿಟ್ಟಿದ್ದಳು. ಎಷ್ಟರವರೆಗೆಂದರೆ, ಜನರಲ್‌ರ ಎದೆಯ ಸಮಸ್ಯೆಗಳಿಗೆ ಒಳ್ಳೆಯದೆಂದು ಲೆಂಟಿಲ್‌ಗೆ ಆಲಿವ್ ಎಣ್ಣೆಯನ್ನು ಹಾಕಿ, ಕೇವಲ ದಾಕ್ಷಿಣ್ಯಕ್ಕಾಗಿ ಅವರು ತಿನ್ನುವಂತೆ ಆದದ್ದರಿಂದ ಈ ಬಗ್ಗೆ ಅವಳು ಫೆರ್ನಾಂಡೋ ಜೊತೆ ಸಂಘರ್ಷಕ್ಕೂ ಒಳಗಾಗಬೇಕಾಯಿತು.

ಈ ಸಮಯದಲ್ಲಿ ಜನರಲ್‌ರನ್ನು ಬಾಧಿಸಿದ್ದೆಂದರೆ ಹರಿದು ಹೋದ ಕಣ್ಣೀರ ನಾಳ; ಕ್ಯಾಮೋಮೈಲ್ ಸೊಪ್ಪಿನಿಂದ ಕಣ್ಣುಗಳನ್ನು ತೊಳೆದುಕೊಳ್ಳುವವರೆಗೂ ಇದರಿಂದಾಗಿ ಮಂಪರಿನಲ್ಲಿರುವಂತಿರಬೇಕಾಗಿತ್ತು. ಆನಂತರ ಅವರು ಇಸ್ಪೀಟಿಗೆ ಕುಳಿತುಕೊಳ್ಳುತ್ತಿದ್ದರು, ಒಂದಷ್ಟು ಹೊತ್ತು ಮಾತ್ರವೇ, ಕಾರಣ ಸೊಳ್ಳೆಯ ಕಾಟ ಮತ್ತು ಸಂಜೆಯ ಉಪಾಧಿಗಳು. ಮನೆಯೊಡೆಯನ ಜೊತೆಗೆ ಅರೆ ಗಂಭಿರ ಚರ್ಚೆಯಲ್ಲಿ ತೊಡಗಿ, ಪಶ್ಚಾತ್ತಾಪ ಮನೋಭಾವದ ಒಂದು ಕ್ಷಣದಲ್ಲಿ ಅವರು, ಸಾವಿರ ದಾವೆಗಳಲ್ಲಿ ಗೆಲ್ಲುವುದಕ್ಕಿಂತ ಒಂದು ಒಳ್ಳೆಯ ಒಪ್ಪಂದವೇ ಮೇಲು ಎಂದು ಹೇಳಿ ಎಲ್ಲರಲ್ಲಿಯೂ ಅಚ್ಚರಿ ಮೂಡಿಸಿದ್ದರು.

"ರಾಜಕೀಯದಲ್ಲೂನಾ?" ಎಂದು ಕೇಳಿದ್ದ ಸೆನೋರ್ ಮೊಲಿನಾರಿಸ್.

"ಎಲ್ಲಕ್ಕೂ ಮಿಗಿಲಾಗಿ ರಾಜಕೀಯದಲ್ಲಿಯೇ: ಸಟಾಂಡರ್ ಜೊತೆ ಸಂಧಾನ ಮಾಡಿಕೊಳ್ಳದೆ ನಾವೆಲ್ಲ ಹಾಳಾದೆವು" ಎಂದರು ಜನರಲ್‌ರು.

"ನಿಮಗೆ ಸ್ನೇಹಿತರಿರುವವರೆಗೂ ಭರವಸೆ ಇರುತ್ತೆ" ಎಂದ ಮೊಲಿನಾರಿಸ್.

"ಅದಕ್ಕೆ ವ್ಯತರಿಕ್ತವಾಗಿ, ನನ್ನ ಔನ್ನತ್ಯವನ್ನು ಹಾಳುಗೆಡವಿದ್ದು ಶತ್ರುಗಳ ದ್ರೋಹವಲ್ಲ ಸ್ನೇಹಿತರ ಪ್ರಯತ್ನ. ನನ್ನನ್ನು ಒಕಾನಾ ಸಮಾವೇಶದ ದುರಂತಕ್ಕೆ, ರಾಜತ್ವದ ವಿನಾಶಕ್ಕೆ ತೊಡಗಿಸಿದ್ದು ಅವರೇ, ಮೊದಲು ನನ್ನನ್ನು ಮರುಚುನಾವಣೆಗೆ ಸಿಕ್ಕಿಸಿ ಅದೇ ವಾದದಿಂದ ಪದವಿತ್ಯಾಗಮಾಡುವ ಪರಿಸ್ಥಿತಿ ತಂದದ್ದು ಅವರೇ, ಇಲ್ಲಿರಲು ಯಾವುದೇ ಕಾರಣವಿಲ್ಲದಿದ್ದರೂ ನನ್ನನ್ನು ಈ ದೇಶದಲ್ಲಿ ಬಂದಿಯಾಗಿಸಿರುವುದೂ ಅವರೇ" ಎಂದರು ಜನರಲ್.

ಮಳೆ ಜಡಿಯಾಯಿತು, ತಂಡಿಯಿಂದ ಅವರ ನೆನಪು ಬಿರುಕು ಬಿಡುವಂತಾಯಿತು. ರಾತ್ರಿಯ ಹೊತ್ತು ಕೂಡ ಸೆಕೆಯು ಎಷ್ಟು ತೀವ್ರವಾಗಿತ್ತೆಂದರೆ, ಜನರಲ್ ತಮ್ಮ ಒದ್ದೆಗೊಂಡ ಅಂಗಿಯನ್ನು ಪದೇ ಪದೇ ಬದಲಾಯಿಸಬೇಕಾಯಿತು. "ಹಂಡೆಯಲ್ಲಿ ಬೇಯುತ್ತಿರುವ ಹಾಗಾಗಿದೆ" ಎಂದವರು ಹೇಳುತ್ತಿದ್ದರು. ಒಂದು ಮಧ್ಯಾಹ್ನ ಮೂರು ಗಂಟೆಗಿಂತ ಹೆಚ್ಚು ಕಾಲ ಆ ಕೊಳಕು ಪ್ರದೇಶದ ಬೀದಿಗಳಲ್ಲಿನ ಕಸಕಡ್ಡಿಗಳನ್ನೇ ನೋಡುತ್ತ ಬಾಲ್ಕನಿಯಲ್ಲಿ ಕುಳಿತಿದ್ದರು, ಆಗ ಮನೆಗಳನ್ನೇ ಬುಡಮೇಲು ಮಾಡುವಂತೆ ಭಾರಿ ಮಳೆ ಸುರಿದು ಮನೆಯ ಪಾತ್ರೆಗಳೂ ಸತ್ತ ಪ್ರಾಣಿಗಳೂ ಕೊಚ್ಚಿಕೊಂಡು ಹೋಗುವಂತಾಯಿತು.

ನಗರಪಾಲಕ ಕಮಾಂಡರ್ ಜುವಾನ್ ಗ್ಲೆನ್ ಬಿರುಗಾಳಿಯ ನಡುವೆಯೇ ಬಂದು, ಜನರಲ್‌ರು ಸೊಲೆದಾದ್‌ನಲ್ಲಿ ಕತ್ತರಿಸಿ ಹಾಕಿದ್ದ ಕೂದಲನ್ನು ಪವಿತ್ರ ಅವಶೇಷವೆಂದು ಮಾರುತ್ತಿದ್ದ ಸೆನೋರ್ ವಿಸ್ಬಾಲ್‌ರ ಸೇವೆಯಲ್ಲಿದ್ದ ಒಬ್ಬ ಹೆಂಗಸನ್ನು ಬಂಧಿಸಿರುವುದಾಗಿ ತಿಳಿಸಿದರು. ಇದನ್ನು ಕೇಳಿದ ಅವರಿಗೆ ತಮ್ಮದೆಲ್ಲ ಮಾರಾಟದ ಸರಕಾಗುತ್ತಿರುವುದರ ಬಗ್ಗೆ ಅತೀವ ಸಂಕಟವುಂಟಾಯಿತು.

"ನಾನು ಆಗಲೇ ಸತ್ತಿರುವೆನೆಂದೇ ಜನ ಭಾವಿಸಿದ್ದಾರೆ" ಎಂದರು.

ಸೆನೋರ ಮೊಲಿನಾರಿಸ್ ಅವಳ ತೂಗುಕುರ್ಚಿಯನ್ನು ಜನರಲ್‌ರ ಇಸ್ಪೀಟು ಮೇಜಿನವರೆಗೂ ದರದರ ಎಳೆದು ತಂದು ಆಡಿದ ಮಾತನ್ನು ಅವಳೂ ಕೇಳುವ ಹಾಗೆ ಮಾಡಿದ್ದರು.

"ಜನ ನಿಮ್ಮನ್ನು ಸಂತನೆಂದೇ ಭಾವಿಸುತ್ತಾರೆ, ನೀವು ಸಂತರು ತಾನೇ!" ಎಂದಳವಳು.

"ಸರಿ, ಅದು ನಿಜವಾದರೆ, ಆ ಬಡಪಾಯಿಯನ್ನು ಬಿಟ್ಟುಬಿಡಿ" ಎಂದರು ಅವರು.

ಅವರು ಮತ್ತೆ ಓದಲಿಲ್ಲ. ಪತ್ರಗಳನ್ನು ಬರೆಯಬೇಕೆನ್ನಿಸಿದರೆ ಫೆರ್ನಾಂಡಿಸ್‌ಗೆ ಸೂಚನೆ ನೀಡುವುದರಲ್ಲಿ ತೃಪ್ತರಾಗುತ್ತಿದ್ದರು, ತಾವು ಸಹಿ

ಮಾಡುವ ಮುಂಚೆ ಅವರು ಪತ್ರಗಳನ್ನು ಓದುತ್ತಿರಲೂ ಇಲ್ಲ. ಬೆಳಿಗ್ಗೆ ಪೂರ್ತಿ ಮರಳುಗಾಡಿನಂತಿದ್ದ ಬೀದಿ, ಭೋರೆಂದು ನೀರು ಹರಿಯುತ್ತಿದ್ದ ಚರಂಡಿ, ಒಣಗಿದ ಮೀನನ್ನು ಮಾರುತ್ತಿದ್ದ ಲವಲವಿಕೆಯ ಕಪ್ಪು ಹೆಂಗಸು, ಹನ್ನೊಂದಕ್ಕೆ ಸರಿಯಾಗಿ ಶಾಲೆ ಬಿಟ್ಟು ಬರುವ ಮಕ್ಕಳು, ಹರಿದು ತೇಪೆ ಹಾಕಿದ ನಿಲುವಂಗಿ ತೊಟ್ಟು ಬಿಸಿಲಲ್ಲಿ ಕರಗಿಹೋಗುತ್ತಿದ್ದ ಚರ್ಚ್ ವೇದಿಕೆಯಿಂದ ತಮ್ಮನ್ನು ಆಶೀರ್ವಸಿದ್ದ' ಪಾದ್ರಿ– ಇವುಗಳನ್ನೇ ನೋಡುತ್ತ ಬಾಲ್ಕನಿಯಲ್ಲೇ ಕಾಲ ಕಳೆದರು. ಒಂದು ಗಂಟೆಗೆ, ಇತರರು ಮಂಪರಿನಲ್ಲಿದ್ದಾಗ, ಮಾರುಕಟ್ಟೆಯ ಟರ್ಕಿ ಡೇಗೆಗಳು ತಮ್ಮ ನೆರಳಿನಿಂದಲೇ ಹೆದರಿ ಹಾರಿಹೋಗುವಂತೆ ಮಾಡುತ್ತ, ಅರ್ಧ ಸತ್ತಂತಿದ್ದು ನಾಗರಿಕ ಉಡುಪು ಧರಿಸಿದ್ದರೂ ಗುರುತಿಸಿದ ಜನರಿಗೆ ನಮಸ್ಕರಿಸುತ್ತ ಕೊಚ್ಚೆ ತುಂಬಿದ ಚರಂಡಿಯ ಗುಂಟ ನಡೆಯುತ್ತ ನದಿಯ ರೇವಿನೆದುರು ಮಣ್ಣುಬಿದಿರುಗಳಿಂದ ವಿಶಾಲವಾಗಿ ನಿರ್ಮಿತವಾದ ಶಸ್ತ್ರಪಡೆಯ ಬಿಡಾರದವರೆಗೂ ಸಾಗಿದರು. ಅವರಿಗೆ ಪಡೆಗಳ ನೈತಿಕ ಸ್ಥೈರ್ಯದ ಬಗ್ಗೆ ಆತಂಕವಿತ್ತು, ಇದಕ್ಕೆ ಕಾರಣ ಇಡೀ ಬಿಡಾರದಲ್ಲಿ ಇಟ್ಟಾಡುತ್ತಿದ್ದ ಅವ್ಯವಸ್ಥೆ ಮತ್ತು ಮೂಗನ್ನು ಚುಚ್ಚುತ್ತಿದ್ದ ಗಬ್ಬು ವಾಸನೆಗಳ ಮೂಲಕ ಪಡೆಗಳ ಜೋಭದ್ರತೆ ಕಣ್ಣಿಗೆ ರಾಚುತ್ತಿತ್ತು. ಆದರೆ ಉಸಿರು ಕಟ್ಟಿಸುವ ಮಧ್ಯಾಹ್ನದ ಬಿಸಿಲಿನ ಝಳದಿಂದ ಮಂಕಾಗಿದ್ದ ಒಬ್ಬ ಸಾರ್ಜೆಂಟ್ ಸತ್ಯ ಹೇಳಿ ಜನರಲ್‌ರನ್ನು ದಿಗ್ಭ್ರಮೆಗೊಳಿಸಿದ.

“ವಿಷಯ ನೈತಿಕ ಸ್ಥೈರ್ಯವಲ್ಲ, ಜನರಲ್, ಗನೋರಿಯ” ಎಂದ ಅವನು.

ಆಗ ಅವರಿಗೆ ವಾಸ್ತವ ತಿಳಿಯಿತು. ಸ್ಥಳೀಯ ವೈದ್ಯರುಗಳು ಎನೀಮ ಮತ್ತು ಉಪಶಮನಕಾರಕಗಳನ್ನು ಕೊಟ್ಟು ತಮ್ಮ ವೈಜ್ಞಾನಿಕ ಪರಿಕರವನ್ನು ಮುಗಿಸಿ ಜವಾಬ್ದಾರಿಯನ್ನು ಸೈನಿಕ ಅಧಿಕಾರಿಗಳ ಭುಜಗಳ ಮೇಲೆ ವರ್ಗಾಯಿಸಿದ್ದರು, ಆದರೆ ಅವರಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಇಡೀ ನಗರಕ್ಕೆ ಈ ಅಪಾಯದ ಅರಿವುಂಟಾಗಿತ್ತು, ಗಣರಾಜ್ಯದ ಮಹಾ ಸೇನೆಯು ಮಹಾರೋಗದ ದೂತನಂತೆ ಕಾಣಿಸಿತ್ತು. ಜನರಲ್‌ರಿಗೆ ಅಂದುಕೊಂಡಷ್ಟು ದಿಗ್ಭ್ರಮೆಯಾಗದಿದ್ದರೂ, ಒಂದೇ ಚಿಟಿಕೆಯಲ್ಲಿ ಪರಿಹಾರ ಸೂಚಿಸಿದರು, ಅದೆಂದರೆ ಕಟ್ಟುನಿಟ್ಟಿನ ಸಂಪರ್ಕನಿರೋಧ.

ಒಳ್ಳೆಯದೋ ಕೆಟ್ಟುದೋ ಸುದ್ದಿ ತಿಳಿಯದೆ ಅವರಲ್ಲಿ ಹತಾಶೆ ಉಂಟಾದ ಕಾಲದಲ್ಲಿ, ಸಂಟಾ ಮಾರ್ಟದಲ್ಲಿದ್ದ ಜನರಲ್ ಮಾಂಟಿಲ ಕುದುರೆ ಸವಾರನ ಮೂಲಕ ಅಸ್ಪಷ್ಟ ಸಂದೇಶವೊಂದನ್ನು ಕಳಿಸಿದ್ದರು: “ವ್ಯಕ್ತಿ ನಮ್ಮವನು, ಸಂಧಾನಗಳು ಚೆನ್ನಾಗಿ ಸಾಗುತ್ತಿವೆ.” ಈ ಸಂದೇಶ ಜನರಲ್‌ರಿಗೆ ವಿಚಿತ್ರವೆನಿಸಿತು, ಅದರ ರಚನೆ ಅಸ್ತವ್ಯಸ್ತವಾಗಿತ್ತು, ಹೀಗಾಗಿ ಅದು ಬಹಳ

ಮುಖ್ಯವಾದದ್ದಾಗಿ, ಪ್ರಾಯಶಃ ರಯೋಹಚ ಹೋರಾಟಕ್ಕೆ ಸಂಬಂಧಿಸಿದ್ದಿರಬಹುದು ಎನ್ನಿಸಿ ಬೇರೆಯವರು ನೀಡದ ಐತಿಹಾಸಿಕ ಪ್ರಾಮುಖ್ಯವನ್ನವರು ಅದಕ್ಕೆ ನೀಡಿದ್ದರು.

ಸ್ಪೈನ್ ವಿರುದ್ಧದ ಮೊದಮೊದಲ ಸಂಚುಗಳಲ್ಲಿ ಸಂಕೇತ ಸಂದೇಶಗಳು ಬಹು ಪ್ರಯೋಜನಕಾರಿಯಾಗಿ ಪರಿಣಮಿಸಿದ್ದವು; ಆದರೆ ಸರ್ಕಾರ ಈ ವ್ಯವಸ್ಥೆಯನ್ನು ಹಾಳುಗೆಡವಿದಂದಿನಿಂದ ಉದ್ದೇಶಪೂರ್ವಕವಾಗಿ ಸಂದೇಶಗಳನ್ನು ಅಸ್ಪಷ್ಟಗೊಳಿಸುವುದು, ಸುರಕ್ಷತೆಯ ದೃಷ್ಟಿಯಿಂದ ಸೈನ್ಯ ಸಂದೇಶಗಳನ್ನು ಅಸ್ತವ್ಯಸ್ತಗೊಳಿಸುವುದು ಸಾಮಾನ್ಯ ಪರಿಪಾಟವಾಯಿತು. ಸೈನ್ಯವು ತನ್ನನ್ನು ವಂಚಿಸುತ್ತಿದೆ ಎಂಬುದು ಅವರು ಬಹು ಕಾಲದಿಂದ ಹೊಂದಿದ್ದ ಭಾವನೆ, ಇದನ್ನು ಮಾಂಟಿಲ ಕೂಡ ಒಪ್ಪಿದ್ದುರು, ಇದರಿಂದಾಗಿ ಈಗ ಬಂದ ಸಂದೇಶ ಮತ್ತಷ್ಟು ಗೊಂದಲವನ್ನುಂಟುಮಾಡಿ ಜನರಲ್‌ರ ಇರುಸುಮುರಿಸನ್ನು ಹೆಚ್ಚಿಸಿತು. ಇದರಿಂದ ಅವರು ಜೋಸೆ ಪೆಲಾಸಿಯಸ್ ಅನ್ನು, ತಾಜಾ ಹಣ್ಣು ತರಕಾರಿಗಳು ಹಾಗೂ ಇಲ್ಲಿ ಸಿಕ್ಕದಿದ್ದ ಒಣ ಶೆರಿ ಮತ್ತು ಮಾಸಲು ಬೀರ್‌ಗಳನ್ನು ತರುವ ನೆವದಲ್ಲಿ ಸಂಟಾ ಮಾರ್ತಾಗೆ ಕಳಿಸಿದರು. ಅದರ ಹಿಂದಿನ ನಿಜವಾದ ಉದ್ದೇಶ ರಹಸ್ಯವನ್ನು ಭೇದಿಸುವುದು. ಅದು ಸರಳವಾಗಿತ್ತು: ಮಾಂಟಿಲ ಅದನ್ನು ಅರ್ಥೈಸಿದ್ದು ಎಂದರೆ ಹೊಂಡದ ಸೆರೆಯಲ್ಲಿದ್ದ ಮಿರಾಂಡ ಲಿಂಡ್ಸೆಯ ಗಂಡನನ್ನು ಕಾರ್ಟೆಜೆನ ಸೆರೆಗೆ ವರ್ಗಾಯಿಸಬೇಕಾಗಿದೆ ಮತ್ತು ಅವನಿಗೆ ಇನ್ನು ಕೆಲವೇ ದಿನಗಳಲ್ಲೇ ಕ್ಷಮಾದಾನ ನೀಡಲಾಗುವುದು ಎಂದು. ಈ ಒಗಟಿನ ಸರಳತೆ ಜನರಲ್‌ರನ್ನು ಎಷ್ಟು ವಂಚಿಸಿತ್ತೆಂದರೆ ತಮಗೆ ನೆರವಾದವನಿಗೆ ಸಹಾಯ ಮಾಡಿದ ಸಂತೋಷವೂ ಅವರಿಗೆ ಇಲ್ಲದಾಯಿತು.

ನವೆಂಬರ್ ಆರಂಭದಲ್ಲಿ ಸಂಟಾ ಮಾರ್ತಾದ ಬಿಷಪ್ ತಮ್ಮ ಕೈಯಾರೆ ಪತ್ರವೊಂದನ್ನು ಬರೆದು, ರಯೋಹಚವನ್ನು ಬೆಂಬಲಿಸಿ ಒಂದು ವಾರದ ಹಿಂದೆ ಹತ್ತಿರದ ಲ ಸಿಯೆನ್‌ಗ ಪಟ್ಟಣದಲ್ಲಿ ನಡೆದ ನಾಗರಿಕ ಪ್ರತಿಭಟನೆಯ ಸಂದರ್ಭದ ಕಾವನ್ನು ತಾವು ಧ್ಯಾನದ ಬಲದಿಂದ ಶಮನಗೊಳಿಸಿದ್ದಾಗಿ ತಿಳಿಸಿದ್ದರು. ಜನರಲ್‌ರೂ ತಮ್ಮ ಕೈಯಾರೆ ಪತ್ರ ಬರೆದು ಅವರಿಗೆ ತಮ್ಮ ಕತಜ್ಞತೆ ತಿಳಿಸಿದರು, ಹಾಗೆ ಮಾಡಲು ಮಾಂಟಿಲಗೂ ಸೂಚಿಸಿದರು, ಆದರೆ ಬಿಷಪ್ ಈ ವಿಷಯದಲ್ಲಿ ತೋರಿಸಿದ ಅವಸರ ಅವರಿಗೆ ಸರಿ ತೋರಲಿಲ್ಲ.

ಜನರಲ್ ಮತ್ತು ಮಾನ್ಯ ಎಸ್ಟೆವೆಝ್ ಇವರ ನಡುವಣ ಸಂಬಂಧ ಎಂದೂ ಸುಲಲಿತವಾಗಿರಲ್ಲಿ, ಸೌಮ್ಯ ಧರ್ಮದಂಡದಡಿಯಲ್ಲಿ ಬಿಷಪ್‌ರು ಒಬ್ಬ ಆವೇಶಪೂರಿತರಾದ ರಾಜಕಾರಣಿಯಾಗಿದ್ದರೇ ವಿನಾ ಅವರಿಗೆ

ತಿಳಿವಳಿಕೆ ಸಾಲದು; ಎದೆಯಾಳದಲ್ಲಿ ಗಣರಾಜ್ಯಕ್ಕೆ ವಿರುದ್ಧವಾಗಿದ್ದರು, ಖಂಡದ ಐಕ್ಯವನ್ನು ಇಷ್ಟಪಡುತ್ತಿರಲಿಲ್ಲ, ಒಟ್ಟಾರೆ ಅವರು ಜನರಲ್‌ರಿಗೆ ಪ್ರಿಯವಾಗಿದ್ದ ಯಾವ ರಾಜಕೀಯ ನಿಲವಿನ ಬಗ್ಗೆಯೂ ಒಲವಿರಿಸಿಕೊಂಡವರಲ್ಲ. ಅಡ್ಮಿರಬಲ್ ಕಾಂಗ್ರೆಸ್ ಉಪಾಧ್ಯಕ್ಷರಾಗಿದ್ದ ಅವರು ಸ್ಯೂಕ್ರ್‌ನ ಅಧಿಕಾರವನ್ನು ವಿರೋಧಿಸುವುದೇ ತಮ್ಮ ನೈಜ ಕರ್ತವ್ಯವೆಂದು ಭಾವಿಸಿದ್ದರು, ಆದರೆ ಪದಾಧಿಕಾರಿಗಳ ಚುನಾವಣೆಯಲ್ಲಿಯೂ ವೆನಿಝೂಲದೊಂದಿಗಿನ ಸಂಘರ್ಷಕ್ಕೆ ಒಂದು ಸಮರ್ಪಕ ಪರಿಹಾರ ಹುಡುಕುವುದರಲ್ಲಿ ಅವರಲ್ಲಿ ಸಾಮರ್ಥ್ಯಕ್ಕಿಂತ ಕಹಿಯೇ ತುಂಬಿಕೊಂಡಿತ್ತು. ಇದರ ಅರಿವಿದ್ದ ಸೆನೋರ್ ಮತ್ತು ಸೆನೋರ ಮೋಲಿನಾರಿಸ್ ಅವರಿಗೆ ಜನರಲ್‌ರು ನಾಲ್ಕು ಗಂಟೆಯ ಚಹಾಕ್ಕೆ ಭವಿಷ್ಯವಾಣಿಯಂತಹ ಮಾತಿನೊಂದಿಗೆ ಸ್ವಾಗತಿಸಿದಾಗ ಆಶ್ಚರ್ಯವೆನಿಸಲಿಲ್ಲ:

"ಬಿಷಪ್‌ರ ಪ್ರಯತ್ನದಿಂದಾಗಿ ಕ್ರಾಂತಿಗಳು ಕೊನೆಗೊಳ್ಳುವಂತಹ ದೇಶದಲ್ಲಿ ನಮ್ಮ ಮಕ್ಕಳ ಗತಿ ಏನಾಗಬೇಕು?"

ಸೆನೋರ ಮೋಲಿನಾರಿಸ್ ಈ ಪ್ರಶ್ನೆಗೆ ವಿಶ್ವಾಸಪೂರ್ವಕವಾಗಿ ಆದರೆ ದೃಢತೆಯಿಂದ ಹೀಗೆ ಉತ್ತರಿಸಿದರು: "ಮಹಾಸ್ವಾಮಿಯವರ ಮಾತು ನಿಜವಾಗಿರಬಹುದಾದರೂ, ಅದನ್ನು ಕೇಳಲು ನಾನು ಸಿದ್ಧನಿಲ್ಲ. ಯಾಕಂದರೆ ನಾನೊಬ್ಬ ಹಳೆ ಕಾಲದ ಕ್ಯಾಥೋಲಿಕ್."

ಬಹುಬೇಗನೆ ಚೇತರಿಸಿಕೊಂಡು ಅವರು ಹೇಳಿದರು, "ಬಿಷಪ್‌ರಿಗಿಂತ ಹಳೆ ಕಾಲದೋನು, ದೇವರ ಪ್ರೀತಿಗಾಗಿ ಅಲ್ಲದೆ ಕಾರ್ಟಜೆನ ವಿರುದ್ಧದ ಯುದ್ಧದಲ್ಲಿ ತಮ್ಮ ಧರ್ಮಪ್ರಾಂತದ ಒಕ್ಕಟ್ಟನ್ನು ಕಾಪಾಡುವುದಕ್ಕಾಗಿ ಲ ಸಿಯೆಂಗದಲ್ಲಿ ಇನ್ನೂ ಶಾಂತಿ ಸುವ್ಯವಸ್ಥೆಯನ್ನ ಸ್ಥಾಪಿಸಿಲ್ಲ."

"ನಾವು ಇಲ್ಲಿಯೂ ಕಾರ್ಟಜೆನದ ದೌರ್ಜನಕ್ಕೆ ವಿರೋಧವಾಗಿದ್ದೇವೆ" ಎಂದರು ಸೆನೋರ್ ಮೋಲಾರಿಸ್.

"ಅದು ನಂಗೆ ಗೊತ್ತು, ಕೊಲಂಬಿಯದ ಪ್ರತಿಯೊಂದೂ ನಮಗೆ ಶತ್ರು ದೇಶವೇ."

ಪಿತ್ತಾಧಿಕ್ಯವನ್ನು ಸಮುದ್ರಕ್ಷೋಭೆಯ ಮೂಲಕ ಹೊರಹಾಕುವ ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲೆಂದು ಜನರಲ್ ಸಬಾನಿಲ ಬಂದರಿಗೆ ತಮಗಾಗಿ ಒಂದು ಸಣ್ಣ ದೋಣಿಯನ್ನು ಕಳಿಸಲು ಮಾಂಟಿಲಗೆ ಸೋಲೆದಾದ್‌ನಲ್ಲಿ ಹೇಳಿದ್ದರು. ಸ್ಪಾನಿಶ್ ಗಣರಾಜ್ಯದವರೂ ಕಮೋಡರ್ ಎಲ್ಬರ್ಸ್‌ನ ಪಾಲುದಾರರೂ ಆದ ಡಾನ್ ಜೋಕಿನ್ ದ ಮಿಯೆರ್ ಮ್ಯಾಗ್ಡಲೀನ ನದಿಯಲ್ಲಿ ಆಗಾಗ ಓಡಾಡುತ್ತಿದ್ದ ತಮ್ಮದೊಂದು ಉಗಿದೋಣಿಯನ್ನು ಕೊಡುವುದಾಗಿ ಭರವಸೆಯಿತ್ತದ್ದರಿಂದ ಮಾಂಟಿಲ

ತಡಮಾಡಿದ್ದರು. ಆದರೆ ಇದು ಅಸಾಧ್ಯವೆನಿನ್ನಿಸಿದಾಗ, ನವೆಂಬರ್ ಮಧ್ಯೆ ಅನಿರೀಕ್ಷಿತವಾಗಿ ಸಂಟಾ ಮಾರ್ತಾಗೆ ಬರಲು ಅದನ್ನೇ ಮಾಂಟಿಲ ಕಳಿಸಿದ್ದರು. ಈ ವಿಷಯ ತಿಳಿದ ಕ್ಷಣವೇ ಜನರಲ್‌ರು, ಈ ಸಂದರ್ಭವನ್ನು ತಾವು ದೇಶದಿಂದ ಹೊರಹೋಗಲು ಬಳಸಿಕೊಳ್ಳುವುದಾಗಿ ಬಹಿರಂಗಪಡಿಸಿದರು. "ಇಲ್ಲಿಯೇ ಸಾಯುವುದಕ್ಕಿಂತ ಬೇರೆಲ್ಲಾದರೂ ಹೋಗಲು ನಾನು ನಿರ್ಧರಿಸಿದ್ದೀನಿ" ಎಂದರು. ಆನಂತರ ಕ್ಯಾಮಿಲ್ ತಮಗಾಗಿ ಕಾಯುತ್ತಿರುವ ಮುನ್ಸೂಚನೆಯಿಂದ ಅಧೀರರಾದರು; ಸಮುದ್ರಕ್ಕೆದುರಾಗಿ ಹೂತುಂಬಿದ ಬಾಲ್ಕನಿಯ ಮೇಲಿಂದ ಕ್ಷಿತಜವನ್ನು ನೋಡುತ್ತ ನಿಟ್ಟುಸಿರಿನೊಂದಿಗೆ ಹೀಗೆಂದರು: "ಜಮೈಕದಲ್ಲಿ ನನ್ನನ್ನು ಪ್ರೀತಿಸುವವರಿದ್ದಾರೆ."

ಗಂಟುಮೂಟೆ ಸಿದ್ಧಪಡಿಸಲು ಅವರು ಜೋಸೆ ಪೆಲಾಸಿಯೋಸ್‌ಗೆ ಸೂಚಿಸಿದರು. ತಮ್ಮೊಡನೆ ಹೇಗಾದರೂ ಮಾಡಿ ತೆಗೆದುಕೊಂಡು ಹೋಗಬೇಕೆಂದಿದ್ದ ಕಾಗದಪತ್ರಗಳನ್ನು ಹುಡುಕುತ್ತ ಅಂದು ರಾತ್ರಿ ಬಹುಕಾಲದವರೆಗೆ ಎಚ್ಚರವಿದ್ದರು. ಸುಸ್ತಾಗಿ ಮೂರು ಗಂಟೆಗಳ ಕಾಲ ನಿದ್ರಿಸಿದರು. ಬೆಳಗಿನ ಜಾವ ಜೋಸೆ ಪೆಲಾಸಿಯೋಸ್ ಬಂದು ಆವತ್ತು ಸಂತರ ದಿನವೆಂದು ಹೇಳಿದಾಗಲೇ ಕಣ್ಣುಗಳನ್ನು ತೆರೆದ ಅವರಿಗೆ ತಾವೆಲ್ಲಿದ್ದೇವೆಂಬ ಅರಿವಾದದ್ದು.

"ನಾನು ಸಂಟಾ ಮಾರ್ತದಲ್ಲಿದ್ದ ಹಾಗೆ ಕನಸಾಯಿತು. ಅದೊಂದು ತುಂಬ ಶುಭ್ರವಾದ ಊರು, ಒಂದೇ ರೀತಿಯ ಬಿಳಿಯ ಮಹಲುಗಳು, ಆದರೆ ಬೆಟ್ಟ ಮಧ್ಯೆ ಇದ್ದದ್ದರಿಂದ ಸಮುದ್ರ ಕಾಣಿಸ್ತಿರಲಿಲ್ಲ" ಎಂದರು.

"ಹಾಗಾದರೆ ಆ ಊರು ಸಂಟಾ ಮಾರ್ತ ಅಲ್ಲ, ಕ್ಯಾರಕಾಸ್" ಎಂದ ಜೋಸೆ ಪೆಲಾಸಿಯೋಸ್.

ಕನಸು ಜನರಲ್‌ರು ಜಮೈಕಕ್ಕೆ ಹೋಗುವುದಿಲ್ಲವೆಂಬುದನ್ನು ಸೂಚಿಸಿತ್ತು. ಅಂದು ಬೆಳಗಿನ ಜಾವದಿಂದಲೇ ಫರ್ನಾಂಡೋ ಬಂದರಿನಲ್ಲಿದ್ದು ಪ್ರಯಾಣದ ಆವಶ್ಯಕತೆಗಳಿಗಾಗಿ ವ್ಯವಸ್ಥೆ ಮಾಡುತ್ತಿದ್ದ, ಮರಳಿ ಬಂದಾಗ ತನ್ನ ಚಿಕ್ಕಪ್ಪ ವಿಲ್ಸನ್‌ಗೆ ಹೇಳಿ ಪತ್ರವೊಂದನ್ನು ಬರೆಸುತ್ತಿದ್ದುದು ಕಾಣಿಸಿತು; ಪತನಗೊಂಡಿದ್ದ ಸರ್ಕಾರ ನೀಡಿದ್ದ ಹಳೆಯ ರಹದಾರಿಪತ್ರ ಈಗ ಕೆಲಸಕ್ಕೆ ಬಾರದುದಾಗಿದ್ದರಿಂದ ತಮಗೆ ಹೊಸ ರಹದಾರಿಪತ್ರ ನೀಡಲು ಊರ್ಡಾನೆಟಗೆ ಬರೆದ ಪತ್ರ ಅದು. ತಮ್ಮ ಪ್ರಯಾಣವನ್ನು ರದ್ದು ಮಾಡಿದ್ದಕ್ಕೆ ಅವರಿತ್ತ ಒಂದೇ ಕಾರಣ ಅದು.

ಆದರೆ ಎಲ್ಲರಿಗೂ ಅರ್ಥವಾಗಿದ್ದುದೆಂದರೆ, ಪ್ರಯಾಣ ರದ್ದತಿಗೆ ನಿಜವಾದ ಕಾರಣ ರಯೋಚಹದಲ್ಲಿನ ಕಾರ್ಯಾಚರಣೆಗಳ ಬಗ್ಗೆ ಅಂದು ಬೆಳಿಗ್ಗೆ ಬಂದಿದ್ದ ಸುದ್ದಿ, ಹಿಂದಿನ ವರದಿಗಳು ತಂದಿದ್ದ ಸನ್ನಿವೇಶದ

ದುರ್ಭರತೆಯನ್ನು ಅದು ಹೆಚ್ಚಿಸಿತ್ತು. ದೇಶದಲ್ಲಿ ಸಮುದ್ರಗಳ ನಡುವಣ ಕಂದರ ನಿರ್ಮಾಣಗೊಳ್ಳುತ್ತಿತ್ತು, ಅಂತಃಕಲಹದ ಸೂಚನೆಗಳು ಅದರ ನಿರ್ನಾಮವನ್ನು ಸಂಕೇತಿಸುತ್ತಿದ್ದವು; ಹೀಗಾಗಿ ದೇಶದ ಸಂದಿಗ್ಧಕಾಲದಲ್ಲಿ ಓಡಿಹೋಗುವುದು ಜನರಲ್‌ರಿಗೆ ಸರಿ ತೋರಿರಲಿಲ್ಲ. "ರಯೋಹಚವನ್ನು ಉಳಿಸಿಕೊಳ್ಳಲು ನಾವು ಮಾಡಲಾರದ ತ್ಯಾಗ ಯಾವುದೂ ಇಲ್ಲ" ಎಂದರವರು. ವಾಸಿಯಾಗದ ಕಾಯಿಲೆಗಳಿಗಿಂತ ಹೆಚ್ಚಾಗಿ ಈ ಸುದ್ದಿಯಿಂದ ವಿಚಲಿತರಾಗಿದ್ದ ತಮ್ಮ ರೋಗಿಗಿಂತ  ಕ್ಷುಬ್ಧರಾದ ಡಾ. ಗ್ಯಾಸ್ಟೆಲ್‌ಬೋಂಡೋ ಅವರಿಗೆ ಹೀಗೆಂದರು: "ಜಗತ್ತಿನ ಕೊನೆ ಸನ್ನಿಹಿತವಾಗ್ತಿದೆ, ಹೀಗಿರೋವಾಗ ನಿಮಗೆ ರಯೋಹಚದ ಚಿಂತೆ. ನಮಗೆ ಇಂಥ ಗೌರವ ಸಿಕ್ಕತ್ತೆ ಅಂತ ನಾವಾರೂ ಅಂದುಕೊಂಡಿರ್ಲಿಲ್ಲ."

ಅದಕ್ಕೆ ತಕ್ಷಣ ಜನರಲ್ ನೀಡಿದ ಉತ್ತರ: "ಜಗತ್ತಿನ ಹಣೆಬರಹ ರಯೋಹಚದ ಮೇಲೇ ನಿಂತಿದೆ."

ಅವರು ಹಾಗಂತ ನಿಜವಾಗಿಯೂ ಭಾವಿಸಿದ್ದರು, ಅಲ್ಲದೆ ಇಷ್ಟು ಹೊತ್ತಿಗೆ ಮಾರಕೈಬುವನ್ನು ವಶಪಡಿಸಿಕೊಳ್ಳುವ ಯೋಜನೆ ಹಾಕಿದ್ದರೂ ಗೆಲವಿನಿಂದ ಇನ್ನೂ ದೂರವಿರುವುದರ ಬಗ್ಗೆ ತಮ್ಮ ಅಸಮಾಧಾನವನ್ನು ಮುಚ್ಚಿಟ್ಟುಕೊಳ್ಳಲಾಗಲಿಲ್ಲ. ನೀಲಾಕಾಶದ ಡಿಸೆಂಬರ್ ಸಮೀಪಿಸಿದಂತೆ, ರಯೋಹಚ ಮಾತ್ರವಲ್ಲ ಇಡೀ ಕರಾವಳಿಯೇ ಕೈತಪ್ಪಿಹೋಗಬಹುದು, ಆದರೆ ವೆನಿಝೂಲವು ಅಳಿದುಳಿದ ತನ್ನ ಭ್ರಮೆಗಳನ್ನೂ ನಾಶಪಡಿಸಬಹುದೆಂಬ ಭಯ ಅವರನ್ನಾವರಿಸಿತ್ತು.

ಕಳೆದ ವಾರವೇ ಹವಾಮಾನವು ಬದಲಾಗಲು ತೊಡಗಿತ್ತು, ಗೋಳುಕರೆಯಂತಹ ಮಳೆ'ಯ ಬದಲು ಸ್ಫಟಿಕದಂತಹ ಆಕಾಶ ತೆರೆದುಕೊಂಡಿತ್ತು, ರಾತ್ರಿ ನಕ್ಷತ್ರಗಳ ದಂಡು ಕಾಣಿಸುತ್ತಿತ್ತು. ಬುವಿಯ ವೈಭವದಿಂದ ಜನರಲ್‌ರು ದೂರವೇ ಉಳಿದು ಕೆಲವು ವೇಳೆ ತಮ್ಮ ಜೋಲಿಮಂಚಕ್ಕೆ ಪಕ್ಕಾಗುತ್ತಿದ್ದರು, ಕೆಲವು ಸಲ ಅದೃಷ್ಟದ ಬಗ್ಗೆ ಚಿಂತಿಸದೆ ಇಸ್ಪೀಟಿನಲ್ಲಿ ತೊಡಗುತ್ತಿದ್ದರು. ಒಮ್ಮೆ ಮೊಗಸಾಲೆಯಲ್ಲಿ ಆಡುತ್ತಿರುವಾಗ ಸಮುದ್ರಗುಲಾಬಿಯ ಕಂಪಿನಿಂದ ಭಾರವಾಗಿ ಬೀಸಿ ಬಂದ ಗಾಳಿಯು ಅವರ ಕೈಲಿದ್ದ ಇಸ್ಪೀಟು ಎಲೆಗಳನ್ನು ಹಾರಿಸಿಬಿಟ್ಟಿತ್ತು, ಕಿಟಕಿಗಳ ಚಿಲಕಗಳನ್ನು ಕಿರುಗುಟ್ಟಿಸಿತ್ತು. ಪ್ರಸನ್ನ ಹವಾಗುಣದ ಮುನ್ಸೂಚನೆಯನ್ನು ಕಂಡು ಗೆಲವಾದ ಸೆನೋರಾ ಮೆಲೋರಿಸ್ "ಓ, ಡಿಸೆಂಬರ್ ಬಂತು!" ಎಂದು ಉದ್ಗರಿಸಿದರು. ಗಾಳಿಯು ಮನೆಯನ್ನೇ ಹಾರಿಸಿಕೊಂಡು ಹೋಗಬಹುದೆಂದು ವಿಲ್ಸನ್ ಹಾಗೂ ಜೋಸೆ ಲಾರೆನ್ಸಿಯೋ ಸಿಲ್ವ ಕಿಟಕಿಗಳನ್ನು ಮುಚ್ಚಲು ಓಡಿದರು. ಆದರೆ ಜನರಲ್‌ರು ಮಾತ್ರ ತಮ್ಮದೇ ಆಲೋಚನೆಯಲ್ಲಿ ಮುಳುಗಿಹೋಗಿದ್ದರು.

"ಡಿಸೆಂಬರ್ ಬಂತು, ಆದರೆ ನಾವು ಮಾತ್ರ ಇನ್ನೂ ಅದೇ ಜಾಗದಲ್ಲಿದ್ದೇವೆ. ನಿರುಪಯೋಗಿ ಜನರಲ್‌ಗಳಿಗಿಂತ ಕೆಟ್ಟ ಸಾರ್ಜೆಂಟ್‌ಗಳೇ ಮೇಲು ಎಂದು ಹೇಳುವುದು ಸರಿಯಾಗಿಯೇ ಇದೆ" ಎಂದರು.

ಆಟ ಮುಂದುವರಿಸಿದ ಅವರು ತಮ್ಮ ಎಲೆಗಳನ್ನು ಪಕ್ಕಕ್ಕಿರಿಸಿ, ಪ್ರಯಾಣಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಜೋಸೆ ಲಾರೆನ್ಸಿಯೋ ಸಿಲ್ವಗೆ ಸೂಚಿಸಿದರು. ಹಿಂದಿನ ದಿನವಷ್ಟೇ ದೋಣಿಗೆ ಹಾಕಿದ್ದ ಸಾಮಾನುಗಳನ್ನು ಎರಡನೆಯ ಬಾರಿಗೆ ಕೆಳಕ್ಕಿಳಿಸಿದ್ದ ಕರ್ನಲ್ ವಿಲ್ಸನ್ ಗೊಂದಲಗೊಂಡ.

"ದೋಣಿ ಆಗಲೇ ಹೊರಟು ಹೋಯಿತು" ಎಂದ.

ಜನರಲ್‌ರಿಗೂ ಅದು ಗೊತ್ತಿತ್ತು. "ಅದು ಸರಿಯಾದ ದೋಣಿಯಲ್ಲ. ನಾವು ರಯೋಹಚಕ್ಕೆ ಹೋಗಬೇಕು, ಜಯ ಸಂಪಾದಿಸುವಂತೆ ನಮ್ಮ ಮಹಾ ಸೇನಾಪತಿಗಳಿಗೆ ತಾಕೀತು ಮಾಡಬೇಕು" ಎಂದರು. ಆಟವನ್ನು ಬಿಡುವ ಮುನ್ನ ತಮ್ಮ ಮಾತನ್ನು ಸಮರ್ಥಿಸಿಕೊಳ್ಳಬೇಕೆನ್ನಿಸಿತು.

"ಈಗ ಇರೋದು ಯುದ್ಧದ ಆವಶ್ಯಕತೆ ಅಲ್ಲ, ಗೌರವದ ಪ್ರಶ್ನೆ ಅಷ್ಟೆ" ಎಂದರು.

ಡಿಸೆಂಬರ್ ಒಂದರಂದು ಬೆಳಿಗ್ಗೆ ಎಂಟು ಗಂಟೆಗೆ, ಸೆನೋರ್ ಜೋಕಿನ್ ಸ ಮಿಯರ್ ತಮಗಿಷ್ಟ ಬಂದಂತೆ ಬಳಸಲು ಗೊತ್ತುಪಡಿಸಿದ್ದ *'ಮ್ಯಾನ್ಯುಯೆಲ್'* ಎಂಬ ಇಕ್ಕೂವೆ ದೋಣಿಯನ್ನು ಏರಿ ಅವರು ಪಯಣ ಹೊರಟರು, ಪಿತ್ತಾಧಿಕ್ಯವನ್ನು ಹೊರಹಾಕಲು, ಸ್ಯಾನ್ ಪೆಡ್ರೋ ಅಲೆಜಾಂಡ್ರಿನೋದಲ್ಲಿದ್ದ ಸೆನೋರ್ ಮಿಯರ್ ಅವರ ಕಬ್ಬಿನ ತೋಟದಲ್ಲಿದ್ದುಕೊಂಡು ಇನ್ನಿತರ ಕಾಯಿಲೆಗಳಿಂದ ಚೇತರಿಸಿಕೊಳ್ಳಲು ಹಾಗೂ ಅಸಂಖ್ಯ ದುಮ್ಮಾನಗಳಿಂದ ಬಿಡುಗಡೆ ಹೊಂದಲು, ಅಥವಾ ಅಮೆರಿಕಗಳ ಬಿಡುಗಡೆಗಾಗಿ ಮತ್ತೊಮ್ಮೆ ಪ್ರಯತ್ನಿಸಲು ರಯೋಹಚಕ್ಕೆ ನೇರವಾಗಿ ಹೋಗುವುದಕ್ಕಾಗಿ. ದೋಣಿಯಲ್ಲಿ ಜನರಲ್ ಜೋಸೆ ಮರಿಯ ಕ್ಯಾರೆನೋ ಜೊತೆ ಬಂದ ಜನರಲ್ ಮರಿಯಾನೋ ಮಾಂಟಿಲ *'ಮ್ಯಾನ್ಯುಯೆಲ್'* ರಕ್ಷಣೆಗೆ ಜೊತೆಗೂಡಲು ಉತ್ತರ ಅಮೆರಿಕದ ಯುದ್ಧನೌಕೆ *'ಗ್ರಾಂಪಸ್'* ಅನ್ನು ಏರ್ಪಾಟು ಮಾಡಿದರು. ಅದು ಶಸ್ತ್ರಗಳಿಂದ ಸಜ್ಜಾಗಿದ್ದುದಲ್ಲದೆ, ಒಳ್ಳೆಯ ಶಸ್ತ್ರವೈದ್ಯರಾದ ಡಾ. ನೈಟ್ ಅದರಲ್ಲಿದ್ದರು. ಆದರೆ ಜನರಲ್‌ರ ದಯನೀಯ ಸ್ಥಿತಿಯನ್ನು ನೋಡಿದ ಮಾಂಟಿಲ ಡಾ. ನೈಟ್ ಅವರ ತೀರ್ಮಾನವನ್ನಷ್ಟೇ ಪರಿಗಣಿಸದೆ ಸ್ಥಳೀಯ ವೈದ್ಯರ ಸಲಹೆಯನ್ನೂ ಪಡೆಯಲು ತೀರ್ಮಾನಿಸಿದರು.

"ಅವರು ಸಮುದ್ರ ದಾಟುವುದೇ ದುಸ್ತರ ಎಂಬುದು ನನ್ನ ಭಾವನೆ. ಆದರೆ ಅವರು ಮುಂದುವರಿಯಲಿ, ಹೀಗೆ ಬದುಕುವುದಕ್ಕಿಂತ ಅದೆಷ್ಟೋ ಮೇಲು" ಎಂದು ಡಾ. ಗ್ಯಾಸ್ಟೆಲ್‌ಬೋಂಡೋ ಹೇಳಿದರು.

ಮಹಾ ಜೌಗು ಪ್ರದೇಶವಾದ ಸಿಯೆನಾಗ ಗ್ರಾಂಡ್ ಮೂಲಕ ಹಾದು ಹೋಗುವ ಕಾಲುವೆಗಳಲ್ಲಿ ಪ್ರಯಾಣ ನಿಧಾನವಲ್ಲದೆ, ಅಲ್ಲಿ ಸೂಸುತ್ತಿದ್ದ ಗಬ್ಬು ವಾಸನೆಯ ಕಾರಣ ಅವರು ಸಮುದ್ರದ ಮೂಲಕವೇ ಪಯಣ ಬೆಳೆಸಿದರು, ಉತ್ತರ ಮಾರುತಗಳು ಅನುಕೂಲಕರವಾಗಿದ್ದುದಲ್ಲದೆ, ಈ ವರ್ಷ ಬೇಗ ಶುರುವಾಗಿ ಹಿತಕರವಾಗಿತ್ತು. ಜನರಲ್‌ರಿಗೆಂದು ಆ ಇಕ್ಟೂವೆ ಹಡಗಿನ ಒಂದು ಕ್ಯಾಬಿನ್ ಅನ್ನು ಸಜ್ಜುಗೊಳಿಸಲಾಗಿತ್ತು, ಅದು ಶುಭ್ರವಾಗಿ ಸೌಕರ್ಯಯುಕ್ತವಾಗಿದ್ದುದರಿಂದ ಪಯಣ ಆರಾಮದಾಯಕವಾಗುತ್ತಿತ್ತು.

ಜನರಲ್‌ರು ಲವಲವಿಕೆಯಿಂದ ಹಡಗನ್ನೇರಿದರು, ಸಮುದ್ರವರೆಗಿನ ಅನೇಕ ಲೀಗ್‌ಗಳುಷ್ಟುದ್ದದ ನೀರು ಕೆಸರಿನಿಂದ ಬೂದುಬಣ್ಣಕ್ಕೆ ತಿರುಗಿದ್ದ ಮ್ಯಾಗ್ಡಲೀನ ಮಹಾನದಿಯ ಅಳಿವೆಯನ್ನು ನೋಡಲು ಡೆಕ್ಕಿನ ಮೇಲೆ ನಿಂತುಕೊಳ್ಳಲು ಇಷ್ಟಪಟ್ಟರು. ಅವರು ಧರಿಸಿದ್ದುದು ಹಳೆಯ ಕಾರ್ಡುರಾಯ್ ಟ್ರೌಸರ್‌ಗಳು, ಆಂಡಿಯನ್ ಟೋಪಿ, ಹಡಗಿನ ಕ್ಯಾಪ್ಟನ್ ಅವರಿಗೆ ಕೊಟ್ಟಿದ್ದ ಇಂಗ್ಲಿಷ್ ನಾವಿಕರ ಜಾಕೆಟ್‌ಗಳನ್ನು; ಬಿಸಿಲು ಮತ್ತು ತುಡುಗು ಗಾಳಿಗಳಿಂದ ಅವರ ಮುಖಕ್ಕೆ ಕಳೆ ಬಂದಿತ್ತು. ಅವರ ಗೌರವಕ್ಕೆಂದು ಹಡಗಿನ ಸಿಬ್ಬಂದಿ ಒಂದು ಷಾರ್ಕ್ ಅನ್ನು ಹಿಡಿದರು, ಅದರ ಹೊಟ್ಟೆಯನ್ನು ಸೀಳಿದಾಗ ಅದರಲ್ಲಿ ಅನೇಕ ಲೋಹದ ತುಂಡುಗಳು ಕಾಣಿಸಿದವು, ಅದರಲ್ಲಿ ಒಂದು ಜೊತೆ ಚುಚ್ಚು ಮುಳ್ಳು ಕೂಡ ಇದ್ದವು. ಒಬ್ಬ ಪ್ರವಾಸಿಯಂತೆ ಜನರಲ್‌ರು ಅವುಗಳಿಂದ ಉಲ್ಲಸಿತರಾದರು, ಆದರೆ ಕೆಲ ಕಾಲಾನಂತದ ದಣಿವಿನಿಂದ ಕುಸಿದು ಕುಳಿತು ತಮ್ಮ ಚಿಪ್ಪಿನಲ್ಲಿ ತೂರಿಕೊಂಡರು. ಆನಂತರ ಜೋಸೆ ಪೆಲಾಸಿಯೋಸ್‌ನನ್ನು ಹತ್ತಿರ ಬರುವಂತೆ ಸನ್ನೆ ಮಾಡಿ ಅವನ ಕಿವಿಯಲ್ಲಿ, "ಪಾಪ ಮೊಲಿನಾರಿಸ್ ಇಷ್ಟು ಹೊತ್ತಿಗೆ ಹಾಸಿಗೆಯನ್ನು ಸುಟ್ಟು ಚಮಚಗಳನ್ನು ಹೂತು ಹಾಕಿರಬೇಕು" ಎಂದು ಪಿಸುಗುಟ್ಟಿದರು.

ಮಧ್ಯಾಹ್ನದ ಹೊತ್ತಿಗೆ ಅವರು ಸೆಯೆಂಗ ಗ್ರಾಂಡ್ ಅನ್ನು ದಾಟಿದರು, ಅದೊಂದು ವಿಶಾಲ ಕೆಸರುಭೂಮಿ, ಹಕ್ಕಿಗಳು ಕಿಚಪಿಚಗುಟ್ಟುತ್ತ ಹಾರಾಡುತ್ತಿದ್ದವು. ಜೌಗು ಮತ್ತು ಸಮುದ್ರಗಳ ನಡುವಣ ಸ್ಫಟಿಕದಂತಹ ಹರಹು ಸುಡುತ್ತಿತ್ತು, ಅಲ್ಲಿನ ಬೆಳಕು ಪ್ರಜ್ವಲಿಸುತ್ತಿದ್ದರೆ ಗಾಳಿ ಪರಿಶುದ್ಧವಾಗಿತ್ತು. ಅಲ್ಲಿ ಕೆಲವು ಮೀನು ಹಿಡಿಯುವ ತಾಣಗಳಿದ್ದವು, ಮೈದಾನದಲ್ಲಿ ಗಾಳಗಳನ್ನು ಒಣಗಿ ಹಾಕಿದ್ದರು, ಅವುಗಳಾಚೆ ನಿಗೂಢವಾದ ಲ ಸಿಯೆಂಗ ಪಟ್ಟಣ ಮಲಗಿತ್ತು. ಅಲ್ಲಿ ದಿನನಿತ್ಯ ಕಾಣುವ ಭ್ರಮಾಕೃತಿಗಳು

ಹಂಬೋಲ್ಟ್‌ನ ಶಿಷ್ಯರಲ್ಲಿ ವಿಜ್ಞಾನದ ಬಗ್ಗೆ ಸಂದೇಹಗಳನ್ನು ಬಿತ್ತಿದ್ದವು. ಸಿಯೆಂಗ ಗ್ರಾಂಡ್‌ನ ಮತ್ತೊಂದು ಭಾಗದಲ್ಲಿ ಸೆಯೆರ ನೆವಡದಲ್ಲಿ ನಿರಂತರ ಹಿಮದ ಕಿರೀಟ ಮೇಲೆದ್ದು ಕಾಣುತ್ತಿತ್ತು.

ಉತ್ಸಾಹ ತುಂಬಿದ ಹಾಯಿಗಳ ಮೌನದ ನಡುವೆ ಹಡಗು ಚಿಮ್ಮಿದಂತೆ ಸಾಗುತ್ತಿತ್ತು, ಅದರದ್ದು ಎಂತಹ ವೇಗ ಮತ್ತು ಸ್ಥಿರತೆ ಎಂದರೆ, ಜನರಲ್‌ರು ತಮ್ಮ ದೇಹದಿಂದ ಪಿತ್ಥವನ್ನು ಹೊರಹಾಕಲು ಬೇಕಾದಂತೆ ಹೊಟ್ಟೆ ತೊಳೆಸುವಂತಾಗುತ್ತಿರಲಿಲ್ಲ. ಆದರೆ ಸಮುದ್ರದ ಕಡೆಗೆ ಚಾಚಿದ್ದ ಸಿಯೆರದ ಒಂದು ದಿಬ್ಬವನ್ನು ಹಾದು ಹೋದಾಗ ನೀರು ಪ್ರಕ್ಷುಬ್ಧಗೊಂಡಿತು, ಗಾಳಿ ಅಬ್ಬರಿಸಲಾರಂಭಿಸಿತು. ಈ ಬದಲಾವಣೆಯಿಂದ ಜನರಲ್‌ರಲ್ಲಿ ತೀವ್ರ ನಿರೀಕ್ಷೆಯುಂಟಾಯಿತು, ಏಕೆಂದರೆ ಭೂಮಿಯು ಆಗಸದಲ್ಲಿ ಹಾರುತ್ತಿದ್ದ ಹಕ್ಕಿಗಳ ಜೊತೆಗೆ ತಿರುಗಲು ತೊಡಗಿತು, ಅವರ ಅಂಗಿಯನ್ನು ಕುಳಿರ್ ಬೆವರು ತೋಯಿಸಿತು, ಕಣ್ಣುಗಳಲ್ಲಿ ನೀರು ತುಂಬಿತು. ದೇಹ ಗರಿಯಂತೆ ಹಗುರಾಗಿ ಒಂದು ಅಲೆ ಬಂದರೆ ಕೊಚ್ಚಿಕೊಂಡು ಹೋಗುವಂತಾದಾಗ ಅವರನ್ನು ಮಾಂಟಿಲ ಮತ್ತು ವಿಲ್ಸನ್‌ರು ಹಿಡಿದುಕೊಳ್ಳಬೇಕಾಯಿತು. ಸಂಜೆಯ ಹೊತ್ತಿಗೆ ಅವರು ಸಂಟಾ ಮಾರ್ತ ಕೊಲ್ಲಿಯನ್ನು ಪ್ರವೇಶಿಸಿದರು, ಆದರೆ ಹೊರಬೇಕಾದುದದೇನೂ ಜನರಲ್‌ರ ನಿಸ್ಸಾರ ದೇಹದಲ್ಲಿ ಉಳಿದಿರಲಿಲ್ಲ, ಹೀಗಾಗಿ ಸುಸ್ತಾಗಿದ್ದ ಅವರು ಕ್ಯಾಪ್ಟನ್‌ನ ಅಟ್ಟದಲ್ಲಿ ಮಲಗಿದರು, ಸತ್ವಹೀನರಾಗಿದ್ದರೂ ಅವರನ್ನು ಕನಸು ನನಸಾದ ಸಂಭ್ರಮ ಆವರಿಸಿತ್ತು. ಅವರ ಸ್ಥಿತಿಯನ್ನು ಕಂಡು ಜನರಲ್ ಮಾಂಟಿಲ ತುಂಬ ಗಾಬರಿಗೊಂಡು, ಇಳಿಯುವ ಮುಂಚೆಯೇ ಮತ್ತೊಮ್ಮೆ ಪರೀಕ್ಷಿಸಲು ಡಾ. ನೈಟ್‌ರನ್ನು ಕರೆತಂದರು, ಜನರಲ್‌ರನ್ನು ಜೋಲಿಯಲ್ಲಿ ಮಲಗಿಸಿ ಇಳಿಸಿಕೊಳ್ಳುವಂತೆ ಅವರು ಸೂಚಿಸಿದರು.

ಅಧಿಕೃತತೆಯ ವಾಸನೆಯುಳ್ಳ ಎಲ್ಲದರ ಬಗ್ಗೆಯೂ ಸಂಟಾ ಮಾರ್ಟನ್ನರು ನಿರಾಸಕ್ತಿ ತಾಳಿದ್ದುದು ಮಾತ್ರವಲ್ಲದೆ, ಹಡಗುಕಟ್ಟೆಯಲ್ಲಿ ಅಷ್ಟು ಕಡಿಮೆ ಸಂಖ್ಯೆಯಲ್ಲಿ ಜನ ಸೇರಿದ್ದುದಕ್ಕೆ ಬೇರೆ ಕಾರಣಗಳೂ ಇದ್ದವು. ಗಣರಾಜ್ಯಕ್ಕೆ ಸಂಬಂಧಿಸಿದ ಕೆಲಸಗಳಿಗೆ ಜನರನ್ನು ಆಕರ್ಷಿಸುವುದರಲ್ಲಿ ಬಹು ಕಷ್ಟಕರವಾಗಿದ್ದ ನಗರಗಳಲ್ಲಿ ಸಂಟಾ ಮಾರ್ಟಾ ಕೂಡ ಒಂದು. ಬೊಯಾಕಾ ಕದನದಲ್ಲಿ ಸ್ವಾತಂತ್ರ್ಯವು ಖಚಿತಗೊಂಡ ನಂತರವೂ ಸ್ಪೈನ್‌ನಿಂದ ಸೈನ್ಯಪೂರೈಕೆಯನ್ನು ಎದುರು ನೋಡುತ್ತ ವೈಸ್‌ರಾಯ್ ಸೆಮ್ಯಾನೋ ನೆಲೆಯೂರಿದ್ದುದು ಅಲ್ಲೇ. ಸಂಟಾ ಮಾರ್ಟಾವನ್ನು ಬಿಡುಗಡೆಗೊಳಿಸಲು ಜನರಲ್ ಅವರೇ ಸ್ವತಃ ಹಲವಾರು ಬಾರಿ ಪ್ರಯತ್ನಿಸಿದ್ದರು, ಆದರೆ ಮಾಂಟಿಲ ಮಾತ್ರ ಯಶಸ್ವಿಯಾಗಿದ್ದರು, ಅದೂ ಗಣರಾಜ್ಯ ಸ್ಥಾಪನೆಗೊಂಡ ಮೇಲೆ. ರಾಜಪ್ರಭುತ್ವಪರರಾದವರ ಹಗೆತನದೊಡನೆ ಕಾರ್ಟೆಜೆನ ಕೇಂದ್ರ

ಸರ್ಕಾರದ ಮೆಚ್ಚಿನ ನಗರವೆಂಬ ಭಾವನೆಯೂ ಸೇರಿಕೊಂಡಿತ್ತು, ಜನರಲ್‌ರಿಗೆ ಕಾರ್ಟಜೆನ ಜನರ ಮೇಲಿದ್ದ ವಿಶೇಷ ಒಲವಿನ ಕಾರಣದಿಂದ ಅವರಿಗರಿವಿಲ್ಲದಂತೆಯೇ ಈ ಭಾವನೆಗೆ ಅವರೂ ಪೋಷಣೆ ನೀಡಿದ್ದರು. ಆದರೆ ಅವರ ನಿಷ್ಠಾವಂತ ಅನುಯಾಯಿಗಳಲ್ಲಿಯೂ ಇದ್ದ ಅತ್ಯಂತ ಪ್ರಬಲ ಕಾರಣವೆಂದರೆ, ಅಡ್ಮಿರಲ್ ಜೋಸೆ ಪ್ರೂಡೆನ್ಸಿಯೋ ಪ್ಯಾಡಿಲನಿಗೆ ವಿಧಿಸಿದ್ದ ಮರಣದಂಡನೆ, ಜನರಲ್ ಪಿಯರ್‌ನಂತೆಯೇ ಅವನು ಶ್ವೇತಕೃಷ್ಣೀಯನಾಗಿದ್ದುದು ಸಮಸ್ಯೆಯನ್ನು ಉಲ್ಬಣಗೊಳಿಸಿತ್ತು. ಊರ್ಡಾನೆಟ ಅಧಿಕಾರಸ್ಥನಾದ ಮೇಲೆ ಕಹಿ ಭಾವನೆ ಮತ್ತಷ್ಟು ತೀವ್ರಗೊಂಡಿತ್ತು, ಏಕೆಂದರೆ ಮರಣದಂಡನೆಯನ್ನು ವಿಧಿಸಿದ ಕೋರ್ಟ್ ಮಾರ್ಷಲ್ ಅಧ್ಯಕ್ಷನಾಗಿದ್ದವರು ಅವರೇ. ಹೀಗಾಗಿ ಯೋಜಿಸಿದಂತೆ ಕ್ಯಾಥಿಡ್ರಲ್‌ನ ಗಂಟೆಗಳು ಬಾಜಿಸಲಿಲ್ಲ, ಆದರೆ ಯಾರೂ ಕಾರಣವನ್ನು ವಿವರಿಸಲಿಲ್ಲ. ಎಲ್ ಮಾರೋ ಕೋಟೆಯ ಮೇಲಣ ಫಿರಂಗಿಯಿಂದ ಆ ಬೆಳಿಗ್ಗೆ ಗೌರವ ರಕ್ಷೆಯ ತೋಪು ಹಾರಲಿಲ್ಲ, ಯಾಕೆಂದರೆ ಅದರಲ್ಲಿದ್ದ ಮದ್ದು ತೇವಗೊಂಡಿತ್ತು. ಕ್ಯಾಥಿಡ್ರಲ್‌ನ ಪಕ್ಕದ ಗೋಡೆಯ ಮೇಲೆ 'ಜೋಸೆ ಪ್ರೂಡೆನ್ಸಿಯೋ ಚಿರಾಯುವಾಗಲಿ' ಎಂದು ಇದ್ದಿಲಿನಲ್ಲಿ ಗೀಚಿದ್ದ ಘೋಷಣೆ ಜನರಲ್‌ರ ಕಣ್ಣಿಗೆ ಬೀಳದಿರುವಂತೆ ಮಾಡಲು ಅವರು ಬರುವ ಹಿಂದಿನ ಕ್ಷಣದವರೆಗೂ ಸೈನಿಕರು ಹೆಣಗಿದ್ದರು. ಅವರ ಬರುವಿಕೆಯ ಬಗ್ಗೆ ಹೊರಡಿಸಿದ್ದ ಅಧಿಕೃತ ಆದೇಶವು ಬಂದರಿನಲ್ಲಿ ಸೇರಿದ್ದ ಕೆಲವೇ ಮಂದಿಯ ಮೇಲೆ ಯಾವುದೇ ಪ್ರಭಾವವನ್ನು ಬೀರಿರಲಿಲ್ಲ. ಎದ್ದು ಕಾಣುತ್ತಿದ್ದುದೆಂದರೆ, ಆಹ್ವಾನಿಸಿದ್ದವರಲ್ಲಿ ಅತ್ಯಂತ ಗಣ್ಯರೂ ಮೊದಲಿಗರೂ ಆದ ಬಿಷಪ್ ಎಸ್ಟೆವೆಝ್‌ರ ಗೈರುಹಾಜರಿ.

ಡಾನ್ ಜೋಕಿನ್ ಡೆ ಮಿಯರ್ ತಮ್ಮ ದೀರ್ಘಾಯುಷ್ಯದ ಕೊನೆಯವರೆಗೂ ನೆನಪಿಟ್ಟುಕೊಂಡಿದ್ದುದೆಂದರೆ, ಇಳಿ ಹೊತ್ತಿನಲ್ಲಿ ಜೋಲಿಯಲ್ಲಿ ಮಲಗಿಸಿಕೊಂಡು ತೀರದಲ್ಲಿ ಹಡಗಿನಿಂದ ಕೆಳಗಿಳಿಸಿಕೊಂಡಿದ್ದ, ಶಾಲು ಹೊದ್ದು, ಒಂದರ ಮೇಲೊಂದು ಟೋಪಿಯನ್ನು ಹುಬ್ಬುಗಳವರೆಗೂ ಎಳೆದು ಧರಿಸಿಕೊಂಡು ಒಂದು ಮಿಳ್ಳೆ ಜೀವವೂ ಉಳಿದಿರದ ಒಂದು ಭಯಾನಕ ಸ್ಥಿತಿಯಲ್ಲಿದ್ದ ಜೀವಿಯ ಚಿತ್ರ. ಆದರೆ ಅವರ ಮನಸ್ಸಿನಲ್ಲಿ ಅಚ್ಚಳಿಯದೆ ಮೂಡಿದ್ದುದೆಂದರೆ ಜನರಲ್‌ರ ಉರಿಯುವ ಕೈಗಳು, ಕಷ್ಟದ ಉಸಿರಾಟ, ಜೋಲಿಯಿಂದಿಳಿದ ಭವ್ಯ ಠೀವಿ, ಸ್ವಾಗತಿಸಲು ಬಂದವರನ್ನು ಬಿರುದುಗಳೊಡನೆ ಪೂರ್ತಿ ಹೆಸರು ಹಿಡಿದು ಸಂಬೋಧಿಸಿ ಒಬ್ಬೊಬ್ಬರನ್ನಾಗಿ ಮಾತನಾಡಿಸುತ್ತ ಆಪ್ತ ಸಹಾಯಕರ ನೆರವಿನಿಂದ ನೇರವಾಗಿ ನಿಂತಿದ್ದ ಭಂಗಿ. ಆನಂತರ ಅವರನ್ನು ಎತ್ತಿಕೊಂಡು ಸಾರೋಟಿಗೆ ನಡೆದಾಗ ಅವರು ಆಸನದಲ್ಲಿ ಕುಸಿದು ಕುಳಿತರು, ಅವರ ಸ್ಥಿಮಿತವಿಲ್ಲದ ತಲೆ ಹಿಂದಕ್ಕೆ ವಾಲಿತ್ತು,

ಕಿಟಕಿಯ ಕಡೆ ತಿರುಗಿ ತಮ್ಮಿಂದ ದೂರವಾಗುತ್ತಿದ್ದ ಬದುಕನ್ನು ತವಕದಿಂದ ಹೀರಲು ಕಣ್ಣುಗಳು ಮಾತ್ರ ಆತುರದಿಂದ ಪಿಳಿಗುಟ್ಟುತ್ತಿದ್ದವು.

ಅವರಿಗಾಗಿ ಕಾದಿರಿಸಿದ್ದ ಕಸ್ಟಮ್ ಹೌಸ್ ಅನ್ನು ತಲುಪಲು ಸಾರೋಟುಗಳ ಸಾಲು ಬೀದಿಯನ್ನು ದಾಟಬೇಕಾಗಿತ್ತು, ಅಷ್ಟೆ. ಅವತ್ತು ಬುಧವಾರ, ಬೆಳಿಗ್ಗೆ ಎಂಟು ಗಂಟೆ ಹೊಡೆಯುವುದರಲ್ಲಿತ್ತು, ಆದರೆ ಡಿಸೆಂಬರ್ ಮೊದಲಿನ ಕುಳಿರ್ಗಾಳಿಯು ಕೊಲ್ಲಿಯ ಗುಂಟ ಶನಿವಾರದ ಹುಮ್ಮಸ್ಸಿನಿಂದ ವಿಹರಿಸುತ್ತಿತ್ತು. ರಸ್ತೆಗಳು ವಿಶಾಲವಾಗಿದ್ದರೂ ಕಸದಿಂದ ತುಂಬಿದ್ದವು, ಅಲ್ಲಿನ ಗಿಲಾವು ಮನೆಗಳು ದೇಶದ ಇತರೆಡೆಗಳಿಗಿಂತ ಚೆನ್ನಾಗಿ ಉಳಿದಿದ್ದವು, ಕುಟುಂಬದವರೆಲ್ಲ ಮನೆಯೊಳಗಿನಿಂದ ಕುರ್ಚಿಗಳನ್ನು ತಂದು ಬೀದಿ ಬದಿಯಲ್ಲಿ ಹಾಕಿಕೊಂಡು ಕುಳಿತಿದ್ದರು, ಕೆಲವರಂತೂ ಸಂದರ್ಶಕರನ್ನು ಬೀದಿಯ ನಡುವೆಯೇ ಸ್ವಾಗತಿಸಿದ್ದರು. ಮರಗಳ ನಡುವೆ ಮಿಣುಕು ಹುಳುಗಳ ರಾಶಿ ಮೋಡದಂತೆ ಹಾರಾಡುತ್ತ ಸಮುದ್ರದೆದುರಿನ ರಸ್ತೆಯನ್ನು ದೀಪಕ್ಕಿಂತ ಹೆಚ್ಚು ಪ್ರಜ್ವಲಿಸುವ ತಮ್ಮ ಪ್ರಭೆಯಿಂದ ತುಂಬಿದ್ದವು.

ಈಚೆಗಷ್ಟೇ ದುರಸ್ತಿಗೊಂಡಿದ್ದ ದೇಶದಲ್ಲಿಯೇ ಮೊದಲನೆಯದಾದ ಹಳೆಯ ಕಸ್ಟಮ್ ಹೌಸ್ ಕಟ್ಟಡವನ್ನು ನಿರ್ಮಿಸಿದ್ದುದು ಇನ್ನೂರ ತೊಂಬತ್ತು ವರ್ಷಗಳ ಹಿಂದೆ. ಎರಡನೆಯ ಮಹಡಿಯಲ್ಲಿ ಸಮುದ್ರಕ್ಕೆ ಮುಖಮಾಡಿದ್ದ ಮಲಗುವ ಕೋಣೆಯನ್ನು ಜನರಲ್‌ರಿಗಾಗಿ ಸಜ್ಜುಗೊಳಿಸಲಾಗಿತ್ತು, ಆದರೆ ಅವರು ತಮ್ಮ ಹೆಚ್ಚಿನ ವೇಳೆಯನ್ನು ಪ್ರಮುಖ ದಿವಾನಖಾನೆಯಲ್ಲಿಯೇ ಕಳೆಯಲು ಬಯಸಿದರು, ಜೋಲಿಮಂಚವನ್ನು ತೂಗುಹಾಕಲು ಅಲ್ಲಿ ಮಾತ್ರ ಕೊಕ್ಕೆಗಳಿದ್ದವು. ಅಲ್ಲಿಯೇ ಕೆತ್ತನೆ ಕೆಲಸ ಮಾಡಿದ್ದ ಭಾರಿ ಮಹೋಗನಿ ಮೇಜು ಇತ್ತು, ಅದರ ಮೇಲೆಯೇ ಲೇಪನಗೊಂಡ ಅವರ ಪಾರ್ಥಿವ ಶರೀರವು ಹದಿನಾರು ದಿನಗಳ ನಂತರ ನೀಲಿ ಬಣ್ಣದ ಟ್ಯೂನಿಕ್ ಧರಿಸಿ ಮಲಗಿದ್ದುದು, ಆದರೆ ಅದರ ಎಂಟು ಶುದ್ಧ ಚಿನ್ನದ ಗುಂಡಿಗಳು ಮಾತ್ರ ಸಾವಿನ ಗೊಂದಲದಲ್ಲಿ ಎಲ್ಲೋ ಮಾಯವಾಗಿದ್ದುವು.

ಈ ವಿಧಿಗೆ ತಾವು ಇಷ್ಟು ಹತ್ತಿರ ಇರುವ ವಿಷಯವನ್ನು ತಿಳಿಯದಿದ್ದವರು ತಾವೊಬ್ಬರೇ. ಆದರೆ ಜನರಲ್ ಮಾಂಟಿಲ ರಾತ್ರಿ ಒಂಬತ್ತು ಗಂಟೆಗೆ ತುರ್ತು ಕರೆ ಕಳಿಸಿ ಕರೆಸಿದ ಫ್ರೆಂಚ್ ವೈದ್ಯ ಡಾ. ಅಲೆಕ್ಸಾಂಡರ್ ಪ್ರಾಸ್ಪರ್ ರೆವೆರೆಂಡ್ ಅವರಿಗೆ ಮಾತ್ರ ಜನರಲ್‌ರು ಹಲವು ವರ್ಷಗಳ ಹಿಂದಿನಿಂದಲೇ ಸಾಯಲು ತೊಡಗಿದ್ದ ವಿಚಾರ ತಿಳಿಯಲು ನಾಡಿ ಹಿಡಿದು ನೋಡಬೇಕಾದ ಪ್ರಮೇಯವೇ ಇರಲಿಲ್ಲ. ಅವರ ಕತ್ತಿನ ದೌರ್ಬಲ್ಯ, ಎದೆಯ ಬಿಗಿತ ಮತ್ತು ಮುಖ ಹಳದಿಗೆ ತಿರುಗಿದ್ದ ಕಾರಣದಿಂದಾಗಿ ಅವರ ಶ್ವಾಸಕೋಶಗಳು ಜಖಂಗೊಂಡಿವೆಯೆಂದು ಡಾಕ್ಟರ್ ಊಹಿಸಿದರು, ಮುಂದಿನ ದಿನಗಳು ನಡೆಸಿದ ತಪಾಸಣೆಯಿಂದ ಆ ಊಹೆ

ಖಚಿತಗೊಂಡಿತು. ಮೊದಲಿಗೆ ಅರ್ಧ ಸ್ಪಾನಿಶ್ ಮತ್ತು ಇನ್ನರ್ಧ ಫ್ರೆಂಚ್‌ನಲ್ಲಿ ನಡೆಸಿದ ಖಾಸಗಿ ಸಂದರ್ಶನದಲ್ಲಿ, ರೋಗಲಕ್ಷಣಗಳನ್ನು ವಿರೂಪಗೊಳಿಸುವ ಹಾಗೂ ತಮ್ಮ ನೋವಿಗೆ ಬೇರೆಯೇ ವ್ಯಾಖ್ಯಾನ ನೀಡುವ ಚಾಕಚಕ್ಯತೆ ತಮ್ಮ ರೋಗಿಗೆ ಇತ್ತೆಂಬುದೂ, ಸಂಭಾಷಣೆಯ ನಡುವೆ ಕೆಮ್ಮುವುದನ್ನಾಗಲೀ ಉಗುಳುವುದನ್ನಾಗಲೀ ಮಾಡದಿರಲು ಉಳಿದಿದ್ದ ಅಲ್ಪ ಪ್ರಾಣವನ್ನು ಅವರು ಬಳಸಿಕೊಳ್ಳುತ್ತಿದ್ದರೆಂಬುದೂ ತಿಳಿಯಿತು. ಪ್ರಾರಂಭಿಕ ರೋಗ ಪತ್ತೆ ಕಾರ್ಯವು ಪರೀಕ್ಷೆಗಳಿಂದ ದೃಢಪಟ್ಟಿತು. ಮುಂದಿನ ಎರಡು ವಾರಗಳಲ್ಲಿ ಬಿಡುಗಡೆ ಮಾಡಿದ್ದ ಮೂವತ್ತಮೂರರಲ್ಲಿ ಮೊದಲನೆಯ ವೈದ್ಯಕೀಯ ವಾರ್ತೆಯಲ್ಲಿಯೇ ಜನರಲ್‌ರ ಸ್ಥಿತಿಗೆ ದೈಹಿಕ ಉಲ್ಬಣತೆಯ ಜೊತೆಗೆ ಮಾನಸಿಕ ಹಿಂಸೆಯೂ ಅಷ್ಟೇ ಕಾರಣವೆಂದು ವೈದ್ಯರು ಅಭಿಪ್ರಾಯಪಟ್ಟಿದ್ದರು.

ಮೂವತ್ತ ನಾಲ್ಕರ ಡಾ. ರೆವರೆಂಡ್ ಅವರು ಆತ್ಮವಿಶ್ವಾಸ, ಮತ್ತು, ವಿದ್ಯೆಗಳಿಂದ ಕೂಡಿದ್ದು, ಚೆನ್ನಾಗಿ ಉಡುಪು ಧರಿಸುತ್ತಿದ್ದರು. ಫ್ರಾನ್ಸ್‌ನ ಆಡಳಿತವನ್ನು ಬೂರ್ಬನ್‌ರಿಗೆ ಮತ್ತೆ ನೀಡಿದ್ದುದರ ಬಗ್ಗೆ ಭ್ರಮನಿರಸನಗೊಂಡ ಅವರು ಆರು ವರ್ಷಗಳ ಹಿಂದೆಯೇ ಇಲ್ಲಿಗೆ ಬಂದಿದ್ದರು, ಹೀಗಾಗಿ ಸ್ಪಾನಿಶ್ ಅನ್ನು ತಪ್ಪಿಲ್ಲದೆ ಮಾತಾಡುತ್ತಿದ್ದರು, ಬರೆಯಬಲ್ಲವರಾಗಿದ್ದರು. ಆದರೆ ಜನರಲ್‌ರು ಈ ಅವಕಾಶವನ್ನು ಫ್ರೆಂಚ್ ಭಾಷೆಯ ಮೇಲಿನ ತಮ್ಮ ಪ್ರಭುತ್ವವನ್ನು ರುಜುವಾತು ಮಾಡಲು ಮೊದಲೇ ಬಳಸಿಕೊಂಡರು. ಅವರು ಒಂದು ಕ್ಷಣದಲ್ಲಿಯೇ ವೈದ್ಯರಿಂದ ಆಕರ್ಷಿತರಾಗಿದ್ದರು.

"ಜನರಲ್ ಅವರದು ಪ್ಯಾರಿಸ್ ಉಚ್ಚಾರ" ಎಂದರು.

"ವಿವಿಯನ್ ನದಿ, ನಿಮಗೆ ಹೇಗೆ ಗೊತ್ತಾಯ್ತು?" ಎಂದರು ಉತ್ಸಾಹದಿಂದ.

"ಒಬ್ಬ ವ್ಯಕ್ತಿ ಪ್ಯಾರಿಸ್‌ನ ಯಾವ ಬೀದಿಯಲ್ಲಿ ಹುಟ್ಟಿ ಬೆಳೆದ ಅನ್ನೋದನ್ನು ಅವನ ಉಚ್ಚಾರದಿಂದಲೇ ಪತ್ತೆ ಮಾಡಬಲ್ಲೆ ಅನ್ನೊದು ನನ್ನ ಹೆಮ್ಮೆ, ಆದರೆ ನಾನು ಹುಟ್ಟಿ ದೊಡ್ಡವನಾದದ್ದು ಮಾತ್ರ ನಾರ್ಮಂಡಿಯಲ್ಲಿನ ಒಂದು ಹಳ್ಳಿಯಲ್ಲಿ" ಎಂದರು ವೈದ್ಯರು.

"ಚೀಸ್ ಚೆನ್ನಾಗಿದೆ, ಆದರೆ ವೈನ್ ಮಾತ್ರ ಸರಿಯಿಲ್ಲ" ಎಂದರು ಜನರಲ್.

"ಪ್ರಾಯಶಃ ನಮ್ಮ ಆರೋಗ್ಯದ ಗುಟ್ಟು ಅದೇ ಇರ್ಬೇಕು" ಎಂದರು ವೈದ್ಯರು.

ಅವರ ಬಾಲ್ಯೋತ್ಸಾಹವನ್ನು ತಟ್ಟುವುದರ ಮೂಲಕ ವೈದ್ಯರು ಜನರಲ್‌ರ ವಿಶ್ವಾಸವನ್ನು ಸಂಪಾದಿಸಿದರು. ಹೊಸ ಔಷಧಗಳನ್ನು ಸೂಚಿಸುವುದರ ಬದಲು, ಡಾ, ಗ್ಯಾಸ್ಟೆಲ್‌ಬೋಂಡೋ ಕೆಮ್ಮಿನ

ನಿಯಂತ್ರಣಕ್ಕಾಗಿ ಹೇಳಿದ್ದ ಸಿರಪ್ ಅನ್ನು ತಮ್ಮ ಕೈಯಿಂದಲೇ ಒಂದು ಚಮಚ ಕುಡಿಸಿ, ಜೊತೆಗೆ ನಿದ್ರಿಸಲು ತವಕಿಸುತ್ತಿದ್ದ ಅವರಿಗೆ ಶಮನಕಾರಕ ಮಾತ್ರೆ ಕೊಟ್ಟು ಆ ವಿಶ್ವಾಸವನ್ನು ಮತ್ತಷ್ಟು ಗಟ್ಟಿಗೊಳಿಸಿದರು. ಅವರಿಬ್ಬರೂ ಅದೂ ಇದೂ ಮಾತಾಡುತ್ತ ಸ್ವಲ್ಪ ಕಾಲ ಕಳೆದರು, ಅಷ್ಟು ಹೊತ್ತಿಗೆ ಜನರಲ್‌ರ ಮೇಲೆ ನಿದ್ದೆ ಮಾತ್ರೆ ಪರಿಣಾಮ ಬೀರಿತ್ತು, ಹೀಗಾಗಿ ವೈದ್ಯರು ಕೋಣೆಯಿಂದ ಮೆಲ್ಲನೆ ಹೊರ ನಡೆದರು. ಜನರಲ್ ಮಾಂಟಿಲ ಇತರ ಅಧಿಕಾರಿಗಳೊಡನೆ ಅವರ ಮನೆಗೆ ತೆರಳಿದರು; ಉಟ್ಟ ಬಟ್ಟೆಯಲ್ಲಿಯೇ ಮಲಗುವುದಾಗಿಯೂ, ಏನಾದರೂ ತುರ್ತು ಸಂಭವಿಸಿದರೆ ಇದರಿಂದ ತಾವು ತಕ್ಷಣ ಹೊರಟು ಬರಲು ಅನುಕೂಲವಾಗುವುದೆಂದೂ ಹೇಳಿದಾಗ ಅವರಿಗೆ ಗಾಬರಿಯಾಯಿತು.

ರೆವೆರೆಂಡ್ ಮತ್ತು ನೈಟ್ ಸೇರಿ ಆ ವಾರ ಪೂರ್ತಿ ಅನೇಕ ಸಲ ಸಮಾಲೋಚನೆ ನಡೆಸಿರೂ ಅವರಿಬ್ಬರಲ್ಲಿ ಒಮ್ಮತ ಮೂಡಲಿಲ್ಲ. ಜನರಲ್‌ರ ಶುದ್ಧ ರಕ್ತನಾಳ ಹಾನಿಗೊಂಡಿದೆ, ಅದಕ್ಕೆ ಕಾರಣ ಸರಿಯಾಗಿ ಚಿಕಿತ್ಸೆ ಮಾಡದ ಮೂಗಿನ ಉರಿಯೂತ ಎಂದು ರೆವೆರೆಂಡ್ ಅಭಿಪ್ರಾಯಪಟ್ಟರೆ, ಅವರ ಮೈಬಣ್ಣ ಮತ್ತು ಸಂಜೆ ಜ್ವರಗಳನ್ನು ಗಮನಿಸಿದರೆ ಅದು ನೆಲೆಯೂರಿದ ಮಲೇರಿಯ ಎಂಬುದರಲ್ಲಿ ಸಂದೇಹವಿಲ್ಲವೆಂಬುದು ನೈಟ್ ಅವರ ಊಹೆ. ಆದರೆ ಜನರಲ್‌ರ ದೇಹಸ್ಥಿತಿ ಗಂಭಿರವಾಗಿತ್ತು ಎಂಬುದರ ಬಗ್ಗೆ ಮಾತ್ರ ಅವರಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ, ಹಾಗೆಯೇ ತಮ್ಮ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಅವರು ಇತರ ವೈದ್ಯರನ್ನು ಕೇಳಿಕೊಂಡರು. ಸಂಟಾ ಮಾರ್ತಾದಿಂದ ಬಂದಿದ್ದ ಮೂವರು ಮತ್ತು ಇತರೆಡೆಯಿಂದ ಬಂದಿದ್ದವರು ಇವರೊಡನೆ ಸಹಕರಿಸಲು ವಿನಾಕಾರಣ ನಿರಾಕರಿಸಿದರು. ಹೀಗಾಗಿ ಡಾ. ರೆವೆರಂಡ್ ಮತ್ತು ಡಾ. ನೈಟ್ ಒಂದು ಒಮ್ಮತಕ್ಕೆ ಬಂದರು: ಮೂಗಿನ ಉರಿಯೂತಕ್ಕೆ ಮುಲಾಮು ಸವರುವುದು ಹಾಗೂ ಮಲೇರಿಯಕ್ಕೆ ಕ್ವಿನೈನ್ ನೀಡುವುದು.

ಆ ವಾರಾಂತ್ಯದ ವೇಳೆಗೆ ರೋಗಿಯ ಸ್ಥಿತಿ ಮತ್ತಷ್ಟು ಹದಗೆಟ್ಟಿತ್ತು, ಇದಕ್ಕೆ ಕಾರಣ ವೈದ್ಯರನ್ನು ಕೇಳದೆಯೇ ಜನರಲ್‌ರು ಕತ್ತೆಯ ಹಾಲನ್ನು ಕುಡಿದಿದ್ದುದು. ಚಿಕ್ಕವರಾಗಿದ್ದಾಗ ಕೆಮ್ಮನ್ನು ಹೋಗಲಾಡಿಸಲು ಅವರ ತಾಯಿ ಜೇನು ಸೇರಿಸಿದ ಕತ್ತೆಯ ಹಾಲನ್ನು ನೀಡುತ್ತಿದ್ದರು. ಅದರ ಹದವಾದ ರುಚಿ ಮತ್ತು ಅದರೊಡನೆ ಬೆರೆತಿದ್ದ ಬಾಲ್ಯದ ಸವಿನೆನಪುಗಳು ಅವರ ಪಿತ್ಥವನ್ನು ಕೆರಳಿಸಿ ದೇಹವನ್ನು ಹದಗೆಡಿಸಿತ್ತು; ಜನರಲ್‌ರ ಆಯಾಸ ಎಷ್ಟು ತೀವ್ರವಾಗಿತ್ತೆಂದರೆ ಜಮೈಕದಿಂದ ಪರಿಣತವೈದ್ಯರನ್ನು ಕರೆತರಲು ಡಾ ನೈಟ್ ಅಂದುಕೊಂಡಿದ್ದಕ್ಕಿಂತ ಮುಂಚೆಯೇ ಹೊರಟರು. ಅವರು ಕಳಿಸಿದ್ದು

ಇಬ್ಬರನ್ನು; ಇಬ್ಬರೂ ತುಂಬ ನಿಷ್ಣಾತರು; ಆದರೆ ಅವರು ಬಂದದ್ದು ಮಾತ್ರ ತಡವಾಗಿ.

ಇದರೊಡನೆ, ಜನರಲ್‌ರ ಮನಸ್ಥಿತಿ ಅವರ ದೈಹಿಕ ಸ್ಥಿತಿಗೆ ಅನುಗುಣವಾಗಿರಲಿಲ್ಲ, ತಮ್ಮನ್ನು ಹಿಂಡಿಹಾಕುತ್ತಿದ್ದ ರೋಗಗಳನ್ನವರು ವಿರೋಧಿಗಳ ಕಿರುಕುಳವೆಂಬಂತೆ ಪರಿಗಣಿಸುತ್ತಿದ್ದರು. ರಾತ್ರಿಗಳನ್ನವರು ತಮ್ಮ ಜೋಲಿಮಂಚದಲ್ಲಿ ಉರುಳಿಕೊಂಡು ಎಚ್ಚರಗೊಂಡೇ ಕಳೆಯುತ್ತಿದ್ದರು, ಎಲ್ ಮೋರೋ ಕೋಟೆಯಲ್ಲಿ ಬೆಳಕುಗಳು ಬದಲಾಗುವುದನ್ನು ಗಮನಿಸುತ್ತಿದ್ದರು, ಆದರೆ ನರಳುವಿಕೆಯು ತಮ್ಮ ಸ್ಥಿತಿಯನ್ನು ಬೇರೆಯವರಿಗೆ ತೋರಿಸದಂತೆ ಎಚ್ಚರವಹಿಸುತ್ತಿದ್ದರು, ಜಗತ್ತಿನಲ್ಲಿಯೇ ಅತ್ಯಂತ ಸುಂದರವೆಂದು ಪರಿಗಣಿತವಾಗಿದ್ದ ಕೊಲ್ಲಿಯ ವೈಭವವನ್ನು ಕಣ್ಣಿನಲ್ಲಿ ತುಂಬಿಕೊಳ್ಳುತ್ತಿದ್ದರು.

"ಅದನ್ನು ನೋಡಿ ನೋಡಿ ನನ್ನ ಕಣ್ಣುಗಳು ನೋಯುತ್ತವೆ" ಎಂದು ಅವರೇ ಹೇಳಿಕೊಳ್ಳುತ್ತಿದ್ದರು.

ಹಗಲು ಹೊತ್ತು ಹಿಂದಿನಂತೆಯೇ ಉತ್ಸಾಹ ಪ್ರದರ್ಶಿಸುತ್ತ, ಇಬಾರಾ ಅವರನ್ನೋ ವಿಲ್ಸನ್ ಅವರನ್ನೋ ಫರ್ನಾಂಡಿಸ್ ಅನ್ನೋ ಅಥವಾ ಹತ್ತಿರ ಯಾರೇ ಇರಲಿ ಅವರನ್ನು ಕರೆದು ತಾವು ಬರೆಯಬೇಕಾದ ಪತ್ರಗಳ ಬಗ್ಗೆ ವಿವರಿಸುತ್ತಿದ್ದರು, ಆದರೆ ಅವುಗಳನ್ನು ಹೇಳಿ ಬರೆಸುವ ತಾಳ್ಮೆ ಮಾತ್ರ ಉಳಿದಿರಲಿಲ್ಲ. ಈ ತುರ್ತು ಎನ್ನಿಸುವ ವಿಷಯಗಳೆಲ್ಲ ಅವರ ಕೊನೆಯ ದಿನಗಳವು ಎಂದು ಅವರ ಹೃದಯಬಡಿತವನ್ನರಿತಿದ್ದ ಜೋಸೆ ಪೆಲಾಸಿಯೋಸ್ ಮಾತ್ರ ಅರ್ಥಮಾಡಿಕೊಂಡಿದ್ದ. ಏಕೆಂದರೆ ಜನರಲ್ ಮಾಡುತ್ತಿದ್ದುದು ಸನಿಹದವರ, ಅವರಲ್ಲಿ ಕೆಲವರು ಸಂಟಾ ಮಾರ್ತಾದಲ್ಲೂ ಇದ್ದವರಲ್ಲ, ಭವಿಷ್ಯದ ಬಗ್ಗೆ ಯೋಜನೆಗಳನ್ನು ಹಾಕುತ್ತಿದ್ದುದು. ತಮ್ಮ ಮಾಜಿ ಕಾರ್ಯದರ್ಶಿ ಜನರಲ್ ಜುವಾನ್ ಜೋಸೆ ಸಂಟಾನಾನೊಂದಿಗಿನ ಮನಸ್ತಾಪವನ್ನವರು ಮರೆತು, ವಿವಾಹೋತ್ತರ ಬದುಕನ್ನು ಸುಖವಾಗಿ ಕಳೆಯಲು ಅನುಕೂಲವಾಗುವಂತೆ ಅವನಿಗೆ ವಿದೇಶ ವ್ಯವಹಾರ ಸಚಿವಾಲಯದಲ್ಲಿ ಒಂದು ಹುದ್ದೆಯನ್ನು ಕೊಡಿಸಿದ್ದರು. ಜನರಲ್ ಜೋಸೆ ಮರಿಯ ಕ್ಯಾರೆನೋನ ಒಳ್ಳೆಯತನದ ಬಗ್ಗೆ ಹೊಗಳಿಕೆಯ ಮಾತಾಡಿ, ವೆನಿಝೂಲದ ಅಧ್ಯಕ್ಷ ಪದವಿಗೆ ಏರುವ ದಾರಿಯಲ್ಲಿ ಅವನನ್ನು ನಿಲ್ಲಿಸಿದ್ದರು. ಆಂಡ್ರೆ ಇಬಾರಾ ಮತ್ತು ಜೋಸೆ ಲಾರೆನ್ಸಿಯೋ ಸಿಲ್ವ ಅವರಿಗೆ ಮುಂದಾದರೂ ಕ್ರಮಬದ್ಧ ಆದಾಯ ಪಡೆಯಲನುವಾಗುವಂತೆ ಸಂಬಂಧಿಸಿದ ಸೇವಾ ದಾಖಲೆಗಳನ್ನು ಒದಗಿಸುವಂತೆ ಊರ್ಡಾನೆಟನನ್ನು ಕೇಳಿಕೊಂಡಿದ್ದರು. ಅದರಂತೆ ಸಿಲ್ವ ಮುಂದೆ ದೇಶದ ಸೈನ್ಯ ಮತ್ತು ನೌಕಾದಳದಲ್ಲಿ ಪ್ರಮುಖ ಜನರಲ್ ಮತ್ತು ಕಾರ್ಯದರ್ಶಿಯಾಗಿ ತನ್ನ ಎಂಬತ್ತೆರಡನೇ ವರ್ಷದಲ್ಲಿ ಸತ್ತ; ಆ ಹೊತ್ತಿಗೆ ಅವನು ಭಯಪಟ್ಟಿದ್ದಂತೆಯೇ

ಕಣ್ಣುಗಳಲ್ಲಿ ಪೊರೆ ತುಂಬಿ ದೃಷ್ಟಿ ಮಂಜಾಗಿತ್ತು, ಮೈಮೇಲಿದ್ದ ಅಸಂಖ್ಯ ಗಾಯದ ಕಲೆಗಳನ್ನು ತೋರಿಸಿ ತನ್ನ ಅಂಗವೈಕಲ್ಯವನ್ನು ಸಾಬೀತುಪಡಿಸಲು ಬಹು ಕಷ್ಟಪಟ್ಟು ಕೊನೆಗೂ ಪಡೆದಿದ್ದ ಪ್ರಮಾಣಪತ್ರದ ಸಹಾಯದಿಂದ ಜೀವನ ಸಾಗಿಸುತ್ತಿದ್ದ.

ಯುದ್ಧ ಸಚಿವನಾಗಲು ನ್ಯೂ ಗ್ರನಡಾಕ್ಕೆ ಮರಳುವಂತೆ ಪೆಡ್ರೋ ಬ್ರೈಸೆನೋ ಮೆಂಡೆಝ್‌ನ ಮನವೊಲಿಸಲು ಜನರಲ್ ಪ್ರಯತ್ನಿಸಿದ್ದರು, ಆದರೆ ಚರಿತ್ರೆಯ ರಭಸ ಅವರಿಗೆ ಆ ಅವಕಾಶ ಒದಗಿಸಲಿಲ್ಲ. ತನ್ನ ಸೋದರ ಸಂಬಂಧಿ ಫರ್ನಾಂಡೋ ಸಾರ್ವಜನಿಕ ಆಡಳಿತದಲ್ಲಿ ವೃತ್ತಿಪರನಾಗಲು ಅನುಕೂಲವಾಗುವಂತೆ ಅವರು ಆಸ್ತಿಯನ್ನು ಬಿಟ್ಟಿದ್ದರು. ತಮ್ಮ ಮೊದಲ ಆಪ್ತ ಸಹಾಯಕ ಹಾಗೂ ಖಾಸಗಿಯಲ್ಲಿ ಹಾಗೂ ಬಹಿರಂಗದಲ್ಲಿ ತಾವು ಆಪ್ತವಾಗಿ ಮಾತನಾಡುವ ಕೆಲವರಲ್ಲಿ ಒಬ್ಬನಾದ ಜನರಲ್ ಡಿಯಾಗೋ ಇಬಾರಾಗೆ ವೆನಿಝೂಲ ಬಿಟ್ಟು ಹೆಚ್ಚಿನ ಮಾನ್ಯತೆ ದೊರೆಯುವ ಎಲ್ಲಿಗಾದರೂ ಹೋಗುವಂತೆ ಸಲಹೆ ನೀಡಿದ್ದರು. ಜನರಲ್ ಜಸ್ಟೋ ಬ್ರೈಸೆನೋ ಬಗ್ಗೆ ಅವರಿಗೆ ಕೊಂಚ ವಿಷಾದವಿತ್ತು, ಆದರೆ ಮರಣಶಯ್ಯೆಯಲ್ಲಿರುವಾಗಲೂ ತಮ್ಮ ಕೊನೆಯ ಸಹಾಯವನ್ನವರು ಕೇಳಿದ್ದರು.

ಸಹಾಯಗಳು ಸೇರಬೇಕಾದೆಡೆ ಎಷ್ಟರಮಟ್ಟಿಗೆ ಸೇರಿದವು ಎಂಬುದರ ಬಗ್ಗೆ ಅವರ ಅಧಿಕಾರಿಗಳು ಎಂದೂ ಊಹಿಸಲು ಆಗಿರಲಿಲ್ಲ. ಏಕೆಂದರೆ, ಒಳ್ಳೆಯದಕ್ಕೋ ಕೆಟ್ಟುದಕ್ಕೋ, ಅವರೆಲ್ಲ ಜೀವನವಿಡೀ ಬೊಲಿವರ್ ಕನಸಿನ ಸಮಗ್ರತೆಯ ಸಾಧನೆಗಾಗಿ ಕಮಾಂಡರ್ ಪೆಡ್ರೋ ಕಾರುಜ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ, ಐದು ವರ್ಷಗಳ ನಂತರ ವೆನಿಝೂಲದಲ್ಲಿ ಒಂದಾಗುವ ಚಾರಿತ್ರಿಕ ವ್ಯಂಗ್ಯವೂ ಸೇರಿದಂತೆ, ಭಾಗಿಗಳಾದರು.

ಇವೆಲ್ಲ ರಾಜಕೀಯ ತಂತ್ರಗಳಾಗಿರಲಿಲ್ಲ, ಅವು ಅನಾಥರಿಗೆ ಬಿಟ್ಟು ಹೋದ ಆಸ್ತಿಗಳಾಗಿದ್ದವು; ಈ ಅಂಶವನ್ನು ಊರ್ಡಾನೆಟನಿಗೆ ಅವರು ಹೇಳಿ ಬರೆಸಿದ್ದ ಆಶ್ಚರ್ಯಕರ ಹೇಳಿಕೆಯನ್ನು ಉಲ್ಲೇಖಿಸಿ ವಿಲ್ಸನ್ ಖಚಿತಪಡಿಸಿದ್ದ: "ರಯೋಹಚ ಪ್ರಯತ್ನ ವಿಫಲವಾಯಿತು." ಅದೇ ಮಧ್ಯಾಹ್ನ ಬಿಷಪ್ ಎಸ್ಟೆವೆಝ್ ದ ಅನ್‌ಪ್ರಿಡಿಕ್ಟಬಲ್‌ರಿಂದ ಜನರಲ್ ಅವರಿಗೆ ಪತ್ರವೊಂದು ಬಂದಿತ್ತು, ಅದರಲ್ಲಿ ಸಂಟಾ ಮಾರ್ತಾ ಮತ್ತು ರಯೋಹಚಗಳನ್ನು ವಿಭಾಗಗಳೆಂದು ಪರಿಗಣಿಸುವಂತೆ ಕೇಂದ್ರ ಸರ್ಕಾರದ ಮೇಲೆ ತಮ್ಮ ಪ್ರಭಾವ ಬೀರಿ, ಆ ಮೂಲಕ ಕಾರ್ಟೆಜೆನದೊಡನೆ ತಮಗಿದ್ದ ಭಿನ್ನಾಭಿಪ್ರಾಯವನ್ನು ಕೊನೆಗೊಳಿಸಲು ಅವರನ್ನು ಕೇಳಿಕೊಳ್ಳಲಾಗಿತ್ತು. ಆ ಪತ್ರವನ್ನು ಜೋಸೆ ಲಾರೆನ್ಸಿಯೋ ಸಿಲ್ವ ಓದಿ ಮುಗಿಸಿದಾಗ ಜನರಲ್ ನಿರುತ್ಸಾಹದ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು. "ಕೊಲಂಬಿಯನ್ನರಿಗೆ ಹೊಳೆಯುವ ಯೋಚನೆಗಳೆಂದರೆ

ದೇಶವನ್ನು ಒಡೆಯುವಂತಹವೇ" ಎಂದಿದ್ದರು. ಆಮೇಲೆ, ಅದಕ್ಕೆ ಉತ್ತರವಾಗಿ ಫರ್ನಾಂಡೋ ಮುಂದೆ ವ್ಯಕ್ತಪಡಿಸಿದ ಅಭಿಪ್ರಾಯದಲ್ಲಿ ಮತ್ತಷ್ಟು ವ್ಯಗ್ರತೆಯನ್ನು ತೋರಿಸಿದ್ದರು:

"ಅದಕ್ಕೆ ಉತ್ತರವನ್ನೂ ಕೊಡಬೇಡ, ನಾನು ಭೂಮಿಯ ಆರು ಅಡಿ ಆಳದಲ್ಲಿ ಹೊಗುವವರೆಗೂ ಅವರು ಕಾಯಲಿ, ಆಮೇಲೆ ಅವರೇನಾದರೂ ಮಾಡಿಕೊಳ್ಳಲಿ!"

ಸದಾ ಹವಾಮಾನದ ಬದಲಾವಣೆಗಾಗಿ ಹಾತೊರೆಯುತ್ತಿದ್ದುದರಿಂದ ಅವರು ಬುದ್ಧಿಮಾಂದ್ಯದ ಅಂಚಿನಲ್ಲೇ ಇರುತ್ತಿದ್ದರು. ತೇವದಿಂದ ಕೂಡಿದ್ದರೆ, ಒಣಗಿದ ಹವಕ್ಕಾಗಿ ಹಂಬಲಿಸುತ್ತಿದ್ದರು, ಚಳಿಯಾದರೆ ಕಡಿಮೆಯಿರಲೆಂದು ಹಾರೈಸುತ್ತಿದ್ದರು, ಪರ್ವತವಾದರೆ ಕರಾವಳಿಗಾಗಿ ಹಾತೊರೆಯುತ್ತಿದ್ದರು. ಇದರಿಂದ ಅವರ ನಿರಂತರ ಚಡಪಡಿಕೆ ಹೆಚ್ಚಾಗುತ್ತಿತ್ತು. ಕಿಟಕಿ ಮುಚ್ಚಿದ್ದರೆ ಗಾಳಿ ಬೇಕೆಂದು ತೆರೆಯಲು, ತೆರೆದಿದ್ದರೆ ಮುಚ್ಚಲು ಹೇಳುತ್ತಿದ್ದರು; ತಮ್ಮ ಆರಾಮ ಕುರ್ಚಿಯನ್ನು ಬೆಳಕಿರುವೆಡೆಗೆ ಬದಲಾಯಿಸಲು, ಮತ್ತೆ ಹಿಂದಿನ ಜಾಗಕ್ಕೆ ಬರಲು ಆಸೆಪಡುತ್ತಿದ್ದರು. ಅಲ್ಪ ಶಕ್ತಿಯ ದೇಹವನ್ನು ಜೋಲಿಮಂಚದಲ್ಲಿ ತೂಗಾಡಿಕೊಳ್ಳುವುದರಿಂದ ಮಾತ್ರವೇ ಅವರಿಗೆ ಒಂದಷ್ಟು ಸಮಾಧಾನ ಸಿಕ್ಕುವಂತೆ ತೋರುತ್ತಿತ್ತು.

ಸಂಟಾ ಮಾರ್ತಾದಲ್ಲಿದ್ದ ದಿನಗಳು ಎಷ್ಟು ಖೇದಪೂರ್ಣವಾದುವೆಂದರೆ, ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿತೆಂದರೆ ಜನರಲ್ ಸೆನೋರ್ ದ ಮಯರ್‌ನ ಹಳ್ಳಿ ಮನೆಗೆ ಹೋಗಲು ಅವರಿಗೆ ಆಸೆಯಾಗುತ್ತಿತ್ತು. ಇದನ್ನು ಮೊದಲು ಪ್ರೋತ್ಸಾಹಿಸಿದವರೆಂದರೆ ಡಾ. ರೆವೆರೆಂಡ್, ಯಾಕೆಂದರೆ ಇದು ಚೇತರಿಸಿಕೊಳ್ಳಲಾರದ ಕೊಟ್ಟ ಕೊನೆಯ ಸ್ಥಿತಿಯೆಂಬುದು ವೈದ್ಯರಿಗೆ ತಿಳಿದುಹೋಗಿತ್ತು. ಪಯಣದ ಹಿಂದಿನ ರಾತ್ರಿ ಜನರಲ್ ತಮ್ಮ ಸ್ನೇಹಿತರಿಗೆ ಹೀಗೆ ಬರೆದಿದ್ದರು: "ಹೆಚ್ಚೆಂದರೆ ಇನ್ನೊಂದೆರಡು ತಿಂಗಳಷ್ಟೇ ನಾನು ಬದುಕಿರುವುದು." ಈ ಮಾತು ಎಲ್ಲರಲ್ಲೂ ಅಚ್ಚರಿ ತಂದಿತ್ತು, ಯಾಕಂದರೆ ಅವರ ಜೀವಮಾನದಲ್ಲಿ, ಈಚಿನ ವರ್ಷಗಳಲ್ಲಿ ಕೂಡ, ಅವರು ಸಾವಿನ ಪ್ರಸ್ತಾಪ ಮಾಡಿದ್ದುದು ಬಹಳ ಕಡಿಮೆ.

ಸಂಟಾ ಮಾರ್ತಾದಿಂದ ಒಂದು ಲೀಗ್‌ನಷ್ಟೇ ದೂರದಲ್ಲಿ ಸಿಯೆರ ನೆವಡ ಬೆಟ್ಟದ ಬುಡದಲ್ಲಿದ್ದ ಲ ಫ್ಲಾರಿಡ ದ ಸ್ಯಾನ್ ಪೆಡ್ರೋ ಅಲೆಜ್ಯಾಂಡ್ರಿನೋ ಕಬ್ಬಿನ ಗದ್ದೆ, ಅದರಲ್ಲಿ ಕಂದು ಸಕ್ಕರೆಯನ್ನು ತಯಾರಿಸುವ ಒಂದು ಯಂತ್ರವಿತ್ತು. ಅಲ್ಲಿಗೆ ಸೆನೋರ್ ದ ಮಯರ್ ಅವರ ಸಾರೋಟಿನಲ್ಲಿ ಜನರಲ್ ಹೋದರು. ಹತ್ತು ದಿನಗಳ ಬಳಿಕ ಹಳೆಯ ಕಂಬಳಿಯನ್ನು ಸುತ್ತಿದ ಅವರ ದೇಹ ಎತ್ತಿನ ಗಾಡಿಯಲ್ಲಿ ಅದೇ ರಸ್ತೆಯಲ್ಲಿ ಹಿಂದಕ್ಕೆ ಪಯಣ ಬೆಳೆಸಿತು. ಮನೆ ಇನ್ನೂ ದೂರ ಇದೆ ಎನ್ನುವಾಗಲೇ

ಅಲ್ಲಿನ ಬಿಸಿ ಕಾಕಂಬಿಯ ವಾಸನೆ ಗಾಳಿಯಲ್ಲಿ ತೇಲಿ ಬಂತು, ಇದರಿಂದ ಅವರಿಗೆ ಹಳೆಯ ನೆನಪುಗಳು ನುಗ್ಗಿ ಬಂದವು.

"ಇದು ಸ್ಯಾನ್ ಮೆಟಿಯೋದ ವಾಸನೆ" ಎಂದವರು ನಿಟ್ಟುಸಿರು ಬಿಟ್ಟಿದ್ದರು. ಕ್ಯಾರಕಸ್‌ನಿಂದ ಇಪ್ಪತ್ತನಾಲ್ಕು ಲೀಗ್ ದೂರವಿದ್ದ ಸ್ಯಾನ್ ಮೆಟಿಯೋ ಕಬ್ಬಿನ ಗದ್ದೆ ಅವರ ಹಂಬಲದ ಕೇಂದ್ರ ಬಿಂದು. ಅಲ್ಲಿಯೇ ತಾವು ಮೂರು ವರ್ಷದವರಾಗಿದ್ದಾಗ ತಂದೆಯನ್ನು ಕಳೆದುಕೊಂಡಿದ್ದುದು, ತಮಗೆ ಒಂಬತ್ತು ವರ್ಷವಾಗಿದ್ದಾಗ ತಾಯಿ ತೀರಿಕೊಂಡಿದ್ದುದು, ತಮಗೆ ಇಪ್ಪತ್ತು ವರ್ಷವಾಗಿದ್ದಾಗ ಹೆಂಡತಿ ಸತ್ತಿದ್ದುದು. ಸ್ಪೈನ್‌ನಲ್ಲಿ ತಮ್ಮ ಬಳಗದ ಹೆಣ್ಣನ್ನೇ ಅವರು ಮದುವೆಯಾಗಿದ್ದರು, ಆಕೆ ಅಮೆರಿಕನ್ ಶ್ರೀಮಂತ ಮನೆತನದ ಸುಂದರ ಯುವತಿ. ಆಗಿನ ಅವರ ಏಕೈಕ ಕನಸೆಂದರೆ ಸ್ಯಾನ್ ಮೆಟಿಯೋ ಕಬ್ಬಿನ ಗದ್ದೆಯ ಮಾಲೀಕರಾಗಿ ಹೆಚ್ಚು ಹಣ ಸಂಪಾದಿಸಿ ಹೆಂಡತಿಯೊಡನೆ ಸುಖವಾಗಿ ಕಾಲ ಕಳೆಯುವುದು. ಅದು ನೆರವೇರಿರಲಿಲ್ಲ; ಮಹಾಜ್ವರದಿಂದಲೋ ಕೌಟುಂಬಿಕ ಆಕಸ್ಮಿಕದ ಕಾರಣವೋ ಆಕೆ ಮದುವೆಯಾದ ಎಂಟು ತಿಂಗಳ ಬಳಿಕ ಸತ್ತಿದ್ದಳು. ಅವರು ಚರಿತ್ರೆಯಲ್ಲಿ ಅವತಾರ ತಾಳಲು ಅದೇ ಕಾರಣವಾಯಿತು. ಆ ಹಿಂದೆ ಅವರು ವಸಾಹತುಗಳಲ್ಲಿನ ಒಬ್ಬ ಶ್ರೀಮಂತ ಯುವಕರಾಗಿದ್ದರು, ಅವರ ಮನಸ್ಸಿನಲ್ಲಿ ಆಗ ತುಂಬಿದ್ದುದು ಐಹಿಕ ಸುಖದ ಘಮಲು, ರಾಜಕೀಯದಲ್ಲಿ ಕೊಂಚವಾದರೂ ಆಸಕ್ತಿಯಿರಲಿಲ್ಲ. ಆದರೆ ಆ ಕ್ಷಣ ಯಾವುದೇ ವಿಳಂಬವಿಲ್ಲದೆ ಅವರ ಬದುಕನ್ನು ಎಂದೆಂದಿಗೂ ಬದಲಿಸಿತು. ಮತ್ತೆ ಎಂದೂ ಅವರು ಸತ್ತ ತಮ್ಮ ಹೆಂಡತಿಯ ಪ್ರಸ್ತಾಪ ತೆಗೆದಿರಲಿಲ್ಲ, ಎಂದೂ ನೆನಪಿಸಿಕೊಂಡಿರಲಿಲ್ಲ, ಅವಳ ಸ್ಥಾನ ತುಂಬಲು ಎಂದೂ ಪ್ರಯತ್ನಿಸಲಿಲ್ಲ. ಜೀವಮಾನದ ಪ್ರತಿ ರಾತ್ರಿಯೂ ಅವರಿಗೆ ಸ್ಯಾನ್ ಮೇಟಿಯೋದ ಕನಸು, ಕೆಲವೇಳೆ ತಂದೆ ತಾಯಿಯರು ಸೋದರ-ಸೋದರಿಯರು ಕನಸಲ್ಲಿ ಕಾಣಿಸಿಕೊಳ್ಳುತ್ತಿದ್ದರು, ಆದರೆ ಹೆಂಡತಿ ಎಂದೂ ಕನಸಿನಲ್ಲಿ ಬಂದಿರಲಿಲ್ಲ, ಅವಳಿಲ್ಲದೆ ಬದುಕಲು ಅನುವಾಗುವಂತೆ ಅವಳ ನೆನಪು ಪುಟಿದೆದ್ದು ಬಾರದಂತೆ ಅವಳನ್ನು ಮನದಾಳದಲ್ಲಿ ಹುದುಗಿಬಿಟ್ಟಿದ್ದರು. ಅವಳ ನೆನಪನ್ನು ಕ್ಷಣಕಾಲ ಕೆದಕಬಹುದಾಗಿದ್ದ ಒಂದೇ ವಸ್ತುವೆಂದರೆ ಸ್ಯಾನ್ ಪೆಡ್ರೋ ಅಲೆಜ್ಯಾಂಡ್ರಿನೋದ ಕಾಕಂಬಿಯ ವಾಸನೆ, ಅವರೆಡೆಗೆ ಕನಿಕರದ ದೃಷ್ಟಿ ಹಾಯಿಸುತ್ತಿದ್ದ ಆಲೆಮನೆಯ ಗುಲಾಮರ ನಿರ್ಭಾವುಕತೆ, ಅವರನ್ನು ಬರಮಾಡಿಕೊಳ್ಳಲು ಸುಣ್ಣ ಬಳಿದಿದ್ದ ಮನೆಯ ಸುತ್ತಣ ಮಹಾ ಮರಗಳು, ಇದು ಕೊಲ್ಲುವ ಸಂಚು ಹೂಡಿದ ದುರ್ವಿರೋಧ ವಿಧಿ ಅವರನ್ನು ಕರೆದೊಯ್ದಿದ್ದ ಇನ್ನೊಂದು ಆಲೆಮನೆ.

"ಅವಳ ಹೆಸರು ಮರಿಯ ತೆರೇಸಾ ರೋಡ್ರಿಗಝ್ ಡೆಲ್ ತೋರೋಯ್ ಅಲಯ್‌ಝ಼" ಎಂದರು ಅವರು ಯಾವುದೇ ಸೂಚನೆಯಿಲ್ಲದೆ.

ಸೆನೋರ್ ದ ಮಯೆರ್ ಗಲಿಬಿಲಿಗೊಂಡರು.

"ಯಾರು?" ಎಂದು ಕೇಳಿದರು.

"ಅದೇ ನನ್ನ ಹೆಂಡತಿಯಾಗಿದ್ದವಳು" ಎಂದು ಹೇಳಿ, ತಕ್ಷಣ ಅದಕ್ಕೆ ಪ್ರತಿಕ್ರಿಯೆಯಾಗಿ, "ಅದನ್ನು ದಯವಿಟ್ಟು ಮರೆತುಬಿಡಿ, ಅದು ನನ್ನ ಯೌವನದ ಒಂದು ದುರಂತ" ಎಂದರು.

ಅವರು ಮಾತನಾಡಿದ್ದು ಅಷ್ಟು ಮಾತ್ರ.

ಅವರಿಗಾಗಿ ಸಜ್ಜುಗೊಳಿಸಿದ್ದ ಮಲಗುವ ಕೋಣೆಯು ಅವರಲ್ಲಿ ಮತ್ತೊಂದು ನೆನಪನ್ನು ಕೆದಕಿತ್ತು. ಇದರಿಂದಾಗಿ ಅವರು ಕೋಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು, ಕಂಡ ಪ್ರತಿಯೊಂದು ವಸ್ತುವೂ ಹೊಸದೇನೋ ಎಂಬಂತೆ ನೋಡಿದರು. ಹಾಸಿಗೆಯ ಜೊತೆಗೆ ಒಂದು ಮಹೋಗನಿಯ ಬೀರು, ಅಮೃತಶಿಲೆಯ ಹಲಗೆ ಹೊದಿಸಿದ್ದ ಮೇಜು ಹಾಗೂ ಕೆಂಪು ವೆಲ್ವೆಟ್‌ನ ಹೊದಿಕೆಯ ಒಂದು ಆರಾಮಕುರ್ಚಿ ಕೋಣೆಯಲ್ಲಿದ್ದವು. ಕಿಟಕಿಯ ಪಕ್ಕದ ಗೋಡೆಯ ಮೇಲೆ ರೋಮನ್ ಅಂಕಿಗಳಿದ್ದ ಅಷ್ಟಕೋನಾಕೃತಿಯ ಒಂದು ಗಡಿಯಾರ, ಆದರೆ ಅದು ಒಂದು ಗಂಟೆ ಏಳು ನಿಮಿಷ ತೋರಿಸುತ್ತ ನಿಂತುಹೋಗಿತ್ತು.

"ನಾವು ಇಲ್ಲಿಗೆ ಹಿಂದೆಯೂ ಬಂದಿದ್ವಿ" ಎಂದರು ಜನರಲ್.

ಆಮೇಲೆ, ಜೋಸೆ ಪೆಲಾಸಿಯೋಸ್ ಗಡಿಯಾರಕ್ಕೆ ಕೀಲಿ ಕೊಟ್ಟು ಸರಿಯದ ಸಮಯಕ್ಕೆ ಮುಳ್ಳುಗಳನ್ನು ತಿರುಗಿಸಿದ. ಜನರಲ್ ಜೋಲಿಮಂಚದಲ್ಲಿ ಉರುಳಿಕೊಂಡರು, ಕ್ಷಣ ಹೊತ್ತು ನಿದ್ದೆ ಮಾಡಲು ಪ್ರಯತ್ನಿಸಿದರು. ಆಗಲೇ ಕಿಟಕಿಯ ಮೂಲಕ ನೀಲಿ ಸಿಯೆರ ನೆವಡಾ ಅವರಿಗೆ ಕಾಣಿಸಿದ್ದು, ಗೋಡೆಗೆ ಜೋತುಹಾಕಿದ್ದ ಒಂದು ವರ್ಣಚಿತ್ರದ ಹಾಗೆ; ಆಮೇಲೆ ಅವರ ನೆನಪು ಇತರ ಕೋಣೆಗಳು ಹಾಗೂ ವ್ಯಕ್ತಿಗಳ ಕಡೆ ಹಾದು ಹೋಯಿತು.

"ಈಗ ಮನೆಯಲ್ಲಿದ್ದಂತೆಯೇ ಭಾಸವಾಗ್ತಿದೆ" ಎಂದರು.

ಸ್ಯಾನ್ ಪೆಡ್ರೋ ಅಲೆಜಾಂಡ್ರಿನೋದಲ್ಲಿನ ಮೊದಲ ರಾತ್ರಿ ಜನರಲ್ ಹಾಯಾಗಿ ನಿದ್ರಿಸಿದರು, ಮಾರನೇ ದಿನ ತಮ್ಮ ರೋಗಗಳಿಂದ ತುಂಬ ಸುಧಾರಿಸಿದ್ದಂತೆ ತೋರಿತು, ಹೀಗಾಗಿ ಆಲೆಮನೆಗೆ ಭೇಟಿ ಕೊಟ್ಟು, ಎತ್ತುಗಳನ್ನು ಬೆಳೆಸಿದ್ದ ರೀತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು, ಜೇನಿನ ರುಚಿ ನೋಡಿದರು, ಸಕ್ಕರೆ ತಯಾರಿಕೆಯ ಬಗ್ಗೆ ತಮಗಿದ್ದ ತಿಳಿವಳಿಕೆಯಿಂದ ಎಲ್ಲರಲ್ಲೂ ಅಚ್ಚರಿ ಮೂಡಿಸಿದರು. ಅವರಲ್ಲಾದ ಬದಲಾವಣೆಯಿಂದ ವಿಸ್ಮಿತರಾದ ಜನರಲ್ ಮಾಂಟಿಲ ಸತ್ಯವೇನೆಂದು ಹೇಳಲು ಡಾ. ರೆವೆರೆಂಡ್

ಅವರನ್ನು ಕೇಳಿಕೊಂಡರು; ಜನರಲ್ ಅವರಲ್ಲಿ ಕಾಣುತ್ತಿರುವ ಈ ಸುಧಾರಣೆ ಮರಣಕ್ಕೆ ಮುನ್ನ ಅಪರೂಪವಲ್ಲ ಎಂದು ಆಗ ಡಾಕ್ಟರ್ ವಿವರಿಸಿದರು. ಇನ್ನೇನು ಕೆಲವೇ ದಿನಗಳಲ್ಲಿ, ಅಥವಾ ಗಂಟೆಗಳಲ್ಲಿಯೇ ಕೊನೆ ಬರುತ್ತದೆ ಎಂದರು. ಈ ಕೆಟ್ಟ ಸುದ್ದಿಯಿಂದ ವಿಚಲಿತರಾದ ಮಾಂಟಿಲ ತಮ್ಮ ಮುಷ್ಟಿಯಿಂದ ಗೋಡೆ ಗುದ್ದಿ ತಮ್ಮ ಕೈ ನೋಯಿಸಿಕೊಂಡರು. ಮುಂದೆ ಜೀವಮಾನವಿಡೀ ಅವರ ಕೈ ಹಿಂದಿನಂತಾಗಲಿಲ್ಲ. ಅವರು ಜನರಲ್‌ರಿಗೆ ಎಷ್ಟೋ ಬಾರಿ ಸುಳ್ಳು ಹೇಳಿದ್ದರು, ಒಳ್ಳೆಯ ಉದ್ದೇಶದಿಂದ ಹಾಗೂ ಕೆಲ ವೇಳೆ ಕ್ಷುಲ್ಲಕ ರಾಜಕೀಯ ಕಾರಣಗಳಿಂದ. ಆ ದಿನದಿಂದ ಹೇಳುತ್ತಿದ್ದ ಸುಳ್ಳುಗಳ ಕಾರಣ ಜನರಲ್ ಅವರ ಬಗೆಗಿನ ಔದಾರ್ಯ, ಅವರ ಬಳಿ ಬಂದವರಿಗೂ ಅದೇ ರೀತಿ ಮಾಡಲು ಸೂಚಿಸುತ್ತಿದ್ದರು.

ಸರ್ಕಾರವಿರೋಧಿ ಚಟುವಟಿಕೆಗಳ ಆರೋಪದ ಮೇಲೆ ವೆನಿಝೂಲದಿಂದ ಉಚ್ಚಾಟನೆಗೊಂಡಿದ್ದ ಎಂಟು ಮಂದಿ ಸೇನೆಯ ಉನ್ನತಾಧಿಕಾರಿಗಳು ಆ ವಾರ ಸಂಟಾ ಮರ್ತಾಗೆ ಬಂದರು. ಅವರಲ್ಲಿ ಕೆಲವರು ವಿಮೋಚನಾ ಮಹಾಕಾವ್ಯದ ದೊಡ್ಡ ವೀರರೂ ಸೇರಿದ್ದರು: ನಿಕೋಲಸ್ ಸಿಲ್ವ, ಟ್ರಿನಿಡಾಡ್ ಪೋರ್ಟೋ ಕ್ಯಾರೆರೋ, ಜೂಲಿಯನ್ ಇನ್‌ಫ್ಲಾಂಟ್. ಮರಣಶಯ್ಯೆಯಲ್ಲಿದ್ದ ಜನರಲ್ ಅವರಿಗೆ ಈ ಕೆಟ್ಟ ಸುದ್ದಿಯನ್ನು ಹೇಳಿದಿರುವಂತೆ ಮಾತ್ರವಲ್ಲ, ಅವರಿಗಾದ ದುರದೃಷ್ಟಗಳಿಗೆ ಸಾಂತ್ವನ ಹೇಳಿ ಅವರ ಮನಸ್ಸಿಗೆ ಕೊಂಚ ನೆಮ್ಮದಿಯನ್ನುಂಟುಮಾಡಲೂ ಮಾಂಟಿಲ ಅವರಿಗೆ ಸೂಚಿಸಿದರು. ಅವರಾದರೋ ಇನ್ನೂ ಒಂದು ಹೆಜ್ಜೆ ಮುಂದೆ ಹೊಗಿ, ತಮ್ಮ ದೇಶದ ಪರಿಸ್ಥಿತಿಯ ಬಗ್ಗೆ ತುಂಬ ಆಶಾದಾಯಕ ವರದಿಯನ್ನು ನೀಡಿ ಜನರಲ್ ಅವರ ಕಣ್ಣುಗಳಲ್ಲಿ ಹಳೆಯ ಹುರುಪಿನ ದೀವಿಗೆ ಬೆಳಗುವಂತೆ ಮಾಡಿದರು. ಕಳೆದ ವಾರ ಮಾತಾಡಕೂಡದೆಂಬ ನಿರ್ಬಂಧಕ್ಕೊಳಗಾಗಿದ್ದ ಜನರಲ್ ಅವರು ರಯೋಹಚ ವಿಷಯಕ್ಕೆ ಮರಳಿ, ಸದ್ಯದಲ್ಲೇ ನನಸಾಗುವುದೇನೋ ಎಂಬಂತೆ ವೆನಿಝೂಲದ ಬಗ್ಗೆ ಮಾತಾಡಿದರು.

"ಸರಿ ದಾರಿಯಲ್ಲಿ ಮತ್ತೆ ನಾವು ಮುನ್ನಡೆಯಲು ಅತ್ಯಂತ ಉತ್ಕೃಷ್ಟ ಸ್ಥಿತಿ ಈಗ ಬಂದಿದೆ, ಅರಾಗುಅ ಕಣಿವೆಯಲ್ಲಿ ಕಾಲಿಟ್ಟರೆ, ಇಡೀ ವೆನಿಝೂಲ ದೇಶವೇ ನನ್ನ ಪರವಾಗಿ ಎದ್ದು ನಿಲ್ಲತ್ತೆ" ಎಂದು ದೃಢವಾದ ವಿಶ್ವಾಸದಿಂದ ನುಡಿದರು.

ಒಂದು ದಿನ ಹಗಲಲ್ಲಿ ಬಂದಿದ್ದ ಸೇನಾಧಿಕಾರಿಗಳ ಮುಂದೆ ಹೊಸ ಸೈನಿಕ ತಂತ್ರದ ರೂಪುರೇಷೆಗಳನ್ನು ಸಿದ್ಧಪಡಿಸಿದರು, ಅವರೆಲ್ಲ ಅನುಕಂಪಪೂರಿತ ಉತ್ಸಾಹದಿಂದ ಅವರಿಗೆ ಬೆಂಬಲವನ್ನು ಸೂಚಿಸಿದರು. ಹೇಗೆ ಮೊದಲಿನಿಂದ ದೇಶವನ್ನು ಈ ಸಲ ಶಾಶ್ವತವಾಗಿ ಕಟ್ಟಬೇಕೆಂಬುದರ

ಬಗ್ಗೆ, ತಮ್ಮ ಕನಸಿನ ವಿಶಾಲ ದೇಶದ ಬಗ್ಗೆ ಜನರಲ್ ರಾತ್ರಿಯಿಡೀ ತಮ್ಮ ಭವಿಷ್ಯವಾಣಿಯಲಿ ವಿವರಿಸಿದರು. ಇದು ಹುಚ್ಚನೊಬ್ಬನ ಕಲ್ಪನೆಯ ಮಾತುಗಳೆಂಬ ಅಪನಂಬಿಕೆ ವ್ಯಕ್ತಪಡಿಸಿದವರನ್ನು ಪ್ರಶ್ನಿಸಿದ ಏಕೈಕ ವ್ಯಕ್ತಿಯೆಂದರೆ ಮಾಂಟಲ ಮಾತ್ರ.

"ಕಾದು ನೋಡಿ, ಕ್ಯಾಸಾಕೋಯಿಮ ಬಗ್ಗೆಯೂ ಜನ ಹೀಗೆಯೇ ಅಂದುಕೊಂಡಿದ್ದರು" ಎಂದು ಹೇಳಿದರು.

ಯಾರೂ ೧೮೧೭ ರ ಜುಲೈ ೪ ನ್ನು ಮರೆತಿರಲಿಲ್ಲ, ಇದ್ದಕ್ಕಿದ್ದಂತೆ ಕಾಣಿಸಿಕೊಂಡಿದ್ದ ಸ್ಪಾನಿಶ್ ಸೇನೆಯ ಕಣ್ತಪ್ಪಿಸಲು ಇಡೀ ರಾತ್ರಿಯನ್ನು ಕ್ಯಾಸಾಕೋಯಿಮ ಸರೋವರದಲ್ಲಿ ಕೆಲವು ಮಂದಿ ಅಧಿಕಾರಿಗಳೊಡನೆ ಜನರಲ್ ಕಳೆಯಬೇಕಾಗಿ ಬಂದಿತ್ತು, ಆಗ ಜೊತೆಯಲ್ಲಿದ್ದವರಲ್ಲಿ ಬ್ರೈಸೆನೋ ಮೆಂಡೆಝ್ ಕೂಡ ಸೇರಿದ್ದರು. ಜ್ವರದಿಂದ ಬಳಲುತ್ತಿದ್ದರೂ ಅರೆಬೆತ್ತಲೆಯಾಗಿದ್ದ ಅವರು ಮುಂದೆ ತಾವು ಅನುಸರಿಸುವ ಪ್ರತಿ ಹೆಜ್ಜೆಯ ಬಗ್ಗೆ ಇದ್ದಕ್ಕಿದ್ದಂತೆ ಜೋರಾಗಿ ಘೋಷಿಸಿದ್ದರು: ಅಂಗೋಸ್ತುರವನ್ನು ತಕ್ಷಣ ವಶಪಡಿಸಿಕೊಳ್ಳುವ ಬಗ್ಗೆ, ನ್ಯೂ ಗ್ರನಡಾದ, ಆನಂತರ ವೆನಿಝೂಲದ ವಿಮೋಚನೆಗಾಗಿ ಆಂಡೀಸ್ ಅನ್ನು ದಾಟುವ ಬಗ್ಗೆ, ಆನಂತರ ಕೊಲಂಬಿಯ ಸ್ಥಾಪಿಸುವ ಬಗ್ಗೆ ಹಾಗೂ ಕೊನೆಯದಾಗಿ ಪೆರುವರೆಗಿನ ದಕ್ಷಿಣದ ವಿಶಾಲ ಭೂಭಾಗವನ್ನು ಗೆಲ್ಲುವ ಬಗ್ಗೆ. "ಆಮೇಲೆ ನಾವು ಶಿಂಬೋರಾಝೋವನ್ನು ಹತ್ತಿ, ಅದರ ಹಿಮಾವೃತ ಶಿಖರದ ಮೇಲೆ ಎಂದೆಂದಿಗೂ ಶ್ರೇಷ್ಠವಾದ, ಒಂದುಗೂಡಿದ ಹಾಗೂ ಸ್ವತಂತ್ರವಾದ ಅಮೆರಿಕನ್ ತ್ರಿವರ್ಣ ಧ್ವಜವನ್ನು ಹಾರಿಸ್ತೀವಿ" ಎಂದು ಮಾತನ್ನು ಮುಗಿಸಿದ್ದರು. ಕ್ಯಾಸಾಕೋಯಿಮದಲ್ಲಿ ಈ ಮಾತನ್ನು ಕೇಳಿದ್ದವರು ಅವರ ತಲೆ ಕೆಟ್ಟಿರಬೇಕೆಂದು ಆಗ ಭಾವಿಸಿದ್ದರು, ಆದರೆ ಆ ಮಾತು ಭವಿಷ್ಯವಾಕ್ಕಿನಂತೆ ಪ್ರತಿ ವಿವರದಲ್ಲೂ ನಿಜವಾಗಿತ್ತು, ಐದೇ ವರ್ಷಗಳಲ್ಲಿ.

ದುಃಖದ ಸಂಗತಿಯೆಂದರೆ, ಸ್ಯಾನ್ ಪೆಡ್ರೋ ಅಲೆಜಾಂಡ್ರಿನೋದಲ್ಲಿ ನುಡಿದ ಭವಿಷ್ಯವಾಕ್ಕು ಬರಲಿರುವ ಕಷ್ಟಕರ ಪರಿಸ್ಥಿತಿಗಳ ಮುಂಗಾಣ್ಕೆಯಾಗಿತ್ತು. ಮೊದಲ ವಾರದಲ್ಲಿನ ನರಳಾಟ ಸಂಪೂರ್ಣ ವಿನಾಶಕಾರಕ ಬಿರುಗಾಳಿಯಾಗಿ ಮುನ್ನಡೆದಿತ್ತು. ಈ ಹೊತ್ತಿಗೆ ಜನರಲ್ ಎಷ್ಟು ಕೃಶವಾಗಿದ್ದರೆಂದರೆ, ಅವರ ಶರ್ಟ್‌ನ ಕಫ್‌ಗಳನ್ನು ಮೇಲಕ್ಕೆ ಮತ್ತಷ್ಟು ಮಡಿಸಬೇಕಾಗಿತ್ತು, ಅವರ ಕಾರ್ಡುರಾಯ್ ಟ್ರೌಸರ್‌ಗಳ ಉದ್ದವನ್ನು ಒಂದು ಅಂಗುಲ ಕತ್ತರಿಸಬೇಕಾಯಿತು. ರಾತ್ರಿಯ ಮೊದಲಲ್ಲಿ ಮೂರು ಗಂಟೆಗಳಿಗಿಂತ ಹೆಚ್ಚು ಕಾಲ ಅವರು ನಿದ್ರಿಸಲಾಗುತ್ತಿರಲಿಲ್ಲ, ಉಳಿದ ರಾತ್ರಿಯೆಲ್ಲ ಕೆಮ್ಮಿನ ಮುಷ್ಟಿಯಲ್ಲಿ ಸಿಕ್ಕಿ ಒದ್ದಾಡುತ್ತಿದ್ದರು, ಅಥವಾ ಒಂದು ಬಗೆಯ ಸನ್ನಿಯ ಭ್ರಮೆಯಲ್ಲಿರುತ್ತಿದ್ದರು, ಇಲ್ಲವೇ ಸಂಟಾ ಮಾರ್ತಾದಲ್ಲಿ

ಶುರುವಾಗಿ ಈಗ ತೀವ್ರವಾಗಿ ಮತ್ತೆ ಮತ್ತೆ ಕಾಡುತ್ತಿದ್ದ ಬಿಕ್ಕಳಿಕೆಯಿಂದ ಹತಾಶೆಯ ದವಡೆಯಲ್ಲಿರುತ್ತಿದ್ದರು. ಮಧ್ಯಾಹ್ನದ ಹೊತ್ತು, ಮಿಕ್ಕವರು ಸವಿನಿದ್ದೆಯಲ್ಲಿರುವಾಗ, ಕಿಟಕಿಯ ಮೂಲಕ ಕಾಣುತ್ತಿದ್ದ ಹಿಮಾಚ್ಛಾದಿತ ಗಿರಿಶಿಖರವನ್ನೇ ದಿಟ್ಟಿಸುತ್ತ ತಮ್ಮ ದುಮ್ಮಾನವನ್ನು ಹತ್ತಿಕ್ಕಿಕೊಳ್ಳುತ್ತಿದ್ದರು.

ಅಟ್ಲಾಂಟಿಕ್ ಅನ್ನು ನಾಲ್ಕು ಬಾರಿ ದಾಟಿ ಬಿಡುಗಡೆಗೊಂಡ ಪ್ರದೇಶಗಳಲ್ಲೆಲ್ಲ ಬೇರಾರಿಗೂ ಸಾಧ್ಯವಾಗದ ರೀತಿಯಲ್ಲಿ ಕುದುರೆಯ ಮೇಲೆ ತಿರುಗಾಡಿದ್ದರು; ಅವರು ತಮ್ಮ ಉಯಿಲನ್ನೆಂದೂ ಬರೆಯಲಿಲ್ಲ, ಆ ಕಾಲಕ್ಕೆ ಅದರ ಬಗ್ಗೆ ಗೊತ್ತೇ ಇರಲಿಲ್ಲ. "ನಾನು ಯಾರಿಗಾದರೂ ಉಳಿಸಿಹೋಗಬೇಕಾದ್ದು ಏನೂ ಇಲ್ಲ" ಎನ್ನುತ್ತಿದ್ದರು. ಅವರು ಸಂಟಾ ಫ಼ ದ ಬೊಗೋಟದಿಂದ ಹೊರಡುವ ತಯಾರಿಯಲ್ಲಿದ್ದಾಗ ಜನರಲ್ ಪೆಡ್ರೋ ಅಲೆಸಾಂಟರಾ ಹೆರಾನ್ ಪ್ರವಾಸಿಯು ಕೈಗೊಳ್ಳಬೇಕಾದ ಕನಿಷ್ಠ ಮುನ್ನೆಚ್ಚರಿಕೆ ಎಂದು ಅವರಿಗೆ ಉಯಿಲು ಬರೆಯಲು ಸಲಹೆಯಿತ್ತಿದ್ದರು. ಸಾವು ತಮ್ಮ ಮುಂದಿನ ಯೋಜನೆಯಲ್ಲಿ ಸೇರಿಲ್ಲ ಎಂದು ಜನರಲ್ ತಮಾಷೆಗಿಂತ ಹೆಚ್ಚಾಗಿ ಗಂಭೀರ ದನಿಯಲ್ಲಿಯೇ ಉತ್ತರಿಸಿದ್ದರು. ಆದರೆ ಸ್ಯಾನ್ ಪೆಡ್ರೋ ಅಲೆಜಾಂಡ್ರಿನೋದಲ್ಲಿ ಅವರೇ ಸ್ವಂತ ಉಮೇದಿನಿಂದ ತಮ್ಮ ಕೊನೆಯ ಉಯಿಲು ಮತ್ತು ಇರಾದೆಯನ್ನು ಹೇಳಿ ಬರೆಸಿದ್ದರು. ಅದು ಛಿದ್ರಗೊಂಡ ಹೃದಯದ ಒದ್ದಾಟದ ಸಕಾರಣ ಕ್ರಿಯೆಯಾಗಿತ್ತು ಎಂಬುದು ಆಗ ಯಾರಿಗೂ ಗೊತ್ತಾಗಲೇ ಇಲ್ಲ.

ಫ಼ರ್ನಾಂಡೋಗೆ ಕಾಯಿಲೆಯಾಗಿ ಮಲಗಿದ್ದರಿಂದ, ಜೋಸೆ ಲಾರೆನ್ಸಿಯೋ ಸಿಲ್ವಗೆ ಅಸ್ತವ್ಯಸ್ತವಾದ ರೀತಿಯಲ್ಲಿ ಹೇಳಿ ಬರೆಸಿದ್ದರು, ಅದರಲ್ಲಿ ಅವರ ಇಚ್ಛೆಗಳಿಗಿಂತ ಹೆಚ್ಚಾಗಿ ಅವರ ಭ್ರಮೆಗಳೇ ಅಭಿವ್ಯಕ್ತಿ ಪಡೆದಿದ್ದವು: ಅಮೆರಿಕ ಹಿಡಿತಕ್ಕೆ ಸಿಕ್ಕುವುದಿಲ್ಲ, ಕ್ರಾಂತಿಯಲ್ಲಿ ಪಾಲುಗೊಂಡವನ ಕಾರ್ಯ ಸಮುದ್ರವನ್ನು ಉತ್ತಂತೆ, ದೇಶವು ಮೊದಲು ದೊಂಬಿಕೋರರ ವಶವಾಗಿ ಆನಂತರ ಎಲ್ಲ ಬಗೆಯ ಕ್ಷುದ್ರ ದಬ್ಬಾಳಿಕೆಗಾರರ ಕೈ ಸೇರುತ್ತದೆ, ಹಾಗೂ ಅನೇಕ ಗೆಳೆಯರಿಗೆ ಅವರು ಈ ಹಿಂದೆ ಬರೆಸಿದ್ದ ಪತ್ರಗಳಲ್ಲಿ ಚೆದರಿ ಹೋಗಿದ್ದ ನಾನಾ ಚಿಂತನೆಗಳು ಸೇರಿದ್ದವು.

ಒತ್ತರಿಸಿಕೊಂಡು ಬಂದಾಗ ಕೆಮ್ಮುವುದನ್ನು ಬಿಟ್ಟರೆ ಅನೇಕ ಗಂಟೆಗಳ ಕಾಲ ಒಂದೇ ಸಮನೆ ಪತ್ರಗಳನ್ನು ಹೇಳಿ ಬರೆಸುತ್ತಲೇ ಇದ್ದರು. ಅವರ ವೇಗಕ್ಕೆ ಅನುಗುಣವಾಗಿ ಜೋಸೆ ಲಾರೆನ್ಸಿಯೋ ಸಿಲ್ವಗೆ ಬರೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ, ಆಂಡ್ರೇ ಇಬಾರಾಗೆ ಹೆಚ್ಚು ಕಾಲ ಎಡಗೈಲಿ ಬರೆದುಕೊಳ್ಳಲಾಗುತ್ತಿರಲಿಲ್ಲ. ಕಾರ್ಯದರ್ಶಿಗಳು ಮತ್ತು ಆಪ್ತ ಸಹಾಯಕರೆಲ್ಲ ಸುಸ್ತು ಹೊಡೆದ ಬಳಿಕ, ನಿಕೋಲಸ್ ಮರಿಯಾನೋ ದ ಪಾಝ್ ಎಂಬ ರಾವುತ ದಳದ ಲೆಫ್ಟಿನೆಂಟ್ ಒಬ್ಬ ಮಾತ್ರ ಹೇಳಿ ಬರೆಸಿದ್ದನ್ನು

ಇನ್ನೂ ದಣಿಯದೆ ನಕಲು ಮಾಡುತ್ತಿದ್ದ ಕಾಗದವನ್ನೆಲ್ಲ ತನ್ನ ಸುಂದರ ಕೈಬರಹದಲ್ಲಿ ಎಚ್ಚರಿಕೆಯಿಂದ ಮುಗಿಸಿದ. ಇನ್ನೂ ಏನಾದರೂ ಬರೆಯುವುದಿದೆಯೇ ಎಂದು ವಿಚಾರಿಸಿದ ಅವನು ಹೇಳಿದ್ದನ್ನು ಗೋಡೆಯ ಮೇಲೆಲ್ಲ ಬರೆದುಕೊಂಡ. ಕೃತಜ್ಞತೆ ತುಂಬಿ ಬಂದು ಜನರಲ್ ಅವರು ಜನರಲ್ ಲೊರೆಂಝೋ ಕ್ಯಾರ್‌ಕೆಮೋ ಪ್ರೇಮ ದ್ವಂದ್ವ ಕಾಳಗಕ್ಕೆ ಬಳಸಿದ್ದ ಎರಡು ಪಿಸ್ತೂಲುಗಳನ್ನು ಅವನಿಗೆ ಕಾಣಿಕೆಯಾಗಿತ್ತರು.

ತಮ್ಮ ದೇಹವನ್ನು ವೆನಿಝೂಲಕ್ಕೆ ಒಯ್ಯಬೇಕು, ನೆಪೋಲಿಯನ್‌ಗೆ ಸೇರಿದ್ದ ಎರಡು ಪುಸ್ತಕಗಳನ್ನು ಕ್ಯಾರಕಾಸ್ ವಿಶ್ವವಿದ್ಯಾನಿಲಯಕ್ಕೆ ನೀಡಬೇಕು, ನಿರಂತರ ಸೇವೆಗಾಗಿ ಜೋಸೆ ಪೆಲಾಸಿಯೋಸ್‌ಗೆ ಎಂಟು ಸಾವಿರ ಪೆಸೋಗಳನ್ನು ಕಾಣಿಕೆಯಾಗಿ ಕೊಡಬೇಕು, ಕಾರ್ಟಜೆನದಲ್ಲಿದ್ದ ಸೆನಾರ್ ಪಾವಜೂಗೆ ತಾವು ಕೊಟ್ಟಿದ್ದ ಪತ್ರಗಳನ್ನು ಸುಟ್ಟು ಹಾಕಬೇಕು, ತಮ್ಮನ್ನು ಗೌರವಿಸಿ ಬೊಲಿವಿಯದ ಕಾಂಗ್ರೆಸ್ ನೀಡಿದ್ದ ಪದಕವನ್ನು ಅದಕ್ಕೇ ಹಿಂದಿರುಗಿಸಬೇಕು, ಫೀಲ್ಡ್ ಮಾರ್ಷಲ್ ಸ್ಯೂಕ್ರ್ ತಮಗೆ ಬಳುವಳಿಯಾಗಿತ್ತಿದ್ದ ಮಣಿಖಚಿತ ಚಿನ್ನದ ಕತ್ತಿಯನ್ನು ಫೀಲ್ಡ್ ಮಾರ್ಷಲ್ ಅವರ ವಿಧವೆಗೆ ಮರಳಿಸಬೇಕು, ತಮಗೆ ಸೇರಿದ್ದ ಅರೋಅ ಗಣಿಗಳು ಮತ್ತಿತರ ವಸ್ತುಗಳನ್ನು ತಮ್ಮ ಇಬ್ಬರು ಸೋದರಿಯರು ಹಾಗೂ ತೀರಿಕೊಂಡಿದ್ದ ಸೋದರನ ಮಕ್ಕಳಿಗೆ ಹಂಚಿ ಕೊಡಬೇಕು ಎಂಬುದು ಅವರ ಕೊನೆಯ ಆಸೆಯಾಗಿತ್ತು. ಮಿಕ್ಕಂತೆ ನೀಡಲು ಅವರ ಬಳಿ ಏನೂ ಇರಲಿಲ್ಲ, ಯಾಕೆಂದರೆ ಉಳಿದುದರಲ್ಲಿ ಸಣ್ಣದೊಡ್ಡ ಸಾಲಗಳನ್ನು ತೀರಿಸಬೇಕಾಗಿತ್ತು, ಅದರಲ್ಲಿ ಬಹು ದೊಡ್ಡದೆಂದರೆ ಸದಾ ಕೊರೆಯುತ್ತಿದ್ದ ಪ್ರೊಫೆಸರ್ ಲಾಂಕಾಸ್ಟರ್ ಅವರಿಗೆ ಮರಳಿಸಬೇಕಾಗಿದ್ದ ಇಪ್ಪತ್ತು ಸಾವಿರ ಡ್ಯೂರೋಗಳ ಸಾಲ.

ನಿಗದಿಪಡಿಸಿದವುಗ'ಳಲ್ಲಿ ಬಹು ಎಚ್ಚರಿಕೆಯಿಂದ ಒಂದು ಕೆಲಸವನ್ನು ಸೇರಿಸಿದ್ದರು: ಅದೆಂದರೆ ಮಗನ ಸನ್ನಡತೆ ಹಾಗೂ ನಿಷ್ಠೆಗಳಿಗೆ ಕಾರಣಕರ್ತರಾದ ಸರ್ ರಾಬರ್ಟ್ ವಿಲ್ಸನ್ ಅವರಿಗೆ ಕೃತಜ್ಞತೆಯನ್ನು ಅರ್ಪಿಸುವುದು. ವಿಚಿತ್ರವೆನ್ನಿಸಿದ್ದೆಂದರೆ, ಜನರಲ್ ಅವರ ಆದೇಶದ ಮೇರೆಯೇ ಅಧ್ಯಕ್ಷ ಊರ್ಡಾನೆಟರ ಸೇವೆಗೆಂದು ನಿಯೋಜಿತರಾಗಿದ್ದು ತಮ್ಮ ಕೊನೆಗಾಲದ ಹೊತ್ತಿಗೆ ಬರಲಾಗದಿದ್ದ ಜನರಲ್ ಓ'ಲಿಯರಿ ಅವರ ಬಗ್ಗೆ ತಮ್ಮ ಬರಹಗಳಲ್ಲಿ ಏನೂ ಹೇಳದಿದ್ದುದು.

ಈ ಎರಡು ಹೆಸರುಗಳೂ ಕೊನೆಯವರೆಗೂ ಜನರಲ್‌ರ ಜೊತೆಯಲ್ಲಿ ತಳುಕುಹಾಕಿಕೊಂಡಿರುತ್ತವೆ. ವಿಲ್ಸನ್ ಮುಂದೆ ಮೊದಲು ಲಿಮದಲ್ಲಿ, ಆನಂತರ ಕ್ಯಾರಕಾಸ್‌ನಲ್ಲಿ ಬ್ರಿಟಿಷ್ ಚಾರ್ಜ್ ಡಿ ಅಫೇರ್ಸ್ ಆದರು, ಈ ಎರಡೂ ದೇಶಗಳ ರಾಜಕೀಯ ಹಾಗೂ ಸೇನಾ ವಿಷಯಗಳ

ಬಗ್ಗೆ ಮುಂಚೂಣಿಯ ಭಾಗಿಗಳಾದರು. ಓ'ಲಿಯರಿ ಅವರು ಕಿಂಗ್‌ಸ್ಟನ್‌ಗೆ, ಆ ಬಳಿಕ ಸಂಟಾ ಫ಼ ದ ಬೊಗೋಟಕ್ಕೆ ಹೋದರು, ಅಲ್ಲಿ ತಮ್ಮ ದೇಶದ ರಾಯಭಾರಿಯಾಗಿ ಅನೇಕ ವರ್ಷಗಳ ಕಾಲ ಕಾರ್ಯ ನಿರ್ವಹಿಸಿ, ಅಮೆರಿಕಗಳ ಜನರಲ್ ಜೊತೆ ತಮ್ಮ ಸಹವರ್ತನದ ವಿವರಗಳನ್ನು ಮೂವತ್ತಾರು ಸಂಪುಟಗಳಲ್ಲಿ ಕಲೆಹಾಕಿ ತಮ್ಮ ಐವತ್ತೊಂದನೆ ವರ್ಷದಲ್ಲಿ ತೀರಿಕೊಂಡರು. ಅವರ ಜೀವನಸಂಜೆಯು ಸಫಲವೂ ಪ್ರಶಾಂತವೂ ಆಗಿತ್ತು. ಅದನ್ನವರು ಒಂದೇ ವಾಕ್ಯದಲ್ಲಿ ಹಿಡಿದಿಟ್ಟರು: "ಬಿಡುಗಡೆಯ ಅಧ್ವರ್ಯುವು ತೀರಿಕೊಂಡು ಅವರ ಮಹಾಕಾರ್ಯವು ಹಾಳುಗೊಂಡ ಮೇಲೆ ನಾನು ಜಮೈಕಕ್ಕೆ ಹೋದೆ, ಅಲ್ಲಿ ಅವರ ಪತ್ರಗಳನ್ನು ಕ್ರಮಬದ್ಧವಾಗಿ ಜೋಡಿಸುವುದರ ಜೊತೆ ನನ್ನ ನೆನಪುಗಳನ್ನೂ ಬರೆದೆ."

ಜನರಲ್ ತಮ್ಮ ಉಯಿಲನ್ನು ಹೇಳಿ ಬರೆಸಿದ ದಿನದಿಂದ ವೈದ್ಯರು ತಮಗೆ ತಿಳಿದಿದ್ದ ಎಲ್ಲ ಶಮನಕಾರಕಗಳನ್ನು ಕೊಟ್ಟು ನೋಡಿದರು: ಕಾಲಿಗೆ ಸಾಸಿವೆ ಹಿಟ್ಟಿನ ಲೇಪನ, ಬೆನ್ನುಮೂಳೆಯ ಮಾಲೀಸು ಹಾಗೂ ಇಡೀ ದೇಹಕ್ಕೆ ಆನೋಡೈನ್ ಪೋಲ್ಟೀಸು. ಜನರಲ್ ಅವರ ಪಾರಂಪರಿಕ ಮಲಬದ್ಧತೆ ಉತ್ತಮಗೊಂಡಿತ್ತು, ವೈದ್ಯರಿತ್ತಿದ್ದ ಎನಿಮಗಳು ತಕ್ಷಣ ಪರಿಣಾಮಕಾರಿಯಾದರೂ ಹಾನಿಕಾರಕವೆನಿಸಿದವು. ಮೆದುಳಿನಲ್ಲಿ ರಕ್ತ ಎಲ್ಲಿ ಹೆಪ್ಪುಗಟ್ಟುವುದೋ ಎಂಬ ಭಯದಿಂದ, ಜನರಲ್‌ರ ತಲೆಯಲ್ಲಿ ಕಟ್ಟಿಕೊಂಡಿದ್ದ ಲೋಳೆಯನ್ನು ಹೊರಹಾಕಲು ಉರಿಪ್ಲಾಸ್ತ್ರಿಯನ್ನು ಹಾಕಿದರು. ಈ ಚಿಕಿತ್ಸೆಯಲ್ಲಿ ಬ್ಲಿಸ್ಟರ್ ಜೀರುಂಡೆಗಳನ್ನು ಬಳಸಲಾಗಿತ್ತು, ಈ ಕೀಟವನ್ನು ಜಜ್ಜಿ ಚರ್ಮಕ್ಕೆ ಲೇಪಿಸಿದಾಗ ಅದಕ್ಕೆ ಔಷಧಗಳನ್ನು ಹೀರಿಕೊಳ್ಳುವ ಸಾಮರ್ಥ್ಯವುಂಟಾಗುತ್ತಿತ್ತು. ಡಾ. ರೆವೆರೆಂಡ್ ಇಂತ ಐದು ಉರಿಪ್ಲಾಸ್ತ್ರಿಗಳನ್ನು ಜನರಲ್ ಅವರ ಕತ್ತಿನ ಹಿಂಬದಿ ಹಾಗೂ ಮೀನಖಂಡಗಳಿಗೆ ಹಾಕಿದರು. ಜನರಲ್ ಅವರ ಸಾವಿನ ನೇರ ಕಾರಣ ಈ ಕಿರಿಕಿರಿ ಪ್ಲಾಸ್ಟರ್‌ಗಳು ಮೂತ್ರ ವಿಸರ್ಜನೆಯನ್ನು ಅಸ್ತವ್ಯಸ್ತಗೊಳಿಸಿ, ಮೊದಲು ಅತಿಮೂತ್ರ, ಆನಂತರ ರಕ್ತವಿಸರ್ಜನೆಗಳನ್ನುಂಟುಮಾಡಿ, ಮೂತ್ರಕೋಶವು ಬರಿದಾಗಿ ವಸ್ತಿಕುಹರಕ್ಕೆ ಅಂಟಿಕೊಂಡಿದ್ದುದೇ ಎಂದು ಒಂದೂವರೆ ಶತಮಾನಗಳ ಬಳಿಕವೂ ವೈದ್ಯರು ಭಾವಿಸಿದರು. ಇದನ್ನೇ ಡಾ. ರೆವೆರೆಂಡ್ ಅವರೂ ತಮ್ಮ ಅಟಾಪ್ಸಿಯಲ್ಲಿ ಹೇಳಿದ್ದರು.

ಜನರಲ್ ಅವರ ವಾಸನೆ ಹಿಡಿಯುವ ಶಕ್ತಿ ಎಷ್ಟು ಸೂಕ್ಷ್ಮವಾಗಿತ್ತೆಂದರೆ, ತೈಲದ ವಾಸನೆಯ ಕಾರಣ ಅವರು ಡಾಕ್ಟರ್ ಹಾಗೂ ಔಷಧಿಕಾರ ಆಗಸ್ಟೋ ಟೊಮಾಸಿನ್‌ನನ್ನು ದೂರವೇ ಇರಿಸುತ್ತಿದ್ದರು. ಆನಂತರ ಕೋಣೆಯಲ್ಲೆಲ್ಲ ಧಾರಾಳವಾಗಿ ಕೊಲೋನ್ ಸಿಂಪಡಿಸಲು ಸೂಚಿಸುತ್ತಿದ್ದರು. ಭ್ರಾಮಕ ಸ್ನಾನಗಳು, ಕೈಯಾರೆ ಮುಖಕ್ಷೌರ

ಮಾಡಿಕೊಳ್ಳುವುದು ಹಾಗೂ ಹಲ್ಲುಗಳನ್ನು ಪರಪರ ಉಜ್ಜಿಕೊಳ್ಳುವುದು ಇವುಗಳ ಮೂಲಕ ಸಾವಿನ ಕೊಳಕನ್ನು ಹೋಗಲಾಡಿಸಲು ಅವರು ಪ್ರಯತ್ನಿಸುತ್ತಿದ್ದರು.

ಕರ್ನಲ್ ಲೂಯಿ ಪೆರು ದ ಲ್ಯಾಕ್ರಾಸ್ ಡಿಸೆಂಬರ್ ಎರಡನೆ ವಾರದಲ್ಲಿ ಸಂಟಾ ಮಾರ್ತಕ್ಕೆ ಭೇಟಿ ನೀಡಿದ. ಅವನು ಹರೆಯದಲ್ಲಿ ನೆಪೋಲಿಯನ್‌ನ ಸೇನೆಗಳ ವೀರ, ಇತ್ತೀಚಿನವರೆಗೂ ಜನರಲ್ ಅವರ ಆಪ್ತ ಸಹಾಯಕಕರಾಗಿದ್ದವನು. ಭೇಟಿಯ ನಂತರ ಮಾಡಿದ ಮೊದಲ ಕೆಲಸವೆಂದರೆ ಮ್ಯಾನ್ಯುಯೆಲ ಸಯೆಂಜ಼್‌ಗೆ ನಿಜಸ್ಥಿತಿಯನ್ನು ವಿವರಿಸಿ ಪತ್ರ ಬರೆದದ್ದು. ಈ ಪತ್ರ ತಲುಪಿದ ತಕ್ಷಣವೇ ಮ್ಯಾನ್ಯುಯೆಲ ಸಂಟಾ ಮಾರ್ತಕ್ಕೆ ಪಯಣ ಬೆಳೆಸಿದಳು, ಆದರೆ ಆಕೆ ಒಂದು ಜನ್ಮದಷ್ಟು ತಡವಾಗಿ ಬಂದಿದ್ದಳೆಂಬುದು ಗಉಡಸ್‌ನಲ್ಲಿ ತಿಳಿಯಿತು. ಈ ವಾರ್ತೆಯಿಂದ ಅವಳು ಜಗತ್ತನ್ನೇ ಮರೆತಳು. ತನ್ನ ನೆರಳಲ್ಲೇ ಕುಸಿದಳು. ಅವಳು ನಿರ್ವಹಿಸಬೇಕಾಗಿದ್ದ ಏಕೈಕ ಕರ್ತವ್ಯವೆಂದರೆ ಜನರಲ್ ಅವರ ಕಾಗದ ಪತ್ರಗಳಿದ್ದ ಎರಡು ಪೆಟಾರಿಗಳನ್ನು ಸಂಟಾ ಫ಼ ದ ಬೊಗೋಟದಲ್ಲಿ ಸುರಕ್ಷಿತ ಸ್ಥಳವೊಂದರಲ್ಲಿ ಕಾಪಾಡುವುದಾಗಿತ್ತು, ಕೆಲವು ವರ್ಷಗಳ ನಂತರ ಅವಳು ಸೂಚಿಸಿದಂತೆ ಡೇನಿಯಕ್ ಓ'ಲಿಯರಿ ಅವುಗಳನ್ನು ತನ್ನ ವಶಕ್ಕೆ ತೆಗೆದುಕೊಂಡ. ಜನರಲ್ ಸಟಾಂಡರ್ ಮೊದಲು ಮಾಡಿದ ಅಧಿಕೃತ ಕಾರ್ಯಗಳಲ್ಲಿ ಒಂದೆಂದರೆ ಅವಳನ್ನು ದೇಶದಿಂದ ಉಚ್ಚಾಟಿಸಿದ್ದು. ತನಗೊದಗಿದ ದುರ್ಗತಿಯನ್ನು ಮ್ಯಾನ್ಯುಯೆಲ ಘನತೆಯಿಂದ ಸ್ವೀಕರಿಸಿದಳು, ಮೊದಲು ಜಮೈಕದಲ್ಲಿ, ಆನಂತರ ತಿಮಿಂಗಿಲಗಳ ಬೇಟೆಗಾಗಿ ಬಂದು ದಡವನ್ನು ಎಲ್ಲ ಕಡೆಯಿಂದಲೂ ಆಕ್ರಮಿಸಿಕೊಳ್ಳುತ್ತಿದ್ದ ಕ್ಷುದ್ರ ಬಂದರು ಪ್ಯಾಷಿಯದಲ್ಲಿ ಕೊನೆಗೊಂಡ ಪೆಸಿಫ಼ಿಕ್‌ನ ತೀರದ ದುಃಖಪೂರ್ಣ ಯಾತ್ರೆಯಲ್ಲಿ. ಸಂಧಿವಾತವು ಅವಕಾಶ ಕೊಟ್ಟಾಗ ಕಸೂತಿ ಹಾಕುತ್ತ, ಸಿಗಾರ್ ಸೇವಿಸುತ್ತ ಮತ್ತು ಮಿಠಾಯಿಗಳನ್ನು ಮಾಡಿ ನಾವಿಕರಿಗೆ ಮಾರುತ್ತ ಅಲ್ಲಿ ಅವಳು ಅಜ್ಞಾತವಾಗಿ ಕಾಲವನ್ನು ನೂಕುತ್ತಿದ್ದಳು. ಲಿಮದ ಒಂದು ದರೋಡೆಯ ಸನ್ನಿವೇಶದಲ್ಲಿ ಅವಳ ಗಂಡ ಡಾ. ಥಾರ್ನ್‌ನ ಕೈಯಲ್ಲಿದ್ದ ಅಲ್ಪಸ್ವಲ್ಪವನ್ನೂ ಕಿತ್ತುಕೊಂಡು ಅವನನ್ನು ಚೂರಿಯಿಂದ ಇರಿದು ಕೊಂದಿದ್ದರು. ಮದುವೆಯ ಕಾಲದಲ್ಲಿ ತಂದಿದ್ದ ವರದಕ್ಷಿಣೆಯಷ್ಟು ಹಣವನ್ನು ಅವಳಿಗಾಗಿ ತನ್ನ ಉಯಿಲಿನಲ್ಲಿ ಬಿಟ್ಟಿದ್ದ, ಆದರೆ ಅವಳು ಅದನ್ನು ಸ್ವೀಕರಿಸಿರಲಿಲ್ಲ. ಈ ಉಚ್ಚಾಟನೆಯ ಬಗ್ಗೆ ಅವಳನ್ನು ಮೂವರು ಸ್ಮರಣೀಯ ಸಂದರ್ಶಕರು ಸಮಾಧಾನಪಡಿಸಿದ್ದರು: ಅವಳೊಡನೆ ಗತವೈಭವವನ್ನು ಹಂಚಿಕೊಂಡಿದ್ದ ಟ್ಯೂಟರ್ ಸಿಮೋನ್ ರೋಡ್ರಿಗೆಜ಼್, ಅರ್ಜೆಂಟೈನದ ರೋಸಾಸ್‌ನ ಸರ್ವಾಧಿಕಾರದ ವಿರುದ್ಧ ಹೋರಾಡಿ ಮರಳುತ್ತಿದ್ದ

ಇಟಾಲಿಯನ್ ರಾಷ್ಟ್ರಭಕ್ತ ಗಿಯುಸೆಪ್ ಗರಿಬಾಲ್ಡಿ ಮತ್ತು ತನ್ನ ಕೃತಿ 'ಮೋಬಿ ಡಿಕ್'ಗೆ ಸಾಮಗ್ರಿಯನ್ನು ಕಲೆಹಾಕಲು ಸಮುದ್ರದ ಮೇಲೆ ಸಂಚರಿಸುತ್ತಿದ್ದ ಕಾದಂಬರಿಕಾರ ಹರ್ಮನ್ ಮೆಲ್‌ವಿಲ್. ಇಳಿಗಾಲದಲ್ಲಿ ಪಿರ್ರೆಯ ಮೂಳೆ ಮುರಿದು ತನ್ನ ಜೋಲಿಮಂಚಕ್ಕೆ ಸೀಮಿತವಾಗಿದ್ದ ಕಾಲದಲ್ಲಿ ಅವಳು ಪ್ರೇಮಿಗಳಿಗೆ ಕಾರ್ಡಗಳನ್ನು ಓದುತ್ತ, ಅವರಿಗೆ ಸಲಹೆ ನೀಡುತ್ತ ಇತ್ತಿದ್ದಳು. ಐವತ್ತೊಂಬತ್ತನೇ ವರ್ಷದಲ್ಲಿ ಪ್ಲೇಗ್ ಸಾಂಕ್ರಾಮಿಕಕ್ಕೆ ಸಿಲುಕಿ ಸತ್ತಳು; ಆಪ್ತ ಪತ್ರಗಳೂ ಸೇರಿದಂತೆ ಜನರಲ್‌ರ ಅಮೂಲ್ಯ ಕಾಗದಪತ್ರಗಳೊಂದಿಗೆ ಅವಳ ಶವಪೆಟ್ಟಿಗೆಯನ್ನು ಆರೋಗ್ಯಾಧಿಕಾರಿಗಳು ಸುಟ್ಟರು. ಜನರಲ್ ಅವಳಿಗೆ ನೀಡಿದ್ದ ಏಕೈಕ ಸ್ಮರಣಿಕೆಯೆಂದರೆ, ಅವಳೇ ಪೆರು ದ ಲ್ಯಾಕ್ರಾಸ್‌ಗೆ ಹೇಳಿದ್ದ ಪ್ರಕಾರ, ತನ್ನ ಒಂದಷ್ಟು ಕೂದಲು ಮತ್ತು ಒಂದು ಗವಸು.

ಸಾವಿನಿಂದ ಲ ಫ್ಲಾರಿಡಾ ದ ಸ್ಯಾನ್ ಪೆಡ್ರೋ ಅಲೆಜಾಂಡ್ರಿನೋ ಆಗಲೇ ಅಸ್ತವ್ಯಸ್ತಗೊಂಡಿದ್ದುದನ್ನು ಪೆರು ದ ಲ್ಯಾಕ್ರಾಸ್ ನೋಡಿದ. ಮನೆ ಅರಕ್ಷಿತವಾಯಿತು. ಅಧಿಕಾರಿಗಳು ದಣಿವಾದ ಕಡೆಗಳಲ್ಲಿ ಮಲಗುತ್ತಿದ್ದರು; ಅವರಿಗೆಷ್ಟು ಕಿರಿಕಿರಿಯಾಗಿತ್ತೆಂದರೆ ಪ್ರಬುದ್ಧನಾದ ಜೋಸೆ ಲಾರೆನ್ಸಿಯೋ ಸಿಲ್ವ ಕೂಡ ಸುಮ್ಮನಿರಲು ಹೇಳಿದ ಡಾ. ರೆವೆರೆಂಡ್ ವಿರುದ್ಧ ಕತ್ತಿ ಝುಳಪಿಸಿದ್ದ. ಅನಿರೀಕ್ಷಿತ ಸಮಯಗಳಲ್ಲಿ ಆಹಾರಕ್ಕಾಗಿ ಬಂದ ಬೇಡಿಕೆಗಳನ್ನು ಪೂರೈಸಲು ಫೆರ್ನಾಂಡ ಬ್ಯಾರಿಗಾನಿಗೆ ಶಕ್ತಿಯೂ ಇರಲಿಲ್ಲ, ತಾಳ್ಮೆಯೂ ಉಳಿದಿರಲಿಲ್ಲ. ತೀರ ಸ್ಥೈರ್ಯ ಕುಂದಿದ್ದ ಅಧಿಕಾರಿಗಳು ಹಗಲೂ ರಾತ್ರಿ ಇಸ್ಪೀಟ್ ಆಡುತ್ತಿದ್ದರು, ಅವರಾರಿಗೂ ತಮ್ಮ ಕಿರುಚಾಟಗಳು ಪಕ್ಕದ ಕೋಣೆಯಲ್ಲಿ ಸಾಯುತ್ತ ಮಲಗಿದ್ದವನಿಗೆ ಕೇಳಿಸಬಹುದೆಂಬ ಅಂಜಿಕೆಯೇ ಇರಲಿಲ್ಲ. ಒಂದು ಮಧ್ಯಾಹ್ನ, ಜ್ವರದ ತಾಪದ ಮಂಪರಿನಲ್ಲಿ ಜನರಲ್ ಮಲಗಿದ್ದಾಗ, ಮಹಡಿಯ ಮೇಲೆ ಯಾವನೋ ಒಬ್ಬ ಕೂಗಾಡುತ್ತ ಅರ್ಧ ಡಜನ್ ಬೋರ್ಡ್ಗಳಿಗೆ ಹನ್ನೆರಡು ಪೆಸೋಗಳು ಇಪ್ಪತ್ಮೂರು ಸೆಂಟವೋಗಳು, ಮೊಳೆಗಳಿಗೆ ಹಾಗೂ ಆರುನೂರು ಸಾಧಾರಣ ಗುಬ್ಬಿ ಮೊಳೆಗಳು ಮತ್ತು ಐವತ್ತು ಗಿಲೀಟು ಮಾಡಿದವು, ಹತ್ತು ಗಜ ಮಡಪೊಲ್ಲಂ, ಹತ್ತು ಗಜ ಮ್ಯಾನಿಲ ಮತ್ತು ಆರು ಗಜ ಕಪ್ಪು ರಿಬ್ಬನ್ ಇಪ್ಪತ್ತೈದು ಸೆಂಟವೋಗಳಷ್ಟು ಬೆಲೆ ಕೇಳುತ್ತಿದ್ದ ಬಗ್ಗೆ ತನ್ನ ಕೋಪಾವೇಶವನ್ನು ಪ್ರದರ್ಶಿಸುತ್ತಿದ್ದ.

ಅದು ಜೋರಾಗಿ ಪ್ರಾರ್ಥನೆ ಮಾಡಿದಂತಿತ್ತು. ಇತರರು ಅವನನ್ನು ಸುಮ್ಮನಿರಿಸಲು ಪ್ರಯತ್ನಿಸುತ್ತಿದ್ದರು, ಆದರೆ ಕೊನೆಯಲ್ಲಿ ಶಬ್ದ ಇಡೀ ವಾತಾವರಣವನ್ನು ತುಂಬಿತ್ತು. ಮಲಗುವ ಕೋಣೆಯಲ್ಲಿ ಡಾ. ರೆವೆರೆಂಡ್ ಜನರಲ್ ಮಾಂಟಿಲ್ಲರ ಮೂಳೆ ಮುರಿದ ಕೈಯ ಬ್ಯಾಂಡೇಜ್ ಬದಲಾಯಿಸುತ್ತಿದ್ದರು. ಹಗುರ ನಿದ್ದೆಯ ತಿಳಿಯಲ್ಲಿ ಆ ಕಾಯಿಲೆ ಮನುಷ್ಯ ಬೆಲೆಗಳ ಬಗ್ಗೆಗಿನ ಆಪಾದನೆಗಳನ್ನು ಕೇಳಿಸಿಕೊಳ್ಳುತ್ತಿದ್ದುದು ಅವರಿಬ್ಬರ

ಅರಿವಿಗೆ ಬಂತು. ಕಿಟಕಿಯ ಬಳಿ ಹೋದ ಮಾಂಟಿಲ್ಲ ಗಟ್ಟಿಯಾಗಿ ಗರ್ಜಿಸಿದರು:

'ಬಾಯಿ ಮುಚ್ಚು, ಹಾಳಾದೋನೆ!"

ಕಣ್ಣು ತೆರೆಯದೆಯೇ ಜನರಲ್ ಮಧ್ಯೆ ಬಾಯಿ ಹಾಕಿ, "ಅವರನ್ನ ಅವರ ಪಾಡಿಗೆ ಬಿಡಿ. ಏಷ್ಟೇ ಆಗಲೀ, ಈಗ ನಾನು ಕೇಳಿಸಿಕೊಳ್ಳಲಾಗದ ಬೆಲೆಗಳೆ ಇಲ್ಲವಲ್ಲ" ಎಂದರು.

ಅವರ ಉತ್ತರಕ್ರಿಯೆಗಳಿಗೆಂದು ನಗರಸಭೆಯು ಖಾಸಗಿ ವ್ಯಕ್ತಿಗಳಿಂದ, ಕಸಾಯಿಖಾನೆಗಳಿಂದ ಮತ್ತು ಬಂದೀಖಾನೆ ನಿಧಿಯಿಂದ ಸಂಗ್ರಹಿಸಿದ್ದ ಮೊತ್ತವಾದ ಇನ್ನೂರ ಐವತ್ಮೂರು ಪೆಸೋಗಳು ಮತ್ತು ಏಳು ರಿಯಾಲ್‌ಗಳು ಮತ್ತು ಮುನ್ನೂರು ಕ್ವಾರ್ಟಿಲೋಗಳು ಹಾಗೂ ಪಟ್ಟಿಯು ಶವಪೆಟ್ಟಿಗೆ ಮತ್ತು ಸಮಾಧಿ ಕಟ್ಟುವ ಸಾಮಗ್ರಿಗಳಿಗೆ ಆ ಕೂಗಾಟವು ಸಂಬಂಧಿಸಿತ್ತು ಎಂಬ ವಿಷಯ ಜನರಲ್ ಅವರ ಕಿವಿಗೆ ಬೀಳಬಾರದೆಂಬುದನ್ನು ಜೋಸೆ ಪೆಲಾಸಿಯೋಸ್ ಮಾತ್ರ ಅರ್ಥಮಾಡಿಕೊಂಡಿದ್ದ. ಆ ಗಳಿಗೆಯಿಂದ ಜೋಸೆ ಪೆಲಾಸಿಯೋಸ್ ಮಾಂಟಿಲ ಅವರ ಆಜ್ಞೆಗನುಸಾರವಾಗಿ ಹುದ್ದೆ, ಬಿರುದು, ಗಣ್ಯತೆ ಮುಂತಾದವನ್ನು ಲೆಕ್ಕಿಸದೆ ಎಲ್ಲರನ್ನೂ ಮಲಗುವ ಕೋಣೆಯಿಂದ ದೂರವಿರಿಸುವ ಹೊಣೆ ಹೊತ್ತಿದ್ದ. ಅಲ್ಲದೆ ಅವರ ಮತ್ತು ತನ್ನ ಸಾವಿಗೆ ವ್ಯತ್ಯಾಸವಿಲ್ಲ ಎಂಬಷ್ಟರ ಮಟ್ಟಿಗೆ ರೋಗಿಯ ಶುಶ್ರೂಷೆಯ ಬಗ್ಗೆ ಎಚ್ಚರ ವಹಿಸಿದ್ದ.

"ಈ ರೀತಿ ನನಗೆ ಮೊದಲೇ ಅಧಿಕಾರ ನೀಡಿದ್ದಿದ್ದರೆ ಯಜಮಾನರು ನೂರು ವರ್ಷ ಬದುಕುವ ಹಾಗಾಗ್ತಿತ್ತು" ಎಂದಿದ್ದ.

ಫರ್ನಾಂಡ ಬ್ಯಾರಿಗಾ ಕೋಣೆಯ ಒಳಗೆ ಹೋಗಲು ಪ್ರಯತ್ನಿಸಿದಳು.

"ಅನಾಥ ಹೆಂಗಸರನ್ನು ಈ ಬಡಪಾಯಿ ಎಷ್ಟು ಇಷ್ಟಪಟ್ಟಿದ್ದನೆಂದರೆ, ಒಬ್ಬ ಹೆಂಗಸು ಪಕ್ಕದಲ್ಲಿರದಿದ್ದರೆ ಸಾಯಲೂ ಆರ, ಅವಳು ನನ್ನ ಹಾಗೆ ಮುದುಕಿಯಾಗಿ ಕುರೂಪಿಯಾಗಿ ಕೆಲಸಕ್ಕೆ ಬಾರದೋಳಾಗಿದ್ರೂ ಪರವಾ ಇಲ್ಲ" ಎಂದಳು.

ಆದರೆ ಅವಳಿಗೆ ಅನುಮತಿ ಸಿಕ್ಕಲಿಲ್ಲ. ಹೀಗಾಗಿ ಸಾಯುತ್ತಿರುವ ವ್ಯಕ್ತಿಯ ಧರ್ಮಾತೀತ ಹುಚ್ಚಾಟಗಳನ್ನು ತನ್ನ ಪ್ರಾರ್ಥನೆಗಳಿಂದ ಪವಿತ್ರೀಕರಿಸುತ್ತ ಅವಳು ಕಿಟಕಿಯ ಬಳಿ ಹೊರಗೇ ಕುಳಿತಿರಬೇಕಾಯಿತು. ಹೀಗೆಯೇ ಅವಳು ಸಾರ್ವಜನಿಕರ ಕೃಪೆಯಿಂದ ಶೋಕದಲ್ಲಿ ಮುಳುಗಿ ನೂರೊಂದು ವರ್ಷ ಬದುಕಿದ್ದಳು.

ಬುಧವಾರ ಕತ್ತಲಾದ ಬಳಿಕ ದಾರಿಯುದ್ದಕ್ಕೂ ಹೂಗಳನ್ನು ಎರಚಿ ಪ್ರಭು ಭೋಜನ ಸಂಸ್ಕಾರಕ್ಕೆಂದು (ವೈಯಾಟಿಕಂ) ಪಕ್ಕದ ಹಳ್ಳಿ

ಮಮಾಟೊಕೊದಿಂದ ಪುರೋಹಿತ ಬಂದಾಗ ಪ್ರಾರ್ಥನೆಯ ಮುಂದಾಳತ್ವ ವಹಿಸಿದಳು. ಪುರೋಹಿತರಿಗಿಂತ ಮುಂಚೆಯೇ ಇಂಡಿಯನ್ ಸ್ತ್ರೀಯರು ಕಚ್ಚಾ ಲಿನನ್‌ನ ನಿಲುವಂಗಿ ತೊಟ್ಟು, ಮಿರ್ಟಲ್‌ನ ಕಿರೀಟ ಧರಿಸಿ, ಬರಿಗಾಲಲ್ಲಿ ನಡೆಯುತ್ತ ಎರಡು ಸಾಲಿನಲ್ಲಿ ಬಂದು, ಅವನ ಬಳಿ ಎಣ್ಣೆಯ ದೀಪ ಹೊತ್ತಿಸಿ ತಮ್ಮ ಭಾಷೆಯಲ್ಲಿಯೇ ಸತ್ತವನಿಗಾಗಿ ಪ್ರಾರ್ಥನೆ ಮಾಡಿದ್ದರು, ಮುಂದೆ ನಡೆದು ಫರ್ನಾಂಡ ಉದ್ದಕ್ಕೂ ಹೂದಳಗಳನ್ನು ಹಾಕಿದ ಹಾದಿಯಲ್ಲಿ ನಡೆಯುತ್ತ ಸಾಗಿದರು. ಅದು ಎಷ್ಟು ರೋಚಕವಾಗಿತ್ತೆಂದರೆ ಯಾರೂ ಅವರನ್ನು ತಡೆಯುವ ಧೈರ್ಯ ಮಾಡಲಿಲ್ಲ. ಅವರು ಕೋಣೆಯೊಳಕ್ಕೆ ಬರುವ ಸದ್ದು ಕೇಳಿದ ಜನರಲ್ ಹಾಸಿಗೆಯಲ್ಲೇ ಎದ್ದು ಕುಳಿತರು, ತಮ್ಮ ತೋಳುಗಳಿಂದ ಬೆಳಕನ್ನು ಮರೆಮಾಡಿಕೊಂಡು ಕಿರುಚಿ ಅವರನ್ನು ಹೊರಕ್ಕಟ್ಟಿದ್ದರು:

"ಆ ಬಲಿಗಂಬದ ದೀಪಗಳನ್ನ ಹೊರಗೆ ಕಳಿಸಿ; ಇವರೆಲ್ಲ ಸತ್ತ ಆತ್ಮಗಳ ಹಾಗೆ ಕಾಣಿಸ್ತಾರೆ."

ಈ ಜರ್ಜರಿತವ್ಯಕ್ತಿಯನ್ನು ಕೆಡುಕು ಭಾವನೆಯು ಕೊಲ್ಲದಿರುವಂತೆ ಮಾಡಲು ಫರ್ನಾಂಡೋ ಮಮಾಟಕೋದಿಂದ ಬೀದಿ ಹಾಡುಗಾರರ ತಂಡವೊಂದನ್ನು ಕರೆತಂದ, ಅವರು ಹುಣಿಸೇ ಮರಗಳ'ಡಿ ಕುಳಿತು ಇಡೀ ದಿನ ವಾದ್ಯ ನುಡಿಸುತ್ತಿದ್ದರು. ಸಂಗೀತದ ಸಾಂತ್ವನದ ದನಿಗೆ ಜನರಲ್ ಚೆನ್ನಾಗಿ ಪ್ರತಿಕ್ರಿಯಿಸಿದರು. "ಲ ಟ್ರಿನಿಟೇರಿಯ" ಅವರಿಗೆ ಪ್ರಿಯವಾದ ನರ್ತನದ ಹಾಡು; ಅದನ್ನು ಅನೇಕ ಬಾರಿ ಪುನರಾವರ್ತನೆ ಮಾಡಿದರು. ಅದು ಅಷ್ಟು ಜನಪ್ರಿಯವಾಗಲು ಕಾರಣ ಜನರಲ್ ಹಿಂದೆ ತಾವು ಹೋದೆಡೆಯಲ್ಲೆಲ್ಲ ಅದರ ಪ್ರತಿಗಳನ್ನು ಹಂಚಿದ್ದುದು.

ಗುಲಾಮರು ಕೆಲಸ ನಿಲ್ಲಿಸಿ, ದ್ರಾಕ್ಷಿ ತೋಟದ ಮೂಲಕ ಜನರಲ್ ಅವರನ್ನು ನೋಡುತ್ತ ನಿಂತರು. ಅವರ ಸುತ್ತ ಬಿಳಿ ಬಟ್ಟೆ ಹೊದಿಸಲಾಗಿತ್ತು, ಸಾವಿನ ನಂತರಕ್ಕಿಂತ ಹೆಚ್ಚು ಕೃಶವಾಗಿ ಬಿಳಿಚಿಕೊಂಡಿದ್ದರು, ಕೂದಲು ಬೆಳೆದು ಪೊದೆಯಾಗಿದ್ದ ತಲೆಯನ್ನು ಸಂಗೀತದ ಲಯಕ್ಕನುಗುಣವಾಗಿ ಆಡಿಸುತ್ತ ತಾಳ ಹಾಕುತ್ತಿದ್ದರು. ಪ್ರತಿ ಹಾಡು ಮುಗಿದಾಗಲೂ ತಾವು ಪ್ಯಾರಿಸ್ ಅಪೆರಾದಲ್ಲಿ ಕಲಿತಿದ್ದ ವಿವೇಚನೆಯಿಂದ ಚಪ್ಪಾಳೆ ತಟ್ಟುತ್ತಿದ್ದರು.

ಸಂಗೀತದಿಂದಾಗಿ ಅವರು ಮಧ್ಯಾಹ್ನದ ಹೊತ್ತಿಗೆ ಚೇತರಿಸಿಕೊಂಡಿದ್ದರು. ಒಂದು ಬಟ್ಟಲು ಗಂಜಿ ಕುಡಿದು ಅರೋರೂಟ್ ಮತ್ತು ಬೇಯಿಸಿದ ಕೋಳಿ ಮಾಂಸವನ್ನು ಕಿವಿಚಿಕೊಂಡು ತಿಂದರು. ಆಮೇಲೆ, ಜೋಲಿಮಂಚದಲ್ಲಿ ಮಲಗಿಕೊಂಡು ಒಂದು ಕೈಗನ್ನಡಿ ಬೇಕೆಂದು ಕೇಳಿದರು. ಅದರಲ್ಲಿ ಮುಖ ನೋಡಿಕೊಂಡು, "ಈ ಕಣ್ಣುಗಳನ್ನಿಟ್ಟುಕೊಂಡು ನಾನು ಸಾಯಲಾರೆ" ಎಂದರು. ಎಲ್ಲರಲ್ಲೂ ಬತ್ತಿ ಹೋಗಿದ್ದ ಭರವಸೆ

ಮೇಲೆದ್ದು ಡಾ. ರೆವೆರೆಂಡ್ ಪವಾಡವನ್ನು ಮರೆಯಬಹುದು ಎನ್ನಿಸಿತು. ಆದರೆ ಸುಧಾರಿಸಿದ ಹಾಗೆ ಕಂಡಾಗ, ಬೊಯಾಕ ಕದನದ ನಂತರ ಸಟಾಂಡರ್ ಒಂದೇ ದಿನದಲ್ಲಿ ಕೊಲ್ಲಲು ಆಜ್ಞಾಪಿಸಿದ್ದ ಮೂವತ್ತೆಂಟು ಮಂದಿ ಸ್ಪಾನಿಶ್ ಅಧಿಕಾರಿಗಳಲ್ಲಿ ಜನರಲ್ ಸಾರ್ಡಿಯ ಒಬ್ಬ ಎಂಬ ಗೊಂದಲಕ್ಕೊಳಗಾಗುತ್ತಿದ್ದರು. ಆಮೇಲೆ ಇದ್ದಕ್ಕಿದ್ದಂತೆ ರೋಗ ಉಲ್ಬಣವಾಯಿತು, ಅದರಿಂದ ಅವರು ಸುಧಾರಿಸಿಕೊಳ್ಳಲೇ ಇಲ್ಲ. ತಮ್ಮಲ್ಲಿ ಉಳಿದಿದ್ದ ಅಲ್ಪಸ್ವಲ್ಪ ಧ್ವನಿಯಿಂದ ಕಿರುಚಿ, ತಮ್ಮ ಮರಣವೇದನೆಯ ಮೌನವನ್ನು ಕಲಕಕೂಡದೆಂದು ಹೇಳಿ ಸಂಗೀತಗಾರರನ್ನು ಮನೆಯಿಂದ ಹೊರಗಟ್ಟಲು ಸೂಚಿಸಿದರು. ಮತ್ತೆ ಅವರು ಸಮಾಧಾನಗೊಂಡಾಗ, ಜನರಲ್ ಜಸ್ಟೋ ಬ್ರೈಸೆನೋಗೆ ಪತ್ರ ಬರೆಯಲು ವಿಲ್ಸನ್‌ಗೆ ಹೇಳಿದರು: ದೇಶವನ್ನು ಅನಾಯಕತ್ವದಿಂದ ಪಾರುಮಾಡಲು ಜನರಲ್ ಊರ್ಡಾನೆಟನ ಜೊತೆ ರಾಜಿ ಮಾಡಿಕೊಂಡು ಒಂದು ರೀತಿಯ ಮರಣೋತ್ತರ ಗೌರವ ಸಲ್ಲಿಸುವಂತೆ ಆ ಪತ್ರವಿರಬೇಕೆಂದು ಸೂಚಿಸಿದರು. ಅವರು ಹೇಳಿ ಬರೆಸಿದ ಒಂದೇ ವಾಕ್ಯವೆಂದರೆ: "ಈ ಪತ್ರವನ್ನು ಬರೆಯುತ್ತಿರುವುದು ನನ್ನ ಬಾಳಿನ ಕೊನೆಯ ಕ್ಷಣಗಳಲ್ಲಿ" ಎಂಬುದು.

ಆ ರಾತ್ರಿ ಅವರು ಫರ್ನಾಂಡೋ ಜೊತೆ ಬಹಳ ಹೊತ್ತು ಮಾತಾಡುತ್ತಿದ್ದರು; ಅವನ ಭವಿಷ್ಯದ ಬಗ್ಗೆ ಮೊದಲ ಬಾರಿಗೆ ತಿಳಿವಳಿಕೆ ಹೇಳಿದರು. ತಮ್ಮ ನೆನಪುಗಳನ್ನು ಜೊತೆಯಾಗಿ ಬರೆಯಬೇಕೆಂಬ ಆಸೆ ನೆರವೇರಲಾರದೆಂದು ನುಡಿದರು; ಆದರೆ ತಮ್ಮೊಡನೆ ದೀರ್ಘ ಕಾಲ ಇದ್ದ ತಮ್ಮ ಸೋದರಳಿಯ ಅದನ್ನು ಶುದ್ಧ ಪ್ರೀತಿಯ ಕೆಲಸವಾಗಿ ನಿರ್ವಹಿಸಿ, ಅವನ ಮಕ್ಕಳು ವೈಭವ ಮತ್ತು ವಿನಾಶಗಳ ಆ ಕಾಲದ ಬಗ್ಗೆ ಅರಿವನ್ನು ಪಡೆಯಲು ನೆರವಾಗಲೆಂದು ಆಶಿಸಿದರು. "ಮನಸ್ಸು ಬದಲಾಯಿಸದಿದ್ದರೆ, ಓ'ಲಿಯರಿ ಏನಾದರೂ ಬರೆದಿಡಬಹುದು. ಆದರೆ ಅದು ಬೇರೆಯೇ ಆಗಿರುತ್ತೆ" ಎಂದರು. ಆಗ ಫರ್ನಾಂಡೋಗೆ ಇಪ್ಪತ್ತಾರು ವರ್ಷ, ತನಗೆ ಎಂಬತ್ತೆಂಟಾಗುವವರೆಗೂ ಬದುಕಲಿದ್ದ; ಆದರೆ ಒಂದೆರಡು ಅಸ್ತವ್ಯಸ್ತ ಕಾಗದಗಳನ್ನು ಬಿಟ್ಟರೆ ಬೇರೇನನ್ನೂ ವನು ಬರೆಯಲಿಲ್ಲ. ಏಕೆಂದರೆ ತನ್ನ ನೆನಪುಗಳನ್ನೆಲ್ಲ ಕಳೆದುಕೊಳ್ಳುವ ಹಾಗೆ ಅವನ ಮೇಲೆ ದೈವ ಕೃಪೆ ಮಾಡಿತ್ತು.

ಜನರಲ್ ತಮ್ಮ ಉಯಿಲನ್ನು ಹೇಳಿ ಬರೆಸುತ್ತಿರುವಾಗ ಜೋಸೆ ಪೆಲಾಸಿಯೋಸ್ ಮಲಗುವ ಕೋಣೆಯಲ್ಲೇ ಇದ್ದ. ಧಾರ್ಮಿಕಾಚರಣೆಯ ಶಾಂತಿಯಂತಿದ್ದ ಆಗ ಅವನಾಗಲೀ ಬೇರೆಯವರಾಗಲೀ ಯಾವ ಮಾತನ್ನೂ ಆಡಲಿಲ್ಲ. ಅಂದು ರಾತ್ರಿ, ಜನರಲ್‌ರು ತೈಲ ಹಾಕಿದ ನೀರಿನಲ್ಲಿ ಸ್ನಾನ ಮಾಡುತ್ತಿರುವಾಗ, ತಮ್ಮ ಉಯಿಲನ್ನು ಬದಲಿಸುವಂತೆ ಜೋಸೆ

ಪೆಲಾಸಿಯೋಸ್ ಕೇಳಿಕೊಂಡ: "ನಾವು ಯಾವಾಗಲೂ ಬಡವರಾಗಿಯೇ ಇದ್ದವರು; ನಮಗೇನೂ ಬೇಕಿಲ್ಲ" ಎಂದ.

"ಸತ್ಯ ಅದಕ್ಕೆ ವಿರುದ್ಧವಾದದ್ದು. ನಾವು ಯಾವಾಗಲೂ ಶ್ರೀಮಂತರಾಗಿಯೇ ಇದ್ದೋರು, ಆದರೆ ನಮ್ಮ ಹತ್ರ ಈಗ ಏನೂ ಇಲ್ಲ. ಅಷ್ಟೆ" ಎಂದರು ಜನರಲ್.

ಈ ಎರಡೂ ಅತಿರೇಕಗಳೂ ನಿಜವೇ. ಅವರ ಸೇವೆಗೆ ಸೇರಿದಾಗ ಜೋಸೆ ಪೆಲಾಸಿಯೋಸ್ ಇನ್ನೂ ಚಿಕ್ಕವನು; ಜನರಲ್ ಹೀಗೆ ಮಾಡಿದ್ದು ಅವನ ಒಡತಿಯಾಗಿದ್ದ ತಮ್ಮ ತಾಯಿಯ ಅಪ್ಪಣೆಯಂತೆ, ಆಗ ಅವನಿನ್ನೂ ಔಪಚಾರಿಕವಾಗಿ ಬಿಡುಗಡೆ ಹೊಂದಿರಲಿಲ್ಲ. ತ್ರಿಶಂಕುಸ್ಥಿತಿಯಲ್ಲಿದ್ದ; ಅವನಿಗೆ ಸಂಬಳವನ್ನೂ ಕೊಡುತ್ತಿರಲಿಲ್ಲ, ಅವನ ದರ್ಜೆ ಯಾವುದು ಎಂದು ಖಚಿತವಾಗಿ ಹೇಳೂ ಇರಲಿಲ್ಲ. ಜನರಲ್ ಅವರ ಖಾಸಗೀ ಆವಶ್ಯಕತೆಗಳೇ ಅವನ ವೈಯಕ್ತಿಕ ಆವಶ್ಯಕತೆಗಳೂ ಆಗಿದ್ದವು; ಅಷ್ಟು ಹೊತ್ತಿಗಾಗಲೇ ಉಡುಪು ಧರಿಸುವುದು, ತಿನ್ನುವುದು ಮತ್ತು ಅತಿ ಗಾಂಭೀರ್ಯ – ಹೀಗೆ ಎಲ್ಲ ಬಗೆಯಲ್ಲೂ ಅವರ ರೀತಿನೀತಿಗಳನ್ನು ಅವನು ಅಳವಡಿಸಿಕೊಂಡಿದ್ದ. ಸೈನಿಕ ಹುದ್ದೆಯಾಗಲೀ ಅಂಗವಿಕಲತೆಯ ದೃಢೀಕರಣ ಪತ್ರವಾಗಲೀ ಇಲ್ಲದೆ ಅವನನ್ನು ಹಾಗೆಯೇ ಬಿಟ್ಟುಬಿಡುವುದು ಜನರಲ್ ಅವರಿಗೆ ಇಷ್ಟವಿರಲಿಲ್ಲ, ಅದೂ ಅವನು ಹೊಸ ಬದುಕನ್ನು ಆರಂಭ ಮಾಡುವ ವಯಸ್ಸನ್ನು ಮೀರಿದ್ದಾಗ. ಹೀಗಾಗಿ ಅವನಿಗೆ ಬೇರೆ ಆಯ್ಕೆಯೇ ಇರಲಿಲ್ಲ: ಎಂಟು ಸಾವಿರ ಪೆಸೋಗಳ ವಾರಸು ಬದಲಿಸಲಾಗದ್ದು ಮಾತ್ರವಲ್ಲದೆ ಅವನದನ್ನು ತಿರಸ್ಕರಿಸಲೂ ಸಾಧ್ಯವಿರಲಿಲ್ಲ.

"ಅದು ಸಮಂಜಸವಾಗಿಯೇ ಇದೆ" ಎಂದು ಜನರಲ್ ನಿರ್ಧಾರದಿಂದ ಹೇಳಿದ್ದರು.

ಜೋಸೆ ಪೆಲಾಸಿಯೋಸ್‌ನ ಉತ್ತರ ತಟಕ್ಕನೆ ಬಂತು: "ಸಮಂಜಸವಾದ್ದು ಅಂದರೆ ನಾವಿಬ್ಬರೂ ಒಟ್ಟಿಗೇ ಸಾಯೋದು!"

ಆದದ್ದೂ ಅದೇ; ಅವನು ಜನರಲ್ ಅವರಂತೆಯೇ ಆ ಹಣವನ್ನು ದುರ್ವ್ಯಯ ಮಾಡಿದ. ಅವರ ಸಾವಿನ ನಂತರ ಜೋಸೆ ಪೆಲಾಸಿಯೋಸ್ ಕಾರ್ಟೆಜೆನ ದ ಇಂಡಿಯಾಸ್‌ನಲ್ಲಿಯೇ ಸಾರ್ವಜನಿಕರ ಕೃಪೆಯಡಿಯಲ್ಲಿ ಉಳಿದ, ತನ್ನ ನೆನಪುಗಳನ್ನೆಲ್ಲ ಹೆಂಡದಲ್ಲಿ ಮುಳುಗಿ ಮರೆಯಲು ಯತ್ನಿಸಿದ, ಅದಕ್ಕೇ ಬಲಿಯಾದ. ಅವನು ಸತ್ತದ್ದು ಎಪ್ಪತ್ತಾರನೇ ವಯಸ್ಸಿನಲ್ಲಿ, ಭಿಕ್ಷುಕರ ಸದನದಲ್ಲಿ. ಅಲ್ಲಿದ್ದವರೆಲ್ಲ ವಿಮೋಚನಾ ಪಡೆಯ ವೀರರು, ಸನ್ನಿಯ ಬಿಗಿಹಿಡಿತದಲ್ಲಿ ಹಿಂಡಿಹಿಪ್ಪೆಯಾಗಿದ್ದವರು.

ಡಿಸೆಂಬರ್ ಬೆಳಿಗ್ಗೆ ಎದ್ದಾಗ ಜನರಲ್ ಎಷ್ಟು ಹೀನಸ್ಥಿತಿಯಲ್ಲಿದ್ದರೆಂದರೆ, ಅವರೇನಾದರೂ ಪಾಪನಿವೇದನೆ ಮಾಡಿಕೊಳ್ಳಲು

ಬಯಸಬಹುದೆಂದು ಬಿಷಪ್ ಎಸ್ಟೆವೆಜ್ ಅವರಿಗೆ ತರಾತುರಿಯಲ್ಲಿ ಹೇಳಿ ಕಳಿಸಿದ. ಬಿಷಪ್ ಆತುರದಿಂದ ಮನೆಗ ಬಂದರು. ಅವರು ಆ ಭೇಟಿಗೆ ಎಷ್ಟು ಮಹತ್ವ ಕೊಟ್ಟಿದ್ದರೆಂದರೆ, ಪೂರ್ಣ ಬಿಷಪ್ ಉಡುಪಿನಲ್ಲಿಯೇ ಬಂದಿದ್ದರು. ಜನರಲ್ ಅವರ ಆಜ್ಞೆಯ ಪ್ರಕಾರ, ಅದು ನಡೆದದ್ದು ಬಾಗಿಲು ಮುಚ್ಚಿ, ಸಾಕ್ಷಿಗಳಿಲ್ಲದೆ; ಹದಿನಾಲ್ಕು ನಿಮಿಷಗಳಲ್ಲಿಯೇ ಎಲ್ಲವೂ ಮುಗಿದು ಹೋಗಿತ್ತು. ಅವರು ಹೇಳಿದ್ದನ್ನು ಯಾರೂ ಅನುಸರಿಸಲೇ ಇಲ್ಲ. ಒಂದು ಬಗೆಯ ಗಾಬರಿಯಲ್ಲಿಯೇ ಬಿಷಪ್ ಅಲ್ಲಿಂದ ಹೊರಟು, ವಿದಾಯವನ್ನೂ ಹೇಳದೆ ಗಾಡಿಯಲ್ಲಿ ಕುಳಿತು ತೆರಳಿದ್ದರು. ಆನಂತರ ಅನೇಕ ಬಾರಿ ಬಿನ್ನವಿಸಿಕೊಂಡರೂ ಉತ್ತರಕ್ರಿಯೆಗಳಲ್ಲಿ ಅವರು ಭಾಗಿಯಾಗಿರಲಿಲ್ಲ, ಅಷ್ಟೇ ಅಲ್ಲ ಹೂಳುವಾಗಲು ಹಾಜರಿರಲಿಲ್ಲ. ಜನರಲ್ ಎಷ್ಟು ನಿಶ್ಶಕ್ತರಾಗಿದ್ದರೆಂದರೆ, ನೆರವಿಲ್ಲದೆ  ಜೋಲಿಮಂಚದಿಂದ ಇಳಿಯುವ ಸ್ಥಿತಿಯಲ್ಲೂ ಇರಲಿಲ್ಲ. ಅವರನ್ನು ವೈದ್ಯರು ಅನಾಮತ್ತಾಗಿ ಮಗುವಿನ ಹಾಗೆ ಎತ್ತಿ ಇಳಿಸಿಕೊಂಡು, ಅವರು ಕೆಮ್ಮಿನಿಂದ ಉಸಿರುಗಟ್ಟದಂತೆ ಹಾಸಿಗೆಯ ಮೇಲಿದ್ದ ದಿಂಬುಗಳ ಮೇಲೆ ಒರಗಿಸಬೇಕಾಯಿತು. ಕೊನೆಗೂ ಉಸಿರಾಡಲು ತೊಡಗಿದಾಗ, ವೈದ್ಯರೊಡನೆ ಏಕಾಂತದಲ್ಲಿ ಮಾತನಾಡಲೆಂದು ಎಲ್ಲರನ್ನೂ ಹೊರಗೆ ಕಳಿಸಿದರು.

"ಉತ್ತರಕ್ರಿಯೆಗಳ ಬಗ್ಗೆ ಯೊಚ'ನೆ ಮಾಡುವಷ್ಟರ ಮಟ್ಟಿಗೆ ಈ ವಿಧಿ ಇರುತ್ತೆ ಅಂತ ನಾನು ಅಂದುಕೊಂಡಿರಲಿಲ್ಲ. ನಾನು ಅದೃಷ್ಟವಂತ, ಸತ್ತ ಮೇಲಿನದರ ಬಗ್ಗೆ ನಂಗೆ ನಂಬಿಕೆಯಿಲ್ಲ" ಎಂದಿದ್ದರು.

"ಪ್ರಶ್ನೆ ಅದಲ್ಲ, ಈ ವಿಷಯಗಳ ಬಗ್ಗೆ ಪ್ರಜ್ಞಾಪೂರ್ವಕ ನಿರ್ಧಾರ ಕೈಗೊಳ್ಳೋದರಿಂದ ರೋಗಿಯ ಮನಃಸ್ಥಿತಿ ಹೇಗಾಗುತ್ತೆ ಅಂದರೆ ಅದರಿಂದ ವೈದ್ಯರ ಕೆಲಸ ಸುಲಭವಾಗತ್ತೆ" ಅಂದಿದ್ದರು ಡಾ. ರೆವೆರೆಂಡ್.

ಈ ಚಾಲೂಕಿನ ಉತ್ತರಕ್ಕೆ ಜನರಲ್ ಯಾವುದೇ ಗಮನ ನೀಡಲಿಲ್ಲ. ತಮ್ಮ ದುರದೃಷ್ಟಗಳು ಹಾಗೂ ಕನಸುಗಳ ನಡುವೆ ನಡೆಯುತ್ತಿದ್ದ ಮುಖಾಮುಖಿ ಆ ಕ್ಷಣದಲ್ಲಿ ಗರಿಷ್ಠ ಸ್ಥಿತಿಯಲ್ಲಿದ್ದುದನ್ನು ಮನಗಂಡು ಅವರು ಜರ್ಜರಿತರಾಗಿದ್ದರು.

"ಅದು ಹಾಳಾಗಲಿ. ಈ ವ್ಯೂಹದಿಂದ ನಾನು ಹೇಗೆ ಪಾರಾಗೋದು?" ಎಂದು ನಿಟ್ಟುಸಿರು ಬಿಟ್ಟಿದ್ದರು.

ತಮ್ಮ ಕೊನೆಯ ದಿನಗಳು ಸಮೀಪಿಸುತ್ತಿವೆ ಎಂಬ ಪೂರ್ವಜ್ಞಾನದಿಂದಲೋ ಎಂಬಂತೆ ಅವರು ಕೋಣೆಯ ಸುತ್ತ ಕಣ್ಣಾಡಿಸಿದ್ದರು, ಅವರಿಗೆ ಮೊದಲ ಬಾರಿಗೆ ಸತ್ಯ ಗೋಚರಿಸಿತ್ತು: ಎರವಲು ಪಡೆದಿದ್ದ ಆ ಕೊನೆಯ  ಹಾಸಿಗೆ, ಮೇಜಿನ ಮೇಲಿನ ಜಿಡ್ಡುಗಟ್ಟಿ ತಮ್ಮ ಪ್ರತಿಬಿಂಬವನ್ನು ತೋರಿಸದ ಕನ್ನಡಿ, ಇತರರಿಗಾಗಿ ಕಾಯುತ್ತಿದ್ದ ಮುರುಕಲು

ಬೋಗುಣಿ, ನೀರು, ಟವೆಲು, ಸೋಪುಗಳು, ಕೊನೆಯ ಮಧ್ಯಾಹ್ನವಾದ ಡಿಸೆಂಬರ್ ಹದಿನೇಳರ ಅಪರಿಹಾರ್ಯ ಕ್ಷಣವಾದ ಒಂದು ಗಂಟೆ ಏಳು ನಿಮಿಷದ ಕಡೆಗೆ ವೇಗವಾಗಿ ಸಾಗುತ್ತಿದ್ದ ಅಷ್ಟಕೋನಾಕೃತಿಯ ನಿರ್ದಯಿ ಗಡಿಯಾರ. ಆಮೇಲೆ ತಮ್ಮ ತೋಳುಗಳನ್ನು ಎದೆಯ ಮೇಲೆ ಎಳೆದುಕೊಂಡು, ಕಾರ್ಖಾನೆಯಲ್ಲಿ ಸಂಜೆ ಆರು ಗಂಟೆಯ *ಸಾಲ್ವ್* ಅನ್ನು ಹಾಡುತ್ತಿದ್ದ ಗುಲಾಮರ ಕಂಚುಕಂಠಗಳ ಧ್ವನಿಯನ್ನು ಕೇಳುತ್ತ ಮಲಗಿದರು. ಮರಗಳ ಮೂಲಕ ಆಕಾಶದಲ್ಲಿನ ಎಂದೆಂದಿಗೂ ಮರೆಯಾಗುತ್ತಿದ್ದ ಬೆಳ್ಳಿ ಚುಕ್ಕಿಯ ವಜ್ರಾಕೃತಿ, ನಿರಂತರ ಹಿಮಪಾತ, ಮಾರನೆಯ ದಿನ ಶನಿವಾರ ಬೆಳಿಗ್ಗೆ ಮನೆಯಲ್ಲಿ ಶೋಕ ತುಂಬಿಕೊಂಡು ತಾವು ಕಾಣಲಾರದ ಹಳದಿ ಗಂಟೆಹೂಗಳನ್ನು ಅರಳಿಸಲಿದ್ದ ಹೊಸ ದ್ರಾಕ್ಷಿ ತೋಟ, ಎಂದೆಂದೂ ಮತ್ತೆ ಬಾರದ ಬದುಕಿನ ಕೊನೆಯ ಉಜ್ವಲ ಕ್ಷಣ – ಇವುಗಳನ್ನು ಅವರ ಕಣ್ಣುಗಳು ಗಮನಿಸುತ್ತಿದ್ದವು.

'ವ್ಯೂಹ' – ಒಂದು ಖಂಡವನ್ನು ಒಂದುಗೂಡಿಸಲು ಪ್ರಯತ್ನಿಸಿದ ಜನರಲ್ ಸಿಮೋನ್ ಬೊಲಿವಾರ್‌ನ ದುರಂತಕತೆಯನ್ನು ಮನಮುಟ್ಟುವಂತೆ ಚಿತ್ರಿಸುವ ಕಾದಂಬರಿ.

ಲ್ಯಾಟಿನ್ ಅಮೆರಿಕದ ಆರು ದೇಶಗಳಲ್ಲಿ ವಿಮೋಚಕನೆಂದು ಪ್ರಖ್ಯಾತನಾದ ಬೊಲಿವಾರ್ ಪಾಶ್ಚಾತ್ಯ ಜಗತ್ತು ಗೌರವಿಸುವ ಒಬ್ಬ ಮಹಾವೀರ. ಆತನ ವ್ಯಕ್ತಿತ್ವವನ್ನು ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ಼್ ಮರುಕಲ್ಪಿಸಿಕೊಂಡು ಆತನ ದೋಷಗಳನ್ನೂ ಒಗ್ಗೂಡಿಸಿ ರಕ್ತಮಾಂಸಗಳಿಂದ ತುಂಬಿದ ಚಿತ್ರವನ್ನು ಈ ಕಾದಂಬರಿಯಲ್ಲಿ ನೀಡುತ್ತಾರೆ. ಮ್ಯಾಗ್ಡಲೀನ ನದಿಯ ಮೂಲಕ ಸಮುದ್ರದೆಡೆಗೆ ಸಾಗಿ ಅಲ್ಲಿಂದ ಇಂಗ್ಲಂಡ್ ತಲುಪುವ ಉದ್ದೇಶದಿಂದ ಬೊಲಿವಾರ್ ೧೮೩೦ ರಲ್ಲಿ ಕೈಗೊಂಡ ಅಂತಿಮ ಪಯಣದಲ್ಲಿ ವೈಭವದ ದಿನಗಳ ನೆನಪುಗಳೂ ಅಮೆರಿಕನ್ ದೇಶಗಳ ಒಗ್ಗೂಡುವಿಕೆಯ ಕನಸಿನ ಒಡೆದ ಚೂರುಗಳೂ ಆತನನ್ನು ಗಾಢವಾಗಿ ಆವರಿಸುತ್ತವೆ. ಅಧಿಕಾರಚ್ಯುತನಾಗಿ, ಕೊಲೆಯ ಸಂಚುಗಳಲ್ಲಿ ಸಿಲುಕಿಕೊಂಡು, ವಾಸಿಯಾಗದ ಮಾರಣಾಂತಿಕ ಕಾಯಿಲೆಯಿಂದ ಜರ್ಜರಿತನಾಗಿ ಅಕಾಲ ಮುಪ್ಪಿಗೆ ಒಳಗಾಗಿದ್ದರೂ, ಬೊಲಿವಾರ್‌ನ ಅದಮ್ಯ ಚೇತನವು ಆತನನ್ನು ವೀರ್ಯವಂತನನ್ನಾಗಿ ಹಾಗೂ ಪಾದರಸದಂತೆ ಚುರುಕಿನಿಂದ ಕೂಡಿರುವಂತೆ ಮಾಡುತ್ತದೆ. ಯುದ್ಧಗಳಲ್ಲಿ ಹೇಗೆಯೋ ಪ್ರಣಯ ಸಾಹಸಗಳಲ್ಲಿಯೂ ಹಾಗೆಯೇ ಗೆಲವಿಗೆ ಕಾರಣವಾದ ಆತನ ಸಂಕಲ್ಪ ಶಕ್ತಿಯೇ ಆತನ ಜೀವನಸ್ರೋತ. ಕ್ಷೀಣಿಸಿದ ಅಧಿಕಾರ ಹಾಗೂ ಬಲಿಷ್ಠ ನೆನಪುಗಳ ವ್ಯೂಹದಲ್ಲಿ ಸಿಲುಕಿದ ಬೊಲಿವಾರ್ ಕೊನೆಯ ಕ್ಷಣದವರೆಗೂ ಮರಣಕ್ಕೆ ಮುಖಾಮುಖಿಯಾಗಿ ಬದುಕುತ್ತಾನೆ. ಈ ಕಾದಂಬರಿಯ ಮೂಲಕ ನಮ್ಮ ಕಾಲದ ಮಹಾ ಲೇಖಕನೊಬ್ಬರು ಆದರ್ಶ ಚೇತನವೊಂದರ ಸಜೀವ ಚಿತ್ರಣವನ್ನು ನೀಡುತ್ತಾರೆ.

ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ಼್ ೧೯೨೮ ರಲ್ಲಿ ಕೊಲಂಬಿಯದ ಆರಕಟಕದಲ್ಲಿ ಜನಿಸಿದರು. ಬೊಗೋಟ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮುಗಿಸಿದ ಅವರು ಕೊಲಂಬಿಯದ ಪ್ರಸಿದ್ಧ ಸ್ಪಾನಿಶ್ ಪತ್ರಿಕೆಯಾದ 'ಎಲ್ ಸ್ಪೆಕ್ಟೇಡರ್'ನ ವರದಿಗಾರರಾಗಿಯೂ, ರೋಮ್, ಪ್ಯಾರಿಸ್, ಬಾರ್ಸೆಲೋನ, ಕ್ಯಾರಕಾಸ್ ಮತ್ತು ನ್ಯೂಯಾರ್ಕ್‌ಗಳಲ್ಲಿ ಅದರ ವಿದೇಶೀ ವರದಿಗಾರರಾಗಿಯೂ ಕೆಲಸ ಮಾಡಿದರು. ೧೯೮೨ ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಪಡೆದ ಮಾರ್ಕ್ವೆಜ಼್ ಬಹು ಪ್ರಖ್ಯಾತವಾದ 'ನೂರು ವರ್ಷದ ಏಕಾಂತ' (ಔಟಿಜ ಊಣಟಿಜಡಿಜಜು ಙಜಚಿಡಿ ಔಜ ಖಠಟಠಿತಜಜ) ಸೇರಿದಂತೆ ಹತ್ತಾರು ಕಾದಂಬರಿಗಳನ್ನು ರಚಿಸಿದ್ದಾರೆ.